# ಬಾಗೆನಾಡಿನ ಜನಪದ ಕಲಾವಿದರು

ಕನ್ನಡ ವಿಷಯದಲ್ಲಿ ಪಿಎಚ್.ಡಿ ಪದವಿಗಾಗಿ ಹಂಪಿ, ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನಾ ಮಹಾಪ್ರಬಂಧ


ಸಂಶೋಧಕರು :

ಶ್ರೀ [illegible] ಪಿ. ಹುಲ್ಲೋಳಿ

ತಹ[illegible] ಜಮಖಂಡಿ ತಾಲೂಕ

ಜಿಲ್ಲೆ ಬಾಗಲಕೋಟ

ಮಾರ್ಗದರ್ಶಕರು :

ಡಾ. ವಿ. ಎಸ್. ಮಾಳಿ

ನಿರ್ದೇಶಕರು,

ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ,

ಹಾರೂಗೇರಿ ಜಿಲ್ಲೆ: ಬೆಳಗಾವಿ



ಶ್ರೀ [illegible] ಆರ್. ದರೂರ ಸಂಶೋಧನಾ ಕೇಂದ್ರ

ಹಾರೂಗೇರಿ ಜಿಲ್ಲೆ: ಬೆಳಗಾವಿ

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂ[illegible]

೨೦೧೦

pp. 1-6

# ಬಾಗೆನಾಡಿನ ಜನಪದ ಕಲಾವಿದರು

ಕನ್ನಡ ವಿಷಯದಲ್ಲಿ ಪಿಎಚ್.ಡಿ ಪದವಿಗಾಗಿ ಹಂಪಿ, ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನಾ ಮಹಾಪ್ರಬಂಧ

ಸಂಶೋಧಕರು :
**ಶ್ರೀ ಎಸ್. ಪಿ. ಹುಲ್ಲೋಳಿ**
ತಹಶೀಲದಾರರು, ಜಮಖಂಡಿ ತಾಲೂಕು
ಜಿಲ್ಲೆ : ಬಾಗಲಕೋಟ

ಮಾರ್ಗದರ್ಶಕರು :
**ಡಾ. ವಿ. ಎಸ್. ಮಾಳಿ**
ನಿರ್ದೇಶಕರು,
ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ,
ಹಾರೂಗೇರಿ ಜಿಲ್ಲೆ: ಬೆಳಗಾವಿ

ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ
ಹಾರೂಗೇರಿ ಜಿಲ್ಲೆ: ಬೆಳಗಾವಿ

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೧೦

# ಪ್ರಮಾಣ ಪತ್ರ

**ಬಾಗೆನಾಡಿನ ಜನಪದ ಕಲಾವಿದರು** ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಡಾ.ವಿ.ಎಸ್.ಮಾಳಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಷಯದಲ್ಲಿ ಪಿಎಚ್.ಡಿ ಪದವಿಗಾಗಿ ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದೇನೆ. ಈ ಪ್ರಬಂಧವನ್ನು ನಾನು ಈ ಮೊದಲು ಇಡಿಯಾಗಿ ಅಥವಾ ಬಿಡಿಯಾಗಿ ಪ್ರಕಟಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ: ಹಾರೂಗೇರಿ
ದಿನಾಂಕ:

ಎಸ್. ಪಿ. ಹುಲ್ಲೋಳಿ
ತಹಶೀಲದಾರರು ಜಮಖಂಡಿ ತಾಲೂಕು,
ಜಿಲ್ಲೆ : ಬಾಗಲಕೋಟ

# ದೃಢೀಕರಣ ಪತ್ರ

**ಎಸ್. ಪಿ. ಹುಲ್ಲೋಳಿ** ಇವರು **ಬಾಗೆನಾಡಿನ ಜನಪದ ಕಲಾವಿದರು** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಕನ್ನಡ ವಿಷಯದಲ್ಲಿ ಪಿಎಚ್.ಡಿ ಪದವಿಗಾಗಿ ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರದ ಮೂಲಕ ಹಂಪಿ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವರು. ಪ್ರಸ್ತುತ ಮಹಾಪ್ರಬಂಧವನ್ನು ಇವರು ಈ ಮೊದಲು ಇಡಿಯಾಗಿ ಅಥವಾ ಬಿಡಿಯಾಗಿ ಎಲ್ಲಿಯೂ ಪ್ರಕಟಿಸಿಲ್ಲವೆಂದೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ: ಹಾರೂಗೇರಿ
ದಿನಾಂಕ:

ಡಾ. ವಿ. ಎಸ್. ಮಾಳಿ
ನಿರ್ದೇಶಕರು,
ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,
ಹಾರೂಗೇರಿ ಜಿಲ್ಲೆ : ಬೆಳಗಾವಿ

# ಪರಿವಿಡಿ

[illegible]

## ಅಧ್ಯಾಯ : ೧ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

೧.೬ ಅಧ್ಯಯನದ ಉದ್ದೇಶ

೧.೨ ಅಧ್ಯಯನದ ಅವಲೋಕನ

೧.೮ ಸ್ವರೂಪ

೧.೯ ವ್ಯಾಪ್ತಿ

೧.೧೦ ವೈಧಾನಿಕತೆ

### ಅಧ್ಯಾಯ : ಒಂದು

## ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಬೆಳಗಾವಿ ಜಿಲ್ಲೆಯ ಒಂದು ತಾಲೂಕು ಕೇಂದ್ರವಾಗಿರುವ ಇಂದಿನ ರಾಯಬಾಗ, ಪ್ರಾಚೀನ ಕರ್ನಾಟಕದ 'ಕುಂತಣ ಬಾಗೆ'. 'ಕುಂತಣ ಬಾಗೆ' ಕುಹೂಂಡಿ ಮಂಡಲದ ಒಂದು ಭಾಗವಾಗಿತ್ತು. ಇದನ್ನು 'ತೆಂಕಲು ಬಾಗೆ' ಎಂದೂ ಗುರುತಿಸುತ್ತಿದ್ದರು. ಕ್ರಮೇಣ ಅದು ಪೂವಿನ ಬಾಗೆ, ಪೂಬಾಗೆ, ಬಾಗೆ, ಪೂಬಾಗಿ, ಬಾಗಿ ಎಂದು ಹೆಸರು ಬದಲಿಸಿಕೊಂಡಿತು. ಜನರ ಬಾಯಿಯಲ್ಲಿ 'ರಾಯಬಾಗ' ಇಂದಿಗೂ ಬಾಗೆ. ಈ ಪರಿಸರವನ್ನು ಬಾಗೆನಾಡು ಎಂದು ಕರೆಯುವುದು ರೂಢಿ.

ಪೂವಿನಬಾಗೆ ಪ್ರಾಚೀನ ಕಾಲದಲ್ಲಿ ಒಂದು ಜೈನ ಕೇಂದ್ರ. ಬಾಗೆಯ ಪರಿಸರ ಹಾಲುಮತದವರ ತೊಟ್ಟಿಲು. ಇಲ್ಲಿಯ ಹಾಲುಮತ ಜನಾಂಗದ ಜನಸಂಖ್ಯೆ, ಹಾಲುಮತ ದೈವಗಳು, ಹಾಲುಮತದ ಸಾಂಸ್ಕೃತಿಕ ಆಚರಣೆಗಳು, ಹಬ್ಬ-ಉತ್ಸವಗಳನ್ನು ನೋಡಿದರೆ ಈ ನಾಡಿನ ಸಾಂಸ್ಕೃತಿಕ ಚರಿತ್ರೆಯ ವೈವಿಧ್ಯತೆ ತಿಳಿಯುತ್ತದೆ. ಆದರೆ ಆ ಆಕರಗಳೆಲ್ಲವೂ ಜಾನಪದ. ಎಲ್ಲಿಯೂ ದಾಖಲಿತಗೊಂಡಿಲ್ಲ. ತೋಂಡಿ ಸಂಪ್ರದಾಯದಲ್ಲಿ ಮಾತ್ರ ಉಳಿದುಕೊಂಡಿವೆ. ವಿಶೇಷವೆಂದರೆ ಅವೆಲ್ಲವೂ ಇಂದಿಗೂ ಈ ನಾಡಿನಲ್ಲಿ ಲಭ್ಯವಿರುವುದು. ಈ ಹಿನ್ನೆಲೆಯಲ್ಲಿ ಅಪಾರ ವೈವಿಧ್ಯಮಯವಾದ, ಅನನ್ಯ ಜನಪದ ಸಾಹಿತ್ಯ ಬೆಳೆದು ಬಂದಿದೆ. ಜನಪದ ಮಹಾಕಾವ್ಯಗಳು ಹುಟ್ಟಿಕೊಂಡಿವೆ. ಹೀಗಿದ್ದರೂ ಈ ಸಾಹಿತ್ಯದ ಪ್ರಾಚೀನತೆ ನಿಖರವಾಗಿ ತಿಳಿಯದು.

ಪೂವಿನ ಬಾಗೆಯ ಪರಿಸರದಲ್ಲಿ ಪ್ರಾಚೀನ ಶಾಸನಗಳು ಸಿಗುತ್ತವೆ. ಕೃಷ್ಣಾನದಿಯ ದಡದಲ್ಲಿ ಇತಿಹಾಸ ಪೂರ್ವದ ಅವಶೇಷಗಳು ಕಾಣುತ್ತವೆ. ಕುಡಚಿ–ಚಿಂಚಲಿ ಮಧ್ಯದಲ್ಲಿ ಬೂದಿದಿಬ್ಬ ಪತ್ತೆಯಾಗಿದೆ. ಕುಡಚಿ, ಚಿಂಚಲಿ, ಜಲಾಲಪುರ, ದಿಗ್ಗೇವಾಡಿ, ಖೆಮಲಾಪುರ ಮುಂತಾದ ನದಿ ತಟದ ಗ್ರಾಮಗಳು ಇತಿಹಾಸ ಪೂರ್ವ ಕಾಲದಿಂದಲೂ ಅಸ್ತಿತ್ವದಲ್ಲಿದ್ದ ಬಗ್ಗೆ ದಾಖಲೆಗಳು ಲಭ್ಯಯಿವೆ. ಹತ್ತು–ಹನ್ನೊಂದನೇ ಶತಮಾನದ ಸಂದರ್ಭದಲ್ಲಿ ಈ ಪ್ರದೇಶವನ್ನು ಉಲ್ಲೇಖಿಸುವ ಅನೇಕ ಶಾಸನಗಳು ಸಿಗುತ್ತವೆ. ಆದರೆ ಪೂವಿನ ಬಾಗೆಯ ಸುಂದರ ಶಬ್ದಚಿತ್ರವನ್ನು ಮೊದಲು ನೀಡಿದವನು ಕವಿ ರಾಜಾದಿತ್ಯ. ಕವಿ ರಾಜಾದಿತ್ಯ ಕನ್ನಡದ ಗಣಿತ ಬ್ರಹ್ಮ, ಗಣಿತ ಭಾಸ್ಕರ. ಕನ್ನಡಕ್ಕೆ ಮೊದಲ ಗಣಿತಶಾಸ್ತ್ರವನ್ನು ನೀಡಿದ ಕೀರ್ತಿ ಈತನದು. ಇವನ ಕಾಲ ಹನ್ನೆರಡನೇ ಶತಮಾನ (ಕ್ರಿ.ಶ.೧೧೯೦). ಪೂವಿನ ಬಾಗೆ ಅವನ ಜನ್ಮಸ್ಥಳ. ವ್ಯವಹಾರ ಗಣಿತ, ಕ್ಷೇತ್ರ ಗಣಿತ, ವ್ಯವಹಾರ ರತ್ನ, ಲೀಲಾವತಿ, ಚಿತ್ರ ಹಸುಗೆ, ಜೈನ ಗಣಿತ ಸೂತ್ರ, ಟೀಕೋದಾಹರಣ ಮೊದಲಾದ ಗಣಿತ ಗ್ರಂಥಗಳನ್ನು ರಚಿಸಿರುವ ರಾಜಾದಿತ್ಯ ಜಿನಧರ್ಮದ ಕವಿ. “ಇವನಿಗೆ ರಾಜವರ್ಮ, ಭಾಸ್ಕರ, ಬಾಚ, ಬಾಚಯ್ಯ, ಬಾಚಿರಾಜ ಎಂಬ ಹೆಸರುಗಳು. ಗಣಿತವಿಳಾಸ, ಓಜೆವೆಡಂಗ, ಪದ್ಯವಿದ್ಯಾಧರ, ಗಣಿತವಿರಿಂಚ ಎಂಬಿವು ಬಿರುದುಗಳು.”[೧]

**ಜಿನನಾಥಂ ನೇಮಿನಾಥಂ ನಿಜಗುರು ಶುಭಚಂದ್ರೋತ್ತಮಂ ತವೆ ಸರ್ವಾ**
**ವನಿಪಸ್ತುತ್ಯಾಸ್ಪದಂ ಶ್ರೀಪತಿ ಜನನಿ ವಸಂತಾಖ್ಯೆ ತನ್ನಗ್ರಜಂ ಶಾಂ ।**
**ತನುಮತ್ತಾರ್ಭೋಗಮಂ ಬಾಹುಬಲಿ ಭರತಾತ್ಮೇಶ್ವರರ್ ತಾಮೆನಲ್ ಬಾ**
**ಪೆನೆ ರಾಜಾದಿತ್ಯನೇಂ ಧನ್ಯನೋ ವಿಶದಯಶಂ ಸದ್ಗುಣಾಂಭೋಧಿಚಂದ್ರಂ ॥**

ರಾಜಾದಿತ್ಯ ತನ್ನ ಕೃತಿಗಳಲ್ಲಿ “ಕೆಲವು ಕಡೆ ವಿಷ್ಣುನೃಪಾಲನ ಹೆಸರು ಉಲ್ಲೇಖಿಸಿದ್ದಾನೆ. ಕವಿ ತನ್ನ ಆತ್ಮೇಶ್ವರರು ಎಂದು ಹೇಳಿಕೊಂಡಿರುವ ಭರತ, ಬಾಹುಬಲಿ ೨ನೇ ಬಲ್ಲಾಳನ (ಕ್ರಿ.ಶ.೧೧೭೩–೧೨೨೦) ದಂಡನಾಯಕರು. ಕವಿ

---

೧. ಆರ್. ನರಸಿಂಹಾಚಾರ್ : ಕವಿಚರಿತೆ ಸಂ.೧, ಪುಟ : ೩೩೨

ಇವರ ಆಶ್ರಯದಲ್ಲಿ ಈ ದೊರೆಯ ಆಳಿಕೆಯಲ್ಲಿ ಇದ್ದಿರಬೇಕು."[೨]

ರಾಜಾದಿತ್ಯ ತನ್ನ 'ವ್ಯವಹಾರ ಗಣಿತ'ದ ಮೂರು ಪದ್ಯಗಳಲ್ಲಿ ಪೂವಿನ ಬಾಗೆಯನ್ನು ಸುಂದರವಾಗಿ ಪರಿಚಯಿಸುತ್ತಾನೆ–

ವನತತಿಯಿಂ ನದೀನದಕುಭೃತ್ಕುಲದಿಂ ಧನಧಾನ್ಯವರ್ಗದಿಂ
ಜನಪದರಾಜಿಯಿಂ ಬೆಳೆವ ಕೆಯ್ವೊಲದಿಂದೆಸೆವೂರ್ಗಳಿಂ ಜಗ ।
ಜ್ಜನನುತಜೈನಧರ್ಮದ ನೆಗಳ್ತೆಯಿನೊಪ್ಪಿರೆ ಕೂಂಡಿಮಂಡಲ
ಕ್ಕನುಪಮರತ್ನಮಂಡನಮೆನಿಪ್ಪುದು ಪೂವಿನಬಾಗೆ ಸಂತತಂ ॥[೩]

ಆವೆಡೆಯೊಳ್ ಮನಂಬಯಸಿ ಪಾಂಥಜನಂ ನಿಲಲಲ್ಲಿಗಲ್ಲಿಗ
ಬ್ಬಾವಳಿಯಲ್ಲಿಗಲ್ಲಿಗೆ ಸುಸೌರಭದಿಂದೆಸೆದಿರ್ಪ ಪುಷ್ಪವಾ ।
ಟಾವಳಿಯಲ್ಲಿಗಲ್ಲಿಗೆ ನವಭ್ರಮರಾವಳಿ ಹಂಸಭೃಂಗಕೀ
ರಾವಳಿಯಿಂದಮೊಪ್ಪುವುದು ಬಾಗೆಯದೊಂದು ಮಹೀಪ್ರದೇಶದೋಳ್॥[೪]

ಪೊಸ ಪೂಂಗೇದಗೆ ಜಾಜಿ ಪಾಟಲಿ ಲಸತ್ಸೇವಂತಿ ನೀಲಾಬ್ಜಮು
ದ್ಧಸರೋಜಂ ಸುರಹೊನ್ನೆ ಸಂಪಗೆ ನವೋದ್ಯನ್ಮಲ್ಲಿಕಾದಿಪ್ರಸೂ ।
ನ ಸಮೂಹಂ ತನಿಗಂಪನೆಣ್ದೆಸೆಗೆ ನಿಚ್ಚಂ ಬೀಜಲನ್ವರ್ಥಮಾ
ಗೆಸಗುಂ ಪೂವಿನಬಾಗೆಯೆಂಬ ಪಸರಿಂದಿಂಬಾಗಿ ಚೆಲ್ವಾಗಿರಲ್ ॥[೫]

ಪಂಪ ಪುಲಿಗೆರೆಯ ತಿರುಳ್ಗನ್ನಡ ತನ್ನ ಕಾವ್ಯ ಪರಿಭಾಷೆ ಎಂದು ಹೇಳುವಂತೆ ಕವಿ ರಾಜಾದಿತ್ಯ 'ಕುಂತಣ ಕನ್ನಡ' ತನ್ನ ಕೃತಿಗಳ ಪರಿಭಾಷೆ ಎಂದು ಸ್ಪಷ್ಟೀಕರಿಸುತ್ತಾನೆ. ಅಂದರೆ ಬಾಗೆನಾಡನ್ನು ಒಳಗೊಂಡ ಕುಂತಣ ತನ್ನದೇ ಆದ

---

೨. ಆರ್. ನರಸಿಂಹಾಚಾರ್: ಕವಿ ಚರಿತೆ ಸಂ.೧, ಪುಟ : ೩೩೭

೩. ರಾಜಾದಿತ್ಯ : ವ್ಯವಹಾರ ಗಣಿತ, ಪದ್ಯ : ೭೭೨

೪. ಅದೇ, ಪದ್ಯ : ೭೭೩

೫. ಅದೇ, ಪದ್ಯ : ೭೭೪

ಪರಿಭಾಷೆಯನ್ನು ಹೊಂದಿತ್ತು. ಹನ್ನೆರಡನೇ ಶತಮಾನದ ರಾಜಾದಿತ್ಯನನ್ನು ಹೊರತುಪಡಿಸಿ ಆಧುನಿಕ ಕಾಲದವರೆಗೆ ಮತ್ತೊಬ್ಬ ಪ್ರಸಿದ್ಧ ಸಾಹಿತಿ ನಮ್ಮ ಗಮನಕ್ಕೆ ಬರುವುದಿಲ್ಲ. ಆದರೆ ಈ ಪ್ರದೇಶದ ಜನಪದ ಸಾಹಿತ್ಯ ಮಾತ್ರ ತುಂಬ ಹುಲುಸು. ನಾಗೆನಾಡು ಜಾನಪದದ ಕಣಜ. ಸಂಶೋಧನೆಯ ಕನ್ನೆಲ. ಅಗೆದಷ್ಟು ಜಾನಪದದ ಸಿರಿ ಹೊರಬರುವುದು. ಇಲ್ಲಿ ಜನಪದ ಕವಿ, ಕಲಾವಿದರು, ಹಾಡುಗಾರರು ಅನೇಕ. ಸಾಂಸ್ಕೃತಿಕ ಆಚರಣೆಗಳು ವೈವಿಧ್ಯಮಯ. ಈ ಸಾಂಸ್ಕೃತಿಕ ಸಂಪತ್ತನ್ನು ಶೋಧಿಸುವುದು ಇಂದಿನ ಅಗತ್ಯ.

**೧.೧.ಅಧ್ಯಯನದ ಉದ್ದೇಶ :**

'ಜಾನಪದ' ಒಂದು ವಿಸ್ತೃತ ಜಗತ್ತು. ಮಣ್ಣು-ಬೆವರು-ಬೆಳೆಕೇಂದ್ರಿತ ಕೃಷಿ ಪ್ರಧಾನವಾದ ಜೀವನ ವಿಧಾನ. ಕೃಷಿ ಜಾನಪದ ಸಂಸ್ಕೃತಿಯ ತಾಯಿ ಬೇರು. ಜನಪದಕ್ಕೆ ಸಂಬಂಧಿಸಿದ ಸಮಸ್ತ ವಿಷಯಗಳ ಮೊತ್ತವೇ ಜಾನಪದ.

"ಒಂದು ಜನಪದ ಸಮಾಜದಾದ್ಯಂತ ರೂಢಿಯಲ್ಲಿರುವ ನೃತ್ಯಗಳು, ಗೀತೆಗಳು, ಪುರಾಣಗಳು, ಸಂಪ್ರದಾಯಗಳು, ಮೂಢನಂಬಿಕೆಗಳು ಮತ್ತು ಗಾದೆನುಡಿಗಳು ಇವೆಲ್ಲವನ್ನು ಜಾನಪದ ಒಳಗೊಳ್ಳುತ್ತದೆ. ಅದು ಪರಂಪರಾಗತ ಒಕ್ಕಲುತನ ಪದ್ಧತಿ ಮತ್ತು ಕುಟುಂಬ ನಿಯಮಗಳ ಅಧ್ಯಯನವನ್ನೂ ಜಾನಪದ ಮನೆಮಾರು, ಮಡಿಕೆ-ಕುಡಿಕೆಗಳ ರೂಪ, ವಿನ್ಯಾಸ, ನೀತಿ ನಿಯಮಗಳನ್ನು, ಅವರ ರೂಢಿಗತ ಸಾಮಾಜಿಕ ವ್ಯವಸ್ಥೆಗಳನ್ನು ಒಳಮೂಡಿಸಿಕೊಂಡಿರುತ್ತದೆ"[೬] ಎಂದು ಹೇಳಿರುವ ವಿಖ್ಯಾತ ಜಾನಪದ ತಜ್ಞ ಸ್ಮಿತ್ ಥಾಮ್ಸನ್ ಅವರ ಅಭಿಪ್ರಾಯ 'ಜಾನಪದ ನೆಲೆ' ಕುರಿತು ಸರಿಯಾದ ಮಾತು.

ಆದಿಮಾನವನಿಂದ ಮೊದಲುಗೊಂಡು ಆಧುನಿಕ ಮಾನವನವರೆಗೆ ಜಾನಪದದ ಹರವು. ಇ. ಬಿ. ಟೇಲರ್ ಹೇಳುವಂತೆ ಸಾಂಸ್ಕೃತಿಕ ವಿಕಾಸದಲ್ಲಿ ಮುಖ್ಯ ಮಜಲುಗಳು ಮೂರು - ೧. ಅನಾಗರಿಕ ಘಟ್ಟ ೨. ಅರೆನಾಗರಿಕ ಘಟ್ಟ ೩. ನಾಗರಿಕ ಘಟ್ಟ.

---

೬. ವೀರೇಶ ಬಳ್ಳಾರಿ : ಜಾನಪದ ಪುನರ್ ನೆನಪು (ಲೇ): ಕರ್ನಾಟಕ ಜಾನಪದ (ಪತ್ರಿಕೆ) ಸಂ. ೫-೧, ಪುಟ : ೧೨೪, ೧೨೫

ಇವು ಪ್ರಗತಿಯ ಹಂತಗಳು. ಆದರೆ ಅವುಗಳನ್ನು ಗೆರೆ ಹಾಕಿ ಗುರುತಿಸುವುದು ಸಾಧ್ಯವಿಲ್ಲ. ಈಗಲೂ ಅಂಡಮಾನದಲ್ಲಿ ಜರೋವಾ ಎಂಬ ಅನಾಗರಿಕ ಜನಾಂಗವಿದೆ. ನಮ್ಮ ಕಾಡು-ಬೆಟ್ಟಗಳಲ್ಲಿ ಅರೆನಾಗರಿಕ ಜನರಿದ್ದಾರೆ. ಈ ಮೂರು ಘಟ್ಟಗಳು ಕೂಡ ಜಾನಪದದ ಅಧ್ಯಯನದಲ್ಲಿ ಸಮಾವೇಶಗೊಳ್ಳುತ್ತವೆ.

ಜಾನಪದ ಚಿರಂತನವಾದುದು. ಜನಪದರು ಇರುವವರೆಗೆ ಜಾನಪದ ಖಂಡಿತ ಇರುತ್ತದೆ. "ಸಾರ್ವಕಾಲಿಕವಾದ ಜಾನಪದಕ್ಕೆ ಕೊನೆಯೆಂಬುದಿಲ್ಲ. ಇದು ಸಾವನ್ನು ಧಿಕ್ಕರಿಸಿ ನಿತ್ಯ ಬದಲಾವಣೆಯೊಂದಿಗೆ ಜೀವಂತವಾದುದು. ಜಾನಪದ ತನ್ನ ಆಚರಣೆಯ ವಿಧಾನಗಳಲ್ಲಿ ಬದಲಾವಣೆಯಾಗಿದ್ದರೂ ಮೂಲ ಆಶಯವನ್ನು ಉಳಿಸಿಕೊಂಡು ಚಿರಂಜೀವಿಯಾದುದು ಅದರ ನಿತ್ಯನಿರಂತರತೆಯ ಗುಟ್ಟು, ಹೊಸಹೊಸ ರೂಪದೊಂದಿಗೆ ಫಿನಿಕ್ಸ್‌ನಂತೆ ಮರುಹುಟ್ಟು ಪಡೆಯುತ್ತಲೇ ಇರುತ್ತದೆ. ಜೀವನದ ಪ್ರವಾಹದೊಂದಿಗೆ ಜಾನಪದ ಯಾವಾಗಲೂ ಚಲಿಸುತ್ತಿರುವುದೇ ಅದರ ಬದಲಾವಣೆಗೆ ಪ್ರಮುಖ ಕಾರಣ."[೭] ಈ ಮಾತುಗಳಿಗೆ ನಿದರ್ಶನವೆನ್ನುವಂತೆ ಈ ಭಾಗದಲ್ಲಿ ಈಗಲೂ ಜನಪದ ಸಾಹಿತ್ಯ ಹಾಗೂ ಜನಪದ ಕಲೆಗಳು ಶ್ರೀಮಂತವಾಗಿರುವುದು.

ಬಾಗೆನಾಡು ಹಲವು ಸಂಸ್ಕೃತಿಗಳ ಸಂಗಮ. ಜೈನ, ಲಿಂಗಾಯತ, ಹಾಲುಮತ, ಮರಾಠಾ, ಮುಸ್ಲಿಂ, ದಲಿತ ಮುಂತಾದ ಹಲವು ಸಮುದಾಯಗಳು ಪರಸ್ಪರ ಸಾಮರಸ್ಯದಿಂದ ಬದುಕುತ್ತಲೇ ತಮ್ಮ ಸಾಂಸ್ಕೃತಿಕ ಅಸ್ಮಿತೆಯನ್ನು ಕಾಪಾಡಿಕೊಂಡು ಬಂದಿವೆ. ಪ್ರತಿಯೊಂದು ಸಮುದಾಯವೂ ತನ್ನದೇ ಆದ ಜನಪದ ಸಿರಿ-ಸಂಪದವನ್ನು ಹೊಂದಿದೆ. ಜೈನರ ಜಿನಭಜನೆ, ಲಿಂಗಾಯತರ ಶಿವಭಜನೆ, ಹಾಲುಮತದವರ ಡೊಳ್ಳಿನ ಹಾಡು, ಮರಾಠರ ಕನ್ನಡ ಅಭಂಗ-ಕೀರ್ತನೆ, ಮುಸ್ಲಿಂರ ಮೊಹರಂ ಹಾಡು, ದಲಿತರ ಹಾಡು-ಗೀತ-ನೃತ್ಯ-ಕಲೆ-ಕುಶಲತೆ ಮೊದಲಾದವುಗಳು ಅಭ್ಯಸನೀಯವೆನಿಸುತ್ತವೆ. ಬಾಗೆನಾಡಿನ ಸಿದ್ಧ ಪರಂಪರೆಯಂತೂ ತುಂಬ ವಿಶಿಷ್ಟ. ಇಲ್ಲಿ ಕರಿಸಿದ್ಧ, ಭೂತಾಳಸಿದ್ಧ, ಅರಣ್ಯಸಿದ್ಧ, ಹಾಲಸಿದ್ಧ, ಗುರುಸಿದ್ಧ, ಅಮೋಘಸಿದ್ಧ,

---

೭ ಡಾ. ಸಿ. ಕೆ. ನಾವಲಗಿ : ಜಾನಪದ ಸಮಾಲೋಕ, ಪುಟ : ೩, ೪

ರೇವಣಸಿದ್ಧ, ಮಲಕಾರಿಸಿದ್ಧ ಮುಂತಾದ ಸಿದ್ಧರ ಆರಾಧನೆಯ ಸಿದ್ಧಪರಂಪರೆಯಿದೆ. ಈ ನೆಲೆಯಲ್ಲಿ ಬೆಳೆದು ಬಂದ ಸಾಹಿತ್ಯ, ಆಚರಣೆಯ ಫಲವಾಗಿ ಮೂಡಿಬಂದ ಜನಪದ ಕಲೆ–ಕಲಾವಿದರನ್ನು ಅಧ್ಯಯನ ಮಾಡುವುದು ಪ್ರಸ್ತುತ ಅಧ್ಯಯನದ ಮೊದಲ ಉದ್ದೇಶ.

ನಾಗರಿಕ ಬದುಕಿನಲ್ಲಿ ಏನೆಲ್ಲಾ ಕಲೆಗಳಿವೆಯೋ ಅವುಗಳ ಮೂಲ ಸೆಲೆ ಜಾನಪದವೇ ಆಗಿದೆ. "ಮಾನವ ಸಂಸ್ಕೃತಿಯ ಸಮಗ್ರ ತಿಳಿವಳಿಕೆಗೆ 'ಜಾನಪದ' ಅಧ್ಯಯನವು ಒಂದು ಮಹತ್ತರವಾದ ಅಂಶವೆಂಬ ಮಾತು ಇಂದು ವಿಶ್ವಮಾನ್ಯವಾಗಿದೆ. ವೈಜ್ಞಾನಿಕ ಪ್ರಗತಿಯಿಂದ ಯಂತ್ರ ನಾಗರಿಕತೆಯ ರೂಪದಲ್ಲಿ ಯುರೋಪಿನಾದ್ಯಂತ ವೈಚಾರಿಕ ಕ್ರಾಂತಿಯ ಚಂಡಮಾರುತ ಬೀಸಿತು. ಪಾಶ್ಚಾತ್ಯ ಜೀವನ ಕ್ರಮದಲ್ಲಿ ಯುಗಯುಗದ ಬಾಯಿಮಾತಿನ ಸಂಪ್ರದಾಯದ ಅವಿಚ್ಛಿನ್ನ ಪ್ರವಾಹದಲ್ಲಿ ಹರಿದು ಬಂದ ನಂಬುಗೆ, ವಿಚಾರ, ಸಾಹಿತ್ಯ ಹಾಗೂ ಮೌಲ್ಯಗಳೆಲ್ಲ ಕೊಚ್ಚಿಹೋಗುವವೇನೋ ಎಂಬ ಭಯ ತಾಂಡವವಾಡಿತು. ತಮ್ಮ ತಮ್ಮ ಸಂಸ್ಕೃತಿಯ ವೈಲಕ್ಷಣಗಳನ್ನು ಉಳಿಸಿಕೊಳ್ಳುವ ಕಾರ್ಯದಲ್ಲಿ ನಿರಂತರವಾಗಿ ಕೈಗೊಂಡ ಸಾಹಸಪೂರ್ಣ ಅಧ್ಯಯನದ ಫಲವೇ ಇಂದು ವ್ಯಾಪಕವಾಗಿ ಬೆಳೆದು ನಿಂತ ಜಾನಪದ ವಿಜ್ಞಾನ ಇಲ್ಲವೇ ಜಾನಪದ."[೮] ಅದರ ಒಂದು ಭಾಗವಾಗಿ ಈ ಅಧ್ಯಯನವನ್ನು ರೂಪಿಸಬೇಕೆಂಬುದು ಆಶಯ.

ಹಾರೂಗೇರಿಯ ಕವಿ ಅಲಭ್ಯೈರಿ ಈ ಭಾಗದ ಸುಪ್ರಸಿದ್ಧ ಜನಪದ ಕವಿ. ಭಜನೆ, ಅಭಂಗ, ಲಾವಣಿ, ಚೌಡಕಿಹಾಡು, ಡೊಳ್ಳಿನಪದ, ಬಯಲಾಟಗಳನ್ನು ರಚಿಸಿರುವ ಅಲಭೈರಿಯ ತತ್ವಪದಗಳು ಶಿಶುನಾಳ ಶರೀಫರು–ಕಡಕೋಳದ ಮಡಿವಾಳಸ್ವಾಮಿಗಳನ್ನು ನೆನಪಿಸುತ್ತವೆ. ಇವನ ಕುರಿತು ಅಧ್ಯಯನ ನಡೆದಿದೆ. ಡಾ. ಎಂ.ಬಿ.ನೇಗಿನಹಾಳರು ಈತನ ಕುರಿತು ಬರೆದ ಪ್ರಬಂಧ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದ 'ನೇಗಿನಹಾಳರ ಲೇಖನಗಳು' ಗ್ರಂಥಗಳಲ್ಲಿ ಸೇರಿದೆ. ಶಿರಗೂರಿನ (ಕಲಸಿದ್ಧ) ಕಲ್ಮೇಶ, ಸಿದ್ಧಲಿಂಗ ವಸ್ತಾದ, ಮುಗಳಖೋಡದ ರಾಚಯ್ಯ

---

೮. ವೀರೇಶ ಬಳ್ಳಾರಿ : ಜಾನಪದ ಪುನರ್ ನೆನಪು(ಲೇ) :ಜಾನಪದ ಕರ್ನಾಟಕ (ಪತ್ರಿಕೆ) ೫–೧, ಪುಟ : ೧೨೪

ಹಿರೇಮಠ, ಜಲಾಲಪುರದ ರಾಚೋಟಿ, ಪರಮಾನಂದವಾಡಿಯ ಮೀರಾಸಾಬ ಮುಲ್ಲಾ, ದಿಗ್ಗೇವಾಡಿಯ ಬಾಬಾಜಿ ಜಮಾದಾರ, ನಿಡಗುಂದಿಯ ಯಮನಪ್ಪ ಚಲವಾದಿ, ಅಲಕನೂರಿನ ರಾಮ ಪೂಜೇರಿ, ಸವದತ್ತಿಯ ಸಿದ್ದಪ್ಪ, ಕುಡಚಿಯ ಶೆಟಿಭೈರಿ, ಹಿಡಕಲ್ಲದ ರಾಣಬಾ ಕದಮ, ಹಾರೂಗೇರಿಯ ರಾಮು ಸುಬ್ಬಣ್ಣವರ, ಚಿಂಚಲಿಯ ಶಂಕರದಾಸ ಬಾಗೆನಾಡಿನ ಪ್ರಸಿದ್ಧ ಜನಪದ ಕವಿಗಳು. ಇವರಲ್ಲದೆ ಕೆಲವರು ಲಾವಣಿ-ತತ್ವಪದ-ಡೊಳ್ಳಿನ ಹಾಡುಗಳನ್ನು ರಚಿಸಿದವರಿದ್ದಾರೆ. ಆದರೆ ಅವರು ಬೆಳಕಿಗೆ ಬಂದಿಲ್ಲ. ಡೊಳ್ಳಿನ ಪದಗಳ ಕವಿಗಳ ಕುರಿತು ಅಧ್ಯಯನ ನಡೆಯಬೇಕಿದೆ. ಹೀಗೆ ಈ ಭಾಗದ ಜನಪದ ಕವಿಗಳ ಸಮಗ್ರ ಪರಿಚಯ ನಾಡಿಗೆ ಆಗಬೇಕು. ಜೊತೆಗೆ ಜನಪದ ಕಲೆಗಳು ಹಾಗೂ ಕಲಾವಿದರನ್ನು ದಾಖಲಿಸುವ ಕಾರ್ಯ ನಡೆಯಬೇಕಿದೆ. ಈ ಎಲ್ಲ ಉದ್ದೇಶಗಳನ್ನೊಳಗೊಂಡು ಪ್ರಸ್ತುತ ಮಹಾಪ್ರಬಂಧವನ್ನು ರೂಪಿಸಲು ಪ್ರಯತ್ನಿಸಲಾಗುವುದು.

ಬಾಗೆನಾಡಿನ ಡೊಳ್ಳಿನ ಮೇಳಗಳು ನಾಡಿನಲ್ಲಿಯೇ ಪ್ರಸಿದ್ಧ. ಪ್ರತಿಯೊಂದು ಹಳ್ಳಿಯಲ್ಲಿಯೂ ಕನಿಷ್ಠ ಎರಡೋ-ಮೂರೋ ಡೊಳ್ಳಿನ ಹಾಡುಗಳ ಮೇಳಗಳಿವೆ. ಮೊಹರಂ ಹಾಡುಗಳ ಗಾಯಕರಿದ್ದಾರೆ, ಮೊಹರಂ ನೃತ್ಯದ ನರ್ತಕರಿದ್ದಾರೆ, ದಟ್ಟಿಕುಣಿತದ ಕಲಾವಿದರಿದ್ದಾರೆ, ಬಯಲಾಟಗಳ ನಟರಿದ್ದಾರೆ, ಕಣಿ-ಹಲಗೆ-ತಾಸೆ ಮುಂತಾದ ವಾದ್ಯಗಳ ವಾದಕರಿದ್ದಾರೆ, ಕಥನಗೀತೆಗಳ ಗೊಂದಲಿಗರಿದ್ದಾರೆ, ಕುಶಲಕಲೆಗಾರರಿದ್ದಾರೆ, ಕಸರತ್ತು ಪ್ರದರ್ಶಕರಿದ್ದಾರೆ. ಇವರೆಲ್ಲರನ್ನು ಅಧ್ಯಯನಕ್ಕೆ ಬಳಸಿಕೊಂಡು ಮಾಹಿತಿಗಳನ್ನು ಸಂಕಲಿಸುವುದು ಅಧ್ಯಯನದ ಒಂದು ವಿಧವಾದರೆ ಈ ನಾಡಿನ ಕಲಾವಿದರ ಕೊಡುಗೆಗಳನ್ನು ಅವಲೋಕಿಸುವುದು ಇನ್ನೊಂದು ವಿಧ. ಈ ಎರಡು ಕ್ರಮಗಳನ್ನು ಇಲ್ಲಿ ಅನುಸರಿಸಲಾಗಿದೆ. ಒಂದರ್ಥದಲ್ಲಿ ಇದು ಬಾಗೆನಾಡಿನ ಜನಪದ ಕಲೆ-ಕಲಾವಿದರ ಸಮಗ್ರ ಸಂಪುಟ. ಬದಲಾಗುತ್ತಿರುವ ಸಂದರ್ಭದಲ್ಲಿ ಕಲಾವಿದರ ಸಾಮಾಜಿಕ ಸ್ಥಾನ-ಮಾನಗಳು, ಆರ್ಥಿಕ ಸ್ಥಿತಿ-ಗತಿಗಳು, ಸಾಮಾಜಿಕ ಸ್ಥಿತ್ಯಂತರಗಳನ್ನು ತುಂಬ ಕಾಳಜಿಯಿಂದ ಅಭ್ಯಸಿಸಲಾಗಿದೆ. ಮಹಾಪ್ರಬಂಧವನ್ನು ಕೇವಲ ಮಾಹಿತಿ

ಪ್ರಧಾನವಾಗಿಸದೆ ವಿಶ್ಲೇಷಣಾಮುಖಿಯಾಗಿಸಲು ತೀವ್ರ ಗಮನಹರಿಸಲಾಗಿದೆ. ಜನಪದ ಕಲೆಗಳು ಹಾಗೂ ಕಲಾವಿದರೇ ಈ ಮಹಾಪ್ರಬಂಧಕ್ಕೆ ಮೂಲ ಆಕರಗಳು. ಆ ಕಾರಣದಿಂದ ತುಂಬ ಎಚ್ಚರಿಕೆಯಿಂದ ಈ ಮಹಾಪ್ರಬಂಧವನ್ನು ಕಟ್ಟಿಕೊಡಲು ಪ್ರಯತ್ನಿಸಲಾಗಿದೆ.

**೧.೨. ಅಧ್ಯಯನದ ಅವಲೋಕನ :**

ಬಾಗೆನಾಡು ಅಧ್ಯಯನದಿಂದ ಸಂಪೂರ್ಣ ನಿರ್ಲಕ್ಷಿತ ಕ್ಷೇತ್ರ. ಇಲ್ಲಿಯ ಶಾಸನಗಳ ಸರ್ವೇಕ್ಷಣ ಪೂರ್ತಿಯಾಗಿಲ್ಲ. ಸಾಂಸ್ಕೃತಿಕ ಅಧ್ಯಯನಗಳು ಇದುವರೆಗೂ ಪ್ರಕಟಗೊಂಡಿಲ್ಲ. ಜಾನಪದ ತಜ್ಞ ಪ್ರೊ. ಜ್ಯೋತಿ ಹೊಸೂರ, ಪ್ರೊ. ಬಿ. ಎ. ಜಂಬಗಿ, ಡಾ. ಎಂ. ಬಿ. ನೇಗಿನಹಾಳ, ಡಾ. ವಿ. ಎಸ್. ಮಾಳಿ, ಡಾ. ವಾಯ್. ಬಿ. ಹಿಮ್ಮಡಿ, ಡಾ. ಪಿ. ಜಿ. ಕೆಂಪಣ್ಣವರ, ಡಾ. ಆರ್. ಬಿ. ಚಿಲಮಿ, ಶೋಭಾ ಕೊಕಟನೂರ, ಟಿ. ಎಸ್. ಒಂಟಗುಡಿ, ವಿಷ್ಣು ಶಿಂಧೆ ಮೊದಲಾದವರು ಒಂದಿಷ್ಟು ಕಾರ್ಯ ಮಾಡಿದ್ದಾರೆ. ಪ್ರೊ. ಜ್ಯೋತಿ ಹೊಸೂರ ಅವರದು ಜಾನಪದ ಕ್ಷೇತ್ರ. ಕಳೆದ ೫೦ವರ್ಷಗಳಿಂದ ಜಾನಪದ ಅಧ್ಯಯನ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅವರು ಈ ಭಾಗದ ಜನಪದ ತ್ರಿಪದಿಗಳನ್ನು 'ಬೆರಸಿ ಇಟ್ಟೀನ ಬೆಲ್ಲ ನೆನೆಗಡಲಿ'ಯಲ್ಲಿ ಸಂಕಲಿಸಿದರೆ ಒಡಪುಗಳನ್ನು 'ಹೆಸರ ಹೇಳ್ತೀನಿ ಒಡಪ ಕಟ್ಟಿ' ಎಂಬ ಗ್ರಂಥದಲ್ಲಿ ಸಂಪಾದಿಸಿದ್ದಾರೆ. ಅವರ 'ಡೊಳ್ಳಿನ ಹಾಡುಗಳು' ಐದು ಮೌಲಿಕ ಲೇಖನಗಳ ಸಂಶೋಧನ ಕೃತಿ. ಇದರಲ್ಲಿ ಡೊಳ್ಳಿನ ಹಾಡುಗಳ ಸಾಂಸ್ಕೃತಿಕ ಹಿನ್ನೆಲೆ, ಜಾನಪದ ನೆಲೆ, ಡೊಳ್ಳಿನ ಹಾಡುಗಳ ಪ್ರಕಟಣೆಗಳನ್ನು ವಿಸ್ತೃತವಾಗಿ ಚರ್ಚಿಸಿ ವಿಶ್ಲೇಷಿಸಿರುವರು. ಬೆಳಗಾವಿ ಜಿಲ್ಲೆಯ ಜನಪದ ಕಲೆಗಳ ಕುರಿತ ಲೇಖನವೊಂದು ಅವರ 'ಜಾನಪದ ಉಪಾಸನೆ'ಯಲ್ಲಿ ಪ್ರಕಟಗೊಂಡಿದೆ. ಇವಲ್ಲದೆ ಅವರು ಇಲ್ಲಿಯ ಜಾತಗಾರರ ಕುರಿತು ಜನಾಂಗಿಕ ಅಧ್ಯಯನ ಕೈಗೊಂಡು 'ಜಾತಿಗಾರರ ಜಾತಕ' ಪ್ರಕಟಿಸಿದ್ದಾರೆ. 'ರಾಯಬಾಗ ತಾಲೂಕು ದರ್ಶನ'ವೆಂಬ ಅವರ ಪುಟ್ಟ ಕೃತಿಯನ್ನು ಐ. ಬಿ. ಎಚ್. ಪ್ರಕಾಶನ ಪ್ರಕಟಿಸಿದೆ. ಪ್ರೊ. ಜ್ಯೋತಿ ಹೊಸೂರ ಬಾಗೆನಾಡಿನ ಜಾನಪದ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಮೂಲ್ಯವಾದುದು. ಅವರ ನಂತರ ಇಲ್ಲಿಯ ಜನಪದ ಸಾಹಿತ್ಯವನ್ನು ಸಂಕಲಿಸಲು ಯತ್ನಿಸಿದವರು ಪ್ರೊ. ಬಿ. ಎ. ಜಂಬಗಿ. ಅವರ 'ಗೆಜ್ಜೆ

ನುಡಿದಾವ' ಜನಪದ ತ್ರಿಪದಿಗಳ ಸಂಕಲನ. ಅವರು ಪ್ರೊ. ಜ್ಯೋತಿ ಹೊಸೂರರ ಮಾರ್ಗದರ್ಶನದಲ್ಲಿಯೇ ಇದನ್ನು ಸಂಪಾದಿಸಿರುವರು.

ಬಾಗೆನಾಡಿನ ಕವಿ ಅಲಭ್ಯೆರಿಯ ಕುರಿತು ಡಾ. ಎಂ. ಬಿ. ನೇಗಿನಹಾಳರು ಒಂದು ಲೇಖನ ಬರೆದಿರುವರು. ಡಾ. ವಿ. ಎಸ್. ಮಾಳಿ ಬಾಗೆನಾಡಿನ ವಿವಿಧ ಕ್ಷೇತ್ರಗಳನ್ನು ತಮ್ಮ ಬಿಡಿ ಲೇಖನಗಳಲ್ಲಿ ಪರಿಚಯಿಸಿದ್ದಾರೆ. ರಾಯಬಾಗ ತಾಲೂಕು ಸಾಹಿತ್ಯ ಸಮೀಕ್ಷೆ, ಬಾಗೆನಾಡಿನ ಅಲಕನೂರು ಕರಿಸಿದ್ಧ, ಕಂಕಣವಾಡಿಯ ಹಾಲಸಿದ್ಧ, ಕಣಿವಾದಕ ವಿಷ್ಣು ಕಂಚಕಾರ, ಪಾರಿಜಾತದ ತಾರೆ ಮಾಲಾ ಸಾಂಬ್ರೇಕರ ಮುಂತಾದವು ಅವರ ಪ್ರಮುಖ ಪ್ರಕಟಿತ ಲೇಖನಗಳು. ಡಾ. ಪಿ. ಜಿ. ಕೆಂಪಣ್ಣವರ ಶಿರಗೂರಿನ ತತ್ವಪದಕಾರ ಕಲ್ಮೇಶರರ ತತ್ವಪದಗಳನ್ನು ಸಂಪಾದಿಸಿದ್ದಾರೆ. ಡಾ. ಆರ್. ಬಿ. ಚಿಲಮಿಯವರು ಅಲಭ್ಯೆರಿಯ ತತ್ವಪದಗಳನ್ನು ಸಂಕಲಿಸಿದ್ದಾರೆ. ಸಿದ್ದಪ್ಪ ನಾಗನೂರ ಅಲಭ್ಯೆರಿಯ ಕೆಲವು ಜಿನಭಜನೆಗಳನ್ನು ಪ್ರಕಟಿಸಿರುವರು. ಡಾ. ವಿ. ಎಸ್. ಮಾಳಿಯವರ ಮಾರ್ಗದರ್ಶನದಲ್ಲಿ ಶೋಭಾ ಕೊಕಟನೂರ 'ಬಾಗೆ ಪರಿಸರದ ಸಾಹಿತ್ಯ'ವೆಂಬ ನಿಬಂಧ ರಚಿಸಿ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸಿ, ಎಂ.ಫಿಲ್. ಪದವಿ ಪಡೆದಿದ್ದಾರೆ. ವಿಷ್ಣು ಶಿಂಧೆಯವರು 'ಚಿಂಚಲಿ ಮಾಯವ್ವ'ನ ಕುರಿತು ವಿಶೇಷ ಅಧ್ಯಯನ ಮಾಡಿರುವರು. ಟಿ. ಎಸ್. ಒಂಟಗುಡಿ 'ಬಾಗೆನಾಡಿನ ಹಾಲುಮತ ದೈವ'ಗಳನ್ನು ಪರಿಚಯಿಸಿರುವರು. ಆದರೆ ಬಾಗೆನಾಡಿನ ಕಲೆ-ಕಲಾವಿದರ ಕುರಿತು ಸಮಗ್ರ ಅಧ್ಯಯನ ನಡೆಯದಿರುವುದು ಉಲ್ಲೇಖನೀಯ.

**೧.೩. ಅಧ್ಯಯನದ ಸ್ವರೂಪ :**

ಪ್ರಸ್ತುತ ಅಧ್ಯಯನವು ಒಟ್ಟು ೮ ಅಧ್ಯಾಯಗಳನ್ನು ಒಳಗೊಂಡಿದೆ. ಈ ಅಧ್ಯಾಯಗಳಲ್ಲಿ ಬಾಗೆನಾಡಿನ ಪ್ರಮುಖ ಕಲೆಗಳು, ಕಲಾವಿದರು ಹಾಗೂ ಕಲಾಸ್ವರೂಪ ಪರಿಚಯಿಸಿ ವಿವೇಚಿಸಲಾಗಿದೆ. ಬಾಗೆನಾಡಿನಲ್ಲಿರುವ ಎಲ್ಲ ಶ್ರೀಮಂತ ಕಲಾಪ್ರತಿಭೆಗಳನ್ನು ದಾಖಲೀಕರಿಸುವುದರೊಂದಿಗೆ ಇಂದಿನ ಸಮಾಜದಲ್ಲಿನ

ಕಲಾವಿದರ ಸ್ಥಾನಮಾನಗಳು, ಅವರ ಆರ್ಥಿಕ ಸ್ಥಿತಿಗತಿಗಳನ್ನು ವಿವೇಚಿಸಿ, ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಗ್ರಹಿಸಲು ಯತ್ನಿಸಲಾಗಿದೆ.

ಮೊದಲ ಅಧ್ಯಾಯ ಈ ಮಹಾಪ್ರಬಂಧದ ಪ್ರವೇಶಿಕೆ. ಈ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ ಮತ್ತು ಸ್ವರೂಪವನ್ನು ನಿವೇದಿಸಿ, ವ್ಯಾಪ್ತಿಯನ್ನು ಸೂಚಿಸಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಂಡ ವೈಧಾನಿಕತೆಯನ್ನು ವಿವರಿಸಲಾಗಿದೆ.

ಎರಡನೆಯ ಅಧ್ಯಾಯ ಬಾಗೆನಾಡಿನ ಜಾನಪದ ಸಾಂಸ್ಕೃತಿಕ ವೈವಿಧ್ಯತೆಗಳ ದಾಖಲಿಸುತ್ತದೆ. ಇಲ್ಲಿಯ ಮಣ್ಣಿನಲ್ಲಿ, ಜನರಲ್ಲಿ, ಜನರ ಮನಗಳಲ್ಲಿ ಅಗಾಧ ವೈವಿಧ್ಯತೆಯಿದ್ದು ಅವು ಅವರ ದೈನಂದಿನ ಆಚರಣೆ, ಉತ್ಸವ, ಹಬ್ಬ-ಹರಿದಿನ, ಜಾತ್ರೆಗಳಲ್ಲಿ ಅಭಿವ್ಯಕ್ತಗೊಳ್ಳಬಹುದು. ಉಳಿದೆಡೆಗಳಿಗಿಂತ ಭಿನ್ನವಾದ ಇಂತಹ ವಿಶೇಷತೆಗಳನ್ನು ಈ ಅಧ್ಯಾಯದಲ್ಲಿ ಪರಿಚಯಿಸುತ್ತ ಅವು ಜನಪದ ಕಲೆಗಳ ಉಗಮಕ್ಕೆ ಹಾಗೂ ಕಲಾವಿದರ ಕಲಾವಿಕಾಸಕ್ಕೆ ಕಾರಣವಾದುದನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗಿದೆ.

ಬಾಗೆನಾಡಿನ ಜನಪದ ಕಲೆಗಳನ್ನು ಮೂರನೆಯ ಅಧ್ಯಾಯ ದಾಖಲಿಸುತ್ತದೆ. ಈ ಅಧ್ಯಾಯ ಪ್ರಸ್ತುತ ಅಧ್ಯಯನದ ನೆಲೆಗಟ್ಟು, ಬಾಗೆನಾಡಿನ ದೇಶಿ ಸಂಸ್ಕೃತಿಯ ಸಮಗ್ರ ಕಲಾ ನೆಲೆಗಳನ್ನು ಅನಾವರಣಗೊಳಿಸುವುದು. ಜನಪದ ಕಲಾ ಪ್ರಕಾರಗಳನ್ನು ಆಧರಿಸಿ ಕಲಾವಿದರನ್ನು ೫ ಮುಖ್ಯ ವಿಭಾಗಗಳಲ್ಲಿ ವರ್ಗೀಕರಿಸಲಾಗಿದೆ.

೧. ದೈವಾರಾಧನಾ ಕೇಂದ್ರಿತ ಕಲೆಗಳು
೨. ವೃತ್ತಿ ಕಲೆಗಳು
೩. ಶುದ್ಧ ಮನರಂಜನೆಯ ಕಲೆಗಳು
೪. ರಂಗಕಲೆಗಳು
೫. ಸಂಕೀರ್ಣ ಕಲೆಗಳು

ಜನಪದ ಕಲೆ ಹಾಗೂ ಕಲಾವಿದರ ವರ್ಗೀಕರಣ ಜಟಿಲವಾದುದು. ಅದೊಂದು ಪೊದೆ ಇದ್ದಂತೆ. ಒಂದರೊಳಗೊಂದು ಹೆಣೆದುಕೊಂಡಿರುತ್ತವೆ. ಅವುಗಳನ್ನು ಬಿಡಿಸುವುದು ಸುಲಭ ಸಾಧ್ಯವಲ್ಲ. ಹೀಗಾಗಿ ಈ ವರ್ಗೀಕರಣ ಸ್ಥೂಲವಾದುದು ಎಂದು ಹೇಳಬೇಕಾಗಿಲ್ಲ. ಅಧ್ಯಯನದ ಅನುಕೂಲಕ್ಕೆ ಮಾಡಿಕೊಂಡಿರುವಂಥದ್ದು. ಕಲಾವಿದರನ್ನು ಗುರುತಿಸಲು ಇದನ್ನು ಬಳಸಿಕೊಳ್ಳುವುದು ಅನಿವಾರ್ಯ.

ಜನಪದ ಕಲಾವಿದರನ್ನು ವೃತ್ತಿ ಕಲಾವಿದರು ಹಾಗೂ ಹವ್ಯಾಸಿ ಕಲಾವಿದರೆಂದು ವರ್ಗೀಕರಿಸುವುದು ಸಾಮಾನ್ಯ ಪದ್ಧತಿ. ಬಾಗೆನಾಡಿನಲ್ಲಿ ವೃತ್ತಿ ಕಲಾವಿದರೂ ಇದ್ದಾರೆ; ಹವ್ಯಾಸಿಗಳೂ ಇದ್ದಾರೆ. ಕಂಬಾರಿಕೆ, ಕುಂಬಾರಿಕೆ, ನೇಕಾರಿಕೆ ಮೊದಲಾದವು ಕೂಡ ವೃತ್ತಿಕಲೆಗಳೇ. ಇವು ಕುಶಲಕಲೆಗಳು. ವೃತ್ತಿ ಕಲಾವಿದರ ಲಲಿತ ಕಲೆಗಳ ಅಧ್ಯಯನಕ್ಕೆ ಮಾತ್ರ ಮಹಾಪ್ರಬಂಧವನ್ನು ಮಿತಗೊಳಿಸಲಾಗಿದೆ. ಹೀಗೆ ಈ ನಾಡಿನಲ್ಲಿ ಪ್ರದರ್ಶಿತಗೊಳ್ಳುವ ಪ್ರಮುಖ ಜನಪದ ಕಲಾ ಪ್ರಕಾರಗಳನ್ನು ಸ್ಥೂಲವಾಗಿ ಪರಿಚಯಿಸಲಾಗಿದೆ.

ನಾಲ್ಕನೆಯ ಅಧ್ಯಾಯ ಬಾಗೆನಾಡಿನ ಪ್ರಸಿದ್ಧ ಕಲೆಗಾರರ ದಾಖಲೀಕರಣ. ಇದು ಅವರು ಈ ನಾಡಿಗೆ ನೀಡಿದ ಕಲಾ ಸೇವೆಯ ಚಿತ್ರಣವನ್ನು ಪ್ರಸ್ತುತಪಡಿಸುತ್ತದೆ. ದಮಡಿ, ಹಲಗೆ, ಕಣಿ, ಕೊಂಬು, ತಾಸೆ, ಸನಾದಿ, ತಂಬೂರಿ, ಸುರಪೆಟ್ಟಿಗೆ, ತಬಲಾ, ಸಂಬಾಳ, ಕರಡಿ, ಕೈಪಟ್ಟು ಮುಂತಾದ ಜನಪದ ವಾದ್ಯಗಳನ್ನು ನುಡಿಸುವ ವಾದ್ಯಗಾರರು ಇಲ್ಲಿದ್ದು, ಅವರಲ್ಲಿ ಕೆಲವರು ರಾಜ್ಯ ಹಾಗೂ ರಾಷ್ಟ್ರ ಮಟ್ಟಗಳಲ್ಲಿ ಪ್ರಖ್ಯಾತಿ ಗಳಿಸಿರುವರು. ಹಾರೂಗೇರಿಯ ವಿಷ್ಣು ಪರಸಪ್ಪ ಕಂಚಕಾರ ಈ ರಾಜ್ಯದ ಅದ್ಭುತ ಪ್ರತಿಭೆ. ಅವರನ್ನು ಸರಿಗಟ್ಟಬಲ್ಲ ಕಣಿವಾದಕರು ರಾಜ್ಯದಲ್ಲಿಯೇ ಇಲ್ಲ. ಅನೇಕ ಪ್ರಶಸ್ತಿ ಸನ್ಮಾನಗಳಿಗೆ ಪಾತ್ರರಾಗಿರುವ ವಿಷ್ಣು ಕಂಚಕಾರ ಅಧ್ಯಯನದ ದೃಷ್ಟಿಯಿಂದ ನಿರ್ಲಕ್ಷಿತ ಕಲಾವಿದರು. ಹಂದಿಗುಂದದ ಶಂಕ್ರೆಪ್ಪ ಪಾಟೀಲ ದೆಹಲಿಯಲ್ಲಿ ೨೦೧೦ರಲ್ಲಿ ಜರುಗಿದ ಕಾಮನ್‌ವೆಲ್ತ್ ಕ್ರೀಡಾಕೂಟದ ಪ್ರಾರಂಭೋತ್ಸವ ಸಮಾರಂಭದಲ್ಲಿ ಅತಿಥಿ ಕಲಾವಿದರಾಗಿ ಆಮಂತ್ರಿತಗೊಂಡವರು. ಇಂತಹ ಅನೇಕ ಕಲಾವಿದರು ಈ ನಾಡಿನಲ್ಲಿದ್ದು, ಅವರ ವಿವರಗಳನ್ನು ಇಲ್ಲಿ ಕಟ್ಟಿಕೊಡಲಾಗಿದೆ.

ಕಸರತ್ತು ಪ್ರದರ್ಶಕರಿಗೂ ಈ ನಾಡು ಹೆಸರುವಾಸಿ. ಸ್ವಾತಂತ್ರ್ಯಪೂರ್ವದ ಸಂದರ್ಭದಲ್ಲಿ ಬಾಗೆನಾಡಿನ ಬಹುಭಾಗ ಕೊಲ್ಲಾಪುರದ ಮಹಾರಾಜರ ಆಡಳಿತಕ್ಕೆ ಒಳಪಟ್ಟಿತ್ತು. ಕೊಲ್ಲಾಪುರದ ಶಾಹುಮಹಾರಾಜರಿಗೆ ಕುಸ್ತಿ ಎಂದರೆ ಜೀವದ ಕ್ರೀಡೆ. ಅವರು ಸ್ವತಃ ಕುಸ್ತಿಪಟು. ಈ ಕಾರಣದಿಂದ ಈ ಭಾಗದ ಕುಸ್ತಿ ಪಟುಗಳಿಗೆ ವಿಶೇಷ ಪ್ರೋತ್ಸಾಹ ಸಿಕ್ಕಿತ್ತು. ಕುಸ್ತಿ ಅಪ್ಪಟ ಜನಪದ ಕ್ರೀಡೆ. ಈಗಲೂ ಇಲ್ಲಿ ಊರಿಗೊಂದು ಗರಡಿಮನೆಗಳಿವೆ. ಈ ಜನರ ಕುಸ್ತಿಪ್ರೇಮ ಹಾಗೆಯೇ ಉಳಿದುಕೊಂಡು ಬಂದಿದೆ.

ಹಿಡಕಲ್ಲದ ಕುಸ್ತಿಪಟು ದೇವಪ್ಪ ಬೆಳಗಲಿ ಭಾರತದ ಮೊದಲ ಅಂತಾರಾಷ್ಟ್ರೀಯ ಕುಸ್ತಿಪಟು ಎಂದು ಪ್ರತೀತಿ. ಅವನನ್ನು ಸೋಲಿಸುವುದು ಕೊಲ್ಲಾಪುರದ ಮಹಾರಾಜರಿಗೂ ಸಾಧ್ಯವಾಗಲಿಲ್ಲವೆಂಬುದು ದಂತಕಥೆ. ಹಲವು ಕುಸ್ತಿಪಟುಗಳು ಈ ನಾಡಿನಲ್ಲಿದ್ದು, ಇಂಥ ಕ್ರೀಡಾ ಪ್ರತಿಭೆಗಳೊಂದಿಗೆ ಅನುಸಂಧಾನ ಬೆಳೆಸುವುದು ಈ ಅಧ್ಯಾಯದ ಉದ್ದೇಶ. ವೃತ್ತಿನಿರತ ಕಸರತ್ತು ಪ್ರದರ್ಶಕರಾದ ಡೊಂಬರು, ದುರುಗಮುರುಗಿಗಳು ಮೊದಲಾದವರು ಬಾಗೆನಾಡಿನಲ್ಲಿಲ್ಲ.

ಕೃಷ್ಣೆ ಬಾಗೆನಾಡಿನಲ್ಲಿ ಹೆಚ್ಚು ಮೈಕೊಡವಿಕೊಂಡಿದ್ದಾಳೆ. ಇಲ್ಲಿ ಅವಳ ವಿಸ್ತಾರ ಬಹು ದೂರ. ಅವಳು ತಳಕು ಬಳುಕಿನಿಂದ ಬಳ್ಳಿಯಂತೆ ಬಳಕಿ ಹರಿಯುವುದೇ ಒಂದು ಸುಂದರ ಹಾಗೂ ಮನೋಹರ ದೃಶ್ಯ. ಅವಳಿಂದ ಬಾಗೆನಾಡಿನ ಹೆಚ್ಚು ಪ್ರದೇಶ ಹಸಿರಿನಿಂದ ಕಂಗೊಳಿಸುತ್ತಿದೆ. ಈ ಉತ್ಸಾಹದ ಸ್ಫೂರ್ತಿಯಾಗಿ ಕಲೆಗಳು ಬೆಳೆದು ಬಂದವು. ಕಲೆಗಳಿಗೆ ಪ್ರೋತ್ಸಾಹವಿದ್ದರೆ ಮಾತ್ರ ಪ್ರತಿಭಾವಂತ ಕಲಾವಿದರನ್ನು ಕಾಣಬಹುದು. ಆದರೆ ಇಂದಿನ ಕಲಾವಿದರ ಸ್ಥಾನಮಾನಗಳನ್ನು ಅಭ್ಯಸಿಸಿದರೆ ಜನಪದ ಕಲೆಗಳ ಅವನತಿಯ ಕಾರಣಗಳು ಗೋಚರವಾಗುತ್ತವೆ. ಜನಪದ ಕಲಾವಿದರ ಸಾಮಾಜಿಕ ಸ್ಥಾನಮಾನಗಳ ಕುರಿತು ಅಧ್ಯಾಯ ೫ರಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿದೆ.

ಅಧ್ಯಾಯ ೬ರಲ್ಲಿ ಬಾಗೆನಾಡಿನ ಕಲಾವಿದರ ಆರ್ಥಿಕ ಸ್ಥಿತಿ–ಗತಿಗಳನ್ನು ಕುರಿತು ವಿಶ್ಲೇಷಿಸಲಾಗಿದೆ. ಸಮೂಹ ಮಾಧ್ಯಮಗಳ ದಟ್ಟ ಪ್ರಭಾವದಿಂದಾಗಿ ಜನಪದ ಕಲೆಗಳು ಕಳೆದುಹೋಗುವ ಅಪಾಯದಲ್ಲಿವೆ. ಈಗ

[illegible]

[illegible]

[illegible]

[illegible]

ಬದುಕು ಅರ್ಥಕೇಂದ್ರಿತವಾಗುತ್ತಿದೆ. ಜನಪದ ಕಲೆಗಳು ಈ ಕಲಾವಿದರ ಜೀವನ ನಿರ್ವಹಣೆಗೆ ಪೂರಕವೆನಿಸುತ್ತಿಲ್ಲ. ಎಷ್ಟೋ ಕಲಾವಿದರನ್ನು ಭಿಕ್ಷುಕರೆಂದು ಪರಿಗಣಿಸಲಾಗುತ್ತಿದೆ. ವಂಶಪರಂಪರೆಯಿಂದ ವೃತ್ತಿಯಾಗಿ ಮುಂದುವರಿಸಿಕೊಂಡು ಬಂದ ಈ ಕಲಾವಿದರು ಇಂದು ತೀವ್ರ ಆರ್ಥಿಕ ಮುಗ್ಗಟ್ಟು ಎದುರಿಸುತ್ತಿದ್ದು, ಕಲೆಗಳಿಂದ ವಿಮುಖಗೊಳ್ಳುವ ಕವಲುದಾರಿಯಲ್ಲಿರುವರು. ಈ ಕಲಾವಿದರ ಆರ್ಥಿಕ ಸ್ಥಿತಿ–ಗತಿಗಳ ಚಿಂತನೆ ಪ್ರಸ್ತುತ ಅಧ್ಯಾಯದ ಕೇಂದ್ರ ಕಾಳಜಿ.

ಜಾಗತೀಕರಣ ಜಾನಪದ ಕಲಾವಿದರಲ್ಲಿ ಹಲವು ತಲ್ಲಣಗಳನ್ನು ಸೃಷ್ಟಿಸಿದೆ. ಇದು ಹಲವು ಸಾಂಸ್ಕೃತಿಕ ಸ್ಥಿತ್ಯಂತರಗಳಿಗೆ ಕಾರಣ. ಜನಪದ ಕಲೆಗಳ ಮರುಸೃಷ್ಟಿಗೆ ಈ ಸ್ಥಿತ್ಯಂತರಗಳೇ ಪ್ರೇರಣೆ. ಬಾಗೆನಾಡಿನ ಎಲ್ಲ ಗ್ರಾಮಗಳಲ್ಲಿಯ ಪ್ರಮುಖ ಕಲಾವಿದರನ್ನು ಸಂದರ್ಶಿಸಿ ಅವರ ವಿಚಾರಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಇಂದಿನ ಆಧುನಿಕ ಯುಗದಲ್ಲಿ ಈ ಕಲೆಗಳನ್ನು ಹೇಗೆ ಜೀವಂತವಾಗಿಡುವುದು? ಅವುಗಳನ್ನು ಮುಂದಿನ ಜನಾಂಗಕ್ಕೆ ಕೊಂಡೊಯ್ಯುವ ಬಗೆ ಯಾವುದು? ತಮ್ಮ ಇಡಿ ಜೀವನವನ್ನೇ ಕಲೆಗಾಗಿ ಮುಡಿಪಾಗಿಟ್ಟು, ಈಗ ಬೇರೆ ವೃತ್ತಿಗೆ ಹೇಗೆ ಹೊಂದಿಕೊಳ್ಳುವುದು? ಇತ್ಯಾದಿ ವಿಚಾರಗಳ ಕುರಿತು ವಿಸ್ತೃತವಾಗಿ ಚರ್ಚಿಸಲಾಗಿದೆ. ಜನಪದ ಕಲೆಗಳು ಒಂದು ಜನಾಂಗದ ಸಂಸ್ಕೃತಿ ವಾಹಕಗಳು. ಅವುಗಳ ಮೇಲೆ ಸಮೂಹ ಮಾಧ್ಯಮಗಳ ಪ್ರಭಾವ ಅಷ್ಟಿಷ್ಟಲ್ಲ. ಅವು ಜನಪದ ಕಲಾವಿದರ ಮೇಲೆ ಸುನಾಮಿಯಂತೆ ಬಂದೆರಗಿವೆ. ಕಲೆಯನ್ನು ಬಳಸಿಕೊಂಡು ಕಲಾವಿದರನ್ನು ಸಂಪೂರ್ಣ ನಿರ್ಲಕ್ಷಿಸಿವೆ.

ಈ ಮಣ್ಣಿನ ಸಂಸ್ಕೃತಿಯನ್ನು ಅನಾವರಣಗೊಳಿಸುವ ಈ ಕಲೆಗಳನ್ನು ಆಧುನಿಕ ಕಾಲಕ್ಕೆ ಪ್ರಸ್ತುತಗೊಳಿಸಲು ಕೈಗೊಳ್ಳಬೇಕಾದ ಕ್ರಮಗಳನ್ನು ೭ನೇ ಅಧ್ಯಾಯದಲ್ಲಿ ಸೂಚಿಸಲಾಗಿದೆ.

ಕೊನೆಯ ಅಧ್ಯಾಯವೇ ಸಮಾರೋಪ. ಅಧ್ಯಯನದ ಒಟ್ಟು ಫಲಿತಗಳನ್ನು ಸಂಕ್ಷಿಪ್ತವಾಗಿಯೂ ಸಮಗ್ರವಾಗಿಯೂ ಇಲ್ಲಿ ದಾಖಲಿಸಿ ಅಧ್ಯಯನದ ಹೊಸ ಕ್ಷೇತ್ರಗಳನ್ನು ಸೂಚಿಸಲಾಗಿದೆ. ಇದು ಈ ಮಹಾಪ್ರಬಂಧದ ಸ್ಥೂಲ ಸ್ವರೂಪ.

[illegible]

[illegible]

[illegible]

**೧.೪. ಅಧ್ಯಯನದ ವ್ಯಾಪ್ತಿ :**

ಈ ಅಧ್ಯಯನವು ಬಾಗೆನಾಡಿನ ವ್ಯಾಪ್ತಿಯನ್ನು ಒಳಗೊಂಡಿದೆ. ಅಂದರೆ ಈಗಿನ ರಾಯಬಾಗ ತಾಲೂಕಿನ ವ್ಯಾಪ್ತಿ ಈ ಅಧ್ಯಯನಕ್ಕಿದೆ. ಪ್ರಾದೇಶಿಕ ಅಧ್ಯಯನದಲ್ಲಿ ಸಾಮಾನ್ಯವಾಗಿ ಹಲವು ತೊಡಕುಗಳು ಎದುರಾಗುತ್ತವೆ. ಜಾನಪದ ಅಧ್ಯಯನಕ್ಕೆ ಪ್ರಾದೇಶಿಕ ಆಕರಗಳ ಕೊರತೆ ಇದ್ದೇ ಇದೆ. ಆದ್ದರಿಂದ ಕ್ಷೇತ್ರಕಾರ್ಯ ಆಧರಿತ ಮೂಲ ಆಕರಗಳನ್ನು ಹುಡುಕಿಕೊಳ್ಳುವುದೇ ಪ್ರಾಥಮಿಕ ಶೋಧ. ಬಾಗೆನಾಡಿನ ಪ್ರತಿಯೊಬ್ಬ ಕಲಾವಿದನನ್ನು ಸಂದರ್ಶಿಸಲು ಪ್ರಯತ್ನಿಸಲಾಗಿದೆ. ಕ್ಷೇತ್ರ ಕಾರ್ಯದ ವ್ಯಾಪ್ತಿ ಚಿಕ್ಕದಾಗಿದ್ದರೂ ಅಧ್ಯಯನದ ವ್ಯಾಪ್ತಿ ವಿಸ್ತೃತವಾಗಿದೆ. ಒಂದೊಂದು ಕಲಾಪ್ರಕಾರಗಳಲ್ಲಿ ನೂರಾರು ಕಲಾವಿದರು ಸಿಗುವರು. ಉದಾಹರಣೆಗಾಗಿ ಬಾಗೆನಾಡಿನ ಡೊಳ್ಳಿನ ಮೇಳಗಳ ಸಂಖ್ಯೆ ೧೦೦ಕ್ಕೂ ಹೆಚ್ಚು. ಇದರಂತೆ ೧೦೦ಕ್ಕೂ ಹೆಚ್ಚು ರಿವಾಯತ್ ಹಾಡುಗಾರರು, ಭಜನೆ ಹಾಡುಗಾರರು ಸಿಗುತ್ತಾರೆ. ಇವರೆಲ್ಲರ ಮಾಹಿತಿಯನ್ನು ಕಲೆ ಹಾಕುವುದು ಶ್ರಮದ ಕೆಲಸ. ಆಯಾ ಕಲಾ ಪ್ರಕಾರಗಳ ಪ್ರಸಿದ್ಧ ಕಲಾವಿದರ ಕಲಾ ವೈಶಿಷ್ಟ್ಯಗಳನ್ನು ದಾಖಲಿಸುವ ಉದ್ದೇಶ ಈ ಅಧ್ಯಯನಕ್ಕೆ ಇದೆ. ಈ ಎಲ್ಲ ಇತಿ-ಮಿತಿಗಳ ನಡುವೆ ಅಧ್ಯಯನದ ಸಮಗ್ರತೆಗೆ ವಿಶೇಷ ಒತ್ತು ನೀಡಲಾಗಿದೆ.

**೧.೫. ಅಧ್ಯಯನದ ವೈಧಾನಿಕತೆ :**

ಇದು ಕ್ಷೇತ್ರಕಾರ್ಯ ಆಧಾರಿತ ಅಧ್ಯಯನ. ಇದಕ್ಕೆ ಹೊರಗಿನ ವೈಧಾನಿಕತೆಯನ್ನು ಆರೋಪಿಸಬೇಕಿಲ್ಲ. ಇದರೊಳಗಿನ ಸಂಗತಿಗಳನ್ನು ಗಮನಿಸಿ ಮೂಲ ಆಕರಗಳನ್ನು ಶೋಧಿಸುವ ಕ್ಷೇತ್ರಕಾರ್ಯದ ವೈಧಾನಿಕತೆಯನ್ನು ಅನುಸರಿಸಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಮೂಲ ಆಕರಗಳನ್ನು ಸಂಗ್ರಹಿಸುವುದು ಅಧ್ಯಯನದ ಮೊದಲ ಅಗತ್ಯ. ಇದಕ್ಕಾಗಿ ಬಾಗೆನಾಡಿನ ಪ್ರಮುಖ ಕಲಾಮೇಳಗಳ ಪಟ್ಟಿ ಸಂಗ್ರಹಿಸಿ ಅನುಬಂಧಕ್ಕೆ ಸೇರಿಸಲಾಗಿದೆ. ನೂರಕ್ಕೂ ಹೆಚ್ಚು ಪ್ರಮುಖ

[illegible]

ಕಲಾವಿದರನ್ನು ಸಂದರ್ಶಿಸಿ ಅವರ ಸಾಮಾಜಿಕ ಸ್ಥಾನಮಾನ, ಆರ್ಥಿಕ ಸ್ಥಿತಿಗತಿಗಳು ಹಾಗೂ ಸಾಂಸ್ಕೃತಿಕ ಸ್ಥಿತ್ಯಂತರಗಳ ಕುರಿತು ವಿಶ್ಲೇಷಿಸಲಾಗಿದೆ.

"ಹಲವಾರು ವಿದ್ವಾಂಸರು ಜಾನಪದ ಚಿಂತನೆ–ವಿಶ್ಲೇಷಣೆ ಸಮರ್ಥವಾಗಿ ಮಾಡುತ್ತಿದ್ದಾಗಲೂ ಉತ್ತರ ಕರ್ನಾಟಕದ ಜಾನಪದ ಭಂಡಾರವನ್ನು ಅವರಿನ್ನೂ ತಡಕಿಲ್ಲವೆನಿಸುತ್ತದೆ."[೯] ಈ ನಿಟ್ಟಿನಲ್ಲಿ ಆ ಕೊರತೆಯನ್ನು ನೀಗಿಸುವ ಒಂದು ಪುಟ್ಟಯತ್ನವಿದು.

ಜನಪದ ಕಲೆಗಳು ಅಸಂಖ್ಯಾತ. ಅವುಗಳನ್ನು ಸುಲಭವಾಗಿ ಲೆಕ್ಕಕ್ಕೆ ಸೇರಿಸಲಾಗದು. ಈ ಮಾತು ಜನಪದ ಕಲಾವಿದರಿಗೂ ಅನ್ವಯಿಸುತ್ತದೆ. ಅದೆಷ್ಟು ಎಚ್ಚರದಿಂದ ಕ್ಷೇತ್ರ ಕಾರ್ಯ ಮಾಡಿದರೂ ಕೆಲವು ಕಲಾವಿದರು ನಮ್ಮ ಅಧ್ಯಯನದ ವ್ಯಾಪ್ತಿಯಿಂದ ಹೊರಗುಳಿಯುವ ಅಪಾಯವಿದೆ. ಏಕೆಂದರೆ ಜಾನಪದ ಲೋಕ ವಿಶ್ವದಷ್ಟು ವಿಶಾಲ; ಮಾನವನಷ್ಟು ಪುರಾತನ.

ಜನಪದ ಕಲೆಗಳು ಜನಪದಕ್ಕೆ ಜಾನಪದ ನೀಡುವ ಅಪೂರ್ವ ಕೊಡುಗೆಗಳು. "ಜನಪದ ಸಾಹಿತ್ಯ, ಸಂಸ್ಕೃತಿ, ಕಲೆಗಳು ಆಳವಾದ ಅಧ್ಯಯನದಿಂದ ಜನಪದದ ಪ್ರತಿಭೆ, ಸಾಮಾಜಿಕ ಚಿಂತನೆಯ ಸ್ವರೂಪ, ಧಾರ್ಮಿಕ ಪ್ರವೃತ್ತಿ, ನೈತಿಕ ವಿಚಾರ ಮೊದಲಾದ ಅಂಶಗಳ ಸಮಗ್ರ ಚಿತ್ರಣ ದೊರೆಯುತ್ತದೆ. ಅದರಲ್ಲೂ ಜನಪದರ ಬದುಕಿನ ಅತ್ಯಂತ ವರ್ಣರಂಜಿತ ಹಾಗೂ ಸ್ವಾರಸ್ಯಪೂರ್ಣ ಅಂಶವಾದ ಜನಪದ ಕಲೆಗಳು, ಜನಪದ ರಸಿಕತೆ, ಸೌಂದರ್ಯೋಪಾಸನೆ, ಜೀವನ ಮೌಲ್ಯಗಳಿಗೆ ಕನ್ನಡಿ ಹಿಡಿಯುತ್ತದೆ. ಹೀಗಾಗಿ ಉಳಿದೆಲ್ಲ ಜನಪದ ಸಾಹಿತ್ಯ ಸಾಮಗ್ರಿಗಳ ಜೊತೆಗೆ ಜನಪದ ಕಲೆಗಳು ಸೇರಿ ಆ ಜನಾಂಗದ ಸಾರಸಂಪತ್ತಿನ ಸಂಸ್ಕೃತಿಯ ಭಂಡಾರದ ತೆರವಿಗೆ ಕೀಲಿಕೈಯಾಗುತ್ತದೆ. ಜೊತೆಗೆ ಗ್ರಾಮೀಣ ಜನತೆಯ ಆಂತರಂಗಿಕ ಸಂಸ್ಕೃತಿಯೆಡೆಗೆ ಬೆಳಕು ಹಾಯಿಸುತ್ತವೆ."[೧೦] ಈ ಅಂಶಗಳಿಗೆ ಪ್ರಸ್ತುತ ಅಧ್ಯಯನದಲ್ಲಿ ಒತ್ತು ನೀಡಿ ಮಹಾಪ್ರಬಂಧವನ್ನು ರೂಪಿಸಲಾಗಿದೆ. ಇದು ಬಾಗೆನಾಡಿನ ಜನಪದ ಬದುಕಿನ ಒಳಹೊರಗುಗಳನ್ನು ಜನಪದ ಕಲಾವಿದರ ಮೂಲಕ ಅನಾವರಣಗೊಳಿಸುವ ವಿಶೇಷ ಪ್ರಯತ್ನ.

---

೯. ಡಾ. ಪಿ. ಕೆ. ನಾವಲಗಿ : ಜಾನಪದ ಸಮಾಲೋಕ, ಪುಟ : ೫, ೬

೧೦. ಅದೇ, ಪುಟ : ೫, ೬

**********

# ಅಧ್ಯಾಯ : ೨ ಬಾಗೆನಾಡಿನ ಸಾಂಸ್ಕೃತಿಕ ವೈವಿಧ್ಯತೆ

೨.೬ ಕುಂತಣ ಬಾಗೆಯ ಸಾಂಸ್ಕೃತಿಕ ಚರಿತ್ರೆ

೨.೭ ಹಾಲುಮತ ಸಂಸ್ಕೃತಿ

೨.೮ ಬಾಗೆನಾಡದ ಬಣ್ಣದ ಮಾಯವ್ವ

೨.೯ ಬಾಗೆಯ ವೈಶಿಷ್ಟ್ಯ-ವೈವಿಧ್ಯತೆಗಳು

೨.೧೦ ಬಾಗೆಯ ಪ್ರಮುಖ ಜನಪದ ಕವಿಗಳು

## ಅಧ್ಯಾಯ : ಎರಡು

# ಬಾಗೆನಾಡಿನ ಸಾಂಸ್ಕೃತಿಕ ವೈವಿಧ್ಯತೆ

ಬಾಗೆನಾಡು ವಿವಿಧ ಸಮುದಾಯಗಳ ಸಂಗಮ. ಕುರುಬರು, ಲಿಂಗಾಯತರು, ದಲಿತರು, ಜೈನರು, ಮುಸ್ಲಿಂರು, ಉಪ್ಪಾರರು, ಚೆನ್ನದಾಸರು, ಬೇಡರು ಇಲ್ಲಿಯ ಪ್ರಮುಖ ಸಮುದಾಯಗಳು. ಇದುವೇ ಇಲ್ಲಿಯ ಸಾಂಸ್ಕೃತಿಕ ವೈವಿಧ್ಯತೆಗೆ ಕಾರಣ. ಬಾಗೆನಾಡು ಪುಟ್ಟ ಪುಟ್ಟ ಬೆಟ್ಟ-ಗುಡ್ಡಗಳಿಂದ ಕೂಡಿದ ಮೊರಡಿ ಪ್ರದೇಶ. ಅಥಣಿ ಹಾಗೂ ರಾಯಬಾಗ ತಾಲೂಕುಗಳನ್ನು ಬೇರ್ಪಡಿಸುವ ಕೃಷ್ಣಾನದಿ ಬಾಗೆನಾಡಿನ ಉತ್ತರದ ಮೇರೆ. ಈ ಮೈದಾನ ಪ್ರದೇಶದಲ್ಲಿ ಕುರುಬರು ಹೆಚ್ಚು ಸಂಖ್ಯೆಯಲ್ಲಿರುವುದು ಸಹಜ. ಏಕೆಂದರೆ ಇನ್ನೂರು ವರ್ಷಗಳ ಹಿಂದೆ ಇದೆಲ್ಲ ಕುರಚಲು ಕಾಡು ಪ್ರದೇಶ. ಕೊಲ್ಲಾಪುರದ ರಾಜರು ಬೇಟೆಯಾಡಲು ಬಾಗಿಯ ಗುಡ್ಡಕ್ಕೆ ಬರುತ್ತಿದ್ದರು. ಬಾಗೆನಾಡಿನ ಬಹುತೇಕ ಹಳ್ಳಿಗಳ ಗೌಡರೆಲ್ಲ ಕುರುಬ ಸಮಾಜದವರು. ಅಂದರೆ ಪಶುಪಾಲನೆ ಇಲ್ಲಿಯ ಮುಖ್ಯ ಉದ್ಯೋಗವಾಗಿತ್ತು. ಹೀಗಾಗಿ ನಾಡಿನ ತುಂಬೆಲ್ಲ ಕುರುಬರದೇ ಬಾಹುಳ್ಯ. ನಾಡಿನಾದ್ಯಂತ ಹಾಲುಮತ ದೈವಗಳು. ಈಗ ನೀರಾವರಿ ವ್ಯಾಪ್ತಿಗೆ ಒಳಪಟ್ಟ ಮೇಲೆ ಕೃಷಿ ಜಮೀನು ವಿಸ್ತಾರಗೊಂಡಿದೆ. ವಿವಿಧ ಸಮುದಾಯಗಳು ಕೃಷಿ ಚಟುವಟಿಕೆಗಳಲ್ಲಿ ನಿರತವಾಗಿವೆ. ಸಾಂಪ್ರದಾಯಕ ವೃತ್ತಿಗಳು ಮರೆಯಾಗುತ್ತಿವೆ.

[illegible]

[illegible]

[illegible]

## ೨.೧. ಕುಂತಣ ಬಾಗೆಯ ಸಾಂಸ್ಕೃತಿಕ ಚರಿತ್ರೆ :

ಕುರುಬರು ಬಾಗೆನಾಡಿನ ಮೂಲನಿವಾಸಿಗಳು. "ಮಂಗನಿಂದ ಮಾನವನಾಗಿ ವಿಕಾಸಗೊಂಡ ಮೂಲ ಮಾನವರು ಸಹಜವಾಗಿ ನೆಲೆಗೊಂಡುದು ಗುಡ್ಡ ಬೆಟ್ಟಗಳಲ್ಲಿಯೇ ಎಂಬುದು ಸ್ಪಷ್ಟ. ಅಂತೆಯೇ ಕರ್ನಾಟಕಾಂತರ್ಗತ ಭಾರತದ ಮೂಲ ನಿವಾಸಿಗಳಲ್ಲಿ ಕುರುಬರ ಜನಾಂಗವೇ ಅತಿ ಪ್ರಮುಖವೆಂಬುದಾಗಿ ವಿದ್ವಾಂಸರ ಅಭಿಪ್ರಾಯ. ಈ ಮೂಲನಿವಾಸಿ ಕುರುಬರಲ್ಲಿ ಕಾಲಪ್ರವಾಹದ ನಿರಂತರವಾದ ಪರಿವರ್ತನೆಯ ಗತಿಯಲ್ಲಿ ಅದೇಷ್ಟೋ ಸಾವಿರ ವರ್ಷಗಳ ಹಿಂದೆಯೇ ವೃತ್ತಿ ಭೇದದ ಭಿನ್ನತೆಯ ಕಾರಣಗಳಿಂದಾಗಿ ಕೆಲವು ಪಂಗಡಗಳು ಉಂಟಾದವು. ಅವೇ ಪಂಗಡಗಳು ದಿನಗಳೆದಂತೆ ಪ್ರತ್ಯೇಕಗೊಂಡು ಪರಸ್ಪರ ಸಂಬಂಧ ಕಳಚಿ ವೃತ್ತಿಮೂಲದ ಜಾತಿಗಳಾದವು. ಇಂದು ಕರ್ನಾಟಕದಲ್ಲಿ ಕಾಣುವ ಗೊಲ್ಲರು, ಹಣಬರು, ನಾಯಕರು, ಉಪ್ಪಾರರು, ಸುಣಗಾರರು, ಕವಲೆತ್ತಿನವರು, ಸುಡುಗಾಡಸಿದ್ಧರು, ಒಕ್ಕಲಿಗರು, ವಿವಿಧ ಪರಿಶಿಷ್ಟ ಜಾತಿ–ಪಂಗಡದವರು, ಮುಂದುವರೆದವರು ಮುಂತಾದವರೆಲ್ಲ ಆದಿಮೂಲದಲ್ಲಿಯ ಕುರುಬರು ಎಂಬಂಥ ವಿಶಾಲಾರ್ಥದ ಜನಾಂಗದಲ್ಲಿ ಒಳಗೊಂಡವರಿದ್ದವರಾಗಿದ್ದಾರೆ."[೧]

ಕುರುಬರು ಒಂದು ಬುಡಕಟ್ಟು ಜನಾಂಗವೆಂಬುದು ಸ್ಪಷ್ಟ. ಅವರು ಇಂದಿಗೂ ತಮ್ಮ ವಿಶಿಷ್ಟ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿದ್ದಾರೆ. "ಆದಿಮೂಲ ಜನಾಂಗದ ಹಿನ್ನೆಲೆ ಹೊಂದಿರುವ ಕುರುಬರು ಜಾತಿ, ಮತ, ಧರ್ಮಗಳು ರೂಪುಗೊಳ್ಳುವುದಕ್ಕಿಂತ ಮೊದಲಿಗೇ ಅಸ್ತಿತ್ವದಲ್ಲಿದ್ದರು. ಆಗ ಕುರುಬರು ನಿಸರ್ಗ ಜೀವಿಗಳಾಗಿ ಬದುಕಿದವರು. ನಿಸರ್ಗದೊಂದಿಗೆ ತಾದ್ಯಾತ್ಮ ಹೊಂದಿ ಬಾಳಿರುವರು. ನಿಸರ್ಗದೊಂದಿಗೆ ಬದುಕುವಾಗ ಹೋರಾಟ, ವೀರತನದ ಪ್ರದರ್ಶನ ಅವರಿಗೆ ಅನಿವಾರ್ಯ. ಅಂತೆಯೇ ಅವರು ವೀರತ್ವದ ಆರಾಧಕರು. ವೀರಪೂಜೆ ಅವರ ರಕ್ತಗುಣ. ಈ ಕಾರಣದಿಂದಾಗಿಯೇ ವೀರತ್ವದ ಪ್ರತೀಕವಾಗಿರುವ ಬೀರಪ್ಪ ಕುರುಬರಿಗೆ ಆರಾಧ್ಯ ದೇವರು."[೨]

೧. ಜ್ಯೋತಿ ಹೊಸೂರ : ಜಗತ್ತಿನಲ್ಲಿಯ ಮೊದಲಿಗರೆಲ್ಲ ಕುರುಬರು (ಲೇ) : ಹಾಲುಮತ ವ್ಯಾಸಂಗ, ಪುಟ: ೧೧

೨. ಅದೇ, ಪುಟ : ೧೨

[illegible]

## ೨.೨. ಹಾಲುಮತ ಸಂಸ್ಕೃತಿ :

ಬಾಗೆನಾಡು ಹಾಲುಮತ ಸಂಸ್ಕೃತಿಯ ಹಲವು ನೆಲೆಗಳನ್ನು ಹೊಂದಿದೆ. ಅಲಕನೂರು ಕರಿಸಿದ್ಧೇಶ್ವರ, ಯಲ್ಪಾರಟ್ಟಿ ಅರಣ್ಯಸಿದ್ಧೇಶ್ವರ, ಕಂಕಣವಾಡಿ ಹಾಲಸಿದ್ಧೇಶ್ವರ, ಹಾರೂಗೇರಿ ಭೂತಾಳಸಿದ್ಧೇಶ್ವರ ಮತ್ತು ಮಾಳಿಂಗರಾಯ, ಬೆಂಡವಾಡ ರೇವಣಸಿದ್ಧೇಶ್ವರ ಮುಂತಾದವು ಈ ಪ್ರದೇಶದ ಹಾಲುಮತದ ಪುರುಷ ದೈವಗಳು. ಚಿಂಚಲಿ ಮಾಯವ್ವ ಕರ್ನಾಟಕ–ಮಹಾರಾಷ್ಟ್ರ–ಆಂಧ್ರಗಳಲ್ಲಿ ಪ್ರಸಿದ್ಧಿ ಪಡೆದ ಬಾಗೆನಾಡಿನ ಪ್ರಮುಖ ಸ್ತ್ರೀದೈವ. ಇವಳನ್ನು ಜನಪದ ಹಾಲುಮತ ಪುರಾಣ 'ಬಾಗೆನಾಡಿನ ಬಣ್ಣದ ಮಾಯವ್ವ'ನೆಂದು ಬಣ್ಣಿಸಿದೆ. ಬೆಕ್ಕೇರಿ ಲಕ್ಷ್ಮೀದೇವಿ, ಸವಸುದ್ದಿ ಲಕ್ಕವ್ವ, ರಾಯಬಾಗ ಸ್ಟೇಷನ್‌ದ ಲಗಮವ್ವ ಈ ನಾಡಿನ ಇನ್ನಿತರ ಸ್ತ್ರೀದೇವತೆಗಳು.

"ಅಲಕನೂರು 'ಕರಿಸಿದ್ಧನ ಅರಮನೆ.' ಹುನ್ನೂರು ಬೀರಪ್ಪ, ಕೊಣ್ಣೂರು ಕರಿಯಪ್ಪ, ಅಲಕನೂರು ಕರೆಸಿದ್ಧ ಇವರೆಲ್ಲರೂ ಒಂದೇ ಎಂದು ಹೇಳುತ್ತಾರೆ. ಕರಿಸಿದ್ಧ ಎಂಬುದು ಬೀರದೇವರ ಬಾವನ್ನ (೫೨) ಬಿರುದುಗಳಲ್ಲೊಂದು. 'ಕ್ವಾಣಗನೂರು ಕ್ವಾಣೇಸೂರನ' ವಧೆ ಮಾಡಿದ ಬೀರಪ್ಪನೇ ಕರಿದೇವರೆಂದು ಪ್ರಸಿದ್ಧನಾದ"[೩]ನೆಂಬುದು ಜನಪದ ಐತಿಹ್ಯ.

**ವೀರಭದ್ರನವತಾರವ ತಾಳಿದವ ಬೀರೇಶ್ವರ ಬೀರಪ್ಪನೋ**
**ಸಾರ ಕುರುಬರಿಗೆ ತೋರಿದ ಕಂಟಕ ಹಾರಿಸಿದವ ಬೀರಪ್ಪನೋ**
**ಕ್ವಾಣೇಸೂರನ ಪ್ರಾಣ ಹೊಡೆದಾನೋ ಜಾಣದೇವ ಬೀರಪ್ಪನೋ**
**ಕರಿಸಿದ್ಧನಾಗಿ ಧರೆಯೊಳು ಮೇಲಾಗಿ ಮೆರೆದವ ತಾ ಬೀರಪ್ಪನೋ**[೪]

ಪ್ರಸಿದ್ಧಿಯಲ್ಲಿ ಚಿಂಚಲಿ ಮಾಯವ್ವನ ನಂತರದ ಸ್ಥಾನಗಳು ಕ್ರಮವಾಗಿ ಅಲಕನೂರಿನ ಕರಿಸಿದ್ಧೇಶ್ವರ ಹಾಗೂ ಕಂಕಣವಾಡಿ ಹಾಲಸಿದ್ಧೇಶ್ವರರಿಗೆ ಸಲ್ಲುತ್ತದೆ. "ಅಲಕನೂರ ಕರಿಸಿದ್ಧನ ದೇವಸ್ಥಾನ ಬುಡಕಟ್ಟು ಜನಾಂಗವೊಂದರ ಸಾಂಸ್ಕೃತಿಕ ಕೇಂದ್ರ. ಇದು ಡೊಳ್ಳಿನ ಹಾಡುಗಳ ತವರು. ಇಲ್ಲಿ ೧೦–೧೨ ಡೊಳ್ಳಿನ ಮೇಳಗಳಿವೆ.

---

೩. ಡಾ. ವಿ. ಎಸ್. ಮಾಳಿ : ಬಾಗೆನಾಡಿನ ಅಲಕನೂರು ಕರಿಸಿದ್ಧೇಶ್ವರ (ಲೇ) : ಹಾಲುಕೆನೆ, ಪುಟ : ೧೦೭

೪. ಹಾರೂಗೇರಿ ಅಲಭೈರಿಯ ಡೊಳ್ಳಿನ ಪದ ಹಾಡಿದವರು : ಹಾರೂಗೇರಿಯ ಕರೆಪ್ಪ ಪೂಜಾರಿ

[illegible]

[illegible]

[illegible]

[illegible]

ಈ ಮೇಳದವರು ಕಂಟಿಕಾರ(ಪೂಜಾರಿ)ನ ಅನುಮತಿ ಇಲ್ಲದೆ ಎಲ್ಲಿಯೂ ಹಾಡಲು ಹೋಗುವುದಿಲ್ಲ. ದೇವಸ್ಥಾನದ ನೆರಳಿನಲ್ಲಿ ಹಾಡುಗಾರಿಕೆ ಕಲೆ ಸುಭದ್ರ ನೆಲೆ ಪಡೆದುಕೊಂಡಿದೆ."[೫]

'ಜನಪದ ಹಾಲುಮತ ಪುರಾಣ'ದಲ್ಲಿ ಬಾಗೆನಾಡು ಕುರುಬರ ಆರಾಧ್ಯದೈವ ಬೀರಪ್ಪನ ಆಡುಂಬೊಲವೆಂದು ವರ್ಣಿತಗೊಂಡಿದೆ. ಚಿಂಚಲಿ ಮಾಯವ್ವನ ಉಡಿಯಲ್ಲಿ ಬೀರಪ್ಪ ಬೆಳೆಯುತ್ತಾನೆ. ಚಿಂಚಲಿ-ರಾಯಬಾಗ-ದಿಗ್ಗೇವಾಡಿ-ಬಿರಡಿ-ಅಲಕನೂರುಗಳ ಪರಿಸರವೆಲ್ಲ ಈ ಕಾವ್ಯದಲ್ಲಿ ಒಟ್ಟುಗೂಡಿದ್ದು, ಇದು ಹಾಲುಮತದ ದಟ್ಟ ಪ್ರಭಾವವನ್ನು ತಿಳಿಸುತ್ತದೆ. ಬೀರಪ್ಪನ ಬಾಲ್ಯದ ಬದುಕಿಗೆ ಸಂಬಂಧಿಸಿದ ಸ್ಥಳಗಳನ್ನು ಇಲ್ಲಿ ಗುರುತಿಸಲು ಅವಕಾಶವಿದೆ.

'ಭರಮದೇವ ಮತ್ತು ಸೂರಮ್ಮದೇವಿಯರ ಮಗ ಬೀರಣ್ಣ. ಸೂರಮ್ಮದೇವಿಯ ಅಣ್ಣ ಕಾಳಿನಾರ್ಯಾಣ ಬೀರಣ್ಣನ ಸೋದರಮಾವ. ಸೂರಮ್ಮದೇವಿ ಬೀರಣ್ಣನಿಗೆ ಜನ್ಮನೀಡಿದ ಸಂದರ್ಭದಲ್ಲಿ ಕಾಳಿನಾರ್ಯಾಣ ಸುಳ್ಳು ಭವಿಷ್ಯ ನುಡಿದು ಹುಟ್ಟಿದ ೧೫ನೇ ದಿನ ಮಗುವನ್ನು ಅಡವಿಪಾಲು ಮಾಡಲು ಸೂಚಿಸುತ್ತಾನೆ. ಆಗ ಸೂರಮ್ಮದೇವಿ ಕೊದಲಿಗೆ ನಂದನವನಕ್ಕೆ ಮಗುವನ್ನು ಮಾಸ್ಯಾಳರ ಮೂಲಕ ಸಾಗಿಸುವಳು. ಕೊದಲಿವನದ ಹಾಲಹವೇಲಿ ಹಳ್ಳದ ದಂಡೆಯಲ್ಲಿಯ ಒಣಗಿದ ಕಂಚಿನಾಲದ ಮರದ ತುದಿಗೆ ಕೂಸಿನ ತೊಟ್ಟಿಲು ಕಟ್ಟಿ ಹೋಗುವರು. ಆಗ ಶಿವಪಾರ್ವತಿ ಆಕಾಶಮಾರ್ಗದಲ್ಲಿ ವಿಹರಿಸುತ್ತಿದ್ದಾಗ ಮಗುವಿನ ಅಳು ಕೇಳಿ ಬೆಚ್ಚಿ, ಅಲ್ಲಿಗೆ ಬಂದು ನೋಡಿದರೆ ಬಂಗಾರ ಹಲಗೆ, ಬೆಳ್ಳಿ ಹಿಡಿಯ ತೊಟ್ಟಿಲಲ್ಲಿ ಹಾಸಿದ ಮಲ್ಲಿಗೆಯ ಹೂವಿನ ಹಾಸಿನ ಮೇಲೆ ಕೂಸು ಸೂರ್ಯನಂತೆ ಬೆಳಗುತ್ತಿತ್ತು. ಪಾರ್ವತಿ ಕೂಸಿನ ನಡುಬೆರಳನ್ನು ಜೇನುಹುಳುಗಳಿಗೆ ಲಗತ್ತುಮಾಡಿ, ಅದರ ಬಾಯೊಳಗಿಡುತ್ತಾಳೆ.'

**ಪಾರ್ವತಿ ಹೇಳುತಾಳೇನ ಮುಕ್ಕಣ್ಣ ಕೇಳುತಾನೇನ**
**ಬಂದಬಸ್ತ ಕಾವಲ ನಾವೇ ಮಾಡಮಿ ಅಂದಾರ**
**ಒಳ್ಳೆದು ಒಳ್ಳೆದು ಅಂದಾನೆ ಮುಕ್ಕಣ್ಣ ಶಿವರಾಯನ**

---

೫. ಡಾ. ವಿ. ಎಸ್. ಮಾಳಿ : ಬಾಗೆನಾಡಿನ ಅಲಕನೂರು ಕರಿಸಿದ್ಧೇಶ್ವರ (ಲೇ) : ಹಾಲು ಕೆನೆ, ಪುಟ : ೧೧೧

ಮುಕ್ಕಣ್ಣ ಶಿವರಾಯನೆ ಏಳಹೆಡಿಯ ಸರ್ಪೇನ
ಏಳಹೆಡಿಯ ಸರ್ಪೇನ ತಾವೇ ಕರಿಯುತಾರೇನ
ಏಳಹೆಡಿಯನಲ್ಲಪ್ಪ ಸೂರ್ಯನ ಬೆಳಕ ನೋಡ್ಯಾನ
ಹೆಡಿಯ ಚಾಚುತಾನೇನ ಸೂರ್ಯನ ಬೆಳಕ ಬಂದೇನ
ಸೂರ್ಯಗ ಮರಿಯ ಮಾಡ್ಯಾನೆ ಬಿಸಿಲ ಬಂದವಾದೇನ
ಲಿಂಗಬೀರಣ್ಣ ದೇವರಿಗೆ ಗಿಣಿಯರಾಮನ ಜೋಗುಳ
ಹಾವ ಚೇಳಿಂದಲ್ಲಪ್ಪ ಕಾವಲ ಇಡುವುತಾರೇನ
ಬಡ್ಡಿಗೆ ಕೂಡುಸುತಾರೇನ ಇರುವಿದಂಡ ಬಂದಾವ
ಮರವ ಚಿಗಿಯುತಾದೇನ ಹಸುರುನಾಗತಾದೇನ
ಕಂಚಿನಾಲದ ಮರವೇನ ಬನ್ನಿ ಗಿಡಗೋಳು ಇದ್ದಾವ
ಕೆಟ್ಟ ಬ್ಯಾಸಿಗಿ ಬಿಸಲೇನ ಬಿಸಲಾಗ ಚಿಗಿಯುತಾದೇನ
ಕೊಲ್ಯಾ ಕೊಲ್ಯಾಕ ಚಿಗತಾವೆ ರೆಂಬಿ ರೆಂಬಿಗ ಚಿಗಿತಾವ
ಮುಕ್ಕಣ್ಣ ಶಿವರಾಯನೆ ಕೊದಲಿಗೆ ನಂದನಬನದಾಗ
ಕೊದಲಿಗೆ ನಂದನಬನದಾಗ ನಲದಾಡುತಾನೇನ [೬]

'ಜನಪದ ಹಾಲುಮತ ಮಹಾಕಾವ್ಯ' ಬಾಗೆ ಪರಿಸರದ ಐತಿಹ್ಯಗಳನ್ನು ಸುಂದರವಾಗಿ ಕಥಿಸುತ್ತದೆ. ಬಾಗೆನಾಡು ಬಂಕನಾಥನ ಅಧೀನದಲ್ಲಿತ್ತಂತೆ. ಚಿಂಚಲಿಯಲ್ಲಿ ಚಿಂಚಲಿಸೂರನೆಂಬ ರಾಕ್ಷಸನಿದ್ದ. ದಿಗ್ಗೇವಾಡಿಯನ್ನು ದಿಬ್ಬಣರಾಯನೆಂಬ ಅರಸು ಆಳುತ್ತಿದ್ದ. 'ಹಾಲಹವೇಲಿ ಹಳ್ಳ' ಎಂದರೆ ಚಿಂಚಲಿ–ಬಿರಡಿ ನಡುವೆ ಹರಿಯುವ ಹಾಲುಹಳ್ಳವೇ ಆಗಿರಬೇಕು. ಕೊದಲಿಗೆ ನಂದನವನ ಇಂದಿನ ಚಿಂಚಲಿ ಪರಿಸರದ ಪ್ರದೇಶ.

### ೨.೩. ಬಾಗೆನಾಡದ ಬಣ್ಣದ ಮಾಯವ್ವ :

ಬಾಗೆನಾಡದ ಬಣ್ಣದ ಮಾಯವ್ವ ಬೀರಣ್ಣನನ್ನು ಸಾಕಿದ ಅಕ್ಕ. ಅವಳು ದಿಬ್ಬಿರಾಯನ ಸಾಕು ಮಗಳು. ಅವಳದೂ ಅದೇ ಕಥೆ. ದೇವಗಿರಿಯ

---

೬. ಡಾ. ವೀರಣ್ಣ ದಂಡೆ : ಜನಪದ ಹಾಲುಮತ ಮಹಾಕಾವ್ಯ, ಪುಟ : ೧೮೫

ದೇವಿಂದ್ರರಾಯ ಮತ್ತು ಅವನ ಮಡದಿ ಸುಭದ್ರಿಗೆ ಏಳು ಜನ ಹೆಣ್ಣು ಮಕ್ಕಳು. ಚಿಕ್ಕವಳಾದ ಮಾಯವ್ವ ಹುಟ್ಟಿದ ವೇಳೆ ಸರಿಯಾಗಿಲ್ಲವೆಂದು ಕೂಸನ್ನು ಬಂಗಾರ ಪೆಟ್ಟಿಗೆಯಲ್ಲಿರಿಸಿ ತೆಪ್ಪದಲ್ಲಿಟ್ಟು ಹೊಳೆಯಲ್ಲಿ ತೇಲಿ ಬಿಟ್ಟರು. ಅದು ಸಾಧುಗಳಿಗೆ ದೊರೆತು ಕೂಸನ್ನು ಕುರಿಕಾಯುತ್ತಾ ಬಂದ ಏಳು ಜನ ಹೆಣ್ಣು ಮಕ್ಕಳಿಗೆ ಒಪ್ಪಿಸಿದರು. ಅವರ ತಂದೆ ದಿಬ್ಬಿರಾಯ ಮತ್ತು ತಾಯಿ ಶಾಂಬಾಯಿಯರು ದೊರೆತ ಕೂಸಿಗೆ ಮಾಯವ್ವಳೆಂದು ಹೆಸರಿಟ್ಟರು. ಮಾಯವ್ವ ಬೆಳೆದು ದೊಡ್ಡವಳಾದ ಮೇಲೆ ದಿಬ್ಬಿರಾಯನ ಕುರಿಗಳನ್ನು ತಾನೇ ಕಾಯುತ್ತ ಕಾಡರುದ್ಧರ ಭೂಮಿಯತ್ತ ಬಂದಳು. ಇದೇ ವೇಳೆಗೆ ತಂಗಿಯನ್ನು ಹುಡುಕುತ್ತ ದೇವೇಂದ್ರನೂ ಆರೂ ಜನ ಹೆಣ್ಣು ಮಕ್ಕಳೂ ಕೈಲಾಸದಿಂದ ಬರುತ್ತಾರೆ. ಕಾಡರುದ್ಧರ ಭೂಮಿಯಲ್ಲಿ ತಂಗಿ ದೊರೆತ ಮೇಲೆ ಹಿರಿಯವಳಾದ ಅಕ್ಕಮ್ಮ ತಂಗಿಯೊಂದಿಗೇ ನಿಲ್ಲುತ್ತಾಳೆ. ಉಳಿದೈವರು ಕೈಲಾಸಕ್ಕೆ ಹೋಗುತ್ತಾರೆ. ಮಾಯವ್ವ ದಿಬ್ಬಿರಾಯನಿಂದ ತಾನು ಅವರಿಗೆ ಸಾಕುಮಗಳೆಂಬುದನ್ನು ಖಚಿತಪಡಿಸಿಕೊಂಡಳು. ಮಾಯಮ್ಮ, ಅಕ್ಕಮ್ಮರಿಬ್ಬರಿಗೂ ದಿಬ್ಬಿರಾಯ ತಲಾ ಮೂವತ್ತೈದು ಕುರಿಗಳನ್ನು ಹಂಚಿಕೊಟ್ಟು ಚಂದ್ರಗಿರಿಯಲ್ಲಿರಲು ಹೇಳುತ್ತಾನೆ.

ಒಂದು ದಿನ ಇವರು ಕುರಿ ಕಾಯುತ್ತ ಕಾಡರುದ್ಧರ ಭೂಮಿಯಲ್ಲಿದ್ದಾಗ ಕಂಚಿನಾಲದ ಮರದ ಮೇಲಿಂದ ಕೂಸಿನ ಅಳು ಕೇಳುತ್ತದೆ. ಮರದ ಮೇಲೆ ತೊಟ್ಟಿಲಲ್ಲಿದ್ದ ಆ ಕೂಸನ್ನು ಬಯಸಿ ತೊಟ್ಟಿಲನ್ನು ಇಳುವಿಕೊಳ್ಳಲು ಅಕ್ಕಮ್ಮ ಮೊದಲು ಪ್ರಯತ್ನ ಮಾಡುತ್ತಾಳೆ. ಅದು ಸಾಧ್ಯವಾಗದಾದಾಗ ಮಾಯವ್ವ ಗಿಡವನ್ನೇರುವಲ್ಲಿ ಯಶಸ್ಸು ಸಾಧಿಸಿ ಕೂಸನ್ನು ಪಡೆಯುತ್ತಾಳೆ. ಕೂಸು ತನಗೆ ಬೇಕು ಎಂದು ಇಬ್ಬರೂ ಜಗಳವಾಡತೊಡಗಿದರು. ಅದೇ ವೇಳೆಗೆ ಅಲ್ಲಿಗೆ ಬಂದ ಎಳ್ಳಿಗುಂಪಿ ರಾಯಣ್ಣನೆಂಬುವನು 'ಇಬ್ಬರೂ ತೊಟ್ಟಿಲನ್ನು ಸುತ್ತುಹಾಕಿರಿ. ಆಗ ಯಾರ ಎದಿಬದಿಗಳು ಚಿಗಿಯುವವೋ ಅವರಿಗೆ ಆ ಕೂಸು' ಎನ್ನುತ್ತಾನೆ. ಆಗಲೂ ಮಾಯವ್ವ ಜಯಗಳಿಸಿ ಕೂಸನ್ನು ಪಡೆದಳು.

**"ಕೊದಲಿಗೆ ನಂದನವನದಾಗೆ ಅಕ್ಕತಮ್ಮ ಕೂಡೇವ**

**ಅಕ್ಕ ಒಬ್ಬರ ಮಗಳೇನ ತಮ್ಮ ಒಬ್ಬರ ಮಗನೇನ**

[illegible]

[illegible]

[illegible]

[illegible]

ಕೂಡಬಾರದು ಕೂಡಿವೆ ಕೊದಲಿಗ ನಂದನಬನದಾಗ
ಏ ನನ್ನ ತಮ್ಮನ ಹೆಸರೇನ ಏನಂತ ಇಡಬೇಕಂದಾಳ
ಚೆಲುವ ಚೆನ್ನಿಂಗನಂದಾರ ತಮ್ಮನ ಹೆಸರ ಕರದಾರ
ನಂದನ ಬನದ ಒಡೆಯಾನೆ ತಮ್ಮನ ಹೆಸರ ಕರದಾರ
ಸಿಕ್ಕ ಸಿಂಗೋಡಿ ತಮ್ಮನ ಲಿಂಗ ಬೀರಣ್ಣದೇವರ
ಸಿಕ್ಕ ಸಿಂಗೋಡಿ ಬೀರಣ್ಣದೇವರು ನನ್ನ ತಮ್ಮನಂದಾಳ" ೭

ಮಾಯವ್ವ ಸಾಕು ತಮ್ಮ ಬೀರಣ್ಣನನ್ನು ಮುದ್ದಾಗಿ ಬೆಳೆಸುವಳು. ವಿದ್ಯೆ ಕಲಿಸುವಳು. ಕನ್ನಿಕಾಮವ್ವನನ್ನು ತಂದು ಮದುವೆ ಮಾಡಿದಳು. ತಮ್ಮನನ್ನು ಕರೆದುಕೊಂಡು ನಾಡು ಕೊಂಕಣ ಸುತ್ತಿದಳು. ಕೊನೆಗೆ ಬಾಗಿಗೆ ಬರುವಳು. ಅಲ್ಲಿ ಬಾಗಿಯ ಬಂಕನಾಥನ 'ಹೂಬಾಗೆ' ಅದ್ಭುತವಾಗಿತ್ತು.

ಬಾಗಿಯ ಭಗನಾಥನ ಹರುವ ರಾಜಕಿ ಇದ್ದಾವ
ಒಂದಾ ಕೂರಗಿ ಹೊಲವೇನಯ್ಯ ಹೂವಿನ ಬಗಿಚನಿದ್ದಾವ
ಹೂವಿನ ಬಗಿಚನಿದ್ದಾವ ಬಾರಾಂಗಬಾಂಯಿನಿದ್ದಾವ
ಬಾರಾಂಗಬಾಂಯಿ ಬಸರಿ ತಳಕ ಕಲ್ಲ ಹಾಸಿಗೆ ಇದ್ದಾವ

ಮಾಯವ್ವನ ಮಾನಹರಣ ಮಾಡಲು ಬಂದ ಬಾಗಿಯ ಭಗನಾಥನನ್ನು ಬೀರಣ್ಣ ಕೊಲ್ಲುತ್ತಾನೆ. ಚಿಂಚಲಿಸೂರನನ್ನು ಕೊಂದು ಆ ಬನವನ್ನು ಮಾಯವ್ವನಿಗೆ ನೀಡುತ್ತಾನೆ. ಹೀಗೆ ಬೀರಣ್ಣ–ಮಾಯವ್ವರ ಲೀಲೆಗೆ ಈ ನಾಡು ಸಾಕ್ಷಿಯಾದುದನ್ನು ಜನಪದ ಕಾವ್ಯಗಳು ವಿವರಿಸುತ್ತವೆ.

### ೨.೪. ಬಾಗೆಯ ವೈಶಿಷ್ಟ್ಯ – ವೈವಿಧ್ಯತೆಗಳು:

ಚಿಂಚಲಿ ಮಾಯವ್ವನ ಜಾತ್ರೆ ಉತ್ತರ ಕರ್ನಾಟಕದಲ್ಲಿಯೇ ಅತಿ ದೊಡ್ಡದು. ಲಕ್ಷ–ಲಕ್ಷ ಜನ ಜಾತ್ರೆಗೆ ಹರಿದು ಬರುತ್ತಾರೆ. ಚಿಂಚಲಿ ಮಾಯವ್ವನಿಗೆ

೭. ಡಾ. ವೀರಣ್ಣ ದಂಡೆ : ಜನಪದ ಹಾಲುಮತ ಮಹಾಕಾವ್ಯ, ಪುಟ : ೨೧೧

[illegible]

[illegible]

[illegible]

[illegible]

[illegible]

ಕೊಂಕಣದ ಭಕ್ತರು ಬಹಳ. ಆ ಜಾತ್ರೆಯೇ ಸಾಂಸ್ಕೃತಿಕ ಅಧ್ಯಯನಕ್ಕೆ ವಸ್ತುವಾಗಬಲ್ಲದು. ಚಿಂಚಲಿ ಜಾತ್ರೆಯಲ್ಲಿ ದನಗಳ ಮಾರಾಟ ಮತ್ತು ಪ್ರದರ್ಶನ ನಡೆಯುತ್ತದೆ. ಇಲ್ಲಿಯ ಮತ್ತೊಂದು ಅನನ್ಯತೆ ಎಂದರೆ ಕತ್ತೆ ಮಾರಾಟದೊಂದಿಗೆ ದನಗಳ ಜಾತ್ರೆ ಆರಂಭವಾಗುವುದು. ಮಾಯವ್ವನ ಕುರಿತ ಜನಪದ ಸಾಹಿತ್ಯ ಅಪಾರ. ಇದರಂತೆ ಯಲ್ಪಾರಟ್ಟಿ ಅರಣ್ಯಸಿದ್ಧ, ಕಂಕಣವಾಡಿ ಹಾಲಸಿದ್ಧ, ಬೆಂಡವಾಡ ರೇವಣಸಿದ್ಧ, ಹಾರೂಗೇರಿ ಭೂತಾಳಸಿದ್ಧ ಮುಂತಾದ ಹಾಲುಮತ ದೈವಗಳ ಮಹಿಮೆಗಳನ್ನು ನಿರೂಪಿಸುವ ಡೊಳ್ಳಿನ ಹಾಡುಗಳು ಸಾವಿರ ಸಾವಿರ. ನೂರಾರು ಡೊಳ್ಳಿನ ಮೇಳಗಳು ದೈವಾರಾಧನೆಯ ಹಿನ್ನೆಲೆಯ ಹಲವು ಕಲೆಗಳು ಈಗಲೂ ಇಲ್ಲಿ ಪ್ರಚಲಿತದಲ್ಲಿವೆ.

ಹಂದಿಗುಂದ, ನಂದಿಕುರಳಿ, ಬೆಂಡವಾಡ, ಹಾರೂಗೇರಿ, ಯಬರಟ್ಟಿ, ಶಿರಗೂರ, ಪರಮಾನಂದವಾಡಿ ಮುಂತಾದೆಡೆಗಳಲ್ಲಿ ಶೈವಪರಂಪರೆ ಕಂಡು ಬರುತ್ತದೆ. ರಾಯಬಾಗ ತಾಲೂಕಿನಲ್ಲಿಯ ಏಕೈಕ ವೀರಶೈವ ಮಠ ಹಂದಿಗುಂದದ ಶ್ರೀ ಸಿದ್ಧೇಶ್ವರಮಠ. ಈ ಮಠದ ವಾರ್ಷಿಕ ಜಾತ್ರೆ ಒಂದು ಸಾಂಸ್ಕೃತಿಕ ಮಹೋತ್ಸವ. ಶ್ರೀಮಠದ ಈಗಿನ ಪೀಠಾಧಿಪತಿ ಶ್ರೀ ಶಿವಾನಂದ ಮಹಾಸ್ವಾಮಿಗಳು. ಕವಿಗಳು, ಪ್ರವಚನಪಟು, ಆಧುನಿಕ ವಚನಕಾರರು. ಮಠವನ್ನು ಜನಪರವಾಗಿ ರೂಪಿಸಿದ್ದಾರೆ. ಶಿರಗೂರು ಕಲ್ಮೇಶ್ವರಮಠ, ಪರಮಾನಂದವಾಡಿ ಶ್ರೀ ಗುರುದೇವಾಶ್ರಮಗಳು ಶೈವ ಸಂಪ್ರದಾಯದ ಇತರ ಮಠಗಳು. ಅದ್ವೈತ ಪರಂಪರೆಯ ಮಠಗಳಲ್ಲಿ ತತ್ತ್ವಪದಗಳು ಹರಡಿಕೊಂಡಿವೆ. ಅವಧೂತ ಪರಂಪರೆಯ ಹಾರೂಗೇರಿಯ ಲೀಲಾಮಠ ಪ್ರಸಿದ್ಧವಾದುದು.

ಕೃಷ್ಣಾತೀರದ ಗ್ರಾಮಗಳಲ್ಲಿ ಜೈನರ ಜನಸಂಖ್ಯೆ ಜಾಸ್ತಿ. ಅಲ್ಲಿಯ ಬಸದಿಗಳು, ಜಿನಭಜನೆಗಳು, ಆಚರಣೆಗಳು ವಿಶಿಷ್ಟ. ರಾಯಬಾಗ, ನಸಲಾಪುರ, ಸವದತ್ತಿ, ಹಾರೂಗೇರಿ, ಹಿಡಕಲ್ಲ, ಮುಗಳಖೋಡಗಳಲ್ಲಿ ಜಿನಸಂಸ್ಕೃತಿ ಕಂಡುಬರುತ್ತದೆ. ರಾಯಬಾಗ ಜಿನಧರ್ಮದ ಪ್ರಾಚೀನ ಕೇಂದ್ರ. ಇಲ್ಲಿ ಚಾರುಕೀರ್ತಿ ಭಟ್ಟಾರಕರ ಶ್ರೀಲಕ್ಷ್ಮೀಸೇನ ಮಠವಿದೆ. ಹತ್ತು-ಹನ್ನೊಂದನೇ ಶತಮಾನದ ಎರಡು ಪ್ರಾಚೀನ ಬಸದಿಗಳಿವೆ. ಚಿಂಚಲಿ ರಸ್ತೆಯಲ್ಲಿರುವ ಗಡದ ಬಸದಿ ಯಾಪನೀಯ ಸಂಘದ ಕುರುಹು.

[illegible]

[illegible]

[illegible]

ಬಾಗೆ ಪ್ರಸಿದ್ಧ ಧಾರ್ಮಿಕ ಕೇಂದ್ರ. ಶೈವ-ವೈಷ್ಣವ-ಜೈನ ಮತಗಳ ಸಂಗಮ. ಆದ್ದರಿಂದ ಶಾಸನಗಳು "ಪ್ರಯಾಗ ಬಡಗಲು ತೆಂಕಲು ಬಾಗೆ" ಎಂದು ಬಣ್ಣಿಸುತ್ತವೆ. ಇದೊಂದು ಘಟಿಕಾಸ್ಥಾನವಾಗಿ ಹಲವು ವಿದ್ವಾಂಸರಿಗೆ ಆಶ್ರಯ ನೀಡಿತ್ತು. "ಚಾಲುಕ್ಯ ಎರಡನೆಯ ಜಗದೇಕಮಲ್ಲನ ಶಾಸನವೊಂದು (ಕ್ರಿ.ಶ.೧೧೩೬) ಪೂವಿನಬಾಗೆಯ ಯಾಪನೀಯ ಸಂಘದ ಕುಮಾರಕೀರ್ತಿ ಪಂಡಿತ ದೇವರನ್ನು ಉಲ್ಲೇಖಿಸುತ್ತದೆ. ಇಲ್ಲಿಯ ಮಾರಸಿಂಗ ಶೆಟ್ಟಿಯ ಬಸದಿ ಶೂನ್ಯ ಸಂಸ್ಥಾನವಾಗಿತ್ತೆಂದು ತಿಳಿಯುವುದು. ಜಗದೇಕಮಲ್ಲನ ದಂಡನಾಯಕ ಕಾಳಿಮರಸ. ಆತನ ಹೆಂಡತಿ ರೇಖಲದೇವಿ. ಅವಳ ಸಹೋದರ ದಾಸಿರಾಜ. ದಾಸಿರಾಜ ಪೂವಿನಬಾಗೆಯ ಮಾರಸಿಂಗಶೆಟ್ಟಿಯ ಬಸದಿಯ ಜಿನಪೂಜೆಯನ್ನು ನೋಡಲು ಬಂದು ಯಾಪನೀಯ ಸಂಘದ ಪುನ್ನಾಗ ವೃಕ್ಷ ಮೂಲಗಣದ ಕುಮಾರಕೀರ್ತಿ ಪಂಡಿತದೇವರಿಗೆ ದತ್ತಿ ಕೊಟ್ಟನು. ಇಲ್ಲಿಯ ಮತ್ತೊಂದು ಬಸದಿಯ ಹೊರಗೋಡೆಯ ಮೇಲಿರುವ ರಟ್ಟ ದೊರೆ ೪ನೇ ಕಾರ್ತವೀರ್ಯನ ಶಾಸನವಿದ್ದು, ಆದಿನಾಥ ಬಸದಿಗೆ ಚಿಂಚಲಿ ಗ್ರಾಮವನ್ನು ದಾನವಾಗಿ ನೀಡಿದುದನ್ನು ತಿಳಿಸುತ್ತದೆ."[೮]

ರಾಯಬಾಗದ ನರಸಿಂಹ ದೇವಾಲಯ ದೇಶದಲ್ಲಿಯೇ ವಿಶಿಷ್ಟವಾದ ಗುಹಾಂತರ ದೇವಾಲಯ. ಅಲ್ಲಿಯ ನರಸಿಂಹ ವಿಗ್ರಹ ಅತ್ಯಂತ ವಿಶಿಷ್ಟ ಮತ್ತು ಅನನ್ಯವಾದುದು. ಕುಡಚಿ ಮುಸ್ಲಿಂರಿಂದ ತುಂಬಿಕೊಂಡ ಪಟ್ಟಣ. ಕೃಷ್ಣಾತೀರದ ಕುಡಚಿಯಲ್ಲಿ ಮಾಸಾಬಿ ದರ್ಗಾಯಿದೆ. ಮೊರಬದ ಮೊಹರಂ ಪ್ರಸಿದ್ಧವಾದುದು. ಸಾಮಾನ್ಯವಾಗಿ ಎಲ್ಲ ಗ್ರಾಮಗಳಲ್ಲಿಯೂ ಮಸೀದಿಗಳಿವೆ. ಮೊಹರಂ ಸಂದರ್ಭದಲ್ಲಿ ಹಾಡುವ ಕರ್ಬಲ್ ಹಾಡುಗಳನ್ನು ಹಾಡುವ ಅನೇಕ ತಂಡಗಳಿವೆ. ಮುಸ್ಲಿಂರಲ್ಲಿ ವಿಶಿಷ್ಟವೆನಿಸುವ ಜಾತಿಗಾರರು ಅನೇಕ ಕಡೆಗಳಲ್ಲಿ ವಾಸಿಸುತ್ತಾರೆ. ಸೋಗು ಹಾಕುವುದು ಅವರ ಮುಖ್ಯ ವೃತ್ತಿ. ಅವರು ವೃತ್ತಿ ಕಲಾವಿದರು.

ಬಾಗೆನಾಡಿನಲ್ಲಿ ಅನೇಕ ದಲಿತ ಸಮುದಾಯಗಳಿವೆ. ಎಲ್ಲಮ್ಮ, ಮಾರಮ್ಮ, ದುರ್ಗವ್ವ, ಚಂದ್ರವ್ವರಂಥ ಸ್ತ್ರೀದೇವತೆಗಳ ಆರಾಧನೆ ಕಾಣಬಹುದು. ದಲಿತರಲ್ಲಿ ಕಲೆಗೆ ಹೆಚ್ಚು ಪ್ರಾಶಸ್ತ್ಯ. ದಲಿತ ಸ್ತ್ರೀಯರು ಕೃಷ್ಣಪಾರಿಜಾತದ ನಟಿಯರಾಗಿ, ಲಾವಣಿ, ಚೌಡಕಿ ಹಾಡುಗಾರರಾಗಿ ಹೆಸರು ಗಳಿಸಿದ್ದಾರೆ. ಇವೆಲ್ಲವುಗಳಿಗಿಂತ

---

೮. ಶೋಭಾ ಕೊಕಟನೂರ : ಬಾಗೆ ಪರಿಸರದ ಸಾಹಿತ್ಯ (ಅಪ್ರಕಟಿತ ನಿಬಂಧ), ಪುಟ : ೪, ೫

[illegible]

ಭಿನ್ನವಾಗಿ ಇತ್ತೀಚಿಗೆ ಬೆಳೆದುಬಂದುದು ಮುಗಳಖೋಡದ ಯಲ್ಲಾಲಿಂಗಮಠ. ಯಲ್ಲಪ್ಪ ಮಹಾರಾಜರು ಕಟ್ಟಿದ ಮಠ ಸರ್ವ ಸಮುದಾಯಗಳ ಆರಾಧನಾ ನೆಲೆಯಾಗಿ ಬೆಳೆಯುತ್ತಿದೆ. ಮುಗಳಖೋಡಮಠ ಸಮುದಾಯದ ಸಾಂಸ್ಕೃತಿಕ ಕೇಂದ್ರವೆನಿಸಿದೆ. ಕೋಳಿಗುಡ್ಡದಲ್ಲಿ ಆನಂದಾಶ್ರಮವಿದೆ.

ಬಾಗೆನಾಡು ಈಗ ಹಚ್ಚ ಹಸಿರಿನ ಬೀಡು. ಇಲ್ಲಿ ಎಂಟು ತಿಂಗಳು ಘಟಪ್ರಭಾ ಎಡದಂಡೆ ಕಾಲುವೆ ನೀರು ಹರಿಯುತ್ತದೆ. ಈಗ ಪಶುಪಾಲನೆಗಿಂತ ಕೃಷಿ ಹೆಚ್ಚು ಸಮೃದ್ಧಿ ಪಡೆದಿದೆ. ಜನರು ಸುಖಿಗಳು. ಮಳೆಯಾಗದಿದ್ದರೂ ಅವರಿಗೆ ಬರಗಾಲದ ಭೀತಿಯಿಲ್ಲ. ಕಬ್ಬು, ಅರಿಷಿಣ, ಗೋವಿನಜೋಳದಂಥ ಲಾಭದಾಯಕ ಆರ್ಥಿಕ ಬೆಳೆಗಳನ್ನು ಬೆಳೆದು ಆರ್ಥಿಕ ಸ್ವಾವಲಂಬನೆ ಸಾಧಿಸಿದ್ದಾರೆ. ಹೀಗಾಗಿ ಇಲ್ಲಿ ಜರುಗುವ ಹಬ್ಬ-ಹರಿದಿನ, ಜಾತ್ರೆ-ಉತ್ಸವ, ಮದುವೆ-ಮುಂಜಿಗಳು ಸಂಭ್ರಮ-ಸಂತೋಷದಿಂದ ಕೂಡಿರುತ್ತವೆ. ಬೇರೆಡೆಗಳಲ್ಲಿ ಕಾಣದ ಉತ್ಸಾಹವನ್ನು ಇಲ್ಲಿಯ ಜನರಲ್ಲಿ ಕಾಣುತ್ತೇವೆ.

ಈ ಪ್ರದೇಶದಲ್ಲಿ ವರ್ಷದುದ್ದಕ್ಕೂ ಉತ್ಸವಗಳು. ದಿನನಿತ್ಯ ಮಂಗಲವಾದ್ಯ ನಿನಾದ. ಹೀಗಾಗಿ ಹಲವು ಜನಪದ ಕಲೆಗಳು ಇನ್ನೂ ಜೀವಂತವಾಗಿವೆ. ಕಲೆಗಳಿಗೂ ಸಮೃದ್ಧಿಗೂ ಬಿಡಿಸಲಾಗದ ನಂಟು. ಮದುವೆ-ಮುಂಜೆ-ಪ್ರಸ್ತ-ಸೀಮಂತ ಇತ್ಯಾದಿ ಶುಭ ಪ್ರಸಂಗಗಳಲ್ಲಿ ಸಂಪ್ರದಾಯದ ಹಾಡು ಹಾಡುವರು. ಹಬ್ಬ-ಹರಿದಿನಗಳಲ್ಲಿ ಆರಾಧನೆ ಮತ್ತು ಮನರಂಜನೆಗಾಗಿ ವಿವಿಧ ಜನಪದ ಕಾರ್ಯಕ್ರಮಗಳನ್ನು ಸಂಘಟಿಸುವರು. ಜಾತ್ರೆ-ಉತ್ಸವಗಳಲ್ಲಿ ಕಲಾಮೇಳಗಳು ಜರುಗುತ್ತವೆ.

ಹಾರೂಗೇರಿಯ ಲೀಲಾಮಠ ಪ್ರತಿವರ್ಷ ಮಹಾನವಮಿ ಸಂದರ್ಭದಲ್ಲಿ ೭ ದಿನಗಳ ವೇದಾಂತ ಮಹೋತ್ಸವ ಸಂಯೋಜಿಸುತ್ತದೆ. ಆ ಸಂದರ್ಭದಲ್ಲಿ ಒಂದು ದಿನ ಜನಪದ ಕಲಾಮೇಳಕ್ಕೆ ಮೀಸಲು. ಈ ಭಾಗದ ವಿವಿಧ ಜನಪದ ಕಲಾವಿದರು ಸೇರುತ್ತಾರೆ. ತಮ್ಮತಮ್ಮ ಕಲೆಗಳನ್ನು ಪ್ರದರ್ಶಿಸಿ ಬಹುಮಾನ/ಗೌರವಧನ ಪಡೆಯುವರು. ಕಳೆದ ಇಪ್ಪತ್ತೈದು ವರ್ಷಗಳಿಂದ ಇದು ಅವ್ಯಾಹತವಾಗಿ ನಡೆದುಕೊಂಡು ಬಂದಿದೆ.

ಹಂದಿಗುಂದದ ಶ್ರೀಸಿದ್ಧೇಶ್ವರಮಠ ಪ್ರತಿ ವರ್ಷ ಜಾತ್ರಾ ಮಹೋತ್ಸವದಲ್ಲಿ ಒಂದೊಂದು ಕಲೆಯ ಪ್ರದರ್ಶನಗಳನ್ನು ಏರ್ಪಡಿಸುತ್ತದೆ. ಶ್ರೀಮಠದ ಸ್ವಾಮಿಗಳು ಸಾಹಿತ್ಯ ಮತ್ತು ಸಂಸ್ಕೃತಿಯ ಆರಾಧಕರು. ಕಳೆದ ಐದು ವರ್ಷಗಳ ಹಿಂದೆ ಜಿಲ್ಲಾ ಮಟ್ಟದ ಜನಪದ ಕಲಾಮೇಳ ಸಂಘಟಿಸಿ ಅದರ ಸ್ಮರಣೆಗಾಗಿ ಒಂದು ಸಂಚಿಕೆಯನ್ನು ಪ್ರಕಟಿಸಿದ್ದರು.

ಹಾರೂಗೇರಿಯ ಮುಸ್ಲಿಂ ಮತ್ತು ಹಿಂದೂ ಬಾಂಧವರು ಮಹಮದ್ ಪೈಗಂಬರರ ಜಯಂತ್ಯುತ್ಸವದಂದು ಬಾಗೆನಾಡಿನ ಮೊಹರಂ ಪದಗಳ ಸ್ಪರ್ಧೆ ಏರ್ಪಡಿಸುವರು. ಇಪ್ಪತ್ತಕ್ಕೂ ಹೆಚ್ಚು ಕರ್ಬಲ್ ತಂಡಗಳು ಇದರಲ್ಲಿ ಭಾಗವಹಿಸಿ ರಾತ್ರಿಯಿಡೀ ಕರ್ಬಲ್ ಹಾಡುಗಳನ್ನು ಹಾಡುವರು. ಅಲ್ಲಿಯ ಮಸೀದೆಯ ಅಂಗಣ ಅಂದು ನಿಜಕ್ಕೂ ಕರ್ಬಲ್ ಮೈದಾನವಾಗಿ ಮಾರ್ಪಡುತ್ತದೆ. ಮೊರಬ, ಅಳಗವಾಡಿ ಗ್ರಾಮಗಳಲ್ಲಿಯೂ ಇಂಥ ಸ್ಪರ್ಧೆಗಳು ನಡೆಯುತ್ತವೆ. ಮೊರಬದ ಮೊಹರಂ ಬಾಗೆನಾಡಿನ ಒಂದು ದೊಡ್ಡ ಜಾತ್ರೆ.

ಗೌರಿ–ಗಣಪತಿ ಹಬ್ಬದಲ್ಲಿ ಹವ್ಯಾಸಿ ಕಲಾವಿದರು ಗ್ರಾಮಕ್ಕೊಂದರಂತೆ ನಾಟಕ ಆಡುವುದು ಈ ಭಾಗದ ಪ್ರಚಲಿತ ರೂಢಿ. ಯಾವುದೇ ಕಂಪನಿ ನಾಟಕಗಳನ್ನು ಅಚ್ಚುಕಟ್ಟಾಗಿ ಪ್ರದರ್ಶಿಸುತ್ತಾರೆ. ಸ್ತ್ರೀಪಾತ್ರಗಳಲ್ಲಿ ಕಲಾವಿದೆಯರನ್ನು ಪಟ್ಟಣಗಳಿಂದ ಕರೆಸಿಕೊಳ್ಳುತ್ತಾರೆ. ಇಂದಿಗೂ ಗ್ರಾಮೀಣ ಪ್ರದೇಶದ ಜನರಲ್ಲಿ ರಂಗಕಲೆಗಳು ಜೀವಂತವಾಗಿವೆಯೆಂಬುದಕ್ಕೆ ಈ ಪ್ರದರ್ಶನಗಳು ನಿದರ್ಶನ.

ಇಪ್ಪತ್ತು ವರ್ಷಗಳ ಹಿಂದೆ ಹಾರೂಗೇರಿ ಕ್ರಾಸ್‌ನಲ್ಲಿ ಒಂದು ವಿಶಾಲವಾದ ಹುಣಸೆ ಮರವಿತ್ತು. ಆಗ ಅಲ್ಲಿ ಬಸ್‌ನಿಲ್ದಾಣಗಳಿರಲಿಲ್ಲ. ಅದು ಜಮಖಂಡಿ–ಸಾಂಗ್ಲಿ, ಅಥಣಿ–ಗೋಕಾಕ ರಾಜಮಾರ್ಗಗಳು ಸಂಧಿಸುವ ಸ್ಥಳ. ಜನ ಯಾವಾಗಲೂ ಗಿಜಗುಡುತಿತ್ತು. ಆಗ ಆ ಮರದ ತುಂಬೆಲ್ಲ ನಾಟಕ ಕಂಪನಿಗಳ ಫಲಕಗಳು ನೇತಾಡುತ್ತಿದ್ದವು. ಅದು ಅಕ್ಷರಶಃ ಅಕ್ಷರದ ಮರವಾಗಿತ್ತು. ಈಗ ಆ ಮರ ಇಲ್ಲ. ನಾಟಕದ ಫಲಕಗಳೂ ಕಾಣುತ್ತಿಲ್ಲ. ಎಲ್ಲವೂ ಮಾಯ! ಒಂದು ಕಾಲದಲ್ಲಿ ಹಿಡಕಲ್ಲ ಜನಪದ ರಂಗಭೂಮಿಯ ತೊಟ್ಟಿಲು. ಅದು ರಂಗಕಲಾವಿದರ ತವರು.

ಈಗಲೂ ಇಲ್ಲಿ ಎರಡು ಪಾರಿಜಾತ ಕಂಪನಿಗಳಿವೆ. ನಾಲ್ಕೈದು ಹವ್ಯಾಸಿ ನಾಟಕ ತಂಡಗಳಿವೆ. ಮುಖಕ್ಕೆ ಬಣ್ಣ ಬಳೆದುಕೊಳ್ಳುವುದೆಂದರೆ ಹಿಡಕಲ್ಲದ ಜನರಿಗೆ ಎಲ್ಲಿಲ್ಲದ ಖುಷಿ.

ಬಾಗೆನಾಡಿನ ತುಂಬೆಲ್ಲ ವ್ಯಾಪಿಸಿರುವ ಹಾಲುಮತ ದೈವಗಳ ಆರಾಧನೆಗೆ ಡೊಳ್ಳು ನಿನಾದ ಬೇಕೇ ಬೇಕು. ಹಬ್ಬ-ಹುಣ್ಣಿಮೆ, ಜಾತ್ರೆ, ಉತ್ಸವಗಳಲ್ಲಿ ಡೊಳ್ಳಿನ ಮೇಳಗಳ ಸ್ಪರ್ಧೆ ಖಚಿತ. ಸಾವಿರಕ್ಕೂ ಹೆಚ್ಚು ಡೊಳ್ಳುವಾದಕರು, ನೂರಕ್ಕೂ ಹೆಚ್ಚು ಹಾಡುಗಾರರು ಬಾಗೆನಾಡಿನಲ್ಲಿರುವುದು ಸೋಜಿಗ. ದಟ್ಟಿ ಕುಣಿತಗಳು ಆಕರ್ಷಣೀಯ. ಯಲ್ಪಾರಟ್ಟಿ, ಹಾರೂಗೇರಿ, ಕಂಕಣವಾಡಿ, ರಾಯಬಾಗ, ಬೆಕ್ಕೇರಿ, ಚಿಂಚಲಿ, ದಿಗ್ಗೇವಾಡಿ, ಖೆಮಲಾಪುರ, ಪರಮಾನಂದವಾಡಿ, ಮುಗಳಖೋಡ, ಹಿಡಕಲ್ಲ ಮುಂತಾದ ಗ್ರಾಮಗಳಲ್ಲಿ ನಡೆಯುವ ಜಾತ್ರೆಗಳು ಡೊಳ್ಳಿನ ನಿನಾದಗಳಿಂದಲೇ ಆರಂಭಗೊಳ್ಳಬೇಕು. ಕಣಿ, ತಾಸೆ, ಹಲಗೆ, ದಮಡಿ, ಕರಡಿ, ಕೈಪಟ್ಟು, ಲೇಜಿಮ್, ಝಾಂಜ್ ಮೇಳಗಳು ಸೇರುತ್ತವೆ. ಸನಾದಿ, ಬ್ಯಾಂಡ್ ಮೇಳಗಳು ಬರುತ್ತವೆ. ಒಂದರ್ಥದಲ್ಲಿ ಜಾತ್ರೆಗಳು ಕಲಾರಾಧನೆಯ ಸಾಂಸ್ಕೃತಿಕ ಸಮ್ಮೇಳನಗಳು. ಶಿವಾಲಯಗಳಲ್ಲಿ ಶಿವಭಜನೆ, ಜಿನಾಲಯಗಳಲ್ಲಿ ಜಿನಭಜನೆ, ವಿಠ್ಠಲ ಮಂದಿರಗಳಲ್ಲಿ ಮರಾಠಿ ಅಭಂಗ ಗಾಯನ ನಿರಂತರವಾಗಿ ಜರುಗುತ್ತವೆ. ಇತ್ತೀಚಿಗೆ ಹಾರೂಗೇರಿ ಸುತ್ತಮುತ್ತ ವಾರಕರೀ ಪಂಥದ ಪ್ರಭಾವ ದಟ್ಟವಾಗುತ್ತಿದೆ. ಕಪ್ಪಲಗುದ್ದಿಯಂಥ ಗ್ರಾಮಗಳಲ್ಲಿ ಅರ್ಧಕ್ಕರ್ಧ ಜನ ವಿಠ್ಠಲ ಭಕ್ತರು. ಅವರಿಗೆ ಹರಿಹರ ಭೇದವಿಲ್ಲ.

ಬಾಗೆನಾಡಿನ ಜನಪದ ಕಲೆಗಳ ಅಭಿವೃದ್ಧಿಗೆ ಈ ಪರಿಸರದ ವಿಪುಲ ಜನಪದ ಸಾಹಿತ್ಯವೂ ಕಾರಣವಾಗಿದೆ. ಈ ಪ್ರದೇಶ ಶಿಷ್ಟಸಾಹಿತ್ಯದಲ್ಲಿ ಬಡವಾಗಿದ್ದರೂ ಜನಪದ ಸಾಹಿತ್ಯ ಚರಿತ್ರೆಯಲ್ಲಿ ಢಾಳವಾಗಿದೆ. ಕವಿ ರಾಜಾದಿತ್ಯನನ್ನು ಹೊರತುಪಡಿಸಿದರೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಬಾಗೆನಾಡಿನ ಕವಿಗಳು ಪ್ರವೇಶ ಪಡೆಯಲಿಲ್ಲ. 'ಗಣಿತ ಭಾಸ್ಕರ' ರಾಜಾದಿತ್ಯನೇ ಬಾಗೆಯ ಪ್ರಥಮ ಪ್ರಾಚೀನ ಕವಿ. ಅನಂತರ ಕ್ರಿ.ಶ.೧೯ನೇ ಶತಮಾನದ ಮಧ್ಯಭಾಗದಲ್ಲಿ ಅನೇಕ ಜನಪದ ಕವಿಗಳು

ಬೆಳಕಿಗೆ ಬಂದರು. ಈ ಜನಪದ ಕಾವ್ಯ ಪ್ರತಿಭೆಗಳು ಜಾನಪದ ಕ್ಷಿತಿಜವನ್ನು ಬೆಳಗಿದವು. ಇವರಿಗಿಂತಲೂ ಮುಂಚೆ ಇಲ್ಲಿಯ ಜನಪದ ಸಾಹಿತ್ಯ ಶ್ರೀಮಂತವಾಗಿರಬಹುದು. ಆದರೆ ಅದರ ವಿವರಗಳು ನಮಗೆ ಲಭ್ಯವಿಲ್ಲ. ೧೯ನೇ ಶತಮಾನದ ಜನಪದ ಕವಿಗಳಲ್ಲಿ 'ಜನಪದ ಸಾಹಿತ್ಯ ಚರಿತ್ರೆ'ಯಲ್ಲಿ ದಾಖಲಿತಗೊಂಡ ಕವಿಗಳು ಕೇವಲ ಇಬ್ಬರು. ಒಬ್ಬರು ಅಲಭೈರಿ ಮತ್ತೊಬ್ಬರು ಶಿರಗೂರಿನ ಕಲ್ಮೇಶರು. ದಾಖಲೆಗೊಳ್ಳದವರು ಹಲವರು.

**೨.೫. ಬಾಗೆನಾಡಿನ ಪ್ರಮುಖ ಜನಪದ ಕವಿಗಳು:**

**ಹಾರೂಗೇರಿಯ ಕವಿ ಅಲಭೈರಿ :**

ಅಲಭೈರಿ ಜನಪದ ಸಾಹಿತ್ಯ ಚರಿತ್ರೆಯಲ್ಲಿ ಅಗ್ರಗಣ್ಯ ಕವಿ. ಈತನ ಮೂಲ ಹೆಸರು ಅಲ್ಲಪ್ಪ ಸುಬ್ಬಣ್ಣವರ. ಅಲಭೈರಿ ಈತನ ಕಾವ್ಯನಾಮ. ಕನ್ನಡ, ಮರಾಠಿ ಉಭಯ ಭಾಷಾ ಪ್ರವೀಣ. ಮೋಡಿ ಲಿಪಿಯಲ್ಲಿ ಬರೆಯುತ್ತಿದ್ದ. ಚನ್ನವೃಷಭೇಂದ್ರ ಈತನ ಆರಾಧ್ಯದೈವ. ಗುರು ಗುಜರಾತದ ಸಾಧು ಗುಲಾಬದಾಸ. ಕುಷ್ಠ ರೋಗಿಯಾಗಿದ್ದ ಕವಿ ಅಲಭೈರಿ ತತ್ವಪದ, ಭಜನೆ, ಅಭಂಗ, ಡೊಳ್ಳಿನಹಾಡು, ಚೌಡಕಿಪದ, ಲಾವಣಿ, ಹಂತಿಪದ ಮೊದಲಾದ ಕಾವ್ಯಗಳಲ್ಲದೆ ವೈರಾಗ್ಯವಿಜಯ, ಶಿವಪಾರಿಜಾತ, ಹರಿಶ್ಚಂದ್ರ, ಹೇಮರಡ್ಡಿ ಮಲ್ಲಮ್ಮ ಮುಂತಾದ ಹಲವು ಬಯಲಾಟಗಳನ್ನು ರಚಿಸಿ ಅಮರನಾದನು.

ಕವಿ ಅಲಭೈರಿಯ ಸಾಹಿತ್ಯವನ್ನು ರಾಮು ಸುಬ್ಬಣ್ಣವರ, ಸಿದ್ದಪ್ಪ ನಾಗನೂರ ಹಾಗೂ ಡಾ. ಆರ್. ಬಿ. ಚಿಲಮಿ ಅಲ್ಪಪ್ರಮಾಣದಲ್ಲಿ ಸಂಗ್ರಹಿಸಿರುವರು. 'ಶ್ರೀ ಜಿನಭಕ್ತಿಗೀತೆಗಳು' ೨೦ ಜಿನ ಭಕ್ತಿಗೀತೆಗಳನ್ನೊಳಗೊಂಡ ಸಂಕಲನ. ಇದನ್ನು ಕವಿ ಅಲಭೈರಿಯ ಮಗ ರಾಮು ಸುಬ್ಬಣ್ಣವರ ಸಂಪಾದಿಸಿರುವರು. 'ಭಜನೆಯ(ತತ್ವ) ಪದಗಳು' ಎಂಬ ಶೀರ್ಷಿಕೆಯಡಿಯಲ್ಲಿ ೧೧೯ಭಜನಾ ಪದಗಳನ್ನು ಡಾ. ಆರ್. ಬಿ. ಚಿಲಮಿ ಸಂಪಾದಿಸಿರುವರು. ಡಾ. ಎಂ. ಬಿ. ನೇಗಿನಹಾಳರು ಈ ಕವಿಯ ತತ್ವಪದಗಳ ಸಂಕಲನ ಹೊರತರಲು ಯೋಚಿಸಿದರು. ಆದರೆ ಅದು ಅವರ ಅಕಾಲಿಕ

ನಿಧನದಿಂದಾಗಿ ಪ್ರಕಟಗೊಳ್ಳಲಿಲ್ಲ. ಅವರು ಈ ಕವಿಯ ಕುರಿತು ಲೇಖನವೊಂದನ್ನು ಪ್ರಕಟಿಸಿದ್ದು ಅದು ಹಂಪಿಯ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿರುವ "ನೇಗಿನಹಾಳ ಪ್ರಬಂಧಗಳು" ಎಂಬ ಕೃತಿಯಲ್ಲಿದೆ. ನೇಗಿನಹಾಳರು "ವೈರಾಗ್ಯ ವಿಜಯ, ವಿಧಿಲಿಖಿತ ಲೀಲೆ, ಕಮಲಾಕರ, ಶಂಕರಾರಂಭ, ರಾಧಾನಾಟ, ಕಲ್ಯಾನಾಟ(?) ಎಂಬ ಸುಮಾರು ೬ ಬಯಲಾಟಗಳನ್ನು ಈತ ಕನ್ನಡದಲ್ಲಿ ರಚಿಸಿದ್ದು ತಿಳಿದು ಬಂದಿದೆ. ತೆಲಗಿನಲ್ಲಿ ಕೂಡಾ ಒಂದು ಬಯಲಾಟ ಬರೆದಿರುವುದಾಗಿ ಹೇಳುತ್ತಾರೆ."[೯] ಆದರೆ ಈಗ ಲಭ್ಯವಿರುವ ಅವರ ಬಯಲಾಟ ಕೇವಲ ನಾಲ್ಕು. ಅವು ಶಿವಪಾರಿಜಾತ, ವೈರಾಗ್ಯ ವಿಜಯ, ಹರಿಶ್ಚಂದ್ರ, ಹೇಮರಡ್ಡಿ ಮಲ್ಲಮ್ಮ. ಈ ಹಸ್ತಪ್ರತಿಗಳು ಅಪೂರ್ಣ. ರಾಧಾನಾಟ ಅಲಭ್ಯೆರಿಯ ಬಯಲಾಟವಲ್ಲ. ರಾಧಾನಾಟ ಆಡುವ ತಂಡ ಹಿಡಕಲ್ಲದಲ್ಲಿತ್ತು. ಆ ತಂಡದ ಮುಖ್ಯನಟ ಕಲ್ಲಪ್ಪ. ಜನಸಾಮಾನ್ಯರು ಅದನ್ನು ಕಲ್ಯಾನಾಟ (ಕಲ್ಲಪ್ಪನ ಆಟ) ಎಂದು ಕರೆಯುತ್ತಿದ್ದರು. ಅಲಭ್ಯೆರಿಯ ಸಾಹಿತ್ಯ ವೈವಿಧ್ಯಮಯವಾದುದು. ಈತ ಜನಪದ ಕಾವ್ಯದ ಎಲ್ಲ ಪ್ರಕಾರಗಳಲ್ಲಿಯೂ ಕೃಷಿ ಮಾಡಿದ್ದಾನೆ. ಅಲಭ್ಯೆರಿ ಜೈನಧರ್ಮದವನು. ಜಿನತತ್ವಗಳನ್ನು ಜಿನಭಕ್ತಿಗೀತೆಗಳ ಮೂಲಕ ಪ್ರತಿಪಾದಿಸುತ್ತಾನಾದರೂ ಅವನದು ಅವಧೂತ ಪಂಥ. ಹೀಗಾಗಿ ಆತ ಅದ್ವೈತವನ್ನೇ ಅಭಿವ್ಯಕ್ತಿಸುತ್ತಾನೆ. ಆತನ ತತ್ವಪದಗಳ ಸಂಖ್ಯೆ ಅಪಾರ. ಬೆರಳೆಣಿಕೆಯಷ್ಟು ಪದಗಳು ಮಾತ್ರ ಉಪಲಬ್ಧ.

**ತೊಗಲಿನದೋ ದೇಹ ತೊಗಲಿನದೋ**
**ಬರಿಯಲು ಬ್ರಹ್ಮ ಸೃಷ್ಟಿ। ತೊಗಲಿನದಿದು ಸರ್ವ**
**ತೊಗಲಿನದೊಂದು ಗಂಡು। ತೊಗಲಿನದೊಂದು ಹೆಣ್ಣು**
**ತೊಗಲಿನೊಳು ತೊಗಲ ಕೂಡಿ ಮಗನು ಮಗಳಾದದ್ದು**
**ತೊಗಲಿನ ತಾಯಿ-ತಂದೆ। ತೊಗಲಿನ ಅಣ್ಣಾ-ತಮ್ಮಾ**
**ತೊಗಲಿನ ಶತ್ರು-ಮಿತ್ರ ತೊಗಲಿನ ಬಂಧು ಬಳಗಾ**
**ತೊಗಲಿನ ಗೊಂಬಿಗಂಟು। ಬಗೆಯಾದ ರೋಗವಾಗಿ**
**ತೊಗಲು ಸತ್ತದ್ದು ಕಂಡು। ತೊಗಲೇ ಅತ್ತಿತ್ತು ತಮ್ಮಾ**

---

೯. ಡಾ. ಎಂ. ಬಿ. ನೇಗಿನಹಾಳ : ನೇಗಿನಹಾಳ ಪ್ರಬಂಧಗಳು, ಪುಟ : ೮೮

ಇಂತಹ ನೂರಾರು ತತ್ವಪದಗಳು ಜನರ ಬಾಯಿಯಲ್ಲಿವೆ, ಕಲಾವಿದರ ಕೈಯಲ್ಲಿವೆ. ಅಲಭೈರಿ ಚೌಡಕಿ ಮೇಳದವರಿಗೆ ಚೌಡಕಿ ಹಾಡು, ಡೊಳ್ಳಿನ ಮೇಳಕ್ಕೆ ಡೊಳ್ಳಿನ ಹಾಡು, ಲಾವಣಿ ಮೇಳಕ್ಕೆ ಗೀಗಿಪದ, ಕರ್ಬಲ್ ತಂಡಕ್ಕೆ ಮೊಹರಂ ಹಾಡು ಹೀಗೆ ಯಾರಿಗೆ ಎಂಥ ಪದ ಬೇಕೋ ಅಂತಹ ಪದಗಳನ್ನು ಬರೆದುಕೊಡುತ್ತಿದ್ದನು. ಇದರಿಂದಾಗಿ ಈ ಭಾಗದಲ್ಲಿ ಅನೇಕ ಕಲಾತಂಡಗಳು ಹುಟ್ಟಿಕೊಳ್ಳಲು ಸಾಧ್ಯವಾಯಿತು.

ನಡಿರೆ ನಡಿರೆ ಹೋಗೋಣ ಎಲ್ಲವ್ವನ ಜಾತ್ರಿಗೆ ॥ಪಲ್ಲ॥
ಎಲ್ಲ ದೇವರೊಳು ಎಲ್ಲವ್ವ ತಾಯಿ। ಬಲ್ಲಿದ ಶಿವಬಾಯಿ
ಎಲ್ಲಿ ನೋಡಿದರೂ ಕಲ್ಲೊಳು ಮರದೊಳು। ಸಲ್ಲಿದ ಮಹಾಮಾಯಿ॥ ॥೧॥
ಹಮ್ಮನಳಿದು ಎಲ್ಲಮ್ಮನ ಭಜಿಸಲು। ಬ್ರಹ್ಮ ವಿಷ್ಣು ರುದ್ರಾ
ಒಮ್ಮೆ ಹೊಂದಿದರು ನಿರ್ಮಳ ಮುಕ್ತಿಯ ಸುಮ್ಮನೆ ಸುಖನಿದ್ರಾ ॥ ॥೨॥
ನಡಿರೆ ನಡಿರೆ ಗಡಾ ಒಡಗೂಡಿ ಸಖಿಯರು ಹಿಡಿದೊಡಲೊಳು ಭಕ್ತಿ
ಸಡಗರದಿಂದಲಿ ಕೊಡುವಳು ಬಿಡದಲಿ ಪೊಡವಿಗಧಿಕಶಕ್ತಿ ॥ ॥೩॥
ಕಳ್ಳಭಕ್ತರಾದ ಹಳ್ಳಿ ಮೂರ್ಖರೆಲ್ಲ ಸುಳ್ಳಿನ ಬೆನ್ನು ಹತ್ತಿ
ಒಳ್ಳೆಯ ದೇವರ ಎಳ್ಳಷ್ಟು ಭೇಟಿಲ್ಲ ಗೊಳ್ಳುಗೆಲಸಗೊತ್ತಿ ॥ ॥೪॥
ಆಚಾರ ಹೇಳಾವರ ಮತ್ಸರ ಬಿಡರಿ ನಿಶ್ಚಯದೊಳು ಸೇರಿ
ಸಚ್ಚಾ ಹಾರೂಗೇರಿ ಹುಚ್ಚ ಅಲಭೈರಿಗೆ ತುಚ್ಚ ಮಾಡಬ್ಯಾಡರಿ ॥ ॥೫॥

ಇದು ಅವನ ಚೌಡಕಿಪದ. ಲಾವಣಿ, ಕರ್ಬಲ್, ಅಭಂಗ, ಡೊಳ್ಳಿನ ಹಾಡು, ತತ್ವಪದಗಳ ಅಪ್ರಕಟಿತ ಸಾಹಿತ್ಯ ರಾಶಿ ರಾಶಿ. ಇವೆಲ್ಲವೂ ಪ್ರಕಟಗೊಳ್ಳುವ ಅಗತ್ಯವಿದೆ. ಅಲಭೈರಿಯ ಸಾಹಿತ್ಯದ ಮೌಲ್ಯಮಾಪನ ನಡೆದರೆ ಮಾತ್ರ ಅವನ ನಿಜದ ಬೆಲೆ ತಿಳಿಯಲು ಸಾಧ್ಯವಾದೀತು. ಈ ಸಂದರ್ಭದಲ್ಲಿ ಅವನ ಒಂದು ಲಾವಣಿ ಹಾಗೂ ಒಂದು ಮೊಹರಂ ಪದ ಅವಲೋಕಿಸಬಹುದು.

ಇದ್ದ ವಸ್ತು ನೀ ಇದ್ದಾಂಗ ತಿಳಿ ಗುದ್ದಾಟ ಮಾಡಾಂವ ಗೂಗಿಮರಿ
ಶಿದ್ಧೆ ನೋಡಿ ನೀ ಜಿದ್ದ ಹಾಕಬ್ಯಾಡ ಬುದ್ದಿವಂತ ಆಗ ನೀ ಗಿಣಿಮರಿ

॥ಪಲ್ಲ॥

ಆರು ಶಾಸ್ತ್ರ ಓದಿ ಸ್ವರೂಪಾ ಭೇದ ತಿಳಿಯದಾಂವ ಬೆಕ್ಕಿನಮರಿ
ಭೇದ ತಿಳಿದಾಂವ ವಾದ ಹಾಕುದುಲ್ಲ ಸುಮ್ಮ ಇರಾಂವ ಶಿಂಗಳಿಕಮರಿ
ದಡ್ಡರ ಮೇಲೆ ಖಟ್ಲೆ ಬೆಳಸಿ ದುಡ್ಡ ತಿನ್ನಾಂವ ಬೆಂಡಲ್ನರಿ
ಗೊಡ್ಡ ನ್ಯಾಯ ಮಾಡಿಕೋತ ತಿರಗಾಂವ ದೊಡ್ಡಬಾಯಿ ಜಿಡ್ಡ ತೋಳಿನಮರಿ
ಬುಟ್ಟಿಗಳ್ಳರಿಗೆ ತತ್ವ ಹೇಳಾಂವಾ ಮಳ್ಳ ನೋಡ ಅಂವ ಚಿಗರಿಮರಿ
ಅರ್ಥ ಅರಿಯದೆ ಕಲಿತ ಮಾತಾಡಾಂವ ಗೊತ್ತಿಕೂಡ್ಯಾಂವ ಒಬ್ಬ ಕತ್ತಿಮರಿ

॥ಚಾಲ॥

ಮೈತುಂಬಿ ನಡಗಿ ಒದರಿ। ದೇವ್ರಾ ಕೇಳಾಂವ ಮಂಗ್ಯಾನಮರಿ
ಶೆರಿ ಕುಡದ ಗದ್ದಿಗಿ ಏರಿ। ವಾಕ್ಯ ಹೇಳಾಂವ ಹೋತಿನಮರಿ
ಮುಂದಿಟ್ಟ ಕಾರಿಕ ಕೊಬ್ಬರಿ। ದೇವ್ರ ಕೇಳಾಂವ ಮಳ್ಳ ಕುರಿಮರಿ

॥ಕೂಡುಪಲ್ಲ॥

ಬಿಲ್ಲಿನಂತೆ ಬರೆಗೋಣ ಹಾಕಾಂವ ಒರಟ ಮೂಢ ಆಂವ ಒಂಟಿಮರಿ
ನೆಟ್ಟಗೆ ನಿಶಾನಿ ಹಚ್ಚಿ ತಿರಗಾಂವ ತೇಟ ನೋಡ ಚಿಟ್ಟಾನಿಮರಿ
ಜೀವ ಶಿವ ತಿಳಕೊಂಡ ಭಕ್ತಿಲಿ ನಡದಾಂವ ವಕ್ರಮೂತಿಸಿಂಹದಮರಿ?
ಚದುರತನದಿಂದ ವದರಿ ಮಾತಾಡಾಂವ ಬೆದರಬಡಕ ಅಂವ ಕುದರಿಮರಿ
ಹೋಲ್ಕಿ ಹಿಡದಕ್ಯಾರು ಕೀಲ ತಿಳ್ಯಾಂವಾ ಮೇಲಗವ್ಯಾಗಿರು ಹುಲಿಮರಿ

॥ಚಾಲ॥

ಸಾಧು ಸಂತರನ ಕಂಡ ಬಾರಿ। ಬಿದ್ದ ಹೋಗಾಂವ ಇಲಿಮರಿ
ದಾನ ಧರ್ಮ ಇಲ್ದ ಖರ್ಚಿನ ಮಾರಿ ನೋಡಾಂವ ಚಂಡಾಳ ಕಾಗಿಮರಿ
ತಾಯಿತಂದಿ ಮಾತ ಕೇಳ್ದ ಮೀರಿ ಮುಂದ ಹೋಗಾಂವ ಅಡವಿ ಮೊಲದಮರಿ

॥ಕೂಡುಪಲ್ಲ॥

ಗುರು ಹಿರ್ಯಾರಿಗಿ ಅಂಜಿ ನಡಿಯದಾಂವ ಅಂವನೋಡಕ ಕಣಕಪ್ಪಲಿಮರಿ

ಮಾನ ಅಪಮಾನ ಋಣ ಅರಿಯದಾಂವ ಹೀನ ಜಾತಿ ಹೇನಿನಮರಿ
ತನ್ನ ಅಮಲ ಭಾಳನಡಿತ ಅಂದ ತ್ರಾಸ ಕುಡಾಂವ ಒಬ್ಬ ತಗಣಿಮರಿ
ಅಕ್ಕ ತಂಗ್ಯಾರ ಮ್ಯಾಲ ಸೊಕ್ಕ ಮಾಡಾಂವ ತೇಟ ನೋಡ ಚಿಕ್ಕಾಡಮರಿ
ಅಣ್ಣತಮ್ಮರಿಗೆ ಅಣಕ ಆಡಾಂವ ಅಂಗದೊಳಗೆ ಇರು ಕೂರಿಮರಿ
ಕುಂದ ಹಚ್ಚಿ ಪರನಿಂದೆ ಆಡಾಂವ ನರ್ಕದಾಗ ಬಿದ್ದ ಹಂದಿಮರಿ
ತನ್ನ ಹೆಣ್ತಿನ ಬಿಟ್ಟ ಮಂದಿ ಹೆಂಗಸರ ಮ್ಯಾಲ ಮನಸ ಮಾಡಾಂವ ಮಕ್ರಾ ನಾಯಿಮರಿ

॥ಚಾಲ॥

ನಮ್ಮ ಊರ ಕೇಳ ಹಾರೂಗೇರಿ । ಅಲ್ಲಿ ನೆನದಾನ ಲಂಕಾ ಸುಟ್ಟಮರಿ
ಅಲ್ಲಿ ಇರತಾನ ಅಲಭೈರಿ। ಸಾಧುರ ಕಾಲಾನ ಕಾಲಮರಿ।
ಅರಿವ ಹೇಳೂದ ಬರಾಬರಿ। ಕೇಳಿದಾಂವ ಬಾಳಿಯಮರಿ।

॥ಕೂಡುಪಲ್ಲ॥

ಚನ್ನವೃಷಭೇಶ್ವರನ ಬೋಧ ಕೇಳಿದಾಂವ ಆಂವ ನೋಡ ಗುರುವಿನಮರಿ॥

ಈ ಲಾವಣಿ ತುಂಬಾ ಅರ್ಥಗರ್ಭಿತವಾದುದು. ಇದನ್ನು ವಿಶ್ಲೇಷಿಸಿದರೆ ಸಾಕು, ಅಲಭೈರಿಯ ಕಾವ್ಯ ಪ್ರತಿಭೆ ನಮಗೆ ಅರಿವಾಗುವುದು.

ಧೂಲಧೋಲೆನ್ನಿರೋ ಆಯಿಮೋಧೋಲ ಧೂಲ ಧೋಲೆನ್ನಿರೋ ॥ಪ॥
ಆಲಾವಿ ಆಡುಣು ಅಂಗದೊಳಗ। ಶ್ರೀ ಧ್ಯಾನದ ಗುಂಗಿನೊಳಗ
ಅಂಗಲಿಂಗಸಂಗ ಬಿಟ್ಟು ನಿಸ್ಸಂಗಾಗಿ ನಿತ್ತಾಗೊಮ್ಮಿ ॥೧॥
ಅನುಭವದಿಂದ ತನುವಗೂಡಿ ಮನವ ಅಂಬು ಮಸೂತಿ ಮಾಡಿ
ನೆನೆವ ಅಂಬುಪೀಠನ ಕುಣಿಸಿ। ಘನಶೋಕಂಬು ಆಟ ಆಡಿ ॥೨॥
ಪೀರ ಪೀರ ಇದರನಿಟ್ಟು। ಉದಾರನಂಬು ಊದಸುಟ್ಟು।
ಪಂಚತತ್ವದ ಘಾತಿ ಕೊಟ್ಟು। ಸಿದ್ಧ ಅಂಬುದು ಶಿವನ ಹೆಸರಾ ॥೩॥
ಸಳನೆ ಹೋಗುದು ಒಳನೆ ಬರುವದು ಗೊತ್ತಿಕುಡಿವದು ಸತ್ತು ಹುಟ್ಟಿ।
ಪಸರದಂಗಡಿನಿರದ ಕೂಟನಾತತ್ವ ಆತ್ಮಾನಿತ್ತಾಗೊಮ್ಮಿ ॥೪॥
ಸ್ಥೂಲಸೂಕ್ಷ್ಮ ಕಾರಣ ದಾಟಿ। ಮಕ್ಕಾಕಾರಣ ಮಾಡಿ ಉಲಾಚಿ।
ಅತಿ ಕಾರಣ ಆಗಿಗಟ್ಟಿ। ಗುರುತ ಹಿಡಿ ಮನದೊಳು ಘಟ್ಟಿ ॥೫॥

[illegible]

ಈ ಮೊಹರಂ ಹಾಡು ಬೇಂದ್ರೆಯವರ 'ಕುಣಿಯೋಣು ಬಾರ'೬ ಕವಿತೆಯನ್ನು ನೆನಪಿಸುವುದು ಸೋಜಿಗವೆನಿಸುತ್ತದೆ.

**ಶಿರಗೂರದ ಕವಿ ಕಲ್ಮೇಶ :**

ಇವನು ವಚನ ಹಾಗೂ ತತ್ವಪದಗಳನ್ನು ರಚಿಸಿದ ಈ ಭಾಗದ ಮತ್ತೊಬ್ಬ ಅನುಭಾವಿ ಕವಿ. ಈತ ಕ್ರಿ.ಶ. ೧೮೬೮ರಲ್ಲಿ ಜನಿಸಿದನು. ಮೂಲ ಹೆಸರು ಕಲ್ಲಪ್ಪ. ಆತ್ಮಜ್ಞಾನದ ಸಾಧನೆಗೈದು ಕಲ್ಮೇಶ್ವರನಾದನು. ಲಾವಣಿ, ಕರ್ಬಲ್ ಮೊದಲಾದ ಜನಪದ ಗೀತೆಗಳನ್ನು ರಚಿಸಿರುವುದಾಗಿ 'ಜನಪದ ಕವಿಚರಿತೆ'ಯ ಡಾ.ಎಂ.ಎಚ್.ಲಕ್ಕೆ ತಿಳಿಸುತ್ತಾರೆ. ಅವರ ಪ್ರಕಟಿತ ಕೃತಿಗಳು ಮೂರು–

೧. ಶ್ರೀ ಗುರು ಗೀತಾಮೃತವು

೨. ಪರಮಾರ್ಥ ಜ್ಞಾನ ಜ್ಯೋತಿ

೩. ಜ್ಞಾನ ಒಂದು ಇದ್ದ ಮ್ಯಾಲ ಮಾನಕೇನ ಕಡ್ಮಿ ಇಲ್ಲ

ಮೊದಲನೆಯದು ೧೮೬ತತ್ವಪದಗಳ ಸಂಕಲನ. ಎರಡನೆಯದು ೩೬ತತ್ವಪದಗಳ ಕೃತಿ. "ಜ್ಞಾನ ಒಂದು ಇದ್ದ ಮ್ಯಾಲ ಮಾನಕೇನ ಕಡ್ಮಿ ಇಲ್ಲ" ಶ್ರೀ ಗುರುಪಾದ ವಾಳಕಿ ಸಂಕಲಿಸಿದ ಮತ್ತು ಡಾ. ಪಿ. ಜಿ. ಕೆಂಪಣ್ಣವರ ಸಂಪಾದಿಸಿದ ಕಲ್ಮೇಶ್ವರರ ೨೬ತತ್ವಪದಗಳ ಮತ್ತೊಂದು ಸಂಕಲನ. ಕಲ್ಮೇಶ್ವರರ ಭಾಷೆ ತುಂಬ ಸರಳ. ಆಧ್ಯಾತ್ಮಿಕ ಕ್ಲಿಷ್ಟ ವಿಷಯಗಳನ್ನು ಸರಳಗೊಳಿಸಿ ಹೇಳುವ ವಿರಳ ತತ್ವಪದಗಳನ್ನು ಕೊಟ್ಟ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ.

**ಅವಧೂತ ಎಂಬುವ ದೆವ್ವ ಬಡದೀತ**
**ಬಡದೀತ ಬಡದೀತ ಹುಚ್ಚ ಹಿಡದೀತ ॥ಪಲ್ಲ॥**
**ಭಕ್ತಿ ಎಂಬುವ ಬೀದಿ ಹಿಡಿದು ಬರತಿತ್ತ**
**ಬರತಿತ್ತ ಬರತಿತ್ತ ನೀರ ತರತಿತ್ತ ॥೧॥**
**ಮೂರಮಂದಿ ಮಕ್ಕಳನ ನುಂಗಿತ್ತ**
**ನುಂಗಿತ್ತ ನುಂಗಿತ್ತ ಎನಗೆ ತೋರಿತ್ತ ॥೨॥**

[illegible]

[illegible]

[illegible]

[illegible]

[illegible]

[illegible]

ಆರುಮಂದಿ ಅಣ್ಣತಮ್ಮರನ ಮುರದಿತ್ತ
ಮುರದಿತ್ತ ಮುರದಿತ್ತ ವಂಶಹುರದಿತ್ತ ॥೩॥
ಶ್ರೀ ಗುರು ಕಲ್ಮೇಶ್ವರನಂತೆ ತೋರಿತ
ತೋರಿತ ತೋರಿತ ಎನಗೆ ಕರದೀತ ॥೪॥

ಶಿರಗೂರು ಕಲ್ಮೇಶ್ವರರ ಈ ಹಾಡು ಶಿಶುನಾಳರ 'ಚೇಳ ಕಡಿತವ್ವ ಎನಗೊಂದು ಚೇಳಕಡಿತ' ಎಂಬ ತತ್ವಪದವನ್ನು ಹೋಲುತ್ತದೆ. ಕಲ್ಮೇಶ್ವರರ ತತ್ವಪದಗಳು ಭಾವಗೀತಾತ್ಮಕವಾಗಿವೆ. ಮುಂಡಿಗೆ ಪದಗಳ ಮೇಲೆ ಅವರಿಗೆ ಪ್ರೀತಿ. ಮುಂಡಿಗೆ ಪದಗಳು ಶರಣರ ಬೆಡಗಿನ ವಚನಗಳಂತೆ ನಮ್ಮನ್ನು ಬೆರಗುಗೊಳಿಸುತ್ತವೆ.

ಈ ಇಬ್ಬರನ್ನು ಹೊರತುಪಡಿಸಿ ದಾಖಲೆಗೊಳ್ಳದ ಅನೇಕ ಜನಪದ ಕವಿಗಳು ಈ ನಾಡಿನಲ್ಲಿ ಇದ್ದಾರೆ. "ಬಾಗೆನಾಡಿನಲ್ಲಿ ದಾಖಲಿತ ಜನಪದ ಸಾಹಿತ್ಯದ ಪ್ರಮಾಣ ಪ್ರತಿಶತ ಹತ್ತರಷ್ಟು, ದಾಖಲೆಗೊಳ್ಳದ ಸಾಹಿತ್ಯ ಪ್ರತಿಶತ ತೊಂಬತ್ತರಷ್ಟಿದೆ. ಜನಪದ ಕವಿಗಳ ದಾಖಲೀಕರಣವಾಗಲೀ ಇಲ್ಲವೇ ಜನಪದ ಸಾಹಿತ್ಯದ ಸಂಗ್ರಹವಾಗಲೀ ಅಷ್ಟಾಗಿ ನಡೆದಿಲ್ಲ."[೧೦] ಬಾಗೆನಾಡಿನ ಲಾವಣಿ ಕವಿಗಳ ಲಾವಣಿಗಳು ಅನೇಕ. ಡೊಳ್ಳಿನ ಪದ ಕಟ್ಟಿದವರು ಬಹಳ. ಇಲ್ಲಿಯ ನೂರಾರು ರಿವಾಯತ ಪದಗಳು ಇಂದಿಗೂ ಜನರ ನಾಲಿಗೆಯ ಮೇಲಿವೆ. ಲಾವಣಿ, ರಿವಾಯತ, ಡೊಳ್ಳಿನಹಾಡು, ತತ್ವಪದ, ಭಜನೆ ಮುಂತಾದವುಗಳನ್ನು ದಾಖಲಿಸಿದರೆ ಹಲವು ಸಂಪುಟಗಳಾಗಬಹುದು.

**ಜಲಾಲಪುರದ ಕವಿ ರಾಚೋಟಿ :**

ಇವನು ಇಲ್ಲಿಯ ಮತ್ತೊಬ್ಬ ಸುಪ್ರಸಿದ್ಧ ಲಾವಣಿಕಾರ. ಕನ್ನಡ, ಮರಾಠಿ ಹಾಗೂ ಉರ್ದು ಭಾಷೆಗಳಲ್ಲಿ ಅನೇಕ ಲಾವಣಿಗಳನ್ನು ರಚಿಸಿರುವನು. ರಾಯಬಾಗ ಸಮೀಪದ ಜಲಾಲಪುರದ ಚೌಗಲೆ ಮನೆತನದ ರಾಚೋಟಿ ಅಲಭೈರಿಯ ಸಮಕಾಲೀನ. ಇವನು ತಾನು ರಚಿಸಿದ ಲಾವಣಿಗಳನ್ನು ತಾನೆ

---

೧೦. ಶೋಭಾ ಕೊಕಟನೂರ : ಬಾಗೆ ಪರಿಸರದ ಸಾಹಿತ್ಯ (ಅಪ್ರಕಟಿತ ನಿಬಂಧ), ಪುಟ : ೩೨

[illegible]

[illegible]

[illegible]

[illegible]

[illegible]

ಹಾಡುತ್ತಿದ್ದನೆಂದು ಹೇಳುತ್ತಾರೆ. ಕೊಲ್ಲಾಪುರದ ಸುತ್ತ-ಮುತ್ತ ಇವನ ಹಾಡುಗಳು ತುಂಬಾ ಹರಡಿಕೊಂಡಿವೆ. ಆದರೆ ಅಧ್ಯಯನದಿಂದ ನಿರ್ಲಕ್ಷಕ್ಕೊಳಗಾದುದು ಒಂದು ದುರಂತ.

ಉಜ್ಜಯನಿ ನಗರದಾಗ ವಿಕ್ರಮ ಅರಸಾ ಇದ್ದಾನ ಪುಣ್ಯವಂತಾ ।

ಪಲ್ಲ: ಸಾಡೇಸಾತ ಒಂದ ಶನಿ ಕಾಡತಿತ್ತ ಅವನ ಜೀವನ ಸುತ್ತ ।

ವಿಕ್ರಮ ಅರಸ ವಿನೋದ ಮಾಡತಿದ್ದ ತನ್ನ ಸದರದಾಗ ।
ಅಂತರದಿಂದ ಶನಿ ಹೋಗತಿತ್ತ ಅದ ಯಾಳೆದಾಗ ॥
ಹೇಳಿಕೇಳಿಂದ ಅಂವ ಯಾಳೇ ಸಾಧಿಸಿ ಬಂದಾನ ಪ್ಯಾಟ್ಯಾಗ ।
ಕುದರಿ ಮಾರಲಾಕ ತುಗೊಂದ ಬಂದಿದ್ದ ಶನಿ ಸೌದಾಗರ ಸೋಗ ॥

ಚಾಲ:

ಚೆಲು ಪಸಂದ ನೋಡರಿ ಕುದರಿ । ವಿಕ್ರಮ ಕುಂತಾನ ಏರಿ ।
ಅಂವ ತಿರುವತಾನ ಏಳ ಪೆರಿ । ಆ ಕಸಕ ಹೋತ ಹಾರಿ ।

ಕೂಡ ಪಲ್ಲ:

ಅಂತರ ಕುದರಿ ಮಂತ್ರದಿಂದ ಮಾಡಿತ್ತ ಗಮ್ಮತ್ತಾ ।
ಸಾಡೇ ಸಾತ ಒಂದ ಶನಿ ಕಾಡತಿತ್ತ ಅವನ ಜೀವದ ಸುತ್ತಾ ॥

ಚೌಕ-೧

ಮಾಯದ ಕುದರಿ ಮ್ಯಾಗಿನ ಅರಸ, ಬಿದ್ದಿದಾನ ಕೆಳಗ ।
ಎತ್ತ ನೋಡತಿ ಹೊತ್ತ ಕಾಣವಾತ ಸುದ್ದಿ ಇಲ್ಲದ್ಹಂಗ ॥
ಅಡವಿ ಆರ್‍ಯಾನ, ಗಿಡ ಮಂಜನಾ ಘೋರ ವನದಾಗ ।
ಎತ್ತ ನೋಡತಿ ಅತ್ತ. ಕತ್ತಲ ಕಾಣತೈತಿ ಸುದ್ದಿ ಇಲ್ಲದಾಂಗ ॥
ತಿರಗುತ ತಿರಗುತ ಅರಸ ಬಂದಾನು ತಾಮಲಿಂಗಪುರದಾಗ ।
ಚಿಂತಿ ಮಾಡುತ ಬಂದ ಕುತ್ತ ಒಬ್ಬ ಸಾವಕಾರನ ಅಂಗಡ್ಯಾಗ ॥

ಚಾಲ :

ಅಂಗಡ್ಯಾಗ ಬೆಳತರಿ ರೊಕ್ಕ । ಸಾವಕಾರ ತಿಳದ ತನ್ನ ಮನಕ ॥

ಇವನ ಕಾಲಗುಣಾ ಒಳೇ ಠಿಕಾ । ಕರದ ಓದಾನ ಅವನ ಊಟಕ

।ಕೂಡ ಪಲ್ಲ:

ಸಾವಕಾರ ತನ್ನ ಮಗಳನ ಕೊಡುವುದು ಮಾಡಿದ್ದ ಮಸಲತ್ತ ।
ಸಾಡೇಸಾತ ಒಂದ ಶನಿ ಕಾಡತಿತ್ತ ಅವನ ಜೀವದ ಸುತ್ತ ।

ಚೌಕ-೨

ಮಗಳ ಅಂತಾಳ ಮನಸ ನೋಡಬೇಕ ಇಂದಿನ ರಾತ್ರ್ಯಾಗ ।
ಚೆಂದ ಆಗಿ ಆನಂದಿಲೇ ಹೋಗ್ಯಾಳ ಅರಸನ ಖೋಲೆದಾಗ ।
ಹೋಗಿ ಎಬ್ಬಿಸತಾಳ ವಿಕ್ರಮ ಅರಸಗ ನಿದ್ದಿ ಹತ್ತಿತ್ತ ಆಗ ।
ಚಂದ್ರಹಾರ ಗೂಟಕ ಹಾಕಿ ಮಲಗಿದಾಳ ಕೆಳಗ ।
ಎಚ್ಚರಿಕೆ ಆಗಿ ನೋಡಿದ ವಿಕ್ರಮ ಎದ್ದಿದಾನ ಆಗ ।
ಯಾರ ಹೆಣ್ಣ ಇಲ್ಲ್ಯಾಕ ಬಂದೈತಿ, ಹಾರ ಗೂಟದ ಮ್ಯಾಗ ।

ಚಾಲ:

ಗ್ವಾಡಿ ಮ್ಯಾಲ ಬರದ ಚಿತ್ರ ಜೀವ ತುಂಬಿ ನುಂಗಿತೋ ಹಾರ ।
ರಾಜಾ ಆಗಿದಾನೋ ದಿಲಗೇರಾ, ಮುಂದ ಆಗುದ ಕೇಳರಿ ಹುನ್ನಾರ ।

ಕೂಡ ಪಲ್ಲ:

ಬೆಳಗ ಆದ ಮ್ಯಾಲ ಬಾಯ ಮಾಡತಾಳ ಹಾರ ಕೊಡರಿ ಅಂತಾ ।
ಸಾಡೇ ಸಾತ ಒಂದ ಶನಿ ಕಾಡತಿತ್ತ ಅವನ ಜೀವ ಸುತ್ತಾ ।

ಚೌಕ-೩

ಊರ ಅರಸಗ ಹೋಗಿ ಪಿರ್ಯಾದಿ ಆದಾನ ಸಾವಕಾರ ।
ಪೋಲೀಸ ಪೋಜಾರ, ಸಿಪಾಯಿ ಬಡಿಯತಾರ ಬಾಳ ಮಾಡಿ ಜಬರಾ।
ಕಬಲ ಆಗಲಿಲ್ಲ ಕೈಕಾಲ ಕಡದ ಮಾಡ್ಯಾರ ಚೂರಾ ।
ಊರ ಬಿಟ್ಟ ದೂರ ಒಗದ ಬಂದಾರೋ, ವಿಕ್ರಮ ಆದೋ ಜೇರಾ ॥
ಅದ ಊರೀಗಿ ಬರತಿದ್ದಳ ಗಾಣಗೇರ ಪೋರಿ । ಉಜ್ಜಯಿನಿ ತವರೂರ।
ಕೂನಾ ಹಿಡದ ತನ್ನ ಮಾವಗ ಹೇಳಿ ಮನಿಗೆ ತಂದಾಳ ಸುಂದರಾ ॥

ಚಾಲ:

ಆ ಊರ ಅರಸನ ಮಗಳ ರೇಮವ್ವನ । ಆಕಿ ಹಾಕಿದಾಳ ಅಲ್ಲಿ ಪಣಾ ।
ದೀಪರಾಗ ಮಾಡಿದವನ । ನಾ ಆಗತೇನ ಲಗ್ನ ॥

ಕೂಡ ಪಲ್ಲ:

ದೀಪರಾಗ ಮಾಡಿದ ವಿಕ್ರಮ । ಗಾಣಿಗ್ಯಾರ ಗಾಣದ ಮ್ಯಾಲ ಕುಂತ ।
ಸಾಡೇಸಾತ ಒಂದ ಶನಿ ಕಾಡತಿತ್ತ ಅವನ ಜೀವದ ಸುತ್ತ ।

ಚೌಕ–ಳ

ಬೆಂಕಿ ಇಲ್ಲದ ದೀಪ ಹತ್ತಿದ್ದು ಪಣಾಯಮಕ ಶುದ್ಧ ।
ಸ್ವಾರ ಸಿಪಾಯ್ಯಾರ ಹುಡುಕುತ ಬಂದಾರ ಗಾಣೇಗೇರ ಮನಿಮುಂದ ॥
ಲೋದನ ಓದ ಮದವಿ ಮಾಡಿದಾನ ಶನಿ ದೇವರ ಬಂದ ।
ಕೈಕಾಲ ಚಿಗತ ವಿಕ್ರಮ ನಿಂತಾನ ಕೈ ಮುಗದ ॥
ಸಾವಕಾರನ ಮನಿಗೆ ಹ್ವಾದಾರು । ಚಿತ್ರ ನಿಂತಿತ್ತ ಎದ್ದ ।
ನುಂಗಿದ ಹಾರ ಉಗುಳುದ ನೋಡಿ ಆದಾರೋ ಆನಂದ ॥
ಸಾವಕಾರ ತನ್ನ ಮಗಳನ ಕೊಟ್ಟ ಲಗ್ನ ಮಾಡಿದ್ದಾ ।
ಇಬ್ಬರು ಹೆಂಡಿರನ ತಗೊಂಡ ವಿಕ್ರಮ ಉಜ್ಜಯಿನಿ ಊರಿಗೆ ಬಂದ ॥

ಚಾಲ :

ಹಿಂಗೈತಿ ಶನಿಯ ಮಹಾತ್ಮಾ । ಕೇಳಿದವರಿಗಿ ಸ್ವಾರ್ಥಕರಿ ಜಲ್ಮಾ ।
ಜೀವಪ್ಪ ರುದ್ರ ನಿಯಮ । ತುರಾ ಹಚ್ಚಿ ಹಾಡಿದಾರ ಕಲಮಾ ।

ಕೂಡ ಪಲ್ಲ:

ಕವಿ ರಾಚೋಟಿ ಕವಿಯ ಕೊರಳಾಗ । ಕಂಠಿಯ ತಾಯತಾ ।
ಸಾಡೇಸಾತ ಒಂದ ಶನಿ ಕಾಡತಿತ್ತ ಅವನ ಜೀವದ ಸುತ್ತ ॥

ಪ್ರಸ್ತುತ ಲಾವಣಿ ಆತನ ಭಾಷೆ, ಭಾವ, ಅಲಂಕಾರ, ಪ್ರಾಸ ವಿಲಾಸದ ಗತ್ತುಗಳನ್ನು ನಮ್ಮ ಗಮನಕ್ಕೆ ತಂದು ಕೊಡುತ್ತದೆ.

**ಪರಮಾನಂದವಾಡಿಯ ಮೀರಾಸಾಬ ಮುಲ್ಲಾ :**

ಈತನ ಕಾಲ ಕ್ರಿ.ಶ. ೧೯೨೨-೨೦೦೦. ಪೂರ್ಣ ಹೆಸರು ಮೀರಾಸಾಬ ಸೀರಾಜಸಾಬ ಮುಲ್ಲಾ. ಅಧ್ಯಾತ್ಮ ಜೀವಿಯಾಗಿದ್ದ ಈತ ತತ್ವಪದಕಾರ ಹಾಗೂ ರಿವಾಯತ ಹಾಡುಗಾರ. ಈತನ ಅನೇಕ ಪದಗಳು ಧ್ವನಿಸುರುಳಿಗಳಾಗಿವೆ. ಅವುಗಳನ್ನು ಈಗಲೂ ಸಹ ಪರಮಾನಂದವಾಡಿಯ ಶ್ರೀಗುರುದೇವ ಆಶ್ರಮದಲ್ಲಿ ಪ್ರತಿದಿನ ಪ್ರತಿಧ್ವನಿಸಲಾಗುತ್ತದೆ. 'ಮೀರಾ ಮುಲ್ಲಾ' ಈತನ ಅಗಮ (ಮುದ್ರಿಕೆ).

**ಶೇಖ ಮೀರಾಸಾಬ ನಮ್ಮ ವಸ್ತಾದ**
**ವೈರಿಗೆ ಹಾಕೆಂದ ಮೂಗದಾನ**
**ಸೂಜಿದಾರ ಪೋಣಿಸಿ ತಂದ**

ಮೀರಾಸಾಬ ತತ್ವಪದದಲ್ಲಿ ನಿಸ್ಸಿಮ. ಇಲ್ಲಿ ಆತನ ಒಂದು ತತ್ವ ಪದವನ್ನು ನೋಡಬಹುದು.

**ಮಾಡೊ ಮಾಡೊ ಮಾಡೊ ಗುರುಸಂಗ**
**ಗುರು ಸಂಗ ಮಾಡೊ ನೀ ಆಗಿ ನಿಸ್ಸಂಗ** ||ಪ||

**ನಿಸ್ಸಂಗ ಆದ ಮ್ಯಾಲ ಇನ್ನ್ಯಾತರ ಹಂಗ**
**ಹಂಗ ಇಲ್ಲದಿದ್ದರೆ ನಿನ್ನ ಶುದ್ಧರಂಗ**
**ಬಹಿರಂಗ ಬ್ಯಾಡ ಬಿಟ್ಟನೋಡ ಅಂತರಂಗ** ||೧||

**ದೃಷ್ಟಿಗೆ ಬಿದ್ದದ್ದು ನಷ್ಟ ಆಗುವುದು**
**ಸೃಷ್ಟಿ ಹುಟ್ಟಿದೆಲ್ಲಾ ಮಟ್ಟ ಆಗುವುದು**
**ಗಟ್ಟಿ ಹಿಡಿ ಈ ಮಾತ ಬಿಟ್ಟ ಬಿಡದು**

**ಹಂಗ ಬ್ಯಾಡ ಬಿಟ್ಟ ಬಿಡು ಆಗಬ್ಯಾಡ ಮಂಗ** ||೨||
**ಭವದ ಬೇರು ಹರಿಯಲಿಕ್ಕೆ ಗುರುಸಾಧನಾ**

ಸ್ಮರಿಸೊ ನೀ ಹಗಲಿರುಳು ಸದಾ ಅನುದಿನಾ
ಇನ್ನೊಂದು ಏತಕೆ ಏನ ಕಾರಣಾ
ಗುರುನಾಮ ತೊಳಿಯುವುದು ಮನಸ್ಸಿನ ಜಂಗ ॥೩॥
ನರರೊಳಧಿಕ ಈ ಜಗದೊಳಗ
ದೇವಾನುದೇವತರು ಅವನ ತೆಳಗ
ಶ್ರುತಿ ಸಾರತೈತಿ ಹಿಂಗ ಮೂರು ಲೋಕದೊಳಗ
ಮೀರಾ ಮುಲ್ಲಾ ಗುರುಪಾದ ನೋಡಿ ಆದರು ದಂಗ ॥೪॥

ದಿಗ್ಗೇವಾಡಿಯ ಬಾಬಾಜಿ ಜಮಾದಾರ :

ಈತ ರಾಚೋಟಿಯ ಸಮಕಾಲೀನ. ಅನುಭಾವ ಪದಗಳೊಂದಿಗೆ ಮೊಹರಂ ಹಾಡು ಹಾಗೂ ಲಾವಣಿ ರಚಿಸಿರುವನು. ಆದರೆ ಈತನ ಹಾಡುಗಳು ಇಡಿಯಾಗಿ ಸಿಗುತ್ತಿಲ್ಲ. ಬಿಡಿಯಾಗಿ ದೊರೆತ ಆತನ ಒಂದು ಅನುಭಾವ ಪದ ಇಲ್ಲಿದೆ:

ನೀನು ಶಿವ ಶಿವ ಶಿವ ಮಂತ್ರ ನುಡಿಯೊ ತಮ್ಮಾ ।
ನಿರಾಕಾರದ ಮಾರ್ಗ ಐತಿ ಸೂಕ್ಷುಮಾ । ॥ಪಲ್ಲ॥

ಮೂರುವರಿ ಮಳದ ದೇಹ ಮಣ್ಣಿಂದ ಐತಿ ।
ಐದು ತತ್ವ ಕೂಡಿಸಿ ಆಕಾರ ಆಗೇತಿ ।
ನೀರ ಮ್ಯಾಲಿನ ಗುರಳಿ ಐತಿ ಇಲ್ಲೋ ನೇಮಾ ।
ನಡಿ ನುಡಿ ತರ್ಕ ಹಿಡಿ ಯಾಕೊ ಸುಮ್ಮಾ । ॥೧॥

ನರಕ ಪ್ರಾಪತಿ ಆಗೋದು ಜಲ್ಮಾ ।
ಮಹಾಕೆಟ್ಟ ಮಾಯೆದ ಬಲಿ ನಿನ್ನಲಿ ಐತಿ ।
ಪಾರಾಗಿ ಹೋಗೋದ ಮಾಡೊ ನೀನು ಯುಕ್ತಿ ।
ನಿನ್ನಲ್ಲಿ ಇದಾನೋಡೊ ಪರಮಾತ್ಮಾ ।

ವ್ಯರ್ತ ಐತಿ ಹಾಂಗ ನಡಿಲಿಲ್ಲ ಹಮ್ಮಾ ।
ಎರಡ ದಿನದ ಸಂತಿ ಐತಿ ಬಿಡೊ ಧಮ್ಮಾ । ॥೨॥

ಪ್ರಪಂಚದೊಳಗ ಪರಮಾತ್ಮನ ಮರತ ಕುಂತಿ ।
ನಿನಗ ತರಕ ಇಲ್ಲದ ಹಲಚಲ ಮನಸಾಗೇತಿ ।
ಅವನ ಅಂತಕರಣ ಇದ್ದರ ಇಲ್ಲೊ ತಮ್ಮಾ ।
ವಿಚಾರ ಇಲ್ಲದ ಆಗೋದ ಕೆಟ್ಟ ಕರ್ಮಾ । ॥೩॥

ಆತ್ಮಲಿಂಗದ ಪೂಜಿ ಮಾಡೊ ನೇಮಾ ।
ನಿತ್ಯ ನೇಮದಿಂದ ಮಾಡಕೊ ಸಾಧುರನ ಸಂಗತಿ ।
ಸದಾ ಆನಂದ ಸದ್ಗುರುವಿನ ಭಕ್ತಿ ।
ಮಹಾಲಿಂಗ ಅಪನಾವರ ಶಿಷ್ಯ ಬಾಬಾಜಿ ಹೇಳ್ಯಾರ ತಮ್ಮಾ। ॥೪॥

ಇವನು ತಾನು ಮಹಾಲಿಂಗಪ್ಪನವರ ಶಿಷ್ಯನೆಂದು ಹೇಳಿಕೊಂಡಿದ್ದಾನೆ. ಈ ಮಹಾಲಿಂಗಪ್ಪ ಯಾರು? ತಿಳಿಯದು.

**ಮುಗಳಖೋಡದ ರಾಚಯ್ಯ ಹಿರೇಮಠ :**

ಈತ ಅನಕ್ಷರಸ್ಥ. ಮೂಲ ಉದ್ಯೋಗ ಒಕ್ಕಲುತನ. ಇವನು ಹೆಚ್ಚಾಗಿ ಮುಂಡಗಿ ಪದಗಳನ್ನು ಬರೆಯುತ್ತಿದ್ದನು. ಒಂದು ಊರಿನಿಂದ ಮತ್ತೊಂದು ಊರಿಗೆ ಕುದುರೆ ಸವಾರಿ ಮೂಲಕ ತನ್ನ ಹಾಡುಗಳನ್ನು ಕಲಾವಿದರಿಗೆ ಪರಿಚಯಿಸುತ್ತಿದ್ದನಂತೆ. ಮುಗಳಖೋಡ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಈಗಲೂ ಸಹ ಜನ ಅವನ ಕುರಿತು ಕೆಲವು ಕಥೆ ಹೇಳುತ್ತಾರೆ.

**ನಿಡಗುಂದಿಯ ಯಮನಪ್ಪ ಚಲವಾದಿ:**

ಮೂಲತಃ ಈತ ಮುಗಳಖೋಡದವನು. ಇವನ ಉದ್ಯೋಗ ಬಡಿಗತನ. ಕರ್ಬಲ್, ಲಾವಣಿ ಹಾಡುಗಳನ್ನು ರಚಿಸಿ ತಂಡ ಕಟ್ಟಿ ಹಾಡುತಿದ್ದನು.

ಮನೆಯ ಸಂಸಾರದ ಕಡೆಗೆ ಅತಿ ಕಡಿಮೆ ಕಾಳಜಿ ಹೊಂದಿದ್ದನು. ಅಧ್ಯಾತ್ಮದ ಕಡೆಗೆ ಹೆಚ್ಚು ಒಲವು ತೋರಿದ್ದ. ಹೀಗಾಗಿ ಈತನ ಕೊನೆಯ ದಿನಗಳು ಅಷ್ಟೊಂದು ತೃಪ್ತಿದಾಯಕವಾಗಿರಲಿಲ್ಲ. ಸಂಸಾರದಲ್ಲಿ ನೊಂದಿದ್ದ ಯಮನಪ್ಪ ಚಲವಾದಿ ತನ್ನ ೮೧ನೇ ವಯಸ್ಸಿನಲ್ಲಿ ತೀರಿ ಹೋದನೆಂದು ಹೇಳುವರು.

**ಹಿಡಕಲ್ಲದ ರಾಣಬಾ ಕದಮ್ :**

ಈತ ಸ್ವಾತಂತ್ರ್ಯ ಹೋರಾಟಗಾರ. ಸ್ವಾತಂತ್ರ್ಯ ಸಂಗ್ರಾಮಕ್ಕೆ ಪ್ರೇರಣೆ ನೀಡುವ ಹಲವಾರು ಕ್ರಾಂತಿಕಾರಕ ಪದಗಳನ್ನು ರಚಿಸಿರುವನು. ಅದಲ್ಲದೆ ಕರ್ಬಲ್, ಲಾವಣಿ, ಡೊಳ್ಳು ಹಾಡುಗಳನ್ನು ರಚಿಸಿದ್ದಾನೆ. ಬಯಲಾಟಗಳನ್ನು ಬರೆದಿರುವುದಾಗಿ ತಿಳಿದುಬರುತ್ತದೆ.

**ಸವದತ್ತಿ ಸಿದ್ದಪ್ಪ :**

ಈತ ಮೂಲತಃ ಅನಕ್ಷರಸ್ಥ. ಕುರಿ ಕಾಯುವುದು ಇವನ ಕಸಬು. ಮಾತೃಭಾಷೆ ಕನ್ನಡ. ಅನಂತರ ಅವರಿಂದ ಮರಾಠಿ ಕಲಿತು ತನ್ನ ಡೊಳ್ಳಿನ ಹಾಡುಗಳನ್ನು ಬರೆದಿಡಲು ಮರಾಠಿ ಲಿಪಿಯನ್ನು ರೂಢಿಸಿಕೊಂಡನು. ತಾನೇ ಹಾಡುಗಳನ್ನು ಹಾಡುತ್ತಿದ್ದನು. ಬಾಗೆನಾಡಿನ ಈ ಜನಪದ ಕವಿ ಚಿಕ್ಕೋಡಿ ತಾಲೂಕಿನ ಕೆರೂರಿನಲ್ಲಿರುತ್ತಿದ್ದ.

**ಶಿರಗೂರದ ಸಿದ್ಧಲಿಂಗ ವಸ್ತಾದ :**

ಇವನು ಶಿರಗೂರದವನು. ಈತ ಕರ್ಬಲ್, ಲಾವಣಿ ಹಾಡುಗಾರ. ಸಿದ್ಧಲಿಂಗ ವಸ್ತಾದ ಬರೆದ ಪದಗಳು ಅಷ್ಟೊಂದು ನಮಗೆ ಸಿಗುವುದಿಲ್ಲ. ಈತನ ಕುರಿತು ಅಧ್ಯಯನ ನಡೆಯಬೇಕಿದೆ. ಇವನ ಒಂದು ಲಾವಣಿಯ ಒಂದು ಭಾಗವನ್ನು ಇಲ್ಲಿ ಎತ್ತಿ ಕೊಡಲಾಗಿದೆ :

**।ಏರ।  ನಾವು ನೀವು ವಾದ ಹಾಕಿ ಫಲವೇನಾ ।**
**ಶಿಂವನ ಕೈಯಾಗ ಶಕ್ತಿ ಸಿಕ್ಕ ಆದಾಳ ಸಣ್ಣಾ ॥**

।ಇಳು। ಶ್ರೀ ಗುರುವಿನ ಜಾಗಟಿ ಕಾಣಾ ।
ಅನ್ನಾರಾಮ ಕವೇಸೂರ ತಗದ ಕಲ್ಪನಾ ॥

।ಏರ। ಅನ್ನಾರಾಮ ಕವೇಸೂರ ತಗದ ಕಲ್ಪನಾ ।
ಸಿದ್ಧಲಿಂಗ ವಸ್ತಾದ ಹೇಳ್ಯಾನ ಈ ವಚನಾ ॥

ಪ್ರಸ್ತುತ ಲಾವಣಿಯಲ್ಲಿಯ ಶಿವ ಪಾರಮ್ಯವನ್ನು ಗಮನಿಸಿದರೆ ಸಿದ್ಧಲಿಂಗ ವಸ್ತಾದ ಹರದೇಶಿ ಸಂಪ್ರದಾಯದ ಲಾವಣಿಕಾರ ಆಗಿರಬಹುದೆಂದು ಊಹಿಸಲು ಅವಕಾಶವಿದೆ.

**ಹಾರೂಗೇರಿಯ ರಾಮು ಸುಬ್ಬಣ್ಣವರ :**

ರಾಮು ಸುಬ್ಬಣ್ಣವರ ಹಾರೂಗೇರಿಯ ಪ್ರತಿಭಾವಂತ ಕವಿ. ಈತ ಅಲಭೈರಿಯ ಮಗ. ಡೊಳ್ಳಿನ ಹಾಡುಗಳನ್ನು ಬರೆಯುತ್ತಿದ್ದ. ಜೊತೆಗೆ ಮೇಳಗಳನ್ನು ಕಟ್ಟಿ, ಹಾಡುಗಳನ್ನು ಹೇಳಿಕೊಡುತಿದ್ದನು. ಇವನ ಮುದ್ರಿಕೆ ಅಲಭೈರಿ ಕಂದ.

**ಅಲಕನೂರಿನ ರಾಮ ಪೂಜೇರಿ :**

ಇವನು ಹಾರೂಗೇರಿಯ ಅಲಭೈರಿಯ ಶಿಷ್ಯ. ಡೊಳ್ಳಿನ ಹಾಡುಗಳನ್ನು ರಚಿಸಿ ಹಾಡುತ್ತಿದ್ದನು. ಈತನ ಆರಾಧ್ಯದೈವ ಅಲಕನೂರಿನ ಕರಿಸಿದ್ಧ. ಆತನ ಕುರಿತು ರಚಿಸಿದ ಡೊಳ್ಳಿನ ಪದವನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಮರ್ತ್ಯಲೋಕದಾಗ ಆದಿ ಅಲಕನೂರ ಅರಸ ಕರೆಪ್ಪನ ಗಿರಿ ಕಂಡೆನೋ।
ಗಿರಿವೊಳು ಕಂಡೇನು ಗಿರಿವಾಸ ಕಂಡೆನೋ।
ಗಿರಿವೊಳಗಿರುವ ದೊರೆ ನಾ ಕಂಡೆನೋ।
ಮನವುಳ್ಳ ಪೂಜೇರಿ ಮಡಿಯಲಿ ದಿನಾ ಸಿತಾಳ
ಮಠಕ್ಕೆ ಹೊತ್ತು ಬರುವುದನ್ನ ಕಂಡೆನೋ।
ಅಂಗಳ ಪಾವುಡ ಮಾಡಿ ಸಿಂಗಾರ ಹಡದಿ ಬಿಟ್ಟ

**ತಂಗಳ ಪೂಜೆ ಇಳುವುದನು ಕಂಡೆನೋ।**
**ಎಡಬಲ ಎರಡ ಜ್ಯೋತಿ ಬೆಳಕಲೆ ನೆತ್ತಿಲೆ ಬಂಗಾರ ಸುಳಿ ಕಂಡೆನೋ।**
**ಹರ್‍ಯಾಣ ಪೂಜೆಗೆ ಹವಳ ಮಲ್ಲಿಗೆ ಮುಡಿದುದ್ದನ್ನು ನಾ ಕಂಡೆನೋ।**
**ಸಂಜಯ ಪೂಜೆಗೆ ಬಂಗಾರ ಕಿರೀಟ**
**ಖಂಡಗದ ಹೂ ಮುಡಿದುದ್ದನ್ನು ನಾ ಕಂಡೆನೋ।**
**ನೆತ್ತಿಯ ಮೇಲೆ ಏಳು ಸುತ್ತಿನ ಸರ್ಪಾ ಹೊತ್ತಿರುವ ಮಲಗಂಬಳಿ ಕಂಡೆನೋ।**
**ಅಗ್ನಿ ಜ್ಯೋತಿಯೊಳಗ ಗುಗ್ಗಳ ಹೋಮ ಉಗ್ರಮೂರ್ತಿ ಅರಸನ ಕಂಡೆನೋ।**
**ಹಾಲುಮತದ ಧರ್ಮದ ಹಾಕ್ಯಾರ ಮುಂಡಿಗೆ**
**ಮಹಾದೇವ ಕರೆದಂತಹ ಮಾತ ಕಂಡೆನೋ।**
**ಆದಿ ಆಚಿಕ ಇರುವ ಸಾಧುವ ಕರೆಪ್ಪನ ಮಹಾದೇವ ಕರೆದಂತ ಮಳಿ ಕಂಡೆನೋ।**
**ಗುರು ಅಲಭೈರಿ ಶಿಷ್ಯರಾಮ ಪೂಜೇರಿ ಸಭಾ ಮಾಡಿದ ನಾ ಕಂಡೆನೋ।**

ದಿಗ್ಗೇವಾಡಿಯ ಬಾಬಾಜಿ ಜನಾಜ, ನಿಡಗುಂದಿ ಶರಣಗುಂಡ, ಕುಡಚಿಯ ಶಟಿಭೈರಿ, ಚಿಂಚಲಿಯ ಶಂಕರದಾಸ ಇಲ್ಲಿಯ ಇತರ ಪ್ರಮುಖ ಜನಪದ ಕವಿಗಳು. ಆದರೆ ಇವರ ವಿವರಗಳು ಸಿಗುತ್ತಿಲ್ಲ. ಇವರ ಹಾಡುಗಳು ಹುಡುಕಿದರೆ ಸಿಗಬಹುದು. ಈ ಎಲ್ಲ ಕವಿಗಳು ಬಾಗೆನಾಡಿನ ಕಲಾ ಪರಂಪರೆಯ ಜೀವಸೆಲೆಗಳು. ಇವರೆಲ್ಲರನ್ನು ಹಿನ್ನೆಲೆಯಾಗಿಟ್ಟುಕೊಂಡು ಬಾಗೆ ಪರಿಸರದ ಕಲಾವಿದರ ಕಲಾವೈಶಿಷ್ಟ್ಯ ಹಾಗೂ ಕಲೆಗಳ ಸೊಗಡು ಕಂಡುಕೊಳ್ಳಲು ಯತ್ನಿಸಲಾಗಿದೆ. ಜನಪದ ಸಾಹಿತ್ಯ ಮತ್ತು ಜನಪದ ಕಲೆಗಳು ಒಂದೇ ನಾಣ್ಯದ ಎರಡು ಮುಖಗಳು. ಜನಪದ ಸಾಹಿತ್ಯ–ಕಲೆ–ಕಲಾವಿದರ ಸಂಬಂಧ ಬಿಡಿಸಲಾಗದ ಅನುಬಂಧ.

ಪ್ರಸ್ತುತ ಅಧ್ಯಾಯದಲ್ಲಿ ಉಲ್ಲೇಖಿಸಿದ ಬಾಗೆನಾಡಿನ ಜನಪದ ಸಾಹಿತ್ಯ ಪರಂಪರೆಯ ಈ ಕವಿಗಳು ಇಂದು ನಮ್ಮೊಂದಿಗಿಲ್ಲ. ಅವರ ಶಿಷ್ಯ, ಪ್ರಶಿಷ್ಯ ಪರಂಪರೆಯ ಕವಿಗಳು ಇದ್ದಿರಬಹುದು. ಆದರೆ ಅವರನ್ನು ಗುರುತಿಸುವ, ಅವರ ಸಾಹಿತ್ಯವನ್ನು ಅಭ್ಯಾಸಕ್ಕೆ ಒಳಪಡಿಸುವ ಅಗತ್ಯವಿದೆ.

**********

# ಅಧ್ಯಾಯ : ೩ ಬಾಗೆನಾಡಿನ ಜಾನಪದ ಕಲೆಗಳು

೩.೬ ದೈವಾರಾಧನಾ ಕೇಂದ್ರಿತ ಕಲೆಗಳು

೩.೭ ವೃತ್ತಿ ಕಲೆಗಳು

೩.೮ ಶುದ್ಧ ಮನರಂಜನೆಯ ಕಲೆಗಳು

೩.೯ ರಂಗಕಲೆಗಳು

೩.೧೦ ಸಂಕೀರ್ಣ ಕಲೆಗಳು

## ಅಧ್ಯಾಯ : ಮೂರು

## ಬಾಗೆನಾಡಿನ ಜನಪದ ಕಲೆಗಳು

ಜನಪದ ಕಲೆಗಳ ಅಧ್ಯಯನ ಕುತೂಹಲಮಯ. ಆರಾಧನೆ, ಆಚರಣೆ, ವೃತ್ತಿ ಹೀಗೆ ಹಲವು ನೆಲೆಗಳಲ್ಲಿ ಹುಟ್ಟಿಕೊಂಡ ಜನಪದ ಕಲೆಗಳು ಸಂಸ್ಕೃತಿ ಅಧ್ಯಯನದ ಪ್ರಮುಖ ಆಕರಗಳು. ಅವು ಮುಖ್ಯವಾಗಿ ಜನಪದರ ವೈಯಕ್ತಿಕ ಹಾಗೂ ಸಾಂಸ್ಕೃತಿಕ ಸಂವೇದನೆಗಳ ಅಭಿವ್ಯಕ್ತಿ ಮಾಧ್ಯಮಗಳು. ಆ ಮಾಧ್ಯಮಗಳ ಹಿನ್ನೆಲೆ ಯಾವುದೇ ಇರಲಿ ಅದನ್ನು ಮೀರಿ ಸಾಮಾಜೀಕರಣಗೊಳ್ಳುವುದು ಈ ಕಲೆಗಳ ವೈಶಿಷ್ಟ್ಯ. "ಈ ಹಿಂದಿನ ಸಾವಿರಾರು ವರ್ಷಗಳ ಮನುಷ್ಯಕುಲ ವಿಕಸನದ ಹಲವು ಮಜಲುಗಳನ್ನು ಕಂಡಿರುವ ಕರ್ನಾಟಕವು ಐತಿಹಾಸಿಕವಾಗಿ ನಾನಾ ಧರ್ಮ ಪರಂಪರೆಗಳ ಹುಟ್ಟಿಗೆ ಕಾರಣವಾಗಿದೆ. ಒಟ್ಟಾಗಿ ಈ ಸಾಂಸ್ಕೃತಿಕ ಇತಿಹಾಸದ ವಿವಿಧ ಘಟ್ಟಗಳಲ್ಲಿ ನಾನಾ ಕಾರಣಗಳಿಗಾಗಿ ಹುಟ್ಟಿಕೊಂಡ ಕಲೆಗಳು, ಕರ್ನಾಟಕದ ವೈವಿಧ್ಯಮಯ ಭೌಗೋಳಿಕತೆಯ ಹಿನ್ನೆಲೆಯಲ್ಲಿ ಭಿನ್ನರೂಪಗಳನ್ನು ಪಡೆದಿದ್ದು ಆಯಾ ಪ್ರದೇಶದ ಜನಸಮುದಾಯದ ಆಶೋತ್ತರಗಳನ್ನು ಬಿಂಬಿಸುತ್ತಿವೆ."[೧] "ಧರ್ಮ, ದೇವರು, ಆರಾಧನೆ, ಪಂಥ, ಪಂಗಡ ಹಾಗೂ ಸಾಮಾಜಿಕ ಶ್ರೇಣೀಕರಣಗಳ ಸಂಕೀರ್ಣ ಬದುಕು ಹೇಗೆ ಈ ಕಲಾ ಜಗತ್ತಿನ ಮೇಲೆ ಪ್ರಭಾವ ಬೀರಿತು. ಮತ್ತೆ ಆ ಮೂಲಕ ಜನಪದ ಕಲೆಗಳು ಕಂಡುಕೊಂಡ ಸ್ಥಾನಗಳೇನು? ಎಂಬ ವಿಚಾರಗಳು ಕರ್ನಾಟಕದ ಮಟ್ಟಿಗಂತು ವಿಸ್ಮಯಕಾರಿ. ಮನುಷ್ಯನ ಸಾಂಸ್ಕೃತಿಕ ಚರಿತ್ರೆಗೂ ಜನಪದ ಕಲೆಗಳ ಉಗಮಕ್ಕೂ ಅವಿನಾಭಾವ ಸಂಬಂಧವಿದೆ. ಈ ಮಾತನ್ನು

---

೧. ಹಿ.ಚಿ.ಬೋರಲಿಂಗಯ್ಯ : ಕರ್ನಾಟಕ ಜನಪದ ಕಲೆಗಳ ಕೋಶ, ಪುಟ : ೧೦

ಗಮನದಲ್ಲಿರಿಸಿಕೊಂಡು ನಮ್ಮ ಜನಪದ ಕಲೆಗಳನ್ನು ಅಧ್ಯಯನ ಮಾಡಬೇಕಾಗುತ್ತದೆ.”[೨] ಬಾಗೆನಾಡಿನ ಜನಪದ ಕಲೆಗಳನ್ನು ಅಧ್ಯಯನ ಮಾಡುವ ಮೊದಲು ಅದರ ಭೌಗೋಳಿಕ ವಿವರಗಳನ್ನು ಗಮನಿಸುವ ಅಗತ್ಯವಿದೆ.

ಬಾಗೆನಾಡು ಒಂದೆಡೆ ಕೃಷ್ಣಾನದಿಯನ್ನು (ಹಿರಿಹೊಳೆ) ಮೇರೆಯಾಗಿ ಹೊಂದಿದ್ದರೆ ಮತ್ತೊಂದೆಡೆ ಪುಟ್ಟ-ಪುಟ್ಟ ಬೆಟ್ಟ-ಗುಡ್ಡಗಳನ್ನು ಹೊಂದಿದ ವಿಶಾಲ ಬಯಲು ಮೊರಡಿ ಇದೆ. ಸವದತ್ತಿ, ದಿಗ್ಗೇವಾಡಿ, ಜಲಾಲಪುರ, ಬಿರಡಿ, ಚಿಂಚಲಿ, ಕುಡಚಿ, ಶಿರಗೂರ, ಖೆಮಲಾಪುರ, ಸಿದ್ದಾಪುರ ಇವು ಇಲ್ಲಿಯ ನದಿ ತೀರದ ಗ್ರಾಮಗಳು. ನಂದಿಕುರಳಿ, ಮೇಕಳಿ, ಬೆಂಡವಾಡ, ಖಣದಾಳ, ಸವಸುದ್ದಿ, ಇಟನಾಳ, ಕಂಕಣವಾಡಿ, ಮಂಟೂರ, ಮುಗಳಖೋಡ, ಹಂದಿಗುಂದ, ಪಾಲಬಾವಿ, ಕಪ್ಪಲಗುದ್ದಿ, ಅಲಕನೂರ, ಮೊರಬ, ಕೋಳಿಗುಡ್ಡ, ಹಾರೂಗೇರಿ ಇವೆಲ್ಲ ಬಯಲು ಪ್ರದೇಶದ ಮುಖ್ಯ ಗ್ರಾಮಗಳು. ಈ ಹಿಂದೆ ಹೇಳಿದಂತೆ ಬಾಗೆನಾಡು ಹಾಲುಮತದ ಬೀಡು. ಇಲ್ಲಿ ಹಾಲುಮತ ಸಮುದಾಯ ಉದ್ದಗಲಕ್ಕೂ ಹರಡಿದೆ. ಈ ನಾಡಿನ ತುಂಬೆಲ್ಲ ಅವರ ದೈವಗಳು. ಆ ದೈವಗಳ ಆರಾಧನೆಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಕಲೆಗಳು ಮೊದಲ ಸ್ಥಾನ ಪಡೆಯುತ್ತವೆ. ಕುರಿ, ದನಗಳನ್ನು ಮೇಯಿಸಲು ವಿಶಾಲ ಬಯಲು ಪ್ರದೇಶವಿದ್ದುದರಿಂದ ಅವರು ಇಲ್ಲಿ ನೆಲೆಗಳನ್ನು ಕಂಡುಕೊಂಡಿರಬಹುದು. ಆ ನೆಲೆಗಳಲ್ಲಿ ತಮ್ಮ ಆರಾಧ್ಯದೈವಗಳನ್ನು ಸ್ಥಾಪಿಸಿಕೊಂಡರು. ಈ ಭಾಗದ ಅನೇಕ ಐತಿಹ್ಯಗಳು, ದಂತಕತೆಗಳು ಅವರ ಪ್ರಾಬಲ್ಯವನ್ನು ಸಾಕ್ಷೀಕರಿಸುತ್ತವೆ. ಒಮ್ಮೆ ಕೊಲ್ಲಾಪುರದ ಮರಾಠಾ ಅರಸರು ಬೇಟೆಯಾಡಲು ಇಲ್ಲಿಗೆ ಬಂದಾಗ ಅಪಾಯದಲ್ಲಿ ಸಿಲುಕಿದರು. ಅವರನ್ನು ಆ ಅಪಾಯದಿಂದ ಉಪಾಯವಾಗಿ ಪಾರುಮಾಡಿದವನು ಒಬ್ಬ ಕುರಿಗಾರ. ಮಹಾರಾಜರಿಗೆ ಅವನ ಕುರಿತು ಅಭಿಮಾನ, ಗೌರವ ಮೂಡಿದವು. ಮಹಾರಾಜರಿಗೆ ಆತನು ಬೇಡಿದ್ದನ್ನು ಕೊಡಬೇಕು ಎನಿಸಿತು. ‘ಏನು ಬೇಕು ಕೇಳು’ ಎಂದಾಗ ಆತ ಕೇಳಿದ್ದು ‘ಕುರಿ ಮೇಯಿಸಲು ವಿಶಾಲವಾದ ಮೊರಡಿ’. ಇಲ್ಲಿಯ ಹಾಲುಮತದವರು ಸ್ವಲ್ಪ ಮಟ್ಟಿಗೆ ಸ್ಥಿತಿವಂತರು. ಈಗ ಸದ್ಯ ಕುರಿ ಸಾಕಾಣಿಕೆಯಂತಹ ಸಾಂಪ್ರದಾಯಿಕ ವೃತ್ತಿಗಳನ್ನು ತ್ಯಜಿಸಿ ಕೃಷಿಯತ್ತ ವಾಲಿದ್ದಾರೆ.

---

೨. ಹಿ. ಚಿ. ಬೋರಲಿಂಗಯ್ಯ : ಕರ್ನಾಟಕ ಜನಪದ ಕಲೆಗಳ ಕೋಶ, ಪುಟ : ೯, ೧೦

[illegible]

ಆದರೂ ಸಾಂಪ್ರದಾಯಿಕ ದೈವಗಳು, ಆರಾಧನೆ, ಕಲೆಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ. ಈ ಕಾರಣದಿಂದಲೇ ಬಾಗೆನಾಡಿನ ಹಾಲುಮತ ಸಂಸ್ಕೃತಿಯ ಹಿನ್ನೆಲೆಯ ಹಲವು ಕಲೆಗಳು ಪ್ರಚಲಿತದಲ್ಲಿವೆ. ಡೊಳ್ಳಿನಹಾಡು ಹಾಡುವವರು, ಡೊಳ್ಳು ಬಾರಿಸುವವರು, ದಟ್ಟಿಕುಣಿತ ಕುಣಿಯುವವರು ಹಳ್ಳಿ-ಹಳ್ಳಿಗಳಲ್ಲಿಯೂ ಇದ್ದಾರೆ. ಇವೇ ಈ ನಾಡಿನ ಪ್ರಮುಖ ಜನಪದ ಕಲೆಗಳು.

ಈಗ ಈ ಕಲೆಗಳು ಹಾಲುಮತ ಜನಾಂಗದವರಿಗಷ್ಟೇ ಸೀಮಿತವಾಗಿರದೆ ಅವರ ದಟ್ಟ ಪ್ರಭಾವದಿಂದಾಗಿ ಇತರ ಸಮುದಾಯಗಳಲ್ಲಿ ವ್ಯಾಪಿಸಿರುವುದು ಗಮನಾರ್ಹ ಸಂಗತಿ. ಇದನ್ನು ಮುಂದಿನ ಅಧ್ಯಾಯದಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಬಾಗೆನಾಡು ಮಧ್ಯಕಾಲೀನ ಇತಿಹಾಸದ ಸಂದರ್ಭದಲ್ಲಿ ಕೆಲವು ವರ್ಷ ಮುಸ್ಲಿಂ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ಆ ಕಾಲದಲ್ಲಿ ಇಲ್ಲಿ ಮತಾಂತರಗಳು ನಡೆದವು. ಜೊತೆಗೆ ಹಳ್ಳಿ-ಹಳ್ಳಿಗಳಲ್ಲಿ ಮಸೀದಿಗಳು ನಿರ್ಮಾಣಗೊಂಡವು. ಕುಡಚಿ ಈಗ ರಾಯಬಾಗ ತಾಲೂಕಿನ ಒಂದು ಹೋಬಳಿ ಗ್ರಾಮ. ಇಲ್ಲಿ ಪ್ರತಿಶತ ೯೦ರಷ್ಟು ಜನ ಮುಸ್ಲಿಂರಿದ್ದಾರೆ. ಹಳ್ಳಿಗಳಲ್ಲಿಯ ವೇಷ ಹಾಕುವ ಜಾತಗಾರರು ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡವರು. ಆ ಸಂದರ್ಭದಲ್ಲಿ ಮೊಹರಂ ಆಚರಣೆ ಎಲ್ಲ ಕಡೆಗೂ ವ್ಯಾಪಿಸಿರಬಹುದು. ಮಸೀದೆಗಳು ಮೊಹರಂ ಆಚರಣೆಗೆ ನೆಲೆ ಒದಗಿಸಿದವು. ಹಿಂದೂ ಮುಸ್ಲಿಂ ಸಾಮರಸ್ಯದ ಸಂಕೇತವಾಗಿ ಮೊಹರಂ ಆಚರಣೆ ಉತ್ಕರ್ಷಕ್ಕೆ ಬಂತು. 'ಮೊಹರಂ ದೇವರು (ಪಂಜ್ಯಾ) ಭೀಕರ ಮಾರಿಯಿಂದ ಗ್ರಾಮವನ್ನು ರಕ್ಷಿಸುವ ಗ್ರಾಮದೇವತೆಯಾಗಿ, ರೋಗ-ಸಂಕಷ್ಟಗಳಿಂದ ಪಾರು ಮಾಡುವ ರಕ್ಷಕನಾಗಿ, ಉತ್ತರಕರ್ನಾಟಕದ ಜನ-ಮನ ಪ್ರವೇಶಿಸಿದನು. ಅವರು ಮಸೀದಿಗಳನ್ನು 'ಮಸೀದಿಗುಡಿ' ಎಂದು ಕರೆಯತೊಡಗಿದರು'. ಇದರಿಂದಾಗಿ ಮೊಹರಂ ಹಾಡು, ಕುಣಿತ, ಹೆಜ್ಜೆ ಮುಂತಾದ ಮೊಹರಂ ಸಂಬಂಧಿತ ಕಲೆಗಳು ಬೆಳೆದವು.

ಹಾಲುಮತದವರನ್ನು ಹೊರತುಪಡಿಸಿ ಬಾಗೆನಾಡಿನ ಪ್ರಮುಖ ಜನಸಮುದಾಯಗಳೆಂದರೆ ದಲಿತ, ಲಿಂಗಾಯತ, ಜೈನ ಮತ್ತು ಮರಾಠಾ. ಲಿಂಗಾಯತ ಮತ್ತು ಜೈನರು ಕೃಷಿಯನ್ನೇ ಕಸುಬಾಗಿ ಸ್ವೀಕರಿಸಿದವರು. ಇಲ್ಲಿ ಲಿಂಗಾಯತರು ವಿವಿಧ ಕೃಷಿಯ ಉಪಕಸುಬುಗಳಲ್ಲಿ ತೊಡಗಿದ್ದಾರೆ. ಶಿವಾಲಯ

[illegible]

ಹಾಗೂ ಮಠಗಳಲ್ಲಿ ಶಿವಭಜನೆ ಮಾಡುವುದು ಅವರ ಆರಾಧನೆಯ ಒಂದು ವಿಧ. ಹಲವಾರು ಗ್ರಾಮಗಳಲ್ಲಿ ಶಿವಭಜನಾ ಮೇಳಗಳಿವೆ. ಮದುವೆಯ ಸಂದರ್ಭದಲ್ಲಿ ವೀರಭದ್ರ ಆರಾಧನೆಯ ವೀರಗಾಸೆಯನ್ನು ಆಚರಿಸುವ ಬೆರಳೆಣಿಕೆಯಷ್ಟು ಪುರವಂತರಿದ್ದಾರೆ.

ಲಿಂಗಾಯತ ಸಮುದಾಯದಲ್ಲಿ ಕೊಲ್ಲಾಪುರದ ಅಂಬಾಭವಾನಿ ಅಥವಾ ತುಳಜಾಪುರದ ತುಳಜಾಭವಾನಿ ಶಕ್ತಿ ಆರಾಧನೆಯ ಒಂದು ಕಲಾ ಪಂಗಡವಿದ್ದು, ಅವರು ಮದುವೆ ಮೊದಲಾದ ಸಂದರ್ಭಗಳಲ್ಲಿ ಗೊಂದಲ ಹಾಕುವರು. ಅವರನ್ನು ಲಿಂಗಾಯತ ಗೊಂದಲಿಗರೆಂದು ಕರೆಯುವರು. ಸಾಮಾನ್ಯವಾಗಿ ಲಿಂಗಾಯತ ಗೊಂದಲಿಗರಿರುವುದು ಅಪರೂಪ. ಬೆಳಗಾವಿ ಜಿಲ್ಲೆಯ ಅಥಣಿ ಮತ್ತು ರಾಯಬಾಗಗಳನ್ನು ಹೊರತುಪಡಿಸಿ ಉಳಿದೆಡೆಗಳಲ್ಲಿ ಲಿಂಗಾಯತ ಗೊಂದಲಿಗರಿಲ್ಲ. ಗೊಂದಲ ಹಾಕುವುದು ಮರಾಠರಲ್ಲಿ ಪ್ರಚಲಿತವಿದೆ. ಅವರನ್ನು ಅನುಸರಿಸಿ ಇವರು ಈ ಸಂಪ್ರದಾಯವನ್ನು ರೂಢಿಸಿಕೊಂಡಿರಬಹುದು. ಶಿವಭಜನೆ, ವೀರಗಾಸೆ ಹಾಗೂ ಗೊಂದಲಿಗರ ಹಾಡು ಇಲ್ಲಿಯ ಲಿಂಗಾಯತ ಸಮುದಾಯದ ಪ್ರಮುಖ ಜನಪದ ಕಲೆಗಳು.

ಜೈನರು ಕೃಷ್ಣೆಯ ಇಕ್ಕೆಲದ ಫಲವತ್ತಾದ ಜಮೀನುಗಳಲ್ಲಿ ಕೃಷಿ ಮಾಡುತ್ತಿರುವ ಕೃಷಿಕರು. ಇವರು ಜಿನಾರಾಧಕರು. ಜೈನ, ಲಿಂಗಾಯತದಂಥ ಧರ್ಮಗಳು ಹೆಚ್ಚು ಶಿಷ್ಟ ರೂಪವನ್ನು ಪಡೆದುಕೊಂಡಿದ್ದರಿಂದ ಇವುಗಳಲ್ಲಿ ಧರ್ಮ ಕೇಂದ್ರಿತ ಜನಪದ ಕಲೆಗಳು ಹೆಚ್ಚು ಹುಟ್ಟಿಕೊಳ್ಳಲಿಲ್ಲ. ಲಿಂಗಾಯತರು ಶಿವಾರಾಧನೆಯನ್ನು ಶಿವಭಜನೆಯ ಮೂಲಕ ರೂಢಿಸಿಕೊಂಡಿದ್ದರೆ ಜೈನರು ಜಿನಾರಾಧನೆಯನ್ನು ಜಿನಭಜನೆಯ ಮೂಲಕ ರೂಢಿಸಿಕೊಂಡಿದ್ದಾರೆ. ಬೆಳಗಾವಿ ಜಿನಕವಿ ದ್ವಾರಪಾಲ, ಹಾರೂಗೇರಿಯ ಕವಿ ಅಲಭೈರಿಯಂಥವರು ಜಿನ ಭಜನೆಗಳನ್ನು ರಚಿಸಿ ಜಿನಭಜನಾ ತಂಡಗಳನ್ನು ಪ್ರೋತ್ಸಾಹಿಸಿದ್ದರು.

ಜನಪದ ಕಲೆಗಳ ಸೃಜನಭೂಮಿ ಎಂದರೆ ದಲಿತ ಸಮುದಾಯ. ಬಾಗೆನಾಡಿನ ದಲಿತ ಸಮುದಾಯ ಹಲವು ಜನಪದ ಕಲೆಗಳ ನಿಧಾನ. ಅವರಲ್ಲಿಯ ಕೆಲವರು ಈ ನಾಡಿನ ಸುಪ್ರಸಿದ್ಧ ಕಲಾವಿದರು. ಭಜನೆ, ವಾದ್ಯವಾದನ, ಶಹನಾಯಿ,

ನೃತ್ಯ, ಸಂಪ್ರದಾಯದ ಹಾಡು ಹಾಗೂ ರಂಗಕಲೆಗಳು ಇವರಿಗೆ ಕರಗತ. ವಿಶೇಷವೆಂದರೆ ಯಾವ ಸಾಮಾಜಿಕ ಬಂಧನಗಳನ್ನು ನಿರ್ಮಿಸಿಕೊಳ್ಳದ ದಲಿತ ಕಲಾವಿದೆಯರು ನಮ್ಮ ನಾಡಿನಲ್ಲಿ ಹೆಚ್ಚು ಗೋಚರಿಸುತ್ತಾರೆ. ಬಣ್ಣ ಬಳಿದುಕೊಂಡು ಅಟ್ಟ ಹತ್ತುವ ಅವರ ಧೈರ್ಯ-ಸಾಹಸ ಮೆಚ್ಚುವಂತಹದು. ಹಲಗೆ(ಸಂಪ್ರದಾನಿ), ತಾಸೆ, ಕಣಿವಾದನಗಳಲ್ಲಿ ಅವರು ಮುಂಚೂಣಿ ಕಲಾವಿದರು. ಎಲ್ಲವ್ವನ ಆರಾಧನೆಯ ಸುತ್ತ ಬೆಳೆದ ಚೌಡಕಿಹಾಡು, ಕುಣಿತ ಈ ಸಮುದಾಯಕ್ಕೆ ಮೀಸಲಾದ ವಿಶಿಷ್ಟ ಕಲೆ. ಸನಾದಿ ನುಡಿಸುವ ಕೊರವರು ದಲಿತವರ್ಗಕ್ಕೆ ಸೇರಿದ ಕಲಾವಿದರು.

ಬೆಳಗಾವಿ ಜಿಲ್ಲೆಯ ರಾಯಬಾಗ, ಚಿಕ್ಕೋಡಿ, ಬೆಳಗಾವಿ, ಅಥಣಿ, ಖಾನಾಪುರ, ಹುಕ್ಕೇರಿ ತಾಲೂಕುಗಳು ಮಹಾರಾಷ್ಟ್ರದ ಗಡಿಗೆ ಹೊಂದಿಕೊಂಡಿರುವುದರಿಂದ ಈ ತಾಲೂಕುಗಳಲ್ಲಿ ಸಂತ ಸಂಪ್ರದಾಯದ ಪ್ರಭಾವ ಅಧಿಕ. ಎಲ್ಲ ಗಡಿ ಗ್ರಾಮಗಳಲ್ಲಿಯೂ ವಿಠ್ಠಲ ದೇವಾಲಯಗಳಿವೆ. ಪ್ರತಿನಿತ್ಯ ಶಿವಭಜನೆ ಮಾಡಲಾಗುತ್ತದೆ. ಭಜನೆಗಳಲ್ಲಿ ಸಂತರ ಅಭಂಗಗಳನ್ನು ಹಾಡಲಾಗುತ್ತದೆ. ದಿಂಡಿ, ಪಾರಾಯಣ, ಉತ್ಸವಾದಿ, ಸಮಾರಂಭಗಳಲ್ಲಿ ಸಾಮೂಹಿಕ ಭಜನೆ ವಾದ್ಯವಾದನ ಹಾಗೂ ನೃತ್ಯಗಳಂತಹ ಜನಪದ ಕಲೆಗಳು ಪ್ರದರ್ಶಿತಗೊಳ್ಳುತ್ತವೆ. ವೈಷ್ಣವ ಆರಾಧಕರಾದರೂ ಹರಿಹರ ಸಮನ್ವಯ ಸಾಧಕರು. ಮರಾಠಿ ಗೊತ್ತಿಲ್ಲದಿದ್ದರೂ ಮರಾಠಿಯಲ್ಲಿಯೇ ಅಭಂಗಗಳನ್ನು ಹಾಡುವರು. ಕೆಲವರಿಗೆ ಜ್ಞಾನೇಶ್ವರನ ಜ್ಞಾನೇಶ್ವರೀ ಕಂಠಪಾಠ. ವಿಠ್ಠಲ ಆರಾಧನೆಯ ನೆಲೆಯಲ್ಲಿ ಹುಟ್ಟಿಕೊಂಡ ಹರಿಭಜನೆ, ಮೃದಂಗವಾದನ, ವೀಣಾವಾದನ, ಗಾಯನ, ಕೀರ್ತನ, ನೃತ್ಯ ಮುಂತಾದ ಕಲೆಗಳು ಗಡಿಭಾಗದಲ್ಲಿ ಪ್ರಚಲಿತದಲ್ಲಿವೆ.

"ಆರಾಧನೆ ಮತ್ತು ಆಚರಣೆಗಳ ಕ್ರಿಯೆಗಳೇ ಕಲೆಗಳಾಗಿ ವಿಕಸನ ಹೊಂದಿ ಪೂರ್ಣಸ್ವರೂಪದ ಕಲೆಗಳಾದದ್ದು ಒಂದು ಬಗೆಯಾದರೆ, ಧರ್ಮ ಅಥವಾ ಪಂಥ ಪ್ರಚಾರಕ್ಕಾಗಿ ಹುಟ್ಟಿದ ಕಲೆಗಳು ಸಂತರ ಧರ್ಮ, ಪಂಥದ ಉದ್ದೇಶ ಮೀರಿ ಸಾರ್ವಜನಿಕ ಕಲೆಗಳಾದದ್ದು ಇನ್ನೊಂದು ಬಗೆ."[3] ಬಡಿಗ, ಕಮ್ಮಾರ, ಕುಂಬಾರ, ಕಂಚಕಾರ, ಪತ್ತಾರ, ಮೇದಾರ, ಚಮ್ಮಾರ ಮೊದಲಾದವರೆಲ್ಲ ವೃತ್ತಿ ಕಲಾವಿದರು.

---

೩. ಹಿ. ಚಿ. ಬೋರಲಿಂಗಯ್ಯ : ಕರ್ನಾಟಕ ಜನಪದ ಕಲೆಗಳ ಕೋಶ, ಪುಟ : ೯೦

ಇವರನ್ನು ಕುಶಲ ಕಲೆಗಾರರು ಎಂದು ಕರೆಯಬಹುದು. ಕೊರವರು ಶಹನಾಯಿವಾದಕರು. ಗೊರವರು ಡುಂಡುಚಿವಾದಕರು. ದುರುಗಮುರುಗಿಗಳು, ಡೊಂಬರು ಕಸರತ್ತು ಪ್ರದರ್ಶಕರು. ಜಾತಗಾರರು ಸೋಗುಹಾಕುವರು. ಬಹುರೂಪಿಗಳು ರಂಗಕಲಾವಿದರು. ಇಂತಹ ಅನೇಕ ವೃತ್ತಿ ಕಲಾವಿದರನ್ನು ಬಾಗೆನಾಡಿನಲ್ಲಿ ಗುರುತಿಸಬಹುದು.

ಧರ್ಮ, ಆರಾಧನೆ, ವೃತ್ತಿಕೇಂದ್ರಿತ ಕಲೆಗಳನ್ನು ಹೊರತುಪಡಿಸಿ ಹವ್ಯಾಸವಾಗಿ ರೂಢಿಸಿಕೊಂಡ ಕಲಾವಿದರು ಹಲವರು. ಕರಡಿ, ಕಣಿ, ಲೇಜಿಮ್, ಝಾಂಜ್, ಬ್ಯಾಂಡ್ ಮುಂತಾದ ಕಲೆಗಳು ಹವ್ಯಾಸದಿಂದ ಬೆಳೆದು ಬದುಕಿನ ವೃತ್ತಿಯಾದುದುಂಟು. ಹೀಗೆ ಈ ನಾಡಿನಲ್ಲಿ ಪ್ರದರ್ಶಿತಗೊಳ್ಳುವ ಪ್ರಮುಖ ಜನಪದ ಕಲೆಗಳನ್ನು ಸ್ಥೂಲವಾಗಿ ಐದು ವಿಭಾಗಗಳಲ್ಲಿ ವರ್ಗೀಕರಿಸಲಾಗಿದೆ.

೩.೧. ದೈವಾರಾಧನಾ ಕೇಂದ್ರಿತ ಕಲೆಗಳು

೩.೨. ವೃತ್ತಿ ಕಲೆಗಳು

೩.೩. ಶುದ್ಧ ಮನರಂಜನೆಯ ಕಲೆಗಳು

೩.೪. ರಂಗಕಲೆಗಳು

೩.೫. ಸಂಕೀರ್ಣ ಕಲೆಗಳು

**೩.೧. ದೈವಾರಾಧನಾ ಕೇಂದ್ರಿತ ಕಲೆಗಳು :**

೩.೧.೧. ಡೊಳ್ಳಿನಹಾಡು, ಡೊಳ್ಳುಕುಣಿತ, ದಟ್ಟಿಕುಣಿತ, ಕೈಪಟ್ಟು ವಾದನ, ಅಲಗ ಹಾಯುವುದು

೩.೧.೨. ಹರಿ-ಹರ-ಜಿನಭಜನೆಗಳು

೩.೧.೩. ಕರ್ಬಲ್ ಹಾಡು-ದಂಗಲ್-ಅಲಾವಿ ಹೆಜ್ಜೆ ಕುಣಿತ

೩.೧.೪. ಚೌಡಿಕೆ-ಜೋಗತಿ ಕುಣಿತ

೩.೧.೫. ವೀರಗಾಸೆ-ಕರಡಿ ಮಜಲು-ಗೊಂದಲಿಗರ ಮೇಳ

[illegible]

[illegible]

[illegible]

[illegible]

### ೩.೧.೧. ಡೊಳ್ಳಿನಹಾಡು, ಡೊಳ್ಳುಕುಣಿತ, ದಟ್ಟಿಕುಣಿತ, ಕೈಪಟ್ಟುವಾದನ, ಅಲಗ ಹಾಯುವುದು :

ಡೊಳ್ಳು ಹಾಲುಮತ ದೇವರ ಆರಾಧನಾ ವಾದ್ಯ. ಈ ವಾದ್ಯ ವಿಶೇಷದ ಕುರಿತು ಕುರುಬರಲ್ಲಿ ಅನೇಕ ಕಥೆಗಳಿವೆ. ಡೊಳ್ಳಾಸುರನ ಹೊಟ್ಟೆಯನ್ನು ಸೀಳಿ ಶಿವ ಡೊಳ್ಳು ತಯಾರಿಸಿದನೆಂದು ನಂಬಿಕೆ. ಕುರುಬರು ಬೀರಪ್ಪ ದೇವರ ಪೂಜೆ, ಉತ್ಸವ, ಆರಾಧನೆ ಮತ್ತು ಶುಭಪ್ರಸಂಗಗಳಲ್ಲಿ ಡೊಳ್ಳು ಬಡಿಯುತ್ತಾ ಹಾಡುವುದು, ಕುಣಿಯುವುದು ಪರಂಪರಾಗತ ಕಲೆ. ಅವರಿಗೆ ಡೊಳ್ಳು ಕೇವಲ ಒಂದು ವಾದ್ಯವಲ್ಲ; ದೈವ. ಅವರು ಮೊತ್ತಮೊದಲು ಡೊಳ್ಳಿನ ಪೂಜೆಯೊಂದಿಗೆ ಹಾಡು, ಕುಣಿತ ಆರಂಭಿಸುವರು.

ಡೊಳ್ಳುವಾದನ-ಹಾಡು-ಕುಣಿತ ವ್ಯಾಪಕವೂ ಪ್ರಸಿದ್ಧವೂ ಆಗಿರುವ ಕಲೆಗಳು. ಬಾಗೆನಾಡು ಎಂದು ಹೆಸರಾಗಿರುವ ರಾಯಬಾಗ ತಾಲೂಕಿನಲ್ಲಿ ೫೨ ಗ್ರಾಮಗಳಿದ್ದು, ಪ್ರತಿಯೊಂದು ಹಳ್ಳಿಯಲ್ಲಿಯೂ ಒಂದಕ್ಕಿಂತ ಹೆಚ್ಚು ಡೊಳ್ಳಿನ ಮೇಳಗಳಿವೆಯೆಂದು ಹಿಂದೆ ಹೇಳಿದೆ. ಹಾರೂಗೇರಿ, ಯಲ್ಪಾರಟ್ಟಿ, ಮುಗಳಖೋಡ, ಚಿಂಚಲಿ, ಕಂಕಣವಾಡಿ, ಅಲಕನೂರ, ಸವಸುದ್ದಿ ಮೊದಲಾದ ಗ್ರಾಮಗಳಲ್ಲಿ ನಾಲ್ಕೈದು ಮೇಳಗಳಿವೆ. ಬಾಗೆನಾಡು ಎಂದಾಕ್ಷಣ ಡೊಳ್ಳಿನ ಮೇಳಗಳೇ ಕಣ್ಣುಮುಂದೆ ಸುಳಿಯುತ್ತವೆ. "ಕನ್ನಡ ನಾಡಿನ ಬಹುಮುಖ್ಯ ಚರ್ಮವಾದ್ಯವಾದ ಈ ಡೊಳ್ಳು ಅಷ್ಟೇ ಬೃಹತ್ ವಾದ್ಯ ಕೂಡ. ಡೊಳ್ಳನ್ನು ಹೆಬ್ಬೇವು, ಹೊನ್ನೆಮರಗಳಿಂದ ತಯಾರಿಸುತ್ತಾರೆ. ಸುಮಾರು ಎರಡೂವರೆ ಅಡಿ ಉದ್ದದ ಮರದ ತುಂಡನ್ನು ಕತ್ತರಿಸಿ ಅದರ ಒಳಭಾಗವನ್ನು ಪೂರ್ತಿಯಾಗಿ ಟೊಳ್ಳು ಮಾಡಲಾಗುತ್ತದೆ. ಬಲಭಾಗಕ್ಕೆ ಹೋತದ ಚರ್ಮ ಮತ್ತು ಎಡಭಾಗಕ್ಕೆ ಆಡಿನ ಚರ್ಮವನ್ನು ಹೊಂದಿಸಲಾಗುತ್ತದೆ. ಸೆಣಬಿನ ಹಗ್ಗದಿಂದ ಹೊರಮೈಯನ್ನು ಬಿಗಿಯಲಾಗುತ್ತದೆ."[೪] ಬಲಗೈಯಲ್ಲಿ ಬಾರಿಸುವ ಗುಣಿ ಇರುತ್ತದೆ. ಎಡಗೈಯಿಂದ ಚಾಪು ಹಾಕುತ್ತಾರೆ. ಹಬ್ಬ-ಉತ್ಸವಗಳಲ್ಲಿ ನಾಲ್ಕಾರು ಜನರು ಕಂಬಳಿಯನ್ನು ಸುತ್ತಿಕೊಂಡು ಕೊರಳಿಗೆ ಡೊಳ್ಳು ಹಾಕಿ ಬಾರಿಸುತ್ತಾ ಹೋಗುವರು.

---

೪. ಹಿ. ಚಿ. ಬೋರಲಿಂಗಯ್ಯ : ಕರ್ನಾಟಕ ಜನಪದ ಕಲೆಗಳ ಕೋಶ, ಪುಟ : ೧೦೭

ಡೊಳ್ಳಿನ ಪದಗಳನ್ನು ಹಾಡುವುದಕ್ಕೆ ಹಾಡಿಕೆ ಎನ್ನುವರು. ಒಂದೊಂದು ಮೇಳದಲ್ಲಿ ೭,೯,೧೧ ಕಲಾವಿದರಿರುತ್ತಾರೆ. ಅವರಲ್ಲಿ ಒಬ್ಬನೋ ಅಥವಾ ಇಬ್ಬರೋ ಮುಮ್ಮೇಳದವರು, ಉಳಿದವರೆಲ್ಲ ಹಿಮ್ಮೇಳದವರು. ಅವರಲ್ಲಿಯ ಇಬ್ಬರು ಡಗ್ಗಾ ದಿಮ್ಮು ಬಾರಿಸುವರು. ಇಬ್ಬರು ತಾಳದವರು ಇರುತ್ತಾರೆ. ಇದನ್ನು ಅವರು 'ವಾಲಗ' ಎಂದು ಕರೆಯುವರು. ವಾಲಗ ಎಂಬುದು ಓಲಗ ಪದದ ತದ್ಭವ. ಅವರ ದೃಷ್ಟಿಯಲ್ಲಿ ಇದು ಬೀರದೇವರ ಒಡ್ಡೋಲಗ. ಅವರು ಅಮೋಘಸಿದ್ಧ, ಮಾಳಿಂಗರಾಯ, ಬೀರಸಿದ್ಧ ಮುಂತಾದ ಹಾಲುಮತ ಮಾರ್ಗ ಹಾಗೂ ಅನುಭವ ಪದಗಳನ್ನು ಹಾಡುವರು. ಇತ್ತೀಚಿಗೆ ಹರದೇಶಿ ಮತ್ತು ನಾಗೇಶಿ ಮಾರ್ಗಗಳಲ್ಲಿ ಹಾಡುವುದುಂಟು. ಇದು ಲಾವಣಿಗಳ ಪ್ರಭಾವ. ಇಂತಹ ವಾಲಗಗಳಲ್ಲಿ ಒಂದೇ ಡೊಳ್ಳು ಇರುತ್ತದೆ. ಮುಮ್ಮೇಳದವರು ನಿಂತು, ಹಿಮ್ಮೇಳದವರು ಕುಳಿತು ಹಾಡುವರು. ಕೆಲವು ಸಲ ವಿಶೇಷ ಉಡುಪುಗಳನ್ನು ಧರಿಸುವರು. ಕಂಬಳಿಯಂತೂ ಇರಲೇಬೇಕು.

ಡೊಳ್ಳು ಬಾರಿಸುತ್ತಾ ಕುಣಿಯುವ ಕಲೆ ಡೊಳ್ಳು ಕುಣಿತ. "ಡೊಳ್ಳಿನ ಬಡಿತ ಗುಣಿ ಲೆಕ್ಕದಲ್ಲಿ ಇರುತ್ತದೆ. ಒಂದು ಕೋಲುಪಟ್ಟಿ ಇನ್ನೊಂದು ಕೈಪಟ್ಟಿ ಸೇರಿದರೆ ಒಂದು ಗುಣಿ". ಡೊಳ್ಳುಕುಣಿತದಲ್ಲಿ ಕೆಲವು ಮಜಲುಗಳಿರುತ್ತವೆ. ದಟ್ಟಿಕುಣಿತ ಡೊಳ್ಳು ಕುಣಿತದ ವಿಶೇಷ ಪ್ರಕಾರ. ಡೊಳ್ಳು ಹಾಗೂ ತಾಳಗಳ ಲೆಕ್ಕಕ್ಕೆ ಹೆಜ್ಜೆ ಹಾಕುತ್ತಾ ವಿಶೇಷ ಪೋಷಾಕು ಧರಿಸಿದ ಕಲಾವಿದರ ಕೈಯಲ್ಲಿ ಒಂದು ಕರವಸ್ತ್ರದಂತಿರುವ ಬಟ್ಟೆಯನ್ನು ಹಿಡಿದು ಕುಣಿಯುವರು. ಈ ಭಾಗದಲ್ಲಿ ದಟ್ಟಿಕುಣಿತ ಹೆಚ್ಚು ಆಕರ್ಷಣೀಯವಾಗಿದೆ. ದಟ್ಟಿ ಕುಣಿತದಲ್ಲಿ ಹೆಜ್ಜೆಗಳ ಲೆಕ್ಕ ಇರುತ್ತದೆ. ದಟ್ಟಿ ಎಂದರೆ ಸೊಂಟದ ಪಟ್ಟಿ, ಇದು ಸ್ತ್ರೀಯರು ಉಡುವ ಉಡುಪು. ಆದ್ದರಿಂದ ಪಾರ್ವತಿಯ ರೂಪದಲ್ಲಿ ದಟ್ಟಿ ಕಟ್ಟಿ ಕುಣಿಯುತ್ತಾರೆ. ದಟ್ಟಿ ಕುಣಿತದಲ್ಲಿ ೧೫-೨೦ ಕಲಾವಿದರಿರುತ್ತಾರೆ. ಕೈಪಟ್ಟು ತಾಳ, ಗುಮಿಕೆಗಳೊಂದಿಗೆ ಶ್ರುತಿ, ಸನಾದಿಗಳು ಇರುತ್ತವೆ. ಹಿ. ಚಿ. ಬೋರಲಿಂಗಯ್ಯನವರು ಹೇಳುವಂತೆ ಉತ್ತರ ಕನಾಟಕದ ಬೆಳಗಾವಿ ಜಿಲ್ಲೆಯಲ್ಲಿ ದಟ್ಟಿಕುಣಿತ ಜನಪ್ರಿಯವಾಗಿದೆ. ಇದು ಈ ಜಿಲ್ಲೆಯ ವಿಶಿಷ್ಟ ಜನಪದ ಕಲೆ. "ಹಿಮ್ಮೇಳ ನುಡಿಸುತ್ತಿದ್ದಂತೆ ಕುಣಿತ ಆರಂಭವಾಗುತ್ತದೆ. ೪-೫ ಜನ ಕಲಾವಿದರಿದ್ದಾಗ ಕೈಯಳತೆಯ ಅಂತರದಲ್ಲಿ ಸಾಲಾಗಿ ನಿಂತು ಕುಣಿಯುವರಾದರೆ, ಹೆಚ್ಚಿನ ಸಂಖ್ಯೆಯಲ್ಲಿ

[illegible]

ಕಲಾವಿದರಿದ್ದಾಗ ಎದುರು ಸಾಲು ರಚಿಸಿಕೊಳ್ಳುತ್ತಾರೆ. ಎಡಕ್ಕೆ ಎರಡು ಹೆಜ್ಜೆ, ಬಲಕ್ಕೆ ಎರಡು ಹೆಜ್ಜೆ, ಮುಂದಕ್ಕೆ ಮೂರು ಹೆಜ್ಜೆ ಹಾಗೂ ಜಿಗಿತಗಳು ಮತ್ತು ಸಾಲುಕಟ್ಟಿ ಕುಣಿತ, ಅಡ್ಡಕುಣಿತ, ದುಂಡುಕುಣಿತ ಮೊದಲಾದ ಕುಣಿತ ವೈವಿಧ್ಯಗಳನ್ನು ತೋರ್ಪಡಿಸುತ್ತಾರೆ. ದಟ್ಟಿಕುಣಿತದ ಜಿಗಿತದಲ್ಲಿ ಅಂತರ ಜಿಗಿತ, ಖಡ್ಗದ ಮೇಲೆ ಜಿಗಿತ, ಬಂಡಿಗಾಲಿನ ಜಿಗಿತ ಮುಂತಾದ ಜಿಗಿತಗಳು ವೈವಿಧ್ಯಮಯ. ಹತ್ತು-ಹನ್ನೆರಡು ಜನರನ್ನು ಮಲಗಿಸಿ ಮಧ್ಯದಲ್ಲಿ ಲಾಗ ಹಾಕುವ ಕಸರತ್ತು ನೋಡುವಂತದ್ದು. ಹಿಂಗಾಣಿ ಮುಂಗಾಣಿ ಲಾಗಹಾಕುವರು."[೫]

"ದಟ್ಟಿ ಕುಣಿತದಲ್ಲಿ ತಲೆಯ ಮೇಲೆ ಸಮೆ(ಉದ್ದವಾದ ದೀಪ) ಹೊತ್ತು ಕೆಲವು ತಂಡದವರು ಸಾಲಾಗಿ ನರ್ತಿಸುತ್ತಾರೆ. ಆದಿಗತ್ತು, ಬಯಲುಗತ್ತುಗಳಲ್ಲಿ ಈ ನರ್ತನ ನಡೆಯುತ್ತದೆ. ಈಗ ಇಪ್ಪತ್ತು ವರ್ಷಗಳಲ್ಲಿ ಈ ದೀಪ ನೃತ್ಯವು ದಟ್ಟಿ ನೃತ್ಯದಷ್ಟೇ ಆಕರ್ಷಕ ಕಲೆಯಾಗಿ ಬೆಳೆಯುತ್ತಿದೆ. ಒಟ್ಟಾರೆ ಮುಂಬರುವ ದಿನಗಳಲ್ಲಿ ಈ ದಟ್ಟಿ ಕುಣಿತ ಪ್ರಸಿದ್ಧ ಜಾನಪದ ಕಲೆಯಾಗಿ ಮುಂದುವರೆಯುವ ಭರವಸೆಯುಂಟು. ದೀಪನೃತ್ಯವು ದಟ್ಟಿನೃತ್ಯದ ಒಂದಂಗವಾಗಿರುವುದು ಖಚಿತವಾಗಿದೆ. ದಟ್ಟಿ ಕುಣಿತದ ಮುಕ್ತಾಯ ಅಥವಾ ಮಂಗಲದ ವೇಳೆಯಲ್ಲಿ ದಟ್ಟಿ ವೇಷ-ಭೂಷಣಗಳಿದ್ದು ಬರಿದಲೆಯ ಮೇಲೆ ಉರಿಯುತ್ತಿರುವ ಸಮೆಯನ್ನು ಇಟ್ಟುಕೊಂಡು ಕುಣಿತ ಮಾಡುತ್ತಾರೆ."[೬]

ಡೊಳ್ಳು ಬಾರಿಸುತ್ತಾ ಹಾಡುವುದು ಡೊಳ್ಳಿನ ಹಾಡು. ಆದರೆ ಹಾಡು ಹಾಡದೇ ಶಹನಾಯಿಯೊಂದಿಗೆ ಡೊಳ್ಳು, ದಿಮ್ಮ, ತಾಳ, ಹಲಗೆಗಳನ್ನು ಬಾರಿಸುವುದು ಡೊಳ್ಳಿನ ಕೈಪಟ್ಟು, ಇಲ್ಲಿ ಹಾಡು ಇರುವುದಿಲ್ಲ. ಅದು ಕೇವಲ ವಾದ್ಯಮೇಳ. ಈ ವಾದ್ಯಗಳನ್ನು ಓಲಗದ ರೂಪದಲ್ಲಿಯೇ ನುಡಿಸುವರು. ಇಲ್ಲಿಯೂ ಡೊಳ್ಳು ಮುಖ್ಯ ವಾದ್ಯ. ಆದರೆ ತಾಳಕ್ಕೆ ತಕ್ಕಂತೆ ಎಲ್ಲ ವಾದ್ಯಗಳು ನುಡಿಯುತ್ತವೆ.

ಅಲಕನೂರಿನ ಕರಿಸಿದ್ಧೇಶ್ವರನ ಆರಾಧನೆಯ ಅಂಗವಾಗಿ ಅಲಗ ಹಾಯುವುದು ಕುರುಬರ ಸಂಪ್ರದಾಯ. ಅಲಗ ಎಂದರೆ ಶಸ್ತ್ರ(ಖಡ್ಗ). ಡೊಳ್ಳಿನ

೫. ಹಿ. ಚಿ. ಬೋರಲಿಂಗಯ್ಯ: ಕರ್ನಾಟಕ ಜನಪದ ಕಲೆಗಳ ಕೋಶ, ಪುಟ : ೧೧೦

೬. ಡಾ. ಶ್ರೀರಾಮ ಇಟ್ಟಣ್ಣವರ : ಹಾಲುಕೆನೆ, ಪುಟ : ೨೬೧

[illegible]

ಕುಣಿತದೊಂದಿಗೆ ಅಲಗ ಪ್ರದರ್ಶಿಸುತ್ತಾ ಪೂಜಾರಿ ಅಲಗ ಹಾಯುತ್ತಾನೆ. ಮುಳ್ಳಾವಿಗೆ ಮೆಟ್ಟಿ, ಮೈಗೆ ಖಡ್ಗ ಹೊಡೆದುಕೊಳ್ಳುವನು. ಆಗ ಭಂಡಾರ ತೂರುತ್ತಾರೆ. ಗಾಯಕ್ಕೆ ಭಂಡಾರ ಹಚ್ಚಿಕೊಳ್ಳುತ್ತಾರೆ.

**೩.೧.೨. ಹರಿ-ಹರ ಜಿನಭಜನೆಗಳು:**

ಬಾಗೆನಾಡಿನ ಪ್ರತಿಯೊಂದು ಗ್ರಾಮದಲ್ಲಿಯೂ ಭಜನಾ ತಂಡಗಳಿವೆ. ಭಜನೆಗಳ ಹಿನ್ನೆಲೆ ಮತ್ತು ಪ್ರಕಾರದಲ್ಲಿ ವ್ಯತ್ಯಾಸವಿರಬಹುದು. ಇವರು ಸಾಮಾನ್ಯವಾಗಿ ಆ ದೈವದ ಸ್ತುತಿಯ ಹಾಡು(ಭಜನೆ)ಗಳನ್ನು ಹಾಡುವರು. ಬಾಗೆನಾಡಿನಲ್ಲಿ ಶ್ರಾವಣಮಾಸದಾದ್ಯಂತ ಹಗಲು-ರಾತ್ರಿ ಭಜನೆಯ ಸಂಭ್ರಮ. ಅವುಗಳನ್ನು ಸ್ಥೂಲವಾಗಿ ಈ ರೀತಿ ವರ್ಗೀಕರಿಸಬಹುದು.

**ಹರಿಭಜನೆ :**

ಹರಿಯನ್ನು ಭಜಿಸುವವರು ಹರಿಭಜನೆಯವರು. ಇವರು ವಾದಕರೀ ಸಂಪ್ರದಾಯದವರು. ಹೆಚ್ಚಾಗಿ ಪಂಡರಪುರದ ವಿಠ್ಠಲನನ್ನು ಭಜಿಸುವರು. ಹರಿಭಜನೆಯಲ್ಲಿ ಕನಿಷ್ಠ ಐದು ಜನ ಗರಿಷ್ಠ ಸಾವಿರಕ್ಕಿಂತಲೂ ಹೆಚ್ಚು.

**ಹರಿಭಜನೆ ಮೇಳದ ಸ್ವರೂಪ :**

೧. ಮುಮ್ಮೇಳದವನು.
೨. ಮೃದಂಗವಾದಕ
೩. ವೀಣಾವಾದಕ
೪. ತಾಳಕರಿಗಳು (ಕಂಚಿನ ಗುಂಡದಾಳ-ದೊಡ್ಡದು)

ಶಿವಭಜನೆ ಸ್ವರ ಪ್ರಧಾನವಾಗಿದ್ದರೆ ಹರಿಭಜನೆ ನಾದ ಪ್ರಧಾನವಾದುದು. ಮೃದಂಗ ಮತ್ತು ವೀಣಾವಾದಕರಿಬ್ಬರನ್ನು ಹೊರತುಪಡಿಸಿ ಉಳಿದವರೆಲ್ಲರ ಕೈಗಳಲ್ಲೂ ತಾಳಗಳಿರುತ್ತವೆ. ಜನರು ಹೆಚ್ಚಿದ್ದರೆ ಮೃದಂಗಗಳು ಹೆಚ್ಚಿರುತ್ತವೆ. ಮರಾಠಿ ಅಭಂಗ ಹಾಗೂ ದಾಸರ ಪದಗಳನ್ನು ಹಾಡುವರು.

ಹಾರೂಗೇರಿ, ಕಪ್ಪಲಗುದ್ದಿ, ಭಿರಡಿ, ಚಿಂಚಲಿ, ಜಲಾಲಪುರ, ದಿಗ್ಗೇವಾಡಿಗಳಲ್ಲಿ ಹರಿಭಜನೆ ಮೇಳಗಳಿವೆ.

**ಹರಭಜನೆ :**

ಹರನನ್ನು ಭಜಿಸುವವರು ಹರಭಜನಾಕಾರರು. ಇವರು ಅನುಭವ/ತತ್ತ್ವಪದಗಳನ್ನು ಹಾಡುವರು. ಶಿವನಾಮ, ಕೀರ್ತನೆ ಇವರ ಮುಖ್ಯ ಧ್ಯೇಯ. ಒಂದು ಮೇಳದಲ್ಲಿ ಕನಿಷ್ಠ ಆರು, ಗರಿಷ್ಠ ಎಂಟು ಜನರಿರುತ್ತಾರೆ.

**ಶಿವಭಜನಾ ಮೇಳದ ಸ್ವರೂಪ :**

೧. ಮುಖ್ಯ ಹಾಡುಗಾರ(ಮುಮ್ಮೇಳ)

೨. ಹಾರ್ಮೋನಿಯಂ ವಾದಕ

೩. ದಮಡಿ ವಾದಕ

೪. ಇಬ್ಬರು ತಾಳ ಹಾಕುವವರು(ಕಬ್ಬಿಣ ಗುಂಡದಾಳ)

೫. ಇನ್ನೊಬ್ಬ ಹಾಡುಗಾರ(ಹಿಮ್ಮೇಳ)

ನಿಜಗುಣಶಿವಯೋಗಿ, ಸರ್ಪಭೂಷಣ, ಮಹಾಲಿಂಗರಂಗ, ಶರೀಫರ ಪದಗಳನ್ನು ಹಾಡುವರು.

**ಜಿನಭಜನೆ :**

ತೀರ್ಥಂಕರರನ್ನು ಸ್ತುತಿಸುವವರು ಜಿನಭಜನೆಯವರು. ಇವರು ಜಿನಧರ್ಮದವರು. ಜಿನ ಇವರ ಆರಾಧ್ಯದೈವ. ಈ ಮೇಳದಲ್ಲಿ ಕನಿಷ್ಠ ಆರು ಗರಿಷ್ಠ ಎಂಟು ಜನರಿರುತ್ತಾರೆ.

**ಜಿನಭಜನಾ ಮೇಳದ ಸ್ವರೂಪ :**

೧. ಮುಮ್ಮೇಳದವನು

೨. ಮೃದಂಗವಾದಕ(ಡೋಲ)

೩. ಹಾರ್ಮೋನಿಯಂ

೪. ದಮಡಿ

೫. ಉಳಿದವರು ತಾಳದವರು (ಗುಂಡುದಾಳ ಮತ್ತು ಚಿಪ್ಪುದಾಳ)

ಹಾರೂಗೇರಿ, ನಸಲಾಪುರ, ಸವದತ್ತಿಗಳಲ್ಲಿ ಜಿನಭಜನಾ ತಂಡಗಳಿವೆ.

### ೩.೧.೩. ಕರ್ಬಲ್ ಹಾಡು–ದಂಗಲ್–ಅಲಾವಿ ಹೆಜ್ಜೆ :

ಮೊಹರಂ ಅಥವಾ ಅಲಾವಿ ಆಚರಣೆಯಲ್ಲಿ ಹಾಡುವ ಹಾಡುಗಳಿಗೆ ಕರ್ಬಲ್ ಹಾಡುಗಳೆಂದು ಕರೆಯುವರು. 'ಕರ್ಬಲ್' ಎಂಬುದು ಯುದ್ಧ ಮೈದಾನದ ಹೆಸರು. ಅದು ಮಹಾಭಾರತ ಯುದ್ಧದ ಕುರುಕ್ಷೇತ್ರವಿದ್ದಂತೆ. ಕರ್ಬಲ್ ಯುದ್ಧದಲ್ಲಿ ಹುತಾತ್ಮರಾದ ಹಸೇನಿ–ಹುಸೇನಿಯವರ ಬಲಿದಾನವನ್ನು ಕಥಿಸುವುದು ಕರ್ಬಲ್ ಹಾಡುಗಳ ಉದ್ದೇಶ. ಕರ್ಬಲ್ ಎಂಬುದು 'ಕರ್ಬ' ಮತ್ತು 'ಬಲ' ಎಂಬೆರಡು ಪದಗಳನ್ನು ಒಳಗೊಂಡ ಸಂಯುಕ್ತ ಪದ. ಕರ್ಬ ಎಂದರೆ ದುಃಖ ಮತ್ತು ಬಲ ಎಂದರೆ ವಿಪತ್ತು. ವಿಪತ್ತುಗಳ ಧರ್ಮದುರಂತದ ಕಥನ ಕಾವ್ಯಗಳು ಮೊಹರಂ ಗೀತೆಗಳು. ಈ ಹಾಡುಗಳನ್ನು ಮೊಹರಂ ಪದಗಳು ಅಥವಾ ರಿವಾಯತಗಳೆಂದೂ ಕರೆಯುವರು. ಮೊಹರಂ ಹಬ್ಬದ ಕಾಲದಲ್ಲಿ ವಿಶೇಷವಾಗಿ ಹಳ್ಳಿಯ ಉತ್ಸಾಹೀ ಯುವಕರು ಹುತಾತ್ಮರಾದ ಇಮಾಮ್ ಹುಸೇನರೊಡನೆ 'ಕರ್ಬಲಾ'ದ ಕದನದಲ್ಲಿ ಆತ್ಮಾರ್ಪಣೆ ಮಾಡಿದ ವೀರತಂಡದ ಸಂಕೇತವಾಗಿ 'ಕರ್ಬಲ್ ಮೇಳ'ಗಳನ್ನು ಕಟ್ಟುವರು. ಮುಸ್ಲಿಂರೂ ಮಾತ್ರವಲ್ಲ; ಹಿಂದೂಗಳು ಕೂಡಾ ಇವುಗಳಲ್ಲಿ ಪಾಲುಗೊಳ್ಳುವರು. ಶಿಸ್ತಿನ ಸಿಪಾಯಿಗಳಂತೆ ಸಮವಸ್ತ್ರಧಾರಿಗಳಾಗಿ, ರಣಹಲಗೆಯ ಧ್ವನಿಯೊಡನೆ ಲೋಕನೃತ್ಯದ ಗತಿಯಲ್ಲಿ ಹೆಜ್ಜೆ ಹಾಕುತ್ತಾ, ಹಾಡುತ್ತಾ, ಕುಣಿಯುತ್ತಾ ಮನೆಯಿಂದ ಮನೆಗೆ ಊರೆಲ್ಲ ಸುತ್ತುವರು. 'ಮೊಹರಂ'ದ ಪವಿತ್ರ ಸಂದೇಶವನ್ನು ಮನಮನಕ್ಕೂ ಮುಟ್ಟಿಸುವರು. ಮೊಹರಂ ತಿಂಗಳ ಒಂಬತ್ತನೆಯ ರಾತ್ರಿ–ಕತ್ತಲರಾತ್ರಿ ಹುತಾತ್ಮ ಹಜರತ್ ಇಮಾಮ್ ಹುಸೇನ ಮೊದಲಾದವರ ಸ್ಮಾರಕವೆನಿಸಿದ ಡೋಲಿ ಅಥವಾ ತಾಖಿಯಾಗಳು ಒಂದೆಡೆ ಸೇರಿದಲ್ಲಿ ವಿವಿಧ ಕರ್ಬಲ್ ಮೇಳದವರು 'ಮೊಹರಂ' ಅಥವಾ 'ಕರ್ಬಲ್' ಸಂಬಂಧದ ಪದಗಳನ್ನು ಬೆಳ್ಳಬೆಳತನಕ ಹಾಡುವರು."[೭]

---

೭. ಕನ್ನಡ ವಿಷಯ ವಿಶ್ವಕೋಶ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ. ವಿ., ಮೈಸೂರು ಪುಟ : ೨೫೨

**ಪುಂಡ ನಡದಾನೋ ದಂಡ ತಗೊಂಡಾ**

**ಮುಂದ ಡಂಕೆ ನಿಶ್ಯಾನಾ।**

**ಶಬ್ದ ಅಂತಾರೊ ಧಿನ್ ಧಿನಾ**

**ಬಿಟ್ವಾರೋ ಸ್ವಾಮಿ ತಮ್ಮ ವತನಾ** ॥೧॥

**ಹೋಗಿ ಇಳಶ್ಯಾರೋ ಶರಣಾ।**

**ಮಾಕೆಟ್ಟ ಅಡವಿ ಆರ್ಣ್ಯಾ॥**

**.........................**

ಇಂಥ ಹಾಡುಗಳಿಗೆ 'ರಿವಾಯತ ಪದ'ಗಳೆಂದು ಕರೆಯುವರು.

ಮೊರಬದ ಮೊಹರಂ ಆಚರಣೆ ಕರ್ನಾಟಕದಲ್ಲಿಯೇ ಪ್ರಸಿದ್ಧವಾದುದು. ಹಾರೂಗೇರಿ, ನಿಲಜಿ, ಅಳಗವಾಡಿ, ಮುಗಳಖೋಡ ಮೊದಲಾದ ಗ್ರಾಮಗಳಲ್ಲಿ, ಅಲಾವಿ ಆಚರಣೆ ಸಂದರ್ಭದಲ್ಲಿ ಕರ್ಬಲ್ ಹಾಡುಗಳ ಸ್ಪರ್ಧೆಗಳು ಜರುಗುತ್ತವೆ. ಮಹಮ್ಮದ ಪೈಗಂಬರರ ಹುಟ್ಟುಹಬ್ಬದಂದು ಹಾರೂಗೇರಿಯಲ್ಲಿ ಕಳೆದ ಹತ್ತು ವರ್ಷಗಳಿಂದ ರಾಜ್ಯಮಟ್ಟದ ಕರ್ಬಲ್ ಹಾಡುಗಳ ಸ್ಪರ್ಧೆಗಳು ನಡೆಯುತ್ತಿವೆ. ಮೊರಬದ ಶ್ರೀಜೈಹನುಮಾನ ಕರ್ಬಲ್ ಮೇಳ ರಾಜ್ಯಮಟ್ಟದಲ್ಲಿ ಮೊದಲ ಬಹುಮಾನ ಗಳಿಸಿದೆ. ಅಳಗವಾಡಿ, ನಿಲಜಿ ತಂಡಗಳು ಕರ್ನಾಟಕ-ಮಹಾರಾಷ್ಟ್ರದ ಹಲವೆಡೆಗಳಲ್ಲಿ ಅಂದರೆ ಮೈಸೂರು, ಬೆಂಗಳೂರು, ಮಹಾರಾಷ್ಟ್ರದ ಪೂನಾ, ತಾಸಗಾಂವಗಳಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಿ ಅನೇಕ ಬಹುಮಾನಗಳನ್ನು ಪಡೆದಿರುವರು. ಬಾಗೆನಾಡಿನಲ್ಲಿ ಅಲಭೈರಿ, ಹುಸೇನಿ, ರಾಚೋಟಿ, ಹಸನ, ಭೀಮಣ್ಣ, ಇಸ್ಮಾಲ್‌ಸಾಹೇಬ, ಮಲಿಕ್‌ಜಾನ್ ಮುಂತಾದವರು ಬಾಗೆನಾಡಿನ ಕರ್ಬಲ್ ಕವಿಗಳು.

ಅಲಾವಿ ಎಂದರೆ ಕೆಂಡದ ಕೊಂಡ. ಕೊಂಡದ ಸುತ್ತ ರಣಹಲಗೆಯ ತಾಳಕ್ಕೆ ಹೆಜ್ಜೆ ಹಾಕುತ್ತಾ ಸುತ್ತುವುದು ಅಲಾವಿ ಹೆಜ್ಜೆ. ಕರ್ಬಲ್ ಹಾಡುತ್ತಾ ಹೆಜ್ಜೆ ಹಾಕಬಹುದು ಇಲ್ಲವೋ ದುಮ್‌ಶಾನ್ ದುಯಲಾ, ಹಲ್‌ಕೆಂವಶೈ ಬೌಂಶೈಯ್ ಎಂದು ಕೂಗುತ್ತಾ ಕೊಂಡ ಸುತ್ತುತ್ತಾರೆ. ಕೊಂಡ ಸುತ್ತುವಾಗ ಅವರು ಪಂಜುಗಳು, ವಿವಿಧ ಬಗೆಯ ಕಟ್ಟಿಗೆಯ ಆಯುಧಗಳು, ಶಲ್ಯ ಅಥವಾ ಕರ್ಬಲ್ ಟಾವೆಲನ್ನು

ಹಿಡಿದಿರುತ್ತಾರೆ. ಹಾಡುವವರು ಕೊಂಡದ ಮಗ್ಗುಲಲ್ಲಿ ನಿಂತುಕೊಂಡು ಹಾಡಬಹುದು. ಈ ಭಾಗದಲ್ಲಿ ಬಹುಪಾಲು ಕರ್ಬಲ್ ಕವಿಗಳು ಮುಸ್ಲಿಂರು. ಹಾಡುಗಾರರೆಲ್ಲ ಹಿಂದೂಗಳು.

'ದಂಗಲ್' ವಿಶಿಷ್ಟವಾದ ಮೊಹರಂ ಕುಣಿತ. ಇದು ಯುದ್ಧದ ಅಭಿನಯ. ಮೊರಬದಲ್ಲಿ ಇದನ್ನು ರೋಮಾಂಚನಕಾರಿಯಾಗಿ ಅಭಿನಯಿಸುತ್ತಾರೆ. ಇದರಲ್ಲಿ ೨೦-೩೦ಜನ ಕಲಾವಿದರಿರುತ್ತಾರೆ. ವಿಶೇಷ ವೇಷ-ಭೂಷಣಗಳನ್ನು ಹಾಕಿಕೊಳ್ಳುವ ಈ ಕಲಾವಿದರು ಪಂಜು ಆಯುಧಗಳನ್ನು ಹಿಡಿದು ಕುಣಿಯುತ್ತಾರೆ. ಮೊರಬ, ಅಳಗವಾಡಿ, ಇಟನಾಳದಲ್ಲಿ ದಂಗಲ್ ಕಲಾವಿದರ ತಂಡಗಳಿವೆ. ಅವರೊಟ್ಟಿಗೆ ಹಲಗೆ, ತಾಸೆ, ಸಣ್ಣಡೊಳ್ಳು, ಶಹನಾಯಿ, ತಾಳಗಳು ಇರುತ್ತವೆ. ಇವುಗಳೊಂದಿಗೆ ಖಾಂಜರಿ ಎಂಬ ವಾದ್ಯ ನುಡಿಸುತ್ತಾರೆ. ಇದನ್ನು ಮೊಹರಂ ಸಂದರ್ಭದಲ್ಲಿ ಮಾತ್ರ ವಿಜೃಂಭಣೆಯಿಂದ ಪ್ರದರ್ಶಿಸುವರು.

ಹಬ್ಬ-ಉತ್ಸವ, ಮೆರವಣಿಗೆಗಳಲ್ಲಿ ಸೈನಿಕ ವೇಷದ ಬಲ್ಲಂ ನೃತ್ಯ ಪ್ರದರ್ಶಿಸಲಾಗುವುದು. ೧೫-೨೦ಕಲಾವಿದರನ್ನೊಳಗೊಂಡ ಈ ತಂಡ ರಾಜ್ಯ ಹಾಗೂ ಮಂತ್ರಿ ವೇಷಧಾರಿಗಳನ್ನು ಹೊರತುಪಡಿಸಿ ಎಲ್ಲರ ಕೈಯಲ್ಲೂ ಬಲ್ಲಂ ಹಿಡಿದುಕೊಂಡಿರುತ್ತಾರೆ. ಉದ್ದವಾದ ಕಟ್ಟಿಗೆಗೆ ಗಡಿಗೆಯಾಕಾರದ ಕಂಚು, ಹಿತ್ತಾಳೆ, ಅಲ್ಯುಮಿನಿಯಂ ಪಾತ್ರೆ ಕಟ್ಟಿ ಅದರೊಳಗೆ ಶಬ್ದ ಸೃಷ್ಟಿಸುವ ಹರಳುಗಳನ್ನು ಹಾಕಿರುತ್ತಾರೆ. ಅವುಗಳನ್ನು ಹಿಡಿದು ಹಲಗೆ, ಶಹನಾಯಿ, ಸಣ್ಣಡೊಳ್ಳು, ತಾಸೆಗಳ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಾ ವಿವಿಧ ಕಸರತ್ತುಗಳನ್ನು ಪ್ರದರ್ಶಿಸುವರು. ನಡು-ನಡುವೆ ಒಬ್ಬ ಪಂಜಿನವ್ಯಕ್ತಿ ದೀವಟಿಗೆ ಹಿಡಿದು ಬಾಯಲ್ಲಿ ಎಣ್ಣೆ ತುಂಬಿಕೊಂಡು ದೀವಟಿಗೆಗೆ ಉಗ್ಗಿ ದೊಡ್ಡದಾದ ಬೆಂಕಿಯ ಕೆನ್ನಾಲಿಗೆಯನ್ನು ಸೃಷ್ಟಿಸುತ್ತಾನೆ.

**೩.೧.೪. ಚೌಡಿಕೆ-ಜೋಗತಿ ಕುಣಿತ :**

ಚೌಡಿಕೆ ಒಂದು ತಂತಿ ವಾದ್ಯ. ಈ ಭಾಗದಲ್ಲಿ ಇದನ್ನು ಸವದತ್ತಿ ಎಲ್ಲಮ್ಮನ ಆರಾಧನೆಗಾಗಿ ಬಳಸುವರು. ಜೋಗತಿಯರು ಚೌಡಿಕೆ ಮೇಳ ಕಟ್ಟುವರು. ಬಾಗೆನಾಡಿನ ಪ್ರತಿಶತ ೮೦ರಷ್ಟು ಗ್ರಾಮಗಳಲ್ಲಿ ಎಲ್ಲಮ್ಮನ ದೇವಾಲಯಗಳಿದ್ದು,

[illegible]

[illegible]

[illegible]

[illegible]

[illegible]

ಅಲ್ಲೆಲ್ಲಾ ಜೋಗಮ್ಮ ಇಲ್ಲವೇ ಜೋಗಪ್ಪ ಇರುತ್ತಾರೆ. ಅವರು ಮೇಳ ಕಟ್ಟಿಕೊಂಡು ಚೌಡಿಕೆಹಾಡು ಹಾಡುವರು. ಭಕ್ತರು ಎಲ್ಲಮ್ಮದೇವಿಯನ್ನು ತಮ್ಮ ಮನೆಗಳಿಗೆ ಅಹ್ವಾನಿಸುವರು. ಆಗ ಜೋಗಮ್ಮ ಮತ್ತು ಜೋಗಪ್ಪ ಜಗ ಹೊತ್ತು ಭಕ್ತರ ಮನೆಗೆ ಹೋಗುವರು. ಅಲ್ಲಿ ಇಡಿ ರಾತ್ರಿಯನ್ನು ಆರಾಧನೆಯಲ್ಲಿ ಕಳೆಯುವರು. ರಾತ್ರಿಯಿಡಿ ಚೌಡಿಕೆಪದ ಹಾಡುವರು. ಈ ಕಲಾವಿದರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು, ದೇವಿಯ ಹೆಸರಿನಲ್ಲಿ ಕೆಲವರು ದೇವದಾಸಿ ಪದ್ಧತಿಯನ್ನು ಉಳಿಸಿಕೊಂಡವರು.

ಚೌಡಿಕೆಯೊಂದಿಗೆ ಶ್ರುತಿ ಬಳಸುವರು. ಒಂದು ಮೇಳದಲ್ಲಿ ಕನಿಷ್ಠ ಮೂರರಿಂದ ಐದು ಜನ ಕಲಾವಿದರಿರುತ್ತಾರೆ. ಇವರಲ್ಲಿ ಒಬ್ಬಿಬ್ಬರು ಪುರುಷರು ಅಥವಾ ನಪುಂಸಕರು. ಇತ್ತೀಚಿಗೆ ಈ ಮೇಳದಲ್ಲಿ ಡೋಲಕ(ಮದ್ದಳೆ) ಸೇರಿಸಲಾಗಿದೆ. ಆತ ಇದಕ್ಕೊಂದು ಮೆರಗು ನೀಡುತ್ತಿದ್ದಾನೆ. ಇದು ಅಪ್ಪಟ ದೈವಾರಾಧನೆಯ ಸಾಂಪ್ರದಾಯಕ ಕಲಾಮೇಳ. ಚೌಡಿಕೆ ಪದಗಳನ್ನು ಹಾಡುವ ಮೇಳಗಳಲ್ಲಿ ಮುಖ್ಯವಾಗಿ ಎರಡು ಭಾಗಗಳು. ಒಂದು ಮುಮ್ಮೇಳ ಮತ್ತೊಂದು ಹಿಮ್ಮೇಳ. ಬದಲಾಗುತ್ತಿರುವ ಸಂದರ್ಭದಲ್ಲಿ ಚೌಡಿಕೆ ಮೇಳದವರ ಸಂಖ್ಯೆ ಕ್ಷೀಣಿಸುತ್ತಿದೆ. ದೇವದಾಸಿ ಪದ್ಧತಿ ಅನಿಷ್ಟತೆಯ ಕುರಿತು ಸರಕಾರ ಹಾಗೂ ವಿವಿಧ ಸಮಾಜ ಸೇವಾ ಸಂಘಗಳು ಅರಿವು ಮೂಡಿಸುತ್ತಿರುವುದರಿಂದ ದೇವದಾಸಿಯರು ಕ್ರಮೇಣ ಮಾಯವಾಗುತ್ತಿದ್ದಾರೆ. ಇದರೊಂದಿಗೆ ಚೌಡಿಕೆ ಮೇಳಗಳೂ ಸಹ ಕಣ್ಮರೆಯಾಗುತ್ತಿವೆ.

'ಜಗ' ಎಂದರೆ ಎಲ್ಲಮ್ಮನ ಮೂರ್ತಿಯನ್ನು ಇರಿಸಿರುವ ದೊಡ್ಡ ಬಿದರಿನ ಬುಟ್ಟಿ. ಜಗವನ್ನು ಹೊತ್ತವಳು ಜೋಗತಿ, ಜೋಗಮ್ಮ ಅಥವಾ ಜೋಗಪ್ಪ. ಕೆಲವೊಮ್ಮೆ ಜಗದ ಬದಲಾಗಿ ಕೊಡವನ್ನು ದೇವಿ ರೂಪದಲ್ಲಿ ಹೊತ್ತುಕೊಂಡು ಕುಣಿಯುತ್ತಾರೆ. ಈ ಕುಣಿತಕ್ಕೆ ಜೋಗತಿ ಕುಣಿತವೆಂದು ಹೆಸರು. ಆದರೆ ಅವರು ಇದನ್ನು ಕುಣಿತವೆಂದು ಒಪ್ಪಿಕೊಳ್ಳದೆ ಜೋಗಾಡುವದು ಎಂದು ಹೇಳುತ್ತಾರೆ.

ಕೆಲವೊಮ್ಮೆ ಈ ಕುಣಿತದಲ್ಲಿ ನಾಲ್ಕೈದು ಜೋಗತಿಯರು ಇರುತ್ತಾರೆ. ಅವರು ಎಷ್ಟೇ ಬಳುಕಾಡಿದರೂ ಅವರ ತಲೆಯ ಮೇಲಿನ ಕೊಡ ಅಲುಗಾಡುವುದಿಲ್ಲ. ಅದು ಅವರ ತಲೆಯೊಂದಿಗೆ ಅವಿನಾಭಾವ ಸಂಬಂಧ ಏರ್ಪಡಿಸಿಕೊಂಡು ಒಂದು ಅಂಗವೆಂಬಂತೆ ಜೋಗಾಡುತ್ತದೆ. ಅವರು ಕುಣಿಯುತ್ತಾ ವಿವಿಧ ಭಂಗಿಗಳಲ್ಲಿ

ಬಳಕುತ್ತಾರೆ. ನೆಲದ ಮೇಲಿನ ದುಡ್ಡನ್ನು ಬಾಯಿಂದ ಎತ್ತಿಕೊಳ್ಳುವುದು, ನಿಂತ ಜೋಗತಿಯರ ಕಾಲುಸಂಧಿಯಿಂದ ಹಾಯ್ದು ಹೋಗುವುದು, ಮಲಗಿಕೊಳ್ಳುವುದು ಮುಂತಾದವು ಅವರ ನೃತ್ಯ ಕಸರತ್ತುಗಳು. "ಚೌಡಿಕೆಯ ಶ್ರುತಿ ಮತ್ತು ಸಂಬಳದ ಗತಿ ಇವರ ಕುಣಿತಕ್ಕೆ ಹಿನ್ನೆಲೆಯಾಗಿರುತ್ತದೆ. ಕುಣಿಯುವ ಮತ್ತು ಗರ್ರನೆ ತಿರುಗುವ ರಭಸಕ್ಕೆ ಕೊಡ ಅಥವಾ ಜಗಕ್ಕೆ ಕಟ್ಟಿದ ಅಥವಾ ಅಲಂಕರಿಸಿದ ವಸ್ತುಗಳು ಮತ್ತು ಹೂಮಾಲೆಗಳು ಕೂಡಾ ಹಾರಾಡುತ್ತಾ ಹೊಸ ವಿನ್ಯಾಸವೊಂದನ್ನು ರೂಪಿಸುತ್ತವೆ. ಇಬ್ಬರು ಮೂವರಿಗಿಂತ ಹೆಚ್ಚು ಜನ ಜೋಗತಿಯರು ಒಟ್ಟಾದಾಗಲಂತೂ ಸವಾಲಿನ ಕುಣಿತ ಏರ್ಪಡುವ ಮೂಲಕ ಹೆಚ್ಚು ಮನರಂಜನಾತ್ಮಕವೂ ಆಗುತ್ತದೆ. ಕುಣಿಯುವಾಗಿನ ಭಕ್ತಿಭಾವ ಹಾಗೂ ತನ್ಮಯತೆ ಅವರು ಕಲಾವಿದರಲ್ಲ; ಆರಾಧಕರು ಎಂಬುದನ್ನು ಸ್ಪಷ್ಟಪಡಿಸುತ್ತದೆ."[೮]

ಒಂದು ಕಾಲಕ್ಕೆ ಇಲ್ಲಿ ಡೊಳ್ಳಿನ ಮೇಳಗಳನ್ನು ಹೊರತುಪಡಿಸಿದರೆ ಅತಿ ಹೆಚ್ಚು ಚೌಡಿಕೆ ಮೇಳಗಳಿದ್ದವು. ಈಗ ಚೌಡಿಕೆ ಕೇವಲ ಆರಾಧನೆಯ ಕಲೆಯಾಗಿ ಉಳಿಯುವ ಮಟ್ಟಕ್ಕೆ ಬಂದಿದೆ. ತನ್ನ ಕಲೆಗಾರಿಕೆಯ ಗತವೈಭವವನ್ನು ಮರೆಯುವಂತಾಗಿದೆ.

**೩.೧.೫. ವೀರಗಾಸೆ-ಕರಡಿ ಮಜಲು-ಗೊಂದಲಿಗರ ಮೇಳ :**

ವೀರಗಾಸೆ ವೀರಭದ್ರ ಆರಾಧನೆಯ ವೀರನೃತ್ಯ. ಈ ನೃತ್ಯದಲ್ಲಿ ಕನಿಷ್ಠ ಇಬ್ಬರು ಗರಿಷ್ಠ ೨೫ ರಿಂದ ೩೦ ಕಲಾವಿದರಿರಬಹುದು. ಬಾಗೆನಾಡಿಗೆ ಹೊಂದಿಕೊಂಡ ಚಿಕ್ಕೋಡಿ ತಾಲೂಕಿನ ಕೃಷ್ಣಾ ತೀರದಲ್ಲಿ ಯಡೂರು ವೀರಭದ್ರದೇವರು ಇದ್ದು, ಅವನ ಪ್ರಭಾವ ಇಲ್ಲಿ ದಟ್ಟವಾಗಿದೆ. ಆದ್ದರಿಂದ ಮದುವೆ ಮೊದಲಾದ ಶುಭ ಸಂದರ್ಭಗಳಲ್ಲಿ ಹಾಗೂ ಜಾತ್ರೆ, ಮೆರವಣಿಗೆ, ಉತ್ಸವಗಳಲ್ಲಿ ವೀರಗಾಸೆ ಮಾಡುತ್ತಾರೆ. ವೀರಗಚ್ಚೆ ಹಾಕುವುದು ಈ ಕುಣಿತದ ವೈಶಿಷ್ಟ್ಯ. ತಾಳ, ಶ್ರುತಿ, ಸಂಬಾಳ, ಶಹನಾಯಿ ಮತ್ತು ಕರಡಿ ಪಂಚವಾದ್ಯಗಳನ್ನು ಬಳಸುವರು. ಕರಡೆ ಕಡ್ಡಾಯವಾಗಿರಬೇಕು.

---

**೮. ಹಿ. ಚಿ. ಬೋರಲಿಂಗಯ್ಯ : ಕರ್ನಾಟಕ ಜನಪದ ಕಲೆಗಳ ಕೋಶ, ಪುಟ : ೮೨**

[illegible]

[illegible]

[illegible]

[illegible]

ಕೆಂಪು ಪೋಷಾಕು ಹಾಕಿ, ನಡಕ್ಕೆ ವೀರಭದ್ರಮುಖ ಕಟ್ಟಿಕೊಂಡಿರುತ್ತಾರೆ. ವೀರಭದ್ರ ಮುಖಕ್ಕೆ ಚೌರ, ಹಲಗೆ, ಗಂಟೆಗಳಿರುತ್ತವೆ. ಕಿವಿಗೆ ನಾಗರಫಣಿ, ಕೊರಳಿಗೆ ರುದ್ರಾಕ್ಷಿ, ರೆಟ್ಟೆಗಳಿಗೆ ನಾಗಬಂಧಿಗೆ, ಕಾಲಲ್ಲಿ ಗೆಜ್ಜೆ, ಎದೆಯ ಮೇಲೆ ಲಿಂಗದ ಕಾಯಿ ಕಟ್ಟಿಕೊಂಡು, ತಲೆ ಮೇಲೆ ರುಮಾಲು ಧರಿಸಿರುತ್ತಾರೆ. ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಶಸ್ತ್ರ ಹಿಡಿದಿರುತ್ತಾರೆ. ಈ ಶಸ್ತ್ರವನ್ನು ಕೈ, ತುಟಿ, ನಾಲಿಗೆ, ಹೊಟ್ಟೆಗೆ ಹಾಕಿಕೊಳ್ಳುತ್ತಾರೆ. ರಕ್ತ ಬಂದರೆ ಭಸ್ಮ ಲೇಪಿಸುತ್ತಾರೆ. ಶಸ್ತ್ರವನ್ನು ಲಿಂಬೆಹಣ್ಣು ಹಚ್ಚಿ ಸ್ವಚ್ಛಗೊಳಿಸಿರುತ್ತಾರೆ. ಆ ಸಂದರ್ಭದಲ್ಲಿ ತಮ್ಮ ಮೈಯಲ್ಲಿ ವೀರಭದ್ರ ಸೇರಿಕೊಳ್ಳುತ್ತಾನೆಂಬ ಭಾವನೆ. ಎಲ್ಲರೂ ಒಡಬು ಹೇಳುತ್ತಾ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಾರೆ.

**ಮಿತ್ತು ಕುತ್ತಿನ ಗಂಡ, ಕೊಲ್ಲಾಪುರ ಮಾಯಿಯ ಗಂಡ**
**ಮೂಡಲನಾಡಿನ ಮೂಕ ಜಾತಿಯ ಗಂಡ,**
**ನಾಸ್ತಿಕ ಚಾಂಡಲರ ಮಿಂಡ, ಶ್ರೀ ವೀರಭದ್ರ ಖಡೇ ಖಡೇ॥**

ಎಂದು ಉಗ್ಗಡಿಸುತ್ತ ಒಡಬು ಹೇಳುವರು. ಹಿಡಕಲ್ಲ, ಹಾರೂಗೇರಿ, ಬ್ಯಾಕೂಡ, ರಾಯಬಾಗ, ನಸಲಾಪುರ, ಅಳಗವಾಡಿ, ಪಾಲಬಾವಿ, ಮುಗಳಖೋಡ, ಹಂದಿಗುಂದಗಳಲ್ಲಿ ವೀರಗಾಸೆ ತಂಡಗಳಿವೆ. ವೇಷಭೂಷಣವಿಲ್ಲದೆ ಒಡಬು ಹೇಳುವವರು ಪುರವಂತರು.

ಕರಡಿ ೯ ಜನ ಕಲಾವಿದರ ಮೇಳ. ೫ ಜನ ಕರಡಿಯವರು, ಒಬ್ಬ ತಾಳಿನವನು, ಇಬ್ಬರು ಸನಾದಿ, ಒಬ್ಬ ಶ್ರುತಿ. ನೀಲಿ, ಬಿಳಿ, ಹಸಿರುಪೋಷಾಕು ಧರಿಸುವರು. ಬಡಿಗರು ಹಸಿರು ಅಥವಾ ನೀಲಿಪೋಷಾಕು ಧರಿಸುವರು. "ಕರಡಿ ಮೇಳದ ಹೆಜ್ಜೆಗಾರಿಕೆಯನ್ನು ಮೂರು ವಿಧವಾಗಿ ವಿಂಗಡಿಸಬಹುದು. ಅವುಗಳು ಇಂತಿವೆ–

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

**ಎದುರು-ಬದುರು :** ಪಲ್ಲಕ್ಕಿ ಉತ್ಸವ, ಜಾತ್ರೆ, ಮದುವೆ ಇತ್ಯಾದಿ ಸಮಾರಂಭಗಳಲ್ಲಿ ಎದುರು-ಬದುರು ಹೆಜ್ಜೆಗಾರಿಕೆಯಿರುತ್ತದೆ. ಎದುರು ಬದುರು ನಡೆಯುತ್ತ ಹೆಜ್ಜೆ ಹಾಕುವುದು ಇದರ ವೈಶಿಷ್ಟ್ಯ.

**ವೃತ್ತಾಕಾರ :** ವೀರಗಾಸೆಯ ಸಂದರ್ಭದಲ್ಲಿ ವೀರಗಾಸೆಯವರನ್ನು ನಡುವೆ ನಿಲ್ಲಿಸಿ ಸುತ್ತುವರಿದು ಕರಡೆ ಮಜಲು ಮೇಳದವರಿರುತ್ತಾರೆ. ಒಡಬುಗಳಿಗೆ ಅನುಗುಣವಾಗಿ ಕರಡೆ ಮಜಲಿನ ನುಡಿತವಿರುತ್ತದೆ.

**ಅರ್ಧಚಂದ್ರಾಕೃತಿ:** ಇದನ್ನು ಯಾವುದಾದರೂ ಪ್ರದರ್ಶನದ ಸಂದರ್ಭದಲ್ಲಿ ಮಾತ್ರ ಬಳಸಿಕೊಳ್ಳುತ್ತಾರೆ. ಮುಖ್ಯವಾಗಿ ವೇದಿಕೆಯ ಮೇಲೆ ಪ್ರದರ್ಶನವಾಗಬೇಕಾದಾಗ ಈ ರಚನೆಯಿರುತ್ತದೆ.[೯]

ಕರಡೆ ವೀರಭದ್ರ ಆರಾಧನೆಯ ಸಂಪ್ರದಾಯದ ವಾದ್ಯ. ವೀರಗಾಸೆಯ ಸಂದರ್ಭದಲ್ಲಿ ಮಾತ್ರವಲ್ಲದೆ ವೀರಭದ್ರ ಆರಾಧನೆಯ ಬಹಳಷ್ಟು ಸಮಾರಂಭಗಳಲ್ಲಿ ಕರಡೆಯವರು ಬೇಕಾಗುತ್ತಾರೆ. ಆದ್ದರಿಂದಲೆ ಕರಡೆ ಪೂಜನೀಯ ವಾದ್ಯವಾಗಿದೆ. ಮಡಿ ಮಾಡಿಕೊಳ್ಳದೇ ಇದನ್ನು ಬಳಸುವಂತಿಲ್ಲ. ಪಾದರಕ್ಷೆ ಧರಿಸುವಂತಿಲ್ಲ. ಈ ಭಾಗದಲ್ಲಿ ಕರಡಿವಾದಕರಲ್ಲಿ ಪಂಚಾಳರೇ ಹೆಚ್ಚು. ಜಂಗಮ, ಲಿಂಗಾಯತ ಮೊದಲಾದವರು ಕರಡೆಯನ್ನು ನುಡಿಸುವರಾದರೂ ಅವರ ಸಂಖ್ಯೆ ಕಡಿಮೆ. ಹಂದಿಗುಂದದ ಶಂಕ್ರೆಪ್ಪ ಪಾಟೀಲರ ಕರಡಿಮೇಳ ರಾಜ್ಯದಲ್ಲಿಯೇ ಖ್ಯಾತಿ ಪಡೆದಿದೆ. ಹಾರೂಗೇರಿ, ಚಿಂಚಲಿ, ನಿಲಜಿ, ಹಿಡಕಲ್ಲ ಮೊದಲಾದ ಗ್ರಾಮಗಳಲ್ಲಿ ಕರಡಿ ಮೇಳಗಳಿವೆ. ಗುಗ್ಗಳದ ಸಂದರ್ಭದಲ್ಲಿ ಕರಡಿಮೇಳ ಇರಲೇಬೇಕೆಂಬ ಪದ್ಧತಿ ಇತ್ತು. ಆಗ ಪುರವಂತರು ಒಡಬು ಹೇಳುತ್ತಿದ್ದರು. ಈ ಗುಗ್ಗಳ ಕಟ್ಟುವವರೂ ಕೂಡಾ ಪಂಚಾಳರೆ.

ಹೊನ್ನೆ ಅಥವಾ ಬಜ್ಜೆ ಕಟ್ಟಿಗೆಯಿಂದ ಕರಡೆಯ ಮೊರ ತಯಾರಿಸುತ್ತಾರೆ. ಅವುಗಳ ಬಾಯಿಗೆ ಕಬ್ಬಿಣದ ಬಳೆ ಹಾಕಿ, ಆಡಿನ ಚರ್ಮದಿಂದ ಬಿಗಿಯುತ್ತಾರೆ. ಕರಡೆಯ ಉದ್ದ ೧೫ಅಂಗುಲ, ವ್ಯಾಸ ೯ಅಂಗುಲ. ಕರಡೆಯ

---

೯. ಹಿ. ಚಿ. ಬೋರಲಿಂಗಯ್ಯ : ಕರ್ನಾಟಕ ಜನಪದ ಕಲೆಗಳ ಕೋಶ, ಪುಟ : ೨೦೬

[illegible]

ಹೊರವ್ಯಾಸ ೧೫ಅಂಗುಲ. ಚರ್ಮವನ್ನು ನೂಲಿನಿಂದ ಬಿಗಿಯುವರು. ಅದಕ್ಕೆ ೧೨ಕಣ್ಣುಗಳು. ಇದು ಎರಡು ಗುಣಿಗಳಿಂದ ಬಾರಿಸುವ ವಾದ್ಯ. ಒಂದು ತಂಡದಲ್ಲಿ ಕನಿಷ್ಠ ಐವರು ಸದಸ್ಯರು. ಒರ್ವ ಕರಡಿಯವನು, ಇಬ್ಬರು ಡೊಳ್ಳಿನವರು, ಇಬ್ಬರು ತಾಳದವರು.

**ಗೊಂದಲಿಗರು :**

ಗೊಂದಲಿಗರು ಕೊಲ್ಲಾಪುರದ ಅಂಬಾಭವಾನಿ ಅಥವಾ ತುಳಜಾಪುರದ ತುಳಜಾಭವಾನಿಯ ಭಕ್ತರು. ಗೊಂದಲ ಶಕ್ತಿ ಆರಾಧನೆಯ ಒಂದು ಭಾಗ. ಮದುವೆ ಮುಂತಾದ ಸಮಾರಂಭಗಳಲ್ಲಿ ಗೊಂದಲ ಹಾಕುವುದು ಈ ನಾಡಿನ ಹಲವು ಸಂಪ್ರದಾಯಗಳಲ್ಲಿ ಒಂದು. ಮದುವೆಯಾದ ಹೊಸತರಲ್ಲಿ ಅಂದರೆ ಪ್ರಸ್ಥಕ್ಕೂ ಮುಂಚೆ ಮದುಮಕ್ಕಳನ್ನು ಕೂಡಿಸಿ ರಾತ್ರಿಯಿಡಿ ಗೊಂದಲಿಗರು ಗೊಂದಲ ಹಾಕುವರು. ಅಲ್ಲಿ ಚೌಕ(ರಂಗ) ಪೂಜಿಸಿ, ದೊಡ್ಡದಾದ ದೀವಟಿಗೆ ಹೊತ್ತಿಸುವರು. ಅದಕ್ಕೆ ರಾತ್ರಿಯಿಡಿ ಎಣ್ಣೆ ಹಾಕಬೇಕು. ಹೀಗೆ ಎಣ್ಣೆ ಸುಡುವುದು ಆರಾಧನೆಯ ಒಂದು ವಿಧಿ. ಪ್ರತಿ ಮದುಮಕ್ಕಳಿಗೆ ಒಂದೊಂದು ದೀವಟಿಗೆ. ಇದಕ್ಕೆ ಮದುಮಗನ ಸೋದರಮಾವ ಎಣ್ಣೆ ಹಾಕುತ್ತಾನೆ. ಹೀಗೆ ಗೊಂದಲ ಹಾಕುವವರನ್ನು ಗೊಂದಲಿಗರೆಂದು ಕರೆಯುವರು. ಅವರು ರಾತ್ರಿಯಿಡಿ ಕಥನಗೀತೆಗಳನ್ನು ಹಾಡುತ್ತಾ ಜಾಗರಣೆ ಮಾಡಿಸುವರು. ಅವರದು ಮುಗಿಯದ ಕಥೆ. ಹಾಡು, ಕಥೆ ಮತ್ತು ನೃತ್ಯಗಳಿಂದ ಕೂಡಿದ ಗೊಂದಲ ಬಯಲಾಟದ ಪ್ರಾಚೀನ ರೂಪವನ್ನು ನೆನಪಿಸುತ್ತದೆ.

ಸಂಬಾಳ(ಸಮಾಳ), ತಾಳ ಹಾಗೂ ಶ್ರುತಿ ಮುಖ್ಯ ವಾದ್ಯಗಳು. ಒಂದು ಮೇಳದಲ್ಲಿ ಕನಿಷ್ಠ ನಾಲ್ಕರಿಂದ ಗರಿಷ್ಠ ಎಂಟರವರೆಗೂ ಕಲಾವಿದರಿರಬಹುದು. ಗೊಂದಲಿಗರದು ಒಂದು ಪ್ರತ್ಯೇಕ ಜಾತಿಯೇ ಇದೆ. ಹಿ.ಚಿ.ಬೋರಲಿಂಗಯ್ಯನವರು ಹೇಳುವಂತೆ ಅವರಲ್ಲಿ ಅನೇಕ ಕುಲಭೇದಗಳಿವೆ. ಅವರಲ್ಲಿಯ ಮುಕ್ಕಾಲು ಪಾಲು ಜನರು ಅಲೆಮಾರಿಗಳು. ಇವರು ಕಥೋಪಜೀವಿಗಳು. ಆದರೆ ಬಾಗೆನಾಡಿನ ವಿಶೇಷತೆಯೆಂದರೆ ಇಲ್ಲಿ ಲಿಂಗಾಯತ ಗೊಂದಲಿಗರಿರುವುದು. ಅಥಣಿ ಹಾಗೂ

ರಾಯಬಾಗ ತಾಲೂಕುಗಳಲ್ಲಿ ಮಾತ್ರ ಲಿಂಗಾಯತ ಗೊಂದಲಿಗರಿರುವುದನ್ನು ಹಿಂದೆ ಉಲ್ಲೇಖಿಸಿದೆ. ಇಲ್ಲಿ ಇವರಲ್ಲದೆ ಮರಾಠಾ ಗೊಂದಲಿಗರೂ ಇದ್ದಾರೆ.

**೩.೨. ವೃತ್ತಿಯಾಧಾರಿತ ಕಲೆಗಳು :**

ಹಲವು ವೃತ್ತಿ ಕಲಾವಿದರು ಈ ನಾಡಿನಲ್ಲಿದ್ದಾರೆ. ಒಂದು ಕಾಲದಲ್ಲಿ ಆರಾಧನೆಯ ಭಾಗವಾಗಿದ್ದ ಕಲೆಗಳು ಇಂದು ವೃತ್ತಿ ಕಲೆಗಳಾಗಿವೆ. ಕೆಲವು ಹೊಸ ಕಲೆಗಳು ವೃತ್ತಿಯಾಗಿ ಬೆಳೆದಿವೆ. ಹಳ್ಳಿ-ಹಳ್ಳಿಗಳಲ್ಲಿರುವ ಬಡಿಗ, ಕಮ್ಮಾರ, ಕುಂಬಾರ, ಪತ್ತಾರ, ಮೇದಾರ, ಕಂಚಕಾರ, ನುಲಿಗಳು ಹೀಗೆ ಹಲವು ಕರಕುಶಲಕಾರರು ಒಂದು ವಿಧದಲ್ಲಿ ವೃತ್ತಿ ಕಲಾವಿದರೇ. ಕಮ್ಮಾರ ಕಬ್ಬಿಣದಿಂದ, ಕುಂಬಾರ ಮಣ್ಣಿನಿಂದ ಹಲವು ವಸ್ತುಗಳನ್ನು ತಯಾರಿಸುವುದು ಕಲೆ ಎಂದು ಒಪ್ಪಿಕೊಳ್ಳಲೇಬೇಕಾಗುತ್ತದೆ. ಆದರೆ ಅವರು ಪ್ರದರ್ಶನ ಕಲೆಗಳ ಕಲಾವಿದರಲ್ಲ. ಇವರೆಲ್ಲ ಸಾಂಪ್ರದಾಯಿಕ ವೃತ್ತಿ ಕಲಾವಿದರು. ಅಂತಹವರಲ್ಲಿ ಕೆಲವರು ತಮ್ಮ ಕುಶಲತೆಯಿಂದ ನಾಡಿನ ಗಮನ ಸೆಳೆದವರಿದ್ದಾರೆ. ಅಂತಹವರನ್ನು ವಿಶೇಷವಾಗಿ ಪರಿಗಣಿಸಬೇಕಾಗುತ್ತದೆ.

ಕೃಷಿ ಸಂಸ್ಕೃತಿಗೆ ಬೇಕಾದ ಉಪಕರಣಗಳನ್ನು ತಯಾರಿಸಿ ಕೊಡುತ್ತಿದ್ದವರನ್ನು ಆಯಗಾರರೆಂದು ಕರೆಯುತ್ತಿದ್ದರು. ಆಯ ಎಂದರೆ ಆದಾಯದಲ್ಲಿಯ ಒಂದು ಭಾಗ. ರೈತರು ತಮ್ಮ ಜಮಿನುಗಳಲ್ಲಿ ಬೆಳೆದ ಧವಸ-ಧಾನ್ಯ, ಕಾಯಿಪಲ್ಲೆ, ಹಣ್ಣು ಇತ್ಯಾದಿ ಬೆಳೆಗಳಲ್ಲಿಯ ಒಂದು ಆಯ ಆಯಗಾರರಿಗೆ ಮೀಸಲು. ಬಟ್ಟೆಗಳನ್ನು ಹೊಲೆಯುವ ದರ್ಜಿಗಳು, ಚಪ್ಪಲಿಕಟ್ಟುವ ಮೋಚಿಗಳು, ಕೂದಲು ಕತ್ತರಿಸುವ ನಾವಿದರು, ಕಮ್ಮಾರ, ಕುಂಬಾರ, ಬಡಿಗ ಮುಂತಾದವರೆಲ್ಲ ಆಯಗಾರರು. ಒಂದು ದೃಷ್ಟಿಯಲ್ಲಿ ಕೃಷಿ ಸಂಸ್ಕೃತಿ ಎಂದರೆ ಸಮುದಾಯದ ಸಹಜೀವನ. ಅವರದು ಹಣದ ವ್ಯವಹಾರವಲ್ಲ; ವಿನಿಮಯದ ಸಮನ್ವಯ. ಇಂದಿಗೂ ಆಯ ಪದ್ಧತಿ ಇಲ್ಲಿಯ ಕೆಲವು ಹಳ್ಳಿಗಳಲ್ಲಿ ಪ್ರಚಲಿತದಲ್ಲಿದೆ. ಪಟ್ಟಣಗಳಾಗಿ ಪರಿವರ್ತಿತಗೊಳ್ಳುತ್ತಿರುವ ದೊಡ್ಡ ದೊಡ್ಡ ಹಳ್ಳಿಗಳಲ್ಲಿ ಪ್ರತಿಯೊಂದು ಕಸಬು ವ್ಯಾಪಾರವಾಗಿ ಪರಿವರ್ತಿತಗೊಂಡಿದೆ.

ಒಂದು ಕಾಲದಲ್ಲಿ ವೃತ್ತಿಗಳೇ ಜಾತಿಗಳಾದವು. ಇಂದು ಜಾತಿಗಳ ವಿಘಟನೆ ಆರಂಭಗೊಂಡಿದೆ. ಆಯಗಾರರು ಸಾಂಪ್ರದಾಯಿಕ ವೃತ್ತಿಗಳಿಂದ ವಿಮುಖರಾಗಿ ಬೇರೆ ಬೇರೆ ಕಸುಬುಗಳನ್ನು ಒಪ್ಪಿಕೊಂಡು ದುಡಿಯುತ್ತಿದ್ದಾರೆ. ವಿದ್ಯಾಭ್ಯಾಸದ ಅನುಕೂಲತೆ, ಆದಾಯದ ಮೌಲ್ಯಮಾಪನ ಮೊದಲಾದವುಗಳನ್ನು ಪರಿಗಣಿಸಿ ಸಾಂಪ್ರದಾಯಿಕ ಆಯಗಾರರು ತಮ್ಮ ಕುಲಕಸಬುಗಳಿಂದ ಹೊರಬರುತ್ತಿರುವುದು ಸಾಮಾನ್ಯವಾಗಿದೆ.

ಬಹುರೂಪಿಗಳು, ಜಾತಗಾರರು, ಡೊಂಬರು, ದುರುಗಮುರಗಿಗಳು, ಬಜಂತ್ರಿಗಳು ಹೆಳವರು ಮುಂತಾದವರನ್ನು ವೃತ್ತಿ ಕಲಾವಿದರೆಂದು ಪರಿಗಣಿಸಬಹುದು. ಇವರಲ್ಲಿ ಕೆಲವು ಕಲಾವಿದರು ಮಾತ್ರ ತಮ್ಮ ಕಲೆಯನ್ನು ಜೀವಂತವಾಗಿ ಉಳಿಸಿಕೊಂಡಿದ್ದು ಬಹಳಷ್ಟು ಜನರು ಉಪಜೀವನಕ್ಕಾಗಿ ಬೇರೆ ವೃತ್ತಿಗಳನ್ನು ಅವಲಂಬಿಸಿರುವರು. ಈ ನಾಡಿನಲ್ಲಿ ಕೇವಲ ಬಹುರೂಪಿ ಕುಟುಂಬದವರು ಮಾತ್ರ ವೇಷ ಹಾಕುತ್ತಾರೆ. ಒಂದು ಕುಟುಂಬ ಮುಗಳಖೋಡದಲ್ಲಿದೆ, ಮತ್ತೊಂದು ಅಳಗವಾಡಿಯಲ್ಲಿದೆ. ಜಾತಿಗಾರರು ವೇಷ ಹಾಕುವುದನ್ನು ಬಿಟ್ಟು ದನಗಳ ಮಾರುಕಟ್ಟೆಯಲ್ಲಿ ದಲ್ಲಾಳಿಗಳಾಗಿದ್ದಾರೆ. ಈಗ ನಮ್ಮಲ್ಲಿ ಜಾತಗಾರರೆಂದರೆ ಎಮ್ಮೆ ಮಾರಾಟದ ದಲ್ಲಾಳಿಗಳೆಂದೇ ಅರ್ಥ. ಹೀಗೆ ವೃತ್ತಿ ಕಲಾವಿದರು ಅನ್ಯ ವೃತ್ತಿಗಳಿಗೆ ವಲಸೆ ಹೋಗುತ್ತಿರುವುದು ಸಾಮಾನ್ಯವಾಗಿದೆ.

**೩.೩. ಶುದ್ಧ ಮನರಂಜನೆಯ ಕಲೆಗಳು :**

ಆರಾಧನೆ ಅಥವಾ ವೃತ್ತಿ ಹಿನ್ನೆಲೆ ಇಲ್ಲದ ಕೆಲವು ಜನಪದ ಕಲೆಗಳನ್ನು ಶುದ್ಧ ಮನರಂಜನೆಯ ಕಲೆಗಳೆಂದು ಕರೆಯುವರು. ಬಾಗೆನಾಡಿನ ಶುದ್ಧ ಮನರಂಜನೆಯ ಕಲೆಗಳನ್ನು ಹೀಗೆ ವರ್ಗೀಕರಿಸಬಹುದು :

೩.೩.೧. ಕಣಿ–ಹಲಗೆ–ತಾಸೆ–ಲೇಜಿಮ್–ಬ್ಯಾಂಡ್–ಝಾಂಜ್–ಬ್ಯಾಂಜೊ

೩.೩.೨. ಸಂಪ್ರದಾಯದ ಹಾಡು

೩.೩.೩. ಲಾವಣಿ

೩.೩.೪. ಕೀಲು ಕುದುರೆ–ನವಿಲು ಕುಣಿತ

೩.೩.೫. ಕುಸ್ತಿ, ಆಂಗಿಕ ಕಸರತ್ತು ಪ್ರದರ್ಶನ ಕಲೆಗಳು.

[illegible]

[illegible]

[illegible]

[illegible]

### ೩.೧.೧. ಕಣಿ-ಹಲಗೆ-ತಾಸೆ-ಲೇಜಿಮ್-ಬ್ಯಾಂಡ್-ಝಾಂಜ್-ಬ್ಯಾಂಜೊ :

ಹಾರೂಗೇರಿಯ ವಿಷ್ಣು ಕಂಚಕಾರ ಕರ್ನಾಟಕದ ಪ್ರಸಿದ್ಧ ಕಣಿವಾದಕ. 'ಇವನ ಕಣಿಯ ದನಿ ಕೇಳದ ಕಲಾರಸಿಕರಿಲ್ಲ'. ಕಣಿಯ ಮೇಲೆ ಗುಣಿ ಕುಣಿಸುವ ಕಂಚಕಾರನ ಕಲೆಗಾರಿಕೆಗೆ ತಲೆದೂಗದವರಿಲ್ಲ. ಕಣಿ ಮುತ್ತಜ್ಜ, ಅಜ್ಜ, ತಂದೆಯಿಂದ ಬಂದ ಬಳುವಳಿ. ಕಣಿಯ ಗುಣಿ ಹಿಡಿದು ಬೆಳೆದ ವಿಷ್ಣು ತನ್ನ ಬದುಕೆಲ್ಲವನ್ನು ಧಾರೆಯರೆದಿದ್ದಾನೆ.

ಕಣಿ ಹಲಗೆಯಂತಹ ಚರ್ಮ ವಾದ್ಯ. ಅದರ ಖಡಿ ಹಲಗೆಯ ಖಡಿಗಿಂತಲೂ ಹೆಚ್ಚು ಅಗಲ. ಹಲಗೆಯ ಖಡಿ ಕಬ್ಬಿಣದು, ಕಣಿಯ ಖಡಿ ಕಟ್ಟಿಗೆಯದು. ಇದು ತರ್ಯಾನ ಗಿಡದ್ದು. ಮೂರು ತುಂಡುಗಳನ್ನು ಜೋಡಿಸಿ ಖಡಿ(ಗಾಲಿ) ಮಾಡುತ್ತಾರೆ. ಇದರ ವ್ಯಾಸ ೧೫ಅಂಗುಲ. ಇದಕ್ಕೆ ಒಂದು ಅಥವಾ ಒಂದೂವರೆ ವರ್ಷದ ಕೋಣದ ಚರ್ಮ ಬಿಗಿಯುತ್ತಾರೆ.

ಈ ಹಸಿ ಚರ್ಮವನ್ನು ಸುಣ್ಣದಲ್ಲಿ ನೆನೆ ಹಾಕಿ, ಶುಭ್ರವಾಗುವಂತೆ ಹದ ಮಾಡಿ ಕಟ್ಟಿಗೆಯ ಖಡಿಗೆ ಹಾಕಿ ಸುಂದರವಾಗಿ ಅದರದೇ ಎಳೆಯಿಂದ ಅರ್ಧ ಇಂಚಿಗೆ ಒಂದರಂತೆ ಬಿಗಿದು ತಯಾರಿಸುತ್ತಾರೆ. ನಂತರ ಬಿಸಿಲಿನಲ್ಲಿಟ್ಟು ಒಣಗಿಸುತ್ತಾರೆ. ಅದರಂತೆ ಪ್ರತಿಸಲ ಬಾರಿಸುವುದಕ್ಕಿಂತ ಮುಂಚೆ ಕಿಚ್ಚಿನಿಂದ ಕಣ್ ಕಣ್ ಎಂದು ಧ್ವನಿ ಬರುವವರೆಗೆ ಕಾಯಿಸುವುದು. ಕಾಯಿಸಿದ ನಂತರ ತೊಗಲು ಗಟ್ಟಿಯಾಗುತ್ತದೆ. ಹಲಗೆಗಿಂತ ಕಣಿ ಧ್ವನಿ ಎತ್ತರದ್ದು.

ಕಣಿಯನ್ನು ಬಿಗಿಸಲು ಅಂದಾಜು ೫೦೦ರೂ. ವೆಚ್ಚ ತಗಲುತ್ತದೆ ಎನ್ನುತ್ತಾರೆ ವಿಷ್ಣು ಕಂಚಕಾರ. ಕಣಿ ಕೇವಲ ಒಂದೇ ಕೈಯಿಂದ ಬಾರಿಸುವ ವಾದ್ಯ. ಎಡಗೈಯಿಂದ ಹಿಡಿದು ಬಲಗೈಯಲ್ಲಿ ಗುಣಿಯಿಂದ ಬಾರಿಸುವ ವಾದ್ಯ. ಇದರ ಜೊತೆಗೆ ಎರಡು ದಿಮ್ಮದವರಿರುತ್ತಾರೆ. ದಿಮ್ಮು ೨ಅಂಗುಲ ವ್ಯಾಸವುಳ್ಳ ತರ್ಯಾನ ಕಟ್ಟಿಗೆಯ ೩ ತುಕ್ಕಡಿಗಳಿಂದ ಮಾಡಲ್ಪಟ್ಟಿರುತ್ತದೆ. ಚರ್ಮ ಮಾತ್ರ ಎಮ್ಮೆಯದು. ಇದೂ ಸಹ ಒಂದೇ ಕೈಯಿಂದ ಗುಣಿಯಿಂದ ಬಾರಿಸುವುದು. ಆದರೆ ಇದರ ವಿಶೇಷವೆಂದರೆ ಗುಣಿಯಿಂದ ಮಧ್ಯದಲ್ಲಿ ಬಾರಿಸಿದರೆ ಮಾತ್ರ ನಾದ ಹೊರಹೊಮ್ಮುವುದು.

[illegible]

ಕಣಿ ಮೇಳದಲ್ಲಿ ೫ಜನ ಕಲಾವಿದರು. ಒರ್ವ ಕಣಿ ಬಾರಿಸುತ್ತಾರೆ ಇಬ್ಬರು ದಿಮ್ಮು, ಇಬ್ಬರು ತಾಳದವರು. ಕಣಿ ಬಾರಿಸುವವನೇ ಇಲ್ಲಿ ಪ್ರಮುಖ ಕಲಾವಿದ.

**ಹಲಗೆ :**

ಹಲಗೆಯನ್ನು ಸಂಪ್ರದಾನಿವಾದ್ಯವೆಂದೂ ಕರೆಯುವರು. ಒಂದೂವರೆ ಅಡಿ ವ್ಯಾಸದ, ಎರಡು ಅಂಗುಲ ಅಗಲ ಕಬ್ಬಿಣದ ಖಡಿಗೆ ಕೋಣದ ಚರ್ಮವನ್ನು ಬಿಗಿಯುತ್ತಾರೆ. ಹಲಗೆಯನ್ನು ಬಾರಿಸುವಾಗ ಚರ್ಮವನ್ನು ಹದಕ್ಕೆ ತಕ್ಕ ಹಾಗೆ ಕಾಯಿಸುವರು. ಇದು ಕಣಿಯಷ್ಟು ಶಾಖವನ್ನು ತಡೆದುಕೊಳ್ಳುವುದಿಲ್ಲ.

ಹಲಗೆಯ ಮೇಳದಲ್ಲಿ ೭ಜನ ಕಲಾವಿದರು. ಇಲ್ಲಿ ಹಲಗೆಯವನೇ ಪ್ರಮುಖ. ಎರಡನೇ ಸ್ಥಾನ ಡೊಳ್ಳಿನವನದು. ಅನಂತರದವರು ಇಬ್ಬರು ತಾಳಿನವರು. ಒರ್ವ ಶ್ರುತಿ, ಇಬ್ಬರು ಸನಾದಿಯವರು ಹಿಮ್ಮೇಳದಲ್ಲಿ ಇರುತ್ತಾರೆ. ಹಲಗೆಗೆ ತೊಗಲಿನ ಒಂದು ಬಾರ ಕಟ್ಟಿ ಎಡ ಹೆಗಲಿನ ಮೈಗೆ ಹಚ್ಚಿ ಹಿಡಿದುಕೊಂಡು ಎರಡು ಕೈಗಳಿಂದ ಬಾರಿಸುವರು. ಇದನ್ನು ತಾಳ ಮಾತ್ರೆಗಳ ಲೆಕ್ಕಗಳಲ್ಲಿ ನುಡಿಸುವರು. ನಮ್ಮ ನಾಡಿನಲ್ಲಿ ಸಂಪ್ರದಾನಿವಾದಕರೆಲ್ಲ ದಲಿತರು. ಕೆಲವೆಡೆ ದಲಿತೇತರ ಸಂಪ್ರದಾನಿ ವಾದಕರಿದ್ದಾರೆ. ಆದರೆ ಇಲ್ಲಿಲ್ಲ.

ಹಲಗೆ ಉತ್ಸಾಹವನ್ನು ಉಕ್ಕಿಸುವ ವಾದ್ಯ. ಇದು ಮಂಗಳವಾದ್ಯವಲ್ಲ. ಜಾತ್ರೆ, ಮೆರವಣಿಗೆ ಮೊದಲಾದ ಸಂದರ್ಭಗಳಲ್ಲಿ ಬಳಸುವರು. ಶವಸಂಸ್ಕಾರದ ಸಂದರ್ಭದಲ್ಲಿ ಚಿಟಾಲಿಗೆಯನ್ನು ಬಾರಿಸುವರು. ಸವಸುದ್ದಿಯ ಸಿದ್ದಪ್ಪ ಮಾದರ ಬಾಗೆನಾಡಿನ ಪ್ರಸಿದ್ಧ ಸಂಪ್ರದಾನಿವಾದಕ. ಈಗಲೂ ಮುಗಳಖೋಡ, ಅಲಕನೂರ, ಹಾರೂಗೇರಿ, ಚಿಂಚಲಿ, ಹಂದಿಗುಂದಗಳ ಸಂಪ್ರದಾನಿ ಕಲಾವಿದರು ಪ್ರಸಿದ್ಧರು.

ಲೇಜಿಮ್, ಬ್ಯಾಂಡ್, ಬ್ಯಾಂಜೊ, ಝಾಂಜ್ ಮುಂತಾದವು ನೂತನ ಜನಪದ ಕಲಾ ಮೇಳಗಳು. ಇವು ಪಾಶ್ಚಾತ್ಯರಿಂದ ನಮ್ಮಲ್ಲಿಗೆ ಬಂದವು. ಬಹಳ ಹಿಂದೆ ಬಂದದ್ದು ಲೇಜಿಮ್. ಒಂದು ಕಟ್ಟಿಗೆಯ ಕೋಲಿಗೆ ಕಬ್ಬಿಣದ ಬಿಲ್ಲೆಗಳನ್ನು ಸರಪಳಿಯಲ್ಲಿ ಜೋಡಿಸಿ ಲೇಜಿಮ್ ತಯಾರಿಸುತ್ತಾರೆ. ಆ ಕೋಲು ನಮ್ಮ ದಾಂಡು

[illegible]

ಆಕಾರದ್ದು ಇರುತ್ತದೆ. ಅದರ ಉದ್ದ ಸುಮಾರು ೧ಅಡಿ. ಅದರ ನಾದಕ್ಕೆ ತಕ್ಕಂತೆ ಮೇಳದವರು ಹೆಜ್ಜೆ ಹಾಕಿ ಕುಣಿಯುತ್ತಾರೆ. ಒಂದು ಮೇಳದಲ್ಲಿ ಇಷ್ಟೇ ಸಂಖ್ಯೆಯ ಕಲಾವಿದರು ಇರಬೇಕೆಂಬ ನಿರ್ಬಂಧವಿಲ್ಲ. ಈ ಮೇಳದಲ್ಲಿ ಹಲಗೆಯ ಪಾತ್ರ ಮುಖ್ಯವಾದದ್ದು. ಹಲಗೆಯ ಮಾತ್ರೆಗಳಿಗೆ ತಕ್ಕಂತೆ ಲೇಜಿಮ್ ಸಪ್ಪಳ ಹೊರಡುತ್ತದೆ. ಈ ಕಲೆ ಇತ್ತೀಚಿಗೆ ಮಾಯವಾಗುತ್ತಿದೆ. ಏಕೆಂದರೆ ಇದು ತುಂಬ ಶ್ರಮದಾಯಕ ಕಲೆ.

ಒಂದು ಕಾಲದಲ್ಲಿ ಸನಾದಿ ನಮ್ಮ ಮಂಗಳವಾದ್ಯವಾಗಿತ್ತು. ಸನಾದಿ, ಶ್ರುತಿ, ತಾಸೆ, ಡೊಳ್ಳು, ತಾಳ ಈ ಪಂಚವಾದ್ಯಗಳೇ ಮಂಗಳ ವಾದ್ಯಗಳು. ಇವುಗಳಲ್ಲಿ ಪ್ರಧಾನಪಾತ್ರ ಸನಾದಿಯದು. ಬಜಂತ್ರಿಯವರು ಸನಾದಿ ಊದಿದರೆ ಉಳಿದವರು ಜೊತೆವಾದ್ಯಗಳನ್ನು ನುಡಿಸುತ್ತಿದ್ದರು. ಒಂದು ಕಾಲದಲ್ಲಿ ಹಳ್ಳಿ-ಹಳ್ಳಿಯಲ್ಲಿ ಬಜಂತ್ರಿಯವರಿದ್ದರು. ಇಂದು ಸನಾದಿಯ ಸ್ಥಾನವನ್ನು ಕ್ಲೆರೋನೆಟ್ ಆಕ್ರಮಿಸಿಕೊಂಡಿದೆ. ಪಾಶ್ಚಾತ್ಯವಾದ್ಯಗಳಾದ ಕ್ಲೆರೋನೆಟ್, ಶಾಕ್ಸ್‌ಫೋನ್, ಕಾಂಪ್ರೆಟ್, ಈಫೋನ್, ಶುಜಾಫೋನ್, ಕಂಜರ ಮುಂತಾದವು ಸೇರಿಕೊಂಡು ಬ್ಯಾಂಡ್‌ಮೇಳ ವಿಜೃಂಭಿಸಿತು. ಹತ್ತರಿಂದ ಇಪ್ಪತ್ತು ಕಲಾವಿದರೊಳಗೊಂಡ ಈ ಬ್ಯಾಂಡ್‌ಮೇಳ ಇಂಗ್ಲಿಷರ ಕೊಡುಗೆ. ಮದುವೆ ಮೊದಲಾದ ಮಂಗಲ ಪ್ರಸಂಗಗಳಲ್ಲಿ ಮೊಳಗುತ್ತಿದ್ದ ಮಂಗಳವಾದ್ಯಗಳ ಬದಲು ಬ್ಯಾಂಡ್‌ಗಳ ಶಿಸ್ತಿನ ಹೆಜ್ಜೆಯ ನಾದದ ಮೇಳ ಎಲ್ಲೆಡೆ ವ್ಯಾಪಿಸಿತು. ಈಗ ಸನಾದಿಯವರನ್ನು ಕೇಳುವವರೇ ಇಲ್ಲ. ಬಾಗೆನಾಡಿನ ಮಟ್ಟಿಗೆ ಹೇಳುವುದಾದರೆ ಆ ಬಜಂತ್ರಿಯವರೇ ಬ್ಯಾಂಡ್ ಮೇಳ ಕಟ್ಟಿದರು.

೧೮ಜನರ ಒಂದು ಬ್ಯಾಂಡ್ ಮೇಳದ ವಾದಕರು ಹೀಗೆ ಇರುತ್ತಾರೆ:

| | |
|---|---|
| ಕ್ಲೆರೋನೆಟ್ ವಾದಕರು | – ೨ |
| ಶಾಕ್ಸ್‌ಫೋನ್ | – ೪ |
| ಈಫೋನ್ | – ೨ |
| ಸುಜಾಫೋನ್ | – ೨ |
| ದೊಡ್ಡ ಡೋಲು | – ೧ |
| ಪಡಗಮ್ | – ೧ |
| ಗೆಜ್ಜೆ | – ೧ |
| ಕಂಜರ್ | – ೧ |
| ಡೋಲಕ | – ೧ |

[illegible]

[illegible]

[illegible]

ಬ್ಯಾಂಜೊ ಮತ್ತೊಂದು ಆಧುನಿಕ ಜನಪದ ಕಲಾಮೇಳ. ಇದೊಂದು ಗಾನ ಮೇಳ. ಒಂದು ತಂಡದಲ್ಲಿ ೧೨-೨೦ಕಲಾವಿದರಿರುತ್ತಾರೆ. ಕ್ಯಾಸಿಯೊ ಅಥವಾ ಅರ್ಗನ್ ಮುಖ್ಯವಾದ್ಯ. ಇಬ್ಬರು ಗಾಯಕರು ಧ್ವನಿವರ್ಧಕದಲ್ಲಿ ಹಾಡುತ್ತಾರೆ. ಒಂದು ಡೋಲ, ಎರಡು ಬಡಾ ಡೋಲು, ಎರಡು ತಾಸೆ, ಆರು ಕಚ್ಚಿ, ಒಂದು ಗೆಜ್ಜೆ ಮೇಳದಲ್ಲಿರುತ್ತವೆ. ಇದೊಂದು ಚಲಿಸುವ ಸಂಗೀತ ಮೇಳ. (Moving Musical Party). ಇವರು ಹೆಚ್ಚಾಗಿ ಚಲನಚಿತ್ರಗೀತೆಗಳನ್ನು ಹಾಡುವರು. ಮೆರವಣಿಗೆಯ ಮುಂದೆ ಅಥವಾ ಮದುವೆ ಸಮಾರಂಭಗಳಲ್ಲಿ ಬ್ಯಾಂಜೊ ಮೇಳಗಳನ್ನು ಆಮಂತ್ರಿಸಲಾಗುತ್ತದೆ. ಬ್ಯಾಂಡಿನವರು ಕ್ಲೆರೋನೆಟ್‌ನಲ್ಲಿ ನುಡಿಸುವ ಗೀತೆಗಳನ್ನು ಬ್ಯಾಂಜೋದವರು ಹಾಡಿ ತೋರಿಸುತ್ತಾರೆ. ಇಲ್ಲಿಯ ಗಾಯಕರ ವಿಶೇಷತೆಯೆಂದರೆ ಧ್ವನಿ ಅನುಕರಣೆ. ಒಬ್ಬ ಗಾಯಕ ಹೆಣ್ಣು ಧ್ವನಿ ಹೊರಡಿಸುವುದರೊಂದಿಗೆ ಹಲವು ಗಾಯಕರ ಧ್ವನಿಗಳನ್ನು ಅನುಕರಿಸಿ ಹಾಡುವನು.

ಝಾಂಜ್ ಶ್ರೀಮಂತ ಕಲಾವಿದರ ಮೇಳ. ಝಾಂಜ್ ಎಂದರೆ ದೊಡ್ಡ ತಾಳಗಳು. ಒಂದು ತಂಡದಲ್ಲಿ ೨೮-೩೦ಕಲಾವಿದರಿರುತ್ತಾರೆ. ಇವರಲ್ಲಿ ನಾಲ್ಕು ಅಥವಾ ಆರು ತಾಸೆವಾದಕರು, ನಾಲ್ವರು ಡೊಳ್ಳುವಾದಕರು ಉಳಿದವರೆಲ್ಲ ಝಾಂಜ್‌ಗಳು. ಝಾಂಜ್ ಕಲಾವಿದರಲ್ಲಿ ಜೈನಧರ್ಮಿಯರೇ ಹೆಚ್ಚು. ಇವರು ತಮ್ಮ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಈ ಕಲೆಯನ್ನು ಪ್ರದರ್ಶಿಸುವರು. ಸಾಮಾನ್ಯವಾಗಿ ಮದುವೆ, ಜಾತ್ರೆ, ಉತ್ಸವಗಳಿಗೆ ಹೋಗುವುದಿಲ್ಲ. ಹೀಗಿದ್ದರೂ ಧಾರ್ಮಿಕ ಆರಾಧನಾ ಕಲಾ ಪ್ರಕಾರವಲ್ಲ. ಏಕೆಂದರೆ ಈ ಭಾಗದಲ್ಲಿ ಜೈನರು ಹೆಚ್ಚಾಗಿ ಶ್ರೀಮಂತರು. ಅವರಿಗೆ ಕಲಾ ಪ್ರದರ್ಶನದ ಮೂಲಕ ಹಣ ಸಂಪಾದನೆಯ ಅಗತ್ಯವಿಲ್ಲ. ಅವರು ತಮ್ಮ ಹವ್ಯಾಸದಿಂದ ಝಾಂಜ್ ಮೇಳಗಳನ್ನು ಕಟ್ಟಿರುತ್ತಾರೆ. ಇದು ತುಂಬಾ ಖರ್ಚಿನ ಕಲಾಪ್ರಕಾರ. ಜನರು ಕೊಡುವ ಸಂಭಾವಣೆ ಯಾವುದಕ್ಕೂ ಸಾಲದು. ಒಂದು ಪ್ರದರ್ಶನಕ್ಕೆ ೫೦೦೦ ಸಾವಿರಕ್ಕಿಂತಲೂ ಹೆಚ್ಚು ವೆಚ್ಚ ತಗಲುತ್ತದೆ. ಝಾಂಜ್‌ದ ಡೊಳ್ಳು ಹಾಗೂ ತಾಸೆ ಬೃಹತ್ ಗಾತ್ರದವು. ಅವುಗಳನ್ನು ಚಂಡೆಯಂತೆ ನುಡಿಸುತ್ತಾರೆ. ಹೀಗಾಗಿ ಅವುಗಳ ತೊಗಲು ಹರಿದು ಹೋಗುತ್ತದೆ. ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ಅವರ ತಮ್ಮ ಈ ಕಲೆಯನ್ನು ತಮ್ಮ ಸಮುದಾಯದ

[illegible]

[illegible]

ಮನರಂಜನೆಗೆ ಮಾತ್ರ ಸೀಮಿತಗೊಳಿಸಿಕೊಂಡಿದ್ದಾರೆ. ಇತ್ತಿತ್ತಲಾಗಿ ಮಂತ್ರಿ ಮಹೋದಯರು ಬಂದಾಗ ಈ ಮೇಳಗಳು ಆಗಾಗ ಮೆರವಣಿಗೆಯಲ್ಲಿ ಭಾಗವಹಿಸುವುದುಂಟು. ಝಾಂಜ್ ಪತಕದವರು ಕಿವಿ ಗಡಚಿಕ್ಕುವ ಝಾಂಜೇ ಸಪ್ಪಳದೊಂದಿಗೆ ವಿವಿಧ ಆಂಗಿಕ ಕಸರತ್ತುಗಳನ್ನು ಆಕರ್ಷಣೀಯವಾಗಿ ಪ್ರದರ್ಶಿಸುತ್ತಾರೆ.

**೩.೩.೨. ಸಂಪ್ರದಾಯದ ಹಾಡು :**

ಜನಪದ ಕಲೆ ಮತ್ತು ವೃತ್ತಿಗೆ ಅವಿನಾಭಾವ ಸಂಬಂಧ ಕಲ್ಪಿಸಿದವರು ಜನಪದರು. ಅವರು ಹಾಡಿಗಾಗಿಯೇ ವೇಳೆಯನ್ನು ಮೀಸಲಿಡುತ್ತಿರಲಿಲ್ಲ. ತಮ್ಮ ದೈನಂದಿನ ಕೆಲಸಗಳಲ್ಲಿಯ ಶ್ರಮ ಪರಿಹರಿಸಲು ಕೆಲಸದೊಂದಿಗೆ ಹಾಡುವ ಸಂಸ್ಕೃತಿಯನ್ನು ರೂಢಿಸಿಕೊಂಡಿದ್ದರು. ಇದನ್ನೇ ನಾವು ಜನಪದ ಸಂಸ್ಕೃತಿ ಎಂದು ಕರೆಯುವುದು. ಕುಟ್ಟುವಾಗ, ಬೀಸುವಾಗ, ಒಕ್ಕುವಾಗ, ತೂರುವಾಗ ಹೀಗೆ ಒಕ್ಕಲುತನದ ಶ್ರಮದಾಯಕ ಕೆಲಸಗಳೊಂದಿಗೆ ಶ್ರಮ ಪರಿಹಾರದ ಹಾಡುಗಳನ್ನು ಹಾಡುತ್ತಿದ್ದರು. ಕೆಲವೊಮ್ಮೆ ಎಲ್ಲ ಕೆಲಸ ಮುಗಿದ ಮೇಲೆ ಆತ್ಮ ಸಂತೋಷಕ್ಕಾಗಿ ಹಾಡುತ್ತಿದ್ದುದ್ದುಂಟು. ಹಬ್ಬ-ಹರಿದಿನ, ಜಾತ್ರೆ, ಉತ್ಸವ, ಮನೆಯಲ್ಲಿಯ ಶುಭ ಸಂದರ್ಭಗಳಲ್ಲಿ ಹಾಡುವ ರೂಢಿ ಪರಂಪರಾಗತವಾಗಿ ಬಂದದ್ದು. ಹುಟ್ಟಿದ ಮಗುವನ್ನು ತೊಟ್ಟಿಲಿಗೆ ಹಾಕುವಾಗ, ತೊಟ್ಟಿಲು ತೂಗುವಾಗ, ಮೊದಲಗಿತ್ತಿಗೆ ಉಡಿ ತುಂಬುವಾಗ, ಮೈನೆರೆದಾಗ, ಮದುವೆಯಲ್ಲಿ ಮದುಮಕ್ಕಳಿಗೆ ಅರಿಷಿಣ ಹಚ್ಚುವಾಗ, ಬಾಣಂತಿಗೆ ಬಯಕೆಯ ಊಟ ಮಾಡಿಸುವಾಗ ಹೀಗೆ ಹತ್ತು-ಹಲವು ಶುಭಕಾರ್ಯಗಳಲ್ಲಿ ಹೆಣ್ಣುಮಕ್ಕಳು ಹಾಡುತ್ತಾರೆ. ಇನ್ನು ಅದ್ಭುತವೆಂದರೆ ಈ ಹಾಡುಗಾರ್ತಿಯರು ಕೇಳುಗ ಸಮುದಾಯವನ್ನೇ ತಮ್ಮೊಂದಿಗೆ ಬೆರಸಿಕೊಳ್ಳುತ್ತಾರೆ. ಇದಕ್ಕೆ ಅತ್ಯುತ್ತಮ ಉದಾಹರಣೆಯೊಂದಿಗೆ ಸೋಬಾನೆ ಪದಗಳನ್ನು ಹಾಡುವಾಗ ಸೋ ಎನ್ನುವ ಸಂಗಾತಿಯವರದು. ಹಾಡುವವರಿಗಿಂತಲೂ ಸೋ ಎನ್ನುವವರು ಶ್ರೇಷ್ಠರು ಎಂಬ ಭಾವ ಅವರದು.

[illegible]

**ಹಾಡಿದವ್ವನಿಗೈದು ಕೇಳಿದವ್ವನಿಗೆ ಹತ್ತು**
**ಸೋಬಾನದವ್ವನಿಗೆ ಸಮರಾಜ್ಯ । ದೊರೆಯಲಿ**
**ಹಾಡಿ ಡಂಗುರ ಸಾರ್‍ಯಾರ ॥**

**ಹಾಡಿದವ್ವನಕ್ಕಿಂತ ಕೇಳಿದವ್ವನಿಕ್ಕಿಂತ**
**ಸೋಬಾನದವ್ವ ದಣಿದೆವ್ವ । ಮನಿಯಾಗ**
**ಹಾಲುಬಾನುಂಡು ಮಲಗವ್ವ ॥**

**ಸೋಬಾನ ಸೋ ಹಾಡಿ ಬೆವರ್‍ಥನೀ ಸುಸ್ಯಾಡಿ**
**ದನಿಗುಂತು ಕೂತು ಮನದಣಿದು । ಚಂಜ್ಯಾಗ**
**ತೂಗುಮಂಚಕೆ ತೂಗಿರೆ ॥**

ಈ ಸಂಪ್ರದಾಯದ ಹಾಡುಗಳನ್ನು ಹಾಡುವ ಅಜ್ಜಿಯಂದಿರು ಈಗಲೂ ಮನೆ-ಮನೆಯಲ್ಲಿ ಸಿಗುತ್ತಾರೆ. ಪ್ರಾಯಶಃ ಅವರ ನಂತರ ಈ ಹಾಡುಗಳ ಬಿತ್ತುಗಳೆಲ್ಲ ನಾಶವಾಗುವ ಅಪಾಯ ನಮ್ಮ ಮನಸ್ಸನ್ನು ಆವರಿಸಿಕೊಂಡಿರುವುದು ಸುಳ್ಳಲ್ಲ. ಇಲ್ಲಿಯ ಪದಗಳನ್ನು ಪ್ರೊ. ಜ್ಯೋತಿ ಹೊಸೂರ, ಪ್ರೊ. ಬಿ. ಎ. ಜಂಬಗಿಯಂಥವರು ಸಂಗ್ರಹಿಸಿರುವುದುಂಟು. ಆದರೆ ಹಾಡುಗಳ ಸಾಗರಗಳೇ ಜನಪದರ ಕಂಠಗಳಲ್ಲಿವೆ. ಅವುಗಳನ್ನೆಲ್ಲ ಸಂಗ್ರಹಿಸುವ ಕಾರ್ಯ ತ್ವರಿತವಾಗಿ ನಡೆಯದಿದ್ದಲ್ಲಿ ಅವೆಲ್ಲ ನಾಶವಾಗುತ್ತವೆ.

ಒಕ್ಕಲಿಗರ ಎದೆ ತುಂಬ ಹಾಡುಗಳು. ಉತ್ತುವಾಗ, ಬಿತ್ತುವಾಗ, ಕಸ ತೆಗೆಯುವಾಗ, ನೀರು ಹರಿಸುವಾಗ, ಬೆಳೆ ಕೀಳುವಾಗ, ಒಕ್ಕುವಾಗ ಹಾಡುಗಳ ಹೊಳೆ ಹರಿಸುತ್ತಿದ್ದರು. ಈಗ ಕೃಷಿಯ ಆಧುನಿಕರಣದಿಂದಾಗಿ ಆ ಹಾಡುಗಳೆಲ್ಲ ಹಾಳಾದವು. ಈಗ ಈ ನಾಡಿನಲ್ಲಿ ಬೆರಳಣಿಕೆಯಷ್ಟು ಜನ ಹಂತಿಹಾಡು, ಹೋಳಿಹಾಡು, ಏತದ ಹಾಡುಗಳನ್ನು ಹಾಡುವವರಿದ್ದಾರೆ. ಬದಲಾಗುತ್ತಿರುವ ಸಂದರ್ಭದಲ್ಲಿ ಕೃಷಿ ವಿಧಾನಗಳು ಯಾಂತ್ರೀಕರಣಗೊಂಡಿವೆ. ರಾಶಿಯಂತ್ರ ಬಂದ ಮೇಲೆ ಹಂತಿ

ಹೋಯಿತು, ಪಂಪಸೆಟ್ ಬಂದ ಮೇಲೆ ಏತ ಹೊಡೆಯುವುದು ನಿಂತಿತು. ಟ್ರ್ಯಾಕ್ಟರ್‌ಗಳು ಭೂಮಿಯನ್ನು ಊಳತೊಡಗಿದವು. ಹಿಟ್ಟಿನ ಗಿರಣಿಗಳಿಂದ ಮನೆ-ಮನೆಗಳಲ್ಲಿಯ ಬೀಸುವಕಲ್ಲುಗಳು ಸುತ್ತುವುದನ್ನು ನಿಲ್ಲಿಸಿದವು. ಕುಟ್ಟುವ ಮಸೀನ್‌ಗಳು ಒರಳು, ಒಣಿಕೆಗಳನ್ನು ನಿರುಪಯುಕ್ತಗೊಳಿಸಿದವು. ಹೀಗೆ ಕೃಷಿಯ ಯಾಂತ್ರೀಕರಣದಿಂದಾಗಿ ಮೂಲ ಸಂಸ್ಕೃತಿ ಮಾಯವಾಗುತ್ತಿದೆ. ಭವಿಷ್ಯದಲ್ಲಿ ನಮ್ಮ ಮಕ್ಕಳು ಬೀಸುವಕಲ್ಲು, ಒರಳು, ಒಣಿಕೆ, ನೇಗಿಲು, ಮಟ್ಟಿ (ಏತ) ಮುಂತಾದ ವಸ್ತುಗಳನ್ನು ಜಾನಪದ ವಸ್ತು ಸಂಗ್ರಹಾಲಯಗಳಲ್ಲಿ ಕಾಣುವ ಸ್ಥಿತಿ ಬರಬಹುದು. ಆಗ ಜಾನಪದ ಸಾಹಿತ್ಯ ಸಂಪೂರ್ಣ ಮರೆಯಾಗಿ ದಾಖಲೆಗಳಲ್ಲಿ ಮಾತ್ರ ಉಳಿದುಕೊಳ್ಳುತ್ತದೆ. "ಜಾಗತಿಕರಣ, ಆಧುನಿಕರಣ, ಪ್ರಾಪಂಚಿಕರಣ ಮುಂತಾದವುಗಳೆಲ್ಲವೂ ಜನರಲ್ಲಿ ಹೊಸ ಹೊಸ ಆಸಕ್ತಿಗಳನ್ನು ಹುಟ್ಟಿಸಿ ಆ ಮುಖಾಂತರ ಪಾರಂಪರಿಕವಾಗಿ ಬಂದ ಜನಪದ ಹಬ್ಬ ಆಚರಣೆ ಮನರಂಜನೆಗಳಿಗೆ ಕುತ್ತುಂಟಾಗುತ್ತಿವೆ. ಜೊತೆಗೆ ಗೃಹಕೈಗಾರಿಕೆಗಳು ಕಡಿಮೆಯಾದಂತೆ ಅದಕ್ಕೆ ಸಂಬಂಧಿಸಿದ ಜನಪದ ಕಲೆ, ಸಾಹಿತ್ಯಗಳು ಮರೆಯಾಗಲ್ಪಟ್ಟವು. ಸಾಮಾಜಿಕ ಮನೋರಂಜನೆಯನ್ನು ಪಡೆಯುವ ಕಲ್ಪನೆಯು ಮರೆಯಾಗಿ ಮನೋರಂಜನೆ ವೈಯಕ್ತಿಕವಾಯಿತು. ಕುಶಲಕರ್ಮಿಗಳು ಮಾಡುತ್ತಿದ್ದ ಕೆಲಸಗಳನ್ನು ಕೈಗಾರಿಕೆಗಳು ಹೊತ್ತುಕೊಂಡವು. ಆಗ ಕುಶಲಕರ್ಮಿಗಳು ತಮ್ಮ ಕುಶಲತೆಯನ್ನು ಕಳೆದುಕೊಂಡರು. ಆ ಮುಖಾಂತರ ಅವರುಗಳು ಕೂಡಿ ಪಡೆಯುತ್ತಿದ್ದಂತಹ ಮನೋರಂಜನೆ, ಸಂತೋಷ, ಸಾಂಸ್ಕೃತಿಕ ಪದ್ಧತಿ, ಆಚರಣೆಗಳನ್ನು ಬಿಡತೊಡಗಿದರು. ಅಂದರೆ ಸಾಮಾಜಿಕವಾಗಿ ಕೆಲಸ ಮಾಡುತ್ತಿದ್ದವರು ಅನಿವಾರ್ಯವಾಗಿ ತಮ್ಮ ಮೂಲ ಕಸಬುಗಳನ್ನು ಬಿಟ್ಟು ಬೇರೆ-ಬೇರೆ ಉದ್ಯೋಗಗಳನ್ನು ಅರಸಿಕೊಂಡು ಹೋಗತೊಡಗಿದರು. ಆಗ ಸಾಮೂಹಿಕವಾಗಿ ಭಾಗವಹಿಸುತ್ತಿದ್ದ ಕ್ರಿಯೆಗಳು ಕ್ರಮೇಣ ಕಡಿಮೆಯಾಗುತ್ತ ಹೋಗಿ ಬದುಕು ಒಂಟಿಯಾಗುತ್ತಾ ಹೋಯಿತು. ಆ ಮುಖಾಂತರ ಸಾಂಸ್ಕೃತಿಕವಾಗಿಯೂ ವ್ಯಕ್ತಿ ಅಧಃಪತನಕ್ಕಿಳಿದನು. ತನ್ನದಲ್ಲದ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳತೊಡಗಿದನು."[೧೦]

---

**೧೦. ಸಿ. ಟಿ. ಗುರುಪ್ರಸಾದ: ಜನಪದ ಕರ್ನಾಟಕ ೦೫-೦೬ : ಜಾಗತೀಕರಣ ಮತ್ತು ಜಾನಪದ (ಲೇ),ಪುಟ : ೫೬**

[illegible]

೩.೩.೩. ಲಾವಣಿಗಳು :

ಬಾಗೆನಾಡಿನ ಪೂರ್ವದ ಕೊನೆಯ ಗಡಿ ಹಾರೂಗೇರಿ. ಅಲ್ಲಿಂದ ತೇರದಾಳ ಕೇವಲ ೩ ಕಿ.ಮೀ. ದೂರ. ತೇರದಾಳ ಒಂದು ಲಾವಣಿ ಸಂಪ್ರದಾಯದ ತವರು. ಜಮಖಂಡಿ ನಾಗೇಶಿಯ ನೆಲೆ. ತೇರದಾಳ ಹರದೇಶಿಯ ನೆಲೆ. "ನಾಗಿ ನಿನ್ನ ತವರಮನಿ ಜಮಖಂಡಿ। ತೇರದಾಳ ತುಕಾರಾಮನ ಇಟಕೊಂಡಿ। ಕೊಳ್ಳಾನ ಟಿಕ್ಕಿ ಕಳಕೊಂಡಿ। ಕೆರಿಮ್ಯಾಲ ನಿಂತ ಹೊಯಕೊಂಡಿ" ಎಂದು ಈಗಲೂ ಇಲ್ಲಿಯ ಹುಡುಗರು ಹಾಡುತ್ತಾರೆ.

"ಕನ್ನಡ ಲಾವಣಿ ಸಾಹಿತ್ಯಕ್ಕೆ ತೇರದಾಳದವರದು ಅಪಾರವಾದ ಕೊಡುಗೆ. ಕವಿಗಳಾಗಿ ಬರೆದಿದ್ದಾರೆ, ವಸ್ತಾದರಾಗಿ ಕಲಿಸಿದ್ದಾರೆ, ಗಾಯಕರಾಗಿ ಹಾಡಿದ್ದಾರೆ, ಬಹುಶ್ರುತರಾಗಿ ಸಲಹೆ ನೀಡಿದ್ದಾರೆ, ಗೆಳೆಯರಾಗಿ ಹುರಿದುಂಬಿಸಿದ್ದಾರೆ. ಹೀಗೆ ಹತ್ತು ಹಲವು ರೀತಿಯಲ್ಲಿ ಲಾವಣಿ ಸಾಹಿತ್ಯದಲ್ಲಿ ಕೃಷಿ ಮಾಡಿದ್ದಾರೆ,

ಆದರ್ಶಪ್ರಾಯರಾಗಿದ್ದಾರೆ, ಮೈಲುಗಲ್ಲಾಗಿ ನಿಂತಿದ್ದಾರೆ, ತೇರದಾಳದ ಒಂದು ಸಂಪ್ರದಾಯವನ್ನೇ ಹುಟ್ಟುಹಾಕಿ ಬೆಳೆಸಿದ್ದಾರೆ. ಜ್ಯೋತೆಪ್ಪ ಹನಗಂಡಿಯಿಂದ ಪ್ರಾರಂಭವಾಗಿ ಮಹದೇವ ಮೋಪಗಾರನವರೆಗೆ(ಕ್ರಿ.ಶ.೧೭೫೮ ರಿಂದ ಇಲ್ಲಿಯವರೆಗೆ) ಈ ಪರಂಪರೆ ತೇರದಾಳದಲ್ಲಿ ನಡೆದು ಬಂದಿದೆ. ಇವರಲ್ಲಿ ಒಕ್ಕಲಿಗರಿದ್ದಾರೆ, ನೀಲಗಾರರಿದ್ದಾರೆ, ಮೋಪಗಾರರಿದ್ದಾರೆ, ಕಂಚಕಾರರಿದ್ದಾರೆ, ವ್ಯಾಪಾರಸ್ಥರೂ ಇದರಲ್ಲಿ ಸಾಮೀಲಾಗಿದ್ದಾರೆ."[೧೧]

ತೇರದಾಳದ ದಟ್ಟ ಪ್ರಭಾವದಿಂದ ಬಾಗೆನಾಡಿನಲ್ಲಿಯೂ ಅನೇಕ ಲಾವಣಿ ಕವಿಗಳು ಮೂಡಿದರು. ಹಾರೂಗೇರಿಯ ಕವಿ ಅಲಭ್ಯೆರಿ, ಜಲಾಲಪುರದ ರಾಚೋಟಿ, ಮುಗಳಖೋಡದ ರಾಚಯ್ಯಾ ಹಿರೇಮಠ, ಪರಮಾನಂದವಾಡಿ ಮೀರಾಸಾಬ ಮುಲ್ಲಾ, ದಿಗ್ಗೇವಾಡಿಯ ಬಾಬಾಜಿ ಜಮಾದಾರ ಮೊದಲಾದವರು ಈ ನಾಡಿನ ಪ್ರಸಿದ್ಧ ಲಾವಣಿಕಾರರು. ಅವರು ಅನೇಕ ಲಾವಣಿ ಹಾಡುಗಾರರ ಉದಯಕ್ಕೆ ಕಾರಣರಾದರು. ಇವರ ಕುರಿತು ಮಹಾಪ್ರಬಂಧದ ಎರಡನೇ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ.

---

೧೧. ಡಾ. ಸಂಗಮೇಶ ಬಿರಾದಾರ : ಚಾಪ ಹಾಕತೀವ ಡಪ್ಪಿನ ಮ್ಯಾಲ (ಮುನ್ನುಡಿ), ಪುಟ : ೫

ಲಾವಣಿ ಪದಗಳಿಗೆ ಡಪ್ಪಿನ ಹಾಡುಗಳೆನ್ನುತ್ತಾರೆ. ಡಪ್ಪು ಲಾವಣಿ ಮೇಳದ ಮುಖ್ಯ ವಾದ್ಯ. ಲಾವಣಿ ಪದನಿಷ್ಪತ್ತಿ, ಲಾವಣಿ ಸಾಹಿತ್ಯ ಅಥವಾ ಗೀತ ಪ್ರಕಾರ ಕುರಿತು ವಿದ್ವಾಂಸರಲ್ಲಿ ಇಂದಿಗೂ ಚರ್ಚೆ ಕೊನೆಗೊಂಡಿಲ್ಲ. ಲಾವಣಿಕಾರರು ಡಪ್ಪು ಬಾರಿಸುತ್ತಾ ಸಂದರ್ಭವೊಂದನ್ನು ಸುಶ್ರಾವ್ಯವಾಗಿ ಕಥಿಸುವರು.

ಡಪ್ಪು ಒಂದು ಚರ್ಮವಾದ್ಯ. ಇದು ಹಲಗೆ ಹಾಗೂ ಕಣಿಗಳಿಗಿಂತ ಭಿನ್ನವಾದುದು. ಇದರ ವ್ಯಾಸ ೧೪ಅಂಗುಲ. ಎರಡು ಅಂಗುಲ ಅಗಲವುಳ್ಳ ಕಬ್ಬಿಣ ಖಡಿಗೆ ಕೋಣದ ಚರ್ಮ ಹಾಕಿ ಡಪ್ಪನ್ನು ತಯಾರಿಸಿರುತ್ತಾರೆ. ಇದನ್ನು ಕೈಯಿಂದ ಬಾರಿಸುತ್ತಾರೆ. ಡಪ್ಪಿನ ಮೇಳದಲ್ಲಿ ಕನಿಷ್ಠ ೩ಜನ ಕಲಾವಿದರು. ಮುಖ್ಯ ಹಾಡುಗಾರ ಡಪ್ಪು ಬಾರಿಸುತ್ತಾ ಲಾವಣಿ ಹೇಳುತ್ತಾನೆ. ಹಿಮ್ಮೇಳದವರು ಇಬ್ಬರು. ಒಬ್ಬನ ಕೈಯಲ್ಲಿ ಶ್ರುತಿ ಇನ್ನೊಬ್ಬರ ಕೈಯಲ್ಲಿ ತಾಳ ಇರುತ್ತದೆ. "ಲಾವಣಿಗಳನ್ನು ಗೀಗೀ ಪದ, ಡಪ್ಪಿನ ಹಾಡು, ಹಾಡಕಿ ಶಾಹಿರಿ, ಹರದೇಶಿ–ನಾಗೇಶಿ, ಕಲ್ಗಿ–ತುರಾ ಎಂತಲೂ ಕರೆಯುತ್ತಾರೆ. ಈ ಭಾಗದಲ್ಲಿ ಹೆಚ್ಚಾಗಿ ಹರದೇಶಿ–ನಾಗೇಶಿ ಗೀಗೀ ಮೇಳಗಳೇ ಹೆಚ್ಚು. ಇಲ್ಲಿಯ ಲಾವಣಿಕಾರರು ಬಹುಭಾಷಾ ಹಾಡುಗಾರರು. ಒಂದೇ ಲಾವಣಿಯನ್ನು ಕನ್ನಡ, ಮರಾಠಿ, ಹಿಂದಿ ಭಾಷೆಗಳಲ್ಲಿ ಕಥಿಸಿದವರುಂಟು. ಇತ್ತಿತ್ತಲಾಗಿ ಲಾವಣಿ ಹಾಡುಗಾರರ ಸಂಖ್ಯೆ ತುಂಬಾ ಕ್ಷೀಣಿಸಿದೆ.

**೩.೩.೪. ಕೀಲು ಕುದುರೆ –ನವಿಲು ಕುಣಿತ :**

ಇದು ಕುದುರೆ ಸೋಗು ಕುಣಿತ. ಕೀಲು ಕುದುರೆ ಹೆಸರೇ ಹೇಳುವಂತೆ ಕೀಲುಗಳಿಂದ ಕುಣಿತವಾದುದು. ಕಲಾವಿದರು ಎರಡು ಅಡಿ ಉದ್ದ ಮರಗಾಲು ಕಟ್ಟಿಕೊಂಡಿರುತ್ತಾರೆ. ಹಲಗೆಯ ತಾಳಕ್ಕೆ ಹೆಜ್ಜೆ ಹಾಕುತ್ತಾ ಕುಣಿಯುತ್ತಾರೆ. ಬಿದಿರಿನಿಂದ ಕಟ್ಟಿದ ಕುದುರೆಗಳನ್ನು ನಡಕ್ಕೆ ಕಟ್ಟಿಕೊಂಡು, ಅದಕ್ಕೆ ಬಿಳಿ ಅರಿವೆ ಹೊದಿಸುವರು. ಅದಕ್ಕೆ ಕುದುರೆ ಮುಖವಿರುತ್ತದೆ. ಅದು ಜೀವಂತ ಕುದುರೆಯಂತೆ ಕಾಣುತ್ತದೆ. ಒಂದು ಮೇಳದಲ್ಲಿ ಕನಿಷ್ಠ ೮ಜನ ಕಲಾವಿದರಿರುತ್ತಾರೆ. ಇವರಲ್ಲಿ ನಾಲ್ವರು ಕುದುರೆಯವರು, ಇರ್ವರು ನವಿಲುಮೂರ್ತಿಯನ್ನು ಎದೆಗೆ ಕಟ್ಟಿಕೊಂಡಿರುತ್ತಾರೆ. ಎರಡೂ ಕೈಗಳಲ್ಲಿ ಚವರಿ ಹಿಡಿದಿರುತ್ತಾರೆ. ಒಬ್ಬ ಹಲಗೆಯವನು ಮತ್ತು ಒಬ್ಬ

ತಾಳದವನು ಕುದುರೆ, ನವಿಲು ನರ್ತಿಸಿದಂತೆ ಹಲಗೆಯ ತಾಳಕ್ಕೆ ಹೆಜ್ಜೆ ಹಾಕುತ್ತಾರೆ. ನವಿಲು ವೇಷದವರು ರಾಜ-ರಾಣಿಯರಂತೆ ಕಿರೀಟ, ಭುಜಕೀರ್ತಿ, ಎದೆಹಾರ, ನಡುಬಿಲ್ಲೆ, ವೀರಗಾಸೆ ಇತ್ಯಾದಿ ರಾಜಯೋಗ್ಯವಾದ ವೇಷಭೂಷಣ ಕಟ್ಟಿಕೊಂಡಿರುತ್ತಾರೆ. ಕೆಲವರು ರಾಣಿಯರಂತೆ ಜಡೆ ಬಿಟ್ಟಿರುತ್ತಾರೆ. ಕಾಲುಗಳಿಗೆ ಗೆಜ್ಜೆ ಕಟ್ಟಿಕೊಂಡಿರುತ್ತಾರೆ. ಮುಗಳಖೋಡ, ಹಾರೂಗೇರಿ, ಹಿಡಕಲ್ಲ, ಪಾಲಬಾವಿ, ನಿಲಜಿ, ಕೋಳಿಗುಡ್ಡ ಗ್ರಾಮಗಳಲ್ಲಿ ಈ ಸೋಗು ಹಾಕುವ ಕಲಾವಿದರಿದ್ದಾರೆ.

**೩.೩.೫. ಕುಸ್ತಿ, ಆಂಗಿಕ ಕಸರತ್ತು ಪ್ರದರ್ಶನ ಕಲೆಗಳು :**

ಡೊಂಬರು ವೃತ್ತಿನಿರತ ಆಂಗಿಕ ಕಸರತ್ತು ಪ್ರದರ್ಶಕರು. ಇವರಲ್ಲದೆ ಕೆಲವರು ಹವ್ಯಾಸಕ್ಕಾಗಿ ತಮ್ಮ ಕಸರತ್ತುಗಳನ್ನು ಪ್ರದರ್ಶಿಸುವರು. ಮಲ್ಲಕಂಬ ಏರುವುದು, ಗುಂಡು ಎತ್ತುವದು, ಹಲ್ಲಿನಿಂದ ಕೊಡ ಎತ್ತುವುದು, ಕೂದಲಿನಿಂದ ನೇಗಿಲು ಜಗ್ಗುವುದು, ಗುದ್ದಿ ಕಲ್ಲು ಒಡೆಯುವುದು, ಉಸುಕಿನ ಚೀಲ ಎತ್ತುವುದು, ಹಗ್ಗ ಜಗ್ಗುವುದು, ಗುಂಡು ಎಸೆಯುವುದು, ಸಂಗ್ರಾಮ ಕಲ್ಲು ಎತ್ತುವುದು ಮುಂತಾದ ಕಸರತ್ತುಗಳನ್ನು ಪ್ರದರ್ಶಿಸುವ ಯುವಕರು ಈಗಲೂ ಹಳ್ಳಿಗಳಲ್ಲಿದ್ದು ಹಬ್ಬ-ಉತ್ಸವ, ಜಾತ್ರೆ ಮುಂತಾದ ಸಂದರ್ಭಗಳಲ್ಲಿ ತಮ್ಮ ಕಲೆಗಳನ್ನು ಪ್ರದರ್ಶಿಸುವರು.

ಬಾಗೆನಾಡಿನಲ್ಲಿ ಡೊಂಬರಿಲ್ಲ. ಆದರೆ ಹವ್ಯಾಸಿ ಕಸರತ್ತು ಪ್ರದರ್ಶಕರಿಗೆ ಕೊರತೆಯಿಲ್ಲ. ಇಲ್ಲಿಯ ಜನ ಕುಸ್ತಿ ಪ್ರೇಮಿಗಳು. ಇದರಿಂದ ಈ ಭಾಗದಲ್ಲಿ ಪೈಲ್ವಾನರ ಸಂಖ್ಯೆ ಹೆಚ್ಚು. ಹಾರೂಗೇರಿ, ಹಿಡಕಲ್ಲ, ಮುಗಳಖೋಡ, ರಾಯಬಾಗ, ಚಿಂಚಲಿ ಮುಂತಾದೆಡೆಗಳಲ್ಲಿ ಪ್ರಸಿದ್ಧ ಪೈಲ್ವಾನರಿದ್ದಾರೆ.

ಒಂದು ಕಾಲದಲ್ಲಿ ಬಾಗೆನಾಡು ಕುಸ್ತಿ ಕಲಾವಿದರಿಗೆ ಹೆಸರುವಾಸಿ. ಊರಿಗೆ ಹತ್ತೆಂಟು ಕುಸ್ತಿಪಟುಗಳು ಸಿಗುತಿದ್ದರು. ಕೊಲ್ಲಾಪುರದ ಶಾಹುಪುರಿ ತಾಲಿಮನಲ್ಲಿ ತರಬೇತಿ ಪಡೆಯುತ್ತಿದ್ದರು. ಊರಿಗೆ ಕನಿಷ್ಠ ಒಂದಾದರೂ ವ್ಯಾಯಾಮ ಶಾಲೆ ಇರುತಿತ್ತು. ಈಗಲೂ ಹಾರೂಗೇರಿ, ಹಿಡಕಲ್ಲ, ಮುಗಳಖೋಡದಲ್ಲಿ ವ್ಯಾಯಾಮ ಶಾಲೆಗಳು ಜೀವಂತವಾಗಿವೆ. ಹಾರೂಗೇರಿಯ ಗ್ರಾಮ ಪಂಚಾಯತ ಸಮೀಪದಲ್ಲಿರುವ ವ್ಯಾಯಾಮ ಶಾಲೆಯಲ್ಲಿ ೩೦ಜನ ಕುಸ್ತಿ ಪಟುಗಳು ತರಬೇತಿ ಪಡೆಯುತ್ತಿದ್ದಾರೆ. ಬಸಪ್ಪ ಪೂಜಾರಿ, ನೇಮಣ್ಣಾ ಕೊತ್ತಲಗಿ, ಗಜಾನನ ಗಸ್ತಿ, ದುಂಡಪ್ಪಾ ಸವದಿ ಮುಂತಾದ ಹಿರಿಯ ಕುಸ್ತಿ ಪಟುಗಳು ತರಬೇತಿ ನೀಡುತ್ತಾರೆ.

[illegible]

## ೩.೪. ರಂಗಕಲೆಗಳು :

ಶ್ರೀಕೃಷ್ಣಪಾರಿಜಾತ, ಸಂಗ್ಯಾಬಾಳ್ಯಾ, ಶರಣರಾಟ, ರಾಧಾನಾಟದ ನಟ-ನಟಿಯರು ಬಾಗೆನಾಡಿನಲ್ಲಿದ್ದಾರೆ. ಇವರಲ್ಲಿ ಮೊದಲಸ್ಥಾನ ಪಾರಿಜಾತದ ನಟ-ನಟಿಯರದು. ಅನಂತರದವರು ಸಂಗ್ಯಾ-ಬಾಳ್ಯಾ ಡಪ್ಪಿನಾಟದ ಕಲಾವಿದರು. ರಾಧಾನಾಟ, ಶರಣರಾಟ, ದಾಸರಾಟ ಹಿಂದೆ ಪ್ರದರ್ಶಿಸಲ್ಪಡುತ್ತಿದ್ದವು. ಆದರೆ ಈಗಿಲ್ಲ. ಆ ಆಟಗಳ ಕಲಾವಿದರೂ ಕೂಡ ತೀರಿಕೊಂಡಿದ್ದಾರೆ. ಈಗ ನಮಗೆ ಸಿಗುವ ರಂಗ ಕಲಾವಿದರೆಂದರೆ ಪಾರಿಜಾತದವರು ಇಲ್ಲವೆ ಸಂಗ್ಯಾ-ಬಾಳ್ಯಾ ಆಟದವರು. ೩೦-೩೫ವರ್ಷಗಳ ಹಿಂದೆ ಹಳ್ಳಿಗಳಿಗೊಂದು ಆಟದ ತಂಡಗಳಿದ್ದವು. ಈಗ ಸದ್ಯ ನಾಲ್ಕು ಕಂಪನಿಗಳು ಮಾತ್ರ ಉಳಿದಿವೆ. ಅದರಲ್ಲಿ ಎರಡು ಅಳಿವಿನ ಅಂಚಿನಲ್ಲಿವೆ.

ಜಾತಿಗಾರರು ವೇಷ ಹಾಕುವುದನ್ನು ಬಿಟ್ಟಿದ್ದಾರೆ. ಬೆರಳ ಮೇಲೆ ಎಣಿಕೆಯಷ್ಟು ಬಹುರೂಪಿಗಳು ಬಣ್ಣ ಹಚ್ಚಿಕೊಳ್ಳಲು ಉಳಿದಿರುತ್ತಾರೆ. ಈ ಅಪರೂಪದ ಕಲಾವಿದರನ್ನು ಮುಂದಿನ ಅಧ್ಯಾಯದಲ್ಲಿ ಪರಿಚಯಿಸಲಾಗಿದೆ.

ಜನಪದ ಕಲೆಗಳ ವರ್ಗೀಕರಣ ತುಂಬಾ ಕಠಿಣ. ಪ್ರಸ್ತುತ ಅಧ್ಯಾಯದಲ್ಲಿ ಬಾಗೆನಾಡಿನ ಜನಪದ ಕಲೆಗಳ ವರ್ಗೀಕರಣ ಸ್ಥೂಲವಾದುದು. ವರ್ಗೀಕರಣದಲ್ಲಿ ಹಲವು ಸಮಸ್ಯೆಗಳು ಎದುರಾಗುತ್ತವೆ. ಜನಪದ ರಂಗಭೂಮಿ ವಾದ್ಯ, ನೃತ್ಯ, ಗಾಯನಗಳನ್ನೊಳಗೊಂಡ ಅಭಿನಯದ ಭೂಮಿಕೆ. ಇದರಂತೆಯೇ ಕೀಲು ಕುದುರೆ, ನವಿಲು ಕುಣಿತದಂತಹ ನೃತ್ಯಗಳಲ್ಲಿ ವಾದ್ಯಗಳನ್ನು ನಿರ್ಲಕ್ಷಿಸಲಾಗದು. ಇಂತಹ ಅನೇಕ ಸಂಕೀರ್ಣ ಕಲೆಗಳು ನಮ್ಮ ಮುಂದಿವೆ. ಹೀಗಾಗಿ ಒಂದು ಕಲೆಯನ್ನು ಯಾವುದೇ ಒಂದು ನಿರ್ದಿಷ್ಟ ವಿಭಾಗದಲ್ಲಿ ವರ್ಗೀಕರಿಸುವುದು ಸಮಂಜಸವೆನಿಸುವುದಿಲ್ಲ. ಇದರೊಂದಿಗೆ ಇನ್ನೊಂದು ತೊಡಕಿದೆ. ಒಂದು ಕಾಲಕ್ಕೆ ಆರಾಧನಾ ಕೇಂದ್ರಿತವಾಗಿದ್ದ ಕಲೆ ಇಂದು ವೃತ್ತಿಯಾಗಿ ಬೆಳೆದಿವೆ. ಈ ಮಾತನ್ನು ಸಾರಾಸಗಟಾಗಿ ಹೇಳುವಂತಿಲ್ಲ. ಡೊಳ್ಳಿನ ಹಾಡುಗಾರಿಕೆ ವೃತ್ತಿಯಾಗಿ ಬೆಳೆದಿಲ್ಲ. ಆರಾಧನೆಯಾಗಿಯೇ ಉಳಿದಿದೆ. ಆದರೆ ಇದೇ ಮಾತನ್ನು ಗೊಂದಲಿಗರ ಮೇಳಕ್ಕೆ ಅನ್ವಯಿಸುವಂತಿಲ್ಲ. ಗೊಂದಲ ಹಾಕುವುದು ಗೊಂದಲಿಗರ ವೃತ್ತಿಯಾಗಿದೆ. ಈ ಎಲ್ಲ ಇಕ್ಕಟ್ಟುಗಳ ನಡುವೆಯೂ ಅಧ್ಯಯನದ ಅನುಕೂಲತೆಗಾಗಿ ಈ ಸ್ಥೂಲ ವರ್ಗೀಕರಣವನ್ನು ಅನುಸರಿಸಲಾಗಿದೆ. ಇದು ಪರಿಪೂರ್ಣವಾದ

[illegible]

ವರ್ಗೀಕರಣವಲ್ಲವೆಂಬ ಭಾವನೆಯೂ ಇದೆ. ಆದರೂ ಅಧ್ಯಯನದ ಶಿಸ್ತಿಗಾಗಿ ಅನಿವಾರ್ಯವಾಗಿದೆ.

ಹಲವು ಮಿತಿಗಳ ನಡುವೆಯೂ ಈ ಅಧ್ಯಾಯ ಬಾಗೆನಾಡಿನ ಎಲ್ಲ ಜನಪದ ಕಲೆಗಳ ವಿವರಗಳನ್ನು ಒಳಗೊಂಡಿದೆ. ಇವುಗಳಲ್ಲಿ ಈಗ ಬಹಳಷ್ಟು ಅಳಿವಿನಂಚಿನಲ್ಲಿದ್ದರೂ ಕನಿಷ್ಠ ಒಂದಿಬ್ಬರು ಕಲಾವಿದರಾದರೂ ಉಳಿದುಕೊಂಡಿರುವುದು ಗಮನಿಸುವಂತಹದು. ಈಗ ಒಬ್ಬನೆ ಒಬ್ಬ ಜಾತಗಾರ, ಮೂವರು ಲಾವಣಿಕಾರರು, ನಾಲ್ವರು ಬಹುರೂಪಿಗಳು ಉಳಿದುಕೊಂಡಿದ್ದಾರೆ. ಒಂದು ಕಾಲದಲ್ಲಿ ಸಮೃದ್ಧವಾಗಿದ್ದ ಲಾವಣಿಗಳು ಮೌನ ತಾಳಿವೆ. ಈ ದೃಷ್ಟಿಯಿಂದಲೇ ಪ್ರಸ್ತುತ ಅಧ್ಯಾಯ ಮಹತ್ವಪೂರ್ಣವೆನಿಸುತ್ತದೆ.

**********

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

# ಅಧ್ಯಾಯ : ೪ ಬಾಗೆನಾಡಿನ ಜನಪದ ಕಲಾವಿದರು

- ೪.೬ ದೈವಾರಾಧನಾ ಕೇಂದ್ರಿತ ಕಲೆಗಳ ಕಲಾವಿದರು
- ೪.೭ ವೃತ್ತಿ ಕಲಾವಿದರು
- ೪.೮ ಶುದ್ಧ ಮನರಂಜನೆಯ ಕಲಾವಿದರು
- ೪.೯ ರಂಗಕಲಾವಿದರು
- ೪.೧೦ ಸಂಕೀರ್ಣ ಕಲೆಗಳ ಕಲಾವಿದರು

## ಅಧ್ಯಾಯ-ನಾಲ್ಕು

## ಬಾಗೆನಾಡಿನ ಜನಪದ ಕಲಾವಿದರು

ಬಾಗೆನಾಡಿನಲ್ಲಿ ಜನಪದ ಕಲಾಪ್ರಕಾರಗಳು ಅಧಿಕವಾಗಿರುವಂತೆ ಈ ಕಲೆಗಳನ್ನು ಪ್ರದರ್ಶಿಸುವ ಕಲಾವಿದರ ಸಂಖ್ಯೆಯೂ ಹೇರಳ. ಇವರಲ್ಲಿ ಮುಖ್ಯವಾದ ಪಾಲು ಹಾಲುಮತ ಆರಾಧನಾ ಕೇಂದ್ರಿತ ಕಲಾವಿದರದು. ಡೊಳ್ಳಿನ ಹಾಡುಗಾರರು, ಕೈಪಟ್ಟು ವಾದಕರು, ದಟ್ಟಿಕುಣಿತದ ನರ್ತಕರು ಹಾಗೂ ಅಲಗ ಹಾಯುವವರು ಇವರಲ್ಲಿ ಪ್ರಮುಖರು. ಈ ನಾಲ್ಕು ಕಲೆಗಳಲ್ಲಿ ಹೆಚ್ಚಿನ ಕಲಾವಿದರು ಡೊಳ್ಳಿನ ಹಾಡುಗಾರರು ಎಂಬುದು ಸ್ಪಷ್ಟ. ಇದರಂತೆ ಶಿವ-ಹರಿ-ಜಿನಭಜನಾಕಾರರು, ಮೊಹರಂ ಆಚರಣೆಯಲ್ಲಿ ಪಾಲ್ಗೊಳ್ಳುವ ಕರ್ಬಲ್ ಹಾಡುಗಾರರು, ಅಲಾಯಿಹೆಜ್ಜೆ ಹಾಕುವವರು, ದಂಗಲ್‌ಕುಣಿತ ಕುಣಿಯುವವರು, ಎಲ್ಲಮ್ಮನ ಆರಾಧಕರಾದ ಚೌಡಿಕೆಹಾಡು ಹಾಡುವ ಹಾಗೂ ಕುಣಿಯುವ ಜೋಗತಿಯರು, ವೀರಭದ್ರ ಆರಾಧನೆಯ ವೀರಗಾಸೆಯರು, ಕರಡಿ ಮಜಲಿನವರು, ಶಕ್ತಿ ಆರಾಧನೆಯ ಗೊಂದಲಿಗರ ಮೇಳದವರು ಆರಾಧನಾ ಕೇಂದ್ರಿತ ಕಲೆಗಳ ಪ್ರಮುಖ ಕಲಾವಿದರು.

ಬಾಗೆನಾಡಿನ ವೃತ್ತಿ ಕಲಾವಿದರು, ಶುದ್ಧ ಮನರಂಜನೆ ಕಲೆಗಳ ಕಲಾವಿದರು, ರಂಗ ಕಲಾವಿದರು ಹಾಗೂ ಸಂಕೀರ್ಣ ಕಲೆಗಳ ಕಲಾವಿದರನ್ನು ಈ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ಪರಿಚಯಿಸಲಾಗುತ್ತಿದೆ. ಈ ಪರಿಚಯದ ಉದ್ದೇಶ ಶ್ರೇಷ್ಠ ಕಲಾವಿದರ ದಾಖಲೀಕರಣ ಜೊತೆಗೆ ಅವರ ಪ್ರತಿಭೆಯ ಮೌಲ್ಯಮಾಪನ. ಇವುಗಳನ್ನು ಮೂಲವಾಗಿಟ್ಟುಕೊಂಡು ಇಲ್ಲಿಯ ಕಲಾವಿದರ ಸಾಮಾಜಿಕ ಸ್ಥಾನ-ಮಾನಗಳು,

[illegible]

## [illegible]

[illegible]

ಆರ್ಥಿಕ ಸ್ಥಿತಿಗಳು ಹಾಗೂ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಕೂಲಂಕಷವಾಗಿ ಪರಿಶೀಲಿಸುವುದು ಅಧ್ಯಯನದ ಕೇಂದ್ರ ಕಾಳಜಿಯಾಗಿದೆ.

೪.೧. ದೈವಾರಾಧನಾ ಕೇಂದ್ರಿತ ಕಲೆಗಳ ಪ್ರಮುಖ ಕಲಾವಿದರು

೪.೨. ವೃತ್ತಿ ಕಲಾವಿದರು

೪.೩. ಶುದ್ಧ ಮನರಂಜನೆಯ ಕಲಾವಿದರು

೪.೪. ರಂಗಕಲಾವಿದರು

೪.೫. ಸಂಕೀರ್ಣ ಕಲೆಗಳ ಕಲಾವಿದರು

**೪.೧. ದೈವಾರಾಧನಾ ಕೇಂದ್ರಿತ ಕಲೆಗಳ ಪ್ರಮುಖ ಕಲಾವಿದರು:**

**೪.೧.೧. ಡೊಳ್ಳಿನ ಹಾಡುಗಾರರು:**

**ಯಲ್ಪಾರಟ್ಟಿಯ ಮಾರುತಿ ಲಾಳಿ :**

ಈತ ಅಮೋಘಸಿದ್ಧೇಶ್ವರ ಮಾರ್ಗದ ಹಾಡುಗಾರ. ಅನುಭವ ಪದಗಳನ್ನು ಹಾಡುತ್ತಿದ್ದನು. ಬೆಳಗಾವಿ ಜಿಲ್ಲಾ ಮಟ್ಟದಲ್ಲಿ ಅತ್ಯುತ್ತಮ ಹಾಡುಗಾರನೆಂದು ಗುರುತಿಸಿಕೊಂಡಿದ್ದವನು. ೧೨ನೇ ವಯಸ್ಸಿನಲ್ಲಿ ಹಾಡುವುದನ್ನು ಆರಂಭಿಸಿದ ಈತ ತನ್ನ ೮೦ನೇ ವಯಸ್ಸಿನವರೆಗೂ ಹಾಡಿದ. ಈತ ತೀರಿಕೊಂಡು ೭ವರ್ಷಗಳು ಕಳೆದಿವೆ. ಮಲಕಾರಿ ಒಡೆಯರ, ಪಾಂಡಪ್ಪ ಲಾಳಿ, ಯಲ್ಲಪ್ಪ ಲಾಳಿ, ಮಲ್ಲಪ್ಪ ಖವಟಕೊಪ್ಪ ಇವರೆಲ್ಲ ಇವನ ಸಂಗಡಿಗರು. ಯಲ್ಲಪ್ಪ ಗುಳೇದಾರರ ಹಾಡುಗಳನ್ನು ಇವರು ಹಾಡುತ್ತಿದ್ದರು.

ಯಲ್ಪಾರಟ್ಟಿಯಲ್ಲಿ ಸದ್ಯ ನಾಲ್ಕು ಡೊಳ್ಳಿನ ಮೇಳಗಳಿವೆ.

೧. ಶ್ರೀ ಅರಣ್ಯ ಸಿದ್ಧೇಶ್ವರ ಡೊಳ್ಳಿನ ಮೇಳ

೨. ಶ್ರೀ ಮಲಕಾರಿ ಸಿದ್ಧೇಶ್ವರ ಡೊಳ್ಳಿನ ಮೇಳ

೩. ಶ್ರೀ ಮಾಳಿಂಗರಾಯ ಸಿದ್ಧೇಶ್ವರ ಡೊಳ್ಳಿನ ಮೇಳ

೪. ಶ್ರಿ ಅಮೋಘ ಸಿದ್ಧೇಶ್ವರ ಡೊಳ್ಳಿನ ಮೇಳ

**೧. ಶ್ರೀ ಅರಣ್ಯಸಿದ್ಧೇಶ್ವರ ಡೊಳ್ಳಿನ ಮೇಳ :**

ಸಿದ್ರಾಮಪ್ಪ ಲಾಳಿ, ಅದೃಶ್ಯಪ್ಪ ಮೆಟಗುಡ್ಡ, ಸಿದ್ದಪ್ಪ ಜಾಯಗೋಣಿ, ದಾನಪ್ಪ ಗುಳೇದಾರ, ಸಿದ್ರಾಮ ಒಡೆಯರ, ಶ್ರೀಕಾಂತ ಮೆಟಗುಡ್ಡ, ಮುತ್ತಪ್ಪ ಬೆಕ್ಕೇರಿ, ಲಕ್ಷ್ಮಣ ಬೆಕ್ಕೇರಿ ಮತ್ತು ಶಿವಪ್ಪ ಸವದತ್ತಿ ಮೊದಲಾದವರು ಮಾರುತಿ ಲಾಳಿಯ ಶಿಷ್ಯ, ಪ್ರಶಿಷ್ಯ ಪರಂಪರೆಯ ಕಲಾವಿದರು. ಇವರ ಡೊಳ್ಳಿನ ಮೇಳದ ಹೆಸರು 'ಶ್ರೀ ಅರಣ್ಯ ಸಿದ್ಧೇಶ್ವರ ಡೊಳ್ಳಿನ ಮೇಳ'. ಈ ಮೇಳದವರು ೧೯೮೨ರಿಂದ ಆಕಾಶವಾಣಿಯಲ್ಲಿ ಹಾಡುತ್ತಿದ್ದು, ೭ಸಲ ಹಾಡುಗಳು ಆಕಾಶವಾಣಿಯಲ್ಲಿ ಪ್ರಸಾರಗೊಂಡಿವೆ. ಕರ್ನಾಟಕದ ಬೆಂಗಳೂರು, ಬೆಳಗಾವಿ, ತುಮಕೂರು, ಚೆನ್ನಮ್ಮನ ಕಿತ್ತೂರ ಹಾಗೂ ಮಹಾರಾಷ್ಟ್ರದ ಇಚಲಕರಂಜಿ, ಕಡೋಲಿ ಮುಂತಾದೆಡೆಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಬೆಳಗಾವಿ ಜಿಲ್ಲಾ ಮಟ್ಟದ ಸ್ಪರ್ಧೆಗಳಲ್ಲಿ ಹಲವಾರು ಬಹುಮಾನಗಳನ್ನು ಈ ಮೇಳ ಗಳಿಸಿದೆ. ಧ್ವನಿಸುರುಳಿ, ಧ್ವನಿತಟ್ಟೆಗಳು ಬಿಡುಗಡೆಗೊಂಡಿವೆ.

**೨. ಶ್ರೀ ಮಲಕಾರಿ ಸಿದ್ಧೇಶ್ವರ ಡೊಳ್ಳಿನ ಮೇಳ :**

೧೯೮೦ರಲ್ಲಿ ಈ ಮೇಳ ಆರಂಭಗೊಂಡಿತು. ರಾಮಣ್ಣ ಬೀರಣ್ಣನವರ ತಂಡದ ನಾಯಕ. ಸದಾಶಿವ ನಾಯಿಕ, ರಾಮಣ್ಣ ಬೀರಣ್ಣನವರ ತಂಡದ ಮುಮ್ಮೇಳದವರು. ರಾಮಣ್ಣ ಬಂತಿ, ಹಣಮಂತ ಕರ್ಚಿ, ಸಿದ್ದಪ್ಪ ಬೆಕ್ಕೇರಿ, ಮಾರುತಿ ಒಡೆಯರ, ಯಲ್ಲಪ್ಪ ಒಡೆಯರ, ರಾಮಪ್ಪ ಬೇವನೂರ ತಂಡದ ಸದಸ್ಯರು. ಅರಕೇರಿ, ಹುಲಿಜಂತಿ, ಕಡೋಲಿ ಮೊದಲಾದೆಡೆಗಳಲ್ಲಿ ಹಾಡಿರುವರು.

**೩. ಶ್ರೀ ಮಾಳಿಂಗರಾಯ ಸಿದ್ಧೇಶ್ವರ ಡೊಳ್ಳಿನ ಮೇಳ:**

೧೯೯೧ರಲ್ಲಿ ಈ ತಂಡ ಆರಂಭವಾಯಿತು. ಭಸ್ಮಾಸುರ ಪಟಾಯಿತ, ಮಹಾನಿಂಗ ಬನ್ನೂರ ಮುಮ್ಮೇಳದವರು. ಗಿರೀಶ ಮಾದರ, ರಾಮಪ್ಪ ಜಾಯಗೋಣಿ, ಸಚೀನ ಮೆಟಗುಡ್ಡ, ರಾಜು ಅಂಗಡಗೇರಿ, ಶ್ರೀಶೈಲ ಖೋತ, ಸಿದ್ದಪ್ಪ ಪಟಾಯಿತ, ಸಿದ್ದಪ್ಪ ಸವದತ್ತಿ, ಅಮ್ಮಣ್ಣ ನಾಯಿಕ ತಂಡದ ಸದಸ್ಯರು. ಹುಕ್ಕೇರಿ

ತಾಲೂಕಿನ ಹೊಸೂರದಲ್ಲಿ ಜರುಗಿದ ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಹಾಗೂ ರಾಯಬಾಗ ತಾಲೂಕು ಯುವಜನಮೇಳದಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ.

**೪. ಶ್ರೀ ಅಮೋಘ ಸಿದ್ಧೇಶ್ವರ ಡೊಳ್ಳಿನ ಮೇಳ:**

೧೯೮೨ರಲ್ಲಿ ಈ ಮೇಳ ಸಂಘಟಿತಗೊಂಡಿತು. ಮಹಾದೇವ ಒಡೆಯರ ಹಾಗೂ ಸುರೇಶ ಪೂಜೇರಿ ಮುಮ್ಮೇಳದವರು. ಮಲ್ಲಪ್ಪ ಲಾಳಿ, ಅಣ್ಣಪ್ಪ ಪಾಟೀಲ, ಶಿವಸಿದ್ದ ಲಾಳಿ, ಕುಮಾರ ಹಾಲಗುಣಿ, ಲಕ್ಷ್ಮಣ ಬೆಕ್ಕೇರಿ, ಸಿದ್ರಾಮ ಮಾದರ, ಸದಾಶಿವ ಬೆಕ್ಕೇರಿ, ಬಸಪ್ಪ ಲಾಳಿ, ಬಾಬು ವಾಘಮೋಡೆ ಮೊದಲಾದವರು ತಂಡದ ಸದಸ್ಯರು. ಮುಧೋಳ ತಾಲೂಕಿನ ಕುಳಲಿಯಲ್ಲಿ ಜರುಗಿದ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಮೂರನೇ ಬಹುಮಾನ, ಸುರೇಬಾನದಲ್ಲಿ ಜರುಗಿದ ಜಿಲ್ಲಾಮಟ್ಟದ ಸ್ಪರ್ಧೆಯಲ್ಲಿ ಮೊದಲ ಬಹುಮಾನ, ಚಿಂಚಲಿಯಲ್ಲಿ ಜರುಗಿದ ಜಿಲ್ಲಾಮಟ್ಟದ ಸ್ಪರ್ಧೆಯಲ್ಲಿ ಸಮಾಧಾನಕರ ಬಹುಮಾನ. ಹೀಗೆ ಹಲವು ಬಹುಮಾನಗಳನ್ನು ಈ ತಂಡ ಬಾಚಿಕೊಂಡಿದ್ದು, ಬೆಳಗಾವಿ ಜಿಲ್ಲೆಯಲ್ಲಿಯೇ ಮುಂಚೂಣಿಯಲ್ಲಿರುವ ತಂಡಗಳಲ್ಲೊಂದು ಎಂದು ಹೆಸರುವಾಸಿಯಾಗಿದೆ.

ಮಾರುತಿ ಲಾಳಿ ಹಾಗೂ ಮಲಕಾರಿ ಒಡೆಯರ ಪರಂಪರೆಯ ಮೂರನೇ ಮೇಳವಿದು. ಸಿದ್ರಾಮಪ್ಪ ಲಾಳಿ ಹಾಗೂ ಅದೃಶ್ಯಪ್ಪ ಮೆಟಗುಡ್ಡ ಈ ಎಲ್ಲ ತಂಡಗಳಿಗೂ ಸ್ಫೂರ್ತಿ ನೀಡಿದವರು. ಸಿದ್ರಾಮಪ್ಪ ಲಾಳಿಯವರಿಗೆ ೭೪ವರ್ಷ, ಅದೃಶ್ಯಪ್ಪನವರಿಗೆ ೬೩ವರ್ಷ ವಯಸ್ಸು. ಯಲ್ಪಾರಟ್ಟಿಯಲ್ಲಿರುವ ನಾಲ್ಕು ಮೇಳಗಳಿಗೂ ಇವರೇ ಹಿರಿಯರು. ಆದರೆ ಸರಕಾರದ ಮಾಶಾಸನ ಅಥವಾ ಸಹಾಯಧನ ಪಡೆಯದ ಇವರು ಅಭಿಜಾತ ಕಲಾವಿದರು.

**ಹಾರೂಗೇರಿಯ ಮಲಕಾರಿ ಸಿದ್ದಪ್ಪ ರಬಕವಿ :**

ಈತ ಡೊಳ್ಳಿನಪದ, ರಿವಾಯತ, ಲಾವಣಿ, ಹಂತಿ ಹಾಡುಗಳ ಸರದಾರ. ಹಾರೂಗೇರಿಯ ಪ್ರಸಿದ್ಧ ಕವಿ ಅಲಭ್ಯೈರಿಯ ಶಿಷ್ಯ. ೬ನೇ ತರಗತಿಯವರೆಗೆ ಓದಿದ ಈತ ಕನ್ನಡ, ಮರಾಠಿ, ಹಿಂದಿ ಭಾಷೆಗಳಲ್ಲಿ ನಿಷ್ಣಾತನಾಗಿದ್ದ. ಕವಿ

[illegible]

[illegible]

[illegible]

[illegible]

[illegible]

[illegible]

ಅಲಭ್ಯೆರಿಯ ಲಿಪಿಕಾರನಾಗಿದ್ದನೆಂದು ಹೇಳುವರು. ೧೯೯೬ರಲ್ಲಿ ತನ್ನ ೭೦ನೇ ವಯಸ್ಸಿನಲ್ಲಿ ತೀರಿದನು. ಪುರಾಣ ಹೇಳುವುದು, ಹಾಡು ಕಟ್ಟುವುದು, ಲೇಜಿಮ್ ಆಡುವುದು, ಜ್ಯೋತಿಷ್ಯ ಹೇಳುವುದು ಈತನ ಹವ್ಯಾಸಗಳು. ಶ್ರೀ ಅರಣ್ಯ ಸಿದ್ಧೇಶ್ವರ ಡೊಳ್ಳಿನ ಸಂಘ ಕಟ್ಟಿಕೊಂಡು ಹಾಡು ಹಾಡುತ್ತಿದ್ದನು. ಯಲ್ಲಾರಟ್ಟಿಯ ಸ್ಪರ್ಧೆಯಲ್ಲಿ ಬೆಳ್ಳಿಯ ಖಡಿ ಗಳಿಸಿದನು. ಜನರು ಅವನನ್ನು ದೇವತಾ ಮನುಷ್ಯನೆಂದು ಭಾವಿಸುತ್ತಿದ್ದರು. ಭೀಮಪ್ಪ ಬಸಪ್ಪ ಸುಬ್ಬಣ್ಣವರ, ಯಲ್ಲಪ್ಪ ಸವದಿ, ಅಪ್ಪಾಜಿನಾಥ ಉಮರಾಣಿ, ಧರೆಪ್ಪ ಸುಬ್ಬಣ್ಣವರ, ಅಮ್ಮಣ್ಣ ಹಳ್ಳೂರ, ನಿಂಗಪ್ಪ ಖೋತ, ರಾಮಣ್ಣ ಖೋತ ಇವನ ತಂಡದಲ್ಲಿದ್ದರು. ಮಲಕಾರಿ ರಬಕವಿಯವರ ಮಗ ಸಿದ್ದಪ್ಪ ತಂದೆಯ ಪರಂಪರೆಯನ್ನು ಮುಂದುವರೆಸಿದ. ಸಿದ್ದಪ್ಪ ಆಕಾಶವಾಣಿ ಕಲಾವಿದ. ಎಂಟು-ಹತ್ತು ಸಲ ಅವನ ಹಾಡುಗಳು ಪ್ರಸಾರಗೊಂಡಿವೆ. ಹಲವು ಕಾರ್ಯಕ್ರಮಗಳಲ್ಲಿ ಮಿಂಚಿದನು. ಭಗವಂತ ಸಂತಿಯೂರು, ರಾಮಣ್ಣ ಪಾಟೀಲ, ಗೂಳಪ್ಪ ಖೋತ, ಚಂದ್ರಾಮ ಒಡೆಯರ ಮೊದಲಾದವರು ಅವನ ಮೇಳದಲ್ಲಿದ್ದರು. ಈಗ ಇವನಿಗೆ ವಯಸ್ಸು ೬೦. ಹಾಡುವುದು ಸಾಧ್ಯವಾಗುತ್ತಿಲ್ಲ. ತನ್ನ ಹಾಡುಗಾರಿಕೆಯನ್ನು ತಮ್ಮ ಭೀಮಪ್ಪನಿಗೆ ಒಪ್ಪಿಸಿದ್ದಾನೆ. ಕಳೆದ ಏಳೆಂಟು ವರ್ಷಗಳಿಂದ ಜಿಲ್ಲೆಯ ಪ್ರಚಲಿತ ಹಾಡುಗಾರರಲ್ಲಿ ಒಬ್ಬನಾಗಿ ಭೀಮಪ್ಪ ಹೆಸರು ಗಳಿಸಿರುವನು. ನಿಂಗಪ್ಪ ಮಾರುತಿ ಖೋತ, ರಾಮಣ್ಣ ವಡ್ಡೋಡಗಿ, ರಮೇಶ ಕೊಂಕಣಿ, ಬಸಪ್ಪ ಕೋಳಿ, ಸುರೇಶ ವಡ್ಡೋಡಗಿ, ಆನಂದ ವಡ್ಡೋಡಗಿ, ಜ್ಞಾನದೇವ ಖೋತ, ತುಕಾರಾಮ ಖೋತ ಇವನ ಮೇಳದ ಸಂಗಡಿಗರು. ಆಕಾಶವಾಣಿಯಲ್ಲಿ ಇವರ ಹಾಡುಗಳು ಪ್ರಸಾರಗೊಂಡಿವೆ. ಹಾರೂಗೇರಿಯ ಶ್ರೀ ಬಿ.ಆರ್.ದರೂರ, ಸಂಶೋಧನಾ ಕೇಂದ್ರ ಏರ್ಪಡಿಸಿದ ರಾಯಬಾಗ ತಾಲೂಕು ಮಟ್ಟದ ಡೊಳ್ಳಿನ ಹಾಡುಗಳ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಪಡೆದಿದ್ದಾನೆ.

ಅರಣ್ಯಸಿದ್ಧೇಶ್ವರ, ಕರಿಸಿದ್ಧೇಶ್ವರ, ಭೂತಾಳಸಿದ್ಧೇಶ್ವರ, ಮಾಳಿಂಗೇಶ್ವರ, ಮರಡಿ ಮಾಳಿಂಗೇಶ್ವರ, ಮರಡಿ ಕರಿಸಿದ್ಧೇಶ್ವರ, ಅಮೋಘಸಿದ್ಧೇಶ್ವರ ಹೀಗೆ ಏಳು ಮೇಳಗಳು ಹಾರೂಗೇರಿಯಲ್ಲಿವೆ. ಇವುಗಳಲ್ಲಿ ಶ್ರೀ ಅರಣ್ಯಸಿದ್ಧೇಶ್ವರ ಮೇಳವನ್ನು

[illegible]

[illegible]

ಹೊರತುಪಡಿಸಿದರೆ ಕರಿಸಿದ್ಧೇಶ್ವರ ಮೇಳ ಪ್ರಸಿದ್ಧಿಯಲ್ಲಿ ಎರಡನೇ ಸ್ಥಾನ ಪಡೆದಿದೆ. ಮಾರುತಿ ಪೂಜಾರಿ ತಂಡದ ನಾಯಕ. ಕರೆಪ್ಪ ಪೂಜಾರಿ ಹಾಡುಗಾರ.

**ಸಿದ್ದಪ್ಪ ಸಂಕಪ್ಪ ಜಂಬಗಿ :**

ಇವನು ಅಲಭೈರಿ ಶಿಷ್ಯ. ಈ ಭಾಗದಲ್ಲೆಲ್ಲ ಹಾಡುತ್ತ ಅಲೆದಾಡಿದ ಈತನಿಗೆ ಆರು ಜನ ಗಂಡು ಮಕ್ಕಳು. ಗಂಡು ಮಕ್ಕಳೆಲ್ಲ ಉನ್ನತ ಶಿಕ್ಷಣ ಪಡೆದು ಪ್ರತಿಷ್ಠಿತ ಹುದ್ದೆಗಳಲಿದ್ದಾರೆ. ಹಾಡು ಹಾಡಿ ಹಣ ತಂದು ಮಕ್ಕಳಿಗೆ ಶಿಕ್ಷಣ ಕೊಡಿಸಿದವನು ಸಿದ್ದಪ್ಪ ಜಂಬಗಿ. ಈತ ೯೦ವರ್ಷ ಬದುಕಿದ್ದ. ಸಾವಿನ ಹಾಸಿಗೆಯ ಮೇಲೆಯೂ ಹಾಡುತ್ತಿದ್ದ. ಅವನ ಜ್ಞಾಪಕ ಶಕ್ತಿ ಅದ್ಭುತವಾಗಿತ್ತು. ಐದಾರು ಪುರಾಣಗಳು ಇವನಿಗೆ ಕಂಠಪಾಠ. ಮಾರುತಿ ಶೆಟ್ಟೆಪ್ಪ ಜಂಬಗಿ, ರಾಮು ಧರ್ಮಣ್ಣ ಮೊರಬ ಈತನ ಜೊತೆಯ ಹಾಡುಗಾರರು. ಇವರ ತಂಡದ ಬಾಬು ಜಂಬಗಿ ಕೈಪಟ್ಟು ವಾದನದಲ್ಲಿ ಪ್ರವೀಣ.

ಸಿದ್ದಪ್ಪ ಜಂಬಗಿಯವರ ತರುವಾಯ ಭೀಮು ಬೆಳಗಲಿ ಪ್ರಧಾನ ಹಾಡುಗಾರ. ಪ್ರಧಾನಿ ಗಸ್ತಿ, ಈರಪ್ಪ ಸಿದ್ದಪ್ಪ ಮೇಲಾಪೂರ, ಯಲ್ಲಪ್ಪ ಮೇಲಾಪೂರ ಈ ಪರಂಪರೆಯನ್ನು ಮುಂದುವರೆಸಿದರು. ಕರೆಪ್ಪ ಶಿವರಾಯ ಪೂಜಾರಿ ರಾಮ ಮಾಸ್ತರನ ಶಿಷ್ಯ. ಇವನಿಗೆ ಜನ 'ಹಾಡುಗಾರ ಕರೆಪ್ಪ'ನೆಂದೇ ಈಗಲೂ ಕರೆಯುವರು. ಸಿದರಾಯ ಶಿವಮಲ್ಲ ಶೇಗುಣಸಿ, ಕುಮಾರ ಕೆಂಚಪ್ಪ ಪೂಜಾರಿ, ಬೀರಪ್ಪ ತಿಪ್ಪಣ್ಣ ಪೂಜಾರಿ, ಸಿದ್ದಪ್ಪ ಹಾಲಪ್ಪ ಪೂಜಾರಿ ಮೊದಲಾದವರು ಬಾಲ ಕಲಾವಿದರು. ಇವರೆಲ್ಲ ಹದಿನೆಂಟು ವರ್ಷದ ಒಳಗಿನವರು.

ಶ್ರೀ ಭೂತಾಳ ಸಿದ್ಧೇಶ್ವರ ಮೇಳ ಇತ್ತೀಚಿನದು. ಇದರಲ್ಲಿ ಮುಖ್ಯ ಹಾಡುಗಾರ ರಾಮಪ್ಪ ಲಿಂಗಾಯತ.

ಚಂದ್ರಾಮ ದಳವಾಯಿಯವರ ಅಮೋಘಸಿದ್ಧೇಶ್ವರ ಡೊಳ್ಳಿನ ಮೇಳದಲ್ಲಿ ಸೋಪಾನ ಪೂಜಾರಿ ಮುಮ್ಮೇಳದವನು. ಮರಡಿ ಮಾಳಿಂಗೇಶ್ವರ ಮೇಳದ ರಾಮು ರಬಕವಿ, ಮರಡಿ ಕರಿಸಿದ್ಧೇಶ್ವರ ಮೇಳದ ಭಗವಂತ ಬೆಳಗಲಿ, ಹಣಮಂತ ಹಾಡಕಾರ, ಹಾರೂಗೇರಿ ಕ್ರಾಸ್‌ದ ಮಾಳಿಂಗೇಶ್ವರ ಮೇಳದ ಶಿವರಾಯ

[illegible]

[illegible]

[illegible]

[illegible]

[illegible]

ರಾಮು ಕುರಿ, ಜಯಪಾಲ ನೇಮಣ್ಣ ಶಿರಹಟ್ಟಿ ಮುಮ್ಮೇಳದ ಹಾಡುಗಾರರು. ಭೂಪಾಲ ಶಿರಹಟ್ಟಿ, ರಾಮು ಸುಬ್ಬಣ್ಣವರ ಇದೇ ಮೇಳದಲ್ಲಿದ್ದರು.

**ಅಲಕನೂರಿನ ರಾಮ ಪೂಜಾರಿ:**

ಸುಮಧುರ ಕಂಠದ ಜನಪ್ರಿಯ ಹಾಡುಗಾರ ಮತ್ತು ಕವಿಗಾರ. ಈತ ಒಮ್ಮೆ ಅಥಣಿ ತಾಲೂಕಿನ ಮದಭಾವಿಯ ಸಿದ್ಧೇಶ್ವರ ದೇವಾಲಯದಲ್ಲಿ ಹಾಡುತ್ತಿದ್ದಾಗ ಹೊರಗೆ ಕೃಷ್ಣ ಪಾರಿಜಾತ ನಡೆದಿತ್ತು. ಬೈಲಹೊಂಗಲ ಬಾಳಪ್ಪನ ಬೈಲಾಟವದು. ದೇವರ ಗದ್ದುಗೆ ಹತ್ತಿರ ಡೊಳ್ಳಿನ ಹಾಡುಗಾರಿಕೆ, ಹೊರಗೆ ರಂಗ ಪ್ರದರ್ಶನ. ಕೃಷ್ಣ ಪಾರಿಜಾತದಲ್ಲಿ ಕೊರವಂಜಿ ಸನ್ನಿವೇಶ ಬಂದಾಗ ರಾಮ ಪೂಜಾರಿ ತನ್ನ ಹಾಡಿನಲ್ಲಿ ಅದೇ ಸನ್ನಿವೇಶ ಕಥಿಸಿದಾಗ ಪಾರಿಜಾತದ ಪ್ರೇಕ್ಷಕರೆಲ್ಲ ಓಡಿ ಒಳ ಬಂದರೆಂದು ಅಲಕನೂರ ಜನ ಹೇಳುತ್ತಾರೆ. ಇನ್ನೊಂದು ಸಂದರ್ಭದಲ್ಲಿ ಅವನ ಹಾಡಿನ ಮಾಧುರ್ಯಕ್ಕೆ ಸೋತು, ವೇಶ್ಯೆಯೊಬ್ಬಳು ತನ್ನ ಕೈಯಲ್ಲಿಯ ತನ್ನ ಕೂಸನ್ನೇ ಚೆಲ್ಲಿದಳಂತೆ. ಒಟ್ಟಿನಲ್ಲಿ ಬದುಕಿದ್ದಾಗಲೇ ಹಲವು ದಂತ ಕಥೆಗಳಿಗೆ ವಸ್ತುವಾದ ರಾಮ ಪೂಜಾರಿ ಅಲಕನೂರಿನ ಡೊಳ್ಳಿನ ಮೇಳಗಳ ಆರಾಧ್ಯ ದೈವ. ಈತ ಹಾರೂಗೇರಿಯ ಕವಿ ಅಲಭೈರಿಯ ಶಿಷ್ಯ. ಅವರು ಕಥೆ ಕೊಡುತ್ತಿದ್ದರು. ಇವನು ಅದನ್ನು ಹಾಡಾಗಿ ಪರಿವರ್ತಿಸಿಕೊಳ್ಳುತ್ತಿದ್ದ. ತಾನು ಹಾಡು ಕಟ್ಟಿದರೂ ಅಲಭೈರಿಯ ಆಗಮ ಹಾಕುತ್ತಿದ್ದ. ಕರೆಪ್ಪ ಬಾಗಿ, ಶಂಕ್ರೆಪ್ಪ ನಿಂಗಪ್ಪ ಪೂಜಾರಿ, ಕರೆಪ್ಪ ರಾಯಪ್ಪ ಪೂಜಾರಿ, ರಾಮು ಚೌಗಲಾ ಮೊದಲಾದವರು ಜೊತೆಗಾರರು. ಕರೆಪ್ಪ ಕಟಬರ ರಾಮ ಪೂಜಾರಿಯ ಅನುಭಾವದ ಗುರು. ಯಾರಾದರೂ ಸವಾಲು ಹಾಕಿದರೆ ಈತ ಜವಾಬು ಹೇಳುತ್ತಿದ್ದ. ರಾಮ ಪೂಜಾರಿ ಸತ್ತು ೪೦ವರ್ಷ ಕಳೆದಿವೆ. ಕರೆಪ್ಪ ಕಟಬರ ತೀರಿಕೊಂಡು ೫೦ ವರ್ಷ ಸಂದಿವೆ.

ರಾಮ ಪೂಜಾರಿಯ ತರುವಾಯ ರಾಮಪ್ಪ ಭೀಮಪ್ಪ ಚೌಗಲಾ ಆ ಪರಂಪರೆಯನ್ನು ಮುಂದುವರೆಸಿದನು. ಇವನ ಜೊತೆಗಾರ ಕರೆಪ್ಪ ದೊಡ್ಡಪ್ಪ ಪೂಜಾರಿ. ಇಟ್ಟಪ್ಪ ರಾಯಪ್ಪ ಶಿರಡೋಣಿ ಈ ಪರಂಪರೆಯ ಮೂರನೇ

ವಾರಸುದಾರ. ಬಾಳಪ್ಪ ಬಾಗಿ, ಅಜ್ಜಪ್ಪ ಪೂಜಾರಿ, ಮಹಾದೇವ ಕರಿಗಾರ, ಸಿದ್ದಪ್ಪ ಪೂಜಾರಿ, ಕರೆಪ್ಪ ಕರಿಗಾರ ಮೊದಲಾದವರು ಇವರ ಮೇಳದ ಸದಸ್ಯರು.

ಅಲಕನೂರದಲ್ಲಿ ಈಗ ಆರು ಮೇಳಗಳಿವೆ. ಇವುಗಳಲ್ಲಿ ಮಾಯಪ್ಪ ಪೂಜಾರಿಯವರದು ಹಾಗೂ ವಿಠ್ಠಪ್ಪ ಶಿರಡೋಣಿ, ಬಾಳಪ್ಪ ಬಾಗಿಯವರದು ಹಳೆಯ ಮೇಳಗಳು. ವಿಠ್ಠಪ್ಪ ಶಿರಡೋಣಿಯವರದು ಅಲಭೈರಿ ಸಂಪ್ರದಾಯ. ಮಾಯಪ್ಪ ಪೂಜಾರಿಯವರದು ಸಂಕೀರ್ಣ ಸಂಪ್ರದಾಯ.

ಕರೆಪ್ಪ ನಡಟ್ಟಿ, ರಾಮಪ್ಪ ಪೂಜಾರಿ, ಅಜ್ಜಪ್ಪ ಪಾಟೀಲ, ಪರಶುರಾಮ ಅವರಖೋಡ, ಸಿದ್ಧಾರೂಢ ಪೂಜಾರಿ, ಶ್ರೀಕಾಂತ ಪೂಜಾರಿ, ಲಕ್ಕಪ್ಪ ಹಾಲಗೊಂಡ, ಅಪ್ಪಣ್ಣ ಕರಿಗಾರ, ರಾಮಣ್ಣ ದರೂರ, ನಂದೆಪ್ಪ ಚೌಗಲಾ ಇವರ ಮೇಳಗಳು ಈಗಿನವು. ಮಾಯಪ್ಪ ಶಿವಪ್ಪ ಪೂಜಾರಿಯವರ ಹಾಡುಗಳನ್ನು ಇವರೆಲ್ಲ ಹಾಡುವರು.

ರಾಮಣ್ಣ ಚೌಗಲಾ, ವಿಠ್ಠಲ ಶಿರಡೋಣಿ, ಮಾಯಪ್ಪ ಪೂಜಾರಿ, ಲಕ್ಕಪ್ಪ ಚೌಗಲಾ, ಲಕ್ಕಪ್ಪ ಹಾಲಗೊಂಡ ಅಲಕನೂರಿನ ಆಕಾಶವಾಣಿ ಕಲಾವಿದರು. ಮಾಯಪ್ಪ ಪೂಜಾರಿಯವರ ಮೇಳಕ್ಕೆ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬಹುಮಾನ ಬಂದಿದೆ.

**ಹಂದಿಗುಂದದ ಪವಾಡೆಪ್ಪ ನಿಂಗಪ್ಪ ಪೂಜಾರಿ :**

ಮಾಳಿಂಗರಾಯ ಮಾರ್ಗದ ಹಾಡುಗಾರ. ಹಣಮಪ್ಪ ಲಗಮಪ್ಪ ಮೇಟಿ ಜೊತೆಗಾರ. ಹಿಮ್ಮೇಳದಲ್ಲಿ ಭರಮಪ್ಪ ಹಾಲಪ್ಪ ಮೇಟಿ, ಹಾಲಪ್ಪ ದುಂಡಪ್ಪ ಯರಗುದ್ರಿ ಹಾಡುತ್ತಿದ್ದರು. ಪವಾಡೆಪ್ಪನ ನಂತರ ಭರಮಪ್ಪ ಮುಂಚೂಣಿ ಹಾಡುಗಾರನಾದನು. ಲಗಮಪ್ಪ ಸಂಗಪ್ಪ ಮೇಟಿ, ಭರಮಪ್ಪ ಹಾಲಪ್ಪ ಪೂಜಾರಿ ಹಿಮ್ಮೇಳದವರು. ಪವಾಡೆಪ್ಪನ ವಾರಸುದಾರ ದುಂಡಪ್ಪ ಹಾಲಪ್ಪ ಯರಗುದ್ರಿ. ಆಕಾಶವಾಣಿ ಹಾಗೂ ದೂರದರ್ಶನಗಳಲ್ಲಿ ಇವರ ಹಾಡುಗಳು ಪ್ರಸಾರಗೊಂಡಿವೆ. ಇಲ್ಲಿ ಹಾಲಪ್ಪ ಲಕ್ಷ್ಮಣ ಪೂಜಾರಿ ಹಾಗೂ ಸುರೇಶ ಬೀರಪ್ಪ ಪೂಜಾರಿಯವರ

[illegible]

[illegible]

[illegible]

[illegible]

[illegible]

[illegible]

ಇನ್ನೆರಡು ಮೇಳಗಳಿವೆ. ಹಾಲಪ್ಪ ಹಾಗೂ ಸುರೇಶ ಪೂಜಾರಿಯವರ ಮೇಳಗಳು ಹೆಚ್ಚು ಪ್ರಸಿದ್ಧಿ ಪಡೆದಿವೆ.

ಹಾಲಪ್ಪ ಪೂಜಾರಿ ಮೇಳದ ಸದಸ್ಯರು:

ಹಾಲಪ್ಪ ಪೂಜಾರಿ
ಮಲ್ಲಪ್ಪ ಲಗಮಪ್ಪ ಮೇಟಿ
} ಮುಮ್ಮೇಳದವರು

ಹಾಲಪ್ಪ ಲಗಮಪ್ಪ ಮೇಟಿ
ಶಿವನಿಂಗ ಗಂಗಪ್ಪ ಮೇಟಿ
ಶ್ರೀಶೈಲ ಮಹಾನಿಂಗ ಪೂಜಾರಿ
ಮಾಳಪ್ಪ ಸಂಗಪ್ಪ ಮೇಟಿ
} ಹಿಮ್ಮೇಳದವರು

ಸುರೇಶ ಬೀರಪ್ಪ ಪೂಜಾರಿಯವರ ಮೇಳದ ಸದಸ್ಯರು :

ಸುರೇಶ ಬೀರಪ್ಪ ಪೂಜಾರಿ
ಲಕ್ಷ್ಮಣ ನಿಂಗಪ್ಪ ಯಾದವಾಡ
} ಮುಮ್ಮೇಳದವರು

ಮಹಾಲಿಂಗ ಯರಗುದ್ರಿ
ಸಿದರಾಯ ಪೂಜಾರಿ
ಮಲ್ಲಪ್ಪ ಲಗಮಪ್ಪ ಮೇಟಿ
ಶ್ರೀಶೈಲ ಮಹಾಲಿಂಗಪ್ಪ ಪೂಜಾರಿ
ಮಲ್ಲಪ್ಪ ಲಕ್ಷ್ಮಣ ಪೂಜಾರಿ
} ಹಿಮ್ಮೇಳದವರು

ಹಂದಿಗುಂದದ ಭರಮಪ್ಪ ಹಾಲಪ್ಪ ಮೇಟಿ, ಮಲ್ಲಪ್ಪ ಕರೆಪ್ಪ ತಿಪ್ಪಣ್ಣವರ, ಬಸಪ್ಪ ಮಾರುತಿ ಡುಮ್ಮಾಣಿ, ಈರಪ್ಪ ರಾಮಪ್ಪ ಬಾಡಗಿ, ಕಪ್ಪಲಗುದ್ದಿಯ ಧರೆಪ್ಪ ರಾಮಪ್ಪ ಸನದಿ, ಸದಾಶಿವ ಲಕ್ಕಪ್ಪ ಸನದಿ, ಮಲಕಾರಿ ಮಾಯಪ್ಪ ದುರದುಂಡಿ, ಸಿದ್ದಪ್ಪ ರಂಗಪ್ಪ ಬಿಳಿಕುರಿ, ಹನಮಂತ ಬಸಪ್ಪ ಬಿಳಿಕುರಿ, ಲಕ್ಕಪ್ಪ ಅಡಿವೆಪ್ಪ ಬಿಳಿಕುರಿ, ಕೃಷ್ಣಪ್ಪ ಯಲ್ಲಪ್ಪ ಬಿಳಿಕುರಿ, ಶಿವಲಿಂಗ ಮಾತಪ್ಪ ಬಿಳಿಕುರಿ,

ಸವಸುದ್ದಿಯ ಬಾಳಪ್ಪ ಶಿವರಾಯ ಜೋಡಟ್ಟಿ, ಬೀರಪ್ಪ ಸಿದ್ರಾಮ ತೇರದಾಳ, ಲಕ್ಕಪ್ಪ ಬಾಳಪ್ಪ ಪೂಜೇರಿ, ಬೀರಪ್ಪ ಮಲಕಾರಿ ಬೆಳಗಲಿ, ಲಕ್ಕಪ್ಪ ಮಲಕಾರಿ ಬೆಳಗಲಿ, ಮಹಾಲಿಂಗ ಸಿದ್ದಪ್ಪ ಬೆಳಗಲಿ, ಕಂಕಣವಾಡಿಯ ಕೆಂಚಪ್ಪ ಕರೆಪ್ಪ ಪೂಜೇರಿ, ಸಿದ್ದಪ್ಪ ಸಣ್ಣಕರೆಪ್ಪ ಪೂಜೇರಿ, ಪದ್ಮಣ್ಣ ಹಾಲಪ್ಪ ಪೂಜೇರಿ, ಶ್ರೀಮಂತ ತಮ್ಮಣ್ಣ ಪೂಜೇರಿ, ರಾಯಪ್ಪ ಕರೆಪ್ಪ ಪೂಜೇರಿ, ಸುಟ್ಟಟ್ಟಿಯ ಸುರೇಶ ಶಿವಲಿಂಗ ಚೌಗಲಾ, ಹಾರೂಗೇರಿಯ ರಾಮಪ್ಪ ಶಿವಪ್ಪ ಪಾಟೀಲ, ನಿಪನಾಳದ ಸತ್ಯೆಪ್ಪ ಹೊಳೆಪ್ಪ ಸನದಿ, ಅಲಕನೂರಿನ ವಸಂತ ಸಿದ್ದಪ್ಪ ಚೌಗಲೆ, ಲಗಮಣ್ಣ ರಾಮಪ್ಪ ಚೌಗಲಾ, ಹನಮಂತ ಪರಸಪ್ಪ ಗುಣದಾರ, ಅರ್ಜುನ ಲಕ್ಷ್ಮಣ ಯಲ್ಲಟ್ಟಿ, ಹಿಡಕಲ್ಲದ ಮಾರುತಿ ಲಗಮಣ್ಣಾ ಘಂಟಿ, ಲಗಮಣ್ಣಾ ಲಕ್ಕಣ್ಣಾ ಘಂಟಿ, ಮಹಾದೇವ ಬಾಳಪ್ಪ ಹವಾಲ್ದಾರ, ಶಿವಗೊಂಡ ಗಣಪತಿ ಘಂಟಿ, ಮಹಾದೇವ ಸಿದ್ದಪ್ಪ ಜಗದಾಳೆ, ಶ್ರೀಶೈಲ ಬಾಬುರಾವ ನಾಯಿಕ, ಪರಶುರಾಮ ಸತ್ಯೆಪ್ಪ ಖೋತ, ವಿಠ್ಠಲ ಸಿದ್ದಲಿಂಗ ಘಂಟಿ, ಸಿದ್ದಪ್ಪ ಶಿವಪ್ಪ ಬೊಮನಾಳ, ಭೀಮರಾವ ಲಗಮಣ್ಣಾ ಘಂಟಿ, ಮಾರುತಿ ಶಿವಪ್ಪ ಮಗದುಮ, ಕಪ್ಪಲಗುದ್ದಿಯ ಮಲ್ಲಪ್ಪ ಭೀಮಪ್ಪ ನಿಡಗುಂದಿ, ಹುಸೇನಸಾಬ ಮುಕ್ತುಮಸಾಬ ನಧಾಪ, ಯಲ್ಲಪ್ಪ ಬಸಪ್ಪ ಹೊಸೂರ, ಮಾಯಪ್ಪ ಸಿದ್ದಪ್ಪ ನಿಡಗುಂದಿ, ಭೀಮಪ್ಪ ನಾಗಪ್ಪ ನಿಡಗುಂದಿ, ಭರಮಪ್ಪ ಹಣಮಂತ ಸನದಿ, ಕರೆಪ್ಪ ಯಂಕಪ್ಪ ಕರಿಗಾರ, ಮುಗಳಖೋಡದ ಲಕ್ಷ್ಮಣ ಕೆಂಚಪ್ಪ ಸೌಸುದ್ದಿ, ಮಾರುತಿ ರಾಮಪ್ಪ ಸೌಸುದ್ದಿ, ಸಿದ್ದಪ್ಪ ರಾಮಪ್ಪ ಸೌಸುದ್ದಿ, ಕರೆಪ್ಪ ಮಾನಿಂಗಪ್ಪ ಸೌಸುದ್ದಿ, ಪುಂಡಲೀಕ ಯಲ್ಲಪ್ಪ ಹೊಸೂರ, ಮಲಕಾರಿ ಮಾನಿಂಗಪ್ಪ ಸೌಸುದ್ದಿ, ಮಾರುತಿ ವಿಠಪ್ಪಾ ಸೌಸುದ್ದಿ, ಬೀರಪ್ಪ ಯಲ್ಲಪ್ಪ ತೇರದಾಳ ಈ ನಾಡಿನ ಇತರ ಡೊಳ್ಳು ಕಲಾವಿದರು.

**೪.೧.೨. ದಟ್ಟಿ ಕುಣಿತದವರು:**

ಹಿಂದೆ ಬಹಳಷ್ಟು ದಟ್ಟಿ ಕುಣಿತದ ತಂಡಗಳಿದ್ದವು. ಅವು ಇತ್ತಿತ್ತಲಾಗಿ ನಿಷ್ಕ್ರೀಯವಾಗಿದ್ದು, ಈಗ ಕ್ರೀಯಾಶೀಲವಾಗಿರುವ ಎರಡೇ ಎರಡು ತಂಡಗಳಿವೆ. ಒಂದು ಅಲಕನೂರಿನ ಶ್ರೀಕರೆಸಿದ್ಧೇಶ್ವರ ದಟ್ಟಿ ಕಣಿತ ಸಂಘ. ಮತ್ತೊಂದು ಯಲ್ಪಾರಟ್ಟಿಯ ಅಮೋಘಸಿದ್ಧೇಶ್ವರ ಸಂಘ.

ಸವಸುದ್ದಿಯ ಲಕ್ಷ್ಮಣ ಯಲ್ಲಪ್ಪ ಬೆಳಗಲಿ, ಮಹಾದೇವ ಲಕ್ಕಪ್ಪ ಕರಗಾಂವಿ, ಶಿವಣ್ಣಾ ಹಾಲಪ್ಪ ವಾಲಿಕಾರ, ಮಹಾದೇವ ಭರಮಪ್ಪ ಪಟ್ಟಣಕೋಡಿ, ಮಲಕಾರಿ ಸಿದ್ದಪ್ಪ ಬೆಳಗಲಿ, ಗುರುನಾಥ ಭೀಮಪ್ಪ ನಾಯಿಕ, ಮಹಾದೇವ ಲಕ್ಕಪ್ಪ ಉಪ್ಪಾರ, ಗೋವಿಂದ ಲಕ್ಕಪ್ಪ ಬಿದರಿ, ಲಕ್ಕಪ್ಪ ಸತ್ಯೆಪ್ಪ ಬೆಳಗಲಿ, ಯಲ್ಪಾರಟ್ಟಿಯ ದಾನಪ್ಪ ಶಿವಪ್ಪ ಗುಳೇದಾರ, ಮುತ್ತಪ್ಪ ಸಿದ್ದಪ್ಪ ಬೆಕ್ಕೇರಿ, ಶ್ರೀಕಾಂತ ಸಿದ್ದಪ್ಪ ಮೆಟಗುಡ್ಡ, ಸಿದ್ದಪ್ಪ ಅವ್ವಣ್ಣ ಜಾಯಗೋಣಿ, ಚಾಮರಾಜ ಕುಶಾಲ ಒಡೆಯರ, ಈಶ್ವರ ಸಿದ್ದಪ್ಪ ಸವದತ್ತಿ, ಅಲಕನೂರಿನ ಲಕ್ಕಪ್ಪ ರಾಮಪ್ಪ ಚೌಗಲಾ, ರಾಮಪ್ಪ ಭೀಮಪ್ಪ ಚೌಗಲಾ, ಕರೆಪ್ಪ ಇಟ್ಟಪ್ಪ ನಡಟ್ಟಿ, ಹಂದಿಗುಂದದ ಮಾರುತಿ ಹೊನ್ನಪ್ಪ ಹೂಗಾರ, ಮಾನಿಂಗ ಸತ್ಯೆಪ್ಪ ಹೂಗಾರ, ಪದ್ಮಣ್ಣಾ ಭರಮಪ್ಪ ಪೂಜೇರಿ, ಲಕ್ಷ್ಮಣ ನಿಂಗಪ್ಪ ಯಾದವಾಡ, ಸಂಗಪ್ಪ ಹಾಲಪ್ಪ ಮೇಟಿ, ದುಂಡಪ್ಪ ಹಾಲಪ್ಪ ಯರಗುದ್ರಿ, ಕರೆಪ್ಪಾ ಲಕ್ಷ್ಮಣ ಪೂಜೇರಿ, ಗಂಗವ್ವ ಹಾಲಪ್ಪ ಮೇಟಿ, ಮಲ್ಲಪ್ಪ ಇಟ್ಟಪ್ಪ ಸನದಿ, ಹಾರೂಗೇರಿಯ ಮಹಾದೇವ ಹಾಲಪ್ಪ ಕುರಬೆಟ್ಟ, ರಾಮಣ್ಣಾ ಸಿದ್ದಪ್ಪ ಒಡ್ಡೋಡಗಿ, ರಮೇಶ ಮಲ್ಲಪ್ಪ ಕೊಂಕಣಿ, ರಾವಸಾಬ ಕರೆಪ್ಪ ಹವಾಲ್ದಾರ, ಸಿದ್ದಪ್ಪ ಮಲಕಾರಿ ಕಂಟಿಕಾರ, ಖೆಮಲಾಪುರದ ಮಲಕಾರಿ ಮಾಯಪ್ಪ ದಳವಾಯಿ, ಕಂಕಣವಾಡಿಯ ಭರಮಪ್ಪ ಕರೆಪ್ಪ ಪೂಜೇರಿ, ನಿಲಜಿಯ ಪುರಂದರ ಶ್ರೀಮಂತ ಹಸರೆ ದಟ್ಟಿ ಕುಣಿತದ ಪ್ರಮುಖ ಕಲಾವಿದರು.

**೪.೧.೩. ಅಲಗ ಹಾಯುವವರು :**

ಈ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ೮ಜನ ಅಲಗ ಹಾಯುವವರು ಕಂಡು ಬಂದಿದ್ದಾರೆ. ದಟ್ಟಿ ಕುಣಿತದ ಕಲಾವಿದರಂತೆ ಅಲಗ ಹಾಯುವವರ ಸಂಖ್ಯೆಯೂ ಕಡಿಮೆಯಾಗುತ್ತಿದೆ. ಅಲಗ ಹಾಯುವ ಸಧ್ಯದ ಕಲಾವಿದರೆಂದರೆ–

೧. ಮಾಯಪ್ಪ ಶಿವಪ್ಪಾ ಪೂಜೇರಿ – ಅಲಕನೂರ

೨. ಸದಾಶಿವ ಶಿವಪ್ಪ ಪೂಜೇರಿ – ಅಲಕನೂರ

೩. ಕರೆಪ್ಪ ಶಿವರಾಯ ಪೂಜೇರಿ – ಹಾರೂಗೇರಿ

೪. ಸುಭಾಸ ಲಕ್ಷ್ಮಣ ವಂಟಮೂರೆ – ಕುಡಚಿ

೫. ಮಲ್ಲಪ್ಪ ಬಾಳಪ್ಪ ಪೂಜೇರಿ – ಶಿರಗೂರ

[illegible]

[illegible]

[illegible]

[illegible]
[illegible]
[illegible]
[illegible]
[illegible]

೬. ಬೀರಪ್ಪ ಪೂಜೇರಿ – ಶಿರಗೂರ

೭. ಲಕ್ಷ್ಮಣ ಯಲ್ಲಪ್ಪ ಪೂಜೇರಿ – ಬ್ಯಾಕೂಡ

೮. ಯಮನಪ್ಪ ಹಾಲಪ್ಪ ಬರಡಗಿ – ಬ್ಯಾಕೂಡ

**೪.೧.೨. ಹರಿ–ಹರ–ಜಿನಭಜನಾ ಕಲಾವಿದರು :**

**೪.೧.೨.೧. ಹರಿ ಭಜನೆಯವರು :**

**ಮಲ್ಲಪ್ಪ ಬಸಪ್ಪ ಕರಿಮಲ್ಲಪ್ಪಗೋಳ:**

ಸಂತ ಸಂಪ್ರದಾಯದ ಹರಿಭಜನಾ ಹಾಡುಗಾರ. ಮೂಲತಃ ಹಳ್ಳೂರಿನವನು. ೨೦ ವರ್ಷಗಳ ಹಿಂದೆ ಹಾರೂಗೇರಿಯಲ್ಲಿ ಬಂದು ನೆಲೆಸಿದ್ದಾನೆ. ಈತ ವಿಠ್ಠಲ ಮಂದಿರದಲ್ಲಿ ಬಂದು ಹರಿಭಜನೆ ಮಾಡುತ್ತಿರುವ ಪೂಜಾರಿ. ಬಾಳಪ್ಪ ಧರ್ಮಣ್ಣ ಸರಿಕರ ಮೃದಂಗವಾದಕ, ಮಹಾದೇವಪ್ಪ ಅಪ್ಪಣ್ಣ ಗೌಡರ ವೀಣಾವಾದಕ, ಪ್ರಹ್ಲಾದ ಅರಕೇರಿ, ಮಾರುತಿ ಜಾಧವ ತಾಳದವರು. ಜ್ಞಾನದೇವ, ತುಕಾರಾಮ, ಏಕನಾಥ, ನಾಮದೇವರ ಮರಾಠಿ ಅಭಂಗ ಹಾಡುವರು.

**೪.೧.೨.೨. ಹರ ಭಜನೆಯವರು :**

**ರಾಮು ನಿಡೋಣಿ:**

ಇವರು ರಾಯಬಾಗ ಕ್ಷೇತ್ರದ ಮಾಜಿ ಶಾಸಕರಾಗಿದ್ದು ಈಗಲೂ ತಾವೊಬ್ಬ ಕಲಾವಿದನೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಜೊತೆಗೆ ತಮ್ಮ ಕಲೆಯನ್ನು ಜೀವಂತವಾಗಿ ಉಳಿಸಿಕೊಂಡಿದ್ದಾರೆ. ತಳಸಮುದಾಯದಿಂದ ಬಂದ ರಾಮು ನಿಡೋಣಿ ಈಗ ಹಾಸಿಗೆ ಹಿಡಿದಿರುವರು. ವಿಚಿತ್ರವೆಂದರೆ ಅವರ ಮಂಚದ ಕೆಳಗೆ ಸ್ವರಪೆಟ್ಟಿಗೆ ಇದೆ. ಮಲಗಿ–ಮಲಗಿ ಬೇಸರವಾದಾಗ ಸ್ವರಪೆಟ್ಟಿಗೆ ನುಡಿಸುತ್ತಾ ಕೈವಲ್ಯದ ಹಾಡು ಹಾಡುವನು.

**ಹಂದಿಗುಂದದ ಲಕ್ಷ್ಮಣ ಲಕ್ಕಪ್ಪ ಹೊಸಾಲಿ:**

ಈತ ಶಿವಭಜನೆ ಹಾಡುಗಾರ. ೬೭ವರ್ಷ ವಯಸ್ಸಿನ ಲಕ್ಷ್ಮಣ ತಂಡ ಕಟ್ಟಿಕೊಂಡು ಬೆಳಗಾವಿ, ಬಾಗಲಕೋಟ ಜಿಲ್ಲೆಗಳ ಹಲವೆಡೆ ಕಾರ್ಯಕ್ರಮ ನೀಡಿದ್ದಾನೆ.

ಲಕ್ಷ್ಮಣ ಲಕ್ಕಪ್ಪ ಹೊಸಾಲಿ –ಹಾಡುಗಾರ

ಕಾಳಪ್ಪ ಹಣಮಪ್ಪ ಹೊಸಾಲಿ –ಹಿಮ್ಮೇಳದವರು

ಕಲ್ಲಪ್ಪ ಯಮನಪ್ಪ ಗಂಗಪ್ಪಗೋಳ –ದಮಡಿ

ಸತ್ಯೆಪ್ಪ ರಾಯಪ್ಪ ಗಂಗಪ್ಪಗೋಳ –ಹಾರ್ಮೋನಿಯಂ

ಯಮನಪ್ಪ ಲಕ್ಕಪ್ಪ ಹೊಸಾಲಿ –ತಾಳ

ಧರೆಪ್ಪ ದೇವರವರ ಇವರ ವಸ್ತಾದ. ಕೈವಲ್ಯ ಪದಗಳನ್ನು ಸಹ ಹಾಡುವರು. ಇವರ ತಂಡದ ಹೆಸರು ಶ್ರೀ ಸಿದ್ಧೇಶ್ವರ ಭಜನಾ ಮೇಳ ಹಂದಿಗುಂದ.

**ಹಂದಿಗುಂದದ ಗುರುಲಿಂಗಯ್ಯ ಮಠದ :**

ಗುರುಲಿಂಗಯ್ಯಾ ಬಾಳಯ್ಯಾ ಮಠದ ಅವರ ಹಂದಿಗುಂದದ ಮತ್ತೊಂದು ಭಜನಾ ಮೇಳ. ಈ ಮೇಳದವರು ನಿಜಗುಣರು, ಸರ್ಪಭೂಷಣ, ಪುರಂದರದಾಸ, ಶರೀಫರ ಪದಗಳನ್ನು ಹಾಡುವರು. ಅಕ್ಕವ್ವ ಸುರೇಶ ಮುರಗೋಡ, ಮಹಾಲಿಂಗಯ್ಯಾ ಕುಂದರಗಿಮಠ, ಶಂಕರ ಪರಪ್ಪ ಪಾಟೀಲ, ಈರಸಂಗ ಮಡಿವಾಳಪ್ಪ ಭದ್ರಶೆಟ್ಟಿ, ಬಸಪ್ಪ ಚನ್ನಪ್ಪ ಭದ್ರಶೆಟ್ಟಿ, ಚನ್ನಪ್ಪ ಬಸಪ್ಪ ಕರಿಹೊಳಿ ಮೇಳದಲ್ಲಿದ್ದವರು.

ನಸಲಾಪುರದ ಚಿಂತಾಮಣಿ ಅಣ್ಣಪ್ಪ ಕಾಂಬಳೆ, ಬಾಬಾಸಾಬ ಜಂಬಣ್ಣಾ ಕಾಂಬಳೆ, ಮಂಟೂರದ ಶಿವನಗೌಡ ಬಾಳಗೌಡ ಪಾಟೀಲ, ರೇವಣ್ಣಾ ಲಕ್ಷ್ಮಣ ಬಡಿಗೇರ, ರೇವಪ್ಪ ನಿಂಗಪ್ಪ ಗೂಟುರೆ, ಮಲ್ಲಿಕಾರ್ಜುನ ರಾಮಪ್ಪ ಮಲ್ಲಾಪುರೆ, ಕೆಂಪಣ್ಣಾ ಬಾಳಪ್ಪ ಚೌಗಲಾ, ಸದಾಶಿವ ರಾಮಪ್ಪ ಚೌಗಲಾ, ರಾಮಪ್ಪ ಮಲ್ಲಪ್ಪ ಕುಂಬಾರ, ಮಲಗೌಡ ಚನಗೌಡ ಪಾಟೀಲ, ಬಸವರಾಜ ರಾಮಪ್ಪ ಮಲ್ಲಾಪುರೆ, ಕಂಕಣವಾಡಿಯ ಹಣಮಂತ ಗೋವಿಂದಪ್ಪ ಅಂಬಿನಾಯಕ, ಬೆಂಡವಾಡದ ಪೀರಸಾಬ ಹಸನಸಾಬ ನಧಾಪ, ಯಲ್ಲಪ್ಪ ದುಂಡಪ್ಪ ಪೂಜೇರಿ, ಅಶೋಕ ನಾಮದೇವ ಜಗನ್ನಾಥ, ಅಲಗೊಂಡ ಲಕ್ಷ್ಮಣ ಕೆಂಧೂಳಿ, ಲಕ್ಕಪ್ಪ ಭೀಮಪ್ಪ ಜಗನ್ನಾಥ, ಕಲ್ಲಪ್ಪ ಯಮನಪ್ಪ ಕಿರಣಗಿ, ದುಂಡಪ್ಪ ಶಿವಪ್ಪ ಮಾಂಗ, ಸವಸುದ್ದಿಯ ಸದಾಶಿವ ಮಲ್ಲಪ್ಪ ಹಡಪದ, ಶಿವಪ್ಪ ಲಕ್ಷ್ಮಣ ಮಾಂಗ, ಲಕ್ಕಪ್ಪ ರಾಮಚಂದ್ರ ಮೇತ್ರಿ,

ಯಬರಟ್ಟಿಯ ಜ್ಯೋತಿಬಾ ಭೀಮಪ್ಪ ಪವಾರ, ದಿಲೀಪ ಚಂದ್ರಪ್ಪ ಕಾಂಬಳೆ, ಮಲ್ಲಪ್ಪ ಈರಪ್ಪ ಕೂಚನೂರೆ, ಭೀಮಪ್ಪ ಶಿವಪ್ಪ ಒಡೆಯರ, ಯಲ್ಲಪ್ಪ ಭಗವಂತ ಸರಕಾರಿ, ನಿಂಗಪ್ಪ ರಾಮಪ್ಪ ಪಡಸಲಗಿ, ಪೀರಪ್ಪ ಸಿದ್ರಾಮ ಕಾಂಬಳೆ, ಶಿವನಪ್ಪ ದುಂಡಪ್ಪ ಕಾಂಬಳೆ, ಖೆಮಲಾಪುರದ ಸದಾಶಿವ ದುಂಡಪ್ಪ ಅಂಬಿ, ಹಾರೂಗೇರಿಯ ಬಸವ್ವ ರಾಮದಾಸ ದಾಸರ, ಭೂಪಾಲ ತವನಪ್ಪ ಜೋಡಗಿ, ಶಿವಾನಂದ ಮಲ್ಲಪ್ಪ ಹುಲಗಬಾಳಿ, ನಾರಾಯಣ ಲಕ್ಷ್ಮಣ ಬಡಿಗೇರ, ದಿಗ್ಗೇವಾಡಿಯ ಶ್ರಾವಣ ಅಪ್ಪಾಜಿ ಕಾಂಬಳೆ, ಯಲ್ಪಾರಟ್ಟಿಯ ಕರೆಪ್ಪ ಯಲ್ಲಪ್ಪ ಲಾಳಿ, ಶಂಭು ಶಿವಪ್ಪ ಹಕ್ಕಿ, ಹಂದಿಗುಂದದ ಲಕ್ಷ್ಮಣ ಲಕ್ಕಪ್ಪ ಹೊಸಾಲಿ, ಅಲಕನೂರಿನ ಸಹದೇವ ರಾಮಪ್ಪ ಬಾನಿ, ಲಕ್ಷ್ಮಣ ರಾಮಪ್ಪ ಜಟಗೌಡ, ಕಲ್ಲಪ್ಪ ರಾಮಪ್ಪ ಜಟಗೌಡ, ಬಸಪ್ಪ ರಾಮಪ್ಪ ಜಟಗೌಡ, ಈರಪ್ಪ ರಾಮಪ್ಪ ನಾವಿ, ಶಿವಪ್ಪ ಕಾಳಪ್ಪ ಬಡಿಗೇರ, ಯಮನವ್ವ ಪರಸಪ್ಪ ಮಾಂಗ, ಶಂಕರ ರಾಮಪ್ಪ ಬಡಿಗೇರ, ಸದಾಶಿವ ಗೂಳಪ್ಪ ಗದ್ದಿ, ಭೀಮಪ್ಪ ರಾಮಪ್ಪ ಬಾನೆ, ಕಾಸಪ್ಪ ಹಣಮಂತ ಚೆನ್ನದಾಸರ, ಶಂಕರ ಭೀಮಪ್ಪ ಅವರಕೋಡ, ಗೋಪಾಲ ಕಲ್ಲಪ್ಪ ಯಲ್ಲಟ್ಟಿ, ಕರೆಪ್ಪ ಲಕ್ಷ್ಮಣ ಯಲ್ಲಟ್ಟಿ, ಕರೆಪ್ಪ ಭೀಮಪ್ಪ ಅವರಕೋಡ, ಶಿವಪ್ಪ ಯಲ್ಲಪ್ಪ ನಾಯಿಕ, ಶ್ರೀಶೈಲ ಮಲ್ಲಪ್ಪ ನಾವಿ, ರಾಮಪ್ಪ ಸಂತ್ರಾಮ ನಾಯಿಕ, ಕರೆಪ್ಪ ಮಲ್ಲಪ್ಪ ಕಾಂಬಳೆ, ಚಿಂಚಲಿಯ ಶ್ರೀಶೈಲ ಪರಪ್ಪ ಕಂಕಣವಾಡಿ, ಕಾಳಿಂಗ ಪಾಂಡುರಂಗ ಕಾಂಬಳೆ, ಚಿಂಚಲಿ ಸ್ಟೇಷನ್‌ದ ಬಾಬುರಾವ ಕೃಷ್ಣಾ ಕಾಂಬಳೆ, ಗಂಗಾರಾಮ ಬಾಹು ನಾಟೇಕಾರ, ಬೈರವಾಡಿಯ ಮಾರುತಿ ಶೆಟ್ಟೆಪ್ಪ ವಡ್ಡರ, ರಾಯಬಾಗ ಸ್ಟೇಷನ್‌ದ ಅಪ್ಪಾಸಾಬ ಶಿವಲಿಂಗ ಸಿದ್ದಯ್ಯಗೋಳ, ಜೋಡಟ್ಟಿಯ ಶಂಕರ ಬಾಪು ಕೋಳಿ, ರಮೇಶ ಗುರುಸಿದ್ದ ನಾಯಿಕ, ಮಲ್ಲಪ್ಪ ಅಣ್ಣಪ್ಪ ಮರೇಣ್ಣವರ, ಮಲ್ಲಪ್ಪ ನೀಲಪ್ಪ ಬಸ್ತವಾಡೆ, ಶಶಿಕಾಂತ ಅಕ್ಕಪ್ಪ ಬಸ್ತವಾಡೆ, ಬಸವಣ್ಣಿ ಬಾಪು ಕೋಳಿ, ಈಶ್ವರ ನಿಂಗಪ್ಪ ಪಾಟೀಲ, ಗಣಪತಿ ಸತ್ಯೆಪ್ಪ ಮಾಂಗ, ಮಾವಿನಹೊಂಡಾದ ಸಿದ್ದಪ್ಪ ಬಸಪ್ಪ ಪೂಜೇರಿ, ಶಿವಗೌಡ ಮಲ್ಲಪ ಯಡ್ರಾಂವಿ, ರಾಮು ಸಿದ್ದಲಿಂಗಪ್ಪ ಪಾಟೀಲ, ನಿಲಜಿಯ ಬಾಳಪ್ಪ ಧರೆಪ್ಪ ಹುಂಡರಗಿ, ಬೆಂಡವಾಡದ ಭಾಸ್ಕರ ಯಮನಪ್ಪ ಜೋಡಟ್ಟಿ, ದೇವನಕಟ್ಟಿಯ ಮುರಿಗೆಪ್ಪ ಭೀಮಪ್ಪ ಮಾದಿಗೇರ, ಕಟಕಬಾವಿಯ ಸತಗೌಡ ಚನಗೌಡ ಪಾಟೀಲ, ದತ್ತು ಪಾತ್ರೋಟ, ಮಾರುತಿ ಭೀಮಪ್ಪ ಮಾಂಗ,

ಅಲ್ಲಪ್ಪ ಸಿದ್ದಪ್ಪ ಪಿಡಾಯಿ, ಬ್ಯಾಕೂಡದ ವಿಷ್ಣುಕುಮಾರ ಸಣ್ಣಪ್ಪ ನವರತ್ನ, ಪಾರೀಸ ಲಕ್ಕವ್ವ ಕಾಂಬಳೆ, ಸುರೇಶ ಚನ್ನಪ್ಪ ಕಾಂಬಳೆ, ರಮೇಶ ಪಾರೀಸ ಕಾಂಬಳೆ, ಸುರೇಶ ಶಂಕರ ಕಾಂಬಳೆ, ಶಾಹು ಲಕ್ಕವ್ವ ಮಾಂಗ, ಮಹಾದೇವ ಬಾಳಪ್ಪ ಕಾಂಬಳೆ, ಲಕ್ಕಪ್ಪ ಅನ್ನಪ್ಪ ಧರ್ಮಟ್ಟಿ, ಮಲಕಾರಿ ಶಂಕರ ಮಾಂಗ, ಭೀಮಶಿ ಸತ್ಯೆಪ್ಪ ವಡ್ಡರ, ಅರ್ಜುನ ಪೀರಪ್ಪ ಕಾಂಬಳೆ, ಶ್ರೀಮಂತ ಸದಾಶಿವ ಕಾಂಬಳೆ, ಹಿಡಕಲ್ಲದ ಮಾರುತಿ ಸಂತಪ್ಪ ಸಾಂಬ್ರೇಕರ, ಹಂದಿಗುಂದದ ಸದಾಶಿವ ಶಿವಲಿಂಗಪ್ಪ ಭದ್ರಶೆಟ್ಟಿ ಶಿವಭಜನೆಯ ಕಲಾವಿದರು.

**೪.೧.೨.೩. ಜಿನಭಜನಾ ಕಲಾವಿದರು:**

**ಸಿದ್ದಪ್ಪ ವೆಂಕಪ್ಪ ನಾಗನೂರ :**

ಶಿವಭಜನೆ ಮತ್ತು ಹರಿಭಜನೆ ಕಲಾವಿದರಂತೆ ಜಿನಭಜನಾ ಕಲಾವಿದರು ವಿವಿಧ ಸಾಮಾಜಿಕ ಸ್ತರಗಳಿಂದ ಬಂದವರಲ್ಲ. ಇವರು ಜೈನ ಸಮುದಾಯಕ್ಕೆ ಸೀಮಿತಗೊಂಡವರು. ಇವರಲ್ಲಿ ಹಾರೂಗೇರಿಯ ಸಿದ್ದಪ್ಪ ವೆಂಕಪ್ಪ ನಾಗನೂರ ಅತ್ಯುತ್ತಮ ಹಾಡುಗಾರ. ಇಂದು ಹಾರೂಗೇರಿಯ ನಾಗನೂರ ಕುಟುಂಬದ ಕಲಾವಿದರಿಂದಲೇ ಬಾಗೆನಾಡಿನಲ್ಲಿ ಜಿನಭಜನೆ ಜೀವಂತವಾಗಿ ಉಳಿದಿದೆ. ಸಿದ್ದಪ್ಪ ನಾಗನೂರ ಕವಿ ಅಲಭೈರಿಯ ಜಿನಭಜನೆಗಳನ್ನು ಸಂಕಲಿಸಿ ಪ್ರಕಟಿಸಿರುವುದನ್ನು ಮೊದಲ ಅಧ್ಯಾಯದಲ್ಲಿ ತಿಳಿಸಲಾಗಿದೆ.

ಶ್ರೀಪಾಲ ಸತ್ಯೆಪ್ಪ ಶಿರಹಟ್ಟಿ, ಮಲ್ಲಪ್ಪ ಜಿನ್ನಪ್ಪ ನಾಗನೂರ, ಅರುಣ ವೆಂಕಪ್ಪ ನಾಗನೂರ, ನೇಮಣ್ಣ ಜಿನ್ನಪ್ಪ ಕುರಾಣಿ, ಅಣ್ಣಪ್ಪ ರಾಮಪ್ಪ ನಾಗನೂರ, ರಾಮು ಅವ್ವಣ್ಣಾ ಆಲಗೂರ, ಸದಾಶಿವ ತವನಪ್ಪ ಜುಂಜರವಾಡ ಈ ನಾಡಿನ ಇತರ ಜಿನಭಜನಾ ಕಲಾವಿದರು.

**೪.೧.೩. ಮೊಹರಂ ಆಚರಣಾ ಕೇಂದ್ರಿತ ಕಲೆಗಳ ಕಲಾವಿದರು:**

**ಕರ್ಬಲ್- ದಂಗಲ್- ಅಲಾಯಿ ಹೆಜ್ಜೆ ಹಾಕುವ ಕಲಾವಿದರು:**

ಬಾಗೆನಾಡಿನಲ್ಲಿ ಈಗ ೨೩ ಕರ್ಬಲ್ ಕಲಾತಂಡಗಳಿದ್ದು ಅವುಗಳಲ್ಲಿ ಕೆಲವು ರಾಜ್ಯಮಟ್ಟದಲ್ಲಿಯೇ ಹೆಸರುವಾಸಿಯಾಗಿವೆ. ಬಾಗೆನಾಡು ಕರ್ಬಲ್ ಸ್ಪರ್ಧೆಗೆ

ಎತ್ತಿದ ಕೈ. ಹೀಗಾಗಿ ಪ್ರತಿ ತಂಡದವರು ಮೊಹರಂ ಆಚರಣೆಯ ಸಂದರ್ಭದಲ್ಲಿ ಒಂದೊಂದು ಲಕ್ಷದಷ್ಟು ಹಣ ಖರ್ಚು ಮಾಡುತ್ತಾರೆ. ಅವುಗಳಲ್ಲಿ ಪ್ರಮುಖ ಕಲಾತಂಡಗಳು ಇಂತಿವೆ:

**ಜೈ ಹನುಮಾನ ಕರ್ಬಲ್ ಕಲಾ ತಂಡ ಮೊರಬ:**

ಈ ನಾಡಿನಲ್ಲಿಯ ಪ್ರಸಿದ್ಧ ಕಲಾ ತಂಡ ಇದಾಗಿದೆ. ಸುಮಾರು ೨೫ ವರ್ಷಗಳಿಂದ ಕರ್ನಾಟಕ ರಾಜ್ಯದಲ್ಲಿ ಪ್ರಚಲಿತವಿದ್ದು ತನ್ನದೇ ಆದ ವಿಶೇಷತೆಯನ್ನು ಹೊಂದಿದೆ. ಮುಮ್ಮೇಳದಲ್ಲಿ ೪ ಜನ, ಹಿಮ್ಮೇಳದಲ್ಲಿ ೧೨ ಜನ, ೬ ವಾದ್ಯಗಾರರಿಂದ ಕೂಡಿದ ತಂಡ. ೧೯೯೯ರಲ್ಲಿ ಮೈಸೂರು ದಸರಾ, ೨೦೧೦ ರಲ್ಲಿ ಮುಂಬಯಿ ಶೈನ್ ಹಾಸ್ಪಿಟಲ್ ಗೋಕುಲಾಷ್ಟಮಿ ಕಾರ್ಯಕ್ರಮ, ಬೆಂಗಳೂರು ಸಂಗೊಳ್ಳಿ ರಾಯಣ್ಣ ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮ, ಖಾನಾಪೂರ ಗಡಿ ಭಾವೈಕ್ಯತಾ ಸಮಾವೇಶ, ಬೆಳಗಾವಿಯ ಜಾನಪದ ಜಾತ್ರೆ, ಕಿತ್ತೂರು ಉತ್ಸವದಲ್ಲಿ ಪಾಲ್ಗೊಳ್ಳುವುದರ ಜೊತೆಗೆ ಹಲವಾರು ಪ್ರಶಸ್ತಿ ಪತ್ರಗಳು ಹಾಗೂ ಸಂಚಾರಿ ಡಾಲಗಳನ್ನು ಪಡೆದುಕೊಂಡಿದ್ದಾರೆ.

**ಜೈಹನುಮಾನ ಕರ್ಬಲ್ ಮೇಳ ಅಳಗವಾಡಿ:**

೪೫ ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಈ ಮೇಳ ಬಾಗೆನಾಡಿನಲ್ಲಿ ಮುಂಚೂಣಿಯಲ್ಲಿರುವಂಥದ್ದು. ೩೦ ಕಲಾವಿದರೊಂದಿಗೆ ಒಡಗೂಡಿದ ಈ ತಂಡ ಬಾಗೆನಾಡಿನಲ್ಲಿ ನಡೆಯುವ ಮೊಹರಂ ಸಂದರ್ಭದ ಕರ್ಬಲ್ ಸ್ಪರ್ಧೆಯಲ್ಲಿ ಸತತವಾಗಿ ೩ ಸಂಚಾರಿ ಡಾಲುಗಳೊಂದಿಗೆ ಒಟ್ಟು ೧೦ ಡಾಲುಗಳನ್ನು ಈ ಮೇಳ ಗೆದ್ದುಕೊಂಡಿದೆ. ೨ ಸಲ ಮೈಸೂರು ದಸರಾದಲ್ಲಿ ಭಾಗವಹಿಸಿದ್ದಾರೆ. ಮಹಾದೇವ ಶಿರಗೂರೆ ಈ ತಂಡದ ವಸ್ತಾದ. ಇವರು ಬೆಳಗಾವಿ ಜಿಲ್ಲಾ ಪಂಚಾಯತಿಯ ಸದಸ್ಯರೂ ಹೌದು. ಇಳಿ ವಯಸ್ಸಿನಲ್ಲಿ ರಾಜಕೀಯಕ್ಕೆ ಮನಸ್ಸು ಜಾರಿದರೂ ಕರ್ಬಲ್ ಸ್ಪರ್ಧೆಯ ಹುಮ್ಮಸ್ಸು ಬತ್ತಿಲ್ಲ.

**ಬೀರದೇವರ ಕರ್ಬಲ್ ಮೇಳ ನಿಲಜಿ :**

ಪ್ರಸಿದ್ಧ ಜಾನಪದ ಕವಿ ಮೀರಾ ಮುಲ್ಲಾ ಈ ಮೇಳದ ವಸ್ತಾದರಾಗಿದ್ದರು. ೩೦ವರ್ಷಗಳ ಕಾಲ ಸುಮಾರು ೫೦೦ ಕಾರ್ಯಕ್ರಮಗಳನ್ನು ನೀಡಿದ ಹೆಮ್ಮೆ ಇವರದು. ೫ಸಲ ಆಕಾಶವಾಣಿಯಲ್ಲಿ ಇವರ ಹಾಡುಗಳು ಬಿತ್ತರಗೊಂಡಿವೆ. ಈ ಎಲ್ಲ ಕಲಾವಿದರ ಮೂಲ ವೃತ್ತಿ ಬಡಿಗತನ ಹಾಗೂ ಒಕ್ಕಲುತನ.

**ಕಾಳಿಕಾದೇವಿ ಕರ್ಬಲ್ ಮೇಳ ನಿಲಜಿ:**

ಇದು ನಿಲಜಿಯ ಮತ್ತೊಂದು ಕಲಾ ತಂಡ. ಸಿದ್ದರಾಮ ಸುತಾರ, ಭೀಮಾ ಲೊಹಾರ ಮುಮ್ಮೇಳದ ಹಾಡುಗಾರರು. ಹಿಮ್ಮೇಳದಲ್ಲಿ ೫ಜನ ಕಲಾವಿದರಿದ್ದಾರೆ. ಸಿದ್ರಾಮ ಸುತಾರ ಸ್ವತ: ಕವಿ ಮತ್ತು ಹಾಡುಗಾರ. ಇವರ ಹಾಡುಗಳು ಆಕಾಶವಾಣಿಯಲ್ಲಿ ೧೯೯೭ರಿಂದ೨೦೦೯ರವರೆಗೆ ಪ್ರಸಾರಗೊಂಡಿವೆ.

ಹಾರೂಗೇರಿಯ ಗುಲಾಬ ಚಾಂದಸಾಬ ಜಮಾದಾರ, ಮಹಿಬೂಬಸಾಬ ಭಾಸ್ಕರ ಜಮಾದಾರ, ಹಿಡಕಲ್ಲದ ಮಾರುತಿ ಕರೆಪ್ಪ ಯಬರಟ್ಟಿ, ಯಲ್ಲಪ್ಪ ಬಾಳಪ್ಪ ಜಗದಾಳೆ, ರಾಮಪ್ಪ ಸಿದ್ದಪ್ಪ ಯಬರಟ್ಟಿ, ಯಲ್ಲಪ್ಪ ಭೀಮಪ್ಪ ಹಣಬರ, ನಿಂಗಪ್ಪ ರಾಮಪ್ಪ ಕಜ್ಜಿಡೋಣಿ, ಚಾಂದಪಾಶ್ಯಾ ಸೈಯದಹುಸೇನ ಇನಾಮದಾರ, ಸಿದ್ದಪ್ಪ ಕಲ್ಲಪ್ಪ ಯಬರಟ್ಟಿ, ಭೀಮಪ್ಪ ನಾಗಪ್ಪ ಕೌಜಲಗಿ, ಅಪ್ಪಣ್ಣ ತಿಪ್ಪಣ್ಣ ಕುಳ್ಳೊಳಿ ಈ ನಾಡಿನ ಪ್ರಮುಖ ಕರ್ಬಲ್ ಕಲಾವಿದರು.

**೪.೧.೪. ಎಲ್ಲಮ್ಮನ ಆರಾಧನೆಯ ಕೇಂದ್ರಿತ ಕಲೆಗಳ ಕಲಾವಿದರು:**


**ಚೌಡಿಕೆ–ಜೋಗತಿ ಕುಣಿತ :**

**ಮುಗಳಖೋಡದ ರಂಗವ್ವ ಕಾಖಂಡಕಿ :**

ಇವಳು ಈ ನಾಡಿನ ಖ್ಯಾತ ಜನಪದ ಗಾಯಕಿ. ರಾಮಪ್ಪ ಪೂಜಾರಿಯವರೊಂದಿಗೆ ಚೌಡಕಿ ಪದಗಳನ್ನು ಹಾಡುತ್ತಿದ್ದಳು. ಅವಳು ಮುಗಳಖೋಡದಲ್ಲಿ ಚೌಡಕಿ ಪದ ಹಾಡುವ ಚೌಡಕಿ ಮೇಳಗಳ ಪರಂಪರೆಯನ್ನೇ

ಹುಟ್ಟು ಹಾಕಿದಳು. ರಂಗವ್ವ ತೀರಿಕೊಂಡದ್ದು ೧೦೦ವರ್ಷಗಳ ಹಿಂದೆ. ಜನರ ಮನದಲ್ಲಿ ಇನ್ನೂ ಅವಳ ನೆನಪು ಅಚ್ಚಳಿಯದೆ ಉಳಿದಿರುವುದೇ ಅವಳ ಪ್ರತಿಭೆಗೆ ನಿದರ್ಶನ. ಅವಳ ಕುರಿತು ಅನೇಕ ದಂತಕಥೆಗಳಿವೆ. ಬೀರಪ್ಪ ಹಳಿಂಗಳಿ ಎಂಬ ಶ್ರೀಮಂತ ಅವಳು ಬದುಕುವವರೆಗೂ ಉಣ್ಣುವುದಕ್ಕೆ ತನ್ನ ಒಂದು ಹೊಲವನ್ನು ಅವಳಿಗೆ ಉಂಬಳಿಯಾಗಿ ಕೊಟ್ಟಿದ್ದನು.

ರಂಗವ್ವ ದೇವದಾಸಿ. ಅವಳ ತಾಯಿ ಶಿವಾಯವ್ವ ಕೂಡಾ ದೇವದಾಸಿ. ಅವಳಿಗೆ ಚೌಡಕಿ ಮನೆತನದ ಆಸ್ತಿಯಾಗಿ ಸಂದಿತ್ತು. ಆದರೆ ಈ ದೇವದಾಸಿ ಗಾನಕೋಗಿಲೆಯಾಗಿ ಅಮರಳಾದುದು ಬಾಗೆಯ ಸುದೈವ. ರಂಗವ್ವ ಹುಟ್ಟು ಹಾಕಿದ ಪರಂಪರೆ ಇಂತಿದೆ:




ಜಯಂತೆವ್ವ ಕಾಖಂಡಕಿ ರಂಗವ್ವನ ಪರಂಪರೆಯ ಕೊನೆಯ ಕೊಂಡಿ. ಅವಳಿಗೀಗ ೭೫ವರ್ಷ ವಯಸ್ಸು. ಅವಳೊಂದಿಗೆ ಶಾಂತಾ ಕಾಖಂಡಕಿ, ಸುಂದ್ರವ್ವ ಸಂತೆಪ್ಪಗೋಳ, ಸುವರ್ಣಾ ಕುರಾಡೆ, ರುಕ್ಮವ್ವ ನಡುವಿನಕೇರಿ ಹಾಡುತ್ತಾರೆ. ಎರಡು ಸಲ ಆಕಾಶವಾಣಿಯಲ್ಲಿ ಇವರ ಪದಗಳು ಪ್ರಸಾರಗೊಂಡಿವೆ. ಡೊಳ್ಳಿನಹಾಡು, ಲಾವಣಿ, ತತ್ವ ಪದಗಳನ್ನು ಚೌಡಕಿಗೆ ಒಗ್ಗಿಸಿ ಹಾಡುತ್ತಾರೆ. ಇವರು ಮುಗಳಖೋಡದ ರಾಚಯ್ಯಾ ಹಿರೇಮಠರ ಶಿಷ್ಯರಾದ ಭೀಮಪ್ಪ ಸುಣಗಾರ(ತರಳರಾಚಯ್ಯ) ಬ್ಯಾಕೂಡದ ಮಾರುತಿ, ಹುನ್ನೂರದ ಲಕ್ಷ್ಮಣ, ಮಧುರಖಂಡಿಯ ಯಲ್ಲಪ್ಪ,

ಹಾರೂಗೇರಿಯ ಅಲಭೈರಿ, ಇಟನಾಳದ ಯಲ್ಲಪ್ಪ ತಳವಾರ, ಸವದತ್ತಿ ಸಿದ್ದಪ್ಪ ಹಾಗೂ ಮುಗಳಖೋಡದ ಮಹಾದೇವ ಖೇತಗೌಡರ ಅವರು ಬರೆದ ಹಾಡುಗಳನ್ನು ಹಾಡುವರು.

ಮುಗಳಖೋಡದಲ್ಲಿ ಪ್ರಸ್ತುತ ೪ ಚೌಡಕಿ ಮೇಳಗಳಿವೆ.

೧. ಜಯಂತೆವ್ವ ಕಾಖಂಡಕಿ ಮೇಳ

೨. ತಾರವ್ವ ಮಾದರ ಮೇಳ

೩. ದೇವಕಿ ಸಂತೆಪ್ಪಗೋಳ ಮೇಳ

೪. ಯಲ್ಲವ್ವ ಮಾದರ ಮೇಳ

ಇವರಲ್ಲಿ ಸದ್ಯ ತಾರವ್ವ ಮಾದರವರ ಮೇಳ ಹೆಸರುವಾಸಿ.

**ಮುಗಳಖೋಡದ ತಾರವ್ವ ಮಾದರ :**

೭೮ ವರ್ಷದ ತಾರವ್ವಾ ೬ ಧ್ವನಿಸುರುಳಿ ಬಿಡುಗಡೆ ಮಾಡಿದ್ದಾಳೆ. ಬೆಳಗಾವಿ, ಧಾರವಾಡ, ಬೆಂಗಳೂರುಗಳಲ್ಲಿ ತನ್ನ ಕಲೆ ಪ್ರದರ್ಶಿಸಿ ಸೈ ಎನಿಸಿಕೊಂಡಿರುವಳು. ಅಬಾಯೆವ್ವ ಪೂಜಾರಿ, ಸುಶೀಲವ್ವ ಮಾದರ, ಗೋಪಾಲ ಬಾವಿಮನಿ ಇವಳ ಮೇಳದ ಸದಸ್ಯರು. ಇತ್ತೀಚಿಗೆ ಚೌಡಕಿ ಗಾಯಕಿಯರ ಸಂಖ್ಯೆ ಕಡಿಮೆಯಾಗುತ್ತಿದೆ. ಜಯಂತೆವ್ವ ಹೇಳುವಂತೆ ಅವಳೇ ಆ ಮನೆತನದ ಕೊನೆಯ ಹಾಡುಗಾರ್ತಿ. ಅವಳೊಂದಿಗೆ ಆ ಪರಂಪರೆ ಮುಕ್ತಾಯವಾಗಲಿದೆ. ಜೊತೆಗೆ ದೇವದಾಸಿ ಪರಂಪರೆ ಕೊನೆಗೊಳ್ಳಲಿದೆ.

**ಕಂಕಣವಾಡಿಯ ಯಲ್ಲವ್ವ ಕೊಂತೆಣ್ಣವರ :**

ಇವಳು ಹಿರಿಯ ಕಲಾವಿದೆ. ೯೦ವರ್ಷದ ತುಂಬು ಬದುಕು. ೧೦ವರ್ಷಗಳ ಹಿಂದೆ ತೀರಿದಳು. ಹತ್ತೂರಿನ ಜನ ಕುಳಿತು ಕೇಳುವಂತೆ ಸುಶ್ರಾವ್ಯವಾಗಿ ಹಾಡುತ್ತಿದ್ದಳು. ಇವಳದು ಒಡಪುಕಟ್ಟಿ ಹಾಡುವ ಮೋಡಿ, ಕೇಳುಗರನ್ನು ಸೋಲಿಸುತಿತ್ತು ಎಂದು ಹೇಳುತ್ತಾರೆ ಕಂಕಣವಾಡಿಯ ಜನ. ಇವಳು ಚನ್ನಬಸು

ಕೊಂತೆಣ್ಣವರವರ ಮಗಳು. ಸತ್ತೆವ್ವ ಗಿಡ್ಡವ್ವಗೋಳ, ತಾಯವ್ವ ಕೊಂತೆಣ್ಣವರ, ಸೀತವ್ವ ಮತ್ತು ಲಕ್ಕವ್ವ ಕಲಾಲ ಇವಳ ಮೇಳದ ಸದಸ್ಯರು.

**ನಿಲಜಿಯ ನಾಗವ್ವ ಮಲ್ಲಪ್ಪ ಕಾಂಬಳೆ :**

ಇವಳು ನಿಲಜಿಯ ಕಲಾವಿದೆ. ವಯಸ್ಸು ೬೦. ಆರು ಜನರ ತಂಡದನಾಯಕಿ. ಮಲ್ಲವ್ವ ಯಮನಪ್ಪ ಕಾಂಬಳೆ, ಬಂದವ್ವ ಬಸಪ್ಪ ಕಾಂಬಳೆ, ಕಸ್ತೂರೆವ್ವ ರಾಣಪ್ಪ ಗಸ್ತಿ, ಸುಜಾತಾ ಕಾಂಬಳೆ ತಂಡದ ಇತರ ಸದಸ್ಯರು.

**ಹಂದಿಗುಂದದ ಕಲ್ಲವ್ವ ಯಮನಪ್ಪ ಪೂಜಾರಿ :**

ಇವಳು ಏಕಲವ್ಯೆ. ಗುರುವಿಲ್ಲ. ಮನೆಯಲ್ಲಿ ಹಾಡಿನ ಪರಂಪರೆ ಇಲ್ಲ. ಬೇರೆಯವರು ಹಾಡುವುದನ್ನು ನೋಡಿ ಕಲಿತವಳು. ೬೦ವರ್ಷ ವಯಸ್ಸಿನ ಇವಳು ಇಪ್ಪತ್ತೈದು ವರ್ಷಗಳಿಂದ ಚೌಡಕಿ ಹಾಡುಗಳನ್ನು ಹಾಡುತ್ತಿದ್ದಾಳೆ. ಇವಳ ಮೇಳದಲ್ಲಿ ನಾಲ್ವರು ಹಾಡುಗಾರ್ತಿಯರು:

| | | |
|---|---|---|
| ಕಲ್ಲವ್ವ ಪೂಜಾರಿ | – | ಶ್ರುತಿ |
| ಯಲ್ಲವ್ವ ಗಿರೆಪ್ಪಗೋಳ | – | ಚೌಡಕಿ |
| ಲಕ್ಕವ್ವ ಸಾತಪ್ಪ ಹೊಸೂರ | – | ಶ್ರುತಿ |
| ಬೌರವ್ವ ಸಿದ್ದಪ್ಪ ಮೇತ್ರಿ | – | ತಾಳ |

**೪.೧.೫. ವೀರಭದ್ರ ಆರಾಧನಾ ಕೇಂದ್ರಿತ ಕಲೆಗಳ ಕಲಾವಿದರು:**

**೪.೧.೫.೧. ವೀರಗಾಸೆಯವರು:**

**ಹಂದಿಗುಂದದ ಮಲ್ಲಪ್ಪ ರಾಮಪ್ಪ ಸುಳ್ಳಣ್ಣವರ :**

ಈತ ಪುರವಂತ. ಈತನ ವೀರಗಾಸೆ ಮೇಳದಲ್ಲಿ ಎಂಟು ಜನರಿದ್ದು, ಅವರೆಲ್ಲರೂ ವಿವಿಧ ಜಾತಿಗಳಿಗೆ ಸೇರಿದವರು. ಅಂಬಿಗರ ಚೌಡಯ್ಯಾ, ಬಸವಣ್ಣ ಮುಂತಾದ ಶರಣರ ವಚನಗಳನ್ನು ಹೇಳುತ್ತಾರೆ. ಮಲ್ಲಪ್ಪನ ತಂದೆ ರಾಮಪ್ಪ, ಅಜ್ಜ ಸಂಗಪ್ಪ ಹೀಗೆ ವಂಶಪರಂಪರೆಯಿಂದ ಇವರದು ಪುರವಂತರ ಮನೆತನ. ಅಗ್ನಿ

ಹಾಯುವುದು, ಶಸ್ತ್ರ ಚುಚ್ಚಿಕೊಳ್ಳುವುದು, ಹೆಜ್ಜೆ ಕುಣಿತ, ಹಗ್ಗ ಪಾರು ಮಾಡುವುದು ಮೊದಲಾದವುಗಳನ್ನು ಮಾಡುವರು. ಇವರು ತಮ್ಮ ಮೇಳಕ್ಕೆ ವೀರಭದ್ರೇಶ್ವರ ಸೇವಾಸಂಘ ಎಂದು ನಾಮಕರಣ ಮಾಡಿದ್ದಾರೆ. ತಂಡದ ಕಲಾವಿದರ ಹೆಸರುಗಳು ಇಂತಿವೆ:

ಶ್ರೀಕಾಂತ ಮಲ್ಲಪ್ಪ ಬಡಿಗೇರ
ಮಲ್ಲಪ್ಪ ಬಾಳಪ್ಪ ಮಿರ್ಜಿ
ಮಲ್ಲಪ್ಪ ಅಣ್ಣಪ್ಪ ಚೌಗಲಾ
ಸದಾಶಿವ ಗುರುಪಾದಪ್ಪ ಹೆಗ್ಗಾಣ
ಬಸವರಾಜ ಪರಪ್ಪ ಭದ್ರಶೆಟ್ಟಿ
ಮಲ್ಲಪ್ಪ ಶಂಕರ ಉಳ್ಳಾಗಡ್ಡಿ
ಸದಾಶಿವ ರಾಮಪ್ಪ ಬಳ್ಳಿಗೇರಿ

**೪.೧.೫.೨. ಕರಡಿ ಮಜಲಿನವರು:**

**ಹಂದಿಗುಂದದ ಶಂಕ್ರೆಪ್ಪ ಪಾಟೀಲ :**

ಇವರದು ಶ್ರೀಮಲ್ಲಿಕಾರ್ಜುನ ಜನಪದ ಕರಡಿ ಮಜಲು. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶನ ನೀಡಿದ್ದು ಇವರ ಹೆಗ್ಗಳಿಕೆ. ಗಣರಾಜ್ಯೋತ್ಸವದ ದಿಲ್ಲಿ ಪರೇಡದಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದರು. ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬಹುಮಾನ ಪಡೆದಿರುವರು. ಇವರ ಮೇಳ ನೋಂದಣಿಕೃತಗೊಂಡು ೨೫ ವರ್ಷಗಳಾದವು. ತಾಲೂಕು, ಜಿಲ್ಲೆ, ರಾಜ್ಯ ಹಾಗೂ ರಾಷ್ಟ್ರಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ಅನೇಕ ಬಹುಮಾನಗಳನ್ನು ಬಾಚಿಕೊಂಡ ಮೇಳವಿದು. ಮೈಸೂರು ದಸರಾ ಜನಪದ ಮೇಳದಲ್ಲಿ ೬ ಸಲ, ಹಂಪಿ ಉತ್ಸವದಲ್ಲಿ ೫ ಸಲ, ಬನವಾಸಿಯ ಕದಂಬ ಉತ್ಸವದಲ್ಲಿ ೩ ಸಲ, ಪಟ್ಟದಕಲ್ಲು ಬದಾಮಿ ಉತ್ಸವದಲ್ಲಿ ೩ ಸಲ ಭಾಗವಹಿಸಿರುವರು. ದೆಹಲಿಯಲ್ಲಿ ಜರುಗಿದ ಕಾಮನವೆಲ್ತ್ ಕ್ರೀಡಾಕೂಟ–೨೦೧೦ಕ್ಕೆ ಆಯ್ಕೆಯಾಗಿ ಕರ್ನಾಟಕವನ್ನು ಪ್ರತಿನಿಧಿಸಿರುವುದು ಬಾಗೆನಾಡಿನ ಜಾನಪದದ ಹೆಗ್ಗಳಿಕೆ.

[illegible]

[illegible]

[illegible]

[illegible]

ಮೇಳದ ಸದಸ್ಯರು :

೧. ಶಂಕ್ರೆಪ್ಪ ಮಲ್ಲಪ್ಪ ಪಾಟೀಲ – ಕರಡಿ

೨. ಪರಪ್ಪ ಕರೆಪ್ಪ ತಿಪ್ಪಣ್ಣವರ – ಡೋಲು

೩. ಸದಾಶಿವ ಬಸಪ್ಪ ಭದ್ರಶೆಟ್ಟಿ – ಡೋಲು

೪. ಚೆನ್ನಮಲ್ಲ ಸಿದ್ದಪ್ಪ ಮಿರ್ಜಿ – ಕೈತಾಳ

೫. ಮಲ್ಲಪ್ಪ ಮುರಿಗೆಪ್ಪ ಭದ್ರಶೆಟ್ಟಿ – ಕೈತಾಳ

೬. ಅಣ್ಣಪ್ಪ ಯಲ್ಲಪ್ಪ ಬಜಂತ್ರಿ – ಶಹನಾಯಿ

೭. ಹಣಮಂತ ಯಮನಪ್ಪ ಬಜಂತ್ರಿ – ಶಹನಾಯಿ

೮. ಈಶ್ವರ ವೆಂಕಪ್ಪ ಬಜಂತ್ರಿ – ಶ್ರುತಿ

ಶಂಕ್ರೆಪ್ಪ ಪಾಟೀಲರಿಗೆ ರಾಜ್ಯ ಹಾಗೂ ಕೇಂದ್ರ ಸರಕಾರದ ಮಾಶಾಸನ ಸಿಗುತ್ತಿದೆ.

ಕಟಕಬಾವಿಯ ರಾಮಚಂದ್ರ ರೇವಪ್ಪ ಪೂಜೇರಿ, ಹಂದಿಗುಂದದ ಪರಪ್ಪ ಕರೆಪ್ಪ ತಿಪ್ಪಣ್ಣವರ, ಮುತ್ತಪ್ಪ ಈರಪ್ಪ ಚಿನಗುಂಡಿ, ಬೆಂಡವಾಡದ ಬಸಪ್ಪ ಶಿವರುದ್ರಪ್ಪ ಪೂಜೇರಿ, ಮಾವಿನಹೊಂಡಾದ ಪಾಂಡು ಭೀಮಾ ಯಂಡ್ರಾಂವಿ, ಸಂತ್ರಾಮ ಮಾತಪ್ಪ ಮಾಂಗ, ಶಂಕರ ರಾಮಚಂದ್ರ ಬಜಂತ್ರಿ ಈ ನಾಡಿನ ಪ್ರಮುಖ ಕರಡಿ ಕಲಾವಿದರು.

**೪.೧.೬. ಶಕ್ತಿ ಆರಾಧನಾ ಕೇಂದ್ರಿತ ಕಲೆಗಳ ಕಲಾವಿದರು:**

**ಗೊಂದಲಿಗರು:**

ಈಗ ಇಲ್ಲಿ ಐದು ಗೊಂದಲಿಗರ ಮೇಳಗಳಿವೆ. ರಾಯಬಾಗ ಹಾಗೂ ಚಿಂಚಲಿಗಳಲ್ಲಿ ತಲಾ ಎರಡೆರಡು ಮರಾಠಾ ಗೊಂದಲಿಗರ ಮೇಳಗಳಿವೆ. ಯಲ್ಪಾರಟ್ಟಿಯ ದೇವಪ್ಪಾ ಗೊಂದಳಿ ಗೊಂದಲ ಹಾಕುತಿದ್ದರು. ಅವರ ನಂತರ ಅವರ ಮಕ್ಕಳು, ಮೊಮ್ಮಕ್ಕಳು ಇದನ್ನು ಮುಂದುವರಿಸಿದ್ದಾರೆ.

ಸದಾಶಿವ ರಾಯಪ್ಪಾ ಗೊಂದಳಿ ಇವರ ಮೇಳದಲ್ಲಿ ಸಂಗಪ್ಪ ದುಂಡಪ್ಪಾ ಗೊಂದಳಿ, ರಮೇಶ ದುಂಡಪ್ಪಾ ಗೊಂದಳಿ, ಸುರೇಶ ಸಂಗಪ್ಪಾ ಗೊಂದಳಿ

[illegible]

[illegible]

[illegible]

ನಾಲ್ವರು ಕಲಾವಿದರು. ಸದಾಶಿವ ಮತ್ತು ಸಂಗಪ್ಪ ಮುಮ್ಮೇಳದವರು. ಉಳಿದವರು ಹಿಮ್ಮೇಳದವರು. ಲಿಂಗಾಯತ, ಬ್ರಾಹ್ಮಣ, ಜೈನ, ಮರಾಠಾ, ದಾಸರು ಮುಂತಾದವರು ಗೊಂದಲ ಹಾಕಿಸುವರು.

ಗೊಂದಲಿಗನ ಪ್ರತಿಭೆಯ ಪ್ರದರ್ಶನವೆಂದರೆ ರಾತ್ರಿಯಿಡಿ ಯಾರಿಗೂ ನಿದ್ದೆ ಬಾರದಂತೆ ಕಥೆ ಹೇಳುವುದು. ವಿಕ್ರಮ, ನಳ, ಏಳು ಜನ ಹೆಂಡಂದಿರು, ಧರ್ಮಶೀಲರಾಜ ಮುಂತಾದ ಏಳೆಂಟು ಕಥೆ ಹೇಳುವರು. ನಡುನಡುವೆ ಹಾಸ್ಯದ ಪ್ರಸಂಗಗಳನ್ನು ಅಭಿನಯಿಸುವರು.

**೪.೨. ವೃತ್ತಿ ಕಲಾವಿದರು:**

ಬಜಂತ್ರಿ, ಬಹುರೂಪಿ, ಜಾತಿಗಾರರು, ಹೆಳವರು ಬಾಗೆನಾಡಿನ ಪ್ರಮುಖ ವೃತ್ತಿ ಕಲಾವಿದರು. ಬಹುರೂಪಿ ಹಾಗೂ ಜಾತಿಗಾರರು ಭಾಗಶಃ ರಂಗಕಲಾವಿದರು. ಆದ್ದರಿಂದ ಇಲ್ಲಿ ಕೇವಲ ಬಜಂತ್ರಿ(ವಾಜಂತ್ರಿ)ಗಳ ವಿವರಗಳನ್ನು ನೀಡಲಾಗಿದೆ. ಭಜಂತ್ರಿಗಳು ಶಹನಾಯಿ ವಾದಕರು.

**ಶಹನಾಯಿ ವಾದಕರು:**

**ಹಂದಿಗುಂದದ ಅಣ್ಣಪ್ಪ ಯಂಕಪ್ಪ ಬಜಂತ್ರಿ :**

ಈತ ಯಲ್ಲಟ್ಟಿಯ ಪರಶುರಾಮ ಹಣಮಂತ ಬಜಂತ್ರಿಯ ಶಿಷ್ಯ. ವಯಸ್ಸು ೬೬ ವರ್ಷ. ಶಂಕ್ರೆಪ್ಪ ಪಾಟೀಲರ ಕರಡಿ ಮಜಲಿಗೆ ಶಹನಾಯಿ ಸಾಥ್ ನೀಡುತ್ತಾನೆ. ಪಿರಿಯಾಪಟ್ಟಣದಲ್ಲಿ ಜರುಗಿದ ಸ್ವಾತಂತ್ರ್ಯೋತ್ಸವದ ಸುವರ್ಣಮಹೋತ್ಸವ ಸಮಾರಂಭದಲ್ಲಿ ಶಹನಾಯಿ ನುಡಿಸಿದ್ದನು.

**ಹಾರೂಗೇರಿಯ ಯಮನಪ್ಪ ಭೀಮಪ್ಪ ಬಜಂತ್ರಿ :**

ಈತ ಬಾಗೆನಾಡಿನ ಶಹನಾಯಿ ಅರಸ. ಮುಂಬೈ, ಬೆಂಗಳೂರು, ಧಾರವಾಡ ಮುಂತಾದೆಡೆಗಳಲ್ಲಿ ಶಹನಾಯಿ ನುಡಿಸಿ ಹಲವಾರು ಪ್ರಶಸ್ತಿ-ಸನ್ಮಾನಗಳನ್ನು ಗಳಿಸಿದ ಶ್ರೇಷ್ಠ ವಾದಕ. ಕಣಿ, ಕರಡಿ, ತಾಸೆ, ಡೊಳ್ಳಿನಕೈಪಟ್ಟು

ಮೊದಲಾದ ಮೇಳಗಳಿಗೆ ಶಹನಾಯಿ ಸಾಥ್ ಕೊಡುವ ಅತ್ಯುತ್ತಮ ಕಲಾವಿದ. ಕೆಲವು ಮೇಳಗಳಿಗೆ ಉಸ್ತಾದನಾಗಿದ್ದವನು. ಇವನ ಗುರು ಈತನ ತಂದೆ ಭೀಮಪ್ಪ ಕೃಷ್ಣಪ್ಪ ಬಜಂತ್ರಿ. ಭೀಮಪ್ಪ ಒಳ್ಳೆಯ ಶಹನಾಯಿವಾದಕ. ಅವನ ಮೂಲ ಊರು ಜಮಖಂಡಿ ತಾಲೂಕಿನ ಕಲಹಳ್ಳಿ. ಆನಂತರ ಅಲ್ಲಿಂದ ಅಥಣಿ ತಾಲೂಕಿನ ಹಲ್ಯಾಳಕ್ಕೆ ಹೋದನು. ೫೦ವರ್ಷಗಳ ಹಿಂದೆ ಹಲ್ಯಾಳದಿಂದ ಹಾರೂಗೇರಿಗೆ ಬಂದ. ಅವನನ್ನು ಹಾರೂಗೇರಿಯ ಜನ ಹಲ್ಯಾಳ ಭೀಮಪ್ಪನೆಂದೇ ಗುರುತಿಸುತ್ತಿದ್ದರು.

ಕೊಲ್ಲಾಪುರ ಜಿಲ್ಲೆಯ ಕಡೋಲಿಯಲ್ಲಿ ಪ್ರತಿವರ್ಷ ಸಿದರಾಯನ ಜಾತ್ರೆ ನಡೆಯುತ್ತದೆ. ಅಲ್ಲಿ ಸುಮಾರು ೫೦ರಷ್ಟು ಡೊಳ್ಳಿನ ಮೇಳಗಳು ಆಗ ಕೂಡುತ್ತಿದ್ದವು. ಅಲ್ಲಿ ಪ್ರತಿ ವರ್ಷ ಹಾರೂಗೇರಿಯ ಈ ಡೊಳ್ಳಿನ ಕೈಪಟ್ಟಿನ ಮೇಳ ಪ್ರಥಮ ಬಹುಮಾನ ಪಡೆಯುತಿತ್ತು. ಇದರ ಶ್ರೇಯಸ್ಸು ಯಮನಪ್ಪ ಬಜಂತ್ರಿಯವರಿಗೆ ಸಲ್ಲಬೇಕು. ಯಮನಪ್ಪ ೭೮ವರ್ಷ ಬದುಕಿದ್ದ. ಕಳೆದ ನಾಲ್ಕು ವರ್ಷಗಳ ಹಿಂದೆ ಅಂದರೆ ೨೦೦೫ರಲ್ಲಿ ತೀರಿಕೊಂಡನು.

ಯಮನಪ್ಪ ಹಲವು ಶಿಷ್ಯರನ್ನು ಬೆಳೆಸಿದವನು. ಮದಬಾವಿಯ ಯಲ್ಲಪ್ಪ ಬಜಂತ್ರಿ, ಹಲ್ಯಾಳದ ರಾಮಪ್ಪ ಬಜಂತ್ರಿ, ಅಲಕನೂರಿನ ಮಾರುತಿ ಬಜಂತ್ರಿ ಮೊದಲಾದವರು ಇವನ ಶಿಷ್ಯರು.

ಯಮನಪ್ಪನ ಶಹನಾಯಿ ವಾರಸುದಾರ ಅವನ ಮಗ ಮನ್ಸೂರ್. ಈಗ ಈತ ನಾಡಿನ ಪ್ರಸಿದ್ಧ ಕಣಿ ಕಲಾವಿದ ವಿಷ್ಣು ಕಂಚಕಾರ ಅವರಿಗೆ ಶಹನಾಯಿ ಸಾಥ್ ಕೊಡುತ್ತಾನೆ.

ಮಹಾದೇವ ಕರಡಿ ಮೇಳ ಚಿಂಚಲಿ

ನಿಜಗುಣಿ ಮಹದೇವಪ್ಪ ಶಿಪುರೆ – ಕೈ ತಾಳ

ಈರಯ್ಯ ಚೆನ್ನಬಸಯ್ಯ ಹಿರೇಮಠ – ಕರಡಿ ವಾದಕರು

ಗಣಪತಿ ರಾಮಾ ಪಡೋಲಕರ – ದಿಮ್ಮು

ಮಂಜುನಾಥ ಸಿದ್ದಯ್ಯ ಹಿರೇಮಠ – ದಿಮ್ಮು

ಶ್ರೀಶೈಲ ಚೆನ್ನಪ್ಪ ಮಾಂಜರಿಯವರ ನಂತರ ಈ ಮೇಳ ಆರಂಭವಾಯಿತು ಈಗ ಈ ಮೇಳಕ್ಕೆ ೨೫ ವರ್ಷಗಳಾಗಿವೆ.

ಇತರ ಶಹನಾಯಿ ಕಲಾವಿದರೆಂದರೆ ಕಂಕಣವಾಡಿಯ ತಮ್ಮಾಣಿ ಮಲ್ಲಪ್ಪ ಬಜಂತ್ರಿ, ಸಿದ್ರಾಮ ಯಲ್ಲಪ್ಪ ಬಜಂತ್ರಿ, ಸವಸುದ್ದಿಯ ರಾಮಪ್ಪ ಲಕ್ಷ್ಮಣ ಬಜಂತ್ರಿ, ಕಟಕಬಾವಿಯ ರೇವಣ್ಣಾ ಕಾಮಣ್ಣಾ ಬಜಂತ್ರಿ, ಕಾಮಣ್ಣಾ ಭೀಮಣ್ಣಾ ಬಜಂತ್ರಿ, ಬಸವಂತ ಪರಸಪ್ಪ ಬಜಂತ್ರಿ, ಗೋಪಾಲ ಬಾಳಪ್ಪ ಬಜಂತ್ರಿ, ಹಂದಿಗುಂದದ ಅಣ್ಣಪ್ಪ ವೆಂಕಪ್ಪ ಗುರವ, ಚಿಂಚಲಿಯ ಲಕ್ಷ್ಮಣ ಗೋಪಾಲ ಮಲಾಜುರೆ.

**೪.೩. ಶುದ್ಧ ಮನರಂಜನೆಯ ಕೇಂದ್ರಿತ ಕಲೆಗಳ ಕಲಾವಿದರು:**

**೪.೩.೧.೧. ಕಣಿವಾದಕರು:**

**ಹಾರೂಗೇರಿಯ ವಿಷ್ಣು ಕಂಚಕಾರ :**

ಇಂದಿನ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಜಾನಪದ ಕಲಾ ಪ್ರಕಾರಗಳು ಮೂಲೆಗುಂಪಾಗಿ ನಮ್ಮ ಸಾಂಸ್ಕೃತಿಕ ಸಂಪತ್ತು ಕ್ಷೀಣಿಸುತ್ತಿದೆ. ಇಂಥ ಸಂದರ್ಭದಲ್ಲಿ ಕಲೆಯ ಉಳಿವಿಗಾಗಿ ಬದುಕನ್ನು ಮೀಸಲಿಟ್ಟಿರುವ ಹಾರೂಗೇರಿ ವಿಷ್ಣು ಕಂಚಕಾರ ಕನ್ನಡ ನಾಡಿನ ಅಪರೂಪದ ಕಣಿವಾದಕ. ವಿಷ್ಣು ಕಂಚಕಾರನ ಕಣಿಯ ದನಿ ಕೇಳುವ ಕಲಾರಸಿಕರಿಲ್ಲ. ಕಣಿಯ ಮೇಲೆ ಗುಣಿ ಕುಣಿಸುವ ಕಂಚಕಾರನ ಕಲೆಗಾರಿಕೆಗೆ ತಲೆದೂಗದವರಿಲ್ಲ.

ವಿಷ್ಣು ಕಂಚಕಾರನ ತಂದೆ, ಅಜ್ಜ, ಮುತ್ತಜ್ಜ ಎಲ್ಲರೂ ಕಣಿವಾದಕರು. ಇವರ ತಂದೆ ಪರಸಪ್ಪ ಬ್ರಿಟಿಷರ ತಲೆದೂಗಿಸಿದ ಪ್ರತಿಭಾವಂತ ಕಣಿವಾದಕ. ದೊಡ್ಡಪ್ಪ ಮಹಾದೇವ ಕಂಚಕಾರ ಧಾರವಾಡ ಜಿಲ್ಲೆಯ ಯಮನೂರು ಜಾತ್ರೆಯಲ್ಲಿ ಕಣಿ ಕುಣಿಸಿ 'ದೊಡ್ಡ ಖಡಿ' ಗೆದ್ದು ತಂದ ಬಹದ್ದೂರ. ೧೫೦ ವರ್ಷಗಳ ಹಿಂದಿನ ಈ ಖಡಿ ಕಂಚಕಾರ ಮನೆತನದ ಕಲಾವೈಭವಕ್ಕೆ ಸಾಕ್ಷಿ. ಮಹಾದೇವನ ಸಹೋದರನಾಗಿದ್ದ ಅಣ್ಣಪ್ಪ ಮತ್ತು ಮಲ್ಲಪ್ಪ ಅಣ್ಣನ ಕಣಿಗೆ ದಿಮ್ಮಿಯ ಸಾಥ್ ನೀಡುತ್ತಿದ್ದರು. ಮಹಾದೇವ ತನ್ನ ಸಹೋದರನಾದ ಮಲ್ಲಪ್ಪನ ಮಗ ಪರಸಪ್ಪನಿಗೆ ಈ ಕಲೆಯ ವಾರಸುದಾರಿಕೆಯನ್ನು ಒಪ್ಪಿಸಿದ. ಪರಂಪರೆಯಿಂದ ಬಂದ ಕಣಿಯ ಖಡಿ ಪರಸಪ್ಪನ ಮೂಲಕ ವಿಷ್ಣುವಿನ ಕೈಗೆ ಬಂದು ನಾದದೇವತೆಯ ನುಡಿಯಾಯಿತು.

ಈ ಕಣಿಯ ಗಣಿಯ ಮೂಲ ತೊರಗಲ್ಲು. ಬಹಳ ವರ್ಷಗಳ ಹಿಂದೆ ಪೂರ್ವಜರು ತೊರಗಲ್ಲು ತೊರೆದು ತೇರದಾಳಕ್ಕೆ ಬಂದರು. ವಿಷ್ಣು ಕಂಚಕಾರನ ತಂದೆ ತೇರದಾಳ ಬಿಟ್ಟು ಹಾರೂಗೇರಿಗೆ ಬಂದು ನೆಲೆಸಿ ಶತಮಾನ ಸಂದಿದೆ. ಹಾರೂಗೇರಿ ವಿಷ್ಣುವಿನ ತಾಯಿಯ ತವರು. ಈತ ಹುಟ್ಟಿದ್ದು ಇಲ್ಲಿಯೇ. ಕೈಯಲ್ಲಿ ಕಣಿಯ ಗುಣಿ ಹಿಡಿದು ಬೆಳೆದ ವಿಷ್ಣು ತನ್ನ ಬದುಕೆಲ್ಲವನ್ನು ಈ ಕಲೆಗೆ ಧಾರೆಯೆರೆದಿದ್ದಾನೆ. ನಾಡಿನಾದ್ಯಂತ ಕಣಿಯ ಧ್ವನಿ ಮೊಳಗಿಸಿದ ಈತ ಅದಕ್ಕೊಂದು ಮೆರುಗು–ಬೆರಗು ತಂದುಕೊಟ್ಟ. ಕಣಿ ಎಂದರೆ ವಿಷ್ಣು ವಿಷ್ಣು ಎಂದರೆ ಕಣಿ.

ವಿಷ್ಣು ಕಣಿಯ ಪವಾಡ. ಹತ್ತು ವರ್ಷದ ಬಾಲಕನಿದ್ದಾಗಲೇ ಸಹಸ್ರ ಸಹಸ್ರ ಜನರ ಮನವನ್ನು ಗೆದ್ದುಕೊಂಡ. ಆರನೇ ತರಗತಿಯಲ್ಲಿದ್ದಾಗ ಶಾಲೆಗೆ ವಿದಾಯ ಹೇಳಿ ಕಣಿಯ ಗತ್ತಿಗೆ ಒತ್ತೆಗೊಂಡ.

೧೯೬೨ ರಲ್ಲಿ ಮುಂಬಯಿಯಲ್ಲಿ ಜರುಗಿದ ಅಖಿಲ ಭಾರತ ಸೇವಾ ದಳದ ಮಹಾ ಶಿಬಿರಕ್ಕೆ ನಾ.ಸು. ಹರ್ಡೀಕರ ಜತೆ ವಿಷ್ಣು ಕಂಚಕಾರ ಹೋಗಿದ್ದ. ಅಲ್ಲಿ ಕಣಿವಾದನದ ಮೂಲಕ ವಿಷ್ಣು ಭಾರತದ ಮೊದಲ ಪ್ರಧಾನಿ ಜವಾಹರಲಾಲ ನೆಹರು ಅವರ ಮೆಚ್ಚುಗೆ ಗಳಿಸಿದನು. ಬಿಜಾಪುರ, ಗದಗ, ಬೆಳಗಾವಿ, ಹುಬ್ಬಳ್ಳಿ, ಧಾರವಾಡ, ಬಾನಂದೂರು, ರಾಮನಗರ, ಬೆಂಗಳೂರು, ಹೈದರಾಬಾದ, ಮುಂಬಯಿ ಮಹಾನಗರಗಳಲ್ಲಿ ವಿಷ್ಣು ಕಂಚಕಾರನ ಕಣಿ ಕುಣಿದಿದೆ. ವಿಶ್ವವಿದ್ಯಾಲಯ, ಅಕಾಡೆಮಿ, ಜಾನಪದ ಲೋಕ ಮತ್ತು ಸಂಸ್ಕೃತಿ ಇಲಾಖೆಗಳು ಪ್ರಶಸ್ತಿ ನೀಡಿ ಗೌರವಿಸಿವೆ. ಅಖಿಲ ಕರ್ನಾಟಕ ಜಾನಪದ ಸಮ್ಮೇಳನ, ಸಾಹಿತ್ಯ ಸಮ್ಮೇಳನ, ಮೈಸೂರು ದಸರಾ ಉತ್ಸವಗಳಲ್ಲಿ ಇವರ ಕಣಿವಾದನ ವಿದ್ವಾಂಸರ ಗಮನ ಸೆಳೆದಿದೆ. ರಾಜ್ಯ ಜಾನಪದ ಅಕಾಡೆಮಿ ೧೯೯೧ರಲ್ಲಿ ಪ್ರಶಸ್ತಿ ನೀಡಿ ಸನ್ಮಾನಿಸಿದೆ. ಆಕಾಶವಾಣಿ ಹಾಗೂ ದೂರದರ್ಶನಗಳು ಹತ್ತಾರು ಬಾರಿ ಇವರ ಕಲೆಯನ್ನು ಪ್ರಸಾರ ಮಾಡಿವೆ. ಇತ್ತೀಚಿಗೆ ಬೆಂಗಳೂರು ದೂರದರ್ಶನ 'ಜನಪದ ಜಗತ್ತು' ಎಂಬ ಕಾರ್ಯಕ್ರಮದಲ್ಲಿ ಮೂವತ್ತು ನಿಮಿಷ ವಿಷ್ಣು ಕಂಚಕಾರ ತಂಡದ ಕಲೆಯನ್ನು ಪ್ರಸಾರ ಮಾಡಿತು.

[illegible]

ಮಂಟೂರದ ಮಲ್ಲಪ್ಪ ಶಿವಲಿಂಗಪ್ಪ ಹಳ್ಳೂರ, ಭೀಮಗೌಡ ಸಿದಗೌಡ ಪಾಟೀಲ, ಸದಾಶಿವ ಅಲಗೌಡ ಕುಲಗೋಡೆ, ರಾಮಪ್ಪ ರಾಯಪ್ಪ ಜೀವಣಿ, ಕೆಂಪಣ್ಣಾ ರಾಮಪ್ಪ ದೇವರಮನಿ, ರೇವಪ್ಪ ಕಾಡಪ್ಪ ಬಡಿಗೇರ, ರಾಮಗೌಡ ಪೀರಗೌಡ ಪಾಟೀಲ, ಕಟಕಬಾವಿಯ ಮಲ್ಲಪ್ಪ ಸಿದ್ದಪ್ಪ ಪೂಜೇರಿ, ನಿಂಗಪ್ಪ ರಾಮಪ್ಪ ಪೂಜೇರಿ, ಬಾಪಣ್ಣಾ ರಾಮಪ್ಪ ನಾವಿ, ನಿಂಗಪ್ಪ ಹಂಪಣ್ಣಾ ನಾವಿ, ಜೋಡಟ್ಟಿಯ ಸತ್ಯೆಪ್ಪ ಬಸಪ್ಪ ಮಾಂಗ, ರಮೇಶ ಹಾಲಪ್ಪ ನಾಯಿಕ, ಗಣಪತಿ ಸತ್ಯೆಪ್ಪ ಮಾಂಗ, ಈಶ್ವರ ನಿಂಗಪ್ಪ ಪಾಟೀಲ, ಬೆಂಡವಾಡದ ಶಿವರುದ್ರಪ್ಪ ಬಸಪ್ಪ ಪೂಜಾರಿ, ಮಡಿವಾಳಪ್ಪ ಧರೆಪ್ಪ ನಂದಿಬನಿ, ಗುರಲಿಂಗ ನಾಗಪ್ಪ ಕಾಗಿ, ಕೃಷ್ಣಯ್ಯಾ ಪಾವಡಯ್ಯಾ ಮಠಪತಿ, ಅಪ್ಪಣ್ಣ ಗುರುಪಾದ ಬೆನ್ನಾಳೆ, ಹಾರೂಗೇರಿಯ ಗುರುನಾಥ ಪರಸಪ್ಪ ಕಂಚಗಾರ, ಭಗವಂತ ಪರಸಪ್ಪ ಕಂಚಗಾರ ಪ್ರಮುಖ ಕಣಿವಾದಕರು.

**೪.೩.೧.೨.ಸಂಪ್ರದಾನಿ ವಾದಕರು:**

**ಅಲಕನೂರಿನ ಶ್ರೀಶೈಲ ಕಾಂಬಳೆ :**

ಅಲಕನೂರು ಗ್ರಾಮದ ಶ್ರೀಶೈಲ ಕಾಂಬಳೆ ಉತ್ತಮ ಸಂಪ್ರದಾನಿವಾದಕ. ಬಡತನದಲ್ಲಿ ಬಳಲುತ್ತಿದ್ದರೂ ಕಲೆಯಲ್ಲಿ ಯಾವಾಗಲೂ ಹೊಸತನವನ್ನು ಕಾಣುವ ಶ್ರೀಶೈಲ ಕಾಂಬಳೆ, ಸಂಪ್ರದಾನಿವಾದದೊಂದಿಗೆ ಬೆಳೆದು ಬಂದ ವ್ಯಕ್ತಿ. ಅಣ್ಣ ಶಿವಪ್ಪನಿಗೂ ಹಲಗೆ ನುಡಿಸುವ ಹವ್ಯಾಸ. ಅಣ್ಣನ ಜೊತೆಗೆ ಹಲಗೆ ನುಡಿಸಲು ರೂಢಿಸಿಕೊಂಡ ಶ್ರೀಶೈಲನು ಬಜಂತ್ರಿ ಯಮನಪ್ಪನ ಶಿಷ್ಯನಾದನು. ಸಂಪ್ರದಾನಿವಾದನದಲ್ಲಿ ಅಪಾರವಾದ ವಿದ್ಯೆ ಸಂಪಾದಿಸಿದ. ಪ್ರಗತಿ ಹಾದಿಯಲ್ಲಿ ಹೊರಟ ಶ್ರೀಶೈಲನಿಗೆ ಬಾನಂದೂರು ಕೆಂಪಯ್ಯನವರ ಪರಿಚಯವಾಯಿತು. ಧಾರವಾಡ ಕಲಾಭವನದಲ್ಲಿ ಎರಡು–ಮೂರು ಕಾರ್ಯಕ್ರಮಗಳನ್ನು ಕೊಟ್ಟು ಪ್ರಶಸ್ತಿ ಪತ್ರಗಳನ್ನು ಗಿಟ್ಟಿಸಿಕೊಂಡಿದ್ದಾನೆ. ಹುಬ್ಬಳ್ಳಿಯ ಅಖಿಲ ಕರ್ನಾಟಕ ಜಾನಪದ ಚರ್ಮವಾದ್ಯ ಕಲಾಮೇಳದಲ್ಲಿ ತನ್ನ ತಮ್ಮ ಕಲೆಯನ್ನು ಪ್ರದರ್ಶಿಸಿ ಪ್ರಶಸ್ತಿ ಪತ್ರ ಗಿಟ್ಟಿಸಿದ್ದಾನೆ.

ಶ್ರೀಶೈಲನ ಸತತವಾದ ಪರಿಶ್ರಮದಿಂದ ಧಾರವಾಡ ಆಕಾಶವಾಣಿಯಲ್ಲಿ ಕಾರ್ಯಕ್ರಮ ಕೊಡುವ ಭಾಗ್ಯವೂ ದೊರೆಯಿತು. ಅಲ್ಲದೆ ಮಾರುತಿ ಹೂಗಾರರ ಸಂಗಡಿಗರಾಗಿ ದೂರದರ್ಶನ ಕಾರ್ಯಕ್ರಮವನ್ನು ಕೊಟ್ಟಿದ್ದಾನೆ. ಚಿಕ್ಕಪುಟ್ಟ ಕಾರ್ಯಕ್ರಮಗಳಿಗಂತೂ ಎಣಿಕೆಯೇ ಇಲ್ಲ. ಮನೆಯಲ್ಲಿ ಎಷ್ಟೇ ಕಷ್ಟಗಳಿದ್ದರೂ ಸಂಪ್ರದಾನಿವಾದನವನ್ನು ಮುಂದುವರೆಸುವುದೇ ತನ್ನ ಹೆಬ್ಬಯಕೆ ಎನ್ನುತ್ತಾನೆ ಶ್ರೀಶೈಲ. ಕರ್ನಾಟಕ ರಾಜ್ಯ ಅಕಾಡೆಮಿ ಪ್ರಶಸ್ತಿ ಗಿಟ್ಟಿಸುವ ಮಹತ್ವಾಕಾಂಕ್ಷೆಯುಳ್ಳ ಶ್ರೀಶೈಲ ಬಹಳ ಜನರಿಗೆ ಅಪರಿಚಿತ.

**ಹಂದಿಗುಂದದ ಭಾಸ್ಕರ ಸಿದ್ದಪ್ಪ ಅಜ್ಜಪ್ಪಗೋಳ:**

ತಾಲೂಕು, ಜಿಲ್ಲಾ, ರಾಜ್ಯಮಟ್ಟದ ಕಲಾಮೇಳದಲ್ಲಿ ಭಾಗವಹಿಸಿ ಬಹುಮಾನ ಪಡೆದಿರುವನು. ಹಂಪಿ ಉತ್ಸವದಲ್ಲಿ ತನ್ನ ಕಲೆಯನ್ನು ಪ್ರದರ್ಶಿಸಿರುವನು. ಈತನ ವಯಸ್ಸು ೬೦ ವರ್ಷ. ಹಲಗೆ ಸಪ್ಪಳಕ್ಕೆ ಕಿವಿಗಳು ಮಂದಾಗಿವೆ. ಸರಕಾರದ ಸಹಾಯ ಸಿಕ್ಕಿಲ್ಲ. ಇವನ ಮೇಳದಲ್ಲಿ ಎಂಟು ಜನರಿದ್ದಾರೆ.

ಚಿಂಚಲಿಯ ನಾರಾಯಣ ರಾಮು ಸಂಗಣ್ಣವರ, ಅನಂತ ಲಕ್ಷ್ಮಣ ಕಾಂಬಳೆ, ಅಂತೂ ಲಕ್ಷ್ಮಣ ಸಂಗಣ್ಣವರ, ಜಂಬು ಮಾರುತಿ ಕುರಣೆ, ಸವಸುದ್ದಿಯ ಮಾದೇವ ಸಿದ್ದಪ್ಪ ಮಾದರ, ಸಿದ್ದಪ್ಪ ಲಕ್ಕಪ್ಪ ಬೆಳಗಲಿ, ಪುಂಡಲೀಕ ರಾಮಜಪ್ಪ ಬಜಂತ್ರಿ, ಸಿದ್ದಪ್ಪ ಮಾದರ, ಅಲಕನೂರದ ಸದಾಶಿವ ರಾಜಪ್ಪ ಕಾಂಬಳೆ, ಶ್ರೀಶೈಲ ಇಟ್ಟಪ್ಪ ಕಾಂಬಳೆ, ಜಂಬು ಮಾರುತಿ ಕುರಣಿ, ಮನಸೂರ ಯಮನಪ್ಪ ಬಜಂತ್ರಿ, ಹಂದಿಗುಂದದ ಭಾಸ್ಕರ ಸಿದ್ದಪ್ಪ ಅಜ್ಜಪ್ಪಗೋಳ ಇತರ ಪ್ರಮುಖ ಸಂಪ್ರದಾನಿ ವಾದಕರು.

**೪.೩.೧.೩. ತಾಸೆವಾದಕರು:**

**ಹಾರೂಗೇರಿಯ ಮಾರುತಿ ಭೀಮಪ್ಪ ಗುರವ:**

ಈತ ಈ ನಾಡಿನ ಹೆಸರುವಾಸಿಯಾದ ತಾಸೆವಾದಕ. ದೂರದರ್ಶನ ಮತ್ತು ಆಕಾಶವಾಣಿ ಕಲಾವಿದ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ಬಹುಮಾನ ಸಂದಿದೆ. ಕರ್ನಾಟಕದಾದ್ಯಂತ ಕಾರ್ಯಕ್ರಮ ನೀಡಿದ್ದಾನೆ. ಬಾನಂದೂರು ಕೆಂಪಯ್ಯನವರ ಆತ್ಮೀಯ ಸ್ನೇಹಿತ. ಇವನದು ೫ ಜನರ ಕಲಾ ತಂಡ. ಇವರಲ್ಲಿ ಮೂವರು ಶಹನಾಯಿ ವಾದಕರು. ರಾಮಪ್ಪ ಬಜಂತ್ರಿ ಶ್ರುತಿ, ಯಮನಪ್ಪ ಬಜಂತ್ರಿ ಶಹನಾಯಿ, ಹುಸೇನಿ ಡೊಳ್ಳುವಾದಕ. ಇವರೆಲ್ಲ ಮಾರುತಿಯ ಸಂಗಡಿಗರು.

ಇವನು ಭೀಮಪ್ಪ ಬಜಂತ್ರಿಯ ಶಿಷ್ಯ. ಇವನ ತಂದೆ ಭೀಮಪ್ಪ ಕೂಡ ತಾಸೆವಾದಕನಾಗಿದ್ದ. ಇವರ ಮನೆತನ ತಾಸೆವಾದನಕ್ಕೆ ಮೊದಲಿನಿಂದಲೂ ಮೀಸಲಾಗಿತ್ತು. ಈತ ತನ್ನ ೬೦ನೇ ವಯಸ್ಸಿನಲ್ಲಿ ತೀರಿಕೊಂಡನು. ಈಗ ಅವನ ಮಕ್ಕಳಾದ ಭೀಮಪ್ಪ ಮತ್ತು ಶಿವಾನಂದ ತಾಸೆವಾದನ ಕಲೆಯನ್ನು ಮುಂದುವರೆಸಿದ್ದಾರೆ.

**೪.೩.೧.೪. ಲೇಜಿಮ್ ಕಲಾವಿದರು:**

**ಅಮೋಘಸಿದ್ಧೇಶ್ವರ ಲೇಜಿಮ್ ಕಲಾಮೇಳ, ಯಲ್ಲಾರಟ್ಟಿ:**

ಈಗ ಬಾಗೆನಾಡಿನಲ್ಲಿ ಉಳಿದಿರುವ ಏಕೈಕ ಲೇಜಿಮ್ ಕಲಾ ತಂಡ ಇದಾಗಿದೆ. ಇದರಲ್ಲಿ ೧೨ಜನ ಕಲಾವಿದರಿದ್ದು, ಪ್ರಮುಖ ಕಲಾವಿದರೆಂದರೆ ಅಣ್ಣಪ್ಪ ಪಾಟೀಲ ಹಾಗೂ ಶಿವಸಿದ್ದ ಮಾರುತಿ ಲಾಳಿ. ಈ ತಂಡ ೧೫ವರ್ಷಗಳಿಂದ ಸತತವಾಗಿ ಸೇವೆ ಸಲ್ಲಿಸುತ್ತಾ ಬಂದಿದೆ. ಇದು ದಟ್ಟಿ ಕುಣಿತದ ಮಾದರಿಯನ್ನು ಹೋಲುತ್ತಿದ್ದು, ಇದರಲ್ಲಿ ೨೮ಹೆಜ್ಜೆ ಪ್ರಕಾರಗಳಿವೆ. ಪಾರಿವಾಳ, ನವಿಲುಹೆಜ್ಜೆ ಹಿಂದೆ-ಮುಂದೆ ಆಡುವುದು, ಎದುರು-ಬದುರು ಆಡುವುದು, ಸರಪಳಿ ಹೆಣೆಯುವುದು, ರಾವಳ(ಹಗ್ಗ)ಹೆಣೆಯುವುದು ಮುಖ್ಯವಾದವುಗಳು. ಇತ್ತೀಚಿಗೆ ನಡೆದ ೨೦೧೦ರ ಕಿತ್ತೂರು ಉತ್ಸವದಲ್ಲಿ ಭಾಗವಹಿಸಿದ್ದಾರೆ.

**೪.೩.೧.೫. ಬ್ಯಾಂಡ್ ಕಲಾವಿದರು:**

**ನಾರಾಯಣ ಸಂಗಣ್ಣವರ:**

ಈತ ಬ್ಯಾಂಡ್ ಕಲಾವಿದ. ವಯಸ್ಸು ೮೦. ಮೂಲತಃ ಚಿಂಚಲಿಯವನಾದ ನಾರಾಯಣ ಸಂಗಣ್ಣವರ ೧೦ ವರ್ಷದ ಬಾಲಕನಾಗಿದ್ದಾಗಲೇ ಬಾರಿಸುವುದನ್ನು ಆರಂಭಿಸಿದವನು. ೫೦-೬೦ ಕಂಪನಿಗಳನ್ನು ಹುಟ್ಟು

[illegible]

[illegible]

[illegible]

[illegible]

ಹಾಕಿದ್ದಾನೆ. ಕ್ಲೆರೋನೆಟ್(ಕಲಾಟ್) ಈತನ ಅಚ್ಚುಮೆಚ್ಚಿನ ವಾದ್ಯ. ಮಹಾಕಾಳಿ ಬ್ರಾಸ್ ಬ್ಯಾಂಡ್ ಕಂಪನಿ ಕಟ್ಟಿ ೬೦ ವರ್ಷಗಳ ಕಾಲ ಕರ್ನಾಟಕ-ಮಹಾರಾಷ್ಟ್ರದೆಲ್ಲೆಡೆ ಅವಿರತ ಸೇವೆ ಸಲ್ಲಿಸಿದ್ದಾನೆ.

**ಸದಾಶಿವ ಬಜಂತ್ರಿ:**

ಈತ ಕೆಂಪಟ್ಟಿ ಗ್ರಾಮದವನು. ಈತನ ಅಚ್ಚುಮೆಚ್ಚಿನ ವಾದ್ಯವೆಂದರೆ ಕ್ಲೆರೋನೆಟ್. ಜೈ ಹನುಮಾನ ಮ್ಯುಜಿಕಲ್ ಬ್ಯಾಂಡ್ ಕಂಪನಿ ಕಟ್ಟಿ ೧೫ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾನೆ. ಈತನ ಬ್ಯಾಂಡ್ ಮೇಳದಲ್ಲಿ ೧೬ ಜನ ಕಲಾವಿದರಿದ್ದಾರೆ.

**೪.೩.೧.೬. ಬ್ಯಾಂಜೊ ಕಲಾವಿದರು:**

**ಮಿಲಿಂದ್ರ ನಾರಾಯಣ ಸಂಗಣ್ಣವರ:**

ಈತ ಚಿಂಚಲಿಯವನು. ಮಹಾಕಾಳಿ ಬ್ಯಾಂಜೋ ಪಾರ್ಟಿ ಕಟ್ಟಿ ೩೦ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾನೆ. ಕರ್ನಾಟಕ-ಮಹಾರಾಷ್ಟ್ರ ಮೊದಲಾದ ಒಟ್ಟು ೭ ರಾಜ್ಯಗಳಲ್ಲಿ ತನ್ನ ಕಲಾ ಸೇವೆ ಸಲ್ಲಿಸಿದ್ದಾನೆ. ನಾಟಕ, ಬಯಲಾಟ, ಲಾವಣಿ ಮುಂತಾದವುಗಳಿಗೆ ಡೋಲಕದ ಸಾಥ್ ನೀಡುತ್ತಾನೆ.

**೪.೩.೧.೭. ಝಾಂಜ್ ಕಲಾವಿದರು:**

**ಮಹಾವೀರ ಜನಪದ ಕಲಾ ಸಂಘ, ಹಾರೂಗೇರಿ:**

ಅರಿಹಂತ ಮಾರುತಿ ಸುಬ್ಬಣ್ಣವರ ಹಾಗೂ ಭರತೇಶ ಕುರಾಣಿ ಈ ಸಂಘದ ಮುಂಚೂಣಿ ಕಲಾವಿದರು. ೧೫ ವರ್ಷ ಸೇವೆ ಸಲ್ಲಿಸಿದ್ದಾರೆ. ೩ಸಲ ಮೈಸೂರು ದಸರಾ, ೩ಸಲ ಕನ್ನಡ ರಾಜ್ಯೋತ್ಸವ(ಬೆಂಗಳೂರು), ೧ ಸಲ ಜನಪದ ಜಾತ್ರೆ(ಬೆಂಗಳೂರು), ೧ಸಲ ಹಂಪಿ ಉತ್ಸವ, ಸತತವಾಗಿ ೮ವರ್ಷ ಕಿತ್ತೂರು ಉತ್ಸವಗಳಲ್ಲಿ ಭಾಗವಹಿಸಿರುವರು. ಲೇಜಿಮ್ ಹೆಜ್ಜೆಗಳ ಅಳವಡಿಕೆ, ಹೆಜ್ಜೆ ಬದಲಾವಣೆ, ಕ್ರಿಕೆಟ್ ತಂಡ ನಿರ್ಮಾಣ, ಕಮಲ ಹೂ ನಿರ್ಮಾಣ, ಸ್ತಂಭ

[illegible]

[illegible]

[illegible]

[illegible]

[illegible]

ನಿರ್ಮಾಣ, ಕುದುರೆ ಯುದ್ಧ ಮುಂತಾದ ಭಂಗಿಗಳಲ್ಲಿ ಈ ತಂಡ ಪ್ರದರ್ಶನ ನೀಡುತ್ತಿದೆ.

**೪.೩.೨. ಸಂಪ್ರದಾಯದ ಹಾಡುಗಾರರು:**

**ಹಾರೂಗೇರಿಯ ಯಲ್ಲವ್ವ ಪರಮಾನಂದ ಮಾದರ:**

ಸೋಬಾನ, ಜೋಗುಳ, ತ್ರಿಪದಿ ಹಾಡುಗಾರ್ತಿ. ಇವಳಿಗೆ ಹಾಡು ಕಲಿಸಿದವಳು ಪಾರ್ವತಿ ಮಾದರ. ಪಾರ್ವತಿಯ ತವರು ಸಂಕೋನಟ್ಟಿ, ಅಕ್ಕ ರತ್ನವ್ವ ಲಾವಣಿ ಹಾಡುಗಾರ್ತಿ. ಆಕೆಯಿಂದ ಈ ಕಲೆ ಪಾರ್ವತಿಗೆ, ಅವಳಿಂದ ಯಲ್ಲವ್ವಳಿಗೆ ಬಳುವಳಿಯಾಗಿ ಬಂದಿದೆ. ಯಲ್ಲವ್ವನ ಹಾಡಿನ ಮೇಳದ ಸ್ವರೂಪ ಇಂತಿದೆ:

ಮುಮ್ಮೇಳದವರು – ೧. ಯಲ್ಲವ್ವ ಮಾದರ
೨. ಪಾರ್ವತಿ ಮಾದರ

ಹಿಮ್ಮೇಳದವರು – ೧. ಶ್ರೀಮವ್ವ ಮಾದರ
೨. ತವನವ್ವ ಮಾದರ

ಇವರೆಲ್ಲರೂ ೬೦ ವರ್ಷ ಮೇಲ್ಪಟ್ಟವರು.

**ಹಂದಿಗುಂದದ ಪರವ್ವ ಶಿವಲಿಂಗಪ್ಪ ಹಿರೇಮಠ:**

ಕಳೆದ ೨೫ವರ್ಷಗಳಿಂದ ಸೋಬಾನ, ಜೋಗುಳಪದ, ಅನುಭವ/ತತ್ವಪದ, ಬೀಸುಕಲ್ಲು ಹಾಡುಗಳನ್ನು ಹಾಡುತ್ತ ಬಂದಿರುವರು. ವಯಸ್ಸು ೬೧ವರ್ಷ. ಇವರದು ನಾಲ್ವರ ತಂಡ.

ಮುಮ್ಮೇಳದವರು – ೧. ಸತ್ಯೆವ್ವ ಗಿರಮಲ್ಲಪ್ಪ ಹಿರೇಮಠ
೨. ಪರವ್ವ ಶಿವಲಿಂಗಯ್ಯ ಹಿರೇಮಠ

ಹಿಮ್ಮೇಳದವರು – ೧. ನೀಲವ್ವ ಶಿವರುದ್ರಪ್ಪ ಗುಡ್ಡದಮನಿ
೨. ಯಮನವ್ವ ಅರ್ಜುನ ಘಂಟಿ

[illegible]

ಪರವ್ವನ ತಾಯಿ ಈರವ್ವ ಅಕ್ಕ ದುಂಡವ್ವ ಸೋಬಾನ ಪದಗಳನ್ನು ಹಾಡುತ್ತಿದ್ದರು. ಅವರಿಂದ ಪರವ್ವ ಹಾಡು ಕಲಿತುಕೊಂಡರು. ತಾಲೂಕು ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನ ಗಳಿಸಿರುವರು.

**ಹಂದಿಗುಂದದ ಬಾಳವ್ವ ಮೇತ್ರಿ:**

ಇವರದು ಇನ್ನೊಂದು ತಂಡ. ಲಕ್ಕವ್ವ ಕಲ್ಲೋಳೆಪ್ಪ ಅಜ್ಜಪ್ಪಗೋಳ, ಕಾಶವ್ವ ಸಿದ್ದಪ್ಪ ಅಜ್ಜಪ್ಪಗೋಳ, ತಂಗೆವ್ವ ರಾಯಪ್ಪ ದೇವರಮನಿ, ರೇಖಾ ಅಣ್ಣಪ್ಪ ಅಜ್ಜಪ್ಪಗೋಳ ಇವರ ಸಂಗಡಿಗರು. ಇಂದ್ರವ್ವ ಲಕ್ಕಪ್ಪ ಹೊಸಾರಿಯವರ ಮತ್ತೊಂದು ತಂಡವೂ ಇಲ್ಲಿದೆ.

**ಯಲ್ಪಾರಟ್ಟಿಯ ನೀಲವ್ವಾ ಮೆಟಗುಡ್ಡ:**

ಇವಳು ಮದುವೆ, ಪ್ರಸ್ತ ಮುಂತಾದ ಶುಭ ಕಾರ್ಯಗಳಲ್ಲಿ ಸೋಬಾನ ಪದ ಹಾಡುವ ಪ್ರಸಿದ್ಧ ಕಲಾವಿದೆ. ಜೋಗುಳ ಹಾಡು, ಬಿಸುಕಲ್ಲು ಹಾಡುಗಳನ್ನು ಹಾಡುತ್ತಾಳೆ. ಚಂದ್ರವ್ವಾ ಹಾಗೂ ಶಾಂತವ್ವಾ ಮೆಟಗುಡ್ಡ ಇವಳ ಸಂಗಡಿಗರು. ಇವರ ಹಾಡುಗಳು ಆಕಾಶವಾಣಿಯಲ್ಲಿ ಬಿತ್ತರಗೊಂಡಿವೆ.

ಹಾರೂಗೇರಿಯ ದುಂಡವ್ವ ಆಲಗೂರ, ಯಂಕವ್ವ ಭೀಮಪ್ಪ ಬೆಳಗಲಿ, ತಂಗೆವ್ವಾ ಮಾರುತಿ ಸಿಂಗಾಡಿ, ಸವಸುದ್ದಿಯ ಮಾಸಾಬಿ ಸಿರಾಜಸಾಬ ನದಾಫ, ಹಸೀನಾ ಮೀರಾಸಾಬ ನಧಾಪ(ಉರ್ದು), ಹಂದಿಗುಂದದ ಶಾಸವ್ವ ಸಿದ್ದಪ್ಪ ಅಜ್ಜಪ್ಪಗೋಳ, ಮಾರತವ್ವ ಮಹಾದೇವ ಅಜ್ಜಪ್ಪಗೋಳ, ತಂಗೆವ್ವ ರಾಮಪ್ಪ ದೇವರವರ, ರೇಖಾ ಅಣ್ಣಪ್ಪ ಮ್ಯಾಗಾಡಿ, ಲಕ್ಷ್ಮೀಬಾಯಿ ಕಲ್ಲಪ್ಪ ಗುಗ್ಗರಿ, ಗೌರವ್ವ ಸುರೇಶ ಭಂಡಾರಿ, ಯಲ್ಪಾರಟ್ಟಿಯ ಲಗಮವ್ವ ಚನ್ನಬಸು ಕಿರೇಸುರ, ಬೌರವ್ವ ಬಾಳಪ್ಪ ಮೋಕಾಶಿ, ಚಿಂಚಲಿಯ ರಾಣಾಬಾಯಿ ಲಕ್ಷ್ಮಣ ಸಂಗಣ್ಣವರ, ಸೋನಾಬಾಯಿ ರಾಮು ಸಂಗಣ್ಣವರ ಇತರ ಪ್ರಮುಖ ಕಲಾವಿದರು.

೪.೩.೩. ಲಾವಣಿಕಾರರು-ಹಂತಿಪದ ಹಾಡುವವರು:

**ಹಂದಿಗುಂದದ ಶಿವಪ್ಪ ಯಲ್ಲಪ್ಪ ಹಾದಿಮನಿ :**

ಇವನು ಪ್ರತಿಭಾವಂತ ಲಾವಣಿ ಹಾಡುಗಾರ. ಯಮನಪ್ಪ ಯಲ್ಲಪ್ಪ ಹಾದಿಮನಿ ಇವನ ಸಂಗಡಿಗ. ಇಬ್ಬರು ಸಹೋದರರು. ಇವರೊಂದಿಗೆ ದುರ್ಗಪ್ಪ ಹೊಸಾರಿ ಹಾಡುತ್ತಿದ್ದ. ಇವರೆಲ್ಲರೂ ಹಿಮ್ಮೇಳದವರು. ಇವರು ತೇರದಾಳದ ತುಕಾರಾಮನ ಹಾಡು ಹಾಡುತ್ತಿದ್ದರು. ಇದು ಹರದೇಶಿ ಮೇಳ.

ಲಕ್ಷ್ಮಣ ರಾಯಪ್ಪ ಅಜ್ಜಪ್ಪಗೋಳ, ಶಿವಪ್ಪ ಹಾದಿಮನಿಯರ ಶಿಷ್ಯ. ಲಕ್ಕಪ್ಪ ಭೀಮಪ್ಪ ದೇವರವರ, ಸತ್ಯೆಪ್ಪ ರಾಯಪ್ಪ ಗಂಗಪ್ಪಗೋಳ ಸಹಹಾಡುಗಾರರು. ಲಕ್ಷ್ಮಣನ ವಯಸ್ಸು ೭೫. ಬೆಳಗಾವಿಯಲ್ಲಿ ಜರುಗಿದ ಗಡಿನಾಡು ಉತ್ಸವದಲ್ಲಿ ಭಾಗವಹಿಸಿದ್ದರು. ತನ್ನ ೨೫ನೇ ವಯಸ್ಸಿನಿಂದ ಹಾಡಲು ಆರಂಭಿಸಿರುವನು. ಮಹಾದೇವಿ ಬೌರವ್ವ ದೇವರವರ ಲಕ್ಷ್ಮಣನ ಶಿಷ್ಯಳು. ಲಕ್ಕಪ್ಪ ಭೀಮಪ್ಪ ದೇವರವರ ಮತ್ತು ಮಹಾಲಿಂಗ ಸಂಗಾನಟ್ಟಿ ಹಿಮ್ಮೇಳದವರು.

ಸವಸುದ್ದಿಯ ಬಸಪ್ಪ ಹಾಲಪ್ಪ ದುಂಡಗಿ, ಕಲ್ಲಪ್ಪ ತಿಪ್ಪಣ್ಣ ನಿಪ್ಪಾಣಿ, ಹಂದಿಗುಂದದ ಕಾಸಪ್ಪ ತಾಯಿ ಹನಮವ್ವ ಹೊಸಾಲಿ, ಚಿಂಚಲಿಯ ಅಪ್ಪಣ್ಣಾ ತಿಪ್ಪಣ್ಣ ಕೊಗನೂಳೆ, ಬಾಬು ಮಾಯಪ್ಪ ಕೋಳಿ, ಶಿವಚಂದ್ರ ಬಾಳು ಮಾಂಗ, ಮಾರುತಿ ಹಾಲಪ್ಪ ಪಾಟೀಲ, ಕಂಕಣವಾಡಿಯ ಭೀಮಪ್ಪ ಹನಮಂತ ಕುಶಮುಂಡಿ, ಯಲ್ಲಪ್ಪ ಅಪ್ಪಯ್ಯ ನಾಯಕವಾಡಿ ಈ ಭಾಗದ ಲಾವಣಿ ಹಾಡುಗಾರರು.

**ಹಂದಿಗುಂದದ ವೀರಭದ್ರಪ್ಪ ದುಂಡಪ್ಪ ತೇರದಾಳ :**

ಈತ ಹಂದಿಗುಂದದ ಬಯಲು ಲಾವಣಿಕಾರ. ಸ್ವತಃ ಹಾಡು ಕಟ್ಟಿ ಹಾಡುತ್ತಾನೆ. ೭೬ರ ವಯಸ್ಸಿನಲ್ಲಿಯೂ ೨೫ರ ಹುಡುಗನಂತೆ ಲಟಿಕೆ ಹೊಡೆಯುತ್ತ ಹಾಡುತ್ತ ಕುಣಿಯುವನು. ಕೆಲವೊಮ್ಮೆ ಡಪ್ಪು ಬಡೆದು ಎಲ್ಲರನ್ನು ದಂಗುಗೊಳಿಸುವನು. ಸೋಬಾನ, ಭಜನೆ ಹಾಡು, ಹಂತಿಪದ ಮುಂತಾದ ಜನಪದ ಹಾಡುಗಳನ್ನು ಹಾಗೂ ಸರ್ವಜ್ಞನ ತ್ರಿಪದಿಗಳನ್ನು ಹಾಡುವನು.

[illegible]

[illegible]

[illegible]

[illegible]

[illegible]

ಬಾಗೆನಾಡಿನಲ್ಲಿ ಈಗ ಹಂತಿಪದ ಹಾಡುವ ಹಾಡುಗಾರರಿಲ್ಲ. ಮುಂಚೆ ರಾಶಿ ಮಾಡುವ ಸಂದರ್ಭದಲ್ಲಿ ಹಂತಿಪದ ಹಾಡುವ ಸಂಪ್ರದಾಯವಿತ್ತು. ಈಗ ರಾಶಿಗೆ ಮಶಿನ್‌ಗಳು ಬಂದ ನಂತರ ಹಂತಿಹಾಡು ಈ ನಾಡಿನಿಂದ ಮರೆಯಾಗುತ್ತಿದೆ.

**೪.೩.೪. ಕೀಲು ಕುದುರೆ – ನವಿಲು ಕುಣಿತದವರು:**

ಹೋಳಿ ಹುಣ್ಣಿಮೆ, ನಾಗರ ಪಂಚಮಿ, ದೀಪಾವಳಿ ಮುಂತಾದ ಹಬ್ಬಗಳು ಹಾಗೂ ಮದುವೆ, ಜಾತ್ರೆ, ಉತ್ಸವಾದಿ ವಿಶೇಷ ಸಂದರ್ಭಗಳಲ್ಲಿ ಸೋಗು ಹಾಕುವ ಕೆಲವು ಕಲಾವಿದರಿದ್ದಾರೆ. ಕುದುರೆ, ನವಿಲು ಮೊದಲಾದ ವೇಷಗಳನ್ನು ಹಾಕಿ ಕುಣಿಯುವ ಕಲೆ ಈಗಲೂ ಇಲ್ಲಿ ಇನ್ನೂ ಜೀವಂತವಾಗಿದೆ.

**ಮುಗಳಖೋಡದ ಜ್ಯೋತೆಪ್ಪ ರಾಯಪ್ಪ ಕುರಿಬನಿ :**

ಜ್ಯೋತೆಪ್ಪ ಕುರಿಬನಿ ೩೦ವಯಸ್ಸಿನ ಕಲಾವಿದ. ಈತ ಕುದುರೆ ಹೆಜ್ಜೆ ಹಾಕುತ್ತಾನೆ. ಇವನ ತಂಡದಲ್ಲಿ ಒಟ್ಟು ೬ ಜನರಿದ್ದು, ನಾಲ್ವರು ಕುದುರೆ ಹಾಗೂ ಇಬ್ಬರು ನವಿಲು ಸೋಗು ಹಾಕುವವರು. ಈ ತಂಡಕ್ಕೆ ಮುರುಘರಾಜೇಂದ್ರ ಕುದುರೆ ಕುಣಿತ ಸಂಘವೆಂದು ಹೆಸರಿಡಲಾಗಿದೆ.

ಜ್ಯೋತೆಪ್ಪ ಕುರಿಬನಿಯೊಂದಿಗೆ ಸದಪ್ಪ ಸುಬ್ಬರಾಯ ಬಡಿಗೇರ, ರೇವಪ್ಪ ಬಸಗೊಂಡ ಕುರಿಬನಿ, ರಾಮಚಂದ್ರ ಸುಬ್ಬರಾಯ ಬಡಿಗೇರ ಕುದುರೆ ಸೋಗು ಹಾಕಿದರೆ ಅಪ್ಪಾಸಾಬ ರಾಮಪ್ಪ ಗೊಲಬಾವಿ, ಭೀಮಪ್ಪ ಹಾಲಪ್ಪ ಅಳಗವಾಡಿ ನವಿಲು ವೇಷ ಹಾಕುವರು. ಇವರ ತಂಡದ ಪ್ರದರ್ಶನವನ್ನು ಈಟಿವಿ ಪ್ರಸಾರ ಮಾಡಿದೆ. ಮುಗಳಖೋಡದಲ್ಲಿ ಮತ್ತೊಂದು ಕುದುರೆ ಸೋಗಿನ ತಂಡವಿದ್ದು ಅದು ಯಲ್ಲಾಲಿಂಗ ಕುದುರೆ ಕುಣಿತ ಸಂಘ. ಗಿರಿಮಲ್ಲ ನಿಂಗಪ್ಪ ಹಳಿಂಗಳಿ, ಶ್ರೀಮಂತ ಸಿದ್ಲಿಂಗ ಬಡಿಗೇರ ಈ ಮೇಳದ ಮುಂಚೂಣಿ ಕಲಾವಿದರು.

[illegible]

[illegible]

[illegible]

[illegible]

೪.೩.೫. ಕುಸ್ತಿ, ಆಂಗಿಕ ಕಸರತ್ತು ಪ್ರದರ್ಶಕರು:

ಅಲಕನೂರಿನ ವೆಂಕಪ್ಪ, ಗುಂಡವಾಡದ ಮಲ್ಲಪ್ಪ, ಹಾರೂಗೇರಿಯ ಬಸಪ್ಪ ಪೂಜಾರಿ, ಧರೆಪ್ಪ ರಾಮತೀರ್ಥ, ಸಂಜಯ ಶಿರಹಟ್ಟಿ, ಗಜಾನನ ಗಸ್ತಿ, ಭರತೇಶ ಕೊತ್ತಲಗಿ, ಶಂಕರ ಸದಲಗಿ, ಗುರಪ್ಪ ಸವದಿ ಮೊದಲಾದವರು ಮುಂಚೂಣಿ ಕುಸ್ತಿಪಟುಗಳು. ಅಲಕನೂರಿನ ಸಿದ್ದರಾಮರ ಮಗ ವೆಂಕಪ್ಪ ಕಟ್ಟುಮಸ್ತಾದ ಆಳು. ರಾಷ್ಟ್ರೀಯ ಕುಸ್ತಿಪಟುಗಳಾದ ದಾವಣಗೇರಿಯ ಚಾರ್ಲಿ ಪೈಲ್ವಾನ್, ಮಹಾರಾಷ್ಟ್ರದ ವಿಷ್ಣು ಸಾವರಡೆಯವರ ಸಮಕಾಲೀನ ಕುಸ್ತಿಪಟುಗಳು ಅಲಕನೂರಿನಲ್ಲಿದ್ದರು. ೧೯೪೫ರಲ್ಲಿ ಕೊಲ್ಲಾಪುರದ ಶಾಹುಪುರಿ ತಾಲೀಮದಲ್ಲಿ ತರಬೇತಿ ಪಡೆಯುತ್ತಿದ್ದ ವೆಂಕಪ್ಪನಿಗೆ ಮಹಮದ್ ಹನೀಫ್ ಹಾಗೂ ಶ್ರೀಪತಿ ಖಂಚನಾಳೆ ವಸ್ತಾದರಾಗಿದ್ದರು.

ಗುಂಡವಾಡದ ಮಲ್ಲಪ್ಪ ಪೈಲ್ವಾನನ ಪೂರ್ಣ ಹೆಸರು ಮಲ್ಲಪ್ಪ ಸಿದ್ದಪ್ಪ ಪೂಜಾರ. ೧೯೩೫ ರಲ್ಲಿ ಜನಿಸಿದ ಮಲ್ಲಪ್ಪ ತನ್ನ ೧೫ನೇ ವಯಸ್ಸಿನಲ್ಲಿಯೇ ಕುಸ್ತಿಯಾಡಲು ಆರಂಭಿಸಿದನು. ಈತ ಚಂಬಣ್ಣ ಮುತ್ನಾಳರ ಶಿಷ್ಯ. ಕಠಿಣ ವ್ಯಾಯಾಮದ ಆಸಾಮಿ. ೧೫೦೦ ಬೈಠೆಕ್ ಹೊಡೆಯುತ್ತಿದ್ದನು. "ಹೆಸರಾಂತ ಪಟುಗಳನ್ನು ಚಿತ್ತ ಮಾಡಿಗೆದ್ದ ಮಲ್ಲಪ್ಪ ಅಪಾರ ಅಭಿಮಾನಿಗಳನ್ನು ಹೊಂದಿದ್ದನು. ಅವನು ಕೊಲ್ಲಾಪುರದಲ್ಲಿ ತರಬೇತಿ ಪಡೆಯುತ್ತಿದ್ದಾಗ ಸವದತ್ತಿಯ ಕುಸ್ತಿ ಅಭಿಮಾನಿಯೊಬ್ಬ ಪ್ರತಿ ವರುಷ ಒಂದು ಚೀಲ ಗೋಧಿ ಕಳಿಹಿಸುತ್ತಿದ್ದನಂತೆ. ಕೊಲ್ಲಾಪುರದ ಹಾಲಿನ ವ್ಯಾಪಾರಿಯೊಬ್ಬ ದಿನ ೨ಲೀಟರ್ ಹಾಲು, ಕಾಲು ಕೆ.ಜಿ. ಬೆಣ್ಣೆ ಉಚಿತವಾಗಿ ಕೊಡುತ್ತಿದ್ದನೆಂದು ಮಲ್ಲಪ್ಪ ನೆನಪಿಸಿಕೊಳ್ಳುತ್ತಾನೆ".[೧]

ಬಸಪ್ಪ ಪೂಜೇರಿ ಬಡಕುಸ್ತಿಪಟು. ಈತನನ್ನು ಜನ ಹಾರೂಗೇರಿಯ ಬಸಪ್ಪನೆಂದೇ ಕರೆಯುತ್ತಿದ್ದರು. ಆತನಿಗೆ ಆಹಾರದ ಕೊರತೆಯಿತ್ತು. ಕಿತ್ತು ತಿನ್ನುವ ಬಡತನದ ಮಧ್ಯದಲ್ಲಿಯೂ ಕುಸ್ತಿಪಟುವಾಗಿ ಬೆಳೆದು ಬಾಗೆನಾಡಿನ ಕುಸ್ತಿಕಲೆಯನ್ನು ಜೀವಂತವಾಗಿ ಉಳಿಸಿದ ಶ್ರೇಯಸ್ಸು ಈತನದು. ಈಗ ಅನೇಕ ಕುಸ್ತಿಪಟುಗಳಿಗೆ

---

೧. ಡಾ. ಸಂಗಮೇಶ ಮಠೋಳಿ : ಕರ್ನಾಟಕದ ಕುಸ್ತಿ ಪೈಲ್ವಾನರು; ಒಂದು ಅವಲೋಕನ, ಪುಟ: ೧೨೭, ೧೨೮

[illegible]

[illegible]

[illegible]

[illegible]

[illegible]

ವಸ್ತಾದನಾಗಿ ಶ್ಲಾಘನೀಯ ಸೇವೆ ಸಲ್ಲಿಸುತ್ತಿದ್ದಾನೆ. ನಾಡಿನಲ್ಲಿ ಕುಸ್ತಿಕ್ರೀಡೆ ಚಿರಕಾಲ ಉಳಿಯಬೇಕೆಂಬ ಆಸೆ ಅವನದು. ಅದಕ್ಕಾಗಿ ಕರ್ನಾಟಕ ಮಹಾರಾಷ್ಟ್ರದ ಪ್ರಸಿದ್ಧ ಪೈಲ್ವಾನರ ಸ್ಪರ್ಧೆಯನ್ನು ಏರ್ಪಡಿಸಿದ ಸಾಹಸ ಇವನದು. ಹಾರೂಗೇರಿಯಲ್ಲಿ ಥೇಟರ್ ಕುಸ್ತಿ ಏರ್ಪಡಿಸಿ ಯುವಕರಲ್ಲಿ ಕುಸ್ತಿಯ ಬಗ್ಗೆ ಅಭಿಮಾನ ತುಂಬಿದನು. ಅಂದು ಕುಸ್ತಿಪಟುಗಳಿಗೆ ಸಂದಾಯ ಮಾಡಿದ ಸಂಭಾವನೆ ರೂ.೭೦ ರಿಂದ ೮೦ ಸಾವಿರ. ಭೀಮಪ್ಪ ಗಾಳಿ ಬಾಗೆನಾಡಿನ ಅತ್ಯಂತ ಗೌರವದ ಕುಸ್ತಿಪಟು. ೨೦ವರ್ಷ ಕುಸ್ತಿ ಮಾಡಿದ ಬಡ ಕ್ರೀಡಾಪಟು. ಈಗ ವಯಸ್ಸು ೬೬. ಈಗಲೂ ಕೂಲಿ ಕೆಲಸವೇ ಜೀವನದ ಆಧಾರ. ಈತ ಬಸಪ್ಪ ಪೂಜಾರಿಯ ವಸ್ತಾದ. ಈತನ ಗರಡಿಯಲ್ಲಿ ಸಂಜು ಶಿರಹಟ್ಟಿ, ಗುರಪ್ಪ ಸವದಿ, ಶಂಕರ ಸದಲಗಿ, ಭರತೇಶ ಕೊತ್ತಲಗಿ, ಗಜಾನನ ಗಸ್ತಿ, ಶ್ರೀಶೈಲ ಯಲಶೆಟ್ಟಿ ಮುಂತಾದ ಉತ್ತಮ ಪಟುಗಳು ಪಳಗಿದರು.

ಬಾಗೆನಾಡಿನ ವಿಶೇಷ ಕುಸ್ತಿಪ್ರತಿಭೆ ಸಂಜಯ ಶಿರಹಟ್ಟಿ. 'ಹಾರೂಗೇರಿ ಸಂಜು' ಎಂದು ಜನರ ಪ್ರೀತಿಗೆ ಪಾತ್ರರಾದವನು. ಕೊನೆ–ಕೊನೆಗೆ ಅಂತಾರಾಷ್ಟ್ರೀಯ ಖ್ಯಾತಿ ಪಡೆದ ರತ್ನಕುಮಾರ ಮಠಪತಿಯವರೊಂದಿಗೆ ಚಡ್ಡಿಹಾಕಿ ಸೆಡ್ಡು ಹೊಡೆದು ನಿಂತವನು. ಸೋತರೂ ಸರಿ ಅಂತ, ರಾಷ್ಟ್ರಮಟ್ಟದ ಮಹಾನ್ ಪೈಲ್ವಾನರೊಂದಿಗೆ ಸ್ಪರ್ಧಿಸಿದ ಕೀರ್ತಿಗೆ ಸಂಜಯ ಭಾಜನನಾಗಿದ್ದಾನೆ. ಡಾಕ, ಮೂಳೆ, ಪಕಡಿಡಾವ ಇವು ಅವನ ಹೇಳಿ ಮಾಡಿಸಿದ ಡಾವಗಳು. ಅವನು ಪಡೆದ ಕುಸ್ತಿ ಸಂಭಾವನೆ ೯೦ಸಾವಿರ. ಈಗ ೩೧ರ ಹರೆಯದ ಸಂಜಯ ಕುಸ್ತಿಯಿಂದ ದೂರ ಉಳಿದಿದ್ದಾನೆ.

ಹಾರೂಗೇರಿಯ ಗಸ್ತಿ ಮನೆತನಕ್ಕೆ ಕುಸ್ತಿ ಎಂದರೆ ಎಲ್ಲಿಲ್ಲದ ಪ್ರೀತಿ. ಕಕ್ಕಂದಿರರಾದ ಶಂಕರ ಮತ್ತು ಪ್ರದಾನಿ ಗಸ್ತಿಯವರೊಂದಿಗೆ ಗರಡಿಯಲ್ಲಿ ತರಬೇತಿ ಪಡೆದ ಗಜಾನನ ಬಾಬು ಗಸ್ತಿ ರಾಷ್ಟ್ರೀಯ ಖ್ಯಾತಿಯ ರತ್ನಕುಮಾರ ಮಠಪತಿ ಹಾಗೂ ಶಿರೋಳ ಕಲ್ಲಪ್ಪರೊಂದಿಗೆ ಕುಸ್ತಿ ಆಡಿದ್ದಾನೆ. ಭರತೇಶ ಕೊತ್ತಲಗಿ ಪೈಲ್ವಾನ ನ್ಯಾಮಣ್ಣ ಕೊತ್ತಲಗಿಯವರ ಮಗ. ಶಂಕರ ಸದಲಗಿ ೮೪ಕೆ.ಜಿ. ತೂಕದ ಕುಸ್ತಿಯಲ್ಲಿ ಮಿಂಚಿದ ವಾಮನ.

೨೪ವರ್ಷದ ಗುರಪ್ಪ ದುಂಡಪ್ಪ ಸವದಿ ಬಾಗೆನಾಡಿನ ಅಪರೂಪದ ಕುಸ್ತಿ ಪ್ರತಿಭೆ. ಈತನಿಗೆ ಮಾತುಬಾರದು. ಜನ ಈತನನ್ನು ಮೂಕಪ್ಪನೆಂದೇ

[illegible]

[illegible]

[illegible]

[illegible]

ಕರೆಯುವರು. ಮೂಕಪ್ಪ ಕುಸ್ತಿಯ ತಂತ್ರಗಳಲ್ಲಿ ಮಾತ್ರ ಬಲು ಚಾಣಾಕ್ಷ. ಆದರೆ ದುರ್ದೈವದಿಂದ ಯಶಸ್ಸಿನ ಮೊದಲು ಮೆಟ್ಟಿಲಿನಲ್ಲಿಯೇ ಜಾರಿ ಕಾಲು ಮುರಿದುಕೊಂಡ ನತದೃಷ್ಟ.

ಹಾರೂಗೇರಿಯ ಗ್ರಾಮ ಪಂಚಾಯತ ಸಮೀಪದ ಗರಡಿಯಲ್ಲಿ ಮುಂಜಾನೆ ನಾಲ್ಕು ಗಂಟೆ ಬೈಠಕ್ ಹಾಕುವ ೩೦ಕ್ಕೂ ಹೆಚ್ಚು ಕುಸ್ತಿಪಟುಗಳನ್ನು ಈಗಲೂ ನೋಡಬಹುದು. ಈ ಬಾಲಪ್ರತಿಭೆಗಳಿಗೆ ತರಬೇತುಗೊಳಿಸಲು ಹವ್ಯಾಸಿ ಹಿರಿಯ ಕುಸ್ತಿಪಟುಗಳಿದ್ದಾರೆ. ಹಿಡಕಲ್ಲ, ಹಾರೂಗೇರಿ, ಅಲಕನೂರ, ಬಡಬ್ಯಾಕೂಡಗಳಲ್ಲಿ ಕುಸ್ತಿ ಜನಪ್ರಿಯ ಜನಪದ ಕ್ರೀಡೆ.

**೪.೪. ರಂಗ ಕಲಾವಿದರು:**

ಒಂದು ಕಾಲದಲ್ಲಿ ಬಾಗೆ ಪರಿಸರದ ರಂಗ ಕಲಾವಿದರು ಉತ್ತರ ಕರ್ನಾಟಕದಲ್ಲಿ ತುಂಬ ಪ್ರಸಿದ್ಧಿ ಪಡೆದಿದ್ದರು. ವಿಶೇಷವಾಗಿ ಈ ನಾಡು ಪಾರಿಜಾತ ಕಲಾವಿದರ ಬೀಡು. ಶರಣರಾಟ, ದಾಸರಾಟ, ರಾಧಾನಾಟ ೨೦-೨೫ವರ್ಷಗಳ ಹಿಂದೆ ಪ್ರದರ್ಶಿತಗೊಳ್ಳುತ್ತಿದ್ದವು. ಆದರೆ ಜನಮನವನ್ನು ಗೆದ್ದದ್ದು ಶ್ರೀಕೃಷ್ಣಪಾರಿಜಾತವೆಂದೇ ಹೇಳಬೇಕಾಗುತ್ತದೆ. ಕೃಷ್ಣಪಾರಿಜಾತದ ಆಡುಂಬೊಲ ಗೋಕಾಕ ತಾಲೂಕಿನ ಕೌಜಲಗಿ ಪರಿಸರ. ಅದು ಹೆಚ್ಚು ಬೆಳೆದು ಪ್ರಸಿದ್ಧಿಯನ್ನು ಪಡೆದದ್ದು ಬಾಗಲಕೋಟ ಜಿಲ್ಲೆಯ ಮುಧೋಳ ತಾಲೂಕಿನ ಮಹಾಲಿಂಗಪುರದ ಪರಿಸರದಲ್ಲಿ. ಇವೆರಡು ರಾಯಬಾಗ ತಾಲೂಕಿನ ಗಡಿಗೆ ತೀರಾ ಹತ್ತಿರದ ಪ್ರದೇಶಗಳು. ಹೀಗಾಗಿ ಈ ಪ್ರದೇಶ ಕೂಡಾ ಪಾರಿಜಾತ ಪರಿಮಳದಿಂದ ತುಂಬಿದುದು ಸಹಜವೆನಿಸುತ್ತದೆ. ಆದ್ದರಿಂದ ಇಲ್ಲಿಯ ರಂಗ ಕಲಾವಿದರು ಎಂದರೆ ಮೊಟ್ಟ ಮೊದಲು ನೆನಪಾಗುವುದು ಪಾರಿಜಾತದವರು. ಅನಂತರ ಶರಣರಾಟ, ರಾಧಾನಾಟ, ದಾಸರಾಟದ ನಟರು. ಮೂರನೆಯ ಸ್ಥಾನ ಹಗಲು ಸೋಗು ಹಾಕುವ ಜಾತಗಾರರದು. ನಾಲ್ಕನೆಯದು ಬಹುರೂಪಿಗಳದ್ದು.

### ೪.೪.೧. ಸಣ್ಣಾಟದ ಕಲಾವಿದರು, ಕೃಷ್ಣ ಪಾರಿಜಾತ, ಸಂಗ್ಯಾ-ಬಾಳ್ಯಾ, ರಾಧಾನಾಟ, ಶರಣರಾಟದವರು:

**ಸಣ್ಣಾಟಗಳ ಕಲಾವಿದರು :**

ಬೆಳಗಾವಿ ಜಿಲ್ಲೆಯಲ್ಲಿ ಶ್ರೀಕೃಷ್ಣಪಾರಿಜಾತದ ಜೊತೆಜೊತೆಯಲ್ಲಿ ಹುಟ್ಟಿ ಬೆಳೆದ ಮತ್ತೆರಡು ಪ್ರಮುಖ ಸಣ್ಣಾಟಗಳೆಂದರೆ ಒಂದು ಸಂಗ್ಯಾ-ಬಾಳ್ಯಾ ಮತ್ತೊಂದು ರಾಧಾನಾಟ.

ಸಂಗ್ಯಾ-ಬಾಳ್ಯಾ ಡಪ್ಪಿನಾಟ. ಈ ಆಟದಲ್ಲಿ ಡಪ್ಪು ಪ್ರಮುಖವಾದ್ಯ. ಬೈಲವಾಡದ ರಾಯಪ್ಪ ಪತ್ತಾರ ಮಾಸ್ತರ ಈ ಬಯಲಾಟದ ಕರ್ತೃವೆಂದು ಹೇಳಲಾಗುತ್ತದೆ. "ಕೃಷ್ಣಪಾರಿಜಾತವನ್ನು ಹೊರತುಪಡಿಸಿದರೆ ಸಂಗ್ಯಾ-ಬಾಳ್ಯಾ ಉತ್ತರಕರ್ನಾಟಕದ ಪ್ರಸಿದ್ಧ ಬಯಲಾಟ. ಇದು ಸಣ್ಣಾಟದ ಉಗಮದ ಎರಡನೇ ಘಟ್ಟದಲ್ಲಿ ರಚಿತಗೊಂಡಿದ್ದು. ಒಂದರ್ಥದಲ್ಲಿ ಗೀತರೂಪಕವೇ. ಇದರ ಕಥಾಪರಿಸರ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕು. ಬೈಲಹೊಂಗಲವೇ ಕಥೆಯ ಕೇಂದ್ರ ಸ್ಥಳ. ವಸ್ತು ಚಾರಿತ್ರಿಕವಾದುದು. ಪಾತ್ರಗಳೆಲ್ಲ ನೈಜವಾದವು."[೨] ಇದು ಉತ್ತರ ಕರ್ನಾಟಕದಾದ್ಯಂತ ಖ್ಯಾತಿ ಪಡೆದು ಕೆಲವು ಊರುಗಳಲ್ಲಿ ಒಂದೇ ವರ್ಷದಲ್ಲಿ ಹದಿನೈದರಿಂದ ಇಪ್ಪತ್ತು ಪ್ರಯೋಗಗಳನ್ನು ಕಂಡಿತು. ಚಂದ್ರಶೇಖರ ಕಂಬಾರರು ಹೇಳುವಂತೆ ೧೯೨೦ರಿಂದ ೧೯೫೦ರವರೆಗಿನ ೩೦ವರ್ಷಗಳ ಅವಧಿ ಸಂಗ್ಯಾ ಬಾಳ್ಯಾ ಸಣ್ಣಾಟದ ವಸಂತಕಾಲ. ಇದು ಅಥಣಿ, ರಾಯಬಾಗ, ಚಿಕ್ಕೋಡಿ, ಗೋಕಾಕ, ಬೈಲಹೊಂಗಲ ಹಾಗೂ ಇಂದಿನ ಬಾಗಲಕೋಟ ಜಿಲ್ಲೆಯ ಜಮಖಂಡಿ, ಮುಧೋಳ, ಬೀಳಗಿ ಮತ್ತು ಬಿಜಾಪುರ ಜಿಲ್ಲೆಯ ಬಿಜಾಪುರ ತಾಲೂಕಿನಲ್ಲಿ ಹೆಚ್ಚು ಜನಪ್ರಿಯವಾಗಿತ್ತು. ಇದೇ ಅವಧಿಯಲ್ಲಿ ಬಾಗೆನಾಡಿನಲ್ಲಿ ಐದು ಸಂಗ್ಯಾ-ಬಾಳ್ಯಾ ಮೇಳಗಳು ಹುಟ್ಟಿಕೊಂಡಿದ್ದವು.

೧. ಶ್ರೀ ಮಲ್ಲಿಕಾರ್ಜುನ ನಾಟ್ಯಸಂಘ, ಅಲಕನೂರ

---

೨. ಸಂಗ್ಯಾಬಾಳ್ಯಾ : ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮುಖಾಮುಖಿ [ಅಪ್ರಕಟಿತ ಎಂ.ಫಿಲ್.ಪ್ರಬಂಧ] : ಪ್ರಿಯಾ ಸತ್ತಿಗೇರಿ; ಪುಟ : ೦೩

[illegible]

[illegible]

[illegible]

[illegible]

[illegible]

[illegible]

[illegible]

೨. ಶ್ರೀ ಮಲ್ಲಿಕಾರ್ಜುನ ಪ್ರಸಾದಿಕ ನಾಟ್ಯಸಂಘ, ಅಲಕನೂರ
೩. ಶ್ರೀ ಭೈರವೇಶ್ವರ ನಾಟ್ಯಸಂಘ, ಬೊಮನಾಳ
೪. ಸಣ್ಣದಾಸಪ್ಪ ಸಂಗ್ಯಾಬಾಳ್ಯಾ ಮೇಳ, ಕಂಕಣವಾಡಿ
೫. ಹೆಳವರ ಸಂಗ್ಯಾಬಾಳ್ಯಾ ಮೇಳ, ಪರಮಾನಂದವಾಡಿ

ಹಿಡಕಲ್ಲದಲ್ಲಿ ಕಲ್ಲಪ್ಪನೆಂಬ ಕಲಾವಿದನ ಕುರಿತು ಹಲವು ದಂತಕಥೆಗಳಿವೆ. ಈ ಭಾಗದಲ್ಲಿಯ ಆಟಗಳೆಂದರೆ ಕಲ್ಲಪ್ಪ ನೆನಪಾಗುತ್ತಾನೆ. ಈತನ ಕುರಿತು ವಿವರಗಳು ಸಿಗುತ್ತಿಲ್ಲ. ಕೆಲವರು ಈತ ಪಾರಿಜಾತದ ಕಲಾವಿದನೆಂದೂ ಮತ್ತೆ ಕೆಲವರು ಸತ್ಯಶೀಲ ಬಯಲಾಟದ ನಟನೆಂದೂ ಇನ್ನೂ ಕೆಲವರು ರಾಧಾನಾಟಕ ಮಾಡುತ್ತಿದ್ದನೆಂದೂ ಹೇಳುವರು. ಆಟ ಯಾವುದೋ ತಿಳಿಯದು. ಆದರೆ ಜನರ ಬಾಯಲ್ಲಿ ಮಾತ್ರ ಕಲ್ಲಪ್ಪನಾಟ ಸಾವಿಲ್ಲದೇ ಉಳಿದುಕೊಂಡಿದೆ.ಚಿಂಚಲಿ ಸಮೀಪದ ಸುಟ್ಟಟ್ಟಿಯಲ್ಲಿ ಬಾಷಾ ಗೌಂಡಿ ಎಂಬ ಕಲಾವಿದ 'ಅಲ್ಲಮ ಪ್ರಭು' ಎಂಬ ಶರಣರ ಆಟವನ್ನು ಆಡುತ್ತಿದ್ದನೆಂದು ಸಿದ್ದಾಪುರದ ಬಾಬಾಲಾಲ ನದಾಫ ಹೇಳುತ್ತಾನೆ. ಆದರೆ ವಿವರಗಳು ಸಿಗುತ್ತಿಲ್ಲ.

ಹಿಡಕಲ್ಲದಲ್ಲಿ ರಾಧಾನಾಟ ಆಡುವ ಮೇಳ ಒಂದಿತ್ತೆಂದು ಹೇಳುವರು. ಆದರೆ ಅದರ ಬಗ್ಗೆಯೂ ಸರಿಯಾದ ಮಾಹಿತಿ ಸಿಗುತ್ತಿಲ್ಲ. ಒಟ್ಟಿನಲ್ಲಿ ಈ ಪ್ರದೇಶ ಪಾರಿಜಾತಕ್ಕೆ ನೀಡಿದ ಸ್ಥಾನವನ್ನು ಉಳಿದ ಆಟಗಳಿಗೆ ನೀಡಲಿಲ್ಲವೆಂದೇ ಹೇಳಬೇಕಾಗುತ್ತದೆ. ಬಾಗೆ ಪರಿಸರದಲ್ಲಿ ಪಾರಿಜಾತ ಕಲಾವಿದರಾಗಿ ಭೀಮಪ್ಪ ಕೊಕಟನೂರ ಹಾಗೂ ಕಲಾವಿದೆಯಾಗಿ ಮಾಲಾ ಸಾಂಬ್ರೇಕರ ಅಮರರಾಗಿದ್ದಾರೆ.

**ಶ್ರೀಕೃಷ್ಣಪಾರಿಜಾತದ ಕಲಾವಿದರು:**

'ಕೃಷ್ಣಪಾರಿಜಾತ' ಸಣ್ಣಾಟದ ಒಂದು ವಿಶೇಷ ಪ್ರಕಾರ. ಅದು ಸಂಗೀತ, ಸಾಹಿತ್ಯ, ಅಧ್ಯಾತ್ಮ, ಅಭಿನಯ ಹಾಗೂ ನೃತ್ಯದ ಕಲಾಸಂಗಮ. ಅಪರಾಳ ತಮ್ಮಣ್ಣ ಮತ್ತು ಶಿರಗುಪ್ಪಿ ಸದಾಶಿವ ರಚಿಸಿದ ಶ್ರೀಕೃಷ್ಣಪಾರಿಜಾತವನ್ನು ಅಟ್ಟಕ್ಕೆ ಅಳವಡಿಸಿದವನು ಗೋಕಾಕ ತಾಲೂಕಿನ ಕುಲಗೋಡದ ತಮ್ಮಣ್ಣ (ಕಾಲ

ಕ್ರಿ.ಶ.ಸು.೧೮೪೦). ಇದು 'ಶ್ರೀಕೃಷ್ಣಪಾರಿಜಾತ'ದ ಮೊದಲ ಹಂತ. 'ಶ್ರೀಕೃಷ್ಣ ಪಾರಿಜಾತ'ದ ಎರಡನೆಯ ಹಂತದ ಜನಪ್ರಿಯತೆಗೆ ಕಾರಣ ಕೌಜಲಗಿ ನಿಂಗಮ್ಮ. ಪಾರಿಜಾತಕ್ಕೆ ಭದ್ರಬುನಾದಿ ಹಾಕಿದವಳಲ್ಲಿ ಅವಳೂ ಒಬ್ಬಳು. ತಮ್ಮಣ್ಣ ತೀರಿಕೊಂಡನಂತರ ನಿಂಗಮ್ಮ ಸ್ವತಃ ಕಂಪನಿಕಟ್ಟಿ ಕರ್ನಾಟಕದಾದ್ಯಂತ ಸಂಚರಿಸಿ ಜನಪ್ರಿಯಗೊಳಿಸಿದಳು. ಕೌಜಲಗಿ ನಿಂಗಮ್ಮಳ ಕಂಪನಿಯಲ್ಲಿ ಭಾಗವತ ಪಾತ್ರ ಮಾಡುತ್ತಿದ್ದ ಭೀಮಪ್ಪ ಕೊಕಟನೂರ ರಾಯಬಾಗ ತಾಲೂಕಿನ ಹಿಡಕಲ್ಲದವನು. ಆತ ಸಹಜ ಮಾತಾಡಿದರೂ ಪ್ರೇಕ್ಷಕರ ತುಟಿಗಳಲ್ಲಿ ನಗೆ ಚಿಮ್ಮುತಿತ್ತು. ಅವನದು ರಾಜಹಾಸ್ಯ. ಸುಮಾರು ೨೦ವರ್ಷ ಭಾಗವತ ಪಾತ್ರ ಮಾಡಿದನು. ಚೆನ್ನಾಗಿ ತಾಳ ಬಾರಿಸುತ್ತಿದ್ದ. ಇವನಿಂದಲೇ ಬಾಗೆಪರಿಸರದಲ್ಲಿ ಪಾರಿಜಾತಕ್ಕೊಂದು ಗಟ್ಟಿ ನೆಲೆ ಸಿಕ್ಕಿತು ಎನ್ನುತ್ತಾರೆ ಹಿರಿಯ ರಂಗಭೂಮಿ ಕಲಾವಿದ ಸಿದ್ದಾಪೂರದ ಬಾಬಾಲಾಲ ನದಾಫ. ಭೀಮಪ್ಪ ಕೊಕಟನೂರ ತೀರಿಕೊಂಡು ೪೫ ವರ್ಷಗಳಾದವು. ಅವನ ನಂತರ ಪಾರಿಜಾತ ಪರಂಪರೆಯನ್ನು ಈ ನಾಡಿನಲ್ಲಿ ಅನೇಕ ಕಲಾವಿದರು ಮುಂದುವರೆಸಿದರು. ಇಲ್ಲಿಯ ಪಾರಿಜಾತ ಮೇಳಗಳು ಇಂತಿವೆ.

೧. ಶ್ರೀಕೃಷ್ಣಪಾರಿಜಾತ ಕಂಪನಿ, ಮಂಟೂರ
೨. ಶ್ರೀಕೃಷ್ಣಪಾರಿಜಾತ ಕಂಪನಿ, ಸಿದ್ದಾಪುರ
೩. ಶ್ರೀಕೃಷ್ಣಪಾರಿಜಾತ ಕಂಪನಿ, ಸವಸುದ್ದಿ
೪. ಶ್ರೀಕೃಷ್ಣಪಾರಿಜಾತ ಕಂಪನಿ, ಹಿಡಕಲ್ಲ
೫. ಶ್ರೀರಾಘವೇಂದ್ರ ಶ್ರೀಕೃಷ್ಣಪಾರಿಜಾತ ಕಂಪನಿ, ಹಿಡಕಲ್ಲ

ಬಾಗೆ ಪರಿಸರ ಉತ್ತಮ ಪಾರಿಜಾತ ಪ್ರತಿಭೆಗಳನ್ನು ನಾಡಿಗೆ ಕಾಣಿಕೆಯಾಗಿ ನೀಡಿದೆ. ಅವರಲ್ಲಿ ಮೊದಲ ಹೆಸರು ಭೀಮಪ್ಪ ಕೊಕಟನೂರ. ಅನಂತರದ ಹೆಸರು ಮಂಟೂರಿನ ರತ್ನಪ್ಪ ಭೀಮಪ್ಪ ದೇವರಮನಿಯವರದು.

**ರತ್ನಪ್ಪ ಭೀಮಪ್ಪ ದೇವರಮನಿ :**

ಈತ ಮಂಟೂರು ಮೇಳದ ಯಜಮಾನ. ಸತ್ಯಭಾಮೆ ಮತ್ತು ಕೊರವಂಜಿ ಪಾತ್ರ ಮಾಡುತ್ತಿದ್ದ. ೩೦-೪೦ ವರ್ಷ ಮೇಳಕಟ್ಟಿ ನೂರಾರು

[illegible]

[illegible]

[illegible]

ಪ್ರದರ್ಶನಗಳನ್ನು ನೀಡಿದ. ಅವನ ಮರಣಾನಂತರ ಕಂಪನಿ ಒಡೆಯಿತು. ಈತ ಹೆಚ್ಚಾಗಿ ಮಹಾಲಿಂಗಪುರದಲ್ಲಿಯೇ ಇರುತಿದ್ದನು.

**ಸುಲ್ತಾನ ಪಠಾಣ :**

ಇವನು ಮೂಲತಃ ಚಿಕ್ಕೋಡಿ ತಾಲೂಕಿನ ಕೆರೂರು ಗ್ರಾಮದವನು. ಹಾರೂಗೇರಿಗೆ ಬಂದು ಪಾರಿಜಾತ ಮೇಳ ಕಟ್ಟಿದನು. ಅವನ ಕಂಪನಿ ೩೦ ವರ್ಷ ನಡೆಯಿತು. ಅವನು ಸತ್ಯಭಾಮ ಪಾತ್ರ ಮಾಡುತ್ತಿದ್ದನು. ಅವನ ಮೇಳ ಒಳ್ಳೆಯ ಕಲಾವಿದರಿಂದ ತುಂಬಿತ್ತು. ಅವನದು ಜನ್ಮಜಾತ ಪ್ರತಿಭೆ. ಸಂದರ್ಭ ಬಂದರೆ ಯಾವುದೇ ಪಾತ್ರ ನಿಭಾಯಿಸಬಲ್ಲ ತಾಕತ್ತು ಅವನಲ್ಲಿತ್ತು. ಹಾರೂಗೇರಿಯ ಭೀಮಪ್ಪ ಕುಂಬಾರ ಹಾಗೂ ಭೀಮಪ್ಪ ಗುರವ ಈತನ ಕಂಪನಿಯಲ್ಲಿ ಅಭಿನಯಿಸುತ್ತಿದ್ದನು. ಈತ ತೀರಿಕೊಂಡು ಹಲವು ವರ್ಷಗಳಾಗಿವೆ.

**ಹಸನಸಾಬ ನದಾಫ :**

ಇವನು ರಾಯಬಾಗ ತಾಲೂಕಿನ ಕಂಕಣವಾಡಿಯವನು. ವಯಸ್ಸು ೬೦. ಮಂಟೂರು ಕಂಪನಿಯಲ್ಲಿ ಭಾಗವತ ಪಾತ್ರ ಮಾಡುತ್ತಿದ್ದ. ಇವನು ಆ ಕಂಪನಿ ಒಡೆದ ನಂತರ ಸ್ವತಃ ಮೇಳಕಟ್ಟಿ ಹಲವು ವರ್ಷ ಅಭಿನಯಿಸಿದನು. ಈಗಲೂ ಈತ ಪಾತ್ರ ಮಾಡುತ್ತಾನೆ. ಈತನಿಗೆ ರಾಜ್ಯ ಹಾಗೂ ಕೇಂದ್ರ ಸರಕಾರದ ಮಾಶಾಸನ ಸಿಗುತ್ತವೆ.

**ಅಣ್ಣಪ್ಪ ಭೀಮಪ್ಪ ಜಂಬಗಿ :**

ಈತನ ಊರು ಹಿಡಕಲ್ಲ. ೭೫ ವಯಸ್ಸಿನ ಹಿರಿಯ ಜೀವ. ಆರಂಭದಲ್ಲಿ ಹಲವು ಪಾತ್ರಗಳನ್ನು ನಿಭಾಯಿಸುತ್ತಿದ್ದನು. ಅನಂತರ ಪಾರಿಜಾತ ಕಂಪನಿಗಳಿಗೆ ಗುರು(ಮಾಸ್ತರ) ಆಗಿ ನಿರ್ವಹಿಸಿದ ಪಾತ್ರ ಉಪೇಕ್ಷಿಸುವಂತಹದಲ್ಲ. ಇವನು ತನ್ನ ಗುರುವೆಂದು ಪಾರಿಜಾತದ ಪ್ರತಿಭೆ ಮಾಲಾಬಾಯಿ ಸಾಂಬ್ರೇಕರ ಹೇಳುತ್ತಾಳೆ. ಹಿಡಕಲ್ಲದಲ್ಲಿ ಎರಡು ಕಂಪನಿಗಳನ್ನು ಹುಟ್ಟು ಹಾಕಿದ ಖ್ಯಾತಿ ಇವನದು.

ಸರಕಾರದ ಸೌಲಭ್ಯಗಳಿಂದ ವಂಚಿತಗೊಂಡ ಈ ಹಿರಿಯ ಕಲಾವಿದ ಈಗ ತುಂಬ ಸಂಕಷ್ಟದಲ್ಲಿದ್ದಾನೆ.

**ಬಾಬಾಲಾಲ ದಸ್ತಗೀರ ನದಾಫ :**

ಸಿದ್ದಾಪುರ ಪಾರಿಜಾತ ಮೇಳವನ್ನು ಕಟ್ಟಿದವರು. ಬಾಬಾಲಾಲ ನದಾಫ ಹಾಗೂ ಸಂತ್ರಾಮ ಬಡಿಗೇರ. ಬಾಬಾಲಾಲ ನದಾಫ ಜನಿಸಿದ್ದು ೧೯೩೮ರಲ್ಲಿ, ಅಥಣಿ ತಾಲೂಕಿನ ಸಪ್ತಸಾಗರದಲ್ಲಿ. ಕಲಿತದ್ದು ಕೇವಲ ೫ನೇ ತರಗತಿ. ತನ್ನ ೯ನೆಯ ವಯಸ್ಸಿನಲ್ಲಿ ಪಾರಿಜಾತದ ಅಟ್ಟ ಹತ್ತಿದನು. ಆಗ ಸಪ್ತಸಾಗರದಲ್ಲಿ ಒಂದು ಪಾರಿಜಾತ ಮೇಳವಿತ್ತು. ಅದರಲ್ಲಿ ಬಾಲಗೋಪಾಲನ ಪಾತ್ರ ಮಾಡುತ್ತಿದ್ದನು. ತನ್ನ ೨೧ನೆಯ ವಯಸ್ಸಿನಲ್ಲಿ ಸಂತ್ರಾಮ ಬಡಿಗೇರನ ಜೊತೆಗೂಡಿ 'ಸಿದ್ದಾಪುರ ಮೇಳ' ಕಟ್ಟಿದನು. ೪ಸಲ ಆಕಾಶವಾಣಿಯಲ್ಲಿ ಹಾಗೂ ಒಮ್ಮೆ ಬೆಂಗಳೂರು ದೂರದರ್ಶನದಲ್ಲಿ ಇವರ ಪಾರಿಜಾತ ಬಿತ್ತರಗೊಂಡಿತ್ತು.

ಸಿದ್ದಾಪುರ ಪಾರಿಜಾತ ಮೇಳದಲ್ಲಿರುವ ಬಹುಪಾಲು ಕಲಾವಿದರು ಬಾಗೆನಾಡಿನವರು. ಅವರಲ್ಲಿ ಐದು ಜನ ಈಗಲೂ ಬದುಕಿದ್ದಾರೆ. ಮೂವರು ಅಗಲಿದ್ದಾರೆ. ಖೆಮಲಾಪುರದ ಅರ್ಜುನ ಲಕ್ಕಪ್ಪ ಕೋಳಿ, ಸಂತ್ರಾಮ ಬಡಿಗೇರ, ಅಲಕನೂರಿನ ಮುರಿಗೆಪ್ಪ ಬಾನೆ, ಕೋಳಿಗುಡ್ಡದ ಭೀಮಪ್ಪ ಗುರವ ಕ್ರಮವಾಗಿ ರುಕ್ಮಿಣಿ, ಸತ್ಯಭಾಮಾ, ಭಾಗವತ ಪಾತ್ರ ಮಾಡುತ್ತಿದ್ದರು. ಸಿದ್ದಾಪುರದ ನಾಡಗೌಡ ಪಾಟೀಲ ತಾಳ ಬಾರಿಸುತ್ತಿದ್ದನು. ಶಿರಗೂರದ ಗುಲಾಬ ತಾಸೇವಾಲಾ ಗೊಲ್ಲತಿ, ಖೆಮಲಾಪುರದ ಜಗನ್ನಾಥ ಒಡೆಯರ ಹಿರಿಯ ಭಾಗವತ ಪಾತ್ರ ಮಾಡುತ್ತಿದ್ದರು. ಸಿದ್ದಾಪುರದ ದಸ್ತಗೀರ ಬಾಬೊದ್ದೀನ ಮುಲ್ಲಾ ಸ್ವರಪೆಟ್ಟಿಗೆ ನುಡಿಸುತ್ತಿದ್ದನು. ೭೫ರ ವಯಸ್ಸಿನಲ್ಲಿಯೂ ನದಾಫ ಸುಶ್ರಾವ್ಯವಾಗಿ ಹಾಡುತ್ತಾನೆ, ಶಿವಭಜನೆ ಮಾಡುತ್ತಾನೆ, ಪ್ರವಚನ ಹೇಳುತ್ತಾನೆ. ಸರಕಾರ ೧೯೯೪ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ರಾಜ್ಯ ಹಾಗೂ ಕೇಂದ್ರ ಸರಕಾರಗಳು ಮಾಶಾಸನ ನೀಡುತ್ತಿವೆ. ಈ ನದಾಫ ಮನೆತನಕ್ಕೆ ರಂಗಭೂಮಿ ಪರಂಪರೆಯ ನಂಟಿದೆ. ಬಾಬಾಲಾಲರ ತಂದೆ ದಸ್ತಗೀರ ಗುಡುಸಾಬ ನದಾಫ ಹಾಗೂ ಅಜ್ಜ ಗುಡುಸಾಬ ರಾಧಾನಾಟ ಆಡುತ್ತಿದ್ದನು. ಬದುಕಿನ

ಮುಸ್ಸಂಜೆಯಲ್ಲಿ ರಂಗಭೂಮಿಯ ನೆನಪುಗಳನ್ನು ಮೆಲಕು ಹಾಕುವುದೇ ಈ ಹಿರಿಯ ನಟನಿಗೆ ಸಂತಸದ ಒಂದು ಅನುಭವ.

**ಲಕ್ಷ್ಮಣಗೌಡ ಪಾಟೀಲ :**

ಇವನು ಸವಸುದ್ದಿ ಪಾರಿಜಾತ ತಂಡದ ನಾಯಕ. ಊರು ಸವಸುದ್ದಿ. ವಯಸ್ಸು ೭೦. ಕೃಷ್ಣ ಮತ್ತು ಕೊರವಂಜಿ ಪಾತ್ರ ಮಾಡುವ ಕಲಾವಿದ. ಇತ್ತೀಚಿಗೆ ಕಂಪನಿ ಒಡೆದಿದೆ. ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲೂಕಿನ ಕಾಲತಿಪ್ಪಿಯಲ್ಲಿ ಈಗ ವಾಸಿಸುತ್ತಿದ್ದು ರಾಜ್ಯ ಹಾಗೂ ಕೇಂದ್ರ ಸರಕಾರದ ಮಾಶಾಸನ ಪಡೆಯುತ್ತಾನೆ.

**ಗಂಗಾರಾಮ ಹಾಲಪ್ಪ ಗದಗೈಗೋಳ :**

ಬಾಗೆಯ ಮತ್ತೊಬ್ಬ ಅಭಿಜಾತ ಕಲಾವಿದ. ಈತ ನಟನೂ ಹೌದು; ಹಾಡುಗಾರನೂ ಹೌದು. ರಿವಾಯತ ಹಾಗೂ ಲಾವಣಿಗಳನ್ನು ಹಾಡುತ್ತಾನೆ. ಅನೇಕ ಭಜನಾ ಸಂಘಗಳನ್ನು ಹುಟ್ಟು ಹಾಕಿರುವ ಕಂಕಣವಾಡಿಯ ಗಂಗಾರಾಮ ತನ್ನ ಬದುಕನ್ನೇ ರಂಗಭೂಮಿಗೆ ಅರ್ಪಿಸಿದವನು. ಕಂಕಣವಾಡಿಯ ಗದಗೈಯಗೋಳ ಮನೆತನವು ಬಾಗೆನಾಡಿನ ಜನಪದ ರಂಗಪರಂಪರೆಗೆ ಅಪೂರ್ವ ಸೇವೆ ಸಲ್ಲಿಸಿದೆ. ಇವರ ತಂದೆ ಹಾಲಪ್ಪ ರಾಮಪ್ಪ ಗದಗೈಯಗೋಳ. ಈತ ಪ್ರಸಿದ್ಧ ಲಾವಣಿಕಾರ. ಭೀಮಪ್ಪ ಬಾಲಪ್ಪ ದಾಸಾಪ್ಪಗೋಳರವರೊಂದಿಗೆ ಲಾವಣಿ ತಂಡ ರಚಿಸಿದ್ದನು. ಹಾಲಪ್ಪನ ತಂದೆ ರಾಯಪ್ಪ ಮೃದಂಗವಾದಕನಾಗಿದ್ದನು. ಗಂಗಾರಾಮನ ಮಗ ಸದಾಶಿವ ಈಗ ಪಾರಿಜಾತ ಕಲಾವಿದ. ಸದಾಶಿವನ ಮಗ ಕೃಷ್ಣಪಾರಿಜಾತದಲ್ಲಿ ಬಾಲಮುರಳಿಯ ವೇಷಹಾಕುತ್ತಿದ್ದಾನೆ. ಅಂದರೆ ಗದಗೈಯಗೋಳ ಮನೆತನ ಕಲಾವಿದರ ವಿಶಿಷ್ಟ ಪರಂಪರೆಯನ್ನೇ ಸೃಷ್ಟಿಸಿದೆ.

ಗಂಗಾರಾಮ ಗದಗೈಯಗೋಳನ ಕಲಾಸೇವೆ ಆರಂಭವಾದುದು ಮಲ್ಲಿಕಾರ್ಜುನ ನಾಟ್ಯ ಸಂಘ ಕಟ್ಟುವುದರ ಮೂಲಕ. ಗಂಗಾರಾಮ ೪೦ವರ್ಷ ಕಂಪನಿ ಕಟ್ಟಿ ಮಲ್ಲಮ್ಮನ ಪಾತ್ರ ಮಾಡಿದನು. ಅವನ ಮಲ್ಲಮ್ಮನಾಟದ ಕೊನೆಯ ಪ್ರಯೋಗ ನಡೆದುದು ಕೂಡಾ ಕಂಕಣವಾಡಿಯಲ್ಲಿ. ಅನಂತರ ಕೃಷ್ಣಪಾರಿಜಾತ

ಕಂಪನಿ ಕಟ್ಟಿದನು. ಅದರಲ್ಲಿ ಕೃಷ್ಣ ಪಾತ್ರ ಮಾಡುತ್ತಿದ್ದನು. ಇವನ ಆಟ ಹಲವು ಸಲ ಆಕಾಶವಾಣಿಯಲ್ಲಿ ಬಿತ್ತರಗೊಂಡಿದೆ. ೨೦೦೪ರಲ್ಲಿ ಈ ಕಲಾವಿದ ತೀರಿಕೊಂಡ.

**ಸದಾಶಿವ ಗಂಗಾರಾಮ ಗದಗೈಗೋಳ :**

ಈತ ಗಂಗಾರಾಮನ ಮಗ. ಓದಿದ್ದು ಕೇವಲ ೬ನೇ ವರ್ಗ. ತಂದೆಯಿಂದ ರಂಗವಿದ್ಯೆ ಬಳುವಳಿಯಾಗಿ ಬಂದಿತ್ತು. ಈಗ ವಯಸ್ಸು ೪೧. ಉತ್ತರಕರ್ನಾಟಕದ ವಿವಿಧ ಪಾರಿಜಾತ ಕಂಪನಿಗಳಲ್ಲಿ ಕೃಷ್ಣನ ಪಾತ್ರದಲ್ಲಿ ಮಿಂಚಿದ ಖ್ಯಾತಿ ಇವನದು. ಇವನ ಅಭಿನಯಕ್ಕೆ ಆಕಾಶವಾಣಿ ಮಾನ್ಯತೆ ನೀಡಿದ್ದು ಮಾತ್ರವಲ್ಲ. 'ಎ' ಗ್ರೇಡ್ ಕಲಾವಿದನೆಂದು ಪ್ರಮಾಣೀಕರಿಸಿದೆ. ದೂರದರ್ಶನ ಈತನ ಕಲೆಯನ್ನು ಪ್ರದರ್ಶಿಸಿದೆ.

ಹಸನಸಾಬ ನದಾಫ, ಶಿವನಿಂಗ ಕಮಾಲ, ಹಣಮಂತ ಗೋವಿಂದ ಅಂಬಿನಾಯ್ಕ, ಸಿದ್ದಪ್ಪ ಚಂದ್ರಪ್ಪ ಕುಶಮುಂಡಿ ಕಂಕಣವಾಡಿಯ ಇತರ ಪಾರಿಜಾತ ಕಲಾವಿದರು.

**ಕಟಕಬಾವಿಯ ರಾವಳ ಪೂಜಾರಿ :**

ಈತನದು ನಿಂಗಮ್ಮದೇವಿ ಶ್ರೀಕೃಷ್ಣಪಾರಿಜಾತ ಕಂಪನಿ ಕಟಕಬಾವಿ. ನಿಂಗಮ್ಮದೇವಿ ಕಟಕಬಾವಿಯ ಗ್ರಾಮದೇವತೆ. ಅವಳ ಹೆಸರಿನಲ್ಲಿ ಕೆಲವು ಕಾಲ ಕಂಪನಿ ನಡೆಸಿದ ರಾವಳ ಪೂಜಾರಿಗೆ ಈಗ ೫೦ ವರ್ಷ ವಯಸ್ಸು. ಸತ್ಯಭಾಮ ಮತ್ತು ಕೊರವಂಜಿ ಪಾತ್ರ ಮಾಡುತ್ತಿದ್ದನು. ಅದೇ ಗ್ರಾಮದ ಮಾಧವ ರಾವಳ ಪೂಜಾರಿ ಈತನೊಂದಿಗೆ ಕೃಷ್ಣ ಪಾತ್ರ ಹಾಕುತ್ತಿದ್ದ.

**ಶಿವಪುತ್ರಪ್ಪ ದೇವರಮನಿ :**

ಶಿವಪುತ್ರಪ್ಪನ ಊರು ಮಂಟೂರು. ವಯಸ್ಸು ೬೦. ರತ್ನಪ್ಪ ದೇವರಮನಿ ಸಹೋದರ ಸಂಬಂಧಿ. ಈಗಲೂ ಆಗಾಗ ಪಾತ್ರ ಮಾಡುತ್ತಾನೆ.

**ಶಿವಲಿಂಗಪ್ಪ ಬಜಂತ್ರಿ :**

ಇವನು ಹಿಡಕಲ್ಲದ ಪಾರಿಜಾತ ಮೇಳದ ಒಡೆಯ. ಪೂರ್ಣ ಹೆಸರು ಶಿವಲಿಂಗಪ್ಪ ಮಾರುತಿ ಬಜಂತ್ರಿ, ವಯಸ್ಸು ೬೦. ಕಳೆದ ೨೫ ವರ್ಷಗಳಿಂದ ಕಂಪನಿ ಕಟ್ಟಿ ಕಲಾ ಸೇವೆ ಸಲ್ಲಿಸುತ್ತಿದ್ದ. ಶಿವಲಿಂಗಪ್ಪ ಇತ್ತೀಚಿಗೆ ಕಂಪನಿ ನಿಲ್ಲಿಸಿದ್ದಾನೆ. ಕೊರವಂಜಿ ಪಾತ್ರಕ್ಕೆ ಜೀವ ತುಂಬುತ್ತಿದ್ದ ಕಲಾಕೋವಿದ. ವಿಶೇಷವೆಂದರೆ ತಮ್ಮ ಮನೆಯಲ್ಲಿಯ ಎಂಟು ಜನ ಕಲಾವಿದರನ್ನು ಸೇರಿಸಿಕೊಂಡು ಕಂಪನಿ ಕಟ್ಟಿದ್ದು. ಯಲ್ಲಪ್ಪ, ಸತ್ಯೆಪ್ಪ, ಶಂಕ್ರೆಪ್ಪ, ಸದಾಶಿವ ಐವರು ಬಜಂತ್ರಿ ಸಹೋದರರು. ಕ್ರಮವಾಗಿ ಕೃಷ್ಣ, ರುಕ್ಮಿಣಿ, ಹಿರಿಯ ಭಗವತ ಹಾಗೂ ಕಿರಿಯ ಭಾಗವತರಾಗಿ ನಟಿಸುತ್ತಿದ್ದರು. ತಮ್ಮಣ್ಣ ಬಜಂತ್ರಿ ಸ್ವರ ಪೆಟ್ಟಿಗೆ ನುಡಿಸುತ್ತಿದ್ದ. ಈಗ ಇವರಲ್ಲಿ ಯಲ್ಲಪ್ಪ ಮತ್ತು ಶಂಕ್ರೆಪ್ಪ ಸರಕಾರದಿಂದ ಮಾಶಾಸನ ಪಡೆಯುತ್ತಾರೆ.

**ಮಲೀಕಸಾಬ ಲಾಡಜಿಸಾಬ ನಧಾಪ :**

ಮಲೀಕಸಾಬ ಲಾಡಜಿಸಾಬ ನಧಾಪ ಬಾಗೆನಾಡಿನ ತೀರಾ ಹಿಂದುಳಿದ ಗ್ರಾಮವಾದ ಸವಸುದ್ದಿಯವನು. ಬದುಕಿನಲ್ಲಿ ಹಲವಾರು ಏಳು-ಬೀಳುಗಳನ್ನು ಕಂಡವನು. ತನ್ನ ಜೀವನದ ಹಲವು ನೋವುಗಳ ನಡುವೆ ತನ್ನ ಕಲಾ ಸೇವೆಯನ್ನು ಬಾಗೆನಾಡಿಗೆ ನೀಡಿದ ಶ್ರೇಷ್ಠ ರಂಗಭೂಮಿ ಕಲಾವಿದ. ಈತ ಸೇವೆ ಸಲ್ಲಿಸದ ಕಲಾಕ್ಷೇತ್ರವಿಲ್ಲ; ತಿರುಗಾಡದೇ ಉಳಿದ ಹಳ್ಳಿ ಇಲ್ಲ. ತನ್ನ ಬಾಲ್ಯದಿಂದಲೂ ಇಲ್ಲಿಯವರೆಗೆ ಎಲ್ಲ ಕ್ಷೇತ್ರಗಳಲ್ಲಿ ತನ್ನದೇ ಆದ ಛಾಪ ಮೂಡಿಸಿದ ಪ್ರತಿಭಾವಂತ ಕಲಾವಿದ. ಇಡೀ ತನ್ನ ಜೀವನವನ್ನೇ ಕಲಾ ಅಭಿನಯಕ್ಕೆ ಮೀಸಲಿಟ್ಟ ಮಲೀಕಸಾಬನಿಗೆ ಈಗ ವಯಸ್ಸು ೯೦. 'ಕೃಷ್ಣನಾಗಿ ಪಾರಿಜಾತದಲ್ಲಿ ತಾವು ಸತ್ಯಭಾಮೆಯನ್ನು ಹೇಗೆ ಸಮಾಧಾನ ಪಡಿಸುತ್ತಿದ್ದೀರಿ?' ಎಂದು ಕೇಳಿದರೆ ಸಾಕು, ಹಲ್ಲುಗಳಿಲ್ಲದ ಬಚ್ಚ ಬಾಯಿಯಲ್ಲಿ ನಗು ತುಂಬಿ ಸತ್ಯಭಾಮೆಯನ್ನು ಕೃಷ್ಣ ಸಮಾಧಾನಪಡಿಸುವ ಹಾಡು ಹಾಡುತ್ತಾನೆ. ಇವನು ಅನಕ್ಷರಸ್ಥ. ಶಾಲೆಯ ಪರಿಸರ ಈತನಿಗೆ ದೊರಕಿಲ್ಲ. ಮತ್ತೊಬ್ಬರಿಂದ ಕೇಳಿ ಹಾಡುವುದು ಪದಗಳನ್ನೆಲ್ಲ ಕಂಠಪಾಠದಲ್ಲಿ ಹೇಳುವುದನ್ನು ನೋಡಿದರೆ ಅವನ ಜ್ಞಾಪಕಶಕ್ತಿ ಅದ್ಭುತವೆನಿಸುತ್ತದೆ.

[illegible]

ಇದು ಆತನ ಸೃಜನಶೀಲತೆಗೆ ಹಿಡಿದ ಕನ್ನಡಿ. ಪ್ರತಿಯೊಂದು ಪದಗಳನ್ನು ಮತ್ತೊಬ್ಬರಿಂದ ಕೇಳಿ ಕಲಿತಿದ್ದೇನೆ. ೪ ದಿನಗಳವರೆಗೆ ಸತತವಾಗಿ ಹಾಡುವ ಹಾಡುಗಳು ನನ್ನಲ್ಲಿವೆ ಎನ್ನುತ್ತಾನೆ. ನದಾಫರಿಗೆ ನೀವು ಎಂದಿನಿಂದ ಹಾಡುವುದನ್ನು ರೂಢಿಸಿಕೊಂಡಿರಿ? ಎಂದು ಪ್ರಶ್ನಿಸಿದಾಗ "ನಾನು ನನ್ನ ಬಾರಾ ವರುಷದಿಂದ ಹಾಡುವುದನ್ನು ಆರಂಭಿಸಿದ್ದೇನೆ". ಎಂದು ಹೆಮ್ಮೆಯಿಂದ ಹೇಳುತ್ತಾನೆ. ಬಾರಾ ವರ್ಷದಿಂದ ಅಲಾವಿ ಹಾಡುಗಳನ್ನು ಹಾಡಲು ಆರಂಭಿಸಿದ ನದಾಫ್ ೨೦ ವರ್ಷಗಳವರೆಗೆ ಅಲಾವಿ ಹಾಡುಗಳನ್ನು ಹಾಡಿದ ನಂತರ ೬ ಜನರೊಂದಿಗೆ ಮೇಳ ಕಟ್ಟಿಕೊಂಡು ತಮ್ಮ ಊರಿನ ಕಂಬಿ ಐದೇಶಿ, ಗಣಪತಿ ಹಬ್ಬ ಮುಂತಾದ ಸಂದರ್ಭಗಳಲ್ಲಿ ಹಾಡುಗಳನ್ನು ಹಾಡಲು ಆರಂಭಿಸಿದ. 'ಊರಿನಲ್ಲಿ ಪ್ರತಿವರ್ಷ ಕಂಬಿ ಐದೇಶಿ ಸಮಯದಲ್ಲಿ ಊರಿನ ಪ್ರಮುಖ ಕಲಾವಿದರ ಪ್ರದರ್ಶನಗಳನ್ನು ಈಗಲೂ ಇಲ್ಲಿ ಏರ್ಪಡಿಸುತ್ತಾರೆ. ಅದು ನಮ್ಮ ಪ್ರತಿಭೆಯನ್ನು ಊರಿನ ಜನರಿಗೆ ತೋರಿಸಲು ಒಂದು ವೇದಿಕೆಯಾಗಿ ಪರಿಣಮಿಸಿತು. ಅಲ್ಲಿಂದ ನಮ್ಮ ಕಲಾ ಪ್ರದರ್ಶನ ಆರಂಭವಾಯಿತು' ಎಂದು ನದಾಫ ಹೇಳುತ್ತಾನೆ. ಯಾವುದಾದರೊಂದು ಅಲಾವಿ ಹಾಡು ಹಾಡಿ ಎಂದಾಗ ತಕ್ಷಣವೇ ಹಾಡಲಾರಂಭಿಸುತ್ತಾನೆ.

ಸವಸುದ್ದಿಯಲ್ಲಿ ಅರ್ಧದಷ್ಟು ಜನ ಹಾಲುಮತದವರು. ಸವಸುದ್ದಿ ಲಕ್ಕವ್ವ ಹಾಲುಮತದವರ ಸ್ತ್ರೀದೈವ. ಇಲ್ಲಿ ಡೊಳ್ಳಿನ ಕಲಾವಿದರು ಜಾಸ್ತಿ. ಅವಕಾಶಗಳ ದೃಷ್ಟಿಯಿಂದ ನದಾಫ ಡೊಳ್ಳು ಹಾಡುಗಳತ್ತ ವಾಲಿದ. ಸವಸುದ್ದಿ ಲಕ್ಕವ್ವನ ವಾರವಾದ ಮಂಗಳವಾರ, ಅಮವಾಸ್ಯೆ, ಹುಣ್ಣಿಮೆ ಇನ್ನಿತರ ಹಬ್ಬ-ಹರಿದಿನಗಳಂದು ಹಾಡಲಾರಂಭಿಸಿದನು. ತದನಂತರ ಊರಿನ ಜನರ ಪ್ರೋತ್ಸಾಹದಿಂದ ಲಕ್ಷ್ಮೀ ಡೊಳ್ಳಿನ ಗಾಯನ ಮೇಳವೆಂದು ತಂಡವನ್ನು ಕಟ್ಟಿದನು. ಬಾಗೆನಾಡಿನ ತುಂಬೆಲ್ಲ ಸಂಚರಿಸಿದ. 'ನೀವು ಹಾಡುವ ಸಮಯದಲ್ಲಿ ಯಾವ-ಯಾವ ಹಾಡುಗಳನ್ನು ಹಾಡುತ್ತಿದ್ದೀರಿ ಮತ್ತು ಹಾಡುಗಳು ಯಾರು ಬರೆದದ್ದವು?' ಎಂದು ಪ್ರಶ್ನಿಸಿದರೆ ಹಾಡಿನಲ್ಲಿಯೇ ಕವಿಗಳ ಪಟ್ಟಿಯನ್ನು ಪ್ರಸ್ತುತಪಡಿಸಿದನು-

[illegible]

ನಾಲ್ಕ ಲಕ್ಷ ನಾಕಿಪತ್ತ ಹಕ್ಕಿಯೊಳಗ ಕುಡಚಿ ಶೆಟ್ಟ ರಾಮದ್ಯಾವಹಕ್ಕಿ
ಸುತ್ತ ನಾಡ ಒಳಗ ಸೌಂದತ್ತಿ ಬಾಬಜಿ ಪಿಂಜರದಾಗಿನ ಗಿಳಿಹಕ್ಕಿ
ಕೊಂಡ ಜಗಳಕ ಕಾಲಕೆದರಿ ನಿಂದ್ರಾವ ಅಥಣಿಯ ಸಿದರಾಮ ಜಾಣಹಕ್ಕಿ
ಪತ್ರ ಬರೆದಾಂವಗ ಉತ್ತರ ಕಳೇವ್ಯಾನ ಶಿವನೂರ ಕುಲಕರ್ಣಿ ಗರುಡಹಕ್ಕಿ
ಎಚ್ಚರಲೇ ಒಳ್ಳೆಪೇಚಹೊಡಿಯ್ಯಾಂವ ಮಂಗಳವಾಡಿನ ಹಸನಸಾಬ ಬಡಗ್ಯಾನಹಕ್ಕಿ
ಸಾಧುರೊಳಗ ಸಾಧಿಸಿ ಹೇಳಾಂವ ಪಾರ್ಥನಳ್ಳಿ ಮಲ್ಲ ಪಾರಿವಾಳದ ಹಕ್ಕಿ
ಸಿಟ್ಟ ಬಾಳ ಆಂವ ದುಷ್ಟ ಕವಿಸೂರ ಕಟಾಂವಿ ಬಾಬಜಿ ಆಕಾಶ ಹಕ್ಕಿ

– ಇವರೆಲ್ಲರ ಹಾಡು ಹಾಡುತ್ತೇನೆ ಎನ್ನುತ್ತಾ ಕೆಮ್ಮುತ್ತಾನೆ.

ಮುಂದೆ ೪–೫ ಹಾಡುಗಾರರೊಂದಿಗೆ ಕೂಡಿ ಸವಸುದ್ಧಿ ಭಜನಾ ತಂಡವೊಂದನ್ನು ಕಟ್ಟಿಕೊಂಡನು. ಅಲ್ಲಿ ಸುಮಾರು ೧೨ ವರ್ಷಗಳ ಕಾಲ ಭಜನೆ ಮಾಡಿದ. ಆಮೇಲೆ ಕೃಷ್ಣಪಾರಿಜಾತಕ್ಕೆ ಆಕರ್ಷಿತನಾದ.

ಶ್ರೀಕೃಷ್ಣಪಾರಿಜಾತ ಪುಷ್ಪವಾಗಿ ಬೆಳೆದು ತನ್ನ ಸುಗಂಧದ್ರವ್ಯವನ್ನು ಪಸರಿಸಿದ್ದು ಬಾಗೆನಾಡಿನಲ್ಲಿ. ಪ್ರತಿಭಾನ್ವಿತ ಕಲಾವಿದರನ್ನು ಸೇರಿಸಿಕೊಂಡು ಮೇಳ ಕಟ್ಟಿದನು. ಹಲವಾರು ಸಣ್ಣ ಪುಟ್ಟ ಬದಲಾವಣೆಗಳನ್ನು ಮಾಡಿಕೊಂಡು ಪಾರಿಜಾತವನ್ನು ಹೊಸತುಗೊಳಿಸಿದ. "ನನ್ನ ತೂಕದಷ್ಟು ಬಣ್ಣವನ್ನು ಈ ಮುಖಕ್ಕೆ ಬಳಿದುಕೊಂಡಿದ್ದೇನೆ" ಎಂದು ಹೇಳುವ ನದಾಫ ಬಾಗೆಯ ರಂಗಭೂಮಿಯ ಬೆಳ್ಳಿಬೆಡಗು.

ಗೌಡಪ್ಪ ಪಾಟೀಲ ಸವಸುದ್ದಿಯ ಗೌಡ. ಗೌಡನಿಗೆ ಪಾರಿಜಾತದ ಹುಚ್ಚು. ಗೋಕಾಕ ತಾಲೂಕಿನಲ್ಲಿ ಪಾರಿಜಾತವನ್ನು ನೋಡಿ, 'ಇದನ್ನು ನಮ್ಮೂರಿನ ಪ್ರತಿಭಾವಂತ ಕಲಾವಿದನಾದ ಮಲೀಕಸಾಬ ನದಾಫರ ಕಡೆಯಿಂದ ಏಕೆ ಮಾಡಿಸಬಾರದು?' ಎಂಬ ಪ್ರಶ್ನೆಯನ್ನು ತಲೆಯೊಳಗೆ ಇಟ್ಟುಕೊಂಡು ಗೋಕಾಕದಿಂದ ಸವಸುದ್ದಿಗೆ ಬಂದ. ತಕ್ಷಣವೇ ಮಲೀಕಸಾಬನನ್ನು ಕರೆಯಿಸಿ ಕೇಳಿದ. ಆಗ 'ಮಲೀಕಸಾಬ ಬಯಲಾಟ ತುಂಬಾ ಖರ್ಚುದಾಯಕವಾದುದು. ಅಷ್ಟೊಂದು ಹಣ ಎಲ್ಲಿಂದ ಸಂಗ್ರಹಿಸುವುದು?' ಎಂದು ಪ್ರಶ್ನಿಸಿದಾಗ ಎಲ್ಲ ಖರ್ಚುವೆಚ್ಚಗಳನ್ನು ತಾನೇ ನಿಭಾಯಿಸುವುದಾಗಿ ಹೇಳಿ, ಗೋಕಾಕ ತಾಲೂಕಿನ ಕುಲಿಗೋಡ ಗ್ರಾಮದ ರಾಮಣ್ಣ

ಚಿಟಗುಪ್ಪಿ ಮಾಸ್ತರನನ್ನು ಕರೆಸಿದ. ತಾಲಿಮು ನಡೆಯಿತು. ಯುಗಾದಿ ಲಕ್ಕಮ್ಮನ ಜಾತ್ರೆಯಲ್ಲಿ ಪ್ರಥಮ ಪ್ರದರ್ಶನ ಜರುಗಿತು. ಜನ ಆನಂದದಲ್ಲಿ ತೇಲಿದರು. ಅಲ್ಲಿಂದ ನದಾಫ ಅಲಾವಿಹಾಡು, ಭಜನೆ, ಡೊಳ್ಳು ಬಿಟ್ಟು ರಂಗಭೂಮಿಗೆ ಪ್ರವೇಶಿಸಿದ. ನದಾಫ ಹುಟ್ಟು ಕಲಾವಿದ. ಮುಂದೆ ಅದೇ ಊರಿನ ಅಲಿಸಾಬ ನಧಾಪ, ಲಕ್ಕಪ್ಪ ಪೂಜಾರಿ ಮುಂತಾದವರೊಂದಿಗೆ ಕೂಡಿಕೊಂಡು ಕಂಪನಿ ಕಟ್ಟಿದ. ೫೦ ರೂ.ಗಳಿಂದ ೫೦೦೦/- ರೂ.ಗಳವರೆಗೆ ಸಂಭಾವನೆ ಪಡೆದ. ತನ್ನ ಇಡೀ ಜೀವಮಾನದಲ್ಲಿ ಪಾರಿಜಾತದ ೫೦೦ಪ್ರದರ್ಶನಗಳನ್ನು ನೀಡಿರುವದಾಗಿ ತಿಳಿಸುತ್ತಾನೆ. ಕೃಷ್ಣ ಮತ್ತು ಕೊರವಂಜಿ ಪಾತ್ರಗಳನ್ನು ಒಬ್ಬನೇ ಅಭಿನಯಿಸುತ್ತಿದ್ದನು. ವಿಜಾಪುರ, ಗೋಕಾಕ, ಅಥಣಿ, ಸೊಲ್ಲಾಪುರ, ಹುಬ್ಬಳ್ಳಿ,  ಸವದತ್ತಿ ಮುಂತಾದ ಕಡೆಗೆ ಪ್ರದರ್ಶನವನ್ನು ನೀಡಿದ್ದೇನೆಂದು ಖುಷಿಯಿಂದ ಹೇಳುತ್ತಾನೆ. ನೂರಾರು ಪ್ರದರ್ಶನಗಳನ್ನು ನೀಡಿದರೂ ಇಂತಿಷ್ಟೇ ಹಣ ಕೊಡಿ ಎಂದು ಬೇಡಿಕೆ ಇಟ್ಟವನಲ್ಲ. ಆದ್ದರಿಂದಲೇ ಸವಸುದ್ದಿಯ ಇನ್ನೊಬ್ಬ ಡೊಳ್ಳು ಕಲಾವಿದ ಗುರುನಾಥ ನಾಯಿಕ ಹೇಳುವುದೇನೆಂದರೆ "ಊರಿಗೆ ಹಿರಿಯ ಕಲೆಗಾರರೆಂದರೆ ನದಾಫರು. ಸರಳ, ಸಜ್ಜನಿಕೆಯ ಸ್ವಭಾವದವರು. ಸವಸುದ್ದಿಯ ಗುಡ್ಡಗಾಡಿನ ಕಡ್ಡದಲ್ಲಿ ಕಲೆಯ ಬೀಜ ಬಿತ್ತಿದವರೆಂದರೆ ನದಾಫರು. ಹಣಕ್ಕೆ ಎಂದೂ ಆಸೆಪಟ್ಟವರಲ್ಲ. ಒಂದು ವೇಳೆ ಆಸೆಪಟ್ಟಿದ್ದರೆ ಬಹಳಷ್ಟು ಗಳಿಸುತ್ತಿದ್ದರು. ಇಂದಿಗೂ ಅವರ ಹತ್ತಿರ ಕಲೆಯನ್ನು ಹೊರತುಪಡಿಸಿ ಬೇರೇನೂ ಇಲ್ಲ. ಕಲೆಯೇ ಅವರ ಜೀವಾಳ. ಹಲವು ಯುವ ಕಲಾವಿದರಿಗೆ ಕಲಿಸಿದವರು. ಯಾರಿಂದಲೂ ಹಣ ಅಪೇಕ್ಷಿಸಿದವರಲ್ಲ. ಅವರ ಅಪೇಕ್ಷೆ ಎಂದರೆ ಅವರ ಜೊತೆ ಚಹಾ ಕುಡಿಯುವದು." ಎನ್ನುತ್ತಾನೆ.

ನದಾಫನದು ತುಂಬು ಬಡತನದ ಕುಟುಂಬ. ಇಬ್ಬರು ಗಂಡು ಮಕ್ಕಳಿದ್ದರೂ ಅವರೆಲ್ಲ ಹೆಂಡಂದಿರೊಂದಿಗೆ ಅದೇ ಊರಿನಲ್ಲಿ ಬೇರೆ ಮನೆ ಮಾಡಿಕೊಂಡು ವಾಸಿಸುತ್ತಿದ್ದಾರೆ. ದೇಹ ಹಣ್ಣಾದ ಈ ಸಂದರ್ಭದಲ್ಲಿ ಆತನ ಸಹಾಯಕ್ಕೆ ಯಾರೂ ಇಲ್ಲ. ಆದರೂ ತನ್ನ ಜೀವನ ಜೀಕಲು ಎರಡೇ ಎರಡು ಮಾರ್ಗಗಳು ಎನ್ನುತ್ತಾನೆ. ಒಂದು ತನ್ನ ಕಣ್ಣುಗಳಿಗಿಂತಲೂ ಹೆಚ್ಚು ಪ್ರೀತಿಸುವ ಅವನ ಹೆಂಡತಿ; ಮತ್ತೊಂದು ಸರಕಾರದ ಮಾಶಾಸನ. "ಈ ವಯಸ್ಸಿನಲ್ಲಿ ಸರಕಾರದ

[illegible]

[illegible]

ಮಾಶಾಸನ ಮಾತ್ರ ನನಗೆ ಊರುಗೋಲವಾಗಿದೆ. ಕೇಂದ್ರ ಸರಕಾರದಿಂದ ರೂ. ೨೦೦೦/– ರಾಜ್ಯ ಸರಕಾರದಿಂದ ರೂ. ೧೦೦೦/–. ಒಟ್ಟು ಪ್ರತಿ ತಿಂಗಳು ರೂ. ೩೦೦೦/– ಮಾಶಾಸನ ಪಡೆಯುತ್ತೇನೆ. ಅದು ನಮ್ಮಿಬ್ಬರ ಹೊಟ್ಟೆ, ಬಟ್ಟೆಗೆ ಲಗಚಟ ಇದೆ" ಎನ್ನುತ್ತಾನೆ. ಈ ಮಾತನ್ನು ಹೇಳುವಾಗ ಆತನೊಂದಿಗೆ ಮಕ್ಕಳು ದೂರವಿರುವ ದುಃಖ ಕಣ್ಣುಗಳಲ್ಲಿ ಮಿಂಚುತ್ತಿತ್ತು. ಆದರೆ ತುಟಿಯಲ್ಲಿ ಮಾತ್ರ ನಗು ಕಾಣುತ್ತಿತ್ತು. ತನ್ನ ಇಡೀ ಕಲಾ ಸಂಪತ್ತನ್ನು ಊರಿನ ಹಲವಾರು ತನ್ನ ಶಿಷ್ಯರಿಗೆ ಧಾರೆ ಎರೆದಂತೆ ತನ್ನ ಮಗನಾದ ಮೀರಾಸಾಬನಿಗೂ ಧಾರೆ ಎರೆದಿದ್ದಾನೆ. ಮಗ ಮೀರಾಸಾಬ ಪಾರಿಜಾತವನ್ನು ಮುಂದುವರೆಸುತ್ತಿದ್ದಾನೆ. ತಾನು ಹೃದಯ ತುಂಬಿ ಪ್ರೀತಿಸುವ ಪಾರಿಜಾತವನ್ನು ತನ್ನ ಮಗ ಮುಂದುವರೆಸಿಕೊಂಡು ಹೋಗುತ್ತಿದ್ದಾನೆ ಎಂಬ ಭಾವ ಮನದಲ್ಲಿದ್ದರೂ ಅವನು ನನ್ನೊಂದಿಗಿಲ್ಲ ಎಂಬ ನೋವು ಅವನ ಹೃದಯದಲ್ಲಿದೆ. ಆದರೂ 'ಹೊತ್ತು ಬಂದ್ಹಾಂಗ ಹೋಗಬೇಕು' ಅಂತ ಸಮಾಧಾನಪಟ್ಟುಕೊಳ್ಳುತ್ತಾನೆ.

ಮಲೀಕಸಾಬ ನದಾಫನ ಶಿಷ್ಯ ಬಳಗ ಅಪಾರ. ಒಂದೇ ಊರಿನಲ್ಲಿ ೮ ಜನ ಕೇಂದ್ರ ಸರಕಾರದಿಂದ ಹಾಗೂ ರಾಜ್ಯ ಸರಕಾರದಿಂದ ಮಾಶಾಸನ ಪಡೆಯುತ್ತಿದ್ದುದನ್ನು ಗಮನಿಸಿದರೆ ಇವನ ಪ್ರಭಾವ ಅರಿವಾಗುತ್ತದೆ. ಭರಮಪ್ಪ ಪೂಜಾರಿ, ಲಕ್ಷ್ಮಣ ಸನದಿ, ಮಹಾದೇವ ಕರಗಾಂವಿ, ಗೋವಿಂದ ಬಿದರಿ, ಶಿವಪ್ಪ ವಾಲಿಕಾರ, ಗುರುನಾಥ ನಾಯಿಕ, ಬಾಳಪ್ಪ ಬೆಂಡವಾಡ ಮುಂತಾದವರು ಇವನ ಶಿಷ್ಯರು. ತವಗ, ಗೋಕಾಕ, ಬೀರನಗಡ್ಡಿ ಮುಂತಾದ ಗ್ರಾಮಗಳ ಡೊಳ್ಳು ಕಲಾವಿದರಿಗೆ ತರಬೇತಿ ನೀಡಿರುವನು.

ಈಗ ನದಾಫನಿಗೆ ಮುಪ್ಪು ಆವರಿಸಿದೆ. ಆದರೆ ಆತನ ರಂಗಭೂಮಿಯ ಹಾಡುಗಳಿಗೆ, ಸನ್ನಿವೇಶಗಳಿಗೆ ಮಾತ್ರ ಮುಪ್ಪು ಬಂದಿಲ್ಲ. ಅಭಿನಯಿಸಬೇಕೆಂಬ ಹುಮ್ಮಸ್ಸು ಮನಸ್ಸಿನಲ್ಲಿದೆ. ಆದರೆ ಮೈಯಲ್ಲಿ ಶಕ್ತಿ ಇಲ್ಲ. ಬಾಯಲ್ಲಿ ಹಲ್ಲುಗಳಿಲ್ಲ. ಧ್ವನಿ ಮಾತ್ರ ಇನ್ನೂ ಹಾಗೆಯೇ ಉಳಿದುಕೊಂಡಿದೆ. ಈಗಲೂ ಕೃಷ್ಣನ ಹತ್ತು ಅವತಾರಗಳನ್ನು ಹಾಡುಗಳಲ್ಲಿ ಹೇಳುತ್ತಾನೆ. ಬ್ರಹ್ಮ, ವಿಷ್ಣು, ಬಸವ, ರಾಮಾಯಣ, ಮಹಾಭಾರತ ಕೇಳುವದು ಈತನ ಹವ್ಯಾಸ. ಏಕಾದಶಿಯಂದು

[illegible]

[illegible]

[illegible]

ಹನುಮದೇವರ ಗುಡಿಯಲ್ಲಿ ಪುರಾಣ ಓದಲಾಗುತ್ತದೆ. ಒಂದೊಂದು ವರ್ಷ ಒಂದೊಂದು ಪುರಾಣ ಓದುತ್ತಾರೆ. ಈ ಪುರಾಣ ಓದುವವರು ಊರಿನ ಕಾಳಪ್ಪ ಪತ್ತಾರ. 'ಅದಕ್ಕೆ ನಮ್ಮ ಮದತ್ತ ಇರುತ್ತದೆ' ಎಂದು ನಗುತ್ತಾ ನದಾಫ ಹೇಳುತ್ತಾನೆ.

**ಮೀರಾಸಾಬ ಮಲೀಕಸಾಬ ನಧಾಫ:**

ಈತ ಮಲೀಕಸಾಬ ನದಾಫನ ಮಗ. ತಂದೆಯಿಂದ ಬಳುವಳಿಯಾಗಿ ಬಂದ ಕಲೆಯನ್ನು ಮುಂದುವರಿಸಿಕೊಂಡು ಹೊಗುತ್ತಿದ್ದಾನೆ. ಕೆಲವೊದು ದಿನಗಳ ಕಾಲ ತಂದೆಯು ಕಟ್ಟಿದ ಕಂಪನಿ ಮುಂದುವರಿಸಿದ. ಆದರೆ ಈಗ ಪಾರಿಜಾತಕ್ಕೆ ಅವಕಾಶಗಳು ಕಡಿಮೆಯಾದ ಕಾರಣ ಈತ ತನ್ನ ಕಂಪನಿ ಬಿಟ್ಟು ಮಹಾಲಿಂಗಪುರದ ಬೇರೆ ಬೇರೆ ಕಂಪನಿಗಳ ಮೊರೆ ಹೊಗಿದ್ದಾನೆ. ಮನೆಯಲ್ಲಿ ಹೆಣವಿದ್ದರೂ ಕಲೆಯ ಆರಾಧನೆ ನಿಲ್ಲುವುದಿಲ್ಲ ಎನ್ನುವ ಮೀರಾಸಾಬ ಪಾರಿಜಾತವನ್ನೇ ನೆಚ್ಚಿಕೊಂಡ ಪ್ರತಿಭಾವಂತ ಕಲಾವಿದ. ಈತ ರಾಜ್ಯ ಹಾಗೂ ಕೇಂದ್ರ ಸರಕಾರದ ಮಾಶಾಸನಗಳನ್ನು ಪಡೆಯುತ್ತಾನೆ.

**ಪಾರಿಜಾತ ತಾರೆಯರು :**

ಹಿಡಕಲ್ಲದ ಜನಾಬಾಯಿ ಸಾಂಬ್ರೇಕರ, ಮಾಲಾ ಸಾಂಬ್ರೇಕರ ಮತ್ತು ಕಂಕಣವಾಡಿಯ ಶಾಂತವ್ವ ಹಣಮಂತ ಅಂಬಿನಾಯಿಕ ಬಾಗೆನಾಡಿನ ಪಾರಿಜಾತ ತಾರೆಯರು. ಜನಾಬಾಯಿ ಸಾಂಬ್ರೇಕರ ರುಕ್ಮಿಣಿ ಪಾತ್ರ ಮಾಡುತ್ತಿದ್ದಳು. ಲಕ್ಷ್ಮಣ ಸಾಂಬ್ರೇಕರ ಮೇಳದಲ್ಲಿ ಏಳೆಂಟು ವರ್ಷದ ಜನಾಬಾಯಿ ಹಾಗೂ ಮಾಲಾ ಸಾಂಬ್ರೇಕರ ಬಾಲಗೋಪಾಲ ಹಾಗೂ ರುಕ್ಮಿಣಿ ಪಾತ್ರವನ್ನು ಮಾಡುತ್ತಿದ್ದರು. ಲಕ್ಷ್ಮಣ ಸಾಂಬ್ರೇಕರರವರ ಕಂಪನಿ ಕೆಲವೇ ವರ್ಷಗಳಲ್ಲಿ ನಿಂತು ಹೋಯಿತು. ಅನಂತರ ಮಾಲಾ ಸಾಂಬ್ರೇಕರ ಸ್ವತಃ ಕಂಪನಿ ಕಟ್ಟಿದಳು.

**ಮಾಲಾ ಸಾಂಬ್ರೇಕರ :**

ಹಿಡಕಲ್ಲದ ಮಾಲಾ ಬಾಗೆನಾಡಿನ ಪಾರಿಜಾತದ ಮಂದಾರ ಕುಸುಮ. ಪಾರಿಜಾತ ನೋಡುಗರ ಮನಸೂರೆಗೊಳಿಸುವ ಉತ್ಕೃಷ್ಟ ಕಲಾವಿದೆ. ಈಕೆ

ರಾಯಬಾಗ ತಾಲೂಕಿನ ಹಿಡಕಲ್ಲ ಗ್ರಾಮದವಳು. ವಯಸ್ಸು ಅರವತ್ತು. ತನ್ನ ಬದುಕನ್ನೆಲ್ಲ ಪಾರಿಜಾತಕ್ಕಾಗಿ ಮೀಸಲಿಟ್ಟ ಅಭಿನಯ ವಿಶಾರದೆ. 'ಪಾರಿಜಾತವನ್ನು ಬದುಕಿಸುವುದಕ್ಕಾಗಿಯೇ ಸಾಯುತ್ತಿದ್ದೇನೆ' ಎಂದು ಮುಗಳ್ನಗುತ್ತ ಹೇಳುವ ಮಾಲಾ ಪಾರಿಜಾತದಷ್ಟೇ ಲವಲವಿಕೆಯ ನಟಿ. ದಲಿತ ಕುಟುಂಬದ ಈ ಅನಕ್ಷರಸ್ಥ ಕಲಾವಿದೆಯ ರಂಗಭೂಮಿಯ ಕಳಕಳಿ ಅಪಾರ.

ಮಾಲಾ ಓದಿದ್ದು ಎರಡನೆಯ ತರಗತಿ. ಆದರೆ ಓದು-ಬರಹ ಬರುವುದಿಲ್ಲ. ಈಕೆ ತಾನು ಏಳನೆಯ ವರ್ಷದವಳಿದ್ದಾಗಲೇ ಪಾರಿಜಾತದ ಅಟ್ಟ ಏರಿದಳು. ಹಿಡಕಲ್ಲದ ಅಣ್ಣಪ್ಪ ಜಂಬಗಿ ಮಾಸ್ತರ ಅವಳ ಪಾರಿಜಾತದ ಮೊದಲಗುರು. ನಂತರ ಅಲ್ಲಿಯ ಮಲ್ಲಯ್ಯಸ್ವಾಮಿ ಇವಳನ್ನು ಪಾರಿಜಾತಕ್ಕೆ ಪಳಗಿಸಿದರು. ಮೊದಲು ಗಣಪತಿ ಪೂಜೆಯ ಬಾಲಕಿಯಾಗಿ ಅರಳಿದಳು. ಆಮೇಲೆ ಗೌಳಗಿತ್ತಿ ಪಾತ್ರಕ್ಕೆ ಜೀವ ತುಂಬಿದಳು. ವಯಸ್ಸು ಬೆಳೆದಂತೆ ಸತ್ಯಭಾಮಾ-ಕೊರವಂಜಿಯಾಗಿ ಪಾರಿಜಾತದ ಕಣ್ಣು ತುಂಬಿದಳು. ಈಗ ಒಂದೇ ಆಟದಲ್ಲಿ ನಾಲ್ಕು ಪಾತ್ರಗಳಲ್ಲಿ ಅಭಿನಯಿಸುವುದರೊಂದಿಗೆ ರಸಿಕರ ಮನ ಸೂರೆಗೊಳಿಸುವಳು.

ಅವರಿರ್ವರ ಕಂಪನಿಗಳಲ್ಲಿ ಕೆಲಸ ಮಾಡಿ ದಣಿದ ಮಾಲಾ ಈಗ ಸ್ವತಃ ಶ್ರೀ ರಾಘವೇಂದ್ರ ಶ್ರೀಕೃಷ್ಣಪಾರಿಜಾತ ಕಂಪನಿ ಕಟ್ಟಿ ಅಭಿನಯಿಸುತ್ತಿದ್ದಾಳೆ. ಹೆಣ್ಣು ಮಗಳಾಗಿ ಕಂಪನಿ ಕಟ್ಟಿ ಧೈರ್ಯದಿಂದ ಮುನ್ನಡೆಸುತ್ತಿರುವ ದಿಟ್ಟ ಕಲಾವಿದೆ. ಅವಳ ಉತ್ಸಾಹ, ಸಮರ್ಪಣಾ ಮನೋಭಾವ ಮೆಂಚುವಂತದ್ದು.

ಹಲವಾರು ಪ್ರಶಸ್ತಿ-ಸನ್ಮಾನಗಳನ್ನು ತನ್ನ ಮುಡಿಗೇರಿಸಿಕೊಂಡ ಶ್ರೇಷ್ಠ ಕಲಾವಿದೆ. ೧೯೯೩ರ ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ ಸಂದಿದೆ. ಭಾರತದ ಮಾನವ ಸಂಪನ್ಮೂಲ ಇಲಾಖೆ ಅಭಿನಂದನಾ ಪತ್ರ ನೀಡಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಾನಪದ ಸಂಶೋಧನಾ ಕೇಂದ್ರ, ಅನ್ವಯಿಕ ಜಾನಪದ ಸಂಶೋಧನಾ ಕೇಂದ್ರ, ಕೌಜಲಗಿ ನಿಂಗಮ್ಮ ಪ್ರಶಸ್ತಿ ಪ್ರತಿಷ್ಠಾನ, ಕೌಜಲಗಿ ನಿಂಗಮ್ಮ ಜಾನಪದ ರಂಗಭೂಮಿ, ವಿಜಾಪುರದ ಸಿದ್ಧೇಶ್ವರ ಸಂಸ್ಥೆ ಪ್ರಶಸ್ತಿ ನೀಡಿ ಗೌರವಿಸಿವೆ. ಬೆಳಗಾವಿ, ಬೆಂಗಳೂರು, ವಿಜಾಪುರ, ಬಾಗಲಕೋಟ ಮೊದಲಾದ ಜಿಲ್ಲಾಡಳಿತಗಳು ಅಭಿನಂದಿಸಿವೆ. ಆಕಾಶವಾಣಿ ಹಾಗೂ ದೂರದರ್ಶನ ಇವಳ ಪಾರಿಜಾತ ಪ್ರಸಾರ

[illegible]

[illegible]

[illegible]

[illegible]

ಮಾಡುತ್ತಿವೆ. ಕರ್ನಾಟಕ ಸರಕಾರ ಕೊಡಮಾಡುವ ಪ್ರತಿಷ್ಠಿತ ೨೦೧೦ರ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನಳಾಗಿರುವುದು ಅವಳ ಪ್ರತಿಭೆಗೆ ಮತ್ತೊಂದು ಗರಿ.

ಇತ್ತೀಚಿಗೆ ಕೃಷ್ಣಪಾರಿಜಾತ ಅವಕಾಶ ವಂಚಿತಗೊಳ್ಳುತ್ತಿದೆ ಎಂದು ಮಾಲಾ ಕೊರಗುತ್ತಿದ್ದಾಳೆ. ಅವಕಾಶಗಳು ಕಡಿಮೆ ಸಿಗುತ್ತಿವೆ. 'ಸಾಕಾಗುವಷ್ಟು ಸಂಭಾವನೆ ಸಿಗುತ್ತಿಲ್ಲ. ಪಾರಿಜಾತ ಕೇಳುವ ಆಟ. ಅದು ಹೊಸ ಜನಾಂಗದ ಹುಡುಗರಿಗೆ ತಿಳಿಯುವುದು ದುಸ್ತರ. ಅವರೆಲ್ಲರ ಚಿತ್ತ ಸಿನಿಮಾ, ದೂರದರ್ಶನದತ್ತ ವಾಲುತ್ತಿದೆ. ಹೀಗಾಗಿ ಪಾರಿಜಾತಕ್ಕೆ ಪ್ರೇಕ್ಷಕರೇ ಇಲ್ಲದಂತಾಗುತ್ತದೆ' ಎನ್ನುತ್ತಾಳೆ ಮಾಲಾ.

**ಶಾಂತವ್ವ ಅಂಬಿನಾಯಿಕ :**

ಊರು ಕಂಕಣವಾಡಿ. ವಯಸ್ಸು ೬೦. ಕೌಜಲಗಿ ನಿಂಗವ್ವನ ಚಿಮ್ಮಡದ ಕಂಪನಿಯಲ್ಲಿ ಕೊರವಂಜಿ ಮತ್ತು ಸತ್ಯಭಾಮ ಪಾತ್ರ ಮಾಡುತ್ತಿದ್ದಳು. ಸರಕಾರ ಮಾಸಾಶನ ನೀಡುತ್ತಿದೆ. ವಯಸ್ಸಾದರೂ ಉತ್ಸಾಹ ಬತ್ತಿಲ್ಲ.

ಆದರೆ ಅವಳಿಗೆ ಧ್ವನಿ ಕೈಕೊಟ್ಟಿದ್ದರಿಂದ ಈಗ ಪಾತ್ರ ಮಾಡುತ್ತಿಲ್ಲ. ಇದೇ ಗ್ರಾಮದ ಗಂಗವ್ವ ಸಿದ್ದಪ್ಪ ಗಿಡ್ಡವ್ವಗೋಳ ರುಕ್ಮಿಣಿ ಪಾತ್ರ ಮಾಡುತ್ತಿದ್ದಳು. ೨೫ರ ವಯಸ್ಸಿನಲ್ಲಿಯೇ ಮೃತ್ಯು ಅವಳನ್ನು ಅಪಹರಿಸಿತ್ತು.

ಮಂಟೂರಿನ ಕೊಂತೆಣ್ಣವರ ಸಹೋದರಿಯರ ರಂಗಸೇವೆ ಸ್ಮರಿಸಲೇಬೇಕು. ರೇಣುಕಾಬಾಯಿ ಮತ್ತು ಶಾರವ್ವ ತಾಯವ್ವ ಕೊಂತೆಣ್ಣವರರ ಮಕ್ಕಳು. ಇವರು ದೇವದಾಸಿಯರು. ರತ್ನಪ್ಪ ದೇವರಮನಿಯವರ ಕಂಪನಿಯಲ್ಲಿ ರೇಣುಕಾಬಾಯಿ ಸತ್ಯಭಾಮ, ಕೊರವಂಜಿ ಹಾಗೂ ಶಾರವ್ವ ರುಕ್ಮಿಣಿಯಾಗಿ ನಟಿಸುತ್ತಿದ್ದಳು.

ಮಂಟೂರದ ಶಿವಪುತ್ರ ಈರಪ್ಪ ಕಾಲತಿಪ್ಪಿ, ಬೆಂಡವಾಡದ ಪ್ರಭು ಪಾರೀಸ ಮೇಘಾಡೆ, ಶಿವಾಜಿ ಕರೆಪ್ಪ ಪಾತ್ರೋಟ, ಕಲ್ಲಪ್ಪ ಕಾಶಪ್ಪ ಮೇಗಾಡೆಯವರ, ಹಿಡಕಲ್ಲದ, ಶಂಕರಪ್ಪ ಮಾರುತಿ ಬಜಂತ್ರಿ, ಸವಸುದ್ದಿಯ ರಾಮಲಿಂಗ ಮಲ್ಲಪ್ಪ ಹೊಂಗಲ, ಚನಗೌಡ ಲಕ್ಷ್ಮಣ ಪಾಟೀಲ, ಖೆಮಲಾಪುರದ ಸಂತ್ರಾಮ ಸಿದ್ರಾಮ

[illegible]

[illegible]

[illegible]

[illegible]

ಬಡಿಗೇರ, ಹಂದಿಗುಂದದ ಗುಡುಸಾಬ ಮಲಿಕಸಾಬ ನಧಾಪ, ಖಣದಾಳದ ಶಂಕರ ಭೀಮಪ್ಪ ಮಾಂಗ, ಯಶವಂತ ಬಸಪ್ಪ ಮಾಂಗ, ಯಲ್ಪಾರಟ್ಟಿಯ ದಶರಥ ಕಾಶಪ್ಪ ಬೇವನೂರ, ಸಿದ್ದಪ್ಪ ಪರಪ್ಪ ಪೂಜೇರಿ, ಬೆಂಡವಾಡದ ಸಂಗವ್ವಾ ಚಂದ್ರಪ್ಪ ಮಾರಾಪುರೆ, ಅಲಕನೂರಿನ ಚಿನ್ನಪ್ಪ ರೇವಣ್ಣ ಮಗದುಮ, ಕರೆಪ್ಪ ಯಲ್ಲಪ್ಪ ಪಾಟೀಲ, ಅಪ್ಪಾಸಾಬ ಸಿದ್ದಪ್ಪ ದುಲಾರಿ, ಬಸಪ್ಪ ರಾಯಪ್ಪ ಗುಡೋಡಗಿ, ಲಕ್ಷ್ಮಣ ಮಲ್ಲಪ್ಪ ಬಾನಿ, ಸಂಗಪ್ಪ ರಾಯಪ್ಪ ಮೆಸೋಡಗಿ, ಹಣಮಂತ ಧರ್ಮಣ್ಣ ಕುಡಚಿ, ಚನ್ನಪ್ಪ ಬಾಳಪ್ಪ ಅಕ್ಕತಂಗಿ, ಅಣ್ಣಪ್ಪ ಶಂಕರ ನಾಯಿಕ, ಹಿಡಕಲ್ಲದ ಸದಾಶಿವ ಮಾರುತಿ ಬಜಂತ್ರಿ, ಕಪ್ಪಲಗುದ್ದಿಯ ಅರ್ಜುನ ಲಕ್ಷ್ಮಣ ತುಕ್ಕಾನಟ್ಟಿ, ಯಮನವ್ವ ಕಾಶಪ್ಪ ಹಾದಿಮನಿ, ನಿಡಗುಂದಿಯ ಸಂಗನಗೌಡ ಮಹಾಲಿಂಗಪ್ಪ ಐಹೊಳೆ, ಕಟಕಬಾವಿಯ ರೇವಪ್ಪ ರಾಮಲಿಂಗ ಪೂಜೇರಿ, ನಿಂಗಪ್ಪ ಬಸಪ್ಪ ಗುಂಜಾಳ, ಮಂಟೂರದ ರಾಮಗೌಡ ಮಲಗೌಡ ಪಾಟೀಲ, ಯಡ್ರಾಂವದ ಪುಂಡಲೀಕ ಕೃಷ್ಣಾ ನಾಯಿಕ, ಬಿರಡಿಯ ಸಂಪತ ಮಾರುತಿ ಮೈಶ್ಯಾಳೆ ಪ್ರಮುಖ ಬಾಗೆನಾಡಿನ ಪ್ರಮುಖ ರಂಗಕಲಾವಿದರು.

**ಸಂಗ್ಯಾ ಬಾಳ್ಯಾ ಸಣ್ಣಾಟದ ಕಲಾವಿದರು :**

**ಕಂಕಣವಾಡಿಯ ಸಣ್ಣದಾಸಪ್ಪ :**

ಸಣ್ಣದಾಸಪ್ಪ ಭೀಮಪ್ಪ ದಾಸಪ್ಪಗೋಳ ಸಂಗ್ಯಾ-ಬಾಳ್ಯಾ ಸಣ್ಣಾಟದ ಕಂಪನಿ ಕಟ್ಟಿ ಹದಿನೈದು ವರ್ಷ ನಡೆಸಿದನು. ಸಣ್ಣದಾಸಪ್ಪ ಈರ್ಯಾನ ಪಾತ್ರ ಮಾಡುತ್ತಿದ್ದ. ಕರೆಪ್ಪ ಯಲ್ಲಪ್ಪ ಒಡೆಯರ ಬಾಳ್ಯಾ ಆಗಿ ಅಭಿನಯಿಸುತ್ತಿದ್ದ. ಪಾವಡಿ ಗುಳೆಪ್ಪ ಪೂಜಾರಿ, ಹಾಲಪ್ಪ ಧರೆಪ್ಪ ನಾಯಿಕವಾಡಿ ಈ ಕಂಪನಿ ಕಲಾವಿದರು. ಬುದ್ನೂರು ಸತ್ತೆಪ್ಪ ಮಾಸ್ತರ ಸೂತ್ರದಾರ.

**ಅಲಕನೂರಿನ ರಾಮಪ್ಪ ಅಪ್ಪಾಜಿ ಬಾನೆ :**

ಬೊಮ್ಮನಾಳದ ಭೈರೇಶ್ವರ ನಾಟ್ಯ ಸಂಘದವರು ಕಳೆದೆರಡು ವರ್ಷಗಳ ಹಿಂದೆ ಅಲ್ಲಲ್ಲಿ ಆಟವಾಡುತ್ತಿದ್ದರು. ಪರಮಾನಂದವಾಡಿಯಲ್ಲಿ ಹೆಳವರು

[illegible]

[illegible]

[illegible]

[illegible]

ಒಂದು ಸಂಘ ಕಟ್ಟಿ ಮೂರು-ನಾಲ್ಕು ಬಾರಿ ಪ್ರಯೋಗಿಸಿದ್ದರು. ಅಲಕನೂರದ ರಾಮಪ್ಪ ಅಪ್ಪಾಜಿ ಬಾನೆಯವರು ಕಳೆದ ಶತಮಾನದ ೬೦ರ ದಶಕದಲ್ಲಿ ಶ್ರೀ ಮಲ್ಲಿಕಾರ್ಜುನ ನಾಟ್ಯಸಂಘವನ್ನು ಕಟ್ಟಿದರು. ಬಾನೆಯವರು ಹಾರ್ಮೋನಿಯಂ ಬಾರಿಸುತ್ತಿದ್ದರು. ಜಿನ್ನಪ್ಪ ರೇವಣ್ಣಾ ಮಗದುಮ್ಮ, ಮಕಬುಲ್ ಡಾಂಗೆ, ಮುರಿಗೆಪ್ಪ ಸಿದ್ದಪ್ಪ ಬಾನೆ ಕ್ರಮವಾಗಿ ಸಂಗ್ಯಾ, ಬಾಳ್ಯಾ ಹಾಗೂ ಗಂಗಾ ಪಾತ್ರವನ್ನು ಹಾಕುತ್ತಿದ್ದರು. ಬಾನೆ ೨೦೦೪ ರಲ್ಲಿ ತಮ್ಮ ೭೦ನೇ ವಯಸ್ಸಿನಲ್ಲಿ ತೀರಿದನು. ಅವನ ಮಗ ಸದಾಶಿವ ರಾಮಪ್ಪ ಬಾನೆ ಕಲವು ದಿನಗಳ ಕಾಲ ಸಂಘವನ್ನು ಈಗ ಮುಂದುವರೆಸಿದನು. ಇವರೂ ಕೂಡ ಹಾರ್ಮೋನಿಯಂ ವಾದಕರು.

ಅಲಕನೂರಿನ ಅಣ್ಣಪ್ಪ ನಾಯಿಕ, ಅತ್ತಿಕಟ್ಟಿಯ ಗಂಗಪ್ಪ ನಾಯಿಕ ಸಂಗ್ಯಾ-ಬಾಳ್ಯಾ ಪಾತ್ರಧಾರಿಗಳು. ಸಿದ್ದಪ್ಪ ಬಾಳಪ್ಪ ಬಡಿಗೇರ ಗಂಗಾನ ಪಾತ್ರ ಮಾಡುತ್ತಾರೆ. ಚೆನ್ನಪ್ಪ ಬಾಳಪ್ಪ ಅಕ್ಕತಂಗಿ, ಹಣಮಂತ ಕುಡಚಿ, ಅಪ್ಪಾಸಾಬ ದುಲಾರಿ ಇತರ ಪಾತ್ರಧಾರಿಗಳು. ಇವರು ೨೫ ವರ್ಷಗಳಿಂದ ಕಲಾಸೇವೆ ಸಲ್ಲಿಸುತ್ತಿದ್ದಾರೆ. ಜೊತೆಗೆ ಭಜನಾ ತಂಡವನ್ನು ಕೂಡ ಕಟ್ಟಿದ್ದಾರೆ.

ಚೆನ್ನಪ್ಪ ಬಾನಿಯವರ ಇನ್ನೊಂದು ನಾಟ್ಯಸಂಘ ಅಲಕನೂರಿನಲ್ಲಿದೆ. ಅವರೂ ಸಹ ಸಂಗ್ಯಾ-ಬಾಳ್ಯಾ ಆಟವಾಡುತ್ತಾರೆ. ಅವರದು ಶ್ರೀಮಲ್ಲಿಕಾರ್ಜುನ ಪ್ರಸಾದಿಕ ನಾಟ್ಯ ಸಂಘ. ವಿವಿಧ ಕಲಾವಿದರನ್ನು ಸೇರಿಸಿ ಈಗ ಪ್ರದರ್ಶನ ನೀಡುವರು.

**ಹಂದಿಗುಂದದ ಮಲ್ಲಪ್ಪ ಗಂಗಪ್ಪ ಹುಲ್ಯಾಳ :**

ಇವನು ನಾವಲಗಿ ಸಂಗ್ಯಾ-ಬಾಳ್ಯಾ ಮೇಳಗಳಲ್ಲಿ ಬಾಳ್ಯಾನ ಪಾತ್ರ ಮಾಡುತ್ತಿದ್ದನು. ಈಗ ಅಲಕನೂರು ಮೇಳದಲ್ಲಿದ್ದಾನೆ. ಮೂಲತಃ ಬಾಗಲಕೋಟೆ ಜಿಲ್ಲೆಯ ನಾವಲಗಿಯವನಾದ ಈತ ಈಗ ಹಂದಿಗುಂದದಲ್ಲಿ ನೆಲೆಸಿದ್ದಾನೆ.

**ಚಿಂಚಲಿಯ ಬಸಪ್ಪ ಮಾತೋಡಕರ :**

ಇವನು ಸಂಗ್ಯಾ ಬಾಳ್ಯಾ ಮತ್ತು ಶ್ರೀಕೃಷ್ಣ ಪಾರಿಜಾತಗಳಲ್ಲಿ ಪಾತ್ರ ಹಾಕುತ್ತಿದ್ದನು. ಈಗ ಈತನಿಗೆ ೬೦ವರ್ಷ ವಯಸ್ಸು. ಇವನ ತಮ್ಮ ರುಕ್ಮಿಣಿ ಪಾತ್ರ

[illegible]

[illegible]

[illegible]

[illegible]

ಮಾಡುತ್ತಿದ್ದನು.ಕಂಪನಿ ನಾಟಕಗಳನ್ನು ಬಯಲಾಟಗಳಂತೆ ಪ್ರದರ್ಶಿಸುವ ಪರಿಪಾಠ ಬೆಳೆಯುತ್ತಿದೆ. ಯಲ್ಪಾರಟ್ಟಿಯ ಅರಣ್ಯಸಿದ್ಧೇಶ್ವರ ನಾಟ್ಯಸಂಘವು ಎಂ.ಟಿ.ಅರಳಿಯವರ 'ಆಸರಿಲ್ಲದ ಬಳ್ಳಿ' ಆಟ ಆಡುತ್ತಾರೆ. ಸುಟ್ಟಟ್ಟಿ, ಅಲಕನೂರಗಳಲ್ಲಿ ಇಂಥ ತಂಡಗಳಿವೆ. ಯಲ್ಪಾರಟ್ಟಿಯ ಅರಣ್ಯಸಿದ್ಧೇಶ್ವರ ನಾಟ್ಯ ಸಂಘದಲ್ಲಿ ೧೩ಜನ ಕಲಾವಿದರಿದ್ದು, ಇವರಲ್ಲಿ ಇಬ್ಬರು ಮಹಿಳಾ ಕಲಾವಿದೆಯರು. ಮಲ್ಲಪ್ಪಾ ಜಂಬಗಿ, ಅದೃಶಪ್ಪ ಮೆಟಗುಡ್ಡ, ಕರೆಪ್ಪ ಬೇವನೂರ, ಶಿವಪ್ಪ ಸವದತ್ತಿ, ಸಿದ್ದಪ್ಪಾ ಪೂಜಾರಿ, ಹಣಮಂತ ಹಳಕಲ್ಲ, ವಸಂತ ಹಳಕಲ್ಲ, ಅರ್ಜುನ ಸರಿಕರ, ಸಾಂಯವ್ವಾ ಹಳಕಲ್ಲ, ರೇಣುಕಾ ಹಿಡಕಲ್ಲ, ಸಿದ್ದಪ್ಪಾ ಜಾಯಗೋಣಿ, ಸಂಗಪ್ಪಾ ಹಳಕಲ್ಲ ಮುಂತಾದವರು ಸಂಘದ ಕಲಾವಿದರು. ಮಲ್ಲಪ್ಪಾ ಜಂಬಗಿ ಸ್ತ್ರೀ ಪಾತ್ರ ಮಾಡುವರು. ಅವರೇ ಈ ಸಂಘದ ಮಾಲಿಕರು. ೧೯೭೫ರಲ್ಲಿ ಆರಂಭಗೊಂಡ ಈ ಸಂಘ ಇದುವರೆಗೆ ಒಂದು ಸಾವಿರಕ್ಕೂ ಹೆಚ್ಚು ಪ್ರದರ್ಶನ ನೀಡಿದೆ.

**೪.೪.೨. ಬಹುರೂಪಿಗಳು:**

ಬಹುವಿಧದ ರೂಪಗಳನ್ನು ಧರಿಸುವ ಬಹುರೂಪಿಗಳ ಪರಂಪರೆ ಪ್ರಾಚೀನವಾದುದು. "ಕರ್ನಾಟಕದ ಬಹುರೂಪಿಗಳು ಆಂಧ್ರ ಮೂಲದವರು. ಇವರ ಮಾತೃ ಭಾಷೆ ತೆಲಗಿನ ಒಂದು ಉಪ ಭಾಷೆ, ಮರಗು. ತೆಲಗಿನಲ್ಲಿ ಇವರನ್ನು ಜಂಗಾಲು ಎಂದು ಕರೆಯಲಾಗಿತ್ತು. ಬುಡ್ಗ ಜಂಗಮ ಎಂಬ ಪರಿಶಿಷ್ಟ ಜಾತಿಗೆ ಸೇರಿದ ಇವರು ಶೈವ ಸಂಪ್ರದಾಯವನ್ನು ರೂಢಿಸಿಕೊಂಡಿದ್ದಾರೆ. ಬಾಳ ಸಂತರು, ಶಂಖ ಜಂಗಮರು, ಬುರ್‍ರ ಕಥೆಗಾರರು ಬಹುರೂಪಿಗಳ ಕುಲಬಾಂಧವರಾಗಿದ್ದರು."[೩] ಬುಡ್ಗ ಎಂದರೆ ಒಂದು ಚರ್ಮ ವಾದ್ಯ, ಇದು ಇವರ ವಾದ್ಯ ವಿಶೇಷ. ಇವರದು ಸಂಗೀತ ಪ್ರಧಾನ ಅಭಿನಯ. "ಈ ವೇಷಗಾರರು ವೇಷಗಳನ್ನು ಹಾಕಿಕೊಂಡು ಮೂರು ದಿನ, ಐದು ದಿನ ಅಥವಾ ಒಂಭತ್ತು ದಿನ ಹೀಗೆ ಯಾವುದಾದರೊಂದು ಅವಧಿಯನ್ನು ನಿರ್ಧರಿಸಿಕೊಂಡು ಊರಾಡುತ್ತಾರೆ. ಪ್ರತಿ ದಿನ ವೇಷಹಾಕಿಕೊಂಡು

---

೩. ಕನ್ನಡ ವಿಷಯ ವಿಶ್ವಕೋಶ : ಜನಪದ, ಪುಟ : ೮೬೫

[illegible]

[illegible]

[illegible]

ಮನೆ ಮನೆಗೂ ಹೋಗಿ ಬರುವುದೂ ಉಂಟು. ಹೀಗೆ ಊರಾಡುವ ಅವಧಿ ಆ ಊರಿನ ಜನಸಂಖ್ಯೆ, ಮನೆಗಳ ಸಂಖ್ಯೆ, ಊರಿನ ವೈಶಾಲ್ಯ ಹಾಗೂ ಹಾಡುವ ಬೇರೆ ಬೇರೆ ಕಥಾ ಸಂದರ್ಭದ ಪಾತ್ರಗಳ ಸಂಖ್ಯೆಯನ್ನು ಅವಲಂಬಿಸಿರುತ್ತದೆ. ಹೀಗೆ ಗಂಡಸರು ಊರಾಡುವ ಸಂದರ್ಭದಲ್ಲಿ ಇವರ ಹೆಂಗಸರು ಎಳೆ ಮಕ್ಕಳಿದ್ದರೆ ಭುಜದ ಮೇಲಿಂದ ಕಂಕುಳಿಗೆ ಇಳಿಬಿಟ್ಟು ಕಟ್ಟಿದ ಬಟ್ಟೆ ಜೋಳಿಗೆಯಲ್ಲಿ ಮಲಗಿಸಿಕೊಂಡು ತಂಬೂರಿ, ಡುಮುಕಿ ಬಾರಿಸುತ್ತ ಗಂಗೇ ಗೌರಿ, ಬಾಲನಾಗಮ್ಮನ ಕಥೆಗಳನ್ನು ಹೇಳಿ ಭಿಕ್ಷೆ ಮಾಡುತ್ತಾರೆ."[೪] ರಾಯಬಾಗ ತಾಲೂಕಿನ ಮುಗಳಖೋಡ, ಚಿಂಚಲಿ, ನಾಗರಾಳ, ಜಲಾಲಪುರ, ಹಿಡಕಲ್ಲ ಮತ್ತು ಅಳಗವಾಡಿ ಗ್ರಾಮಗಳಲ್ಲಿ ಬಹುರೂಪಿ ಕುಟುಂಬಗಳಿವೆ. ಬಾಗೆನಾಡಿನಲ್ಲಿ ಒಟ್ಟು ೫೦ ಮನೆತನಗಳಿದ್ದು, ಸುಮಾರು ಇನ್ನೂರರಷ್ಟು ಜನರಿದ್ದಾರೆ.[೫] ಇವರಲ್ಲಿ ಮುಕ್ಕಾಲು ಪಾಲು ಜನರು ವೇಷ ಹಾಕುತ್ತಾರೆ.

ಇಲ್ಲಿಯ ಬಹುರೂಪಿಗಳು ಮೂಲತಃ ಇಲ್ಲಿಯವರಲ್ಲ. ೪೦-೪೫ ವರ್ಷಗಳ ಹಿಂದೆ ಇಲ್ಲಿಗೆ ವಲಸೆ ಬಂದವರು. ಅಲೆಮಾರಿಗಳಾಗಿದ್ದ ಬಹುರೂಪಿಗಳು ಈಗ ನೆಲೆ ಕಂಡುಕೊಳ್ಳುತ್ತಿದ್ದಾರೆ. ಆದರೆ ಒಂದಿಷ್ಟು ನಿವೇಶನಗಳನ್ನು ಬಿಟ್ಟರೆ ಅವರಿಗೆ ಯಾವುದೇ ಆಸ್ತಿ ಪಾಸ್ತಿಗಳಿಲ್ಲ. ಈಗಲೂ ಕವದಿಗುಡ್ಡ ಹಾಕಿಕೊಂಡು ವಾಸಿಸುತ್ತಾರೆ. ಈ ಕಲಾವಿದರಿಗೆ ಸರಕಾರದಿಂದ ಮಾಶಾಸನವಿಲ್ಲ. ಸ್ವರಪೆಟ್ಟಿಗೆ, ತಬಲಾ-ಡಗ್ಗಾ, ದಿಮಡಿ, ತಾಳಗಳೊಂದಿಗೆ ಸಂಗೀತಮಯ ಪೌರಾಣಿಕ ಸನ್ನಿವೇಶಗಳನ್ನು ತಂಡದೊಂದಿಗೆ ಪ್ರದರ್ಶಿಸುವರು. ಹೆಚ್ಚಾಗಿ ರಾಮಾಯಣ, ಮಹಾಭಾರತಗಳ ಸನ್ನಿವೇಶಗಳನ್ನು ಅಭಿನಯಿಸುವರು. ಭಸ್ಮಾಸುರ, ಭೀಮಾರ್ಜುನ, ಬಕಾಸುರ, ರಾವಣವಧೆ ಮೊದಲಾದ ಪ್ರಸಂಗಗಳನ್ನು ತೀರ ಸರಳವಾಗಿ ಹಾಗೂ ಭಾವಪೂರ್ಣವಾಗಿ ಅಭಿನಯಿಸುವರು. ಇವರು ಕರ್ನಾಟಕ ಮತ್ತು ಮಹಾರಾಷ್ಟ್ರದ ಕನ್ನಡ ಪ್ರದೇಶಗಳಲ್ಲಿ ಅಲೆಯುವರು.

ಶಂಕರ ಸಿದರಾಯ ಬಹುರೂಪಿ ಈ ನಾಡಿನ ಹಿರಿಯ ಬಹುರೂಪಿ. ಆತನ ವಯಸ್ಸು ೬೫. ಚಿಂಚಲಿಯ ಬಸಪ್ಪ ಸಿದರಾಯ ಬಹುರೂಪಿ,

---

**೪. ಸಂ. ಹಿ. ಚಿ. ಬೋರಲಿಂಗಯ್ಯ : ಕರ್ನಾಟಕ ಜನಪದ ಕಲೆಗಳ ಕೋಶ, ಪುಟ : ೨೫೩**

**೫. ಚಿಂಚಲಿಯಲ್ಲಿ ೧೬, ರಾಯಬಾಗ ಸ್ಟೇಷನ್ನದಲ್ಲಿ ೪, ಮುಗಳಖೋಡದಲ್ಲಿ ೧೨, ಜಲಾಲಪುರದಲ್ಲಿ ೨, ಅಳಗವಾಡಿ ಹಾಗೂ ಹಿಡಕಲ್ಲದಲ್ಲಿ ತಲಾ ಒಂದೊಂದು ಬಹುರೂಪಿ ಮನೆತನಗಳಿವೆ**

ಮುಗಳಖೋಡದ ಬಾಳಪ್ಪ ಈರಪ್ಪ ಬಹುರೂಪಿ, ರಾಯಬಾಗ ಸ್ಟೇಷನ್ನಿನ ಸಿದ್ದಪ್ಪ ಸಿದರಾಮ ಬಹುರೂಪಿ ಇವರೆಲ್ಲರೂ ವೃತ್ತಿನಿರತ ಹಿರಿಯ ಕಲಾವಿದರು. ಹಿಡಕಲ್ಲದ ಶಂಕರ ಹಣಮಂತ ಬಹುರೂಪಿ, ಮುಗಳಖೋಡದ ದೊಡ್ಡಮಲಕಪ್ಪ ರಾಮಚಂದ್ರ ಬಹುರೂಪಿ, ಸಣ್ಣಮಲಕಪ್ಪ ರಾಮಚಂದ್ರ ಬಹುರೂಪಿ, ರಾಯಬಾಗ ಸ್ಟೇಷನ್ನಿನ ಚನ್ನಪ್ಪ ಸಿದರಾಯ ಬಹುರೂಪಿ, ಅಶೋಕ ಬಸಪ್ಪ ಬಹುರೂಪಿ, ಚಿಂಚಲಿಯ ಶಿವಾಜಿ ಸಿದರಾಯ ಬಹುರೂಪಿ ಎರಡನೆಯ ತಲೆಮಾರಿನ ಕಲಾವಿದರು. ಜಲಾಲಪುರದ ಭಗವಂತ ಸಿದರಾಯ ಬಹುರೂಪಿ, ಯಲ್ಲಪ್ಪ ಸಿದ್ದಪ್ಪ ಬಹುರೂಪಿ, ಚಿಂಚಲಿಯ ಬಸಪ್ಪ ಸಿದರಾಯ ಬಹುರೂಪಿ, ರಾಯಬಾಗ ಸ್ಟೇಷನ್ನಿನ ಯಲ್ಲಪ್ಪ ಬಸಪ್ಪ ಬಹುರೂಪಿ ಹಾಗೂ ಅಶೋಕ ಬಸಪ್ಪ ಬಹುರೂಪಿ ಕಿರಿಯ ತಲೆಮಾರಿನವರು.

ಬಾಗೆನಾಡು ನೀರು ಮತ್ತು ಹಸಿರಿನಿಂದ ಸಮೃದ್ಧವಾಗಿರುವುದರಿಂದ ಈ ಪರಿಸರದಲ್ಲಿ ಇನ್ನೂ ಬಹುರೂಪಿಗಳ ಕಲೆ ಜೀವಂತವಾಗಿದೆ. ಮೊದಲಿನಷ್ಟು ಈ ಕಲೆಗೆ ಪ್ರಾಶಸ್ತ್ಯವಿಲ್ಲದಿದ್ದರೂ ಅವರ ವೃತ್ತಿಗೆ ತೊಂದರೆಯಾಗಿಲ್ಲ. ದೂರದರ್ಶನ ಪೆಟ್ಟಿಗೆಗಳು ಮನೆ–ಮನೆಗೆ ಬಂದ ಮೇಲೆ ತಮ್ಮ ಕಲೆ ಬೆಲೆ ಕಳೆದುಕೊಂಡಿದೆ ಎಂಬ ಅಳಲು ಹಿರಿಯ ಕಲಾವಿದ ಶಂಕರ ಬಹುರೂಪಿಯವರದು. ಹಿರಿಯರಿಂದ ಬಂದ ಬಳುವಳಿ ಬಿಡಲಾಗದು. ಶಿಕ್ಷಣವಿಲ್ಲದಿದ್ದರೂ ತಂದೆ ಅಜ್ಜಂದಿರರಿಂದ ಕಲಿತುಕೊಂಡು ವೇಷ ಹಾಕುತ್ತಿರುವ ಶಂಕರ 'ಜನ ಭಿಕ್ಷೆ ಹಾಕುವಾಗ ಹೀಯಾಳಿಸುತ್ತಿರುವ ನೋವು ಸಹಿಸಲಾಗದು' ಎನ್ನುತ್ತಾರೆ. ಹೀಗಾಗಿ ಈ ವೃತ್ತಿ ತಮ್ಮ ಮಕ್ಕಳ ತಲೆಗೆ ಕೊನೆಗೊಳ್ಳಬೇಕು. ಮೊಮ್ಮಕ್ಕಳು ಸ್ವಾಭಿಮಾನದಿಂದ ಬದುಕಲು ಇದಕ್ಕೆ ವಿದಾಯ ಹೇಳಬೇಕೆಂಬ ಇಚ್ಛೆ ಅವನದು. ಪ್ರಾಯಶಃ ಮುಂದಿನ ದಿನಗಳಲ್ಲಿ ಬಹುರೂಪಿಗಳು ವೇಷ ಹಾಕುವುದನ್ನು ಬಿಟ್ಟರೆ ಆಶ್ಚರ್ಯಪಡಬೇಕಿಲ್ಲ. ಈಗಾಗಲೇ ಅವರಿಗೆ ಶಿಕ್ಷಣದಲ್ಲಿ ಹೆಚ್ಚು ಆಸಕ್ತಿ ಮೂಡುತ್ತಿದೆ.

[illegible]

[illegible]

[illegible]

**೪.೪.೩. ಜಾತಗಾರರು :**

ಜಾತಗಾರರು ಕರ್ನಾಟಕದ ಜನಪದ ವೃತ್ತಿ ಕಲಾವಿದರ ಒಂದು ಜಾತಿ. ಇವರು ಪ್ರಾಚೀನ ಕಾಲದಿಂದಲೂ ತಮ್ಮ ಕಲಾಪ್ರದರ್ಶನದಿಂದ ಜನವರ್ಗದ ಗಮನ ಸೆಳೆದಿರುವರು. "ವಿವಿಧ ಬಗೆಯ ಶಾರೀರಿಕ ಕಸರತ್ತು ಮತ್ತು ವಿಡಂಬಕ ಸೋಗುಗಳ ಪ್ರದರ್ಶನದಲ್ಲಿ ವಿಶೇಷ ಪರಿಣತಿ. ತಲೆ-ತಲಾಂತರಗಳಿಂದ ಪಡೆದು ಬಂದಿರುವ ಜಾತಗಾರರು ಸಂಚಾರಿ ಜನ. ಅವರಿಗೆ ನಿರ್ದಿಷ್ಟ ಊರೆಂಬುದು ಇಲ್ಲ. ಆದರೂ ಹಿಂದಿನ ಕಾಲದಲ್ಲಿ ಸಂಸ್ಥಾನಿಕರು, ದೇಸಾಯಿ-ದೇಶಪಾಂಡೆ-ನಾಡಗೌಡ ಮೊದಲಾದವರು ಇವರ ಸೋಗು-ಕಸರತ್ತುಗಳನ್ನು ನೋಡಿ ಮೆಚ್ಚಿ ಕೆಲ ಊರುಗಳಲ್ಲಿ ಇನಾಮಾಗಿ ಭೂಮಿ ಕೊಟ್ಟಿದ್ದಾರೆ."[೧] "ಇವರು ಮುಸಲ್ಮಾನರು. ಇವರು ಮಾತನಾಡುವ ಭಾಷೆ ಉರ್ದು. ಜಾತಿ ಜಾತಗಾರ. ತಾವು ಜಾತಿಗೊಂದು ಸೋಗು ಹಾಕುವುದರಿಂದ ತಮ್ಮನ್ನು ಜಾತಿಗಾರ ಎಂದು ಕರೆಯುತ್ತಾರೆಂದು ಅವರು ಹೇಳುತ್ತಾರೆ."[೨]

ವೇಷಗಾರರು, ಜಾತಿಗಾರರು, ಬಹುರೂಪಿಗಳು ಮತ್ತು ಡೊಂಬರು ಒಂದೇ ವೃತ್ತಿಯವರಾಗಿ ಕಂಡರೂ ಅವರಲ್ಲಿ ಕೆಲವೊಂದು ವ್ಯತ್ಯಾಸಗಳಿವೆ. ಕೆಲವೊಮ್ಮೆ ಇವು ಪರ್ಯಾಯ ಪದಗಳಂತೆ ಬಳಕೆಗೊಳ್ಳುತ್ತವೆ. ಜಾತಗಾರರು ಇಸ್ಲಾಂ ಮತದ ಅನುಯಾಯಿಗಳು. ಬಹುರೂಪಿಗಳು ಅದೇ ವೃತ್ತಿಯವರಾಗಿದ್ದರೂ ಹಿಂದೂಗಳು. ವೇಷಗಾರರು ಮತ್ತೊಂದು ಪಂಗಡದವರು. ಆದರೆ ಇವರೆಲ್ಲರ ವೃತ್ತಿ ವೇಷಹಾಕುವುದು. "ಜಾತಗಾರರಿಗೆ ಸಂವಾದಿಯಾಗಿ ಇನ್ನೊಂದು ವರ್ಗವೆಂದರೆ ವೇಷಗಾರರು ಅಥವಾ ಬಹುರೂಪಿಗಳು. ಮೂಲತಃ ಒಂದೇ ಗುಂಪಿಗೆ ಸೇರಿರುವ ಈ ಜನ ಮುಸಲ್ಮಾನರ ಆಳ್ವಿಕೆಯ ನಂತರ ವೇಷಗಾರರು ಮತ್ತು ಜಾತಗಾರರು ಎಂಬುದಾಗಿ ಒಡೆದಿರಬೇಕು. ಮುಸಲ್ಮಾನರಾಗಿ ಪರಿವರ್ತನೆಯಾದವರು ಸೋಗು-ವೇಷಗಳನ್ನು ಹಾಕಿಕೊಂಡು ಮುಂದುವರೆದಿರಬೇಕು. ಮುಸಲ್ಮಾನರಾದ ಇವರು ದೇವಾನುದೇವತೆಗಳ ಪುರಾಣಗಳ ವೇಷಹಾಕುವುದು ಅವರ ಪರಂಪರೆಗೆ

---

೧. ಪ್ರೊ. ಜ್ಯೋತಿ ಹೊಸೂರ : ಜಾತಗಾರರ ಜಾತಕ, ಪುಟ : ೧೦

೨. ಇದನ್ನು ಹೇಳಿದವರು : ಅಪ್ಪಾಸಾಬ ಸಾಹೇಬಲಾಲ ಶೇಖ ಸಾ. ಹಾರೂಗೇರಿ

ವಿರೋಧವಾದುದು. ಮುಖ್ಯವಾಗಿ ಇವರು ಸಿದ್ಧರಸಿದ್ಧ(ಸಿದ್ದಕಿ ಬಕರಾ), ಮುದುಕಿ, ಶೆಟ್ಟಿಯ ಸೋಗುಗಳನ್ನು ಹಾಕುತ್ತಾರೆ."[೮] ರಾಯಬಾಗ ತಾಲೂಕಿನ ಹಾರೂಗೇರಿ ಹಂದಿಗುಂದ ಮತ್ತು ಕುಡಚಿಗಳಲ್ಲಿ ಜಾತಗಾರರಿದ್ದಾರೆ. ಹಾರೂಗೇರಿಯಲ್ಲಿ ಜಾತಗಾರರ ಸಂಖ್ಯೆ ಹೆಚ್ಚು. ಆದರೆ ಸದ್ಯದಲ್ಲಿ ಇವರಾರು ಸೋಗುಗಳನ್ನು ಹಾಕುವುದಿಲ್ಲ. ಹಿಂದೆ ಸೋಗು ಹಾಕುತ್ತಿದ್ದ ಕೆಲವು ಹಿರಿಯರು ಇನ್ನೂ ಬದುಕಿದ್ದು, ತಮ್ಮ ಸೋಗುಗಳ ವೈಭವವನ್ನು ನೆನಪು ಮಾಡಿಕೊಂಡು ರೋಚಕವಾಗಿ ಕಥಿಸುತ್ತಾರೆ. ಮೂಲತಃ ಅಲೆಮಾರಿಗಳಾಗಿದ್ದ ಜಾತಗಾರರು ಒಂದೆಡೆ ನೆಲೆ ಕಂಡುಕೊಂಡ ಮೇಲೆ ತಮ್ಮ ಬಣ್ಣದ ಬದುಕಿಗೆ ಸಂಪೂರ್ಣ ವಿದಾಯ ಹೇಳಿ ಕೃಷಿ ಕಾರ್ಮಿಕರಾಗಿಯೋ, ಪಶು ವಿಕ್ರಯದಲ್ಲಿ ದಲ್ಲಾಳಿಗಳಾಗಿಯೋ, ಸಣ್ಣ-ಪುಟ್ಟ ಉದ್ಯೋಗಗಳಲ್ಲಿ ನಿರತರಾಗಿರುವರು.

ಹಾರೂಗೇರಿಯ ಅಪ್ಪಾಸಾಬ ಸಾಹೇಬಲಾಲ ಶೇಖ ೨೦ವರ್ಷಗಳ ಹಿಂದೆ ಸೋಗು ಹಾಕುತ್ತಿದ್ದ. ಅವನ ತಂದೆ ಸಾಹೇಬಲಾಲ, ಅಜ್ಜ ಹಯತ್‌ಸಾಬ ಮೊದಲಾದವರೆಲ್ಲ ಸೋಗು ಹಾಕುತ್ತಿದ್ದುದಾಗಿ ಅಪ್ಪಾಸಾಬ ಹೇಳುತ್ತಾನೆ. ಈಗ ಅವನಿಗೆ ೭೦ವರ್ಷ ವಯಸ್ಸು. ೨೫ವರ್ಷ ಸೋಗು ಹಾಕಿ ಗಡಹಿಂಗ್ಲಜ, ಬೆಳಗಾವಿ, ಲಕ್ಷ್ಮೇಶ್ವರ, ಜಮಖಂಡಿ, ಬಿಜಾಪುರ ಮುಂತಾದ ಪ್ರದೇಶಗಳಲ್ಲಿ ಸುತ್ತಿದ ಅನುಭವ ಅವನದು. ಆತ ಹುಟ್ಟಿದ್ದು ಕೊಲ್ಲಾಪುರ ಜಿಲ್ಲೆಯ ಶಿರೋಳ ತಾಲೂಕಿನ ದಾನವಾಡದಲ್ಲಿ. ಐದನೆಯ ತರಗತಿಯವರೆಗೆ ಓದಿದ ಅಪ್ಪಾಸಾಬ ಶಿಕ್ಷಣ ಪಡೆದದ್ದು ಮುಧೋಳ ತಾಲೂಕಿನ ಕುಳಲಿ ಎಂಬಲ್ಲಿ. ತಂದೆ, ಅಜ್ಜ ಎಲ್ಲರೂ ಅಲೆಮಾರಿಗಳು. ಈಗ ಈತ ಹಾರೂಗೇರಿಯಲ್ಲಿ ನೆಲೆ ಕಂಡುಕೊಂಡಿದ್ದಾನೆ. ಇವನು ಭಸ್ಮಾಸುರ, ರಾವಣ, ಸಿದ್ಧರಸಿದ್ಧ, ಸಿದ್ಧಾರೂಢ ಮೊದಲಾದ ವೇಷಗಳನ್ನು ಹಾಕುತ್ತಿದ್ದನು. ಕೆಲವೊಮ್ಮೆ ೧೦-೧೨ ಜನರ ಗುಂಪು ಕಟ್ಟಿಕೊಂಡು ಮಹಾಭಾರತ ಮತ್ತು ರಾಮಾಯಣದ ಸನ್ನಿವೇಶಗಳ ವೇಷ ಹಾಕುತ್ತಿದ್ದುದಾಗಿ ಹೇಳುವನು. ಆತ ಪೊದೆಮೀಸೆ ಬೆಳಸಿದ್ದನಂತೆ. ತನ್ನ ಮೀಸೆಯ ಕುಡಿಗಳನ್ನು ಕಿವಿಯ ರಂಧ್ರಗಳಿಂದ

೮. ಸಂ. ಹಿ. ಚಿ. ಬೋರಲಿಂಗಯ್ಯ : ಕರ್ನಾಟಕ ಜನಪದ ಕಲೆಗಳ ಕೋಶ, ಪುಟ : ೨೦೧

[illegible]

ಹೊರಹಾಕಿ ಹಣೆಯ ಮೇಲೆ ಭಸ್ಮ ಧರಿಸಿಕೊಂಡು ಮುಖಕ್ಕೆ ಬಣ್ಣ ಲೇಪಿಸಿ ರಾವಣನ ಪಾತ್ರ ಹಾಕಿದರೆ ರಾಮಾಯಣದ ಪರಿಸರ ನಿರ್ಮಾಣವಾಗುತ್ತಿತ್ತೆಂದು ಹೆಮ್ಮೆಯಿಂದ ಹೇಳುತ್ತಾನೆ. ಸಿದ್ಧಾರೂಢರ ವೇಷ ಹಾಕಿದಾಗ ಹಾಡುತ್ತಿದ್ದ ತತ್ವಪದಗಳನ್ನು ಹಾಡಿ ತೋರಿಸುತ್ತಾನೆ. ಅವನ ಮಾತುಗಳನ್ನು ಕೇಳಿದರೆ ಬಹುರೂಪಿಗಳಿಗೂ ಜಾತಗಾರರಿಗೂ ಹಾಗೂ ವೇಷಗಾರರಿಗೂ ವೃತ್ತಿಯಲ್ಲಿ ಅಂಥ ಪ್ರಮುಖ ವ್ಯತ್ಯಾಸಗಳೇನೂ ಕಾಣುವುದಿಲ್ಲ. ಆದರೆ ವ್ಯತ್ಯಾಸವಿರುವುದು ಧರ್ಮಾಚರಣೆಯಲ್ಲಿ. ಹಾರೂಗೇರಿಯ ಅಮೀನಸಾಬ ಐನಾಪುರ(ಮಡ್ಡೆಗೋಳ) ಹಾಗೂ ಶೇಖ ಸೋಗು ಹಾಕುತ್ತಿದ್ದರು. ಈಗ ಅಮೀನಸಾಬ ಬದುಕಿಲ್ಲ. ಆತ ಸಿದ್ಧರಸಿದ್ಧ ಹಾಗೂ ಶೇಖ ಚಿಮಣಾಸೋಗು ಹಾಕುತ್ತಿದ್ದರು. ಕುಡಚಿಯಲ್ಲಿ ರಾಜಾಸಾಬ ಜಾತಗಾರ, ಹಂದಿಗುಂದದ ನನ್ನೂಸಾಬ ರಾಜಾಸಾಬ ಸಾವಳಗಿ ಸೋಗು ಹಾಕುತ್ತಿದ್ದರು. ನನ್ನೂಸಾಬ ರಾಜಾಸಾಬ ಸಾವಳಗಿಯ ಸಹೋದರರಾದ ಕಾಲೇಸಾಬ, ಬುಡನಸಾಬ, ಮಕಬೂಲಸಾಬ ಮುಂತಾದ ಏಳು ಜನರು ವೇಷ ಹಾಕುತ್ತಿದ್ದರು. ಇವರಾರೂ ಈಗ ಬದುಕಿಲ್ಲ. ರಾಯಬಾಗ ತಾಲೂಕಿನಲ್ಲಿಯ ಜಾತಗಾರರು ಎಲ್ಲೆಲಿಂದಲೂ ಬಂದು ಇಲ್ಲಿ ನೆಲೆಸಿದವರು. ಪ್ರೊ. ಜ್ಯೋತಿ ಹೊಸೂರ ಆ ಜನಾಂಗದ ಕುರಿತು ಅಧ್ಯಯನ ಮಾಡುವಾಗ ಇಲ್ಲಿಯ ಯಾರೊಬ್ಬರನ್ನೂ ದಾಖಲಿಸಿರುವುದಿಲ್ಲ. ಏಕೆಂದರೆ ಇಲ್ಲಿ ಜಾತಗಾರರು ಇರಲೇ ಇಲ್ಲ. ಈ ಭಾಗದಲ್ಲಿ ಜಾತಗಾರರ ಕೇಂದ್ರಸ್ಥಳವೆಂದರೆ ಮೂಡಲಗಿ. ಜಾತಗಾರರು ಸೋಗುಗಳಲ್ಲದೆ ಲಾಗ ಹೊಡೆಯುವುದರಲ್ಲಿಯೂ ಆಂಗಿಕ ಕಸರತ್ತು ಪ್ರದರ್ಶನಗಳಲ್ಲಿಯೂ ನಿಸ್ಸೀಮರು. "ಹಿಂಗಾಣಿ ಲಾಗ, ಮುಂಗಾಣಿ ಲಾಗ, ಅಂತರ ಲಾಗ, ಸರಲಾಗ, ಕತ್ತರಿಲಾಗ, ಎರಡೆರೆಡು ಒಂಟೆ ದಾಟಿ ಲಾಗ, ಬೆನ್ನಿಗೆ ಎರಡಾಳು ಉದ್ದದ ಕಬ್ಬಿಣ ಸಳಿ ಕಟ್ಟಿಕೊಂಡು ಹಾಕುವ ಲಾಗ, ಗಾಳಿಯಲ್ಲಿ ನಡೆಯುವುದು, ಕತ್ತಿ ಒರಸೆ, ಗುರಿ ಹೊಡೆಯುವುದು, ಭಾರವಾದ ಗುಂಡುಗಳನ್ನು " ಚಕ್ಕಡಿಯಲ್ಲಿ ಕೂಡಿಸಿ ಕೂದಲಿನಿಂದ ಎಳೆಯುವುದು, ಕಬ್ಬಿಣದ ಹಾರೆ ಮನಿಸುವುದು, ಗಟ್ಟಿ ಕಲ್ಲುಗಳನ್ನು ಕೈಯಿಂದ ಒಡೆಯುವುದು ಇವು ಇವರ ವಿವಿಧ ಕಸರತ್ತುಗಳು."[೯] ಈ ಕಸರತ್ತುಗಳನ್ನು ಪ್ರದರ್ಶಿಸುವಾಗ 'ಅಲಿ ಮೌಲಾಲಿ' ಎನ್ನುತ್ತಾರೆ. ಅಲಿ ಮೌಲಾಲಿಯು ಹನುಮಂತನಂತೆ ಪರಾಕ್ರಮಿಯಾದ ಶಕ್ತಿ ಪ್ರದರ್ಶನಕ್ಕೆ ಅಧಿದೈವ ಎನ್ನುವುದು ಅವರ ವಿವರಣೆ.

---

೯. ಹಿ.ಚಿ.ಬೋರಲಿಂಗಯ್ಯ : ಕರ್ನಾಟಕ ಜನಪದ ಕಲೆಗಳ ಕೋಶ : ಪುಟ : ೨೦೨

[illegible]

## ೫. ಸಂಕೀರ್ಣ ಕಲೆಗಳ ಕಲಾವಿದರು:

ಇತ್ತೀಚಿನ ದಿನಗಳಲ್ಲಿ ಕಲಾ ಸಂಘಗಳು ಯುವಕ, ಮಹಿಳಾ, ಸ್ತ್ರೀಶಕ್ತಿ ಮುಂತಾದ ಸಂಘಗಳು ಹುಟ್ಟಿಕೊಂಡು ಹಲವು ಉದ್ದೇಶಗಳೊಂದಿಗೆ ಪರಂಪರಾಗತ ಜನಪದ ಕಲೆಗಳನ್ನು ಪೋಷಿಸುತ್ತಿರುವುದು ಶ್ಲಾಘನೀಯ. ಈ ಸಂಘಗಳ ಸದಸ್ಯರು ಯುವಜನ ಮೇಳ, ಸರಕಾರಿ ಉತ್ಸವ, ಸ್ಪರ್ಧೆಗಳಲ್ಲಿ ತಮ್ಮ ಕಲಾಪ್ರತಿಭೆಯನ್ನು ಪ್ರದರ್ಶಿಸುವರು. ಕೆಲವು ಸಂಘಗಳು ವಿವಿಧ ಜನಪದ ಕಲಾಪ್ರಕಾರಗಳನ್ನು ಪ್ರದರ್ಶಿಸುವವು. ಈ ನಿಟ್ಟಿನಲ್ಲಿ ಚಿಂಚಲಿಯ ಡಾ. ಅಂಬೇಡ್ಕರ ಜಾನಪದ ಕಲಾ ಪೋಷಕ ಸಂಘ ಉತ್ತಮ ಸೇವೆ ಸಲ್ಲಿಸುತ್ತಿದೆ. ರಾಮಚಂದ್ರ ಕಾಂಬಳೆ ಈ ಸಂಘದ ಅಧ್ಯಕ್ಷರು. ಬಾಗೆನಾಡಿನಲ್ಲಿ ಜನಪದ ಕಲಾವಿದರ ಸಂಘಟನೆ ಕಲಾ ಮೇಳಗಳ ಸಂಯೋಜನೆ ಕಲಾವಿದರಿಗೆ ಸರಕಾರದ ನೆರವು ಒದಗಿಸಿಕೊಡುವ ಯೋಜನೆಗಳಲ್ಲಿ ಆಸಕ್ತಿ ಹೊಂದಿರುವ ಕಾಂಬಳೆಯವರ ಸಂಘ ಹಲವು ಜನಪದ ಕಲೆಗಳ ಪ್ರದರ್ಶನ ನೀಡುತ್ತಿದೆ. ಈ ಸಂಘದಲ್ಲಿ ವೀರಗಾಸೆ, ಲಾವಣಿ, ಮೊಹರಂಹಾಡು, ಅಲಾವಿಹೆಜ್ಜೆ, ಕುದುರೆಕುಣಿತ, ಬ್ಯಾಂಡ್, ಬ್ಯಾಂಜೊ ಮೊದಲಾದ ಕಲಾವಿದರಿದ್ದಾರೆ. ಒಬ್ಬ ಕಲಾವಿದ ಹಲವು ಕಲೆಗಳನ್ನು ಪ್ರದರ್ಶಿಸುತ್ತಾನೆ. ಆದ್ದರಿಂದ ಇವರನ್ನು ಸಂಕೀರ್ಣ ಕಲೆಗಳ ಕಲಾವಿದರೆಂದು ಗುರುತಿಸಲಾಗಿದೆ.

ಚಿಂಚಲಿಯ ರಮಾಬಾಯಿ ಕಲಾ ಯುವತಿ ಸಂಘ, ಡಾ.ಅಂಬೇಡ್ಕರ ಯುವಕ ಮಂಡಳಿ, ಮಹಾತ್ಮಾ ಜ್ಯೋತಿಬಾ ಫುಲೆ ಯುವಕ ಸಂಘ (ಜೈಭೀಮ ನಗರ), ನೇತಾಜಿ ಸುಭಾಷಚಂದ್ರ ಭೋಸ ಯುವಕ ಸಂಘ (ಅಜೀತ ನಗರ), ಶ್ರೀ ಮಹಾಕಾಲಿ ಸ್ಪೋರ್ಟ್ಸ್ ಕ್ಲಬ್ ಯುವಕ ಸಂಘ, ಹಳೇದಿಗ್ಗೇವಾಡಿಯ ಸ್ವಾಮಿ ವಿವೇಕಾನಂದ ಯುವಕ ಸಂಘ, ನಿಲಜಿಯ ಕಾಳಿಕಾದೇವಿ ಯುವಕ ಸಂಘ, ಸುಟ್ಟಟ್ಟಿಯ ಕಾಳಿದಾಸ ಯುವಕ ಮಂಡಳ, ಖಣದಾಳದ ಶ್ರೀ ಜಗಜ್ಯೋತಿ ಯುವಕ ಸಂಘ, ಶಿರಗೂರದ ಜೈ ಹನುಮಾನ ಯುವಕ ಮಂಡಳ, ಹಂದಿಗುಂದದ ಜೈ ಕರ್ನಾಟಕ ಯುವಕ ಮಂಡಳ ಮುಂತಾದವು ಜನಪದ ಕಲಾ ಪರಂಪರೆಯನ್ನು ಮುಂದುವರೆಸಲು ಶ್ರಮಿಸುತ್ತಿವೆ.

[illegible]

[illegible]

ಹಾರೂಗೇರಿಯ ಸುವರ್ಣಾ ಬಡಿಗೇರ ಬಾಗೆನಾಡಿನ ಪ್ರಖ್ಯಾತ ಸಂಕೀರ್ಣ ಕಲಾವಿದೆ. ಅವಳು ಮೂಲತಃ ಹಾಡುಗಾರ್ತಿ. ಸಂಪ್ರದಾಯದ ಹಾಡುಗಳೊಂದಿಗೆ ಭಜನೆ, ತತ್ವಪದ ಬಯಲಾಟದ ಹಾಡುಗಳನ್ನು ಹಾಡುವಳು. ಇವಳಿಗೆ ೨೦೧೦ರಲ್ಲಿ ಕರ್ನಾಟಕ ಸರಕಾರ ಕಿತ್ತೂರು ರಾಣಿ ಚನ್ನಮ್ಮಾ ಪ್ರಶಸ್ತಿ ನೀಡಿ ಗೌರವಿಸಿದೆ.

ಸಾಮಾನ್ಯವಾಗಿ ಜನಪದ ಹಾಡುಗಾರ ಎಲ್ಲಾ ವಿಧದ ಹಾಡುಗಳನ್ನು ಹಾಡುತ್ತಾನೆ. ಡೊಳ್ಳಿನ ಮೇಳದಲ್ಲಿ ಡೊಳ್ಳಿನ ಹಾಡು, ಭಜನೆ ಮೇಳದಲ್ಲಿ ತತ್ವಪದ, ಲಾವಣಿ ತಂಡದಲ್ಲಿ ಗೀಗಿಪದ, ಮೊಹರಂದಲ್ಲಿ ಕರ್ಬಲ್ ಹಾಡುಗಳನ್ನು ಹಾಡುವನು. ಆದರೆ ತಮ್ಮ ಅಸ್ಮಿತೆಯನ್ನು ಒಂದು ಕಲೆಯ ಮೂಲಕ ಗುರುತಿಸಿಕೊಂಡಿರುತ್ತಾರೆ. ನಿಜವಾದ ಅರ್ಥದಲ್ಲಿ ಇವರು ಸಂಕೀರ್ಣ ಕಲಾವಿದರೇ. ಅಧ್ಯಯನದ ಸಂದರ್ಭದಲ್ಲಿ ಅವರ ಅಸ್ಮಿತೆಯನ್ನು ಪರಿಗಣಿಸಿ ಅಧ್ಯಯನ ಮಾಡಲಾಗಿದೆ.

ಇದು ಬಾಗೆನಾಡಿನ ಕಲಾವಿದರ ಸ್ಥೂಲ ಮಾಹಿತಿ. ಪ್ರಸ್ತುತ ಅಧ್ಯಾಯ ಮಾಹಿತಿ ಪ್ರಧಾನವೆನಿಸಿದರೂ ಈ ಅಧ್ಯಯನದ ಮೂಲ ನೆಲೆಯೇ ಇಲ್ಲಿದೆ. ಸಾಹಿತ್ಯ ಚರಿತ್ರೆಯನ್ನು ಕಟ್ಟುವಂತೆ ಜನಪದ ಕಲೆ-ಕಲಾವಿದರ ಚರಿತ್ರೆ ಕಟ್ಟುವುದು ಭವಿಷ್ಯದ ದೃಷ್ಟಿಯಿಂದ ಅಗತ್ಯವೆನಿಸುತ್ತದೆ. ಒಬ್ಬ ಪ್ರತಿಭಾವಂತ ಕಲಾವಿದ ಈ ನಾಡಿನ ಸಾಂಸ್ಕೃತಿಕ ವ್ಯಕ್ತಿ. ಆತ ಕಳೆದು ಹೋಗಬಾರದೆಂಬ ಕಳಕಳಿಯಿಂದ ಆತನನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

***********

[illegible]

[illegible]

[illegible]

[illegible]

# ಅಧ್ಯಾಯ : ೫ಕಲಾವಿದರ ಸಾಮಾಜಿಕ ಸ್ಥಾನ–ಮಾನಗಳು

## ಅಧ್ಯಾಯ – ಐದು

# ಕಲಾವಿದರ ಸಾಮಾಜಿಕ ಸ್ಥಾನ–ಮಾನಗಳು

ಜನಪದ ಕಲೆಗಳು ಜಾನಪದ ಬದುಕಿನ ಸಜೀವ ಅವಯವಗಳು. ಕಲೆಗಳಿಲ್ಲದ ಜಾನಪದ ಜಗತ್ತನ್ನು ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಬಹುಪಾಲು ಜನಪದ ಕಲೆಗಳು ಕ್ರಿಯಾತ್ಮಕವಾದವು. ಪ್ರದರ್ಶನ ಕಲೆಗಳನ್ನು ತೆಗೆದುಕೊಂಡರೂ ಅವೆಲ್ಲವೂ ಶುದ್ಧ ಮನರಂಜನೆ ಕಲೆಗಳಲ್ಲ. ಆದ್ದರಿಂದಲೇ ಹಿಂದಿನ ಅಧ್ಯಾಯದಲ್ಲಿ ಆರಾಧನಾ ಕೇಂದ್ರಿತ ಕಲೆಗಳು, ವೃತ್ತಿ ಕಲೆಗಳು, ಶುದ್ಧ ಮನರಂಜನೆಯ ಕಲೆಗಳು, ರಂಗ ಕಲೆಗಳು ಹಾಗೂ ಸಂಕೀರ್ಣ ಕಲೆಗಳೆಂದು ಸ್ಥೂಲವಾಗಿ ವರ್ಗೀಕರಿಸಿಕೊಳ್ಳಲಾಗಿದೆ. ನಾವು ಕಲಾವಿದರ ಸಾಮಾಜಿಕ ಸ್ಥಾನ–ಮಾನಗಳನ್ನು ಕಂಡುಕೊಳ್ಳಲು ಯೋಜಿಸಿದಾಗ ಮೇಲಿನ ವರ್ಗೀಕರಣದ ಹಿನ್ನೆಲೆಯನ್ನು ಪರಿಗಣಿಸುವದು ಅವಶ್ಯವೆನಿಸುತ್ತದೆ. ಆರಾಧನಾ ಕೇಂದ್ರಿತ ಕಲೆಗಳ ಕಲಾವಿದರ ಹಾಗೂ ವೃತ್ತಿ ಕಲಾವಿದರ ಸಾಮಾಜಿಕ ಸ್ಥಾನ–ಮಾನಗಳು ಒಂದೇ ಆಗಿರಲು ಸಾಧ್ಯವಿಲ್ಲ. ಬಾಗೆನಾಡಿನಲ್ಲಿ ಡೊಳ್ಳು ಕಲಾವಿದರಿಗೆ ಗೌರವ ಹೆಚ್ಚು. ಇದರಂತೆ ಶಿವ–ಹರಿ–ಜಿನಭಜನೆ ಕಲಾವಿದರು, ವೀರಗಾಸೆ, ಕರಡಿ, ಗೊಂದಲಿಗರ ಮೇಳದವರು ಪೂಜನೀಯವೆನಿಸುತ್ತಾರೆ. ಡೊಳ್ಳುಹಾಡು ಅಥವಾ ಕುಣಿತ ಆರಂಭಿಸುವ ಮೊದಲು ಡೊಳ್ಳು ವಾದ್ಯದ ಪೂಜೆ ನಡೆಯುತ್ತದೆ. ಆ ಕಲಾವಿದರು ಹಣೆಯ ತುಂಬ ಭಂಡಾರ ಲೇಪಿಸಿಕೊಳ್ಳುತ್ತಾರೆ. ಹೆಗಲಿಗೆ ಕಂಬಳಿ ನೇತುಹಾಕಿಕೊಂಡು ವಾದ್ಯಗಳಿಗೆ ನಮಸ್ಕರಿಸಿ ಅವುಗಳನ್ನು ಎತ್ತಿಕೊಳ್ಳುವರು. ಹರಿಭಜನೆಯಲ್ಲಿ ಆ ಕಲಾವಿದರನ್ನು ಸಂತರೆಂದು ಭಕ್ತಿಪೂರ್ವಕ ವಂದಿಸುವರು. ಹರಿಭಜನೆಯಲ್ಲಿ ತಾಳ–ವೀಣೆ–ಮೃದಂಗ ಹಿಡಿದವರೆಲ್ಲ

[illegible]

ಸಂತರು. ಜನ ಅವರ ಪಾದಮುಟ್ಟಿ ನಮಸ್ಕರಿಸುವರು. ಅಂದರೆ ಅದು ಕಲಾವಿದನಿಗೆ ತೋರಿಸುವ ಗೌರವವಲ್ಲ; ಪರಂಪರೆಗೆ ಸಂದ ಅಭಿವಂದನೆ. ಸಂತರು ಕೊರಳಲ್ಲಿ ತುಳಸಿಮಾಲೆ ಧರಿಸುತ್ತಾರೆ. ಬಾಗೆನಾಡಿನಲ್ಲಿ ಮಹಾರಾಷ್ಟ್ರದ ಸಂತ ಪರಂಪರೆಯ ಪ್ರಭಾವ ದಟ್ಟವಾಗಿದ್ದು ವಿಠ್ಠಲಮಂದಿರಗಳ ಸಂಖ್ಯೆ ಹೆಚ್ಚಿದೆ. ಅಲ್ಲಿ ವರ್ಷಕ್ಕೊಮ್ಮೆ ಜ್ಞಾನೇಶ್ವರಿ ಗ್ರಂಥದ ಪಾರಾಯಣ ನಡೆಯುವುದು. ಏಕಾದಶಿ ಮೊದಲಾದ ವಿಶೇಷ ಸಂದರ್ಭಗಳಲ್ಲಿ ಅಭಂಗಗಳನ್ನು ಹಾಡುವರು. ಗೊಂದಲ ಹಾಕುವಾಗ ಶ್ರುತಿ ಸಂಬಾಳಗಳ ಪೂಜೆ ನಡೆಯುವುದು ಎಲ್ಲರಿಗೂ ಗೊತ್ತಿರುವ ವಿಷಯ. ಅವುಗಳೊಂದಿಗೆ ಗೊಂದಲಿಗರಿಗೂ ಸಹ ಜನ ಪಾದ ಮುಟ್ಟಿ ನಮಸ್ಕಾರ ಮಾಡುವರು. ಇಂತದೇ ಗೌರವ ಪುರವಂತರು, ಕರಡಿ ಮಜಲು ಮೊದಲಾದ ಆರಾಧನಾ ಕೇಂದ್ರಿತ ಕಲೆಗಳ ಕಲಾವಿದರು ಪಡೆಯುವರು. ಈ ಭಾಗದಲ್ಲಿ ಎಲ್ಲಮ್ಮನ ಪ್ರಭಾವ ಕಡಿಮೆಯಿಲ್ಲ. ಸಾಮಾಜಿಕವಾಗಿ ದೇವದಾಸಿಯರನ್ನು ನೋಡುವ ದೃಷ್ಟಿಯೇ ಬೇರೆ; ಧಾರ್ಮಿಕವಾಗಿ ಅವರನ್ನು ಪರಿಗಣಿಸುವ ರೀತಿಯೇ ಬೇರೆ. ದೇವದಾಸಿಗೆ ಸಮಾಜದಲ್ಲಿ ಸ್ಥಾನ–ಮಾನಗಳಿಲ್ಲ. ಅವಳನ್ನು ನಿಕೃಷ್ಟವಾಗಿ ಕಾಣಲಾಗುತ್ತಿದೆ. ಅವರು ಲೈಂಗಿಕ ಶೋಷಣೆಗೆ ಒಳಗಾದವರು. ಅವರನ್ನು ವೇಶ್ಯೆಯರೆಂದೇ ಪರಿಗಣಿಸಲಾಗುತ್ತದೆ. ದುಡ್ಡಿಗಾಗಿ ಮೈಮಾರಿಕೊಳ್ಳುವವರೆಂದು ಹೀಯಾಳಿಸಲಾಗುತ್ತಿದೆ. ಆದರೆ ಚೌಡಿಕೆ, ಹಡ್ಡಲಿಗೆ ಹಿಡಿದು ಮನೆಗೆ ಬಂದರೆ ಅವುಗಳನ್ನು ಪೂಜಿಸಿ, ಅವಳ ಪಾದ ಮುಟ್ಟಿ ನಮಸ್ಕರಿಸಲಾಗುತ್ತದೆ. ಆರಾಧನೆಯ ನೆಲೆಯಲ್ಲಿ ಸಾಮಾಜಿಕವಾಗಿ ತಿರಸ್ಕೃತರಾದವರೂ ಕೂಡಾ ಪೂಜೆಗೊಳ್ಳುವುದು ಒಂದು ಸಾಂಸ್ಕೃತಿಕ ವಿರೋಧಾಭಾಸ. ವಸ್ತುಸ್ಥಿತಿ ಹೀಗಿರುವುದರಿಂದ ಎಲ್ಲ ಕಲಾವಿದರನ್ನು ಒಂದೇ ಸಾಮಾಜಿಕ ಮಾನದಂಡದಿಂದ ಅಳೆಯುವುದು ಯೋಗ್ಯವೆನಿಸುವುದಿಲ್ಲ. ಕಲೆಯಿಂದ ಕಲೆಗೆ ಕಲಾವಿದರ ಸಾಮಾಜಿಕ ಸ್ಥಾನ–ಮಾನಗಳು ಬದಲಾಗುತ್ತವೆ. ನಮ್ಮ ಸಮಾಜದಲ್ಲಿ ಕಲೆಗಳಿಗಿಂತಲೂ ಧಾರ್ಮಿಕ ಸಂಪ್ರದಾಯಗಳಿಗೆ ಹೆಚ್ಚಿನ ಬೆಲೆಯಿದೆ. ಅವು ಒಂದು ವಿಧದಲ್ಲಿ ಜನಪದ ಕಲೆಗಳ ಪೋಷಕ ನೆಲೆಗಳು. ಇದೇ ಮಾತನ್ನು ಶುದ್ಧ ಮನರಂಜನಾ ಕಲೆಗಳಿಗೆ ಹೇಳಲಾಗದು. ಇಂದು ಜನಪದ ರಂಗಭೂಮಿ ತೀವ್ರ ಸಂಕಷ್ಟದಲ್ಲಿದೆ. ರಂಗಭೂಮಿ ಕಲಾವಿದರನ್ನು ಸಮಾಜ ನೋಡುವ ದೃಷ್ಟಿ

[illegible]

ಮೊದಲಿನಿಂದಲೂ ಚೆನ್ನಾಗಿಲ್ಲ. ಮುಖಕ್ಕೆ ಬಣ್ಣ ಬಳಿದುಕೊಳ್ಳುವವರನ್ನು ಸಮಾಜದಲ್ಲಿ ಪೂರ್ವಗ್ರಹಿತ ಭಾವದಿಂದಲೇ ದರ್ಶಿಸುತ್ತಾರೆ. ಅವರನ್ನು ನಂಬಬಾರದೆಂಬುದು ಪಾರಂಪರಿಕ ಗ್ರಹಿಕೆ. ಅದನ್ನು ಶೃಂಗಾರಶತಕದ ಕವಿ ಭರ್ತೃಹರಿ ಅನುಮೋದಿಸುತ್ತಾನೆ:

**ಮನಸು ಸೆಳೆದರೂ ಕುಲಜನಾದವನು**
**ಚುಂಬಿಸನು ಬೆಲೆವೆಣ್ಣಿನ ಪಲ್ಲವ**
**ಕೋಮಲದಧರವನು–**
**ಚಾರ ಚೋರ ಭಟ ವಿಟ ನಟ ಚೇಟಕ**
**ರುಗುಳಿನ ಪಡಿಗವನು!**

ಭಾರತೀಯ ಸಮಾಜದಲ್ಲಿ ಕಲೆ ಮತ್ತು ಕಲಾವಿದರನ್ನು ವಿವಿಧ ನೆಲೆಗಳಲ್ಲಿ ವಿಭಿನ್ನವಾಗಿ ಪರಿಗಣಿಸುವ ಪರಂಪರೆಯೊಂದು ಬೆಳೆದು ಬಂದಂತಿದೆ. ಆದ್ದರಿಂದ ಕಲಾವಿದರ ಸಾಮಾಜಿಕ ಸ್ಥಾನ–ಮಾನಗಳನ್ನು ಆಯಾ ನೆಲೆಯಲ್ಲಿಯೇ ಅವಲೋಕಿಸಬೇಕು.

ಸಮೂಹ ಸಂವಹನದ ವಿದ್ಯುನ್ಮಾನ ಮಾಧ್ಯಮಗಳು ಬೆಳೆದಂತೆ ಶುದ್ಧ ಮನರಂಜನೆಯ ಜನಪದ ಪ್ರದರ್ಶನ ಕಲೆಗಳ ಪ್ರಭಾವ ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದೆ. ಇಂದಿನ ಮಾಧ್ಯಮಗಳು ಜನಪದ ಕಲೆಗಳನ್ನು ಬಳಸಿಕೊಳ್ಳುತ್ತ ತಮ್ಮ ಪ್ರಸರಣ ಶಕ್ತಿ–ಸಾಮರ್ಥ್ಯ ವರ್ಧಿಸಿಕೊಳ್ಳುತ್ತವೆ. "ವಿಜ್ಞಾನ ಹಾಗೂ ನವನಾಗರಿಕತೆಯ ಆವಿರ್ಭಾವದಿಂದಾಗಿ ಸಮೂಹ–ಮಾಧ್ಯಮಗಳು ಪರೋಕ್ಷ ಇಲ್ಲವೇ ಪ್ರತ್ಯಕ್ಷವಾಗಿ ಜಾನಪದ ಮಾಧ್ಯಮಗಳನ್ನೇ ಬಳಸುತ್ತ ಹೆಚ್ಚು ಹೆಚ್ಚು ಪರಿಣಾಮಕಾರಿಯಾಗುತ್ತಿರುವುದನ್ನು ನಾವು ಇಂದು ಮನವರಿಕೆ ಮಾಡಿಕೊಂಡಿದ್ದೇವೆ. ಪರಂಪರಾಗತವಾಗಿ ಬಂದಿರುವ ಜನಪ್ರಿಯ ಜಾನಪದ ಮಾಧ್ಯಮಗಳನ್ನು ಬಳಸಿಕೊಂಡು ಜನಸಮುದಾಯದ ಮನಸ್ಸನ್ನು ಮುಟ್ಟಲು ಅತ್ಯಂತ ಪ್ರಭಾವಶಾಲಿಯಾದ ಉಪಕ್ರಮವನ್ನು ಎಲ್ಲ ಮುಂದುವರೆದ ದೇಶಗಳು ತಮ್ಮ ಸಮೂಹ ಮಾಧ್ಯಮಗಳ ಮೂಲಕ ಇಂದು ಕೈಗೊಂಡಿರುವುದೂ ಗಮನಾರ್ಹ

[illegible]

[illegible]

[illegible]

ಅಂಶವಾಗಿದೆ. ಭಾರತ ದೇಶದಲ್ಲಿ ಈಗ ಸುಮಾರು ೨೦-೨೫ವರ್ಷಗಳಿಂದಲೂ ಜಾನಪದ ಪ್ರದರ್ಶನ ಕಲೆಗಳನ್ನು ಸಮೂಹ ಮಾಧ್ಯಮಗಳಿಗೆ ಅಳವಡಿಸಿಕೊಳ್ಳುವ ಪ್ರಯತ್ನ ನಡೆದಿದ್ದರೂ ದೂರದರ್ಶನ ಬಂದ ಇತ್ತೀಚಿನ ವರ್ಷಗಳಲ್ಲಿ ಈ ಪ್ರಯತ್ನ ಹೆಚ್ಚು ಸಾರ್ಥಕಗೊಂಡಿರುವುದನ್ನು ಕಾಣುತ್ತೇವೆ."[೧]

ಜನಪದ ಕಲೆಗಳು ಆಧುನಿಕ ಸಮೂಹ ಸಂವಹನ ಮಾಧ್ಯಮಗಳೊಂದಿಗೆ ಎದುರಿಸುತ್ತಿರುವ ಸವಾಲುಗಳನ್ನು ಮುಂದಿನ ಅಧ್ಯಾಯವೊಂದರಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿದೆ. ಈ ವಿಷಯ ಬಾಗೆನಾಡಿನ ಕಲೆಗಳಿಗೆ ಮತ್ತು ಕಲಾವಿದರಿಗೆ ಮಾತ್ರ ಸೀಮಿತವಾಗುವುದಿಲ್ಲ. ಇದೊಂದು ಸಾಂಸ್ಕೃತಿಕ ಸಂಘರ್ಷ. ಜಾನಪದ ಕಲೆಗಳಿಗೆ ಭೌಗೋಳಿಕ ಹಿನ್ನೆಲೆ ಹಾಗೂ ಪ್ರಾದೇಶಿಕ ವೈಶಿಷ್ಟ್ಯಗಳು ಇರುವಂತೆ ಆಧುನಿಕ ಮಾಧ್ಯಮಗಳಿಗಿಲ್ಲ. ಅವು ಬಹುಮುಖಿ ಸಂಸ್ಕೃತಿಯನ್ನು ಹತ್ತಿಕ್ಕುತ್ತ ಏಕಮುಖಿ ಸಂಸ್ಕೃತಿಯನ್ನು ರೂಪಿಸುತ್ತಿರುವುದು ಸಾಂಸ್ಕೃತಿಕ ತಳಮಳಕ್ಕೆ ಕಾರಣವಾಗಿದೆ. ಭಾಷೆ, ಭಾವನೆ, ಆಚರಣೆ ಮುಂತಾದವುಗಳಿಗೆಲ್ಲ ಏಕಮುಖಿ ಆಗುತ್ತಿರುವುದು ಹೊಸತು ಸಂಗತಿಯಲ್ಲ. ಇದು ಪರೋಕ್ಷವಾಗಿ ಜನಪದ ಕಲಾವಿದರ ಸಾಮಾಜಿಕ ಸ್ಥಾನಮಾನಗಳನ್ನು ಕಸಿದುಕೊಳ್ಳುತ್ತಿದೆ. ಈಗ ಸಿನಿಮಾ ನಟ-ನಟಿಯರು, ಧಾರಾವಾಹಿ ಕಲಾವಿದೆಯರು, ಕ್ರಿಕೆಟ್, ಹಾಕಿ, ಟೆನ್ನಿಸ್ ಕ್ರೀಡಾಪಟುಗಳು ನಮ್ಮ ಮಾಧ್ಯಮಗಳಲ್ಲಿ ಮಿಂಚುವಂತೆ ಜನಪದ ಕಲಾವಿದರು ಮಿಂಚುವುದಿಲ್ಲ. ಈ ಎಲ್ಲ ನೆಲೆಗಳನ್ನು ಗಮನದಲ್ಲಿಟ್ಟುಕೊಂಡು ಕಲಾವಿದರ ಸಾಮಾಜಿಕ ಸ್ಥಾನ-ಮಾನಗಳನ್ನು ಅಭ್ಯಸಿಸುವುದು ಉಚಿತವೆನಿಸುತ್ತದೆ.

ಮೇಲ್ನೋಟದಲ್ಲಿ ಜನಪದ ಕಲಾವಿದರ ಜಾತಿ ಮತ್ತು ವೃತ್ತಿಗಳು ಗೌಣವೆನಿಸಿದರೂ ಕೆಲವೆಡೆ ಅವೇ ಪ್ರಧಾನವಾಗುತ್ತವೆ. ಹಾಲುಮತ ಸಮುದಾಯದ ಕಲಾವಿದನೊಬ್ಬ ಡೊಳ್ಳುಪೂಜೆ ಮಾಡುವುದಕ್ಕೂ ಅನ್ಯಸಮುದಾಯದ ಕಲಾವಿದನೊಬ್ಬ ಡೊಳ್ಳುಪೂಜೆ ಮಾಡುವುದಕ್ಕೂ ವ್ಯತ್ಯಾಸವಿದೆ. ಅಂದರೆ ಸೂಕ್ಷ್ಮ ನೆಲೆಯಲ್ಲಿ ಜಾತಿ ಕೂಡಾ ಕಲಾವಿದನ ಸಾಮಾಜಿಕ

---

೧. **ಸೋಮಶೇಖರ ಇಮ್ರಾಪೂರ : ಜಾನಪದ ಮತ್ತು ಸಮೂಹ ಮಾಧ್ಯಮ (ಲೇ), ಸಮೂಹ ಸಂವಹನ ಸಾಹಿತ್ಯ, ಪುಟ : ೮೯**

[illegible]

[illegible]

[illegible]

[illegible]

[illegible]

ಸ್ಥಾನ-ಮಾನ ನಿರ್ಧರಿಸುವಲ್ಲಿ ಮುಖ್ಯವಾಗುತ್ತದೆ. ಮನೆ ಕಟ್ಟುವಾಗ, ಬಾವಿ ತೋಡುವಾಗ ಹಾಲುಮತ ಸಮುದಾಯದವರಿಂದ ಪೂಜೆ ಮಾಡಿಸುವುದು ಈ ಕಡೆಯ ಪದ್ಧತಿ. ಈ ಪ್ರದೇಶದಲ್ಲಿ ಬಜಂತ್ರಿಯವರು ಶಹನಾಯಿ ನುಡಿಸುತ್ತಾರೆ. ಮಂಗಳ ಪ್ರಸಂಗಗಳಲ್ಲಿ ಅವರ ಮಂಗಲ ವಾದ್ಯಗಳು ಬೇಕು. ಆದರೆ ಅವರನ್ನು ಅಸ್ಪೃಶ್ಯರಂತೆ ಕಾಣಲಾಗುತ್ತದೆ. ಮದುವೆ ಮೊದಲಾದ ಶುಭ ಸಂದರ್ಭಗಳಲ್ಲಿ ಅವರನ್ನು ಸಹಭೋಜನಕ್ಕೆ ಕರೆಯುವುದಿಲ್ಲ. ಅವರಿಗಾಗಿ ಪ್ರತ್ಯೇಕ ಊಟದ ವ್ಯವಸ್ಥೆ ಮಾಡುತ್ತಾರೆ. ಬಜಂತ್ರಿಯವರು ತಳವರ್ಗದ ಕಲಾವಿದರು. ಅಂದರೆ ದಲಿತತ್ವ ಎನ್ನುವುದು ಕಲಾವಿದರ ಸಾಮಾಜಿಕ ಅಸ್ಮಿತೆಯಲ್ಲಿಯೂ ಕೆಲಸಮಾಡುತ್ತದೆ. ಆದ್ದರಿಂದ ಕಲಾವಿದರ ಸಾಮಾಜಿಕ ಸ್ಥಾನ-ಮಾನಗಳ ಕುರಿತ ಅಧ್ಯಯನದಲ್ಲಿಯೂ ಹಿಂದಿನ ವರ್ಗೀಕರಣವನ್ನು ಬಳಸಿಕೊಳ್ಳುವುದು ಅವಶ್ಯವೆನಿಸುತ್ತದೆ.

**೧. ಆರಾಧನಾ ಕೇಂದ್ರಿತ ಕಲೆಗಳ ಕಲಾವಿದರು :**

ಬಾಗೆನಾಡು ಹಾಲುಮತದ ಮೂಲ ನೆಲೆಯಾಗಿರುವಂತೆ ಲಿಂಗಾಯತ, ಜೈನ, ದಲಿತ ಸಮುದಾಯಗಳ ಸಂಗಮವೂ ಹೌದು. ಈ ಎಲ್ಲ ಸಮುದಾಯಗಳ ಪ್ರಭಾವ ನಿರ್ಲಕ್ಷಿಸುವಂಥದಲ್ಲ. ಇತ್ತೀಚಿಗೆ ಮಹಾರಾಷ್ಟ್ರದ ಸಂತವಾಹಿನಿಯ ಪ್ರಭಾವ ಹೆಚ್ಚುತ್ತಿದೆ. ಮೇಲೆ ಹೇಳಿದ ಎಲ್ಲ ಸಮುದಾಯಗಳ ಆರಾಧನಾ ಕೇಂದ್ರಿತ ಕಲೆ ಮತ್ತು ಕಲಾವಿದರಿಗೆ ಅಲ್ಲಲ್ಲಿ ಪ್ರಾಶಸ್ತ್ಯವಿರುವುದು ಸಹಜ. ಈ ಮೊದಲು ಉಲ್ಲೇಖಿಸಿದಂತೆ ಬಾಗೆನಾಡಿನ ಜನಪದ ಕಲಾವಿದರಲ್ಲಿ ಬಹುದೊಡ್ಡ ಪಾಲು ಹಾಲುಮತ ಸಮುದಾಯದ ಕಲಾವಿದರರದು. ಅವರು ಡೊಳ್ಳಿನ ಹಾಡು, ಕುಣಿತ, ಡೊಳ್ಳುವಾದನಗಳನ್ನು ಕಲೆಗಳೆಂದು ಪರಿಗಣಿಸದೇ ತಮ್ಮ ದೈವದ ಪೂಜೆಯೆಂದು ಭಾವಿಸಿಕೊಂಡಿದ್ದಾರೆ. ಕಂಕಣವಾಡಿಯ ದೈವ ಹಾಲಸಿದ್ಧನ ಆಸ್ಥಾನದಲ್ಲಿ ಐದು ಡೊಳ್ಳಿನ ಹಾಡಿನ ಮೇಳಗಳಿವೆ. ವರ್ಷದಲ್ಲಿ ನಡೆಯುವ ಮೂರು ಜಾತ್ರೆಗಳು ಡೊಳ್ಳಿನ ಸದ್ದಿನಲ್ಲಿಯೇ ಆರಂಭ ಮತ್ತು ಮುಕ್ತಾಯಗೊಳ್ಳುತ್ತವೆ. ರಾತ್ರಿಯಿಡೀ ಡೊಳ್ಳಿನ ಹಾಡುಗಳ ಮೂಲಕವೇ ಜಾಗರಣೆ ಮಾಡಲಾಗುತ್ತದೆ. ಇದೇ ರೀತಿಯ ಆಚರಣೆಗಳು ಅಲಕನೂರ, ಯಲ್ಲಾರಟ್ಟಿ, ಚಿಂಚಲಿ, ಸವಸುದ್ದಿ, ಹಾರೂಗೇರಿ

[illegible]

[illegible]

ಮುಂತಾದ ಹಾಲುಮತ ದೈವದ ಪ್ರಮುಖ ನೆಲೆಗಳಲ್ಲಿ ಆಚರಿಸಲ್ಪಡುತ್ತದೆ. ಹಾರೂಗೇರಿಯ ಭೂತಾಳಸಿದ್ಧ, ಅಲಖನೂರಿನ ಕರಿಸಿದ್ಧ, ಯಲ್ಪಾರಟ್ಟಿಯ ಅರಣ್ಯಸಿದ್ಧ, ಕಂಕಣವಾಡಿಯ ಹಾಲಸಿದ್ಧ, ಮಲಕಾರಿಸಿದ್ಧ, ಬೆಂಡವಾಡದ ರೇವಣಸಿದ್ಧ, ಹಿಡಕಲ್ಲದ ಅಮೋಘಸಿದ್ಧ, ಚಿಂಚಿಲಿ ಮಾಯವ್ವ, ಬೆಕ್ಕೇರಿ ಲಕ್ಕವ್ವ, ಸವಸುದ್ಧಿ ಲಕ್ಕವ್ವ, ಕಂಕಣವಾಡಿ ಲಕ್ಕವ್ವ, ರಾಯಬಾಗ ರೇಲ್ವೆಸ್ಟೇಷನ್‌ದ ಲಗಮವ್ವ, ಸವದತ್ತಿ ಎಲ್ಲಮ್ಮ ಮೊದಲಾದ ದೈವಗಳ ಜಾತ್ರೆಗಳಲ್ಲಿಯೂ ಡೊಳ್ಳು, ಹಾಡು, ಕುಣಿತಗಳದ್ದೇ ಮುಖ್ಯ ಆಕರ್ಷಣೆ. ಆ ನಿಮಿತ್ಯ ಸ್ಪರ್ಧೆಗಳು ನಡೆಯುತ್ತವೆ. ಈ ಸ್ಪರ್ಧೆಗಳಲ್ಲಿ ಭಾಗವಹಿಸುವ ಮೇಳಗಳು ತಂತಮ್ಮ ಊರಿನ ದೈವಗಳ ಅನುಮತಿ ಇಲ್ಲದೇ ಭಾಗವಹಿಸುವುದಿಲ್ಲ. ಉದಾಹರಣೆಗಾಗಿ ಕಂಕಣವಾಡಿಯ ಡೊಳ್ಳಿನ ಮೇಳಗಳು ಅಲಕನೂರು ಕರಿಸಿದ್ಧನ ಆಸ್ಥಾನಕ್ಕೆ ಬರಬೇಕಾದರೆ ಹಾಲಸಿದ್ಧ ದೇವಸ್ಥಾನದ ಅನುಮತಿ ಪಡೆಯಬೇಕು. ಈ ವಿಶಿಷ್ಟವಾದ ಆಚರಣೆಯನ್ನು ಗಮನಿಸಿದಾಗ ಡೊಳ್ಳಿನ ಮೇಳದ ಕಲಾವಿದರು ಮತ್ತೊಂದೆಡೆ ಹೋಗುವಾಗ ತಮ್ಮ ಗ್ರಾಮದ ದೈವದ ಪ್ರತಿನಿಧಿಗಳಾಗಿ ಹೋಗುತ್ತಾರೆ. ಈ ಅನುಮತಿ ಪಡೆಯುವುದರ ಹಿಂದೆ ಮತ್ತೊಂದು ಉದ್ದೇಶವೂ ಇರಬಹುದು. ಕವಿ ಹರಿಹರ ತನ್ನ ಸೃಜನಶೀಲತೆಯನ್ನು ಹಂಪೆಯ ವಿರೂಪಾಕ್ಷನಿಗೆ ಮೀಸಲಿರಿಸಿದಂತೆ ದೈವಾರಾಧನೆಯ ಕಲಾವಿದರು ತಮ್ಮ ಕಲಾಸೇವೆಯನ್ನು ತಮ್ಮ ದೈವಕ್ಕೆ ಮೀಸಲುಗೊಳಿಸಿರಬಹುದು. ತಮ್ಮದೇ ಸಮುದಾಯದ ಬೇರೆ ದೈವಗಳ ಸೇವೆಗೆ ತಮ್ಮ ದೈವದ ಅನುಮತಿ ಪಡೆಯುತ್ತಿರಬಹುದು.[೨] ಆದ್ದರಿಂದ ಬಾಗೆನಾಡಿನ ಹಾಲುಮತ ಸಮುದಾಯದಲ್ಲಿ ಡೊಳ್ಳು ಕಲಾವಿದರನ್ನು ದೈವ ಸಮಾನವೆಂದು ಪರಿಗಣಿಸುವ ಪರಿಪಾಠವಿದೆ. ಅವರ ಲೆಕ್ಕದಲ್ಲಿ ಹಾಡುವವರೆಲ್ಲರೂ ಹಾಲುಮತದ ದೈವಗಳೇ.

---

೨. ಕ್ಷೇತ್ರ ಕಾರ್ಯದಲ್ಲಿ ರಾಯಬಾಗ ತಾಲೂಕಿನ ಹಾಲುಮತ ದೇವಾಲಯಗಳನ್ನು ಸಂದರ್ಶಿಸಿದಾಗ ಕೆಲವೆಡೆ ಡೊಳ್ಳುಗಳನ್ನು ಇಡುವುದಕ್ಕೆ ಕಲಾವಿದರು ಹಾಡುವುದಕ್ಕೆ ಪ್ರತ್ಯೇಕ ಕೋಣೆಗಳಿರುವುದು ಕಂಡು ಬಂದಿತು. ಪ್ರತಿ ದೇವಾಲಯದಲ್ಲಿಯೂ ಹುಣ್ಣಿಮೆ, ಅಮವಾಸ್ಯೆ, ಜಾತ್ರೆ, ಉತ್ಸವಗಳಲ್ಲಿ ಹಾಡುವ ಮೇಳಗಳಿವೆ. ಅವರು ತಮ್ಮ ಕಲಾಪ್ರದರ್ಶನವನ್ನು ಆರಾಧನೆಯ ಒಂದು ವಿಧವೆಂದು ಪರಿಗಣಿಸಿ ಹಲವು ವರ್ಷಗಳಿಂದ ಮುನ್ನಡೆಸಿಕೊಂಡು ಬಂದವರು.

[illegible]

[illegible]

ಈ ಕಲಾವಿದರ ದೈವನಿಷ್ಠೆ ಮಾತ್ರ ಬಾಗೆನಾಡಿನಲ್ಲಿ ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿದೆ. ಡೊಳ್ಳು ಕಲಾವಿದರು ತಮ್ಮೂರಿನ ಹಾಲುಮತ ದೈವದ ಸ್ತುತಿಯೊಂದಿಗೆ ಹಾಡು ಆರಂಭಿಸಿ ಮುಕ್ತಾಯದ ಸಂದರ್ಭದಲ್ಲಿ ಎಲ್ಲ ದೈವಗಳನ್ನು ಸ್ಮರಿಸುವರು. ಡೊಳ್ಳು ಕಲಾವಿದರು ತಮ್ಮ ಅಸ್ಮಿತೆಯನ್ನು ಕಲೆಯ ಮೂಲಕ ಗುರುತಿಸಿಕೊಳ್ಳಲು ಇಚ್ಛಿಸುವುದಿಲ್ಲ. ಅವರದು ಸಮರ್ಪನಾ ಭಾವ. ತಮ್ಮ ಸ್ಥಾನ–ಮಾನಗಳ ಕುರಿತು ಯೋಚನೆ ಇಲ್ಲ. ತಮ್ಮ ಕಲೆಗೆ ಸಮಾಜದಲ್ಲಿ ಬೆಲೆ ಇದೆಯೆ? ಎಂದು ಪ್ರಶ್ನಿಸಿದಾಗ ಆ ಕುರಿತು ನಾವು ಯೋಚಿಸುವ ಪ್ರಮೇಯವೇ ಇಲ್ಲವೆಂದು ಬಹಳಷ್ಟು ಕಲಾವಿದರು ಉತ್ತರಿಸುತ್ತಾರೆ. ದೈವಾರಾಧನೆ ಹಿನ್ನೆಲೆಯ ಕಲೆಗಳ ಎಲ್ಲ ಕಲಾವಿದರ ಸಾಮಾನ್ಯ ಮನೋಭಾವವಿದು. ಅದರಲ್ಲೂ ಡೊಳ್ಳು ಕಲಾವಿದರು ಹೆಚ್ಚು ಭಾವಿಕರು. ಪ್ರಾಯಶಃ ಅವರ ಮುಗ್ಧತೆಯೇ ಇದಕ್ಕೆ ಕಾರಣವಾಗಿರಬೇಕು. ಅವರ ಸೇವೆ ಮುಗ್ಧ ಭಕ್ತಿ. ಮುಗ್ಧತೆ ಇದ್ದಲ್ಲಿ ಸ್ಥಾನ–ಮಾನಗಳ ಪ್ರಶ್ನೆ ಗೌಣವಾಗುವುದು. ಇದೇ ಧೋರಣೆ ಪುರವಂತರು, ಕರಡಿ ಕಲಾವಿದರಲ್ಲಿಲ್ಲ, ಗೊಂದಲಿಗರಲಿಲ್ಲ. ಆದರೆ ಹೆಚ್ಚು–ಕಡಿಮೆ ಭಜನಾ ಕಲಾವಿದರಲ್ಲಿ ಅಂತಹ ಭಾವನೆ ಇದೆ. ಅದು ಡೊಳ್ಳು ಕಲಾವಿದರಷ್ಟು ಪ್ರಬಲವಾಗಿಲ್ಲ.

ವೀರಗಾಸೆ, ಕರಡಿಮಜಲು, ಗೊಂದಲಿಗರ ಮೇಳಗಳು ಸಾಮಾನ್ಯವಾಗಿ ಗೌರವವನ್ನು ಅಪೇಕ್ಷಿಸುತ್ತವೆ. ಕೆಲವೊಮ್ಮೆ ಅವರು ಅಪೇಕ್ಷಿಸದಿದ್ದರೂ ದೈವಪೂಜೆಯ ಮೂಲಕ ಗೌರವವನ್ನು ಪಡೆದುಕೊಳ್ಳುತ್ತಾರೆ. ವಿಚಿತ್ರವೆಂದರೆ ದೈವಾರಾಧನೆ ಹಿನ್ನೆಲೆಯ ಎಲ್ಲ ಕಲೆಗಳ ಕಲಾವಿದರು ದೈವ ಸಮಾನವೆಂಬ ಮನೋಭಾವ ಇಂದಿಗೂ ಇಲ್ಲಿಯ ಸಮಾಜದಲ್ಲಿ ಆಳವಾಗಿ ಬೇರೂರಿದೆ.

"ಜೋಗತಿಯರ ಬಗ್ಗೆ ಸಮಾಜದಲ್ಲಿ ಜಿಗುಪ್ಸೆ. ಅವರನ್ನು ತುಂಬ ನಿಕೃಷ್ಟವಾಗಿ ಕಾಣಲಾಗುತ್ತದೆ. ಜಾನಪದ ಸಾಹಿತ್ಯದಲ್ಲಿ ಅವರನ್ನು ಹೇಯವಾಗಿ ಚಿತ್ರಿಸಲಾಗಿದೆ."[೩] ಹೀಗಿದ್ದರೂ ಚೌಡಿಕೆಯನ್ನು ಕೈಯಲ್ಲಿ ಹಿಡಿದ, ಜಗ ಅಥವಾ ಕೊಡವನ್ನು ತಲೆಯ ಮೇಲೆ ಹೊತ್ತುಕೊಂಡ ಜೋಗತಿ ಪೂಜನೀಯಳಾಗುತ್ತಾಳೆ.

---

೩.ಜಾತರಿಗೆ ಹೋದ ರಾಯ ಯಾತಕ ಬರಲಿಲ್ಲ। ಜಾತ ಸೂಳ್ಯಾರ ಬಿಡಲಿಲ್ಲ.

[illegible]

[illegible]

[illegible]

ಹಿಂದೆ ಉಲ್ಲೇಖಿಸಿದಂತೆ ಆದರೆ ಆ ಸಂದರ್ಭದಲ್ಲಿ ಮಾತ್ರ ಅವಳನ್ನು ಪೂಜಿಸಿ ನಮಸ್ಕರಿಸುವರು. ಅನಂತರ ಮತ್ತೆ ಅವಳಿಗೆ ಮೊದಲಿನದೇ ಸ್ಥಾನ. ಅಂದರೆ ಕಲೆಯ ನೆಲೆಯಲ್ಲಿ ಅವಳಿಗೆ ಯಾವ ಗೌರವವೂ ಇಲ್ಲ. ಆರಾಧನೆಯ ಒಂದು ಅಂಗವಾಗಿ ಅವಳಿಗೆ ತಾತ್ಕಾಲಿಕ ಗೌರವ ಸಿಗುತ್ತದೆ. ಇದರೊಂದಿಗೆ ಮತ್ತೊಂದು ಪ್ರಶ್ನೆ ಮುಖ್ಯವಾಗುತ್ತದೆ. ದೇವದಾಸಿಯರೆಲ್ಲ ಚೌಡಿಕೆಯನ್ನು ಹಿಡಿದುಕೊಂಡು ಹಾಡುವುದು ಆರಾಧನೆಯ ಹಿನ್ನೆಲೆಯಲ್ಲಿ ಅನಿವಾರ್ಯ. ಕವಿತೆ ಬರೆಯುವವರೆಲ್ಲ ಹೇಗೆ ಕವಿಗಳಲ್ಲವೋ ಹಾಗೆಯೇ ಹಾಡುವವರೆಲ್ಲ ಅಥವಾ ವಾದ್ಯಗಳನ್ನು ನುಡಿಸುವವರೆಲ್ಲ ಕಲಾವಿದರಲ್ಲ. ಎಲ್ಲ ಜೋಗತಿಯರು ಎಲ್ಲಮ್ಮನ ಹಾಡುಗಳನ್ನು ಹಾಡುತ್ತಿದ್ದರೂ ಅವರೆಲ್ಲರೂ ಕಲಾವಿದೆಯರಾಗುವುದು ಸಾಧ್ಯವಿಲ್ಲ. ಕಲೆಯಲ್ಲಿ ಒಂದು ಅನನ್ಯತೆ ಇರುತ್ತದೆ. ಆ ಅನನ್ಯತೆಯನ್ನು ಸಾಧಿಸಿದವರು ಮಾತ್ರ ಕಲಾವಿದರಾಗುತ್ತಾರೆ. ಅವರನ್ನು ಆ ಕಲೆಯ ಅಸ್ಮಿತೆಯಿಂದ ಗುರುತಿಸಲಾಗುತ್ತದೆ. ವೃತ್ತಿ ಕಲಾವಿದರ ಮತ್ತು ಆರಾಧನಾ ಕೇಂದ್ರಿತ ಕಲೆಗಳ ಕಲಾವಿದರಲ್ಲಿಯ ಕಲೆಗಾರಿಕೆಯನ್ನು ಗುರುತಿಸುವುದು ಸುಲಭವಲ್ಲ.

ಕವಿಗೆ ಹೇಗೆ ಯಶಸ್ಸು ಅನಿಯತವೋ ಹಾಗೆಯೇ ಕಲಾವಿದನಿಗೂ. ಇಂದು ದೇವದಾಸಿಯರನ್ನು ತುಚ್ಛವಾಗಿ ಸಮಾಜ ನೋಡುತ್ತಿದ್ದರೂ ಚೌಡಿಕೆಯ ಮೂಲಕ ಗೌರವವನ್ನು ಗಳಿಸಿದ ತಿಕೋಟಾದ ಗೌರವ್ವ ಮಾದರ, ಕೊಕಟನೂರದ ರಾಧಾಬಾಯಿಯಂತವರು ನಮ್ಮ ಕಣ್ಣು ಮುಂದೆ ಇದ್ದಾರೆ. ಚೌಡಿಕೆ ಕಲಾವಿದೆಯರಿಗೆ ಸಮಾಜದಲ್ಲಿ ಸಾಮಾಜಿಕ ಗೌರವವಿಲ್ಲವೆನ್ನುವುದು ಹೆಡ್ಡತನವಾದೀತು. ಅಂಥ ಕಲಾವಿದೆಯರು ಸದ್ಯ ಬಾಗೆನಾಡಿನಲಿಲ್ಲ. ಅದೇನಿದ್ದರೂ ಇನ್ನು ಮುಂದೆ ಈ ಕಲೆಗೆ ಭವಿಷ್ಯವಿಲ್ಲ. ಏಕೆಂದರೆ ಅವರಲ್ಲಿ ದೇವದಾಸಿ ಪದ್ಧತಿಯ ಅನಿಷ್ಟತೆಯ ಅರಿವು ಮೂಡಿದೆ. ಸರಕಾರದ ನಿರ್ಬಂಧ ಸರಿ ಎಂದು ಮನದಟ್ಟಾಗಿದೆ. ಈ ಅಂಶಗಳು ಸಂದರ್ಶನದ ಸಮಯದಲ್ಲಿ ತಿಳಿದುಬಂದಿವೆ.

ಮುಗಳಖೋಡದ ಚೌಡಿಕೆ ಕಲಾವಿದೆ ಜಯವಂತೆವ್ವ ಕಾಖಂಡಕಿ (ವಯಸ್ಸು ೬೫) ಸಂದರ್ಶನದ ಸಮಯದಲ್ಲಿ ಹೇಳಿದ ಆ ಮಾತುಗಳು ಮರೆಯುವಂತಿಲ್ಲ. ಎಲ್ಲ ಕಲಾವಿದರಿಗೆ ಕೇಳುವ ಹಾಗೆ 'ನಿಮ್ಮ ಕಲೆಯನ್ನು ನಿಮ್ಮ ಮಕ್ಕಳಿಗೆ ಮುಂದುವರಿಸಲು ಇಷ್ಟಪಡುವಿರಾ?' ಎಂದು ಕೇಳಿದಾಗ ಅವಳು ಸ್ಪಷ್ಟವಾಗಿ

ಇಲ್ಲವೆಂದು ನುಡಿದಳು. ಅದಕ್ಕೆ ಅವಳು ನೀಡಿದ ಕಾರಣ ಯೋಚನೀಯವಾಗಿತ್ತು. "ಈ ಕಲೆ ನಮ್ಮ ಮನೆತನದಲ್ಲಿ ನನ್ನೊಂದಿಗೆ ಕೊನೆಗೊಳ್ಳಬೇಕು. ಮೊದಲಿನ ಪರಿಸ್ಥಿತಿ ಉಳಿದಿಲ್ಲ. ಅನೇಕ ಬಗೆಯ ಹೊಸ ರೋಗಗಳು ಬಂದಿವೆ. ಇದಲ್ಲದೆ ಇದೊಂದು ಅನಿಷ್ಟ ಸಂಪ್ರದಾಯ. ಒಂದು ವಿಧದ ಶೋಷಣೆ. ನಮ್ಮ ಮಕ್ಕಳು ನಮ್ಮಂತೆ ತಿರಸ್ಕಾರಕ್ಕೆ ಒಳಗಾಗದೇ ಗೌರವದಿಂದ ಬದುಕಬೇಕು."

ಈಗ ದೇವದಾಸಿಯರ ಬಗ್ಗೆ ತಳವರ್ಗದ ಸಮುದಾಯದಲ್ಲಿಯೂ ಮನ್ನಣೆ ಉಳಿದಿಲ್ಲ. ತಳವರ್ಗದ ವಿದ್ಯಾವಂತರು, ಸಬಲರು ಅವರನ್ನು ತುಚ್ಛವಾಗಿ ಕಾಣುತ್ತಿದ್ದಾರೆ. ಹೀಗಾಗಿ ಎಲ್ಲಮ್ಮನ ಆರಾಧನೆಯ ಹಿನ್ನೆಲೆಯ ದೇವದಾಸಿ ಪದ್ಧತಿ ಆ ಮೂಲಕ ಚೌಡಿಕೆ ಹಾಡು, ಜೋಗತಿ ಕುಣಿತ ಮರೆಯಾಗುತ್ತಿವೆ. ಚೌಡಿಕೆಹಾಡು ಮತ್ತು ಜೋಗತಿಕುಣಿತ ಬೆಳಗಾವಿ ಜಿಲ್ಲೆಯ ವಿಶಿಷ್ಟ ಕಲೆಗಳು. ಅದರಲ್ಲೂ ಜೋಗತಿ ಕುಣಿತ ಬೆಳಗಾವಿ ಜಿಲ್ಲೆಯ ಕೊಡುಗೆ. ಇವು ಮರೆಯಾಗುತ್ತಿರುವ ಈ ಸಂದರ್ಭದಲ್ಲಿ ಅವುಗಳನ್ನು ಪೋಷಿಸಲೆಂದು ಹವ್ಯಾಸಿ ಕಲಾತಂಡಗಳು ಹುಟ್ಟಿಕೊಳ್ಳುತ್ತಿರುವುದನ್ನು ಗಮನಿಸಬೇಕು.

ಕಲೆ, ಆ ಕಲೆಯ ಹಿನ್ನೆಲೆ, ಅದಕ್ಕಿರುವ ಸಾಮಾಜಿಕ ಮನ್ನಣೆ ಮೊದಲಾದ ಅಂಶಗಳು ಕಲಾವಿದರ ಸ್ಥಾನ-ಮಾನಗಳನ್ನು ನಿರ್ಧರಿಸುತ್ತವೆ. ಈಗ ಬಾಗೆನಾಡಿನಲ್ಲಿ ಹೊಸ ಚೌಡಿಕೆ ಕಲಾವಿದರೇ ಇಲ್ಲ. ಇರುವವರೆಲ್ಲ ಹಳಬರು. ಆರಾಧನಾ ಕೇಂದ್ರಿತ ಜನಪದ ಕಲೆಗಳಿಗೆ ಕಲಾವಿದರ ಬರವಿಲ್ಲ. ಕಾಲಕಾಲಕ್ಕೆ ಹೊಸ ಕಲಾವಿದರು ಹುಟ್ಟುತ್ತಲೇ ಇರುತ್ತಾರೆ. ಹಾಲುಮತ ದೈವಗಳನ್ನು ಆರಾಧಿಸುವ ಡೊಳ್ಳು ಕೇಂದ್ರಿತ ವಿವಿಧ ಕಲೆಗಳ ಕಲಾವಿದರ ಸಂಖ್ಯೆ ಈ ಭಾಗದಲ್ಲಿ ಬೆಳೆಯುತ್ತಲೇ ಇದೆ. ಆಧುನಿಕರಣ, ಜಾಗತಿಕರಣ, ವಿದ್ಯಾಭ್ಯಾಸದ ನವೀಕರಣ ವೇಗ ಪಡೆದುಕೊಳ್ಳುತ್ತಿದ್ದರೂ ಆ ಕಲೆಗಳ ಮೇಲೆ ಯಾವ ಪರಿಣಾಮವೂ ಇಲ್ಲ. ಬದಲಾಗಿ ಆ ಕಲೆಗಳಲ್ಲಿ ಮತ್ತು ಕಲಾವಿದರಲ್ಲಿ ಹೊಸತನಗಳು ಕಾಣಿಸಿಕೊಂಡಿವೆ. ಈ ಕುರಿತು ಮುಂದಿನ ಅಧ್ಯಾಯದಲ್ಲಿ ವಿಸ್ತೃತವಾಗಿ ವಿಶ್ಲೇಷಿಸಲಾಗುವುದು. ಈಗ ಕುತ್ತು ಬಂದಿರುವುದು ಮಾತ್ರ ಚೌಡಿಕೆ ಕಲಾವಿದರಿಗೆ. ಇದರಿಂದಾಗಿ ಮುಂದೆ ಎಲ್ಲಮ್ಮದೇವಿಯ ಆರಾಧನಾ ಸ್ವರೂಪ ಬದಲಾಗಬಹುದು. ಒಟ್ಟಿನಲ್ಲಿ ಕಲಾವಿದರ ಸಾಮಾಜಿಕ ಸ್ಥಾನ-ಮಾನಗಳ ಆ

ಕಲೆಯ ಬೆಳವಣಿಗೆಯ ಮೇಲೆ ನೇರ ಪರಿಣಾಮ ಬೀರುತ್ತವೆ. ಬಾಗೆನಾಡಿನಲ್ಲಿ ಡೊಳ್ಳು ಕಲಾವಿದರ ಸಂಖ್ಯೆ ಬೆಳೆಯುವುದಕ್ಕೆ ಪರೋಕ್ಷವಾಗಿ ಇದುವೇ ಕಾರಣ. ಇಲ್ಲಿ ಹರಿಭಜನೆಯವರ ಸಂಖ್ಯೆಯು ವರ್ಷ-ವರ್ಷಕ್ಕೂ ಹೆಚ್ಚುತ್ತಿದೆ. ಇದಕ್ಕೂ ಅವರಿಗೆ ಸಿಗುತ್ತಿರುವ ಸಾಮಾಜಿಕ ಮನ್ನಣೆಯೇ ಕಾರಣ. ವಿಠ್ಠಲ ಭಕ್ತನಾಗುವವನು ಕೊರಳಲ್ಲಿ ತುಳಸಿ ಮಾಲೆ ಧರಿಸುತ್ತಾನೆ. ಅನಂತರ ಅಭಂಗ ಪಠಿಸುತ್ತಾನೆ. ಅಭಂಗಗಳನ್ನು ಹಾಡುವಾಗ ಕೈಯಲ್ಲಿ ತಾಳ ಹಿಡಿಯಬೇಕು, ಹರಿಭಜನೆಯಲ್ಲಿ ಪಾಲ್ಗೊಳ್ಳಬೇಕು. ಆ ಮೂಲಕ ಅವನು ತನಗರಿವಿಲ್ಲದಂತೆ ಒಬ್ಬ ಕಲಾವಿದನಾಗಿ ರೂಪಗೊಳ್ಳುತ್ತಾನೆ. ಕೊರಳಲ್ಲಿ ತುಳಸಿಮಾಲೆ, ಕರಗಳಲ್ಲಿ ತಾಳ ಅಥವಾ ಮೃದಂಗ ಇಲ್ಲವೆ ವೀಣೆ ಹಿಡಿದವನು ಜನರ ಕಣ್ಣುಗಳಲ್ಲಿ ಸಂತ. ಸಂತನ ಪಾದಗಳಿಗೆ ಜನರು ವಂದಿಸುತ್ತಾರೆ. ಅವರ ಭಾವದಲ್ಲಿ ಸಂತನೇ ಭಗವಂತ. ಹೀಗಾಗಿ ಸಂತನಾಗುವುದೆಂದರೆ ಮನುಷ್ಯ ಭಗವಂತನಾಗುವುದು ಎಂದರ್ಥ. ಅವರು ತಾವು ತಾಳ ಮೃದಂಗ ವೀಣೆಗಳೊಂದಿಗೆ ಹಾಡುವುದನ್ನು ಒಂದು ಕಲೆ ಎಂದು ಪರಿಗಣಿಸದೇ ಭಗವಂತನ ಸಾಕ್ಷಾತ್ಕಾರದ ಸಾಧನವೆಂದು ಭಾವಿಸುವರು. ಸಮಾಜ ಅದನ್ನು ಪುರಸ್ಕರಿಸುವದು. ಅಲ್ಲಿ ಕಲೆ ಗೌಣ; ಭಕ್ತಿ ಪ್ರಧಾನ. ಅಭಂಗ, ಕೀರ್ತನ, ನರ್ತನ ಮುಂತಾದ ಹರಿಭಕ್ತಿ ಕೇಂದ್ರಿತ ಕಲೆಗಳು ಈ ನಾಡಿನಲ್ಲಿ ಹೆಚ್ಚು ವ್ಯಾಪಕಗೊಳ್ಳುತ್ತಿವೆ. ಹರಿಭಜನೆ ಕಲಾವಿದರಿಗೆ ಸಿಗುವ ಸಾಮಾಜಿಕ ಮನ್ನಣೆ ಶಿವಭಜನೆ ಅಥವಾ ಜಿನಭಜನೆ ಕಲಾವಿದರಿಗೆ ಸಿಗುತ್ತಿಲ್ಲ. ಒಂದು ಲೆಕ್ಕದಲ್ಲಿ ಡೊಳ್ಳಿನ ಕಲಾವಿದರನ್ನು ಹೊರತುಪಡಿಸಿದರೆ ಎರಡನೇ ಬಹುದೊಡ್ಡ ಕಲಾ ಸಮುದಾಯ ಶಿವಭಜನೆ. ಅವರು ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ, ಸರ್ಪಭೂಷಣ ಶಿವಯೋಗಿ, ಶಿಶುನಾಳ ಷರೀಫ್, ಕಡಕೋಳ ಮಡಿವಾಳಪ್ಪ ಮೊದಲಾದ ತತ್ವಪದಕಾರರ ತತ್ವಪದಗಳನ್ನು ಹಾಡುವರು. ಊರಿಗೆ ನಾಲ್ಕೈದು ಶಿವಭಜನಾ ಮೇಳಗಳಿವೆ. ಇವರಿಗೆ ಹರಿಭಜನೆ ಕಲಾವಿದರಿಗೆ ಸಿಗುವ ಧಾರ್ಮಿಕ ಮಾನ್ಯತೆಯಾಗಲೀ ಸಾಮಾಜಿಕ ಗೌರವವಾಗಲೀ ಸಿಗುವುದಿಲ್ಲ. ಜನರು ಇವರನ್ನು ಹರಿಭಕ್ತರೆಂದು ಪರಿಗಣಿಸುತ್ತಾರೆ. ಇವರನ್ನು ಕಲಾವಿದರೆಂದು ತಿಳಿಯುತ್ತಾರೆ.

ಧಾರ್ಮಿಕ ಹಿನ್ನೆಲೆಗಳ ಕಲೆಗಳ ಕಲಾವಿದನ ನೈತಿಕ ಮತ್ತು ಧಾರ್ಮಿಕ ಆಚರಣೆಗಳು ಆತನ ಸಾಮಾಜಿಕ ಸ್ಥಾನ-ಮಾನಗಳಿಗೆ ಮಾನದಂಡಗಳಾಗುತ್ತವೆ.

ಹರಿಭಜನಾ ಕಲಾವಿದರು ತಾವು ಹಾಡುವ ಹಾಡುಗಳ ತತ್ವಗಳನ್ನು ತಮ್ಮ ಬದುಕಿನಲ್ಲಿಯೂ ಅಳವಡಿಸಿಕೊಂಡಿರಬೇಕೆಂಬ ನಿಯಮವಿದೆ. ಹಾಗಿಲ್ಲದಿದ್ದರೆ ಆತ 'ಮಾಳ್ಕರಿ'ಯಾಗುವುದಿಲ್ಲ. ಅವನಿಗೆ ಕುಡಿತ, ಜೂಜು, ಪರಸ್ತ್ರೀಸಂಗ, ಹಿಂಸೆ ನಿಷಿದ್ಧ. ಈ ನಿಬಂಧನೆಗಳು ಹರಭಜನಾ ಕಲಾವಿದರಿಗೆ ಇಲ್ಲ. ಕುಡಿದು ಹಾಡುವ ಶಿವಭಜನಾ ಕಲಾವಿದರುಂಟು. ಆದರೆ ಕುಡಿದು ಅಭಂಗ ಅನ್ನುವ ಮಾಳ್ಕರಿಗಳು ಇಲ್ಲವೇ ಇಲ್ಲ ಎನ್ನುವಷ್ಟು ಅಪರೂಪ. ಇದರಿಂದ ಕಲಾವಿದರ ಸಾಮಾಜಿಕ ಸ್ಥಾನ-ಮಾನಗಳು ಅವರ ವೈಯಕ್ತಿಕ ಬದುಕಿನ ನಡಾವಳಿಗಳನ್ನು ಅವಲಂಬಿಸಿವೆ.

ಶಿವಭಜನೆ, ಜಿನಭಜನೆ ಮೇಳಗಳು ಸಂಭಾವನೆಯನ್ನು ಗೊತ್ತುಮಾಡಿ ಕಲೆಯನ್ನು ಪ್ರದರ್ಶಿಸುತ್ತವೆ. ಹರಿಭಜನೆಯವರು ಎಂದಿಗೂ ಸಂಭಾವನೆಗಾಗಿ ಹಾಡುವುದಿಲ್ಲ. ಅವರದೇನಿದ್ದರೂ ಶುದ್ಧ ಆರಾಧನೆ. ಅವರು ಸಂಭಾವನೆಯನ್ನು ದಕ್ಷಿಣೆಯ ರೂಪದಲ್ಲಿ ಸ್ವೀಕರಿಸುತ್ತಾರೆ. ಅದಕ್ಕೆ ಕಟ್ಟುನಿಟ್ಟುಗಳಿರುವುದಿಲ್ಲ. ಶಿವಭಜನಾ ಕಲಾವಿದರ ಸಂಭಾವನೆ ಅಂಥಹ ಆಕರ್ಷಕವೇನಲ್ಲ. ಅವರೂ ಹವ್ಯಾಸಿಗಳೇ. ಹಣ ಗಳಿಕೆಯ ಉದ್ದೇಶಕ್ಕಾಗಿ ಮೇಳಗಳನ್ನು ಕಟ್ಟಿಕೊಂಡಿರದಿದ್ದರೂ ಸಂಭಾವನೆಯ ಮೇಲೆ ಒಂದಿಷ್ಟು ಆಸೆ ಇರುತ್ತದೆ. ಈ ಎಲ್ಲ ಅಂಶಗಳನ್ನು ಪರಿಗಣಿಸಿ ಏನೋ ಎಂಬಂತೆ ಸಮಾಜ ಅವರನ್ನು ಹರಿಭಕ್ತರಂತೆ ಪರಿಗಣಿಸುವುದಿಲ್ಲ. ಜಿನಭಜನಾ ಕಲಾವಿದರ ಸ್ಥಾನ-ಮಾನಗಳು ಶಿವಭಜನಾ ಕಲಾವಿದರಿಗಿಂತ ಭಿನ್ನವಾಗಿಲ್ಲ. ಅವರಿಬ್ಬರೂ ಒಂದೇ ದೋಣಿಯ ಎರಡು ಹುಟ್ಟುಗಳು. ಶಿವಭಜನಾ ಮೇಳದಲ್ಲಿ ತಳವರ್ಗದ ಕಲಾವಿದರು ಸೇರಬಹುದು. ಅವರೇ ಮೇಳಗಳನ್ನು ಕಟ್ಟಬಹುದು. ಹಿಡಕಲ್ಲದಲ್ಲಿ ಮಾದಿಗರೇ ಕಟ್ಟಿದ ಒಂದು ಶಿವಭಜನಾ ಮೇಳವಿದೆ. ಮುಗಳಖೋಡ, ಹಂದಿಗುಂದ, ಹಾರೂಗೇರಿ, ಅಲಕನೂರ, ಅಳಗವಾಡಿ ಮುಂತಾದ ಗ್ರಾಮಗಳಲ್ಲಿ ಪರಿಶಿಷ್ಟರ ಭಜನಾ ಮೇಳಗಳಿವೆ. ಆದರೆ ಜಿನಭಜನಾ ತಂಡಗಳಲ್ಲಿರುವವರು ಮಾತ್ರ ಜೈನರು. ಹರಿಭಜನಾ ಕಲಾವಿದರಲ್ಲಿಯೂ ಪರಿಶಿಷ್ಟಜಾತಿ ಮತ್ತು ಜನಾಂಗದವರಿದ್ದಾರೆ. ಅಲ್ಲಿ ಅವರ ಜಾತಿ ಗೌಣವಾಗಿ ಕೇವಲ ಭಕ್ತಿ ಪುರಸ್ಕೃತವಾಗುತ್ತದೆ. ದಲಿತನಾಗಿದ್ದರೂ ಮಾಲೆ ಧರಿಸಿದಾಗ ಭಾಗವತನಾಗುತ್ತಾನೆ. ಜನ ಅವನನ್ನು ಪಾದಮುಟ್ಟಿ ನಮಸ್ಕಾರ ಮಾಡುತ್ತಾರೆ.

ದೈವಾರಾಧನಾ ಕೇಂದ್ರಿತ ಎಲ್ಲ ಕಲೆಗಳ ಕಲಾವಿದರಿಗೂ ಒಂದೇ ವಿಧದ ಸಾಮಾಜಿಕ ಗೌರವ ಸಿಗುವುದಿಲ್ಲ. ಒಂದು ಕಲೆಯನ್ನು ಧಾರ್ಮಿಕ ಕ್ರಿಯೆಯಾಗಿ ಪರಿಭಾವಿಸಿದಾಗಲೂ ಹಲವು ತಾರತಮ್ಯಗಳು ಕಾಣಿಸಿಕೊಳ್ಳುತ್ತವೆ. ತನ್ನ ಕಲೆ ಧಾರ್ಮಿಕ ಕ್ರಿಯೆ ಎಂದು ಪರಿಭಾವಿಸುವ ಡೊಳ್ಳಿನ ಹಾಡುಗಾರನಿಗೂ ಕರಡಿಮಜಲಿನವರಿಗೂ ವ್ಯತ್ಯಾಸವಿದೆ. ಗುಗ್ಗುಳ, ಮುಂತಾದ ವೀರಭದ್ರ ಆರಾಧನೆಯ ಹಿನ್ನೆಲೆಯಲ್ಲಿ ಅಗತ್ಯವಾಗಿ ಪ್ರದರ್ಶಿತಗೊಳ್ಳುವ ಕಲೆ ಕರಡಿವಾದನ. ಬಾಗೆನಾಡಿನಲ್ಲಿ ಈಗ ೧೩ ಕರಡಿ ಮೇಳಗಳಿವೆ. ಪಂಚಾಳರ ಆರಾಧ್ಯದೈವ ಕಾಳಿ. ಕಾಳಿ ಎಂದರೆ ಶಿವೆ. ವೀರಭದ್ರ ಶಿವ. ಕರಡಿ ಶಿವ-ಶಿವೆಯರ ಆರಾಧನಾ ವಾದ್ಯ. ಆದರೆ ಕರಡಿ ಮೇಳದವರು ಸಂಭಾವನೆಯನ್ನು ಮುಂಚಿತವಾಗಿ ನಿರ್ಧರಸಿಕೊಳ್ಳದೇ ಪ್ರದರ್ಶನ ನೀಡುವುದಿಲ್ಲ. ಅಂದರೆ ಒಬ್ಬ ಡೊಳ್ಳು ಕಲಾವಿದನಿಗೂ ಕರಡಿ ಕಲಾವಿದನಿಗೂ ಇರುವ ಮನೋಭಾವದ ವ್ಯತ್ಯಾಸವಿದು. ಪ್ರಾಯಶಃ ಕಲಾವಿದರ ಶ್ರದ್ಧೆ, ಮುಗ್ಧತೆಗಳು ಅವರ ಸಾಮಾಜಿಕ ಗೌರವವನ್ನು ಪರೋಕ್ಷವಾಗಿ ನಿರ್ಧರಿಸುತ್ತವೆ. ಹಾಲುಮತದ ಕಲಾವಿದನೊಬ್ಬ ತನ್ನ ಹಣೆಗೆ ಭಂಡಾರ ಲೇಪಿಸಿಕೊಳ್ಳದೇ ತನ್ನ ಕಲಾ ಪ್ರದರ್ಶನವನ್ನು ಆರಂಭಿಸುವುದಿಲ್ಲ ಮತ್ತು ಮುಗಿಸುವುದಿಲ್ಲ. ಇದುವೇ ದೈವ ಶ್ರದ್ಧೆ.

**"ಬಾರಿವುಳ್ಳವನೊ ಏನೆನ್ನ ಭಕ್ತ ಏನಂತ ಹೇಳುತ್ತೈದಾನೊ**
**ಇಂದ ಹ್ವಾದರ ಏನ ನನ್ನ ಗುರುವ ನಾಳಿಗಿ ಹೋಗರಂತಾನೊ**
**ಮುಂದಿನ ವಾರ ಬಂಡಾರ ಬಂದಾವ ನಿಂದರಾಕ ನಾವ್ ಬಾರದೊ"**

ಕಲಾ ಪ್ರದರ್ಶನದ ಆಮಂತ್ರಣವನ್ನು ಭಂಡಾರದ ಮೂಲಕ ದೈವೀಕರಿಸಿ ಸ್ವೀಕರಿಸುವುದು ಹಾಲುಮತ ಕಲಾವಿದರ ಶ್ರದ್ಧೆ. ಅವರ ಪ್ರದರ್ಶನವೇ ಒಂದು ಓಲಗ. ಕಲಾ ಪ್ರದರ್ಶನದ ಮುಕ್ತಾಯವನ್ನು 'ಓಲಗದ ಭಂಡಾರ ಒಡೆಯುವುದು' ಎಂದು ಕರೆಯುತ್ತಾರೆ."[೪] ಕರಡಿ ಕಲಾವಿದರಲ್ಲಿ ಈ ಪ್ರಮಾಣದ ಧರ್ಮನಿಷ್ಠೆ ಕಾಣುವುದು ಅನುಮಾನ. ಆದ್ದರಿಂದ ಅಲ್ಲಿ ಸಾಮಾಜಿಕ ಗೌರವಕ್ಕಿಂತ

---

೪. ಡಾ. ನಿಂಗಣ್ಣ ಸಣ್ಣಕ್ಕಿ : ಡೊಳ್ಳು ಕಲೆ-ಮೇಳ (ಲೇ) : ಕುರುಬ ಜನಪದ, ಪುಟ : ೯೯

[illegible]

[illegible]

[illegible]

[illegible]

ಸಂಭಾವನೆ ಮುಖ್ಯವಾಗುತ್ತದೆ. ಹಂದಿಗುಂದದ ಶಂಕ್ರೆಪ್ಪ ಮಲ್ಲಪ್ಪ ಪಾಟೀಲರ 'ಶ್ರೀಮಲ್ಲಿಕಾರ್ಜುನ ಜಾನಪದ ಕರಡಿ ಮಜಲಿ'ಗೆ ದಿಲ್ಲಿಯಲ್ಲಿ ನಡೆಯುವ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭಾಗವಹಿಸುವ ಅವಕಾಶ ಸಿಕ್ಕಿದೆ. ಶಂಕ್ರೆಪ್ಪ ರಾಜ್ಯಮಟ್ಟದ ಕರಡಿ ಕಲಾವಿದರು. ಅಕಾಡೆಮಿ ಬಹುಮಾನ, ಸರಕಾರದ ಬಹುಮಾನ, ಪ್ರಶಸ್ತಿ, ಪುರಸ್ಕಾರ, ಸತ್ಕಾರಗಳನ್ನು ಪಡೆದವರು. ಸರಕಾರಿ ಗೌರವವನ್ನು ಸಾಮಾಜಿಕ ಗೌರವವೆಂದು ಹೊರನೋಟದಲ್ಲಿ ಒಪ್ಪಿಕೊಳ್ಳಬಹುದಾದರೂ ಆಳವಾಗಿ ಆಲೋಚಿಸಿದರೆ ಅದರ ಸ್ವರೂಪವೇ ಬೇರೆ. ಸಾಮಾಜಿಕ ಮನ್ನಣೆ ಸರಕಾರಿ ಗೌರವಕ್ಕಿಂತ ಭಿನ್ನವಾದದು. ಅಕಾಡೆಮಿ ಬಹುಮಾನಗಳು, ಸರಕಾರಿ ಪ್ರಶಸ್ತಿಗಳು ಶಿಷ್ಟ ಸಮಾಜದ ಪುರಸ್ಕಾರಗಳು. ಅವು ಮಾಶಾಸನಕ್ಕೆ, ಸರಕಾರಿ ಸೌಲಭ್ಯಗಳಿಗೂ ಮಾನದಂಡಗಳು ಆಗಬಹುದು. ಇವೆಲ್ಲಕ್ಕಿಂತಲೂ ಕಲಾವಿದನನ್ನು ಕಂಡು ಆತನ ಪ್ರದರ್ಶನವನ್ನು ಅನುಭವಿಸಿ ಆತನಿಗೆ ಅರ್ಪಿಸುವ ಹೃದಯ ತುಂಬಿದ ಗೌರವ ಅಪೂರ್ವವಾದುದು. ಇದನ್ನೇ ರಾಷ್ಟ್ರಕವಿ ಜಿ. ಎಸ್. ಎಸ್. 'ಎದೆ ತುಂಬಿ ಹಾಡುವೆನು' ಕವಿತೆಯಲ್ಲಿ ಹೇಳಿದುದು.

**"ಅಂದಿನಂತೆಯೇ ಕುಳಿತು ಕೇಳುವಿರಿ ಇಂದು**
**ಇದುವೇ ಬಹುಮಾನ.**
**ಹಾಡು ಹಕ್ಕಿಗೆ ಬೇಕೇ ಬಿರುದು ಸಮ್ಮಾನ?."**

ಬಾಗೆನಾಡಿನಲ್ಲಿ ಕೇವಲ ೫ ಗೊಂದಲಿಗರ ಮೇಳಗಳಿವೆ. ನಾಲ್ಕು ಮರಾಠಾ ಗೊಂದಲಿಗರದು, ಒಂದು ಲಿಂಗಾಯತರದು. ಬೇರೆಡೆಗಳಲ್ಲಿ ಬ್ರಾಹ್ಮಣ ಗೊಂದಲಿಗರಿದ್ದಾರೆ, ಇಲ್ಲಿಲ್ಲ. ಅವರೆಲ್ಲರು ಶಕ್ತಿ ಉಪಾಸಕರು. ಶಕ್ತಿ ಆರಾಧನೆಯಲ್ಲಿ ಇವರೇ ಪುರೋಹಿತರು. ಆ ಸಂದರ್ಭದಲ್ಲಿ ಇವರಿಗೂ ಪಾದಮುಟ್ಟಿ ನಮಸ್ಕರಿಸುತ್ತಾರೆ. ತಮ್ಮನ್ನು ತಾವು ತಾಯ್ತನದ ರೂಪದಲ್ಲಿ ಭಾವಿಸಿಕೊಳ್ಳುವ ಗೊಂದಲಿಗರು ಭಕ್ತರಿಂದ ಕಾಡಿ-ಬೇಡಿ ಒಂದಿಷ್ಟು ಕಾಣಿಕೆ ಪಡೆದುಕೊಳ್ಳುತ್ತಿದ್ದರು. ಈಗ ಗೊಂದಲಿಗರು ಕರಡಿ ಮೇಳದವರಂತೆ ಮುಂಚಿತವಾಗಿಯೇ ಸಂಭಾವನೆ ನಿರ್ಧರಿಸಿ, ಗೊಂದಲ ಹಾಕಲಿಕ್ಕೆ ಹೋಗುವ ಪದ್ಧತಿ ರೂಢಿಸಿಕೊಂಡಿರುವುದು

[illegible]

[illegible]

[illegible]

ಸದಾಶಿವ ಗೊಂದಳಿಯವರ ಸಂದರ್ಶನದಿಂದ ತಿಳಿದು ಬರುತ್ತದೆ. ದಕ್ಷಿಣೆ ಸಂಭಾವನೆಯಾಗಿ ಪರಿವರ್ತಿತಗೊಳ್ಳುತ್ತಿದೆ. ದಕ್ಷಿಣೆ ಐಚ್ಛಿಕವಾದುದು; ಸಂಭಾವನೆ ಕಡ್ಡಾಯವಾದುದು. ದಕ್ಷಿಣೆಯಲ್ಲಿ ಧರ್ಮದ ದಾಕ್ಷಿಣ್ಯವಿರುತ್ತದೆ. ಸಂಭಾವನೆಯಲ್ಲಿ ವ್ಯವಹಾರದ ಚೌಕಾಶಿಯಿರುತ್ತದೆ. ದಕ್ಷಿಣೆ ಸಂಭಾವನೆಯಾಗಿ ಪರಿವರ್ತಿತಗೊಳ್ಳುವುದು ಒಂದು ಸಾಮಾಜಿಕ ಬದಲಾವಣೆ. ದಕ್ಷಿಣೆ ಹಿಂದಿರುವ ಪೂಜ್ಯಭಾವನೆ ಸಂಭಾವನೆಯನ್ನು ಒಪ್ಪಿಸುವುದರಲ್ಲಿ ಇರುವುದಿಲ್ಲ.

ಗುಗ್ಗುಳ ತೆಗೆಯುವುದು, ಗೊಂದಲ ಹಾಕುವುದು, ವೀರನನ್ನು ಪೂಜಿಸುವುದು ಮುಂತಾದವು ಇತ್ತೀಚಿನ ದಿನಗಳಲ್ಲಿ ಅನಿವಾರ್ಯವಾದ ಧಾರ್ಮಿಕ ಕ್ರಿಯೆಗಳು. ಗುಗ್ಗಳ ತೆಗೆಯಲು ಪುರವಂತರು ಬೇಕು, ಗೊಂದಲ ಹಾಕಲು ಗೊಂದಲಿಗರು ಬೇಕು. ಗೊಂದಲ, ಗುಗ್ಗಳ ಕೇವಲ ಸಾಂಕೇತಿಕ ಪೂಜೆಗೆ ಮಿತಗೊಂಡಿವೆ. ಈ ಬದಲಾವಣೆ ಸಹ ಗೊಂದಲಿಗರ ಮತ್ತು ಪುರವಂತರ ಸಾಮಾಜಿಕ ಮನ್ನಣೆಯ ಮೇಲೆ ಪರಿಣಾಮ ಬೀರಿದೆ.

ಮೊಹರಂ ಉತ್ತರ ಕರ್ನಾಟಕದ ಪ್ರಮುಖ ಸಾಂಸ್ಕೃತಿಕ ಆಚರಣೆಗಳಲ್ಲೊಂದು. ಮಹಾರಾಷ್ಟ್ರದ ಗಡಿಗೆ ಹೊಂದಿಕೊಂಡಿರುವ ರಾಯಬಾಗ ತಾಲೂಕಿನ ತುಂಬೆಲ್ಲ ಮೊಹರಂ ಆಚರಣೆ ವಿಜೃಂಬಣೆಯಿಂದ ಆಚರಿಸಲ್ಪಡುತ್ತದೆ. ಹಳ್ಳಿ-ಹಳ್ಳಿಗಳಲ್ಲೂ ಕರ್ಬಲ್ ತಂಡಗಳಿದ್ದವು. ಅಲಾವಿ ಕೊಂಡಗಳ ಸುತ್ತ ಹೆಜ್ಜೆ ಹಾಕುವಾಗ ಕರ್ಬಲ್ ಹಾಡುಗಳನ್ನು ಹೇಳುವುದು ಪದ್ಧತಿ. ಮೊಹರಂ ಮುಸ್ಲಿಂರ ಹಬ್ಬವಾಗಿದ್ದರೂ ಅದರಲ್ಲಿ ಕರ್ಬಲ್ ಹಾಡುವವರು ಹೆಚ್ಚಾಗಿ ಮುಸ್ಲಿಮೇತರರು. ಬಾಗೆನಾಡಿನ ಡೊಳ್ಳಿನ ಹಾಡುಗಾರರು ಕರ್ಬಲ್ ಹಾಡುತ್ತಿರುವುದನ್ನು ಈಗಲೂ ಕಾಣುತ್ತೇವೆ. ಒಬ್ಬ ಹಾಡುಗಾರನಿಗೆ ಹಾಡು ಮುಖ್ಯವಾಗುವುದಿಲ್ಲ; ಹಾಡುವ ಕ್ರಿಯೆ ಮುಖ್ಯವಾಗುತ್ತದೆ. ನಿಲಜಿ, ಮೊರಬ, ಹಾರೂಗೇರಿ, ಮುಗಳಖೋಡ, ಹಿಡಕಲ್ಲ ಮುಂತಾದ ಗ್ರಾಮಗಳ ಕರ್ಬಲ್ ಮೇಳಗಳಲ್ಲಿ ಹೆಚ್ಚು ಕಲಾವಿದರಿರುವುದು ಹಾಲುಮತದವರು.

ಕರ್ಬಲ್ ಹಾಡುಗಾರರ ಸಾಮಾಜಿಕ ಗೌರವವನ್ನು ಧರ್ಮದ ಮೂಲಕ ಗುರುತಿಸುವುದು ಸೂಕ್ತವೆನಿಸುವುದಿಲ್ಲ. ಒಂದು ಕಾಲಕ್ಕೆ ಮೊಹರಂ ಮುಸ್ಲಿಂ ಹಬ್ಬವೆಂದು ಗುರುತಿಸಲಾಗುತ್ತಿತ್ತು. ಇಂದು ಮುಸ್ಲಿಂರೇ ಖುದ್ದಾಗಿ ಮೊಹರಂ ಆಚರಣೆಯನ್ನು ವಿರೋಧಿಸುತ್ತಿದ್ದಾರೆ. ಇಂತಹ ವಿರೋಧದ ನಡುವೆಯೂ ಹಿಂದೂ–ಮುಸ್ಲಿಂ ಧರ್ಮದ ಪ್ರತೀಕವಾಗಿ ಮೊಹರಂ ಆಚರಣೆ ಮುನ್ನಡೆದಿದೆ. ಪಟ್ಟಣಗಳಲ್ಲಿ ಆಚರಣೆಯ ಕಾವು ಇಳಿದಿದೆ. ಹಳ್ಳಿಗಳಲ್ಲಿ ಇನ್ನೂ ಜೀವಂತವಾಗಿದೆ. ಕರ್ಬಲ್ ಹಾಡುಗಾರರನ್ನು ಹಿಂದೂ–ಮುಸ್ಲಿಂರೆಂದು ಪ್ರತ್ಯೇಕಿಸಲಾಗದು. ಅವರಲ್ಲಿ ಭೇದ–ಭಾವಗಳಿಲ್ಲದಿದ್ದರೂ ಧರ್ಮಕೇಂದ್ರಿತ ಗೌರವ ಅವರಿಗೆ ಸಿಗುವುದಿಲ್ಲ. ಹಾರೂಗೇರಿಯ ಕರ್ಬಲ್ ಹಾಡುಗಾರ ಅಪ್ಪಾಸಾಬ ಆಲಗೂರ ಹೇಳುವಂತೆ 'ಸಾಮಾಜಿಕ ಗೌರವದ ಸ್ವರೂಪ ಕಲೆಯಿಂದ ಕಲೆಗೆ ಭಿನ್ನವಾಗಿರುತ್ತದೆ. ಹರಿಭಜನೆ ಕಲಾವಿದರಿಗೆ ಕಾಲಿಗೆ ಬಿದ್ದು ನಮಸ್ಕರಿಸಿ ಗೌರವಿಸುತ್ತಾರೆ. ಶಿವಭಜನೆ ಕಲಾವಿದರಿಗೆ ವಿಭೂತಿ ಹಚ್ಚಿ ಗೌರವಿಸುತ್ತಾರೆ. ಹೀಗೆ ಗೌರವದ ರೂಪಗಳು ವಿಭಿನ್ನ. ಕರ್ಬಲ್ ಹಾಡುಗಾರನಿಗೆ ಇಂತಹ ಗೌರವ ಸಿಗುವುದಿಲ್ಲ. ಬದಲಾಗಿ ಸಹೃದಯರ ಅಂತಃರಂಗ ಪ್ರೇರಿತ ಉತ್ಸಾಹದ ಉಲುಹುಗಳೇ ಸಾಮಾಜಿಕ ಗೌರವವನ್ನುಂಟು ಮಾಡುತ್ತವೆ' ಎನ್ನುತ್ತಾರೆ. ಅವರು ಕರ್ಬಲ್ ಹಾಡು, ಅಲಾವಿ ಕುಣಿತ, ದಂಗಲ್ ಮೇಳಗಳ ಸ್ಪರ್ಧೆಗಳನ್ನು ಹಲವಾರು ವರ್ಷ ಸಂಯೋಜಿಸಿದವರು. ಅವರ ಅನುಭವದ ಮಾತುಗಳನ್ನು ಒಪ್ಪಬೇಕಾಗುತ್ತದೆ. ಈಗ ಪೈಗಂಬರ ಜನ್ಮಮಹೋತ್ಸವ, ಅಲಾವಿ ಉತ್ಸವ ಮೊದಲಾದ ಪ್ರಸಂಗಗಳಲ್ಲಿ ಕರ್ಬಲ್ ಸ್ಪರ್ಧೆಗಳು ಜರುಗುತ್ತವೆ. ಸಂಭಾವನೆಯೋ ಬಹುಮಾನವೋ ಆ ಮೇಳಗಳಿಗೆ ಸಲ್ಲುತ್ತದೆ. ಮೂಲತಃ ನಿರಪೇಕ್ಷ ಗೌರವ–ಸಂಭಾವನೆ–ಬಹುಮಾನಗಳ ಜನಪದ ಕಲಾವಿದರ ಹವ್ಯಾಸದ ಶುದ್ಧ ಕಲಾ ಸಂವಹನ ಮಾಧ್ಯಮ ಕರ್ಬಲ್ ಹಾಡುಗಾರಿಕೆ.

[illegible]

**೨. ವೃತ್ತಿ ಕಲಾವಿದರು :**

ಜಾನಪದ ಜಗತ್ತಿನಲ್ಲಿ ಕಲೆಗಳನ್ನೇ ಉಪಜೀವನಕ್ಕೆ ಬಳಸಿಕೊಂಡು ಬದುಕು ಸಾಗಿಸುವ ಹಲವು ಸಮುದಾಯಗಳಿವೆ. ಅವರನ್ನು ಸಾಮಾನ್ಯವಾಗಿ ವೃತ್ತಿ ಕಲಾವಿದರೆಂದು ಕರೆಯಲಾಗುವುದು. ವೃತ್ತಿ ಕಲಾವಿದರನ್ನು ಸ್ಥೂಲವಾಗಿ ಎರಡು ವಿಭಾಗಗಳಲ್ಲಿ ವರ್ಗೀಕರಿಸಬೇಕಾಗುತ್ತದೆ. ಕುಶಲ ಕಲೆಗಾರರದು ಒಂದು ವರ್ಗವಾದರೆ ಮತ್ತೊಂದು ಪ್ರದರ್ಶನ ಕಲೆಗಳ ಕಲಾವಿದರದು. ಬಡಿಗ, ಕಮ್ಮಾರ, ಕುಂಬಾರ, ಕಂಚಗಾರ, ಪತ್ತಾರ, ನೇಕಾರ, ಮೇಧಾರ, ಸಮಗಾರ ಮೊದಲಾದ ವೃತ್ತಿಗಳ ಮೂಲಕ ಬದುಕು ಕಟ್ಟಿರುವವರು ಕುಶಲ ಕಲಾವಿದರು. ಅವರ ಸಮುದಾಯ ದೊಡ್ಡದು. ಭಾರತದ ಪ್ರತಿಯೊಂದು ಹಳ್ಳಿಯಲ್ಲಿಯೂ ಈ ವೃತ್ತಿ ಕಲಾವಿದರು ನೆಲೆಸಿರುವರು. ಇವರು ಭಾರತೀಯ ಬದುಕಿನ ಒಂದು ಭಾಗ. ವ್ಯವಸಾಯ ವೃತ್ತಿಗೌರವವನ್ನು ಪಡೆದುಕೊಂಡ ಮೇಲೆ ಅದಕ್ಕೆ ಪೂರಕವಾಗಿ ಕುಶಲ ಕಲಾವಿದರು ನಿಂತುಕೊಂಡರು. ಇವರ ಕಲೆಗಳ ಕುರಿತು ಪ್ರತ್ಯೇಕ ಅಧ್ಯಯನವೇ ಬೇಕು. ಅದರ ವ್ಯಾಪ್ತಿ ವಿಶಾಲವಾಗಿರುವುದರಿಂದ ಪ್ರಸ್ತುತ ಪ್ರಬಂಧದಲ್ಲಿ ಸೇರಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಕೃಷ್ಣಾ ತೀರವನ್ನು ಮೇರೆಯಾಗಿ ಹೊಂದಿರುವ ಬಾಗೆನಾಡಿನ ಪ್ರಮುಖ ವ್ಯವಸಾಯವೇ ಕೃಷಿ. ಕೃಷಿ ಪರಿಭಾಷೆಯಲ್ಲಿ ಈ ವೃತ್ತಿ ಕಲಾವಿದರನ್ನು ಆಯಗಾರರು ಎಂದು ಕರೆಯಲಾಗುತ್ತದೆ. ಆಯಗಾರರು "ಗ್ರಾಮೀಣ ಸಮಾಜ ವ್ಯವಸ್ಥೆಯಲ್ಲಿ ಊರಿನ ರೈತರಿಗೆ ವಿವಿಧ ರೀತಿಯ ಸೇವೆಯನ್ನು ಮಾಡಿಕೊಡುತ್ತಿದ್ದವರು. ಅದಕ್ಕೆ ಪ್ರತಿಫಲವಾಗಿ ವರ್ಷಕ್ಕೊಮ್ಮೆ ಆಯ ಪಡೆಯತ್ತಿದ್ದವರು. ತಮ್ಮ ದುಡಿಮೆಗೆ ಧಾನ್ಯರೂಪದ ಪ್ರತಿಫಲ ಇವರಿಗೆ ದೊರೆಯುತ್ತಿತ್ತು. ಅಗಸ, ಕ್ಷೌರಿಕ, ತಳವಾರ, ಕುಂಬಾರ, ಕಮ್ಮಾರ, ಮಣೆಗಾರ, ತೋಟಿ, ಪೂಜಾರಿ, ಚಮ್ಮಾರ, ಗೊಲ್ಲಗೌಡ, ಈಡಿಗಗೌಡ ಮುಂತಾದವರು ಆಯಗಾರರ ಗುಂಪಿಗೆ ಸೇರುತ್ತಾರೆ. ಆಯಗಾರರೆಲ್ಲ ತಾವು ಕೆಲಸ ಮಾಡಿಕೊಟ್ಟ ಕಣಗಳ ಒಳಗೆ ಹೋಗಿ ರಾಗಿ, ಭತ್ತ, ಗೋಧಿ, ಜೋಳ ಇತ್ಯಾದಿ ದವಸಗಳನ್ನು ಪಡೆಯುತ್ತಿದ್ದರು."[೫]

---

೫. ಜಾನಪದ ವಿಶ್ವಕೋಶ : ಕುವೆಂಪು ಕನ್ನಡ ಅಧ್ಯಯನವಾಣಿ ಮೈಸೂರ ವಿ.ವಿ.ಮೈಸೂರು, ಪುಟ : ೯೩

ಪ್ರದರ್ಶನ ಕಲೆಗಳನ್ನೇ ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡು ಬದುಕುವ ಜನಪದ ಕಲಾವಿದರ ಹಲವು ಜಾತಿಗಳು ನಮ್ಮಲ್ಲಿವೆ. ಕಥೆ ಹೇಳುವ ಗೊಂದಲಿಗರು, ಬಜಂತ್ರಿಗಳು, ನಟಿಸುವ ನರ್ತಿಸುವ ಪಾತ್ರದವರು, ಕವಲೆತ್ತಿನವರು, ಮೋಡಿಕಾರರು, ಹಾವಾಡಿಗರು, ದುರ್ಗಮುರಗಿಗಳು, ಸುಡಗಾಡಸಿದ್ಧರು, ಜಾತಿಗಾರರು, ಬಹುರೂಪಿಗಳು, ಡೊಂಬರು, ಕರಡಿ ಕುಣಿಸುವವರು, ಬುಡಬುಡಿಕೆಯರು ಮೊದಲಾದ ಪ್ರದರ್ಶನ ಕಲೆಗಳ ವೃತ್ತಿ ಕಲಾವಿದರು ನಮ್ಮೊಂದಿಗಿದ್ದರು.

"ಸುಮಾರು ನಾಲ್ಕೈದು ದಶಕಗಳ ಹಿಂದಿನವರೆಗೆ ಜನಪದ ವೃತ್ತಿ ಕಲಾವಿದರ ವಿವಿಧ ತಂಡಗಳು ಪ್ರತಿ ಹಳ್ಳಿಗೆ ಒಂದಾದ ಮೇಲೊಂದರಂತೆ ಭೇಟಿ ಕೊಡುತ್ತಿದ್ದವು. ತಮ್ಮ ಕಲಾ ಪ್ರದರ್ಶನ ನೀಡುತ್ತಿದ್ದವು. ಈ ವಿವಿಧ ಮೇಳದವರೆಲ್ಲ ಅಂದು ಸಂತೃಪ್ತಿಯ ಬದುಕನ್ನು ಸಾಗಿಸುತ್ತಿದ್ದರು. ಏಕೆಂದರೆ ಅಂದಿನ ಕಾಲದಲ್ಲಿ ಆ ಗ್ರಾಮೀಣ ಜನತೆ ಅವರಿಗೆ ದವಸ-ಧಾನ್ಯ, ಬಟ್ಟೆಬರೆ, ಹಣ ಇತ್ಯಾದಿಗಳ ರೂಪದಲ್ಲಿ ಉದಾರವಾಗಿ ಕಾಣಿಕೆ ಕೊಟ್ಟು ಪೋಷಿಸುತ್ತಿದ್ದರು. ಈಗ ಎಲ್ಲೆಡೆಯಲ್ಲಿಯೂ ಜನತೆಯ ದೃಷ್ಟಿ ಮತ್ತು ಜೀವನ ವಿಧಾನ ಬದಲಾಗಿದೆ. ಗ್ರಾಮೀಣರಲ್ಲಿಯೂ ಆಧುನಿಕತೆಯ ಗಾಳಿ ಬೀಸಲಾರಂಭಿಸಿದೆ. ತತ್ಕಾರಣದಿಂದಾಗಿ ಜನಪದ ವೃತ್ತಿ ಕಲಾವಿದರ ಪ್ರದರ್ಶನಗಳು ತಮ್ಮ ಮೊದಲಿನ ಆಕರ್ಷಣೆ ಕಳೆದುಕೊಂಡಿವೆ. ಇವರಿಗೆ ಗ್ರಾಮೀಣರು ನೀಡುವ ಪ್ರೋತ್ಸಾಹದ ಪ್ರಮಾಣ ಸ್ವಾಭಾವಿಕವಾಗಿ ಕಡಿಮೆಯಾಗಿದೆ. ಹೀಗಾಗಿ ಈ ಜನಪದ ವೃತ್ತಿ ಕಲಾವಿದರ ಮೇಳಗಳು ಕಡಿಮೆಯಾಗುತ್ತಲಿವೆ. ಕೆಲವು ಕಲಾವಿದರು ತಮ್ಮ ಪಾರಂಪರಿಕ ವೃತ್ತಿಗಳನ್ನು ಬಿಟ್ಟು ಬೇರೆ ಲಾಭದಾಯಕ ವೃತ್ತಿಗಳತ್ತ ವಾಲುತ್ತಿದ್ದಾರೆ. ಹೀಗೆ ಜನಪದ ವೃತ್ತಿ ಕಲಾವಿದ ಜಾತಿಯವರು ಈಗ ಒಂದು ತೀವ್ರ ಸಂಕ್ರಮಣಾವಸ್ಥೆಯಲ್ಲಿದ್ದಾರೆ. ಆದರೂ ಇಂದಿನವರೆಗೆ ಹಿಂದಿನ ಎಲ್ಲ ಜನಪದ ವೃತ್ತಿ ಕಲಾವಿದ ಜಾತಿಗಳವರ ಕೆಲವು ಮೇಳಗಳು ಹಾಗೂ ಹೀಗೂ ತಮ್ಮ ಅಸ್ತಿತ್ವ

[illegible]

[illegible]

ಕಾಯ್ದುಕೊಂಡಿವೆ. ಗ್ರಾಮೀಣ ಭಾಗದಲ್ಲಿ ಅಪರೂಪವಾಗಿಯಾದರೂ ಈ ಮೇಳಗಳು ತಮ್ಮ ಪ್ರದರ್ಶನ ನೀಡುವುದನ್ನು ನಾವು ಕಾಣಬಹುದಾಗಿದೆ."[೬]

ಇಂದು ಬಾಗೆನಾಡಿನಲ್ಲಿ ಪರಂಪರಾಗತ ವೃತ್ತಿ ಕಲಾವಿದರಾದ ಬಜಂತ್ರಿಗಳು, ಗೊಂದಲಿಗರು, ಜಾತಿಕಾರರು, ಬಹುರೂಪಿಗಳು ಮಾತ್ರ ಉಳಿದುಕೊಂಡಿದ್ದಾರೆ. ಗೊಂದಲಿಗರು ವೃತ್ತಿ ಕಲಾವಿದರಾದರೂ ಅವರ ಕಲೆ ದೈವಾರಾದನೆ ಕೇಂದ್ರಿತವಾದದು. ಆದ್ದರಿಂದ ಅವರನ್ನು ಹಿಂದಿನ ವಿಭಾಗದಲ್ಲಿ ಸೇರಿಸಲಾಗಿದೆ. "ಕುಡಚಿ ಮತ್ತು ಹಾರೂಗೇರಿಗಳಲ್ಲಿ ಬಹಳಷ್ಟು ಜಾತಿಕಾರರ ಕುಟುಂಬಗಳಿದ್ದು ಅವರೆಲ್ಲ ತಮ್ಮ ಮೂಲ ವೃತ್ತಿ ಸೋಗು ಹಾಕುವುದನ್ನು ಬಿಟ್ಟು ದನಗಳ ವ್ಯಾಪಾರಿಗಳಾಗಿದ್ದಾರೆ. ಹಾರೂಗೇರಿಯಲ್ಲಿರುವ ಅಪ್ಪಾಸಾಬ ಸಾಹೇಬಲಾಲ ಶೇಖ ಎಂಬ ಎಪ್ಪತ್ತು ವರ್ಷದ ವೃದ್ಧನೊಬ್ಬನನ್ನು ಹೊರತುಪಡಿಸಿ ಅವರಾರಿಗೂ ಸೋಗು ಹಾಕುವುದು ಗೊತ್ತಿಲ್ಲ."[೭]

ಜಾತಿಗಾರರು ವಿಡಂಬಕ ಸೋಗುಗಳ ಜೊತೆಗೆ ಗಾಯನ, ವಾದನ ಕಲೆಗಳನ್ನು ಚೆನ್ನಾಗಿ ರೂಢಿಸಿಕೊಂಡವರು. ಸೋಗುಗಳ ಮಧ್ಯ ಲಾಗ ಹಾಕುತ್ತ ಕಸರತ್ತು ಪ್ರದರ್ಶಿಸುತ್ತಿದ್ದರು. ಮನೆ ಮನೆಗೆ ಹೋಗಿ ಸೋಗು ಪ್ರದರ್ಶಿಸಿ, ಭಿಕ್ಷೆಗೆ ಕೈ ಚಾಚುತ್ತಿದ್ದವರಲ್ಲಿ ಸ್ವಾಭಿಮಾನ ಬೆಳೆದಿದೆ. ಜಾತಿಗಾರರು ಹಿಂದೂ ಧರ್ಮದಿಂದ ಮತಾಂತರಗೊಂಡ ಮುಸ್ಲಿಂರು. "ಜಾತಿಗಾರರಿಗೆ ಸಮಾಜದಲ್ಲಿ ತೀರಾ ಕನಿಷ್ಠ ಸ್ಥಾನಮಾನವಿದೆ. ಮುಂದುವರೆದ ಮುಸಲ್ಮಾರೂ ಇವರಿಗೆ ತಮ್ಮ ಸಮಾನ ಸ್ಥಾನಮಾನ ಕೊಡುವುದಿಲ್ಲ. ರಕ್ತ ಸಂಬಂಧವನ್ನು ಬೆಳೆಸುವುದಿಲ್ಲ. ಹಿಂದೂಗಳಲ್ಲಿಯೂ ಅವರಿಗೆ ಮನ್ನಣೆಯಿಲ್ಲ. ಇದಕ್ಕೆ ಅವರ ಆರ್ಥಿಕ ಮಟ್ಟವೇ ಪ್ರಮುಖ ಕಾರಣ. ಅಲ್ಲದೇ ಉಪಜೀವನಕ್ಕಾಗಿ ಎಲ್ಲರ ಮುಂದೆ ಕೈಯೊಡ್ಡುವ ವೃತ್ತಿಯೂ ಕಾರಣ. ಅವರು ತಮ್ಮ ಜೀವನವನ್ನೇ ಮುಡಿಪಾಗಿಟ್ಟು

---

೬. ಜ್ಯೋತಿ ಹೊಸೂರ : ಜಾತಿಗಾರರು ಜಾತಕ, ಪುಟ : ೯-೧೦

೭. ಈತನ ವಿವರಗಳು ಅಧ್ಯಾಯ ೪ ರಲ್ಲಿ ಇವೆ.

[illegible]

[illegible]

ಸಾಧಿಸಿದ ಉತ್ಕೃಷ್ಟವಾದ ಕಲೆಯನ್ನು ಪ್ರದರ್ಶಿಸಿ ಬೇಡಿದರೂ ಕೊಡುವವರ ದೃಷ್ಟಿಯಲ್ಲಿ ಅದು ಭಿಕ್ಷೆ ಎಂಬ ಭಾವನೆ ಬೆಳೆದುಬಿಟ್ಟಿದೆ. ಹೀಗಾಗಿ ಶ್ರೇಷ್ಠ ಕಲಾರಾಧಕರಾದ ಇವರು ಜನತೆಯ ದೃಷ್ಟಿಯಲ್ಲಿ ಭಿಕ್ಷುಕರಾದರು. ಜನತೆಯ ಅಸಡ್ಡೆಯಿಂದಾಗಿ ಇತ್ತೀಚಿಗೆ ಸಹಜವಾಗಿಯೇ ಇವರ ಕಲೆಯ ಮಟ್ಟವೂ ಕುಸಿಯಿತು."[೮]

ಇತ್ತೀಚಿಗೆ ಅವರಲ್ಲಿ ಧಾರ್ಮಿಕ ಗೊಂದಲ ನಿರ್ಮಾಣವಾಗಿರುವದು ಅಪ್ಪಾಸಾಬ ಶೇಖ ಅವರ ಮಾತುಗಳಿಂದ ಸ್ಪಷ್ಟವಾಗುತ್ತದೆ. ತಾವು ಮುಸ್ಲಿಂರಾಗಿದ್ದು ಹಿಂದೂ ದೇವತೆಗಳ ಪೌರಾಣಿಕ ಹಾಗೂ ಹಿಂದೂ ಜನರ ಸಾಮಾಜಿಕ ಸೋಗುಗಳನ್ನು ಹಾಕಬಾರದೆಂಬ ಭಾವ ದಟ್ಟವಾಗಿದೆ. ಹಿಂದೂ ಧರ್ಮದ ನಂಬಿಕೆಗಳಿಂದ ಬಿಡಿಸಿಕೊಂಡು ಶುದ್ಧ ಮುಸ್ಲಿಂರಾಗಬೇಕೆಂಬ ಹಂಬಲ ಅವರನ್ನು ಈ ವೃತ್ತಿಯಿಂದ ವಿಮುಖಗೊಳಿಸುತ್ತಿರುವ ಸುಳಿವು ಸಿಗುತ್ತದೆ. ಅಂಗವಿಕಲನಾಗಿರುವ ಶೇಖ ಮಸೀದಿಯೊಂದರಲ್ಲಿ ಸೇವಕ ವೃತ್ತಿಯನ್ನು ಅವಲಂಬಿಸಿದ್ದಾನೆ. ಭಿಕ್ಷೆಗಿಂತಲೂ ತನ್ನ ಇಂದಿನ ಈ ವೃತ್ತಿ ಗೌರವಯುತವೆಂದು ಭಾವಿಸಿದ್ದಾನೆ. ಇದು ಕೇವಲ ಅವನೊಬ್ಬನ ಮನೋಭಾವವಲ್ಲ. ಹಾವಾಡಿಗ, ದುರುಗಮುರಗಿ, ಡೊಂಬರು, ದಾಸರು, ಕವಲೆತ್ತಿನವರು, ಕರಡಿ ಆಡಿಸುವವರು, ಮಂಗಕುಣಿಸುವವರು, ಬಹುರೂಪಿಗಳಂಥ ಅಲೆಮಾರಿ ವೃತ್ತಿ ಕಲಾವಿದರಲ್ಲಿ ಸ್ವಾಭಿಮಾನ ಮೂಡುತ್ತಿದೆ. ತಮ್ಮ ಕಲೆ ಭಿಕ್ಷೆಯನ್ನು ಪ್ರಚೋದಿಸುತ್ತಿದೆಯೆಂಬ ಭಾವನೆಯ ತಾಕಲಾಟ ಅವರಲ್ಲಿ ಹೆಚ್ಚುತ್ತಿದೆ. ದಲಿತಪ್ರಜ್ಞೆ ಮೂಡಿದ ಮೇಲೆ ಅವರು ತಮ್ಮ ಪಾರಂಪರಿಕ ವೃತ್ತಿಗಳಿಂದ ವಿಮುಖಗೊಳ್ಳುತ್ತಿದ್ದಾರೆ. ಅವರು ಬದುಕಿಗಾಗಿ ವೃತ್ತಿ ಕಲಾವಿದರಾಗಿದ್ದರು. ಬದುಕಿಗಿಂತ ಗೌರವದ ಪ್ರಶ್ನೆ ಮುಖ್ಯವಾದಾಗ ತಮ್ಮ ವೃತ್ತಿಗಳನ್ನು ತ್ಯಜಿಸತೊಡಗಿದರು. ಈ ಕಾರಣದಿಂದಲೇ ವೃತ್ತಿಕಲಾವಿದರ ಸಂಖ್ಯೆ ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದೆ. ಅವಿದ್ಯಾವಂತರಾಗಿದ್ದ ಅವರಲ್ಲಿ ವಿದ್ಯೆಯ ಹೆಚ್ಚುತ್ತಿದೆ. ತಮ್ಮ ಮಕ್ಕಳು ವಿದ್ಯಾವಂತರಾಗಬೇಕು. ತಮ್ಮಂತೆ ಭಿಕ್ಷೆ ಬೇಡಿ ಜೀವಿಸದೇ ಗೌರವದಿಂದ

---

**೮. ಜ್ಯೋತಿ ಹೊಸೂರ : ಜಾತಿಗಾರರು ಜಾತಕ, ಪುಟ : ೪೩**

[illegible]

ಬದುಕಬೇಕೆಂಬ ಭಾವನೆ ಬಲಿಯುತ್ತಿದೆ. ಬಾಗೆನಾಡಿನ ಮುಗಳಖೋಡ, ಚಿಂಚಲಿ, ನಾಗರಾಳ(ರಾಯಬಾಗ ಸ್ಟೇಷನ್), ಅಳಗವಾಡಿಗಳಲ್ಲಿದ್ದ ಬಹುರೂಪಿಗಳು ತಮ್ಮ ವೃತ್ತಿಯನ್ನು ತೊರೆಯುತ್ತಿದ್ದಾರೆ. ಅಲೆಮಾರಿ ಬದುಕನ್ನು ಕೊನೆಗೊಳಿಸಿ ಶಾಶ್ವತ ನೆಲೆಯನ್ನು ಹುಡುಕುತ್ತಿರುವರು.

ಬಾಗೆನಾಡಿನ ವೃತ್ತಿ ಕಲಾವಿದರಲ್ಲಿ ಜಾತಿಗಾರರು ಈಗಾಗಲೇ ತಮ್ಮ ಮೂಲವೃತ್ತಿಯನ್ನು ಸಂಪೂರ್ಣ ತ್ಯಜಿಸಿದ್ದಾರೆ. ಬಹುರೂಪಿಗಳು ತ್ಯಜಿಸುವ ಹಂತದಲ್ಲಿದ್ದಾರೆ. ಅಂದರೆ ಅಧ್ಯಾಯ ೪ರಲ್ಲಿ ಉಲ್ಲೇಖಿಸಿದ ಐದಾರು ಬಹುರೂಪಿಗಳ ಹಿರಿಯರು ಮಾತ್ರ ಈಗ ಮೂಲವೃತ್ತಿಯಲ್ಲಿದ್ದಾರೆ. ಅವರಿಗೆ ತಮ್ಮ ಮಕ್ಕಳು-ಮೊಮ್ಮಕ್ಕಳು ವೃತ್ತಿಯನ್ನು ಮುಂದುವರೆಸಬೇಕೆಂಬ ಇಚ್ಛೆ ಇಲ್ಲ. ಆದ್ದರಿಂದ ಆ ವೃತ್ತಿಗೆ ಬಾರದಂತೆ ಪ್ರಯತ್ನಪೂರ್ವಕವಾಗಿ ಅವರನ್ನು ತಡೆಯುತ್ತಿದ್ದಾರೆ. ಹೆಳವರು ಮತ್ತು ಬಜಂತ್ರಿಯವರಲ್ಲಿ ಜಾತಿಗಾರರ ಮತ್ತು ಬಹೂರೂಪಿಗಳಲ್ಲಿ ಮೂಡಿರುವ ಭಾವನೆ ಇಲ್ಲ. ಅವರಲ್ಲಿ ವೃತ್ತಿಗೌರವದ ಅಭಿಮಾನವಿದೆ. ಹೆಳವರು ಭಿಕ್ಷೆ ಬೇಡುವುದಿಲ್ಲ. ತಾವು ಅವರ ಆದಾಯದಲ್ಲಿಯ ಒಂದು ಭಾಗವನ್ನು ಪಡೆಯುವ ಹಕ್ಕುದಾರರೆಂದು ಭಾವಿಸಿದ್ದಾರೆ. ಹೆಳವರು ಅನಕ್ಷರಸ್ಥರಲ್ಲ. ಜನಸಾಮಾನ್ಯರ ಇತಿಹಾಸಕಾರರು. ಸಾಮಾನ್ಯ ಜನರ ಇತಿಹಾಸವನ್ನು ಬರೆಯುವ ಇವರು ಸಂಬಂಧಿಸಿದ ಕುಟುಂಬದ ಸದಸ್ಯರೆಂಬಂತೆ ವರ್ತಿಸುತ್ತಾರೆ. ತಮಗಿಷ್ಟು ಬೇಕು ಎಂದು ಹಠ ಹಿಡಿಯುತ್ತಾರೆ. ಕೊಡದೇ ಏಳುವುದಿಲ್ಲ. ಅವರ ದೃಷ್ಟಿಯಲ್ಲಿ ಇದು ಭಿಕ್ಷೆ ಅಲ್ಲ; ಮನ್ನಣೆ. ಸಮಾಜದ ದೃಷ್ಟಿಯಲ್ಲಿ ಅದು ಭಿಕ್ಷೆಯಲ್ಲ; ಆಯದ ಒಂದು ಭಾಗ. ಅವರ ಉಡುಪು ಆ ವೃತ್ತಿ ಗೌರವವನ್ನು ಪ್ರತಿನಿಧಿಸುತ್ತದೆ. ಧೋತಿ ಉಟ್ಟು, ಬಿಳಿ ಅಂಗಿ ಹಾಕಿ, ಅದರ ಮೇಲೊಂದು ಕೋಟು ಧರಿಸಿಕೊಳ್ಳುವರು. ತಲೆಯ ಮೇಲೊಂದು ಬಣ್ಣದ ರುಮಾಲು. ಕೆಂಪುಶಾಲಿನಲ್ಲಿ ಕಟ್ಟಿದ ತಮ್ಮ ಹೊತ್ತಿಗೆಯನ್ನು ಬೆನ್ನಿಗೆ ಇಳಿಬಿಟ್ಟಿರುತ್ತಾರೆ. ಮನೆಗೆ ಬರುವ ಠೀವಿ ಸಹ ಗೌರವಯುತವಾಗಿರುತ್ತದೆ. ಈ ಎಲ್ಲ ಅಂಶಗಳು ಅವರಿಗೆ ತಮ್ಮ ವೃತ್ತಿಯಲ್ಲಿ ಕೀಳರಿಮೆ ಇಲ್ಲವೆಂಬುದನ್ನು ತಿಳಿಸುತ್ತವೆ. ಹೆಳವರು ವರ್ಷಕೊಮ್ಮೆ ಅಥವಾ ಎರಡು ವರ್ಷಕ್ಕೊಮ್ಮೆ ತಮ್ಮ ಮನೆ-ಮನೆಗಳಿಗೆ ಭೆಟ್ಟಿ ಕೊಡುವರು. ಜನ ಅವರನ್ನು ಜಾತಿಗಾರ, ಬಹುರೂಪಿ, ಹಾವಾಡಿಗ, ಕರಡಿಕುಣಿಸುವವರನ್ನು

ಅಸಡ್ಡೆಯಿಂದ ಕಾಣುವಂತೆ ಇವರನ್ನು ಕಾಣುವುದಿಲ್ಲ. ಹೀಗಾಗಿ ಹೆಳವರು ಈಗಲೂ ತಮ್ಮ ವೃತ್ತಿಯನ್ನು ಮುಂದುವರೆಸಿದ್ದಾರೆ. ಆದರೆ ಹೆಳವರ ಈ ವೃತ್ತಿಯನ್ನು ಕಲೆಯೆಂದು ಪರಿಗಣಿಸುವದು ಪ್ರಶ್ನಾರ್ಹವೆನಿಸುತ್ತದೆ. ಅವರು ದಾಖಲಿಸುವ ಕೌಟುಂಬಿಕ ವಂಶಾವಳಿ, ಕಾಪಾಡುವ ರೀತಿ, ಅದನ್ನು ಹೊಗಳುವುದು(ಪಠಿಸುವ ವಿಧಾನ) ಎಲ್ಲವನ್ನು ಅವಲೋಕಿಸಿದಾಗ ಅವರೂ ವೃತ್ತಿಕಲಾವಿದರೇ ಎನಿಸುತ್ತದೆ. ಮಂಟೂರ, ಪರಮಾನಂದವಾಡಿ, ಬೆಕ್ಕೇರಿ, ಬಿರಡಿ, ಚಿಂಚಲಿ ಗ್ರಾಮಗಳಲ್ಲಿ ಹೆಳವರಿದ್ದಾರೆ.

ಹೆಳವರನ್ನು ಸರಕಾರ ದಲಿತರೆಂದು ಪರಿಗಣಿಸಿಲ್ಲ. ಅವರನ್ನು ಉಪ್ಪಾರ, ತಳವಾರ, ಅಂಬಿಗೇರ, ಗೊಂದಲಿಗರೊಂದಿಗೆ ಮೀಸಲಾತಿಯ ಪ್ರವರ್ಗ-೧ರಲ್ಲಿ ಸೇರಿಸಲಾಗಿದೆ. ಅವರು ಅರೆ-ಅಲೆಮಾರಿಗಳು.

ಬಜಂತ್ರಿಗಳು ಪಕ್ಕಾ ವೃತ್ತಿಕಲಾವಿದರು. ಯಾವುದೇ ಸಮಾರಂಭಗಳಿಗೆ ಹೋಗುವುದಕ್ಕಿಂತ ಮೊದಲೇ ತಮ್ಮ ಸಂಭಾವನೆಯನ್ನು ನಿರ್ಧರಿಸಿಕೊಳ್ಳುವ ಪದ್ಧತಿ ಈಗ ಬೆಳೆದಿದೆ. ಇದಕ್ಕೂ ಮೊದಲು ಅವರು ಆಯಗಾರರಲ್ಲೊಬ್ಬರು. ಈಗಲೂ ಮಹಾನವಮಿಯ ಒಂಬತ್ತು ದಿನಗಳಲ್ಲಿ ಪ್ರತಿ ಮನೆಗೂ ಮುಂಜಾನೆ ಬಂದು ಮಂಗಲವಾದ್ಯಗಳನ್ನು ನುಡಿಸುವರು. ನವರಾತ್ರಿಯಂದು ಆಯ ಸ್ವೀಕರಿಸುವರು. ಆಧುನಿಕ ಸಂದರ್ಭದಲ್ಲಿ ಅವರನ್ನು ಜನ ಕಲಾವಿದರೆಂದು ಪರಿಗಣಿಸದೇ ಭಿಕ್ಷುಕರಂತೆ ಭಾವಿಸತೊಡಗಿದಾಗ ತಮ್ಮ ವೃತ್ತಿ ಗೌರವವನ್ನು ಕಾಪಾಡಿಕೊಳ್ಳುವುದಕ್ಕಾಗಿ ಅವರು ಸಂಭಾವನೆ ನಿರ್ಧರಿಸಿಕೊಳ್ಳುವ ಪದ್ಧತಿಯನ್ನು ರೂಢಿಸಿಕೊಂಡರು. ಕೊರವರು ದಲಿತವರ್ಗಕ್ಕೆ ಸೇರುವರು. ಮೇಲ್ವರ್ಗದವರು ಅವರನ್ನು ಮನೆ-ಮಠದೊಳಗೆ ಬರಮಾಡಿಕೊಳ್ಳುವುದಿಲ್ಲ. ಅವರಿಗೆ ಸಾಮಾಜಿಕ ಗೌರವವಿಲ್ಲವೆಂದೇ ಇದರರ್ಥ. ಮಂಗಲವಾದ್ಯವನ್ನು ನುಡಿಸುವವರನ್ನು ಅಮಂಗಳವೆಂದು ಭಾವಿಸುವ ಸಾಮಾಜಿಕ ಭಾವನೆಗಳು ಬದಲಾಗಬೇಕು. ಈ ಎಲ್ಲ ಪದ್ಧತಿಗಳನ್ನು ನೋಡಿ ನೊಂದುಕೊಂಡು ಸಂಭಾವನೆಯನ್ನು ನಿರ್ಧರಿಸಿಕೊಳ್ಳುವುದರ ಮೂಲಕ ಸಾಮಾಜಿಕ ಗೌರವವನ್ನು ಪಡೆಯಲು ಪ್ರಯತ್ನಿಸುವಂತಿದೆ.

[illegible]

### ೩. ಶುದ್ಧ ಮನರಂಜನೆಯ ಕಲೆಗಳು :

ಕಣಿ–ಹಲಗೆ–ತಾಸೆ–ಲೇಜಿಮ್–ಬ್ಯಾಂಡ್–ಝಾಂಜ್–ಬ್ಯಾಂಜೊ–ಸಂಪ್ರದಾಯದ ಹಾಡು–ಲಾವಣಿ–ಕೀಲುಕುದುರೆ–ನವಿಲುಕುಣಿತ ಹಾಗೂ ಕಸರತ್ತು ಪ್ರದರ್ಶನ ಕಲೆಗಳ ಕಲಾವಿದರನ್ನು ಶುದ್ಧ ಮನರಂಜನೆಯ ಕಲೆಗಳ ಕಲಾವಿದರೆಂದು ಗುರುತಿಸಲಾಗಿದೆ. ಈ ವರ್ಗೀಕರಣ ಸ್ಥೂಲವಾದುದೆಂದು ಆರಂಭದಲ್ಲಿಯೇ ಸೂಚಿಸಲಾಗಿದೆ. ವೃತ್ತಿಕಲಾವಿದರೆನಿಸಿಕೊಂಡವರು ಮಂಗಲವಾದ್ಯವೆಂದು ಭಾವಿಸುವ ಸನಾದಿಯನ್ನು ಬಿಟ್ಟು ಪಾಶ್ಚಾತ್ಯ ಮಾದರಿಯ ಕ್ಲೆರೋನೆಟ್ ಹಿಡಿದು ಬ್ಯಾಂಡ್ ಕಂಪನಿ ಕಟ್ಟಿದರು. ಅವರನ್ನು ಈಗಲೂ ವೃತ್ತಿಕಲಾವಿದರೆಂದೇ ಪರಿಗಣಿಸಲಾಗುತ್ತದೆ. ಹೀಗೆ ಹಲವು ತೊಡಕುಗಳಿವೆ. ಆದರೆ ಅವರನ್ನು ಹೊರತುಪಡಿಸಿಯೂ ಬ್ಯಾಂಡ್–ಬ್ಯಾಂಜೊ ಮೇಳಗಳನ್ನು ಕಟ್ಟಿದವರಿದ್ದಾರೆ. ಆದ್ದರಿಂದ ಆ ಎಲ್ಲ ಕಲಾವಿದರ ಆರ್ಥಿಕ ಸ್ಥಿತಿ–ಗತಿಗಳನ್ನು ಸಮೀಕ್ಷೆಗೆ ಅನುಕೂಲವಾಗುವಂತೆ ಪ್ರಸ್ತುತ ವರ್ಗೀಕರಣವನ್ನು ಬಳಸಿಕೊಳ್ಳಲಾಗಿದೆ.

ದೈವಾರಾಧನಾ ಕೇಂದ್ರಿತ ಕಲೆಗಳ ಕಲಾವಿದರಿಗೆ ಧಾರ್ಮಿಕ ಹಿನ್ನೆಲೆಯ ಗೌರವ ಸಿಗುತ್ತದೆ. ವೃತ್ತಿ ಕಲಾವಿದರರಿಗೆ ವೃತ್ತಿ ಗೌರವ ದಕ್ಕಬಹುದು. ಆದರೆ ಶುದ್ಧ ಮನರಂಜನಾ ಕಲಾವಿದರು ಪಡೆಯುವ ಗೌರವ ಅವರ ಕಲಾ ಪರಿಣತಿಯನ್ನು ಅವಲಂಬಿಸಿರುತ್ತದೆ. ಚೌಡಿಕೆ ಕಲಾವಿದೆಯೊಬ್ಬಳು ತನ್ನ ಕಲಾ ಪರಿಣಿತಿಯಿಂದ ಪಡೆದುಕೊಳ್ಳುವ ಮನ್ನಣೆ ಬೇರೆ; ಆರಾಧನೆಯ ಹಿನ್ನೆಲೆಯಲ್ಲಿ ಪಡೆಯುವ ಗೌರವವೇ ಬೇರೆ. ಅಲ್ಲಿ ಬಹಳಷ್ಟು ಸಂದರ್ಭಗಳಲ್ಲಿ ಕಲೆ ಗೌಣವಾಗುತ್ತದೆ; ಆರಾಧನೆ ಪ್ರಧಾನವಾಗುತ್ತದೆ. ಆ ಅವಕಾಶ ಈ ಕಲಾವಿದರಿಗಿಲ್ಲ. ಅವರನ್ನು ಅವರ ಕಲೆಯ ಮೂಲಕವೇ ಗುರುತಿಸಲಾಗುತ್ತದೆ. ಅಂದರೆ ಅವರು ತಮ್ಮ ಕಲೆಯ ಮೂಲಕವೇ ತಮ್ಮ ಅನನ್ಯತೆಯನ್ನು ಹುಡುಕಿಕೊಳ್ಳಬೇಕು. ಕಲಾವಿದರಿಗೆ ಇದೊಂದು ಸವಾಲು. ನಿಜವಾದ ಕಲಾವಿದರು ಮಾತ್ರ ಈ ರಂಗದಲ್ಲಿ ಬದುಕುತ್ತಾರೆ.

ಬಾಗೆನಾಡಿನಲ್ಲಿ ಶುದ್ಧ ಮನರಂಜನೆಯ ಕಲೆಗಳ ಕಲಾವಿದರ ಸಂಖ್ಯೆ ಕಡಿಮೆ. ಅವರ ಜನಸಂಖ್ಯೆ ಹೆಚ್ಚಿನ ಪ್ರಕರಣದಲ್ಲಿದ್ದರೂ ಕಲಾವಿದರೆಂದು ಗುರುತಿಸಿಕೊಂಡವರು ಕಡಿಮೆ. ಕೆಲವರಿಗೆ ಪರಂಪರೆಯ ಮೂಲಕ ಆ ಕಲೆ

[illegible]

[illegible]

ಬಂದಿರುವುದರಿಂದ ಹಾಗೂ ಸ್ವಸಾಮರ್ಥ್ಯ ಮತ್ತು ಪ್ರತಿಭೆಗಳಿಂದ ಅದರಲ್ಲಿ ಹೆಚ್ಚು ಪರಿಣತಿ ಸಾಧಿಸುತ್ತಾರೆ. ಕೆಲವರು ವಿಷ್ಣು ಕಂಚಕಾರನಂತೆ ಹೆಚ್ಚು ಪರಿಣತಿ ಸಾಧಿಸುತ್ತಾರೆ. ಅವನಿಗೆ ಈ ಕಣಿ ಕಲೆಗೆ ನಿಮ್ಮ ಕೊಡುಗೆ ಏನು? ಎಂದು ಪ್ರಶ್ನಿಸಿದಾಗ ಅವನು ನೀಡಿದ ಉತ್ತರ ಮಾರ್ಮಿಕವಾಗಿತ್ತು. "ನನ್ನ ತಂದೆಯೇ ನನ್ನ ಕಲೆಯ ಹಿನ್ನೆಲೆ. ಮಂಟೂರ, ಕಟಕಬಾವಿ, ಹಂದಿಗುಂದಗಳಲ್ಲಿ ಕಣಿ ಮೇಳಗಳಿವೆ. ಅವರೂ ಚೆನ್ನಾಗಿ ಬಾರಿಸುತ್ತಾರೆ. ಏಕೆಂದರೆ ಕಲಾವಿದರ ಕಲಾ ಪ್ರದರ್ಶನವನ್ನು ಅಳೆಯುವ ಯೋಗ್ಯತೆ ನನ್ನದಲ್ಲ. ಕಲಾವಿದರು ಬೇರೆಯವರ ಕಲೆಗೆ ಹೆಸರಿಡಬಾರದು. ಕಣಿಮೇಳ ಕಟ್ಟುವುದು ಸರಳವಲ್ಲ. ಕಣಿ ನುಡಿಸುವುದು ಸುಲಭವಲ್ಲ. ಅದು ಶಾಸ್ತ್ರ ಸಮ್ಮತವಾದ ಶ್ರಮದ ಕಲೆ. ಅತಿ ತಾಳಬದ್ಧವಾಗಿ ಪ್ರದರ್ಶಿಸಬೇಕು. ಹೀಗಾಗಿ ಬಾಗೆನಾಡಿನಲ್ಲಿ ಉಳಿದ ಕಲೆಗಳಿಗಿಂತ ಕಣಿಗೆ ಹೆಚ್ಚು ಪ್ರಾಮುಖ್ಯ ಇತ್ತು". ಅವನು ಸ್ವಪ್ರತಿಭೆಯಿಂದ ರಾಜ್ಯಮಟ್ಟದ ಕಣಿ ಕಲಾವಿದನಾಗಿ ಬೆಳೆದವನು. ಅವನನ್ನು ರಾಜ್ಯದ ತುಂಬೆಲ್ಲ ಗುರುತಿಸಲಾಗುತ್ತದೆ. ಅಕಾಡೆಮಿ ಬಹುಮಾನ ನೀಡಿ ಗೌರವಿಸಿದೆ. ಮಾಧ್ಯಮಗಳು ಅವನ ಕಲೆಯನ್ನು ನಾಡಿಗೆ ಬಿತ್ತರಿಸಿವೆ. ಅವನಿಗೆ ತಾನು ಬಯಸಿದುದಕ್ಕಿಂತ ಹೆಚ್ಚು ಗೌರವ ಪಡೆದುದರ ಸಂತೃಪ್ತಿ ಇದೆ. ಸಮಾಜ ಕಲಾವಿದರನ್ನು ಕಡೆಗಣಿಸುತ್ತದೆ ಎಂಬ ಅಭಿಪ್ರಾಯಕ್ಕೆ ಅವನು ಒಪ್ಪುವುದಿಲ್ಲ. "ನನಗೆ ಹಾಗೆ ಅನಿಸುವುದಿಲ್ಲ. ಅದು ಕಲಾವಿದನ ವೈಯಕ್ತಿಕ ನಡುವಳಿಕೆಯನ್ನು ಅವಲಂಬಿಸಿರುತ್ತದೆ. ಸಾಮಾನ್ಯವಾಗಿ ಜನ ವ್ಯಸನಾಧೀನ ಕಲಾವಿದರನ್ನು ಉಪೇಕ್ಷಿಸುತ್ತಾರೆ. ಕಲಾವಿದನಲ್ಲಿಯೂ ಆತ್ಮೀಯ ಭಾವವಿರಬೇಕು. ಜನ ನನ್ನ ಕಲೆಯನ್ನು ಪ್ರೀತಿಸುವ ನನ್ನನ್ನು ಪ್ರೀತಿಸುತ್ತಾರೆ, ಗೌರವಿಸುತ್ತಾರೆ" ಎನ್ನುತ್ತಾನೆ.

'ಗೌರವ' ಎಂಬುದು ಸೌಂದರ್ಯದಂತೆ ಒಂದು ಸಾಪೇಕ್ಷ ಭಾವ. ಒಬ್ಬೊಬ್ಬರ ದೃಷ್ಟಿಯಲ್ಲಿ ಒಂದೊಂದು ರೂಪ ತಳೆಯುತ್ತದೆ. ವಿಷ್ಣು ಕಂಚಕಾರರನ್ನು "ಒಬ್ಬ ಸಾಹಿತಿಗೆ ಸಿಗುವಷ್ಟು ಗೌರವ ಒಬ್ಬ ಕಲಾವಿದನಿಗೆ ಸಿಗುತ್ತದೆಯೋ ಎಂದು ಪ್ರಶ್ನಿಸಿದಾಗ ಆತ ನಕ್ಕು ಬಿಟ್ಟ, ಸಾಹಿತಿಗಳು ಬುದ್ಧಿಜೀವಿಗಳು, ಕಲಾವಿದರು ಭಾವಜೀವಿಗಳು. ಸಾಹಿತಿಗಳಿಗೆ ಸಿಗುವ ಗೌರವವನ್ನು ಆಕ್ಷೇಪಿಸಬಾರದು, ಹಾಗೂ ಅಪೇಕ್ಷಿಸಬಾರದು. ನಮ್ಮನ್ನು ಗುರುತಿಸಿ ಗೌರವಿಸುವ ಕಾರ್ಯ ಮಾಡುವರೇ ಸಾಹಿತಿಗಳು ಎಂದು ಹೇಳಿ "ಕಲಾ ಪ್ರದರ್ಶನದ ನಂತರ ಅದನ್ನು ಆಸ್ವಾದಿಸಿದ ಕಲಾರಸಿಕನೊಬ್ಬ

[illegible]

ಕಲಾವಿದನ ಹತ್ತಿರಕ್ಕೆ ಬಂದು ಆತನ ಕಲೆಯನ್ನು ಪ್ರಶಂಸಿಸಿದರೆ ಸಾಕು. ಅದುವೇ ಕಲಾವಿದ ಅಪೇಕ್ಷಿಸುವ ಗೌರವ. ನಿಜವಾದ ಕಲಾವಿದ ಗೌರವವನ್ನು ಹಣ, ಸನ್ಮಾನ, ಬಹುಮಾನ, ಪುರಸ್ಕಾರಗಳಿಂದ ಅಳೆಯುವುದಿಲ್ಲ." ಈ ಮಾತುಗಳು ಮನನೀಯ.

ಮುಗಳಖೋಡದಲ್ಲೊಬ್ಬ ಸಂಪ್ರದಾನಿವಾದಕನಿದ್ದಾನೆ. ಆತನಿಗೆ ೬೩ ವಯಸ್ಸು. ಹೆಸರು ಬಸಪ್ಪ ಉದ್ದವ್ವ ಮಾದರ. ಈ ದಲಿತ ಕಲಾವಿದ ಈಗ ಪಾರ್ಶ್ವವಾಯು ಪೀಡಿತ. ಒಂದು ಕಾಲದಲ್ಲಿ ಆತನ ಹಲಗೆಯ ನಾದಕ್ಕೆ ಮನಸೋಲದ ಕಲಾರಸಿಕರೇ ಇರಲಿಲ್ಲ. ಈಗ ಶಕ್ತಿಗುಂದಿದೆ. ತೋಳುಗಳಲ್ಲಿ ಹಲಗೆಯನ್ನು ಹಿಡಿಯುವ ಶಕ್ತಿ ಉಳಿದಿಲ್ಲ. ಮುಗಳಖೋಡದ ಜನ ಆತನನ್ನು ಒಬ್ಬ ಒಳ್ಳೆಯ ಕಲಾವಿದನೆಂದು ಗುರುತಿಸುತ್ತಾರೆ. ಆದರೆ ಅವನಲ್ಲಿ ಸಮಾಜ ತನ್ನನ್ನು ಕಡೆಗಣಿಸಿದೆ ಎಂಬ ನೋವಿದೆ. ಆತ ಚಟಗಾರ. ಹಲಗೆ ಬಾರಿಸುವಾಗ ಕುಡಿಯುತ್ತಿದ್ದ. ಆ ಕುಡಿತ ಚಟವಾಗಿ ಬೆಳೆದು ಅವನನ್ನು ರೋಗಕ್ಕೆ ತಳ್ಳಿತು. ಈಗ ಆತನನ್ನು ಮಾತನಾಡಿಸುವರೇ ಇಲ್ಲ. ಇಂತಹ ಉದಾಹರಣೆಗಳಲ್ಲಿ ವಿಷ್ಣು ಕಂಚಕಾರ ಹೇಳಿದ ಮಾತು ಮತ್ತೆ-ಮತ್ತೆ ನೆನಪಾಗುತ್ತದೆ.

ಹಾರೂಗೇರಿಯ ದುಂಡವ್ವ ನಾಗಪ್ಪ ಆಲಗೂರ ಸಂಪ್ರದಾಯದ ಹಾಡುಗಾರ್ತಿ. ಅವಳ ಅನುಭವ ಇವರಿಬ್ಬರಿಗಿಂತ ಭಿನ್ನವಾದುದು. ತನ್ನನ್ನು ಜನ ಹಾಡಲು ಮನೆಗೆ ಬಂದು ಕೇಳುವುದೇ ಗೌರವವೆಂದು ಭಾವಿಸಿದ್ದಾಳೆ. 'ಜನ ರಸಾಸ್ವಾದ ಮಾಡುತ್ತಾರೆ. ವೇದಿಕೆ ಒದಗಿಸುತ್ತಾರೆ. ಹಾಡು ಕೇಳಿ ತಮ್ಮ ಸಂತೋಷವನ್ನು ಬಾಯಿಬಿಟ್ಟು ಹಂಚಿಕೊಳ್ಳುತ್ತಾರೆ. ಇದಕ್ಕಿಂತಲೂ ದೊಡ್ಡ ಗೌರವ ಕಲಾವಿದರಿಗೆ ಇನ್ನೊಂದಿದೆಯೋ?' ಎನ್ನುತ್ತಾಳೆ. ನಾವು ಪರಿಭಾವಿಸುವ ರೀತಿಯಲ್ಲಿ ಜನಪದ ಕಲಾವಿದರು ಅದರಲ್ಲಿಯೂ ಶುದ್ಧಮನರಂಜನೆಯ ಕಲೆಗಳ ಕಲಾವಿದರು ಗೌರವವನ್ನು ಅಪೇಕ್ಷಿಸುವುದಿಲ್ಲವೆನಿಸುತ್ತದೆ. ನಮಗಿರುವ ಭ್ರಮೆಗಳು ಅವರಲ್ಲಿಲ್ಲ. ಸಮಾಜ ಅವರನ್ನು ವೇದಿಕೆಗೆ ತಂದು ಗಣ್ಯರೊಬ್ಬರಿಂದ ಒಂದು ಮಾಲೆ ಹಾಕಿಸಿದರೆ ಸಾಕು. ಉಬ್ಬಿ ಹೋಗುತ್ತಾರೆ. ಆ ಕ್ಷಣದ ಭಾವಚಿತ್ರವನ್ನು ಬದುಕಿನುದ್ದಕ್ಕೂ ಕಾಪಾಡಿಕೊಂಡು ಸಂತೋಷಪಡುತ್ತಾರೆ. ಯಾರಾದರೂ ಆತನ ಕುರಿತು ಒಂದು ಲೇಖನ ಬರೆದರೆ ತಮ್ಮ ಪರಿಚಿತರೆಲ್ಲರಿಗೂ ತೋರಿಸಿ ಅಮೂಲ್ಯ ರತ್ನದಂತೆ ಅದನ್ನು

[illegible]

ಕಾಪಾಡಿಕೊಳ್ಳುತ್ತಾರೆ. ಸರಕಾರ ಮಾಶಾಸನ ನೀಡಿದರೆ ಕಲಾವಿದನಾಗಿ ನನ್ನ ಜೀವನ ಸಾರ್ಥಕವಾಯಿತೆಂದು ಸಂಭ್ರಮಿಸುತ್ತಾರೆ. ಜನಪದ ಕಲಾವಿದರು ತಮ್ಮ ಕಲೆಯನ್ನು ಬಹಳಷ್ಟು ಜನ ಕುಳಿತು ಶಾಂತಚಿತ್ತದಿಂದ ಆಸ್ವಾದಿಸುವುದೇ ನಮಗೆ ನೀಡುವ ಗೌರವವೊಂದು ಭಾವಿಸಿದ್ದಾರೆ. ತಾಸೆವಾದಕ ಮಾರುತಿ ಗುರವ ಇದೇ ಮಾತು ಹೇಳುತ್ತಿದ್ದನಂತೆ. ಆದರೆ ಬ್ಯಾಂಡ್, ಝಾಂಜ್, ಬ್ಯಾಂಜೊ, ಲೇಜಿಮ್ ಕಲಾವಿದರು ಈ ಅಭಿಪ್ರಾಯವನ್ನು ಅನುಮೋದಿಸುವರೆಂದು ಹೇಳಲಾಗುವುದಿಲ್ಲ.

ಕುಸ್ತಿ ಬಾಗೆನಾಡಿನ ಜನಪ್ರಿಯ ಕಸರತ್ತು ಪ್ರದರ್ಶನ ಕಲೆ. ಈಗಲೂ ಅನೇಕ ಕುಸ್ತಿ ಪಟುಗಳು ಇಲ್ಲಿದ್ದಾರೆ. ಕುಸ್ತಿ ಮೈದಾನದ ಸುತ್ತ ಜಾತ್ರ್ಯೋಪಾದಿಯಲ್ಲಿ ಜನ ನೆರೆದು ಪಂದ್ಯಗಳನ್ನು ವೀಕ್ಷಿಸುತ್ತಾರೆ. ಕುಸ್ತಿ ಪೈಲ್ವಾನರಿಗೆ ಹೆಚ್ಚು ಗೌರವವಿದೆ. ಒಂದು ಲಕ್ಷದಷ್ಟು ದೊಡ್ಡ ಮೊತ್ತದ ಬಹುಮಾನವನಿಟ್ಟು ಕುಸ್ತಿ ಸ್ಪರ್ಧೆಗಳನ್ನು ಏರ್ಪಡಿಸುತ್ತಾರೆ. ಈ ಭಾಗ್ಯ ಈತರ ಕಲಾವಿದರಿಗೆ ಸಿಗುತ್ತಿಲ್ಲ. ಹಿಂದೆ ಉಲ್ಲೇಖಿಸಿದ ಬಾಗೆನಾಡಿನ ಹಿರಿಯ ಕುಸ್ತಿಪಟು ದೇವಪ್ಪ ಬೆಳಗಲಿ ಇದಕ್ಕೊಂದು ಉದಾಹರಣೆ. ವರುಷಕ್ಕೊಮ್ಮೆ ಇವನ ಸಮಾಧಿಗೆ ಜಾತ್ರೆ ಮಾಡುತ್ತಾರೆ. ಹೊಸ ವ್ಯಾಯಾಮ ಮಂದಿರಗಳ ಉದ್ಘಾಟನೆಗೆ ಮುನ್ನ ದೇವಪ್ಪನ ಸಮಾಧಿಗೆ ಹೋಗಿ ಪೂಜೆ ಸಲ್ಲಿಸುತ್ತಾರೆ.

ಕುಸ್ತಿಪಟುಗಳು ಪ್ರತಿಷ್ಠಿತ ಸ್ಪರ್ಧೆಗಳಲ್ಲಿ ಗೆದ್ದು ಬಂದರೆ ಕೈಯಲ್ಲಿ ದೊಡ್ಡ ಬೆಳ್ಳಿಯ ಗದೆ ಕೊಟ್ಟು ಊರು ತುಂಬಾ ಮೆರವಣಿಗೆ ಮಾಡುತ್ತಾರೆ. ಯಾವ ಕಲೆಯೆಡೆಗೆ ಜನರ ಆಸಕ್ತಿ ಇನ್ನೂ ಉಳಿದುಕೊಂಡಿದೆಯೋ ಆ ಕಲೆಯ ಕಲಾವಿದನಿಗೆ ಇನ್ನೂ ಗೌರವ ಸಿಗುತ್ತಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಜನರ ಆಸಕ್ತಿಯ ಮೇಲೆ ಕಲಾವಿದರ ಗೌರವದ ಸ್ವರೂಪ ನಿರ್ಧರಿಸಲ್ಪಡುತ್ತದೆ.

೫೦-೬೦ ವರ್ಷಗಳ ಹಿಂದೆ ಬಾಗೆನಾಡು ಲಾವಣಿಗಳ ತೊಟ್ಟಿಲಾಗಿತ್ತು. ಲಾವಣಿ ಕವಿಗಳು, ಹಾಡುಗಾರರಿಂದ ಸಮೃದ್ಧವಾಗಿತ್ತು. ೧೯೫೦ರವರೆಗೂ ಲಾವಣಿಗಳನ್ನು ಕೇಳಲು ಜನ ಹಾತೊರೆಯುತ್ತಿದ್ದರು. ಇಲ್ಲಿಯ ಹಲವು ಲಾವಣಿ ಮೇಳಗಳು ಕನ್ನಡ-ಮರಾಠಿ ಲಾವಣಿಗಳನ್ನು ಹಾಡುತ್ತಿದ್ದವು. ಇಲ್ಲಿಯ ಲಾವಣಿ ಹಾಡುಗಾರರನ್ನು ಅಧ್ಯಾಯ-೪ರಲ್ಲಿ ಹೆಸರಿಸಲಾಗಿದ್ದರೂ ಮೇಳಕಟ್ಟಿ

ಹಾಡುವವರು ಕೇವಲ ಇಬ್ಬರು. ಹಂದಿಗುಂದದ ವೀರಭದ್ರಪ್ಪ ದುಂಡಪ್ಪ ತೇರದಾಳ ಮತ್ತು ಮಾದೇವಿ ದೇವರವರ. ವೀರಭದ್ರಪ್ಪ ತೇರದಾಳ ಬಯಲು ಲಾವಣಿಕಾರ. ಕೆಲವೊಮ್ಮೆ ತಂಡದೊಂದಿಗೆಯೂ ಹಾಡುತ್ತಾನೆ. ಎತ್ತರದ ನಿಲುವು ಜಟ್ಟಿಯ ಮೈಕಟ್ಟಿನ ವೀರಭದ್ರಪ್ಪ ಡಪ್ಪು ಹಿಡಿದು ವೇದಿಕೆಯ ಮೇಲೆ ನಿಂತರೆ ಲಾವಣಿ ಹಾಡುಗಾರರ ನಮ್ಮ ಪ್ರಾಚೀನ ಪರಂಪರೆ ನೆನಪಾಗುತ್ತದೆ. ತಲೆಗೆ ಹಳದಿ ರುಮಾಲು ಸುತ್ತಿ ಡಪ್ಪಿನ ಮೇಲೆ ಚಾಪ ಹಾಕಿದಾಗ ಕೇಳುಗರ ಕುತೂಹಲ ಕೆರಳುತ್ತದೆ. ಅವನ ಗತ್ತು, ಹಾಡುಗಾರಿಕೆ, ವಯಸ್ಸು ಎಲ್ಲವೂ ಅವನಲ್ಲಿ ಗೌರವ ಮೂಡಿಸುತ್ತವೆ.

ಜನಪದ ಕಲಾವಿದರು ಸ್ವಾಭಿಮಾನಿಗಳು. ವೀರಭದ್ರಪ್ಪ ೭೫ ಗಡಿದಾಟಿದ ಹಿರಿಯ ಕಲಾವಿದ. ಅವನನ್ನು ಸಂದರ್ಶಿಸಿದಾಗ ಕಲಾವಿದರ ಅಂತರಾಳದ ನೋವುಗಳು ಅವನ ಮೂಲಕ ಅಭಿವ್ಯಕ್ತಿಗೊಂಡವು. ಸಭೆ-ಸಮಾರಂಭಗಳಲ್ಲಿ ಅವಕಾಶ ಗಿಟ್ಟಿಸಿ ಹಾಡುವ ಅವನು ಹಾಡುವುದರಲ್ಲಿಯೇ ಬದುಕಿನ ಸಾರ್ಥಕತೆ ಕಂಡುಕೊಂಡಿದ್ದಾನೆ. ತನ್ನ ಕಲೆಗೆ ಗೌರವವಾಗಿ ಕಲಾವಿದರ ಮಾಶಾಸನ ಪಡೆದುಕೊಳ್ಳುವ ಆಸೆ ಅವನದು. ಅದನ್ನು ಅವನು ತಿಳಿಸಿದಾಗ ಕಲಾವಿದರ ಮಾಶಾಸನ ಪಡೆಯುವುದರ ಬದಲಾಗಿ ವೃದ್ಧಾಪ್ಯವೇತನವೇಕೆ ಪಡೆಯಬಾರದು ಎಂದು ಪ್ರಶ್ನಿಸಲಾಯಿತು. ಆ ಪ್ರಶ್ನೆ ಅವನ ಸ್ವಾಭಿಮಾನವನ್ನು ಕೆಣಕಿತು. "ವೃದ್ಧಾಪ್ಯವೇತನ ಅನುಕಂಪದ ಕೊಡುಗೆ. ಕಲಾವಿದರ ಮಾಶಾಸನ ಗೌರವದ ಮನ್ನಣೆ. ನಮಗೆ ಸರಕಾರದ ಗೌರವ ಬೇಕು. ಅನುಕಂಪ ಬೇಡ"ವೆಂದು ದಿಟ್ಟತನದಿಂದ ಹೇಳಿದ. ತನಗೆ ವೃದ್ಧಾಪ್ಯವೇತನ ಪಡೆಯುವ ಅನಿವಾರ್ಯತೆ ಈಗಲೂ ಬಂದಿಲ್ಲ. ಆ ಅನಿವಾರ್ಯತೆ ಇಲ್ಲದೆ ಅದನ್ನು ತೆಗೆದುಕೊಳ್ಳುವುದು ಅಪರಾಧ. ಆದರೆ ಕಲಾವಿದರ ಮಾಶಸನ ಪಡೆದುಕೊಳ್ಳುವುದು ತನ್ನ ಹಕ್ಕು ಎಂದು ಪ್ರತಿಪಾದಿಸುತ್ತಾನೆ. ಕೇವಲ ೪ ನೆಯ ತರಗತಿಯವರೆಗೆ ಓದಿರುವ ವೀರಭದ್ರಪ್ಪನ ಸ್ವಾಭಿಮಾನ ಜನಪದ ಕಲಾವಿದರ ಮನೋಭಾವಕ್ಕೆ ಕನ್ನಡಿ ಹಿಡಿಯುವಂತಿದೆ.

ಮಾದೇವಿ ದೇವರವರ ದಲಿತ ಕಲಾವಿದೆ. ಸಾಮಾನ್ಯವಾಗಿ ಲಾವಣಿ ಹಾಡುವ ಕಲಾವಿದೆಯರೆಲ್ಲ ದಲಿತರು. ಹಿಮ್ಮೇಳದಲ್ಲಿ ಪುರುಷರಿರುತ್ತಾರೆ. ಮುಂದೆ ಸ್ತ್ರೀ ಡಪ್ಪು ಬಾರಿಸಿ ಹಾಡುತ್ತಾಳೆ. ಈ ಸ್ತ್ರೀಯರಲ್ಲಿಯೂ ಬಹುಪಾಲು ದೇವದಾಸಿಯರು.

[illegible]

ಆಕೆಗೆ ಈ ಕಲೆ ತನ್ನ ಅಜ್ಜನಿಂದ ಬಳುವಳಿಯಾಗಿ ಬಂದಿದೆ. ೭೮ ವರ್ಷದ ಅಜ್ಜ ಲಕ್ಕಪ್ಪ ದೇವರವರ ಇವರ ಹಿಮ್ಮೇಳದ ಜೊತೆಗಾರ. ಆಸ್ತಿ-ಅಂತಸ್ತು ಯಾವುದೂ ಇಲ್ಲದ ಈ ಕಲಾವಿದೆ ತನ್ನ ಕೈಯಲ್ಲಿ ಡಪ್ಪು ಹಿಡಿದಿದ್ದು ೭ ವರ್ಷದ ಬಾಲ್ಯದಲ್ಲಿ. ಓದಿದ್ದು ಕೇವಲ ೬ನೇ ತರಗತಿ. ವಯಸ್ಸು ೬೦ ವರ್ಷ. ಸಮಾಜದಲ್ಲಿ ನಿಮ್ಮ ಕಲೆಗೆ ಬೆಲೆ ಇದೆಯೇ ಎಂದು ಕೇಳಿದರೆ "ಬೆಲೆ ಇದೆ. ಬೆಳಗಿನವರೆಗೆ ಹಾಡಿದರೂ ಜನರು ಬೇಸರಿಸುವುದಿಲ್ಲಾ" ಎನ್ನುತ್ತಾರೆ. ಅವಳ ದೃಷ್ಟಿಯಲ್ಲಿ ಸಭಿಕರು ಚಿತ್ತವಿಟ್ಟು ಆಲಿಸುವುದೇ ಕಲಾವಿದರಿಗೆ ಸಲ್ಲುವ ಗೌರವ.

ಮಾದೇವಿ ದೇವದಾಸಿ. ಅವಳನ್ನು ಸಂದರ್ಶಿಸಿದಾಗ ದಲಿತ ಕಲಾವಿದೆಯರು ಅರಗಿಸಿಕೊಳ್ಳಲಾಗದ ಹಲವು ನೋವುಗಳು ಕೇಳಿಬಂದವು. ಅವಳಿಗೆ ತನ್ನ ಕಲೆಯ ಬಗ್ಗೆ ಅಭಿಮಾನವಿದೆ. ಆದರೆ ಅದನ್ನು ತನ್ನ ಮಕ್ಕಳಿಗೆ ಮುಂದುವರೆಸಲು ಇಷ್ಟವಿಲ್ಲ. ಅವರಿಗೆ ಶಿಕ್ಷಣ ನೀಡಿ ನೌಕರಿಗೆ ಸೇರಿಸಬೇಕೆಂಬ ಆಸೆ. ಕ್ಷೇತ್ರಕಾರ್ಯದಲ್ಲಿ ಸಂದರ್ಶಿಸಲಾದ ಯಾವ ದೇವದಾಸಿ ಕಲಾವಿದೆಯರು ತನ್ನ ಕಲೆಯನ್ನು ತನ್ನ ಮಕ್ಕಳಿಗೆ ಮುಂದುವರೆಸಲು ಇಷ್ಟಪಡುತ್ತಿಲ್ಲವೆಂಬುದು ಸ್ಪಷ್ಟವಾಯಿತು. ವಿಶೇಷವಾಗಿ ಲಾವಣಿ ಮೇಳಗಳಲ್ಲಿ ಮೇಲ್ವರ್ಗದ ಯಾವ ಸ್ತ್ರೀಯರು ಡಪ್ಪು ಹಿಡಿದು ಹಾಡುವುದಿಲ್ಲ. ಯಾವುದೇ ಮೇಳದಲ್ಲಿ ಹೆಣ್ಣುಮಗಳೊಬ್ಬಳು ಹಾಡುತ್ತಿದ್ದರೆ ಅವಳು ತಳವರ್ಗದವಳೇ ಆಗಿರುತ್ತಾಳೆ. ಹೆಚ್ಚಾಗಿ ದೇವದಾಸಿ ಪರಂಪರೆಗೆ ಸೇರಿದವಳಿರುತ್ತಾಳೆ. ಮೇಲ್ವರ್ಗದ ಜನಪದ ಕಲಾವಿದೆಯರು ಸಂಪ್ರದಾಯದ ಹಾಡುಗಳನ್ನು ಮಾತ್ರ ಹಾಡುತ್ತಾರೆ. ಈ ಹಾಡುಗಳಿಗೆ ಮನೆಯೇ ವೇದಿಕೆ. ಕೇಳುಗರೆಲ್ಲ ಹೆಣ್ಣುಮಕ್ಕಳು. ಪುರುಷ ಸಭಿಕರ ಎದುರಲ್ಲಿ ನಿಲ್ಲುವುದು ನಿಷಿದ್ಧವಾಗಿತ್ತು. ಬಣ್ಣ ಬಳಿದುಕೊಂಡು ಅಟ್ಟಹತ್ತಲು ಡಪ್ಪು ಹಿಡಿದು ಚಾಪ ಹಾಕಿ ಹಾಡಲು ನಮ್ಮ ಸಮಾಜ ಲೈಂಗಿಕ ಶೋಷಣೆಗೆ ಒಳಗಾದ ಮಹಿಳೆಯರನ್ನು ಹುಡುಕಿತು. ಮೇಲ್ವರ್ಗದ ಸ್ತ್ರೀಯರು ಅಪವಾದವೆಂಬಂತೆ ಭಜನೆ ಮೇಳಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಆದರೆ ಅಟ್ಟದ ಮೇಲೆ ಕಾಣಿಸಿಕೊಳ್ಳುವುದು ಅಪವಾದ.

[illegible]

ಲಾವಣಿಗಳಲ್ಲಿ ಹರದೇಶಿ ಗಂಡು, ನಾಗೇಶಿ ಹೆಣ್ಣು ಪಕ್ಷವನ್ನು ಪ್ರತಿನಿಧಿಸುತ್ತವೆ. ತಮ್ಮ ತಮ್ಮ ಪಕ್ಷವನ್ನು ಎತ್ತಿಕಟ್ಟಿ ಹಾಡುವಾಗ ಅಶ್ಲೀಲ ಪದಗಳು ಪ್ರಯೋಗಗೊಳ್ಳುತ್ತವೆ. ಮುಜುಗುರವನ್ನು ಎದುರಿಸುವ ಆ ಸಂದರ್ಭವನ್ನು ಎದುರಿಸುವಾಗ ಅವರೊಳಗಿನ ನೋವುಗಳು ಇಣುಕುತ್ತವೆ. ಅವುಗಳನ್ನು ಹತ್ತಿಕ್ಕುವ ಕಷ್ಟ ಎಲ್ಲವನ್ನು ಆ ದಲಿತ ಕಲಾವಿದೆಯರು ಸಹಿಸಿಕೊಳ್ಳುವುದು ಅನಿವಾರ್ಯವಾಗುತ್ತದೆ. ಯಾವ ಸಂದರ್ಭ ಅವರನ್ನು ಇಕ್ಕಟ್ಟಿಗೆ ಸಿಲುಕಿಸುವುದೊ ಅದುವೇ ರಸಿಕರಾದ ಸಭಿಕರಿಗೆ ಖುಷಿ ನೀಡುತ್ತದೆ. ಎಷ್ಟೇ ಜನ ಹೆಣ್ಣುಮಗಳೊಬ್ಬಳು ಹಾಡುತ್ತಾಳೆಂದೇ ಹಾಡು ಕೇಳಲು ಬರುತ್ತಿದ್ದರು. ಅವರಿಗೆ ಹಾಡು ಕೇಳುವುದಕ್ಕಿಂತಲೂ ಹಾಡುವವಳನ್ನು ನೋಡುವುದೇ ಮುಖ್ಯವಾಗಿತ್ತು. ಈ ಎಲ್ಲ ಅವಮಾನ ಹಾಗೂ ಕಷ್ಟಗಳನ್ನು ಅನುಭವಿಸಿದ ಆ ದಲಿತ ಕಲಾವಿದೆಯರು ತಮ್ಮ ಮಕ್ಕಳಿಗೆ ಕಲಾ ಪರಂಪರೆಯನ್ನು ಮುಂದುವರೆಸಲು ಇಚ್ಛಿಸುತ್ತಿಲ್ಲ. ಇದಕ್ಕೆ ವಿರುದ್ಧವಾದ ಅಭೀಪ್ಸೆ ಪುರುಷ ಕಲಾವಿದರದು. ಅವರು ತಮ್ಮ ಕಲಾಪರಂಪರೆಯನ್ನು ತಮ್ಮ ಮಕ್ಕಳಿಗೆ, ಮೊಮ್ಮಕ್ಕಳಿಗೆ ಮುಂದುವರೆಸಲು ಇಚ್ಛಿಸುತ್ತಾರೆ. ಕಲಾವಿದರ ಸಾಮಾಜಿಕ ಸ್ಥಾನ ಮಾನಗಳನ್ನು ನಿರ್ಧರಿಸುವಲ್ಲಿ ಈ ಲಿಂಗಭೇದದ ಸಂಘರ್ಷವನ್ನು ಗಂಭೀರವಾಗಿ ಪರಿಗಣಿಸಬೇಕೆನಿಸುತ್ತದೆ.

**೪. ರಂಗ ಕಲಾವಿದರು :**

ಬಾಗೆನಾಡಿನ ರಂಗಕಲಾವಿದರಲ್ಲಿ ಬಹುಸಂಖ್ಯಾತರು ಕೃಷ್ಣ ಪಾರಿಜಾತದ ನಟನಟಿಯರು. ಇವರನ್ನು ಹೊರತುಪಡಿಸಿ ಬೆರಳೆಣಿಕೆಯಷ್ಟು ರಂಗಕಲಾವಿದರು ಸಂಗ್ಯಾ–ಬಾಳ್ಯಾ ಡಪ್ಪಿನಾಟದವರು. ಈ ಹಿಂದೆ ಉಲ್ಲೇಖಿಸಿರುವಂತೆ ನಟಿಯರೆಲ್ಲ ತಳವರ್ಗದವರು ಬಹಳಷ್ಟು ಸಂದರ್ಭಗಳಲ್ಲಿ ಅವರನ್ನು ರಂಗದ ಮೋಡಿಗಾಗಿಯೇ ಬಳಸಲಾಗುತ್ತಿತ್ತು. ಪುರುಷರೇ ಸ್ತ್ರೀಯರ ಪಾತ್ರಗಳನ್ನು ಹಾಕುತ್ತಿದ್ದ ಆ ಕಾಲದಲ್ಲಿ ಸ್ತ್ರೀಯರು ರಂಗದ ಮೇಲೆ ಕಾಣಿಸಿಕೊಳ್ಳುವುದೇ ಒಂದು ಪ್ರಮುಖ ಆಕರ್ಷಣೆಯಾಗಿತ್ತು. ತಳವರ್ಗದ ಶೋಷಿತ ಸಮುದಾಯದ ಮಹಿಳೆಯರನ್ನು ಅಟ್ಟಕ್ಕೆ

[illegible]

[illegible]

[illegible]

ತಂದು ಜನಪ್ರಿಯತೆ ಸಾಧಿಸಿದುದು ಜನಪದ ರಂಗಭೂಮಿಯ ಸಾಹಸ. ಈ ಸಾಹಸದಲ್ಲಿ ಹುನ್ನಾರವೂ ಇತ್ತು. ಇಂದು ಜನಪದ ರಂಗಭೂಮಿಯ ಮೇಲೆ ಮಿಂಚುತ್ತಿರುವ ಈ ನಾಡಿನ ಹಿರಿಯ ಕಲಾವಿದೆಯರೆಂದರೆ ಹಿಡಕಲ್ಲದ ಮಾಲಾ ಸಾಂಬ್ರೇಕರ ಹಾಗೂ ಕಂಣವಾಡಿಯ ಶಾಂತವ್ವ ಅಂಬಿನಾಯಕ. ೯೨ ವಯಸ್ಸಿನ ಸವಸುದ್ದಿಯ ಮಲೀಕಸಾಬ ಲಡಜಿಸಾಬ ನದಾಫ, ಲಕ್ಷ್ಮಣಗೌಡ ಪಾಟೀಲ, ೭೦ ವರ್ಷದ ಸಿದ್ದಾಪೂರದ ಬಾಬಾಲಾಲ ನದಾಫ ಕೃಷ್ಣ ಪಾರಿಜಾತದ ಹಿರಿಯ ನಟರು. ಕಂಕಣವಾಡಿಯ ಸದಾಶಿವ ಗದಗೈಯಗೋಳ, ಸವಸುದ್ದಿಯ ಮೀರಾಸಾಬ ನದಾಫ, ಕಂಕಣವಾಡಿಯ ಹಸನಸಾಬ ನದಾಫ ಪ್ರಮುಖ ತರುಣ ರಂಗ ಕಲಾವಿದರು.

ಆ ಕಾಲದಲ್ಲಿ ಸಿದ್ದಾಪುರದ ಬಾಬಾಲಾಲ ನದಾಫ ಹಾಗೂ ಸವಸುದ್ದಿಯ ಮಲಿಕಸಾಬ ನದಾಫ ಇಬ್ಬರೇ ಬಾಗೆನಾಡಿನಲ್ಲಿ ಪಾರಿಜಾತದ ಕಂಪನಿ ಕಟ್ಟಿದವರು. ಮಲಿಕಸಾಬನ ಗುರು ಕುಲಗೋಡದ ರಾಮಣ್ಣ ಚಿಟಗುಪ್ಪಿ. ಸವಸುದ್ದಿಯ ಕೀರ್ತೆಪ್ಪ ಪರಗೊಂಡಪ್ಪ ಪಾಟೀಲ ಚಿಟಗುಪ್ಪಿ ರಾಮಣ್ಣನನ್ನು ಕುಲಿಗೂಡದಿಂದ ಕರೆಯಿಸಿ ನೆರವು ನೀಡಿ ಮಲಿಕಸಾಬ ಕಂಪನಿ ಕಟ್ಟಲು ಪ್ರೋತ್ಸಾಹಿಸಿದ್ದನು. ಆತ ಸಾಮಾಜಿಕ ಗೌರವದ ಬಗ್ಗೆ ತೆಲೆಕೆಡೆಸಿಕೊಂಡಿಲ್ಲ. ಸರಕಾರ ತನ್ನ ಕಲೆಯನ್ನು ಗುರುತಿಸಿ ಮಾಶಾಸನ ನೀಡಿದ್ದಕ್ಕೆ ತೃಪ್ತಿ ಇದೆ.

ಒಂದು ಕಾಲದಲ್ಲಿ ಪಾರಿಜಾತದ ಖ್ಯಾತ ನಟನಾದ ಬಾಬಾಲಾಲ ನದಾಫ ಹಾಗೂ ಮಲಿಕಸಾಬ ನದಾಫ ಇಂದು ಚಲಾವಣೆ ಇಲ್ಲದ ನಾಣ್ಯಗಳು. ಮುಪ್ಪು ಬಂದು ಮೂಲೆ ಹಿಡಿದಿದ್ದಾರೆ. ಆದರೆ ತಮ್ಮ ಸಾಮಾಜಿಕ ಸ್ಥಾನ–ಮಾನದ ಕುರಿತು ಯೋಚಿಸುವುದಿಲ್ಲ. ಜನ ರಂಗ ಕಲಾವಿದರನ್ನು ದೈನಂದಿನ ಬದುಕಿನಲ್ಲಿ ಅಷ್ಟಾಗಿ ನಂಬುವುದಿಲ್ಲ. ನಾಟಕದವರ ಬದುಕಿನ ಬಗ್ಗೆ ಅನುಮಾನ ಇದ್ದೇ ಇರುತ್ತದೆ. ಅವರನ್ನು ಚುಚ್ಚು ಮಾತಿನಿಂದ ಆಗಾಗ ತಿವಿಯುತ್ತಾರೆ. ಇಂತಹ ಹುಸಿ ಆಪಾದನೆಗಳಿಗೆ ಸೊಪ್ಪು ಹಾಕದೇ ಬದುಕುವ ಗಟ್ಟಿ ಕಲಾವಿದರ ಮನೋಸ್ಥೈರ್ಯವನ್ನು ಮೆಚ್ಚಬೇಕು. ಅವರು ಪರಸ್ಪರರನ್ನು ಗೌರವಿಸುತ್ತಾರೆ. ಸಾಮಾಜಿಕ ಅಸಡ್ಡೆಯನ್ನು ಪ್ರಶ್ನಿಸುವುದಿಲ್ಲ. ಆದರೆ ಜನಪದ ಕಲಾರಾಧಕರ ಸಂಖ್ಯೆ

ದಿನದಿಂದ ದಿನ ಕರಗುತ್ತಿರುವ ಕಳವಳ ಮಾತ್ರ ಅವರ ಮನದಾಳದಲ್ಲಿ ಮಡುಗಟ್ಟಿ ನಿಂತಿದೆ.

ಸರಕಾರ ಜನಪದ ಕಲಾವಿದರನ್ನು ಗುರುತಿಸಿ ಗೌರವಿಸುವ ಹಾಗೂ ಜನಪದ ಕಲೆಗಳನ್ನು ಪ್ರೋತ್ಸಾಹಿಸುವ ಹಲವು ಯೋಜನೆಗಳನ್ನು ಹಮ್ಮಿಕೊಂಡಿವೆ. ಅದಕ್ಕಾಗಿ ಪ್ರತ್ಯೇಕ ಇಲಾಖೆ, ಅಕಾಡೆಮಿಗಳ ಸ್ಥಾಪನೆಗೊಂಡಿವೆ. ಕಲಾವಿದರಿಗೆ ಮಾಶಾಸನ ನೀಡುವುದೂ ಸರಕಾರಿ ಗೌರವದ ಒಂದು ವಿಧ. ಮಾಶಾಸನ ನೀಡುವುದು, ಪ್ರಶಸ್ತಿಗಳನ್ನು ಪೋಷಿಸುವುದು, ಸಭೆ–ಸಮಾರಂಭಗಳಲ್ಲಿ ಸನ್ಮಾನಿಸುವುದು ಮುಂತಾದ ಹಲವು ಕಾರ್ಯಕ್ರಮಗಳನ್ನು ರೂಪಿಸಿದೆ. ಆದರೆ ಸರಕಾರಿ ಗೌರವ ಪಡೆಯುವ ಭಾಗ್ಯ ಎಲ್ಲ ಕಲಾವಿದರಿಗೆ ಇರುವುದಿಲ್ಲ. ಜನಪದ ಕಲಾವಿದರ ಕಲಾ ಪ್ರತಿಭೆಯನ್ನು ಗುರುತಿಸುವುದು ಸುಲಭವಲ್ಲ. ಬಹುಪಾಲು ಕಲಾವಿದರು ನಿರಕ್ಷರಿಗಳು. ಸರಕಾರಿ ಪ್ರಕಟಣೆಗಳನ್ನು ಗಮನಿಸದವರು, ಪುರಸ್ಕಾರಗಳಿಗೆ ಲಾಭಿ ಮಾಡದವರು. ಇವೆಲ್ಲಕ್ಕಿಂತ ಮುಖ್ಯವಾಗಿ ತಮ್ಮ ಕಲಾ ಪ್ರತಿಭೆಯನ್ನು ಸಾಬೀತುಪಡಿಸುವ ದಾಖಲೆಗಳನ್ನು ಸಂಗ್ರಹಿಸಿ ವೈಯಕ್ತಿಕ ವಿವರಗಳನ್ನು ಇಟ್ಟುಕೊಳ್ಳದವರು. ಅವರದೇನಿದ್ದರೂ ಬಾಯಿಮಾತಿನ ಹೇಳಿಕೆಗಳು. ಹೀಗಿರುವಾಗ ನಿಜವಾದ ಕಲಾವಿದರು ಸರಕಾರಿ ಗೌರವದಿಂದ ವಂಚಿತಗೊಳ್ಳುವ ಅಪಾಯ ಹೆಚ್ಚು. ಒಮ್ಮೊಮ್ಮೆ ಅದಷ್ಟು ಪ್ರಯತ್ನಿಸಿದರೂ ಮಾಶಾಸನ ಸಿಗುವುದಿಲ್ಲ. ಮಾಶಾಸನವನ್ನು ಸರಕಾರಿ ಗೌರವವೆಂದು ಭಾವಿಸಿರುವ ಕಲಾವಿದರು ಜಿದ್ದಿನಿಂದ ಅದರ ಬೆನ್ನು ಬಿಡುವುದಿಲ್ಲ. ರಾಯಬಾಗ ತಾಲೂಕಿನಲ್ಲಿ ಅತಿ ಹೆಚ್ಚು ಮಾಶಾಸನ ಪಡೆಯುವ ಕಲಾವಿದರ ಗ್ರಾಮ ಸವಸುದ್ದಿ. ಇಲ್ಲಿ ೯ಜನ ರಾಜ್ಯ ಸರಕಾರ ಹಾಗೂ ೭ಜನ ಕೇಂದ್ರ ಸರಕಾರದಿಂದ ಮಾಶಾಸನ ಪಡೆಯುತ್ತಿದ್ದಾರೆ. ಇವರೆಲ್ಲರಿಗೂ ಮಾಶಾಸನದ ಸೌಲಭ್ಯವನ್ನು ತಿಳಿಸಿ ಮಾಶಾಸನದ ಸೌಲಭ್ಯವನ್ನು ಪಡೆಯುವಂತೆ ಮಾಡಿದವರು ಮಲೀಕಸಾಬ ನದಾಫ. ಕೇಂದ್ರ ಮತ್ತು ರಾಜ್ಯ ಸರಕಾರದ ಮಾಶಾಸನ ಪಡೆಯುವ ಹಲವು ಕಲಾವಿದರಲ್ಲಿ ತಮ್ಮ ಕಲಾಸೇವೆಯ ಧನ್ಯತೆ ಭಾವವಿದೆ. ಸರಕಾರ ಹಾಗೂ ವಿವಿಧ ಸರಕಾರಿ ಪೋಷಿತ ಅಕಾಡೆಮಿಗಳು ಸರಿಯಾಗಿ ಕಾರ್ಯ ನಿರ್ವಹಿಸಿದಲ್ಲಿ ಜನಪದ ಕಲಾವಿದರು ಸಾಮಾಜಿಕ ಗೌರವ ಪಡೆಯಬಹುದಾಗಿದೆ. ಇದಕ್ಕೆ ಸೂಕ್ತ

ವ್ಯವಸ್ಥೆ ಹಾಗೂ ನಿಯಮಾವಳಿಗಳು ರೂಪಿತಗೊಳ್ಳುವ ಅಗತ್ಯವಿದೆ. ಆಕಾಶವಾಣಿ ಅಥವಾ ದೂರದರ್ಶನದಲ್ಲಿ ತಮ್ಮ ಕಲೆ ಬಿತ್ತರಗೊಂಡರೆ ಅದು ಒಂದು ವಿಧದ ಸಾಮಾಜಿಕ ಗೌರವವೆಂದು ಜನಪದ ಕಲಾವಿದರಲ್ಲಿದೆ. ಈ ಎಲ್ಲ ಅವಕಾಶಗಳನ್ನು ಪಡೆಯುವ ದಾರಿಗಳೇ ಬಹುಸಂಖ್ಯಾತ ಕಲಾವಿದರಿಗೆ ಗೊತ್ತಿಲ್ಲ. ಪ್ರತಿಭಾನ್ವಿತ ಕಲಾವಿದರ ಶೋಧ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮುಖ್ಯ ಕೆಲಸವಾಗಬೇಕು. ಜಿಲ್ಲಾ ಮಟ್ಟದಲ್ಲಿ ಮಾತ್ರ ಇರುವ ಅದರ ಕಾರ್ಯಾಲಯ ತಾಲೂಕು ಮಟ್ಟಕ್ಕೆ ವ್ಯಾಪಿಸಬೇಕು. ಶಿಷ್ಟ ಕಲೆ, ಸಿನಿಮಾ, ಶಾಸ್ತ್ರೀಯ ಸಂಗೀತ, ಕ್ರೀಡೆಗಳಿಗೆ ಹೋಲಿಸಿದರೆ ಜನಪದ ಕಲೆಗಳಿಗೆ ಸಮಾಜ ಹಾಗೂ ಸರಕಾರ ಕೊಡುವ ಪುರಸ್ಕಾರ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಿದೆ.

**********

[illegible]

# ಅಧ್ಯಾಯ : ೬ ಕಲಾವಿದರ ಆರ್ಥಿಕ ಸ್ಥಿತಿ–ಗತಿಗಳು

## ಅಧ್ಯಾಯ–ಆರು

# ಕಲಾವಿದರ ಆರ್ಥಿಕ ಸ್ಥಿತಿ–ಗತಿಗಳು

ಕಲೆಯ ಬೆಲೆಯನ್ನು ಕಟ್ಟುವುದು ಯಾರಿಗೂ ಸಾಧ್ಯವಿಲ್ಲವೆಂಬ ಮಾತು ಪ್ರಚಲಿತದಲ್ಲಿದೆ. ಕಲೆ ಮತ್ತು ಕೃತಿಯನ್ನು ಬೇರ್ಪಡಿಸಿ ನೋಡಲಾಗದು. ಕವಿ ನೇಮಿಚಂದ್ರ "ಬೆಲೆಯಿಂದಕ್ಕುಮೆ ಕೃತಿ ಗಾವಿಲ ಭುವನದ ಭಾಗ್ಯದಿಂದಕ್ಕುಂ॥" ಎಂದು ಹೇಳುವ ಮಾತು ಕಲೆಗೂ ಅನ್ವಯಿಸುತ್ತದೆ. 'ಬೆಲೆಯಿಂದಕ್ಕುಮೆ ಕಲೆ ಗಾವಿಲ ಭುವನದ ಭಾಗ್ಯದಿಂದಕ್ಕುಂ' ಎಂದು ಹೇಳುವುದು ಕೇವಲ ಆದರ್ಶದ ಮಾತು. ವಾಸ್ತವವಾಗಿ ಕವಿ ಮತ್ತು ಕಲಾವಿದರ ಆರ್ಥಿಕ ಸ್ಥಿತಿ–ಗತಿಗಳು ಆದರ್ಶದ ಹುಸಿಯನ್ನು ಅನಾವರಣಗೊಳಿಸುತ್ತವೆ. ಕವಿ ಮುದ್ದಣ್ಣ ತನ್ನ ರಾಮಾಶ್ವಮೇಧದಲ್ಲಿ ಚಿತ್ರಿಸಿದ 'ಸಪ್ತಾಕ್ಷರಿ ಮಂತ್ರ' ಸನ್ನಿವೇಶವನ್ನು ನೆನಪಿಸಿಕೊಳ್ಳುವುದು ಉಚಿತವೆನಿಸುತ್ತದೆ. ಆ ಹಾಸ್ಯ ಸನ್ನಿವೇಶ ಕಾವ್ಯ ಮತ್ತು ಕಲಾ ಪ್ರಪಂಚಗಳ ಹಿಂದಿನ ದೈನ್ಯತೆಯನ್ನು ಬಯಲುಗೊಳಿಸುತ್ತದೆ. ಚಲನಚಿತ್ರದಂಥ ಆಧುನಿಕ ಮಾದಯಮಗಳ ಕಲಾವಿದರನ್ನು ಹೊರತುಪಡಿಸಿ ಕಲಾವಿದರ ಆರ್ಥಿಕ ಪರಿಸ್ಥಿತಿ ಅಷ್ಟಕ್ಕಷ್ಟೆ. ಅದರಲ್ಲೂ ಜನಪದ ಕಲಾವಿದರ ಜೀವನಮಟ್ಟ ತೀರಾ ಕೆಳಸ್ತರದ್ದು. ಆಧುನಿಕತೆಯ ಗಾಳಿಯಲ್ಲಿ ಕೊಚ್ಚಿಹೋಗುತ್ತಿರುವ ಈ ನೆಲದ ಪರಂಪರಾಗತ ಕಲೆಗಳನ್ನು ಉಳಿಸಿಕೊಂಡು ಬರುತ್ತಿರುವ ಕಲಾವಿದರ ಸ್ಥಿತಿ ಶೋಚನೀಯವಾದುದು.

ಚಲನಚಿತ್ರಗಳು ಬಂದ ಮೇಲೆ ನಾಟಕಗಳು ಮರೆಯಾದವು. ಕಂಪನಿ ನಾಟಕಗಳ ಕಲಾವಿದರು ಬೀದಿ ಪಾಲಾದರು. ಕಂಪನಿ ಮಾಲಿಕರು ದಿವಾಳಿಯಾದರು.

ಅದಕ್ಕೂ ಹಿಂದೆ ಕಂಪನಿ ನಾಟಕಗಳ ಯುಗ ಆರಂಭವಾದಾಗ ಆಟಗಳ ಅಟ್ಟ ಕುಸಿಯತೊಡಗಿದವು. ಇಂದು ಜನಪದ ಕಲೆಗಳು ಜನಾಕರ್ಷಣೆಯನ್ನು ಕಳೆದುಕೊಂಡಿವೆ. ಮನೆ–ಮನೆಗೆ ದೂರದರ್ಶನ ಪೆಟ್ಟಿಗೆಗಳು ಬಂದ ಮೇಲೆ, ಅದರೊಳಗೆ ರಂಗುರಂಗಿನ ಬದುಕು ಮೂಡಿದ ಮೇಲೆ ಜನಪದ ಕಲೆಗಳು ಕ್ರಮೇಣ ಮಸಕಾಗತೊಡಗಿದವು. ಆ ಕಲೆಗಳನ್ನು ವೃತ್ತಿಗೂ ಹವ್ಯಾಸಕ್ಕೂ ಒಗ್ಗಿಸಿಕೊಂಡಿದ್ದ ಕಲಾವಿದರ ಬದುಕು ಹೀನಾಯಸ್ಥಿತಿ ತಲುಪಿತು. ಸಾವಿರಾರು ಜನ ಬಯಲಲ್ಲಿ ಕುಳಿತುಕೊಂಡು ಬೆಳ್ಳಂಬೆಳಗಿನವರೆಗೆ ಕಣ್ಣು ಮುಚ್ಚದೆ ಕುಳಿತು, ಕೃಷ್ಣಪಾರಿಜಾತವನ್ನು ನೋಡುವ ಕಾಲವೊಂದು ಉತ್ತರಕರ್ನಾಟಕದಲ್ಲಿತ್ತು. ರಸಿಕರು ಕಲಾವಿದರ ಅಭಿನಯಕ್ಕೆ ಕರಗುತ್ತಿದ್ದರು. ಕೆಲವು ಶ್ರೀಮಂತ ರಸಿಕರು ನೋಟುಗಳ ಮಾಲೆ ಮಾಡಿ ಕಲಾವಿದರ ಕೊರಳಿಗೆ ಹಾಕುತ್ತಿದ್ದರು. ಲಾವಣಿಕಾರರ ತಲೆಯ ಮೇಲಿನ ರುಮಾಲಿಗೆ ನೋಟುಗಳನ್ನು ಪಿನ್ನು ಚುಚ್ಚಿ ಅಂಟಿಸುತ್ತಿದ್ದರು. ಆಗ ಕಲಾವಿದರಿಗೆ ಆಗುವ ಸಂತೋಷ ಅಪಾರ. ಯಾರೋ ಒಬ್ಬ ಬಡರಸಿಕ ಒಂದು ರೂಪಾಯಿ ಬಹುಮಾನ ನೀಡಿದರೂ ಕಲಾವಿದರು ಅದನ್ನು ಸ್ವೀಕರಿಸುವ ರೀತಿಯೇ ವಿಶಿಷ್ಟವಾಗಿತ್ತು. "ನಮ್ಮ ಅಲ್ಪಕಲೆಯನ್ನು ಕಂಡು ಕಲಾರಸಿಕರಾದ _ _ _ _ _ _ _ _ ಇವರು ಒಂದು ರೂಪಾಯಿಯನ್ನು ಬಹುಮಾನ ಕೊಟ್ಟಿದ್ದು, ಇದು ಒಂದು ರೂಪಾಯಿಯಲ್ಲ ಒಂದು ಕೋಟಿ ರೂಪಾಯಿ ಬಹುಮಾನವೆಂದು ಭಾವಿಸಿ ಸ್ವೀಕರಿಸುತ್ತೇನೆ. ಅವರಿಗೆ ನಾನು ಆಭಾರಿಯಾಗಿದ್ದೇನೆ" ಎಂದು ಹೇಳುತ್ತಿದ್ದರು.ಇದರ ಹಿಂದಿನ ಆಶಯವನ್ನು ಯೋಚಿಸಬೇಕು.

ನಮ್ಮ ಪೂರ್ವಜರು ಎಲ್ಲ ಕಲೆ ಹಾಗೂ ಕಲಾವಿದರನ್ನು ಸಮಾನ ದೃಷ್ಟಿಯಿಂದ ನೋಡುತ್ತ ಬಂದಿದ್ದರು. ಕಲೆ ಯಾವುದೇ ಆಗಿರಲಿ ಅಥವಾ ಕಲಾವಿದ ಯಾರೇ ಆಗಿರಲಿ ಆ ಕಲೆಯನ್ನು ನೋಡಿ ಮನಸ್ಸು ಕರಗಿದರೆ ಸಾಕು ಖುಷಿಯಿಂದ ಬಹುಮಾನಗಳನ್ನು ನೀಡುತ್ತಿದ್ದರು. ಇದಕ್ಕೆ ಬಾಗೆನಾಡಿನಲ್ಲಿ ಒಂದು ದೊಡ್ಡ ಇತಿಹಾಸವೇ ಇದೆ. ಸುಮಾರು ೧೦೦ ವರ್ಷಗಳ ಹಿಂದೆ ಖ್ಯಾತ ಜನಪದ ಗಾಯಕಿ ಮುಗಳಖೋಡದ ರಂಗವ್ವ ಕಾಖಂಡಕಿಯ ಚೌಡಿಕೆಯ ಪದ ಆಲಿಸಿ ಬೀರಪ್ಪ

ಹಳಿಂಗಳಿ ಆಕೆಗೆ ಉಣ್ಣುವುದಕ್ಕೆ ತನ್ನ ಹೊಲವನ್ನು ಉಂಬಳಿಯಾಗಿ ನೀಡಿದ ಉದಾಹರಣೆ ಇಲ್ಲಿದೆ. ಸಾಕಷ್ಟು ಬಡಕಲಾವಿದರನ್ನು ಕಲಾರಸಿಕರು ತಮ್ಮ ಮನೆಯಲ್ಲಿಯೇ ಹಲವಾರು ದಿನಗಳ ಕಾಲ ಇಟ್ಟುಕೊಂಡ ನಿದರ್ಶನಗಳಿವೆ. ಆತನ ಕಲೆ ಉಳಿಯಬೇಕು. ಅದು ನಮ್ಮ ಗ್ರಾಮಕ್ಕೆ ಮಾತ್ರ ಸೀಮಿತವಾಗಿರದೇ ಸುತ್ತ-ಮುತ್ತಲಿನ ಗ್ರಾಮಗಳಿಗೆ ಪಸರಿಸಬೇಕೆಂಬ ಈ ದೃಷ್ಟಿಯಿಂದಲೇ ಕಲಾ ತಂಡಗಳನ್ನು ಕಟ್ಟಿ ಬೇರೆ-ಬೇರೆ ಹಳ್ಳಿಗೆ ಕಳುಹಿಸುವ ಖರ್ಚನ್ನು ನೋಡಿಕೊಂಡ ಕಲಾಪ್ರೇಮಿಗಳಿದ್ದಾರೆ. ಬಾಗೆನಾಡಿನ ಮಟ್ಟಿಗೆ ಹೇಳುವುದಾದರೆ ಕಲಾರಸಿಕರಿಗೆ ಕೊರತೆಯಿರಲಿಲ್ಲ. ಇಲ್ಲಿಯ ಜಟ್ಟಿಗಳನ್ನು ಕೊಲ್ಲಾಪುರದ ಮಹಾರಾಜರು ತಮ್ಮ ಆಸ್ಥಾನಕ್ಕೆ ಕರೆದುಕೊಂಡು ಹೋಗಿ ಪೋಷಿಸುತ್ತಿದ್ದರು. ಹಿಡಕಲ್ಲದ ದ್ಯಾವಪ್ಪ ಬೆಳಗಲಿಯನ್ನು ಕೊಲ್ಲಾಪುರದ ಶಾಹು ಮಹಾರಾಜರು ಜಟ್ಟಿಯಾಗಿ ಬೆಳೆಸಿದುದನು ಹಿಂದೆ ಹೇಳಿದೆ. ಅವನಂಥ ಕುಸ್ತಿಪಟುಗಳೇ ಕೊಲ್ಲಾಪುರದ ಪರಿಸರದಲ್ಲಿ ಇರಲಿಲ್ಲ. ಅವನಿಗೆ ಜಮೀನು ಉಂಬಳಿ ಕೊಟ್ಟು ಅವನ ಬದುಕಿನ ಎಲ್ಲ ಹೊಣೆ ಹೊತ್ತಿದ್ದರು. ಅದೇ ಜಮೀನದಲ್ಲಿ ಈಗ ಅವನ ಸಮಾಧಿ ಇದೆ. ಅದರ ಮೇಲೆ ಪುಟ್ಟ ಗುಡಿಯೊಂದು ನಿರ್ಮಾಣಗೊಂಡಿದ್ದು, ಅದುವೇ ದ್ಯಾವಪ್ಪನ ಸ್ಮಾರಕವಾಗಿದೆ. ಇವು ನಮ್ಮ ಕಣ್ಣು ಮುಂದಿರುವ ಕೆಲವು ನಿದರ್ಶನಗಳು. ಕಲಾವಿದರ ಕಲಾಪೋಷಣೆಯ ಇಂತಹ ಹಲವಾರು ಉದಾಹರಣೆಗಳು ಬಾಗೆನಾಡಿನಲ್ಲಿವೆ. ಕಲೆ, ಸಾಹಿತ್ಯ ಬೆಳೆಯ ಬೇಕಾದರೆ ಉದಾರ ಮನಸ್ಸಿನ ಪೋಷಕರು ಬೇಕು. ಆಧುನಿಕತೆ ನಮ್ಮ ಪ್ರಾಚೀನ ಕಲಾಪರಂಪರೆಗೆ ಮಾರ್ಗವಾಗುತ್ತದೆ. ಸಾಂಸ್ಕೃತಿಕ ಪಲ್ಲಟದ ಈ ಸಂಘರ್ಷ ಜನಪದ ಕಲೆಗಳ ಮೇಲೆ ಬೀರಿದ ಪರಿಣಾಮ ಕುರಿತು ಮುಂದಿನ ಅಧ್ಯಾಯದಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ಕಲಾವಿದರ ಆರ್ಥಿಕ ಸ್ಥಿತಿ ಗತಿಗಳ ಅಧ್ಯಯನಕ್ಕೆ ಒತ್ತು ಕೊಡಲಾಗಿದೆ.

[illegible]

೧. ದೈವಾರಾಧನಾ ಕೇಂದ್ರಿತ ಕಲೆಗಳ ಕಲಾವಿದರು :

ಜನಪದ ಕಲೆಗಳು ಮೂಲದಲ್ಲಿ ದೈವಾರಾಧನೆಯ ಒಂದು ಭಾಗವಾಗಿ ಹುಟ್ಟುಪಡೆದವು. "ಒಂದು ಕಾಲಕ್ಕೆ ಆಯಾ ದೈವಗಳ ಆರಾಧನೆಯ ಕ್ರಮಗಳಾಗಿ, ಕ್ರಿಯೆಗಳಾಗಿ, ರೂಪುಗೊಂಡು ಕಾಲಾನಂತರದಲ್ಲಿ ಕಲೆಗಳ ಸ್ವರೂಪವನ್ನು ಪಡೆದುಕೊಂಡ ಅಂಶ ಇಲ್ಲಿ ಮುಖ್ಯ. ಏಕೆಂದರೆ ಈ ಆರಾಧನಾ ಕಲೆಗಳು ಅವುಗಳಷ್ಟಕ್ಕೆ ಅವು ಸ್ವತಂತ್ರವಲ್ಲ. ಏಕೆಂದರೆ ಅಲ್ಲೊಂದು ದೈವವಿರುತ್ತದೆ, ಒಂದು ಸಂದರ್ಭವಿರುತ್ತದೆ ಹಾಗೂ ಆ ಸಂದರ್ಭಕ್ಕೊಂದು ಮಹತ್ವದ ಅರ್ಥವಿರುತ್ತದೆ. ಅಂಥ ವಿಶಿಷ್ಟ ಸಂದರ್ಭದಲ್ಲಿ ಆರಾಧನೆ ಮತ್ತು ಆಚರಣೆಗಳು, ಕುಣಿತ, ನರ್ತನ, ಹಾಡು ಹಾಗೂ ಅಂಗಾಂಗ ಅಭಿನಯಗಳ ಮೂಲಕ ಪ್ರಕಟಗೊಳ್ಳುತ್ತವೆ. ಆರಾಧನೆಯನ್ನು ಇಂಥ ಕ್ರಿಯೆಗಳ ಮೂಲಕ ಪ್ರಕಟಿಸುವ ವಿಶಿಷ್ಟ ಸಂದರ್ಭದ ಕಲೆಗಳನ್ನು ಕೆಲವೊಮ್ಮೆ ಕಲೆಗಳೆಂದು ಕರೆಯಬೇಕೇ ಅಥವಾ ಆರಾಧನಾ ಘಟಕಗಳೆಂದು ಕರೆಯಬೇಕೇ ಎಂಬ ಅನುಮಾನ ಕೂಡ ಹುಟ್ಟುತ್ತದೆ."[೧] ಇಂದಿಗೂ ಕೆಲವು ಕಲೆಗಳು ಉಪಾಸನೆಯ ರೂಪದಲ್ಲಿಯೇ ಪ್ರದರ್ಶಿತಗೊಳ್ಳುತ್ತವೆ. ಆರಾಧನೆಯ ವಿಶಿಷ್ಟ ಸಂದರ್ಭದ ಕ್ರಿಯೆಗಳಾಗಿಯೋ ಅಥವಾ ಪ್ರತಿಕ್ರಿಯೆಗಳಾಗಿಯೋ ಕಾಣಿಸಿಕೊಳ್ಳುತ್ತವೆ. ಈ ಕಲಾವಿದರು ತಮ್ಮ ಕಲಾಪ್ರದರ್ಶನವನ್ನು ದೈವದ ಸೇವೆಯೆಂದೆ ಪರಿಗಣಿಸುತ್ತಾರೆ. ಯಲ್ಲಾಪುರಟ್ಟಿಯ ರತ್ನವ್ವ ಸಿದ್ದಪ್ಪ ಹಳಕಲ್ಲ ವೃದ್ಧ ಹಿರಿಯ ಚೌಡಿಕೆ ಕಲಾವಿದೆ. ವಯಸ್ಸು ೮೦ ವರ್ಷ. ಅವಳು ತನ್ನ ಕಲೆಯನ್ನು ದೇವಿಯ ಆರಾಧನೆಗೆ ಮೀಸಲಿಟ್ಟ ಸೇವೆ ಎಂದು ಭಾವಿಸುತ್ತಾಳೆ. ಒಬ್ಬ ಕಲಾವಿದೆಯಾಗಿ ನೀವು ಬದುಕಿನಲ್ಲಿ ಸಾಧಿಸಿದ್ದೇನು ಎಂದು ಕೇಳಿದಾಗ "ದೇವರ ಸೇವೆಯನ್ನು ಮಾಡುವುದರಲ್ಲಿ ಸಾಧಿಸುವುದೇನಿದೆ" ಎಂದು ಮರುಪ್ರಶ್ನಿಸುತ್ತಾಳೆ. ಇದು ಕೇವಲ ರತ್ನವ್ವ ಹಳಕಲ್ಲ ಅವರ ಅಭಿಮತವಲ್ಲ. ದೈವಾರಾಧನಾ ಕೇಂದ್ರಿತ ಅನುಭವಿ ಕಲಾವಿದರೆಲ್ಲರೂ ಹೇಳುವ ಮಾತು. ತಾವು ಪ್ರದರ್ಶಿಸುವ ಕಲೆ ದೈವಿ

---

೧. ಸಂ.ಹಿ.ಚಿ.ಬೋರಲಿಂಗಯ್ಯ : ಕರ್ನಾಟಕ ಜನಪದ ಕಲೆಗಳ ಕೋಶ, ಪುಟ : ೧೦, ೧೧

[illegible]

ಸ್ಫೂರ್ತಿಯ ಅಭಿವ್ಯಕ್ತಿ ಎಂಬ ಗಟ್ಟಿ ನಂಬುಗೆ ಅವರಲ್ಲಿದೆ. ಹಾರೂಗೇರಿಯ ತಾಯವ್ವ ಮಾದರ ಎಂಬ ಮತ್ತೊಬ್ಬ ಕಲಾವಿದೆಗೆ ತಮ್ಮ ಹಾಡಿನ ವೈಶಿಷ್ಟ್ಯವೇನು? ಎಂದು ಕೇಳಿದಾಗ 'ಅದು ದೈವಿ ಕೃಪೆ' ಎಂದು ಕೈಮುಗಿದಳು.

ಬಾಗೆನಾಡಿನ ಮುಕ್ಕಾಲು ಪಾಲು ಕಲಾವಿದರೆಲ್ಲ ಇಂಥವರೇ. ಕಲಾಪ್ರದರ್ಶನಕ್ಕೆ ಒಂದು ಕಲಾಮೇಳವನ್ನು ಆಹ್ವಾನಿಸುವಾಗ 'ಸಂಚಕಾರ' ಕೊಡುವುದು ಇಲ್ಲಿಯ ಸಾಮಾನ್ಯ ಪದ್ಧತಿ. ಸಂಚಕಾರವೆಂದರೆ 'ವೀಳ್ಯೆ' ನೀಡುವುದು. ಎಲೆ ಅಡಿಕೆಯೊಂದಿಗೆ ಒಂದಿಷ್ಟು ಮುಂಗಡ ಹಣ ಕೊಡುವುದು ಸಂಚಕಾರದ ವಿಧಾನ. ಮದುವೆ, ಮುಂಜಿ ಮೊದಲಾದ ಸಂದರ್ಭಗಳಲ್ಲಿ ಮಂಗಲವಾದ್ಯ ಮೇಳವನ್ನು ಆಹ್ವಾನಿಸುವಾಗ ಸಂಚಕಾರ ಕೊಡುವರು. ಆದರೆ ದೇವರ ಉತ್ಸವ, ಜಾತ್ರೆ, ಹಬ್ಬ-ಹರಿದಿನಗಳಲ್ಲಿ ಡೊಳ್ಳಿನ ಮೇಳಗಳನ್ನು ಅಹ್ವಾನಿಸುವಾಗ ಸಂಚಕಾರದ ಬದಲು ಭಂಡಾರ ಕೊಡುವರು. ವೃತ್ತಿ ಕಲಾವಿದರು ಎಲೆ ಅಡಿಕೆಯೊಂದಿಗೆ ಪಡೆಯುವ ಸಂಚಕಾರ ಸಾಮಾಜಿಕ ಗೌರವದ ಸಂಕೇತವಾದರೆ ಡೊಳ್ಳು ಕಲಾವಿದರು ಪಡೆಯುವ ಭಂಡಾರ ದೈವದ ಅಭಿವಂದನೆ. ಅವರ ದೃಷ್ಟಿಯಲ್ಲಿ ಭಂಡಾರ ಬಂಗಾರಕ್ಕಿಂತಲೂ ಶ್ರೇಷ್ಠವಾದುದು. "ಭೂಮ್ಯಾಗ ಹುಟ್ಟುವುದು ಬಂಗಾರ। ಕುಟ್ಟಿ ಬೀಸಿದ ಮ್ಯಾಲ ಪುಡಿ ಭಂಡಾರ." ಡೊಳ್ಳಿನ ಮೇಳದವರು ಭಂಡಾರ ಸ್ವೀಕರಿಸಿದರೆ ಮುಗಿಯಿತು. ಅಲ್ಲಿ ಹೋಗಲೇಬೇಕು. ಕುಟುಂಬದ ಸದಸ್ಯರೊಬ್ಬರು ತೀರಿಕೊಂಡರೂ ನಿಲ್ಲುವಂತಿಲ್ಲ. ಅವರು ಆ ಪ್ರದರ್ಶನಕ್ಕೆ ಹೋಗುವ ಮೊದಲು ಆ ಸಂಭಾವನೆಯನ್ನು ನಿರ್ಧರಿಸಿಕೊಳ್ಳುವುದಿಲ್ಲ. ಪ್ರದರ್ಶನ ಮುಗಿದ ಮೇಲೆ ಇಂತಿಷ್ಟೇ ಸಂಭಾವನೆಯನ್ನು ನೀಡಬೇಕೆಂದು ಪೀಡಿಸುವುದಿಲ್ಲ. ಕೊಟ್ಟಷ್ಟು ಹಣವನ್ನು ಪ್ರಸಾದ ರೂಪದಲ್ಲಿ ಸ್ವೀಕರಿಸುವರು. ಕೆಲವೊಮ್ಮೆ ಆ ಹಣ ಅವರ ಪ್ರಯಾಣದ ವೆಚ್ಚಕ್ಕೂ ಸಾಲುವುದಿಲ್ಲ. ಒಮ್ಮೊಮ್ಮೆ ಸಂಭಾವನೆಯೇ ಇಲ್ಲದೇ ಬರೀ ಗೌರವದ ಚಾಜ್ ಕೊಟ್ಟು ಕಳುಹಿಸುವುದುಂಟು. ಒಟ್ಟಿನಲ್ಲಿ ಅವರಿಗೆ ಹಣ ಮುಖ್ಯವಾಗುವುದೇ ಇಲ್ಲ. ಅವರು ಕಲೆಯ ವ್ಯಾಪಾರಿಗಳಲ್ಲ.

[illegible]

ಯಲ್ಲಾರಟ್ಟಿಯ ಅದೃಶ್ಯಪ್ಪ ಸಿದ್ದಪ್ಪ ಮೆಟಗುಡ್ಡ ಡೊಳ್ಳಿನ ಹಾಡುಗಾರ. ಕೈಪಟ್ಟು ಬಾರಿಸುವುದರಲ್ಲಿಯೂ ನಿಪುಣ. ಕೂಲಿಯ ಮೂಲಕ ತನ್ನ ಕುಟುಂಬವನ್ನು ನಿರ್ವಹಿಸುವ ಇವನದು ಗೋಡೆಕಟ್ಟುವ ಕಾಯಕ(ಗೌಂಡಿ). ಈತ ಲಿಂಗಾಯತನಾಗಿದ್ದರೂ ಪರಿಸರದ ಪ್ರಭಾವದಿಂದ ಡೊಳ್ಳು ಕಲಾವಿದನಾಗಿದ್ದಾನೆ. ಅವನಿಗೆ "ಕಲಾವಿದನಾಗಿ ನಿಮ್ಮ ಅನುಭವವೇನು?" ಎಂದು ಕೇಳಿದಾಗ "ಕಲೆಯಿಂದ ಅಧ್ಯಾತ್ಮದ ದಾರಿ ಸಿಕ್ಕಿದೆ" ಎಂದು ಉತ್ತರಿಸಿದ. ಆತ ಬಡವ. ಜಮೀನು ಇಲ್ಲ. ಆರು ಜನರ ಕುಟುಂಬ. ವಯಸ್ಸು ೬೩. ತನ್ನ ಕಲೆ ಜೀವನ ನಿರ್ವಹಣೆಯ ಮಾರ್ಗವೆಂದು ಭಾವಿಸಿಯೇ ಇಲ್ಲ. ತಾನೊಬ್ಬ ಕಲಾವಿದನೆಂಬ ಸ್ವಾಭಿಮಾನ ಮಾತ್ರ ಅವನಲ್ಲಿದೆ. ತನ್ನ ಒಬ್ಬ ಮಗನಿಗೂ ಡೊಳ್ಳು ಬಾರಿಸುವುದನ್ನು, ಕೈಪಟ್ಟು ಹಾಕುವುದನ್ನು, ಹಾಡುವುದನ್ನು ಕಲಿಸಿದ್ದಾನೆ. ಅವನಿಗೆ ಕಲೆ ಪರಂಪರೆಯ ಬಳುವಳಿ . ತಂದೆ ಕರ್ಬಲ್ ಹಾಡುಗಾರನಾಗಿದ್ದ. ಮೊದ ಮೊದಲು ಇವನು ಕರ್ಬಲ್ ಹಾಡುಗಳನ್ನು ಹಾಡುತ್ತಿದ್ದ. ಆನಂತರ ಡೊಳ್ಳಿನ ಹಾಡಿನತ್ತ ಒಲಿದು ಹಾಡುಗಾರನಾದ. ಈಗ ಅಲ್ಲಿಯ ನಾಲ್ಕು ಡೊಳ್ಳಿನ ಮೇಳಗಳಿಗೆ ಮಾರ್ಗದರ್ಶಕನಾಗಿದ್ದಾನೆ. ಕಲಾವಿದ ಅದೃಶ್ಯಪನ ವಿವರಗಳನ್ನು ಗಮನಿಸಿದಾಗ ಅವನ ಕಲಾಸೇವೆಯ ಆಶಯ,, ಸಾಧನೆಯ ಸಾರ್ಥಕತೆ ಸ್ಪಷ್ಟವಾಗುತ್ತವೆ.

ಅರಣ್ಯಸಿದ್ಧೇಶ್ವರ ಯಲ್ಲಾರಟ್ಟಿಯ ಆರಾಧ್ಯದೈವ. ಪ್ರತಿ ರವಿವಾರ ಹಾಗೂ ಅಮವಾಸ್ಯೆ ಹುಣ್ಣಿಮೆಗಳಂದು ಆ ದೇವಸ್ಥಾನದಲ್ಲಿ ಡೊಳ್ಳಿನ ಓಲಗ ನಡೆಯುತ್ತದೆ. ಆ ದೇವಾಲಯದಲ್ಲಿ ಭಕ್ತರು ನೆರೆಯುತ್ತಾರೆ. ಹಣೆಗೆ ಭಂಡಾರ ಲೇಪಿಸಿಕೊಂಡು ಕೆಲವರು ಹಾಡುತ್ತಾರೆ ಮತ್ತೆ ಕೆಲವರು ಕೇಳುತ್ತಾರೆ. ಬೆಳಗಿನವರೆಗೂ ಜಾಗರಣೆ ಮಾಡುತ್ತಾರೆ. ಬಾಗೆನಾಡಿನ ಹಾಲುಮತದ ಎಲ್ಲ ದೇವಸ್ಥಾನಗಳಲ್ಲಿಯೂ ಇರುವ ಸಾಮಾನ್ಯ ಪದ್ಧತಿಯಿದು. ಅದರಲ್ಲಿಯೂ ಕಂಕಣವಾಡಿ, ಅಲಕನೂರು, ಚಿಂಚಲಿ, ಬೆಕ್ಕೇರಿ, ಸವಸುದ್ದಿ, ಹಾರೂಗೇರಿ, ಮುಗಳಖೊಡ, ಹಿಡಕಲ್ಲಗಳ ಹಾಲುಮತ ದೇವಸ್ಥಾನಗಳಲ್ಲಿ ಇದು ಕಡ್ಡಾಯ. ಜಾಗತೀಕರಣದ ಈ

[illegible]

ಸಂದರ್ಭದಲ್ಲಿಯೂ ಈ ಸಂಪ್ರದಾಯ ನಿಲ್ಲುವ ಹಾಗಿಲ್ಲ. ಇದಕ್ಕೆ ಮುಖ್ಯವಾದುದು ದೈವ ಶ್ರದ್ಧೆ.

ಘಟಪ್ರಭಾ ಎಡದಂಡೆ ಕಾಲುವೆಯ ವ್ಯಾಪ್ತಿಯಲ್ಲಿ ಬರುವ ಬಾಗೆನಾಡಿಗೆ ಬರಗಾಲದ ಭೀತಿಯಿಲ್ಲ. ಘಟ್ಟಗಳಲ್ಲಿ ಮಳೆಯಾದರೂ ಹೊಲಗದ್ದೆಗಳಲ್ಲಿ ಬೆಳೆ ಬರುವುದು ಖಚಿತ. ಹೀಗಾಗಿ ಇಲ್ಲಿಯ ಜನರಿಗೆ ಹೊಟ್ಟೆ-ಬಟ್ಟೆಗೆ ತೊಂದರೆಯಿಲ್ಲ. ಹಾಲುಮತ ಬಾಂಧವರೆಲ್ಲ ಕೃಷಿಕರು. ಅವರು ತಮ್ಮ ಮೂಲ ಉದ್ಯೋಗ ಕುರಿ, ದನ ಸಾಕುವುದನ್ನು ಕೆಲವರು ಮಾತ್ರ ಸಾಂಕೇತಿಕವಾಗಿ ಉಳಿಸಿಕೊಂಡಿದ್ದಾರೆ. ಬಹುಸಂಖ್ಯಾತರು ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಸಬಲರು. ಕೃಷಿ ಜೀವನ ನಿರ್ವಹಣೆಯ ಮೂಲವಾಗಿದೆ. ಅವರಿಗೆ ಕಲೆಯ ಮೂಲಕ ಬದುಕು ಕಟ್ಟಿಕೊಳ್ಳುವ ಅನಿವಾರ್ಯತೆಯಿಲ್ಲ. ಕಲೆ ಅವರ ಪಾಲಿಗೆ ಶುದ್ಧ ಉಪಾಸನೆ. ಕಂತೆಪ್ಪ ಮಲ್ಲಪ್ಪ ಶೇಗುಣಸಿ ಮುಗಳಖೋಡದ ಡೊಳ್ಳಿನ ಹಾಡುಗಾರ. ಆತನಲ್ಲಿ ಹಾಡುಗಾರಿಕೆಯ ಉಪಾಸಣೆಯ ಮೂಲಕ ಬೀರಪ್ಪನ ಕೃಪೆ ಗಳಿಸಿದ ಧನ್ಯತೆ. 'ಬೀರಪ್ಪನ ಅಂಬಲಿಯಿಂದ ತನಗೇನು ಕಡಿಮೆಯಿಲ್ಲ' ಎಂಬ ಸಂತೃಪ್ತಿಯ ಭಾವನೆ. ಇದು ಡೊಳ್ಳು ಕಲಾವಿದರ ಒಕ್ಕೊರಳಿನ ಹೇಳಿಕೆ. ಈಗೀಗ ಡೊಳ್ಳಿನ ಹಾಡುಗಳ ಸ್ಪರ್ಧೆಗಳು ಜರುಗುತ್ತವೆ. ಅಂತಹ ಸ್ಪರ್ಧೆಗಳಲ್ಲಿ ಭಾಗವಹಿಸಲು ಮೇಳಗಳ ಪೈಪೋಟಿ ಹೆಚ್ಚುತ್ತಿದೆ. ಆದರೆ ಅವರಿಗೆ ಬಹುಮಾನದ ಮೊತ್ತ ಮುಖ್ಯವಾಗುವುದಿಲ್ಲ. ಒಂದೆಡೆ ತಮ್ಮ ಹಾಡುಗಾರಿಕೆ ತಮ್ಮ ದೈವದ ಉಪಾಸನೆ ಎಂಬ ನಂಬಿಕೆ ಇದ್ದರೆ, ಮತ್ತೊಂದೆಡೆ ಸಾಮಾಜಿಕ ಮನ್ನಣೆಯ ಪ್ರತಿಷ್ಠೆಯ ಹಂಬಲ. "ಸ್ಪರ್ಧೆಯಲ್ಲಿ ಬಹುಮಾನ ಬಂದರೆ ಮೊತ್ತದ ಅರ್ಧಭಾಗ ದೇವಾಲಯಕ್ಕೆ ಕೊಟ್ಟು ಉಳಿದ ಅರ್ಧಭಾಗ ಮೇಳದವರು ಹಂಚಿಕೊಳ್ಳುತ್ತಾರೆ. ಪ್ರಶಸ್ತಿ ಫಲಕಗಳನ್ನು ತಮ್ಮೂರಿನ ತಮ್ಮ ಆರಾಧನೆಯ ದೈವದ ದೇವಸ್ಥಾನದಲ್ಲಿಯೇ ಇಡುತ್ತಾರೆ."[೨] ಅವರದು ಅಂತ ಸಮರ್ಪಣಾ ಭಾವ. ಪ್ರಾಯಶಃ ಭಕ್ತಿ ನಿಷ್ಠೆಯೇ ಹೀಗಿರುತ್ತದೆ. ನಮ್ಮ

---

೨.ಅಲಕನೂರಿನ ಧರ್ಮಣ್ಣಾ ನಡಟ್ಟಿ ಹೇಳಿದ್ದು.

[illegible]

ಭಕ್ತ ಕವಿಗಳಾದ ಹರಿಹರ-ಕುಮಾರವ್ಯಾಸರು ತಮ್ಮ ಕಾವ್ಯ ನಿಷ್ಠೆಯನ್ನು ತಮ್ಮ ಆರಾಧ್ಯ ದೈವಗಳಿಗೆ ಸಮರ್ಪಿಸಿದಂತೆ ಅವರು ತಮ್ಮ ಹಾಡುಗಾರಿಕೆಯನ್ನು ಸಂಪೂರ್ಣವಾಗಿ ಹಾಲುಮತ ದೈವಗಳಿಗೆ ಮೀಸಲಿಟ್ಟಿದ್ದಾರೆ.

ಕಾವ್ಯ ಪ್ರಯೋಜನಗಳ ಪಟ್ಟಿಯಲ್ಲಿ ಮಮ್ಮಟ 'ಧನಂಪಾದನೆ' ಯನ್ನು ಸೇರಿಸಿದ್ದು ಭಕ್ತ ಕವಿಗಳು ಒಪ್ಪುವುದಿಲ್ಲ. ಕಾವ್ಯ ರಚನೆಯೇ ಒಂದು ಪೂಜೆ ಎಂಬ ಅಚಲ ನಂಬಿಕೆ ಅವರದು. ಮಹಾಕವಿ ಪಂಪ ಆದಿಪುರಾಣದಲ್ಲಿ ಪೂಜೆಯೇ ಕಾವ್ಯದ ಪರಮ ಪ್ರಯೋಜನವೆನ್ನುತ್ತಾನೆ.

**"ಕವಿತೆಯೊಳಾಸೆಗೆಯ್ವ ಫಲಮಾವುದೊ ಪೂಜೆ ನೆಗಳ್ತೆ ಲಾಭಮೆಂ**
**ಬಿವೆ ವಲಮಿಂದ್ರ ಪೂಜೆ ಭುವನಸ್ತುತಮಪ್ಪ ನೆಗಳ್ತೆ ಮುಕ್ತಿ ಸಂ।**
**ಭವಿಸುವ ಲಾಭಮೆಂಬಿವೆ ಜಿನೇಂದ್ರಗುಣಸ್ತುತಿಯಿಂದೆ ತಾಮೆ ಸಾ**
**ರವೆ ಪೆರರೀವುದೇಂ ಪೆರರ ಮಾಡುವುದೇಂ ಪೆರರಿಂದಮಪ್ಪುದೇಂ॥"[೩]**

ಒಲಿದು ಒಮ್ಮೆ ಧ್ಯಾನಿಸಿದರೂ ಅವನ ಪುಣ್ಯಕ್ಕೆ ಎಣೆಯಿಲ್ಲವಂತೆ. ದೈವ ಸ್ಮರಣೆ ಕರ್ಮವನ್ನು ಕರಗಿಸುವುದು. ಅದನ್ನು ಉಳಿದ ವಸ್ತುಗಳೊಂದಿಗೆ ತೂಗಲಾಗದು. ಇದೇ ಭಾವನೆ ದೈವ ಕೇಂದ್ರಿತ ಕಲೆಗಳ ಕಲಾವಿದರದು. ಇಲ್ಲಿಯ ಹಾಲುಮತ ಸಮಾಜದ ಕಲಾವಿದರು ಶ್ರೀಮಂತರಲ್ಲ. ಆದರೆ ಪೂಜಾರಿಗಳಲ್ಲಿ ಬೆರಳಣಿಕೆಯಷ್ಟು ಡೊಳ್ಳಿನ ಹಾಡುಗಾರರು ಶ್ರೀಮಂತರು. ಈ ಕಲಾವಿದರಲ್ಲಿ ಪ್ರತಿಶತ ೯೦ರಷ್ಟು ಅಶಿಕ್ಷಿತರು. ಕೆಲವರು ಶಿಕ್ಷಿತರಾಗಿದ್ದರೂ ಹತ್ತನೆಯ ವರ್ಗದವರೆಗೆ ಮಾತ್ರ ಓದಿದವರು. ಹೆಚ್ಚು ಓದಿದವರು ಡೊಳ್ಳು ಬಾರಿಸುವುದು, ಕೈಪಟ್ಟು ನುಡಿಸುವುದು, ದಟ್ಟಿ ಕುಣಿತ ಕುಣಿಯುವುದು, ಹಾಡುವುದು ತಮ್ಮ ಯೋಗ್ಯತೆಗೆ ತಕ್ಕದಲ್ಲವೆಂದು ಭಾವಿಸುತ್ತಾರೆ. ಮಗ ವಿದ್ಯಾಭ್ಯಾಸ ಮಾಡಿ ಸರಕಾರಿ ನೌಕರಿ ಹಿಡಿದು ಸಂಪಾದನೆ ಆರಂಭಿಸಿದ ಮೇಲೆ ತನ್ನ ತಂದೆಯ ಕಲಾಸೇವೆಗೆ ತಡೆಯೊಡ್ಡಿದ ಉದಾಹರಣೆಗಳಿವೆ.

---

**೩ ಮಹಾಕವಿ ಪಂಪ : ಆದಿಪುರಾಣ, ೧-೩೬**

[illegible]

ಅಂದರೆ ಭಕ್ತಿಗೆ ವೈಚಾರಿಕತೆಗಿಂತ ಮುಗ್ಧತೆ ಹೆಚ್ಚು ಅನುಕೂಲ. ಮನುಷ್ಯ ಬುದ್ಧಿ ಬೆಳೆದಂತೆ ಎಲ್ಲವನ್ನೂ ಲಾಭದ ದೃಷ್ಟಿಯಿಂದ ನೋಡತೊಡಗುತ್ತಾನೆ. ಆ ಕಲೆಯಿಂದ ಧನ ಸಂಪಾದನೆ ಸಾಧ್ಯವಿಲ್ಲವೆಂಬ ನಿಲುವು ತಾಳುತ್ತಾನೆ.

ಡೊಳ್ಳು ಕಲಾವಿದರಿಗೂ ಚೌಡಿಕೆ ಕಲಾವಿದರಿಗೂ 'ದೈವ ಕಾಣಿಕೆ'ಯ ವಿಷಯದಲ್ಲಿ ಭಿನ್ನಾಭಿಪ್ರಾಯವಿದೆ. ಚೌಡಿಕೆ ಕಲಾವಿದರು ತಳವರ್ಗದವರಾಗಿದ್ದು ಆರ್ಥಿಕವಾಗಿ ದುರ್ಬಲರು. ಕಲೆಯನ್ನೇ ಜೀವನೋಪಾಯದ ಸಾಧನವಾಗಿಸಿಕೊಂಡವರು. ಅವರು ಜನರು ನೀಡುವ ದಕ್ಷಿಣೆ(ಜೋಗ)ಯನ್ನು ದೈವ ಕಾಣಿಕೆಯೆಂದು ಪರಿಗಣಿಸುವುದಿಲ್ಲ. ಜನ ಅದನ್ನು ಭಿಕ್ಷೆ ಎಂದೇ ತಿಳಿಯುತ್ತಾರೆ. ಇದೇ ಕಾರಣದಿಂದಾಗಿಯೇ ಇಂದು ಚೌಡಿಕೆ ಕಲಾವಿದರು ತಮ್ಮ ಕಲೆಯನ್ನು ತಮ್ಮ ಮಕ್ಕಳಿಗೆ ಅಥವಾ ಮೊಮ್ಮಕ್ಕಳಿಗೆ ಮುಂದುವರೆಸಲು ಇಚ್ಛಿಸುತ್ತಿಲ್ಲ. ಚೌಡಿಕೆ ಕೈಯಲ್ಲಿದ್ದರೆ ಸಾಕು ಜನ ದೇವದಾಸಿಯೆಂದೇ ಭಾವಿಸಿಕೊಳ್ಳುತ್ತಾರೆಂದು ಆ ಕಲಾವಿದೆಯರು ನೊಂದು ಹೇಳುತ್ತಾರೆ. ದೇವದಾಸಿಯರು ಸ್ವೀಕರಿಸುವ ಕಾಣಿಕೆಯನ್ನು 'ಜೋಗ'ವೆಂದು ಕರೆಯುತ್ತಾರೆ. ಅವರು ಜೋಗ ನೀಡುವಂತೆ ಜನರನ್ನು ಕೇಳುತ್ತಾರೆ. ಅವರು ಕೇಳುವ 'ಜೋಗ' ಇಂದು ಭಿಕ್ಷೆಯಲ್ಲದೇ ಮತ್ತೊಂದಲ್ಲ.

'ಜೋಗ'ದ ಕುರಿತು ಮುಗಳಖೋಡದ ತಾರವ್ವ ಮಾದರ ಎಂಬ ಚೌಡಿಕೆ ಕಲಾವಿದೆಯನ್ನು ಕೇಳಿದಾಗ ಇದೊಂದು ತಮ್ಮ ಉದ್ಯೋಗವೆಂದು ಒಪ್ಪಿಕೊಳ್ಳುತ್ತಾಳೆ. ಇವಳ ಮಾತಿನಲ್ಲಿ ಒಂದು ವಿಷಯ ಸ್ಪಷ್ಟವಾಗುತ್ತದೆ. ಅದೇನೆಂದರೆ ದೇವಿ ಸೇವೆ ಕಾಲಾನುಕ್ರಮದಲ್ಲಿ ಉದ್ಯೋಗವಾಗಿರುವುದು. ಆದ್ದರಿಂದಲೇ ಅವಳು ಹಾಡುತ್ತಾ ಜೋಗ ಬೇಡುವುದು ತನ್ನ ಹಕ್ಕು ಎಂದು ತಿಳಿದಿದ್ದಾಳೆ. ಇಂತಹ ಭಾವನೆ ಚೌಡಿಕೆ ಕಲಾವಿದೆಯರಲ್ಲಿ ಬೆಳೆಯಲು ಹಲವು ಕಾರಣಗಳಿವೆ. ಅವರ ದಲಿತತ್ವ, ಅಸಹಾಯಕತೆ, ಅನಾಥಪ್ರಜ್ಞೆ, ಅನಕ್ಷರತೆ, ಗಂಡನಿಲ್ಲದೇ ಮಕ್ಕಳನ್ನು ಪಡೆಯುವ ಸಾಮಾಜಿಕ ಅವಮಾನ ಇವೆಲ್ಲ ಕಲಾವಿದರ ಆರ್ಥಿಕ ಪರಿಸ್ಥಿತಿಯ ಮೇಲೆ ಪರಿಣಾಮ ಬೀರುತ್ತವೆ. ಅವರನ್ನು ಕೌಟುಂಬಿಕ ಪ್ರಜ್ಞೆ ಅವರಿಗೆ ಅರಿವಿಲ್ಲದಂತೆ ಕಾಡುತ್ತಿರುತ್ತದೆ. ಬದುಕಿಗೆ ಚೌಡಿಕೆ ಆಸರೆಯಾಗಿರುತ್ತದೆ.

ಶಿವಭಜನೆ ಮತ್ತು ಜಿನಭಜನೆ ಕಲಾವಿದರಲ್ಲಿ ಆರಾಧನಾ ಮನೋಭಾವ ದಿನದಿಂದ ದಿನಕ್ಕೆ ಕ್ಷೀಣಿಸುತ್ತದೆ. ಬಾಗೆನಾಡಿನಲ್ಲಿ ಜೈನರ ಪ್ರಾಬಲ್ಯ ಕಡಿಮೆಯೇನಿಲ್ಲ. ಸವದತ್ತಿ, ನಸಲಾಪೂರ, ಹಾರೂಗೇರಿ, ಗುಂಡವಾಡ, ಮುಗಳಖೊಡ, ರಾಯಬಾಗಗಳಲ್ಲಿ ಜೈನರು ಅಧಿಕ ಸಂಖ್ಯೆಯಲ್ಲಿದ್ದರೂ ಜಿನಭಜನಾ ಮೇಳಗಳು ಆ ಪ್ರಮಾಣದಲ್ಲಿ ಇಲ್ಲ. ಬಾಗೆನಾಡಿನ ಜಿನಭಜನಾ ಮೇಳ ಸಂಖ್ಯೆ ೪ ಇಲ್ಲಿ ಶಿವಭಜನಾ ಮೇಳಗಳು ಹುಟ್ಟಿಕೊಂಡಂತೆ ಜಿನಭಜನಾ ಮೇಳಗಳು ಏಕೆ ಹುಟ್ಟಿಕೊಳ್ಳಲಿಲ್ಲಾ? ಎಂಬುದು ಚಿಂತನೀಯ. ಸಾಮಾನ್ಯವಾಗಿ ಶ್ರೀಮಂತರು ಕಲಾ ಆಸ್ವಾದಕರು; ಆರಾಧಕರಲ್ಲ. ಅವರು ಜನಪದ ಕಲೆಗಳನ್ನು ಮೈಗೂಡಿಸಿಕೊಳ್ಳುವುದು ಅಪರೂಪ. ಒಮ್ಮೊಮ್ಮೆ ಆರ್ಥಿಕ ಸ್ವಾವಲಂಬನೆ ಸಹ ಜನಪದ ಕಲೆಗಳಿಗೆ ಮುಳುವಾಗುವುದುಂಟು. ಇಲ್ಲಿ ಜೈನರು ಕೃಷಿಕರು. ತಕ್ಕಮಟ್ಟಿಗೆ ಜಮೀನುಗಳನ್ನು ಹೊಂದಿರುವರು. ಇತರರಿಗೆ ಹೋಲಿಸಿದರೆ ಅವರ ಜೀವನಮಟ್ಟ ಸ್ವಲ್ಪ ಎತ್ತರದಲ್ಲಿದೆ. ನೀರಾವರಿ ಜಮೀನುಗಳು ನೀರಾವರಿ ಇದ್ದಲ್ಲಿ ರೈತರಿಗೆ ಬಿಡುವೆಂಬುದೇ ಇರುವುದಿಲ್ಲ. ಕಬ್ಬು, ಅರಿಷಿಣ, ಬಾಳೆಯಂತಹ ದೀರ್ಘಾವಧಿಯ ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗುತ್ತದೆ. ಅವುಗಳ ನಿರ್ವಹಣೆಯಲ್ಲಿ ತೊಡಗಿದ ರೈತನಿಗೆ ಹೆಚ್ಚು ಬಿಡುವು ಸಿಗುವುದಿಲ್ಲವೆಂಬುದು ಒಂದು ಕಾರಣವಾದರೆ ಆರ್ಥಿಕ ಸುಭದ್ರತೆ ಮನುಷ್ಯನಲ್ಲಿ ಪ್ರತಿಷ್ಠೆಯನ್ನು ಬೆಳೆಸುವುದು ಮತ್ತೊಂದು ಕಾರಣ. ಬಿಡುವಿದ್ದಾಗ ಕಲೆಗಳತ್ತ ಗಮನ ಹರಿಯುವುದು. ತಾನು ಸಾಮಾನ್ಯನೆಂಬ ಭಾವನೆ ಮನಸ್ಸಿನಲ್ಲಿದ್ದಾಗ ಆರಾಧನೆ ಆರಂಭವಾಗುವುದು. ಜೊತೆಗೆ ವಿದ್ಯಾವಂತರು ಜನಪದ ಕಲೆಗಳತ್ತ ಒಲವು ಹೊಂದದೇ ಇರುವುದನ್ನು ನಿರ್ಲಕ್ಷಿಸಲಾಗದು. ಈ ಭಾಗದ ಜೈನರಲ್ಲಿ ಬಹುಪಾಲು ಈಗ ವಿದ್ಯಾವಂತರು. ಅವರು ಧಾರ್ಮಿಕ ಕಟ್ಟಳೆಗೆ ಒಳಗಾಗಿ ಜಿನಾಲಯಗಳಿಗೆ ಹೋಗಿ ಜಿನನನ್ನು ಪೂಜಿಸುವುರೇ ಹೊರತು ಭಜನೆ ಮೊದಲಾದ ಕಲೆಗಳ ಮೂಲಕ ಭಜಿಸುವುದಿಲ್ಲ.

ಬೆಳಗಾವಿ ಭಾಗದ ಜನಪದ ಕವಿ ದ್ವಾರಪಾಲನನ್ನು ಸರಿಗಟ್ಟಬಲ್ಲ ಹಾರೂಗೇರಿಯ ಅಲಭೈರಿ ರಚಿಸಿದ ಜಿನಭಜನೆಗಳು ಅನೇಕ. ಆತನ ಭಜನಾ ರಚನೆಗಳನ್ನು ನೋಡಿದರೆ ಅನೇಕ ಜಿನಭಜನೆ ಮೇಳಗಳು ಹುಟ್ಟಿಕೊಳ್ಳಬಹುದಿತ್ತು.

ಜಿನಧರ್ಮದ ತಾತ್ವಿಕತೆಯನ್ನು ಒಳಗೊಂಡ ಆ ರಚನೆಗಳು ಕೇಳುಗರನ್ನು ತೀವ್ರವಾಗಿ ಸೆಳೆದುಕೊಳ್ಳುತ್ತವೆ.

ಹಾರೂಗೇರಿಯ ಸಿದ್ದಪ್ಪ ಮತ್ತು ಕಾಸಪ್ಪ ನಾಗನೂರ ಸಹೋದರರನ್ನು ಹೊರತುಪಡಿಸಿ ಬೇರಾರು ಜಿನಭಜನಾ ಕಲಾವಿದರು ಇಂದು ಸಕ್ರಿಯವಾಗಿರುವುದಿಲ್ಲ. ಸಿದ್ದಪ್ಪ ನಾಗನೂರರವರದು ಕಲೆಯ ಕುಟುಂಬ. ಹಾಡುವುದು ಅವರೆಲ್ಲರ ಹವ್ಯಾಸ. ಅವರ ತಂದೆ ವೆಂಕಪ್ಪ. ಡೊಳ್ಳು ಮತ್ತು ಕರ್ಬಲ್ ಹಾಡುಗಾರರನ್ನು ಕೂಡಿಸಿಕೊಂಡು ಹಾಡಿಸಿ ಆಲಿಸುತ್ತಿದ್ದನಂತೆ. ತಂದೆಯ ಹವ್ಯಾಸ ಮಕ್ಕಳಿಗೆ ಬಳುವಳಿಯಾಗಿ ಬಂದಿದೆ ಎಂದು ನಾಗನೂರ ಸಹೋದರರ ಹೇಳಿಕೆ. ೧೫-೨೦ ವರ್ಷಗಳ ಮುಂಚೆ ಮುಗಳಖೊಡ, ರಾಯಬಾಗ, ಸವದತ್ತಿ, ಗುಂಡವಾಡ, ಹಿಡಕಲ್ಲ, ನಸಲಾಪುರಗಳಲ್ಲಿ ಜಿನಭಜನಾ ಮೇಳಗಳು ಇದ್ದವು. ಇಂದು ಉಳಿದಿಲ್ಲ. ರಾಯಬಾಗದ ಜಿನಭಜನಾ ಮೇಳ 'ಸಂಗೀತ ಮಂಚ'ವಾಗಿ ಪರಿವರ್ತಿತಗೊಂಡಿದೆ. ಈ ಮೇಳಗಳು ಕಳೆದು ಹೋಗಲು ಹಲವು ಕಾರಣಗಳಿವೆ. ಅವುಗಳಲ್ಲಿ ಆರ್ಥಿಕ ಸಬಲತೆಯೂ ಒಂದು.

ಬಾಗೆನಾಡಿನಲ್ಲಿ ೧೫ಝೂಂಜ್ ಮೇಳಗಳಿವೆ. ಮುಕ್ಕಾಲು ಪಾಲು ಜೈನರನ್ನು ಹೊಂದಿರುವ ನಸಲಾಪುರದಲ್ಲಿ ೫ ಮೇಳಗಳಿವೆ. ಸವದತ್ತಿ, ಹಾರೂಗೇರಿ, ದಿಗ್ಗೇವಾಡಿ, ಗುಂಡವಾಡ, ಚಿಂಚಲಿಯಲ್ಲಿ ಒಂದೊಂದು ಮೇಳಗಳಿವೆ. ಮುಗಳಖೋಡ, ಹಾರೂಗೇರಿಯಲ್ಲಿ ಎರಡು ಮೇಳಗಳಿವೆ. ಇತ್ತೀಚಿಗೆ ಈ ಭಾಗದಲ್ಲಿ ಝೂಂಜ್ ಮೇಳಗಳು ಜೈನಧರ್ಮದ ಉತ್ಸವಗಳಲ್ಲಿ ಆಕರ್ಷಕವಾಗುತ್ತಿವೆ. ಇಲ್ಲಿಯ ಹದಿನೈದು ಝೂಂಜ್ ಮೇಳದಲ್ಲಿ ೧೩ಜೈನಧರ್ಮಿಯರವು. ವಿಶೇಷವೆಂದರೆ ಝೂಂಜ್ ಕಲಾವಿದರೆಲ್ಲ ಜೈನ ಧರ್ಮದವರೇ ಎನ್ನುವಷ್ಟು ಜೈನರು ಈ ಕಲೆಯನ್ನು ಆರಾಧಿಸುತ್ತಿದ್ದಾರೆ. ಇದು ಮಹಾರಾಷ್ಟ್ರದ ಜೈನ ಧರ್ಮಿಯರ ಮೂಲಕ ಕರ್ನಾಟಕದ ಗಡಿಯನ್ನು ಪ್ರವೇಶಿಸಿದ ಜನಪದ ಕಲೆ. ದುಬಾರಿ ಪ್ರದರ್ಶನದ ಈ ಕಲೆ ಇತ್ತೀಚಿಗೆ ಹೆಚ್ಚು ಜನಪ್ರಿಯಗೊಳ್ಳುತ್ತಿದೆ. ಇವರೆಲ್ಲ ಹವ್ಯಾಸಿಗಳು. ಅವರು ತಮ್ಮ ಧರ್ಮಕ್ಕೆ ಸಂಬಂಧಪಟ್ಟ ಉತ್ಸವಗಳಲ್ಲಿ ಮಾತ್ರ ಈ ಕಲೆಯನ್ನು ಪ್ರದರ್ಶಿಸುವುದಕ್ಕೆ ಒಂದು

ಕಾರಣವಿದೆ. ಅವರಿಗೆ ಸಂಭಾವನೆ ನಗಣ್ಯ. ಒಂದು ಪ್ರದರ್ಶನಕ್ಕೆ ತಗಲುವ ವೆಚ್ಚ ನೀಡಿದರೆ ಸಾಕು. ಆ ದುಬಾರಿ ವೆಚ್ಚವನ್ನು ಭರಿಸುವಷ್ಟು ಸಾಮರ್ಥ್ಯ ಇಲ್ಲಿಯ ಜೈನರಲ್ಲಿದೆ. ಈ ಕಲಾವಿದರು ತರುಣರು. ತಮ್ಮ ಆದಾಯದ ಮೂಲವನ್ನು ಬೇರೆ-ಬೇರೆ ಉದ್ಯೋಗಗಳಲ್ಲಿ ಹುಡುಕಿಕೊಂಡವರು. ಆದ್ದರಿಂದ ಅವರಿಗೆ ಸಂಭಾವನೆ ಮುಖ್ಯವಾಗುವುದಿಲ್ಲ. ಇದರಿಂದಾಗಿ ಜೈನೇತರ ಸಮುದಾಯಗಳಲ್ಲಿ ಈ ಕಲೆ ಬೆಳೆಯಲಿಲ್ಲವೆನಿಸುತ್ತದೆ. ಆದರೆ ಈ ಮಾತಿಗೆ ಅಪವಾದವೆಂಬಂತೆ ನಸಲಾಪುರದಲ್ಲಿ ಒಂದು ದಲಿತ ಝಾಂಜ್ ಮೇಳವಿದೆ. ಅಲ್ಲಿಯ ದಲಿತ ಯುವಕರ 'ಸ್ವಾಭಿಮಾನ ಯುವಕ ಮಂಡಳಿ' ಈ ಮೇಳವನ್ನು ಸಂಘಟಿಸಿದೆ. ಇದರಲ್ಲಿರುವ ಎಲ್ಲ ಕಲಾವಿದರು ದಲಿತರು. ಚಿದಾನಂದ ಕಾಂಬಳೆ ಆ ಕಲಾ ಮೇಳದ ನಾಯಕ. ಈ ಹಿಂದೆ ಹೇಳಿರುವಂತೆ ನಸಲಾಪುರ ಜೈನ ಗ್ರಾಮ. ಜೈನರ ದಟ್ಟ ಪ್ರಭಾವಕ್ಕೆ ಒಳಗಾಗಿ ದಲಿತ ಯುವಕರು ಝಾಂಜ್ ಮೇಳ ಕಟ್ಟಿದ್ದು ಮೇಲ್ನೋಟಕ್ಕೆ ಅರ್ಥವಾಗುತ್ತದೆ. ಇದರಂತೆ ದಿಗ್ಗೇವಾಡಿಯಲ್ಲಿ ಲಕ್ಷ್ಮೀದೇವಿ ಝಾಂಜ್ ಮೇಳವಿದೆ. ಈ ಮೇಳದಲ್ಲಿ ೨೦ ಕಲಾವಿದರಿದ್ದು ಅವರಲ್ಲಿಯ ಅರ್ಧದಷ್ಟು ಜನರು ಲಿಂಗವಂತರು. ಉಳಿದವರಲ್ಲಿ ಮರಾಠಿ, ದಲಿತ, ಮುಸ್ಲಿಂ ಯುವಕರು ಸೇರಿದ್ದಾರೆ. ದಿಗ್ಗೇವಾಡಿಯ ಲಕ್ಷ್ಮೀದೇವಿ ಝಾಂಜ್ ಮೇಳ ಕೂಡಾ ಜೈನ ಮೇಳಗಳ ಪ್ರಭಾವದ ಮೇಲೆಯೇ ಹುಟ್ಟಿಕೊಂಡಿರಬಹುದು. ಬಹುಸಂಖ್ಯಾತ ಜೈನರಿಗೆ ಸಾಂಸ್ಕೃತಿಕ ಸವಾಲಾಗಿ ಮೇಳ ಕಟ್ಟಿರಲೂಬಹುದು. ಹೀಗಿದ್ದರೂ ಜೈನ ಧರ್ಮದ ಪ್ರಭಾವವನ್ನು ಬಿಡಿಸಿಕೊಂಡು ಝಾಂಜ್ ಕಲೆ ಸಾರ್ವತ್ರಿಕರಣಗೊಳ್ಳುತ್ತಿರುವುದು ಯೋಚಿಸಬೇಕಾದ ವಿಷಯ. ಮೂಲತಃ ಅದು ಯಾವುದೇ ಒಂದು ಧರ್ಮದ ಪರೀಧಿಯನ್ನು ಹೊಂದಿರಲಿಕ್ಕಿಲ್ಲ. ಮಹಾರಾಷ್ಟ್ರದ ಜೈನ ಸಮುದಾಯ ಅದನ್ನು ಸ್ವಾಗತಿಸಿತು. ಅನಂತರ ಅದು ಮತ್ತೆ ಸಮಾಜಮುಖಿವಾಯಿತು. ಇದು ಜನಪದ ಕಲೆಗಳ ವೈಶಾಲ್ಯತೆಯೂ ಹೌದು. ಅವು ಆರ್ಥಿಕ, ಧಾರ್ಮಿಕ ನಿಯಂತ್ರಣಗಳನ್ನು ಕಳಚಿಕೊಂಡು ವ್ಯಾಪಕಗೊಳ್ಳುತ್ತವೆ.

ಹಿಂದೆ ಹೇಳಿದಂತೆ ಬಾಗೆನಾಡಿನಲ್ಲಿ ಡೊಳ್ಳಿನ ಮೇಳಗಳನ್ನು ಹೊರತುಡಿಸಿದರೆ ಹೆಚ್ಚಿನ ಸಂಖ್ಯೆಯ ಕಲಾವಿದರು ಶಿವಭಜನೆಯವರು. ಆದರೆ

ಡೊಳ್ಳಿನ ಹಾಡುಗಾರರಲ್ಲಿರುವ ದೈವಾರಾಧನೆಯ ಮೊದಲಿನ ಶ್ರದ್ಧೆ ಉಳಿದುಕೊಂಡಿಲ್ಲ. ಜಾತ್ರೆ-ಉತ್ಸವ, ಹಬ್ಬ-ಹರಿದಿನಗಳಲ್ಲಿ ಶಿವಾಲಯ ಮತ್ತು ಮಠಗಳಲ್ಲಿ ಶಿವಭಜನೆ ಮಾಡುವವರು, ಜಿನಾಲಯಗಳಲ್ಲಿ ಜಿನಭಜನೆ ಮಾಡುವವರು ಸಂಭಾವನೆಯ ಹಕ್ಕು ಮಂಡಿಸುತ್ತಿದ್ದಾರೆ. ಬಹಳಷ್ಟು ಮೇಳಗಳು ಮೊದಲೇ ಸಂಭಾವನೆಯನ್ನು ನಿರ್ಧರಿಸಕೊಂಡು ಸಂಚಕಾರ ಪಡೆಯುತ್ತವೆ. ಈ ಸಂಭಾವಣೆ ಆಯಾ ಮೇಳದ ಪ್ರದರ್ಶನದ ಕಲಾ ಪರಿಣತಿಯನ್ನು ಅವಲಂಬಿಸಿದೆ. ಸಾಮಾನ್ಯ ಭಜನಾಮೇಳ ರೂಪಾಯಿ ೫೦೦/- ಸಂಭಾವನೆ ಪಡೆದರೆ ಪರಿಣತ ಕಲಾ ತಂಡ ರೂ.೨೦೦೦/- ವರೆಗೂ ಸಂಭಾವನೆ ಪಡೆಯುತ್ತದೆ. ಒಂದು ಭಜನಾ ಮೇಳದಲ್ಲಿ ಕನಿಷ್ಠ ೫ ಗರಿಷ್ಠ ೮ ಜನ ಇರುತ್ತಾರೆ. ಆ ಲೆಕ್ಕದಲ್ಲಿ ಅವರು ಪಡೆಯುವ ಸಂಭಾವನೆ ಅವರ ಕೂಲಿಗೂ ಸಮವಾಗುವುದಿಲ್ಲ. ಭಜನೆ ಕಲಾವಿದರು ತಮ್ಮ ಕಲೆಯ ಮೂಲದಿಂದ ಜೀವನ ನಿರ್ವಹಣೆ ಮಾಡುವುದು ಸಾಧ್ಯವಿಲ್ಲ. ಪ್ರದರ್ಶನದ ಅವಕಾಶಗಳು ವಿರಳವಾಗಿರುವಾಗ ಅದು ಕುಟುಂಬ ನಿರ್ವಹಣೆಯ ಮಾರ್ಗವಾಗದು. ಭಜನೆ ಆ ಕಲಾವಿದರ ಒಂದು ಹವ್ಯಾಸ. ಇಲ್ಲಿ ಜಾತ್ಯಾತೀತವಾಗಿ ಭಜನಾ ಮೇಳಗಳನ್ನು ಕಟ್ಟಲಾಗಿದೆ. ಲಿಂಗಾಯತ, ಕುರುಬ, ದಲಿತರ ಭಜನಾ ಮೇಳಗಳಿವೆ. ಕೆಲವು ಮೇಳಗಳಲ್ಲಿ ವಿವಿಧ ಜಾತಿಯವರು ಸೇರಿದ್ದಾರೆ. ಈ ಕಲಾವಿದರು ಆರ್ಥಿಕವಾಗಿ ಸಬಲರಲ್ಲ. ಹೆಚ್ಚು ಓದಿದವರಲ್ಲ. ಬದುಕಿಗೆ ಯಾವುದೇ ಒಂದು ವೃತ್ತಿಯನ್ನು ಅವಲಂಬಿಸಿಕೊಂಡವರು. ತಮ್ಮ ತೃಪ್ತಿಗಾಗಿ ಹಾಡುವ ಹವ್ಯಾಸವನ್ನು ರೂಢಿಸಿಕೊಂಡವರು. ಸಂಭಾವನೆಯ ಮೇಲೆಯೇ ಬದುಕು ನಿರ್ವಹಿಸುವ ಯಾವೊಬ್ಬ ಭಜನಾ ಕಲಾವಿದನು ಬಾಗೇನಾಡಿನಲ್ಲಿಲ್ಲ.

ಹರಿಭಜನಾ ಕಲಾವಿದರು ಸಂತರಾಗಿರುವುದರಿಂದ ಡೊಳ್ಳು ಕಲಾವಿದರಂತೆ ಉಪಾಸನಾ ನೆಲೆಯಲ್ಲಿಯೇ ಕಲಾಸೇವೆ ಮಾಡುವರು. ಅವರು ಶಿವಭಜನೆ ಮತ್ತು ಜಿನಭಜನೆ ಕಲಾವಿದರಂತೆ ಸಂಭಾವನೆಯನ್ನು ಗೊತ್ತು ಮಾಡುವುದಿಲ್ಲ, ಸಂಚಕಾರ ಪಡೆಯುವುದಿಲ್ಲ, ಚೌಡಿಕೆಯವರಂತೆ ದಕ್ಷಿಣೆಗಾಗಿ ಪೀಡಿಸುವುದಿಲ್ಲ. ಪ್ರಯಾಣದ ವೆಚ್ಚ ನೀಡಿದರೆ ಸಾಕು. ಕರೆದಲ್ಲಿ ಹೋಗಿ ಹಾಡುತ್ತಾರೆ. ಡೊಳ್ಳು ಕಲಾವಿದರ ಆಮಂತ್ರಣಕ್ಕೆ ಭಂಡಾರ ನೀಡುವಂತೆ ಹರಿಭಜನಾ ಮೇಳದ

[illegible]

ಆಮಂತ್ರಣಕ್ಕೆ 'ಬುಕ್ಕಾ' ಕೊಡುವರು. 'ಬುಕ್ಕಾ' ಎಂದರೆ ಹರಿಭಕ್ತರು ಹಣೆಯ ಮೇಲೆ ಕುಂಕುಮದಂತೆ ಇಟ್ಟುಕೊಳ್ಳುವ ಕಪ್ಪು ಪದಾರ್ಥ. ಶಿವಭಜನಾ ಕಲಾವಿದರ ಆಮಂತ್ರಣಕ್ಕೆ ಕಾಯಿ ಕೊಡುತ್ತಾರೆ. ಈ ಪದ್ಧತಿಗಳನ್ನು ಗಮನಿಸಿದರೆ ಸಂಭಾವನೆಗೆ ಆಸ್ಪದವೇ ಇಲ್ಲ. ಅಂದರೆ ಕಲಾವಿದರ ಆರ್ಥಿಕ ಪ್ರಯೋಜನಗಳೇ ಅತ್ಯಂತಿಕವಾಗಲಾರವು.

"ತಮ್ಮಷ್ಟಕ್ಕೆ ತಾವೇ ಹಾಕಿಕೊಳ್ಳುವವರಿಗೂ, ಕೇಳುವವರಿಗೂ ಮತ್ತು ಸಾಮೂಹಿಕವಾಗಿ (ಭಜನೆ) ಹಾಡುವವರಿಗೂ ಇದರಿಂದ ಪ್ರಯೋಜನಗಳು ಇರಲಿಕ್ಕೇ ಬೇಕು. ಮನರಂಜನೆಯಂತು ಸರಿ. ಬದುಕಿನ ತಾಪತ್ರಯ ಮರೆಯಲಂತು ಸರಿಯೇ. ಇವೆರಡರ ಜತೆಗೆ ತತ್ವಪದಗಳ ಒಳಗಿಣ ತಲ್ಲಣಗಳಿಗೂ ಮತ್ತು ಹಾಡುವವನ ತಲ್ಲಣಗಳಿಗೂ ಒಂದು ಬಗೆಯ ನಂಟಿರುತ್ತದೆ. ಈ ನಂಟಿನಿಂದಾಗಿ ತತ್ವಪದಗಳು ಆತ್ಮಸಂಗಾತಿಗಳಾಗಿ ನಿಲ್ಲುತ್ತವೆ. ತತ್ವಪದಗಳನ್ನು ಹಾಡುವವನಿಗೂ, ಕೇಳುಗನಿಗೂ ಬದುಕಿನಲ್ಲಿ ಉದ್ಭವವಾದ ಸಮಸ್ಯೆಗಳಿಂದ ಒಂದು ಬಗೆಯ ಪರಿಹಾರ, ಬಿಡುಗಡೆಯ ಅನುಉಭವ ಅನುಭವಿಸುವಂತಾಗಬಹುದು. ಭಜನೆಗಳಲ್ಲಿ ಇಂಥದ್ದನ್ನು ಸಾಮೂಹಿಕವಾಗಿ ಮರೆಯಬಹುದು."[೪]

ಕರ್ಬಲ್ ಹಾಡುಗಾರರಲ್ಲಿ ಉಪಾಸನೆಯ ಉದ್ದೇಶವೇ ಪ್ರಧಾನವಾಗಿಲ್ಲವೆನಿಸುತ್ತದೆ. ಮೊಹರಂ ಆಚರಣೆ ಆರಂಭದಲ್ಲಿ ಮುಸ್ಲಿಮರ ಉಪಾಸನೆಯ ಒಂದು ಭಾಗವಾಗಿತ್ತು. ಕರ್ಬಲ್ ಮೈದಾನದಲ್ಲಿ ನಡೆದ ಯುದ್ಧದಲ್ಲಿ ಮಡಿದ "ಹಜರತ್ ಇಮಾಮ್ ಹುಸೇನರ ಆತ್ಮಕ್ಕೆ ಶಾಂತಿಸಿಗಲೆಂದು ಮೊಹರಂ ತಿಂಗಳಲಿ ಮುಸ್ಲಿಂರು ಉಉಪವಾಸ, ವ್ರತ, ಕುರಾಣ್ ಪಠಣ, ದಾನ-ಧರ್ಮ ಕಾರ್ಯಗಳಲ್ಲಿ ತೊಡಗಿ 'ಆ ದುಃಖದ ದಿನ'ವನ್ನು ನೆನಪಿಸಿಕೊಂಡು ಈ ರೀತಿಯಲ್ಲಿ ಆಚರಿಸುತ್ತಾರೆ. ಇದು ಕಾಲಕ್ರಮೇಣ ಪರ್ಷಿಯನ್ ಮೂಲದ ರಾಜರ ಪ್ರಭಾವದಿಂದ ಭಾರತಕ್ಕೆ ಕಾಲಿಟ್ಟಿತು. ತನ್ನ ಮೂಲ ಆಶಯದೊಂದಿಗೆ ಮೊಹರಂ ಭಾರತದಲ್ಲಿ ನಡೆಯಲಾರಂಭಿಸಿತು ಹಿಂದೂಗಳು ಸೇರಿಕೊಂಡರು. ಮೊಗಲ್ ಚಕ್ರವರ್ತಿಗಳು ಈ

---

೪. ಅಮರೇಶ ನುಗಡೋಣಿ ; ನುಡಿವ ಬೆಡಗು, ಪುಟ : ೨೩

[illegible]

ಹಬ್ಬಕ್ಕೆ ಪ್ರೋತ್ಸಾಹ ನೀಡಿದರು. ಬಹುಮನಿ ಆದಿಲಶಾಹಿ ಸುಲ್ತಾನರಂತು ಭಾಗವಾಗಿಯೇ ನಡೆಸಿದರು. ಕಾಲಾಂತರದಲ್ಲಿ ಈ ಮೊಹರಂ ಹಬ್ಬದ ಸ್ವರೂಪವೇ ಬದಲಾಗುತ್ತ ಬಂದಿತು."[೫] ಶೋಕಮೂಲದ ಹಬ್ಬ ಸಂಭ್ರಮದ ಆಚರಣೆಯಾಗಿ ಪರಿವರ್ತಿತಗೊಂಡಿತು. ಮಸೀದೆಯ ಮುಂದೆ ಅಲಾವಿ ಕುಣಿ ತೋಡಿ, ಅದರೊಳಗೆ ಬೆಂಕಿ ಹಾಕಿ, ಅದರ ಸುತ್ತ ಕರ್ಬಲ್ ಹಾಡುತ್ತ, ಕುಣಿಯುತ್ತಾರೆ. ಮೊಹರಂ ಆಚರಣೆಯ ಸಂದರ್ಭದಲ್ಲಿ ಮಾತ್ರ ಕರ್ಬಲ್ ಹೇಳುವ ಪದ್ಧತಿ. ಮೊಹರಂ ಆಚರಣೆ ವರ್ಷಕ್ಕೊಮ್ಮೆ ಮಾತ್ರ. ಆ ಸಂದರ್ಭದಲ್ಲಿ ಪ್ರಸಿದ್ಧ ಕರ್ಬಲ್ ಮೇಳಗಳನ್ನು ಹಾಡಲು ಕೆಲವೆಡೆ ಆಮಂತ್ರಿಸುವರು. ಹೆಚ್ಚಾಗಿ ಕಲಾವಿದರು ತಮ್ಮೂರಿನ ಮೊಹರಂದಲ್ಲಿ ಸ್ವಯಂ ಪ್ರೇರಿತರಾಗಿ ಹಾಡುವರು. ಕರ್ಬಲ್ ಕಲಾವಿದರು ಪಡೆಯುವ ಸಂಭಾವನೆ ಅವರಿಗೆ ಆರ್ಥಿಕ ಮೂಲವಾಗಲಾರದು. ಇತ್ತಿತ್ತಲಾಗಿ ಮುಸ್ಲಿಂ ಹಬ್ಬಗಳ ಸಂದರ್ಭದಲ್ಲಿ ಕೆಲವೆಡೆ ಕರ್ಬಲ್ ಹಾಡುಗಳ ಸ್ಪರ್ಧೆ ನಡೆಯುತ್ತಿದ್ದು, ಆಕರ್ಷಕ ಬಹುಮಾನಗಳು ಇರುತ್ತವೆ. ಅಲ್ಲಿ ವೇಷ-ಭೂಷಣ-ಅಲಂಕಾರಗಳಿಗೆ ಹೆಚ್ಚಿನ ಪ್ರಾಶಸ್ತ್ಯವಿರುತ್ತದೆ. ದಂಗಲ್ ಕುಣಿತದಲ್ಲಂತೂ ಕನಿಷ್ಠ ೨೫ ಜನ ಕಲಾವಿದರಿರಬೇಕು. ಬಹುಮಾನದ ಮೊತ್ತ ಕಡಿಮೆಯಾಗಿದ್ದರೆ ಅದು ಅವರ ಪ್ರಯಾಣದ ವೆಚ್ಚಕ್ಕೂ ಸಾಕಾಗುವುದಿಲ್ಲ.

ಬಾಗೆನಾಡಿನಲ್ಲಿ ೨೩ ಕರ್ಬಲ್ ಮೇಳಗಳಿದ್ದು ಪ್ರಮುಖ ಕಲಾವಿದರ ಸಂಖ್ಯೆ ೧೦೦. ಇವರಲ್ಲಿ ಕೆಲವರು ಮುಸ್ಲಿಂ ಕಲಾವಿದರು. ಆರಂಭದಲ್ಲಿ ದೈವಾರಾಧನೆ ಕೇಂದ್ರಿತವಾದ ಕಲೆ ಈಗ ಶುದ್ಧ ಮನರಂಜನೆಯ ಕಲೆಯಾಗಿ ಮಾರ್ಪಟ್ಟಿದೆ. ಮೊರಬದ ಜೈ ಹನುಮಾನ ಕರ್ಬಲ್ ಮೇಳ ಕರ್ನಾಟಕದಲ್ಲಿಯೇ ಮೊದಲ ಸ್ಥಾನದಲ್ಲಿದೆ. ಅವರು ವೇಷ-ಭೂಷಣ-ಅಲಂಕಾರ ಸಲಕರಣೆಗಳಿಗೆ ಸುಮಾರು ಒಂದು ಲಕ್ಷ ರೂಪಾಯಿ ಬಂಡವಾಳ ತೊಡಗಿಸಿರುವುದಾಗಿ ತಂಡದ ನಾಯಕ ಹೇಳುತ್ತಾನೆ. ಅಳಗವಾಡಿಯ ಕರ್ಬಲ್ ಮೇಳದ ಯಜಮಾನ ಮಹಾದೇವ ಶಿರಗೂರೆ ಬೆಳಗಾವಿ ಜಿಲ್ಲಾ ಪಂಚಾಯತ ಮಾಜಿ ಸದಸ್ಯ. ಕರ್ಬಲ್ ಮೇಳ ಕಟ್ಟುವುದು ಅವನ ಹವ್ಯಾಸ. ಅದಕ್ಕಾಗಿ ಸಾವಿರ-ಸಾವಿರ ಹಣ ವಿನಿಯೋಗಿಸಿದ್ದಾನೆ. ಆರ್ಥಿಕ ಪ್ರತಿಫಲ

---

**೫ ಅಮರೇಶ ನುಗಡೋಣಿ : ನುಡಿವ ಬೆಡಗು, ಪುಟ : ೪೪,೪೫**

[illegible]

ಮಾತ್ರ ಶೂನ್ಯ. ಕರ್ಬಲ್ ಕವಿಗಳ ಹಾಡುಗಳ ರಾಶಿಯೇ ಅವನಲ್ಲಿದೆ. ಮರಾಠಿ ಹಾಡುಗಳನ್ನು ಕನ್ನಡಕ್ಕೆ ಅನುವಾದಿಸಿಕೊಂಡಿದ್ದಾನೆ.

ಜನಪದ ಕಲಾವಿದರು ಧನದಾಹಿಗಳಲ್ಲ. ಆತ್ಮಸಂತೋಷದ ಉತ್ಕಲತೆಯಿಂದ ಕಲೆಯೊಂದಿಗೆ ತಮ್ಮನ್ನು ತಳಕು ಹಾಕಿಕೊಳ್ಳುತ್ತಾರೆ. ಆದ್ದರಿಂದ ಜನಪದ ಕಲೆ-ಕಲಾವಿದರನ್ನು ಆರ್ಥಿಕ ನೆಲೆಯಲ್ಲಿಇಟ್ಟು ನೋಡುವುಉದು ಕಷ್ಟಸಾಧ್ಯವಾದುದು.

ಕರಡಿ ಮೇಳದವರು, ಗೊಂದಲಿಗರು, ಪುರವಂತರು, ದೈವಾರಾಧನಾ ಕೇಂದ್ರಿತ ಕಲೆಗಳ ಕಲಾವಿದರಾಗಿದ್ದರೂ ತಮ್ಮ ಕಲೆಗಳನ್ನು ವೃತ್ತಿಯಾಗಿಸಿಕೊಂಡವರು. ಸಂಭಾವನೆಯನ್ನು ಗೊತ್ತುಪಡಿಸದೇ ಪ್ರದರ್ಶನ ನೀಡುವುದಿಲ್ಲ. ಕರಡಿಯವರು, ಗೊಂದಲಿಗರು ಮತ್ತು ಪುರವಂತರ ಸಂಭಾವನೆ ಚೆನ್ನಾಗಿರುತ್ತದೆ. ಡೊಳ್ಳು, ಚೌಡಿಕೆ, ಭಜನೆ, ಕರ್ಬಲ್ ಕಲಾವಿದರಿಗಿಂತ ಆರ್ಥಿಕವಾಗಿ ಅನುಕೂಲಸ್ಥರು. ಕರಡಿ ಮೇಳದವರು ಒಂದು ದಿನಕ್ಕೆ ರೂಪಾಯಿ ೩೦೦೦-೫೦೦೦ ಸಾವಿರ ಸಂಭಾವನೆ ಪಡೆಯುವರು. ಪುರವಂತರು ಹಾಗೂ ಗೊಂದಲಿಗರು ಸಂಭಾವನೆಯಲ್ಲದೆ ಆರಾಧನೆಯಲ್ಲಿ ಬೇಕಾಗುವ ಹಿಟ್ಟು, ಅಕ್ಕಿ, ಕಾಯಿ, ಅಡಿಕೆ, ಎಲೆ, ಅರಿವೆ ಮೊದಲಾದ ಪರಿಕರಗಳನ್ನು ತೆಗೆದುಕೊಂಡು ಹೋಗುವರು. ಆದ್ದರಿಂದ ಇವರನ್ನು ವೃತ್ತಿ ಕಲಾವಿದರ ಗುಂಪಿಗೆ ಸೇರಿಸಬಹುದು. ಆದರೆ ಅವರ ಕಲೆಗಳು ದೈವ ಕೇಂದ್ರಿತವಾಗಿರುವುದರಿಂದ, ಆರಾಧನೆಯ ಹಿನ್ನೆಲೆಯನ್ನು ಒಳಗೊಂಡಿರುವುದರಿಂದ ತಾತ್ವಿಕವಾಗಿ ಅವರನ್ನು ಈ ವರ್ಗೀಕರಣಕ್ಕೆ ಅಳವಡಿಸುವುದು ಅನಿವಾರ್ಯವಾಗುತ್ತದೆ. ಗೊಂದಲಿಗರು, ಪುರವಂತರು ಪುರೋಹಿತರಾಗಿ ಬದಲಾಗುತ್ತಿದ್ದಾರೆ. ಅವರ ಕಲೆಗಳು ಪುರೋಹಿತ್ಯದ ಒಂದು ಭಾಗವಾಗುತ್ತಿವೆ. ಅಲ್ಲಿ ಕಲೆಗಿಂತಲೂ ವಿಧಿ-ವಿಧಾನಗಳು ಮುಖ್ಯವಾಗುತ್ತಿದ್ದು, ಪುರೋಹಿತ ವ್ಯವಸ್ಥೆಯ ಒಂದು ಭಾಗವಾಗಿ ರೂಪುಗೊಳ್ಳುತ್ತಿವೆ. ಅವರು ಕಲೆ ನೆಲೆಯಿಂದ ಪೌರೋಹಿತ್ಯದ ನೆಲೆಗೆ ಹಾರಿದಂತಿದೆ.

ಈ ಪ್ರದೇಶದಲ್ಲಿ ಈಗ ೧೩ ಕರಡಿ ಮೇಳಗಳಿದ್ದು, ಇವುಗಳಲ್ಲಿ ೩ ಮೇಳಗಳು ಖ್ಯಾತಿ ಪಡೆದಿವೆ. ಹಂದಿಗುಂದದ ಶಂಕ್ರೆಪ್ಪ ಪಾಟೀಲ ಮತ್ತು

[illegible]

ಹಾರೂಗೇರಿಯ ವಿಷ್ಣು ಪರಸಪ್ಪ ಕಂಚಕಾರ ಮೇಳ ರಾಜ್ಯ ಮಟ್ಟದಲ್ಲಿ ಗುರುತಿಸಿಕೊಂಡಿವೆ. ಒಂದು ದಿನಕ್ಕೆ ರೂ. ೮–೧೦ ಸಾವಿರ ಸಂಭಾವನೆ ಪಡೆದರೂ ಕಲಾವಿದರೆಲ್ಲ ಬಡವರು. ಅವರ ಆರ್ಥಿಕ ಸ್ಥಿತಿ ಚಿಂತಾಜನಕ ವಿಷ್ಣು ಕಂಚಕಾರ ವೈಯಕ್ತಿಕವಾಗಿ ಕೃಷಿ ಜಮೀನು ಹೊಂದಿರುವುದರಿಂದ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿಲ್ಲ. ಕರಡಿ ಕಲಾವಿದರಿಗೆ ಅಕ್ಷಯ ತೃತೀಯದಿಂದ ದೀಪಾವಳಿಯವರೆಗೆ ಹೆಚ್ಚು ಅವಕಾಶಗಳು ಸಿಗುತ್ತವೆ. ಅನಂತರ ತಿಂಗಳಲ್ಲಿ ಒಂದೋ–ಎರಡೋ ಅವಕಾಶಗಳು ಮಾತ್ರ. ಅವಕಾಶಗಳು ಇದ್ದಾಗ ಬಂದ ಹಣವನ್ನು ಕಾಯ್ದಿಡುವವರು ಕಡಿಮೆ. ಕೆಲವರಿಗೆ ಹಲವು ರೀತಿಯ ದುಶ್ಚಟಗಳು. ಕುಡಿತದಂತಹ ಚಟಗಳಿಗೆ ಬಲಿಯಾದ ಕಲಾವಿದರು ತಮ್ಮ ಕಲೆಯಿಂದ ಬಂದ ಎಲ್ಲ ಹಣವನ್ನು ಅದಕ್ಕಾಗಿಯೇ ವ್ಯಯಿಸುತ್ತಾರೆ. ಇದರಿಂದ ಆರ್ಥಿಕ ಅಭದ್ರತೆ ಯಾವಾಗಲೂ ಕಾಡುತ್ತಿರುತ್ತದೆ.

ಈ ತಾಲೂಕಿನಲ್ಲಿ ಪುರವಂತರ ಸಂಖ್ಯೆ ಕಡಿಮೆ. ಕ್ಷೇತ್ರ ಕಾರ್ಯದಲ್ಲಿ ಒಬ್ಬನೇ ಒಬ್ಬ ಪುರವಂತ ಸಿಕ್ಕಿರುವನು. ಆತ ಮೂಲತಃ ಇಲ್ಲಿಯವನಲ್ಲ ಬಿಜಾಪುರ ಜಿಲ್ಲೆಯಿಂದ ಬಂದು ಹಾರೂಗೇರಿಯಲ್ಲಿ ನೆಲೆಸಿದ್ದಾನೆ. ಪುರವಂತಿಕೆಯೊಂದಿಗೆ ಅಡಿಗೆ ಭಟ್ಟನಾಗಿಯೂ ಕೆಲಸ ಮಾಡುತ್ತಾನೆ. ಪುರವಂತಿಕೆ ಆತನ ಮುಖ್ಯ ಉದ್ಯೋಗವಾಗಿ ಉಳಿದಿಲ್ಲ. ಪುರವಂತಿಕೆಯ ಅವಕಾಶಗಳು ಸಿಗುವುದು ವಿರಳ. ಬದುಕಿಗೆ ಹಲವು ಮಾರ್ಗಗಳನ್ನು ಹುಡುಕಿಕೊಳ್ಳುವುದು ಅವನಿಗೆ ಅನಿವಾರ್ಯವಾಗಿದೆ. ಆಧುನಿಕ ಕಾಲದಲ್ಲಿ ಗೊಂದಲ, ಗುಗ್ಗಳ, ಸಾಂಕೇತಿಕವಾಗಿ ಉಳಿದುಕೊಂಡಿವೆ. ಮೊದಲಿನ ಕ್ರಿಯಾಚರಣೆಗಳು ಮಾಯವಾಗುತ್ತಿವೆ. ಕೆಲಸ ಕಡಿಮೆಯಾದಾಗ ಸಂಭಾವನೆಯೂ ಕಡಿಮೆಯಾಗುತ್ತಿದೆ. ಇದೇ ಕಾರಣಕ್ಕೆ ಗೊಂದಲಿಗರ ಮೇಳ ಹೆಚ್ಚು ಬದುಕಿಲ್ಲ. ಆ ಮೇಳದ ಕಲಾವಿದರಿಗೆ ಗೊಂದಲ ಹಾಕುವುದು ಅರೆಕಾಲಿಕ ವೃತ್ತಿ. ಬೇರೆ–ಬೇರೆ ಮುಖ್ಯ ವೃತ್ತಿಗಳನ್ನು ಹುಡುಕಿಕೊಂಡಿದ್ದಾರೆ. ಯಲ್ಪಾರಟ್ಟಿಯ ಗೊಂದಲಿಗರು ವ್ಯವಸಾಯಗಾರರು. ಹಾರೂಗೇರಿಯ ಗೊಂದಲಿಗರು ಪಾತ್ರೆ ವ್ಯಾಪಾರಿಗಳು. ಚಿಂಚಲಿಯ ಗೊಂದಲಿಗರು ಕೃಷಿಕರು. ಒಟ್ಟಿನಲ್ಲಿ ದೈವಾರಾಧನಾ ಕೇಂದ್ರಿತ ಕಲೆಗಳ ಕಲಾವಿದರು ತಮ್ಮ ಕಲಾ ಮೂಲದ ಆದಾಯದಿಂದಲೇ ಬದುಕುವುದು ಸಾಧ್ಯವಿಲ್ಲ.

[illegible]

[illegible]

ಅವರೆಲ್ಲ ಬಡತನ ರೇಖೆಗಿಂತ ಕೆಳಗಿನವರು. ಕೆಲವರು ಸ್ಥಿತಿವಂತರಿದ್ದರೆ ಹಲವರು ಬೇರೆ ಆದಾಯದ ಮೂಲವನ್ನು ಅವಲಂಬಿಸಿದ್ದಾರೆ.

**೨. ವೃತ್ತಿ ಕಲಾವಿದರು :**

ವೃತ್ತಿ ಕಲಾವಿದರಾದ ಜಾತಿಗಾರರು ಸಂಪೂರ್ಣ ಬದಲಾಗಿದ್ದಾರೆ. ಇಲ್ಲಿಯ ಜಾತಿಗಾರರಿಗೆ ಸೋಗು-ಲಾಗಗಳ ಪರಿಚಯ ಎಳ್ಳಷ್ಟು ಉಳಿದಿಲ್ಲ. ಅಲೆಮಾರಿಗಳಾಗಿದ್ದ ಅವರು ನೆಲೆ ಹುಡುಕಿಕೊಂಡು ಮನೆ ಕಟ್ಟಿಕೊಂಡು ಗೌರವದ ಬದುಕಿಗೆ ನಾಂದಿ ಹಾಡಿರುವರು. "ಜಾನಪದ ವೃತ್ತಿ ಕಲೆಗಾರಿಕೆಯನ್ನು ಬಿಟ್ಟು ದನಗಳ ಅದರಲ್ಲಿಯೂ ಎಮ್ಮೆಗಳ ವ್ಯಾಪಾರದ ಲಾಭದಾಯಕ ವೃತ್ತಿಯಲ್ಲಿ ಬಹುಪಾಲು ಜಾತಗಾರರು ಈಗ ತೊಡಗಿದ್ದಾರೆ. ಪೂರ್ವದಿಂದಲೂ ಎಮ್ಮೆ ಸಾಕುವ ಹವ್ಯಾಸ ಹೊಂದಿದ ಮತ್ತು ಅವಕಾಶ ದೊರೆತಾಗ ಎಮ್ಮೆ ಬೋಳಿಸುವ ಉಪವೃತ್ತಿ ಮಾಡುತ್ತಿದ್ದ ಇವರಿಗೆ ಎಮ್ಮೆಗಳ ಬಗ್ಗೆ ಸಂಪೂರ್ಣ ಜ್ಞಾನವಿದೆ. ಅವುಗಳ ಪಾಲನೆ, ಪೋಷಣೆ ಮಾಡುವ ಕಷ್ಟ ಸಹಿಷ್ಣುತೆಯ ಸ್ವಭಾವವೂ ಇವರಲ್ಲಿದೆ. ಹೀಗಾಗಿ ಧೈರ್ಯದಿಂದ ಈ ವೃತ್ತಿಯಲ್ಲಿ ನುಗ್ಗಿದ್ದಾರೆ. ಎಮ್ಮೆ ವ್ಯಾಪಾರದ ದಳ್ಳಾಳಿತನದ ಸರ್ವಸ್ವಾಮ್ಯ ಇತ್ತೀಚಿನ ದಿನಗಳಲ್ಲಿ ಜಾತಿಗಾರರ ಕೈಸೇರಿದೆಯೆಂದರೆ ಅತಿಶಯೋಕ್ತಿಯೇನಲ್ಲ. ಪುಣೆ, ಗೋವಾ, ಬಾರಾಮತಿ, ಕಲಬುರ್ಗಿ, ಹೈದ್ರಾಬಾದ, ಬೆಂಗಳೂರು, ಮೈಸೂರು, ಮುಂಬೈ ಮುಂತಾದ ಕಡೆಗೆ ತಿರುಗಾಡಿ ಎಮ್ಮೆ ಮಾರುತ್ತಾರೆ, ಕೊಳ್ಳುತ್ತಾರೆ. ದೊಡ್ಡ ಪ್ರಮಾಣದಲ್ಲಿ ಕಮೀಶನ್ ಗಿಟ್ಟಿಸುತ್ತಾರೆ. ಹೆಚ್ಚು ಹಣವಿಲ್ಲದವರು ಸಣ್ಣ ಪ್ರಮಾಣದಲ್ಲಿ ಈ ಉದ್ಯೋಗ ಮಾಡುತ್ತಾರೆ. ನುರಿತವರು ಮತ್ತು ಹೆಚ್ಚು ಪರಿಚಯಸ್ಥರನ್ನು ಗಳಿಸಿದವರು ಪತ್ತಿನ ಮೇಲೆ ಉದ್ರಿಯಿಂದ ಕೊಳ್ಳುತ್ತಾರೆ, ಮಾರುತ್ತಾರೆ. ಎಮ್ಮೆ ವ್ಯಾಪಾರದಲ್ಲಿ ತೊಡಗಿದ ಕೆಲವರು ಚೆನ್ನಾಗಿ ಸಂಪಾದನೆ ಮಾಡಿದ್ದಾರೆ; ಹೊಲ ಮನೆ ಕೊಂಡಿದ್ದಾರೆ. ವ್ಯಾಪಾರಿ ಕುಶಲತೆಯಿಲ್ಲದವರು ರೈತಕಾರ್ಮಿಕರಾಗುತ್ತಿದ್ದಾರೆ. ಮೈಮುರಿದು ದುಡಿದು ಮಿತವ್ಯಯದಿಂದ ಜೀವನ ಸಾಗಿಸಿ ಸ್ಥಿತಿವಂತರಾಗುತ್ತಿದ್ದಾರೆ."[೬]

---

೬. ಜ್ಯೋತಿ ಹೊಸೂರ : ಜಾತಿಕಾರರ ಜಾತಕ, ಪುಟ : ೪೭,೪೮

[illegible]

ರಾಯಬಾಗ ತಾಲೂಕಿಗೆ ಹೊಂದಿಕೊಂಡಿರುವ ಗೋಕಾಕ ತಾಲೂಕಿನ ಮೂಡಲಗಿಯ ಸಂತೆಯಲ್ಲಿ ದನಗಳ ವ್ಯಾಪಾರದ ಬಹು ದೊಡ್ಡ ವಹಿವಾಟು ನಡೆಯುತ್ತದೆ. ಅದು ಉತ್ತರ ಕರ್ನಾಟಕದಲ್ಲಿಯೇ ದನಗಳ ವ್ಯಾಪಾರಕ್ಕೆ ಹೆಸರಾದ ಸಂತೆ. ಈ ಸಂತೆಯಲ್ಲಿ ಜಾತಿಕಾರರದೇ ಪ್ರಮುಖ ಪಾತ್ರ. ಅದುವೇ ಅವರ ಆದಾಯದ ಮೂಲ. ಅವರಿಲ್ಲದಿದ್ದರೆ ದನಗಳ ವ್ಯಾಪಾರವೇ ಆಗುವುದಿಲ್ಲ ಎನ್ನುವ ಮಟ್ಟಿಗೆ ಅವರು ವ್ಯಾಪಾರಿ ಕುಶಲತೆ ಸಾಧಿಸಿರುವರು. ಆದ್ದರಿಂದ ಮೂಡಲಗಿ ಸಮೀಪದ ಕುಡಚಿ ಮತ್ತು ಹಾರೂಗೇರಿ ಅವರ ಮುಖ್ಯ ನೆಲೆಗಳಾಗಿವೆ. ತಮ್ಮದೇ ಬಡಾವಣೆ ನಿರ್ಮಿಸಿಕೊಂಡಿರುವರು. ಮಕ್ಕಳನ್ನು ಶಾಲೆಗಳಿಗೆ ಸೇರಿಸಿದ್ದಾರೆ. ಕೆಲವರು ತಮ್ಮ ಮಕ್ಕಳನ್ನು ಆಂಗ್ಲಮಾಧ್ಯಮ ಶಾಲೆಗಳಿಗೆ ಕಳುಹಿಸುತ್ತಿದ್ದಾರೆ. ಆದರೆ ಇವರ ಹೆಚ್ಚಿನ ಮಕ್ಕಳು ಅಥಣಿ, ಮುಧೋಳ, ತೇರದಾಳ, ಕುಡಚಿ ಹಾಗೂ ಹಾರೂಗೇರಿ ಮದರಸಾಗಳಲ್ಲಿವೆ. ಅವರಲ್ಲಿ ಧರ್ಮಶ್ರದ್ಧೆ ಹೆಚ್ಚುತ್ತಿದ್ದು ತಮ್ಮ ಬಡಾವಣೆಗಳಲ್ಲಿಯೇ ಮಸೀದಿಗಳನ್ನು ನಿರ್ಮಿಸಿಕೊಂಡಿದ್ದಾರೆ. ಆದರೂ ಕುಡಚಿ ಮತ್ತು ಹಾರೂಗೇರಿ ಜಾತಕಾರರಲ್ಲಿ ಯಾರೊಬ್ಬರೂ ಪದವಿಯವರೆಗೆ ಓದಿದ ಉದಾಹರಣೆಗಳಿಲ್ಲ. ಅಂದರೆ ಅವರಲ್ಲಿ ಇತ್ತೀಚೆಗೆ ಶೈಕ್ಷಣಿಕ ಪ್ರಜ್ಞೆ ಬೆಳೆಯುತ್ತಿದೆ. ಒಟ್ಟಿನಲ್ಲಿ ಈ ವೃತ್ತಿ ಕಲಾವಿದರೆಲ್ಲ ತಮ್ಮ ಮೂಲ ವೃತ್ತಿಯನ್ನು ಕೊಡವಿಕೊಂಡು ವ್ಯಾಪಾರಿ, ದಲ್ಲಾಳಿ, ಕೂಲಿಕಾರ್ಮಿಕರಾಗಿ ಪರಿವರ್ತಿತಗೊಂಡಿರುವರು. ಈಗ ಇವರ ಆದಾಯ, ಜೀವನಮಟ್ಟ ಚೆನ್ನಾಗಿದ್ದರೂ ಬಡತನರೇಖೆಗಿಂತ ಕೆಳಗಿನವರು. ಈಗ ಇವರು ಧಾರ್ಮಿಕ ಅಂಧಃಶ್ರದ್ಧಧೆಯಲ್ಲಿ ಮುಳುಗಿದ್ದಾರೆ.

ಸಾಮಾಜಿಕ ಸ್ಥಾನ-ಮಾನಗಳಿಗೂ ಆರ್ಥಿಕ ಸ್ಥಿತಿ-ಗತಿಗಳಿಗೂ ಪರಸ್ಪರ ಸಂಬಂಧವಿದೆ. ಒಬ್ಬ ಮನುಷ್ಯನ ಆರ್ಥಿಕ ಪರಿಸ್ಥಿತಿ ಆತನ ಸಾಮಾಜಿಕ ಸ್ಥಾನ-ಮಾನ ನಿರ್ಧರಿಸುವ ಅಂಶಗಳಲ್ಲಿ ಒಂದು. ಜಾತಿಗಾರರು, ಬಹುರೂಪಿಗಳು ತಮ್ಮ ಪರಂಪರಾಗತ ವೃತ್ತಿ ಕಲೆಗಳನ್ನು ತ್ಯಜಿಸುವುದಕ್ಕೆ ಈ ಎರಡೂ ಅಂಶಗಳು ಕಾರಣವಾಗಿವೆ. ಸಾಮಾಜಿಕ ಗೌರವವನ್ನು ಪಡೆಯುವ ಹಾಗೂ ಸ್ವಾವಲಂಬನೆ ಸಾಧಿಸುವ ಆಶಯಗಳಿಂದಾಗಿ ಅಲೆಮಾರಿಗಳು ತಮ್ಮ ವೃತ್ತಿಗಳನ್ನು ತ್ಯಜಿಸುವುದು

ಅನಿವಾರ್ಯವಾಗಿರಬಹುದು. ಜಾತಿಗಾರರಂತೆ ಬಾಗೆನಾಡಿನ ಬಹುರೂಪಿಗಳು ನೆಲೆ ಹುಡುಕಿಕೊಂಡಿದ್ದಾರೆ. ಅವರಿಗೆ ಕೃಷಿ ಮತ್ತು ಶಿಕ್ಷಣದತ್ತ ವಿಶೇಷ ಒಲವು. ಕೆಲವರು ಕೃಷಿ ಜಮೀನು ಹೊಂದಿದ್ದಾರೆ. ಯುವಕರು ಶಿಕ್ಷಣ ಪಡೆದು ಸರಕಾರಿ ಅಥವಾ ಖಾಸಗಿ ಉದ್ಯೋಗದಲ್ಲಿದ್ದಾರೆ. ಜಾತಿಗಾರರಿಗೆ ಹೋಲಿಸಿದರೆ ಬಹುರೂಪಿಗಳು ಆರ್ಥಿಕವಾಗಿ ಚೆನ್ನಾಗಿದ್ದಾರೆ. ಮೂಲ ವೃತ್ತಿಯಲಿರುವ ಹಿರಿಇಯರು ಮರೆಯಾದರೆ ಅವರೊಂದಿಗೆ ಅವರ ಪರಂಪರಾಗತ ಕಲೆ ಮರೆಯಾಗುವುದಲ್ಲಿ ಸಂದೇಹವಿಲ್ಲ.

ಬಹುರೂಪಿಗಳು ಮೊದಲಿನಿಂದಲೂ ಜಾತಿಗಾರರಷ್ಟು ದೈನ್ಯ ಸ್ವಭಾವದವರಲ್ಲ. ಅವರು ಒಂದು ಊರಿಗೆ ಐದು ದಿನ ವಿವಿಧ ವೇಷಗಳನ್ನು ಹಾಕಿ ಮನೆ–ಮನೆಗೆ ಸುತ್ತಿ ಹಾಡು, ನೃತ್ಯ, ಸಂಭಾಷಣೆಗಳಿಂದ ಜನರ ಮನ ರಂಜಿಸಿ ಕೊನೆಯ ದಿನ ಗೌರವವನ್ನು ಪಡೆಯುತ್ತಿದ್ದರು. ಶ್ರೀಮಂತರಲ್ಲಿ ಒತ್ತಾಯದಿಂದ ಕೇಳುತ್ತಿದ್ದರು. ಎರಡು ದಶಕಗಳ ಹಿಂದೆ ಹಳ್ಳಿಗಳಲ್ಲಿ ಇವರ ಆಟಗಳನ್ನು ಜನಪದರು ತುಂಬ ಆಸಕ್ತಿಯಿಂದ ನೋಡುತ್ತಿದ್ದರು. ಆದರೆ ಬಹುರೂಪಿ ಮಹಿಳೆಯರು ಮತ್ತು ಪುಟ್ಟ ಮಕ್ಕಳು ಭಿಕ್ಷೆಗೆ ಹೋಗುತ್ತಿದ್ದರು. ಈಗ ಬಹುರೂಪಿಗಳು ಸಾಮಾಜಿಕ ಪರಿವರ್ತನೆಯ ತಿರುವಿನಲ್ಲಿದ್ದು, ಆರ್ಥಿಕ ಸುಭದ್ರತೆಯನ್ನು ಪಡೆಯಲು ಹಲವು ಪ್ರಯತ್ನಗಳನ್ನು ಕೈಕೊಂಡಿರುವರು. ಬಾಗೆನಾಡಿನ ಬಹುರೂಪಿಗಳು ಕೃಷಿಯತ್ತ ಹೆಚ್ಚು ವಾಲಿರುವುದು ಕಂಡುಬರುತ್ತದೆ.

ಜಾತಿಕಾರರು, ಬಹುರೂಪಿಗಳು ಇಲ್ಲಿ ವಿರಳ. ಆದರೆ ಬಜಂತ್ರಿಗಳು ಹೇರಳ. ಸುಲ್ತಾನಪೂರ ಮತ್ತು ಕಪಲಗುದ್ದಿ ಗ್ರಾಮಗಳನ್ನು ಬಿಟ್ಟರೆ ರಾಯಬಾಗ ತಾಲೂಕಿನ ಪ್ರತಿ ಗ್ರಾಮಗಳಲ್ಲಿಯೂ ಬಜಂತ್ರಿಗಳಿದ್ದಾರೆ. ಅದರಲ್ಲಿಯೂ ಮುಗಳಖೋಡ, ರಾಯಬಾಗ, ನಿಡಗುಂದಿಗಳಲ್ಲಿ ಹೆಚ್ಚಿನ ಸಂಖ್ಯೆಯ ಮನೆತನಗಳಿವೆ. ನಿಡಗುಂದಿಯಲ್ಲಿ ೪೦ ಹಾಗೂ ಮುಗಳಖೋಡದಲ್ಲಿ ೫೦ ಕುಟುಂಬಗಳಿವೆ. ಹಿಡಕಲ್ಲ, ಹಾರೂಗೇರಿ, ನಿಡಗುಂದಿ, ಸುಟ್ಟಟ್ಟಿ, ಮುಗಳಖೊಡ, ರಾಯಬಾಗಗಳಲ್ಲಿ ನುರಿತ ಸನಾದಿ ಕಲಾವಿದರಿದ್ದಾರೆ. ಬಜಂತ್ರಿಯವರ ಮೂಲವೃತ್ತಿ ಸನಾದಿ ನುಡಿಸುವುದೇ ಆಗಿದ್ದರೂ ಇತ್ತೀಚೆಗೆ ಅವರೆಲ್ಲರೂ ಆರ್ಥಿಕ ಸ್ವಾವಲಂಬನೆಯತ್ತ ಮುಖ ಮಾಡಿದ್ದಾರೆ.

ಬಹಳಷ್ಟು ಬಜಂತ್ರಿ ಕುಟುಂಬಗಳಿಗೆ ಕೃಷಿ ಜಮೀನುಗಳಿವೆ. ಒಂದು ಕಾಲದಲ್ಲಿ ದೇವಸ್ಥಾನದಲ್ಲಿ ಸೇವೆ ಸಲ್ಲಿಸುತ್ತಿದ್ದ ಸನಾದಿ ಕಲಾವಿದರಿಗೆ ಸಮಾಜ ಬಿಟ್ಟುಕೊಟ್ಟ ಉಂಬಳಿಗಳವು. ಈಗ ಅವರ ಸೇವೆಯ ಗೌರವವನ್ನು ಕಳೆದುಕೊಂಡಿದ್ದು ಹೊಸ ಪೀಳಿಗೆ ಶಿಕ್ಷಣ ಮತ್ತು ವ್ಯಾಪಾರದತ್ತ ಹೆಚ್ಚು ವಾಲುತ್ತಿದೆ. ಐಸ್‌ಕ್ರಿಂ, ಬ್ರೆಡ್, ಹಣ್ಣು, ಬೊಂಬಾಯಿ ಮಿಠಾಯಿ ಮಾರುವ ಚಿಕ್ಕ ಪುಟ್ಟ ಸ್ವಯಂ ಉದ್ಯೋಗಗಳನ್ನು ಹುಡುಕಿಕೊಂಡಿರುವರು. ಬಾಗೆನಾಡಿನಲ್ಲಿ ಈ ಸಮುದಾಯದ ಪ್ರತಿಶತ ೫ ರಷ್ಟು ಯುವಕರು ಸರಕಾರಿ ಉದ್ಯೋಗದಲ್ಲಿದ್ದಾರೆ. ಹಿಡಕಲ್ಲ ಗ್ರಾಮವೊಂದರಲ್ಲಿಯೇ ೧೦ಯುವಕರು ಪದವಿ, ಸ್ನಾತಕೋತ್ತರ ಪದವಿಯವರೆಗೆ ಶಿಕ್ಷಣ ಪಡೆದಿದ್ದಾರೆ. ರಾಯಬಾಗ ತಾಲೂಕಿನಲ್ಲಿ ತಮ್ಮದೇ ಸಮಾಜದ ಸಂಘವನ್ನು ನಿರ್ಮಿಸಿಕೊಂಡು ಆರ್ಥಿಕ, ಸಾಮಾಜಿಕ, ಹೊಸತುಗಳಿಗೆ ತೆರೆದುಕೊಂಡಿರುವುದು ಈ ವೃತ್ತಿ ಕಲಾವಿದರ ವಿಶೇಷತೆ. ಹಿಂದಿನ ಅಧ್ಯಾಯದಲ್ಲಿ ಹೇಳಿದಂತೆ ಸನಾದಿ ಕಲಾವಿದರು ಕ್ಲೆರೋನೆಟ್ ಕಲಾವಿದರಾಗಿ ಬದಲಾಗುತ್ತಿರುವುದು ಗಮನಿಸಬೇಕಾದ ವಿಷಯ. ಇಂದು ಬಜಂತ್ರಿ ಸಮಾಜದವರಲ್ಲಿ ಆರ್ಥಿಕವಾಗಿ ತುಂಬಾ ಹಿಂದುಳಿದವರೆಂದರೆ ಸನಾದಿ ಕಲಾವಿದರು. ಹಿಂದಿನ ಕಾಲದಲ್ಲಿ ಸಾಮಾಜಿಕ ಗೌರವದ ಆರ್ಥಿಕ ಸುಸ್ಥಿತಿಯ ಕಲಾವಿದರಾಗಿದ್ದ ಇವರ ಬದುಕು ಇಂದು ಬೀದಿ ಪಾಲು. ಅವರು ಜಾತಿಗಾರ ಹಾಗೂ ಬಹುರೂಪಿಗಳಿಗೆ ಹೋಲಿಸಿದರೆ ಸಾಮಾಜಿಕವಾಗಿ ಅವರಿಗಿಂತಲೂ ಒಂದು ಅಂಗುಲ ಹೆಚ್ಚು ಎತ್ತರದಲ್ಲಿರುವವರು. ಭಿಕ್ಷೆಯನ್ನು ಭಾಗಶಃ ತಿರಸ್ಕರಿಸಿದವರು. ಬುಟ್ಟಿ ಹೆಣೆಯುವುದು, ಕಸಬರಿಗೆ ಕಟ್ಟುವುದು ಮುಂತಾದ ಕುಶಲ ಕಲೆಗಳೊಂದಿಗೆ ಕತ್ತೆ ಸಾಕಾಣಿಕೆಯ ಮೂಲಕ ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಲು ಪ್ರಯತ್ನಿಸಿದವರು. ಬಾಗೆನಾಡಿನಲ್ಲಿ ಸನಾದಿ ಕಲಾವಿದರು ಮದುವೆ, ಹಬ್ಬ, ಉತ್ಸವ ಮೊದಲಾದ ಸಂದರ್ಭಗಳಲ್ಲಿ ಮಂಗಳವಾದ್ಯವನ್ನು ನುಡಿಸಲು ಸಂಭಾವನೆ ಪಡೆಯುತ್ತಾರೆ. ಆ ಸಂಭಾವಣೆ ಮಾತ್ರ ಅವರ ಜೀವನೋಪಾಯಕ್ಕೆ ಸಾಲದು. ಆ ಸಂಭಾವನೆಯಿಂದಲೇ ಬದುಕುವ ಹಲವು ಕುಟುಂಬಗಳು ಇಂದು ಆರ್ಥಿಕ ಸಂಕಷ್ಟದಲ್ಲಿವೆ. ಅದಕ್ಕಾಗಿ ಅವರು ಆರ್ಥಿಕ ಸ್ವಾವಲಂಬನೆಯ ಪರ್ಯಾಯ ಮಾರ್ಗಗಳನ್ನು ಅರಸುತ್ತಿದ್ದಾರೆ. ಇಟ್ಟಿಗೆ ಉದ್ಯೋಗದತ್ತ ಮುಖಮಾಡುತ್ತಿದ್ದಾರೆ.

[illegible]

[illegible]

ಹೆಳವರು ಅಲೆಮಾರಿಗಳಾಗಿದ್ದರೂ ಬಾಗೆನಾಡಿನಲ್ಲಿ ಅವರು ಕೃಷಿ ಜಮೀನುಗಳನ್ನು ಹೊಂದಿದ್ದಾರೆ. ಬಾಗೆನಾಡಿನ ಇತರ ವೃತ್ತಿ ಕಲಾವಿದರಂತೆ ಇವರು ಪರಿವರ್ತನೆಯ ಸಂಕ್ರಮಣ ಸ್ಥಿತಿಯಲ್ಲಿ ಇಲ್ಲ. ಅವರು ತಮ್ಮ ವೃತ್ತಿ ಗೌರವಯುತವೆಂದು ಭಾವಿಸಿಕೊಂಡಿದ್ದಾರೆ. ಅವರು ತಮ್ಮ ಆಯದ ಮನೆಗಳನ್ನು ನಿರ್ದಿಷ್ಟಪಡಿಸಿಕೊಂಡು ವೃತ್ತಿ ಬದುಕನ್ನು ಸಾಗಿಸುತ್ತಿರುವುದರಿಂದ ಅವರಿಗೆ ಆರ್ಥಿಕ ಸಂಕಷ್ಟ ಎದುರಾಗಿಲ್ಲ. ಆಧುನಿಕ ವಿದ್ಯಮಾನಗಳು ಅವರ ವೃತ್ತಿಯ ಮೇಲೆ ಅಡ್ಡ ಪರಿಣಾಮ ಬೀರಿಲ್ಲ. ಬದಲಾಗಿ ಶಿಕ್ಷಿತ ಮಾರ್ಗದಲ್ಲಿಯೂ ಅವರ ಬಗ್ಗೆ ಗೌರವ ಹೆಚ್ಚಾಗುತ್ತಿದೆ. ತಮ್ಮ ಅಜ್ಜ-ಮುತ್ತಜ್ಜರ ಬಗ್ಗೆ ಕೇಳುವುದು ಯಾರಿಗಾದರೂ ಸಂತಸದ ಸಂಗತಿ. ಇತಿಹಾಸ ಪ್ರಜ್ಞೆ ಹೊಂದಿದ ಸುಶಿಕ್ಷಿತರಿಗೆ ಹೆಳವರ ವೃತ್ತಿಯ ಬಗ್ಗೆ ಗೌರವ ಅವರ ಬಗ್ಗೆ ಅಭಿಮಾನ ಮೂಡುವುದು ಸಹಜ. ಆದ್ದರಿಂದಲೇ ಹೆಳವರಲ್ಲಿ ವೃತ್ತಿ ಗೌರವ ಉಳಿದುಕೊಂಡಿದೆ. ಹಾರೂಗೇರಿಯ ಶಿವಾನಂದ ಹೆಳವರ ಇತಿಹಾಸದಲ್ಲಿ ಸ್ನಾತಕೋತ್ತರ ಪದವಿ ಪಡೆದು ಎಂ.ಫಿಲ್. ಅಧ್ಯಯನ ಮಾಡುತ್ತಿದ್ದು ಅವರಿಗೆ ಅವರ ವೃತ್ತಿಯ ಬಗ್ಗೆ ಅಭಿಮಾನವಿರುವುದು ಸಂದರ್ಶನದಲ್ಲಿ ವ್ಯಕ್ತವಾಯಿತು. ಶಿವಾನಂದರ ಸಹೋದರರೆಲ್ಲರೂ ವೃತ್ತಿಯನ್ನು ಮುಂದುವರೆಸಿದವರು. ಅವರು ಮನೆ-ಮನೆಗೆ ಹೋಗಿ ಆಯ ಕೇಳುವುದನ್ನು ಹಕ್ಕು ಎಂದು ಪ್ರತಿಪಾದಿಸುವರು.

**೩. ಶುದ್ಧ ಮನರಂಜನೆಯ ಕಲೆಗಳು :**

ಶುದ್ಧ ಮನರಂಜನೆಯ ಜನಪದ ಕಲಾವಿದರ ಆರ್ಥಿಕ ಸ್ಥಿತಿ-ಗತಿಗಳು ತೃಪ್ತಿದಾಯಕವಿಲ್ಲ. ರಾಜ್ಯಮಟ್ಟದ ಕಣಿ ಕಲಾವಿದ ವಿಷ್ಣು ಕಂಚಕಾರ ಹೇಳುವಂತೆ ಆತ ತನ್ನ ಕಲಾ ಮೂಲದಿಂದ ಸಂಪಾದಿಸುವ ಆದಾಯ ತಿಂಗಳಿಗೆ ರೂ ೧೦೦೦/-. ಅದು ಕೇವಲ ಆರು ತಿಂಗಳು. ಉಳಿದ ಆರು ತಿಂಗಳು ಅವಕಾಶಗಳು ಕಡಿಮೆ. ಆತನ ಕುಟುಂಬ ಸದಸ್ಯರ ಸಂಖ್ಯೆ ೧೩. ರಾಜ್ಯ ಮತ್ತು ಕೇಂದ್ರ ಸರಕಾರಗಳಿಂದ ಪಡೆಯುವ ಮಾಶಾಸನಗಳ ಹೊರತುಪಡಿಸಿ ಕೇವಲ ಕಲಾ ಮೂಲದ ಆದಾಯದಿಂದಲೇ ಜೀವನ ಸಾಗಿಸುವುದು ಕಷ್ಟಸಾಧ್ಯವೆಂಬುದು ಖಚಿತ.

[illegible]

[illegible]

ಇಂತಹ ಪ್ರತಿಭಾವಂತ ಕಲಾವಿದನ ಆರ್ಥಿಕ ಸ್ಥಿತಿಯೇ ಹೀಗಿರುವಾಗ ಸಣ್ಣ-ಪುಟ್ಟ ಕಲಾವಿದರ ಆರ್ಥಿಕ ಪರಿಸ್ಥಿತಿಯನ್ನು ಯೋಚಿಸುವುದೇ ಕಷ್ಟ. ಆತನೇ ಹೇಳುವಂತೆ ಕಲೆ ಗಳಿಕೆಯ ಮೂಲವಲ್ಲ. ಅಸಲು ಕಲಾವಿದರೆಲ್ಲ ಇದನ್ನು ಮನಗಂಡಿದ್ದಾರೆ. ಕಲೆ ಕೇವಲ ಹವ್ಯಾಸ. ಅದರಲ್ಲೂ ಶುದ್ಧ ಮನರಂಜನಾ ಕಲೆಗಳ ಕಲಾವಿದರು ತಮ್ಮ ಕಲೆಯನ್ನು ಆನಂದದ ದಾಸೋಹವೆಂದು ಕಾಪಾಡಿಕೊಂಡು ಬಂದಿದ್ದಾರೆ. ಅವರು ಬದುಕಿಗೆ ಬೇರೊಂದು ವೃತ್ತಿಯನ್ನು ಆಯ್ದುಕೊಂಡಿರುತ್ತಾರೆ. ವಿಷ್ಣು ಕಂಚಕಾರರವರಿಗೆ ೫ ಎಕರೆ ಜಮೀನು ಇದೆ. ಲಾವಣಿ ಕಲಾವಿದೆ ಹಂದಿಗುಂದದ ಮಾದೇವಿ ದೇವರವರ ಕೂಲಿ ಕೆಲಸಕ್ಕೆ ಹೋಗುತ್ತಾಳೆ. ಯಡ್ರಾಂವಿಯ ಲಾವಣಿ ಹಾಡುಗಾರ ಸದಾಶಿವ ಮಾಂಗ ಕೃಷಿ ಕೂಲಿ ಕಾರ್ಮಿಕ. ಹಲಗೆವಾದಕ ಮುಗಳಖೋಡದ ಬಸಪ್ಪ ಮಾದರನಿಗೆ ಸರಕಾರ ನೀಡುವ ಮಾಸಿಕ ವೃದ್ಧಾಪ್ಯವೇತನವೇ ಬದುಕಿಗೆ ಆಧಾರ. ಇವರೆಲ್ಲರನ್ನು ಎದುರಿಗಿಟ್ಟುಕೊಂಡು ಅವರ ಆರ್ಥಿಕ ಸ್ಥಿತಿ-ಗತಿಗಳನ್ನು ಅವಲೋಕಿಸಿದಾಗ ಶುದ್ಧ ಮನರಂಜನಾ ಕಲೆಗಳ ಕಲಾವಿದರೂ ಸಹ ತಮ್ಮ ಕಲೆಗಳಿಂದ ಜೀವನ ನಿರ್ವಹಿಸುವ ಸ್ಥಿತಿಯಲ್ಲಿಲ್ಲ.

ಕಣಿ, ಹಲಗೆ, ತಾಸೆ ಕಲಾವಿದರು ಆರ್ಥಿಕವಾಗಿ ಜರ್ಜರಿತರು. ಕಲಾವಿದರನ್ನು ಹುಡುಕಿಕೊಂಡು ಹೋದಾಗ ಅವರ ಮನೆ, ಕುಟುಂಬಗಳನ್ನು ಕಂಡಾಗ ಮನಸ್ಸಿಗೆ ನೋವಾಗುತ್ತದೆ. ಐದು-ಹತ್ತು ವರ್ಷಗಳ ಹಿಂದೆ ಜನರನ್ನು ತಮ್ಮತ್ತ ಸೆಳೆದಿದ್ದ ಲೇಜಿಮ್, ಬ್ಯಾಂಡ್, ಝಾಂಜ್, ಬ್ಯಾಂಜೊ ಕಲಾವಿದರು ಈಗ ಬೆಲೆ ಕಳೆದುಕೊಳ್ಳುತ್ತಿದ್ದಾರೆ. ಬಾಗೆನಾಡಿನಲ್ಲಿ ಈಗ ೧ಲೇಜಿಮ್ ಮೇಳ ಮಾತ್ರ ಉಳಿದಿದೆ. ಸನಾದಿ ಊದುತ್ತಿದ್ದ ಬಜಂತ್ರಿಗಳು ಬ್ಯಾಂಡ್ ಕಂಪನಿ ಕಟ್ಟಿದರು. ಜೈನ ಯುವಕರು ಝಾಂಜ್ ಮೇಳ ನಿರ್ಮಿಸಿದರು. ದಲಿತರು ಬ್ಯಾಂಜೊ ತಂಡ ಕಟ್ಟಿಕೊಂಡರು. ಪರಂಪರಾಗತ ಜನಪದ ಕಲಾಮೇಳಗಳಿಗೆ ಅವಕಾಶಗಳು ಕಡಿಮೆಯಾಗುತ್ತಿರುವುದು ಕಲಾವಿದರ ಆರ್ಥಿಕ ಸಂಕಷ್ಟಕ್ಕೆ ಕಾರಣ. ಬ್ಯಾಂಡ್, ಬ್ಯಾಂಜೊ ಕಲಾವಿದರು ಉಳಿದ ವೇಳೆಯಲ್ಲಿ ಕೂಲಿ-ನಾಲಿ ಮಾಡಿ ಹೊಟ್ಟೆ ಹೊರೆಯುತ್ತಾರೆ. ಝಾಂಜ್‌ದವರು ಕೃಷಿಯಲ್ಲಿ ತೊಡಗುವರು.

ಸಂಪ್ರದಾಯದ ಹಾಡು, ಲಾವಣಿಗಳನ್ನು ಕೇಳುವವರೇ ಇಲ್ಲ. ಸಂಪ್ರದಾಯದ ಹಾಡುಗಾರರಿಗೆ ಹಾಡು ಕೇಳಿದ ಮೇಲೆ ಎಲೆ ಅಡಿಕೆ ಕೊಟ್ಟು ಕಳುಹಿಸುತ್ತಾರೆ. ಅದರೊಂದಿಗೆ ಹತ್ತಿಪ್ಪತ್ತು ರೂಪಾಯಿ ಇಟ್ಟರೂ ಆಯಿತು; ಇಡದಿದ್ದರೂ ಆಯಿತು. ಸಂಪ್ರದಾಯದ ಹಾಡುಗಾರ್ತಿ ಹಾರೂಗೇರಿಯ ದುಂಡವ್ವ ನಾಗಪ್ಪ ಆಲಗೂರ "ನಮ್ಮ ಹಾಡು ಕೇಳಿ ಜನ ಸಂತೋಷ ಪಟ್ಟರೆ ಅದುವೇ ನಮಗೆ ಸಾವಿರ ರೂಪಾಯಿ ಗೌರವಧನಸಿಕ್ಕಂತೆ" ಎನ್ನುತ್ತಾರೆ. "ಕಲಾಸೇವೆಯಿಂದ ಬರುವ ಹಣ ಆ ಕಲೆಗೆ ಬೇಕಾಗುವ ಸಾಧನ-ಸಲಕರಣೆ ಕೊಳ್ಳಲು ಸಾಕಾದರೆ ಸಾಕು. ಅದು ಬದುಕಿಗೆ ಸಾಲುವಂತದ್ದೇನಲ್ಲ". ಕೂಲಿ ಮಾಡಿ ಕುಟುಂಬ ಪೋಷಿಸಿ ಮಕ್ಕಳಿಗೆ ಓದಿಸಿ ಸರಕಾರಿ ನೌಕರಿಗೆ ಅಣಿಗೊಳಿಸಿದ ಈ ಕಲಾವಿದೆಗೆ ತನ್ನ ಕಲೆಯ ಬಗ್ಗೆ ತಿರಸ್ಕಾರವಿಲ್ಲ. ಹಂದಿಗುಂದದ ದೇವರವರ ಮಹಾದೇವಿಗೆ ತನ್ನ ಕಲೆ ಹೊಟ್ಟೆ ಬಟ್ಟೆಗೆ ಬೇಕಾಗುವಷ್ಟು ಆದಾಯ ನೀಡಿದ ಸಮಾಧಾನ. ಅವಳು 'ಕಲೆಯೇ ಬದುಕಿನ ಆಸ್ತಿ'ಯೆಂದು ಹೇಳಿದರೂ ಅದನ್ನು ನಂಬುವಂತಿಲ್ಲ. ಏಕೆಂದರೆ ಅವಳು ದೇವದಾಸಿ. ಆದರೆ ಅವಳಿಗೆ ಈ ಜಾನಪದ ಕಲೆ ಬದುಕಿಗೆ ಬೇಕಾಗುವಷ್ಟು ಆದಾಯವನ್ನು ತಂದುಕೊಡದಿದ್ದರೂ ಸಾಮಾಜಿಕ ಗೌರವ ನೀಡಿ ಪುರಸ್ಕರಿಸಿದೆ.

ಈ ನಾಡಿನಲ್ಲಿ ಆಂಗಿಕ ಕಸರತ್ತು ಪ್ರದರ್ಶಕ ಕಲಾವಿದರಲ್ಲಿ ಮುಂಚೂಣಿಯಲ್ಲಿರುವವರು ಕುಸ್ತಿಪಟುಗಳು. ಸದ್ಯದ ಹಾರೂಗೇರಿಯ ಚಂಬಾ ಬಸಪ್ಪ ಪೂಜೇರಿ, ಶಶಿಧರ ಸದಾಶಿವ ಮೂಡಶಿ, ಪುಂಡಲೀಕ ಕ್ಷೀರಸಾಗರ, ಕಾಸಪ್ಪ ಧರ್ಮಟ್ಟಿ, ಶ್ರೀಶೈಲ ಯಲಶೆಟ್ಟಿ, ಗುರಪ್ಪ ದುಂಡಪ್ಪ ಸವದಿ, ಹಿಡಕಲ್ಲದ ಪರಮಾನಂದ ಗಲಗಲಿ, ಪ್ರವೀಣ ಕೊಕಟನೂರ, ಚಿಂಚಲಿಯ ಪರಶುರಾಮ ಈ ನಾಡಿನ ಸದ್ಯದ ಪ್ರಸಿದ್ಧ ಕುಸ್ತಿಪಟುಗಳು. ಕುಸ್ತಿಪಟುಗಳು ಸಾಮಾನ್ಯವಾಗಿ ಸ್ಥಿತಿವಂತ ಕುಟುಂಬಗಳಿಂದ ಬಂದವರು. ಇವರಲ್ಲಿ ತಳವರ್ಗದವರು ತೀರಾ ಕಡಿಮೆ. ಒಬ್ಬಿಬ್ಬರಿದ್ದರೂ ಬೇರೆ ಯಾರೋ ಅವರನ್ನು ಬೆಳೆಸಿರುತ್ತಾರೆ. ಬಾಗೆನಾಡಿನಲ್ಲಿ ಈಗ ದಲಿತ ಕುಸ್ತಿಪಟುಗಳೇ ಇಲ್ಲ. ಅಲ್ಲಲ್ಲಿ ಕುಸ್ತಿ ಸ್ಪರ್ಧೆಗಳು ತುರುಸಿನಿಂದ ಜರುಗುತ್ತವೆ. ರೂ.೨೫ ರಿಂದ ೭೫ ಸಾವಿರ, ಕೆಲವೊಮ್ಮೆ ಒಂದು ಲಕ್ಷ ಮೊತ್ತದ ನಗದು ಬಹುಮಾನಗಳ ಕುಸ್ತಿ ಸ್ಪರ್ಧೆಗಳು

[illegible]

ನಡೆಯುತ್ತವೆ. ಬಹುಮಾನದ ಮೊತ್ತವನ್ನು ಗಮನಿಸಿದರೆ ಕುಸ್ತಿ ಪಟುಗಳು ನಮ್ಮ ಕ್ರಿಕೆಟ ತಾರೆಯರಂತೆ ಶ್ರೀಮಂತರಾಗಿರಬಹುದೆಂಬ ಅನುಮಾನ ಬರುವುದು ಸಹಜ. ಆದರೆ ವಸ್ತು ಸ್ಥಿತಿ ಬೇರೆ. ಈ ನಾಡಿನಲ್ಲಿ ಹಲವು ಕುಸ್ತಿಪಟುಗಳು ಚರಿತ್ರೆ ಬರೆದಿದ್ದರೂ ಅವರಾರೂ ಶ್ರೀಮಂತರಾಗಿರಲಿಲ್ಲ. ಸ್ಥಿತಿವಂತರಂತೆ ಕಂಡರೂ ಅವರ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲ. ಕುಸ್ತಿಪಟುಗಳ ದೈನಂದಿನ ಖರ್ಚು-ವೆಚ್ಚಗಳು ಅಧಿಕ. ಲಕ್ಷ ರೂಪಾಯಿ ಮೊತ್ತದ ಬಹುಮಾನ ಪಡೆಯುವ ಭಾಗ್ಯ ಸಾವಿರರಲ್ಲಿ ಒಬ್ಬರಿಗೆ ಮಾತ್ರ. ಒಬ್ಬ ಕುಸ್ತಿಪಟು ತನ್ನ ವಯಸ್ಸಿನ ೨೨ ವರ್ಷಗಳವರೆಗೆ ಕುಸ್ತಿ ತರಬೇತಿ ಪಡೆದು ಜಟ್ಟಿ ಎನಿಸಿಕೊಳ್ಳುತ್ತಾನೆ. ಅಲ್ಲಿಂದ ಅವನ ಪ್ರದರ್ಶನ ಕಲೆ ಆರಂಭವಾಗುತ್ತದೆ. ಗ್ರಹಸ್ಥ ಬದುಕಿನ ದೀಕ್ಷೆ ಸ್ವೀಕರಿಸುವವರೆಗೂ ಕುಸ್ತಿ ಆಡುತ್ತಾರೆ. ಅಂದರೆ ಐದಾರು ವರ್ಷ ಮಾತ್ರ ಪ್ರದರ್ಶನ ನೀಡಲು ಸಾಧ್ಯ. ಮದುವೆಯಾದ ನಂತರ ಕುಸ್ತಿಗೆ ವಿದಾಯ ಹೇಳುವರು. ಈ ಅವಧಿಯಲ್ಲಿ ಕುಸ್ತಿಯಿಂದ ಹಣಗಳಿಸಿ ಅದನ್ನು ಆದಾಯದ ಮೂಲವಾಗಿಸಿಕೊಳ್ಳುವುದು ಒಂದು ಸಾಹಸವೇ. ಹಲವು ಕುಸ್ತಿಪಟುಗಳನ್ನು ಸಂದರ್ಶಿಸಿ ಅವರಿಗೆ ಆದಾಯದ ಬಗ್ಗೆ ಪ್ರಶ್ನಿಸಿದಾಗ ಅವರಾರೂ ಈ ಪ್ರಶ್ನೆಯನ್ನು ಗಂಭೀರವಾಗಿ ಸ್ವೀಕರಿಸಲೇ ಇಲ್ಲ. ಸ್ಥಿತಿವಂತ ಕುಟುಂಬಗಳಿಂದ ಬರುವ ಕುಸ್ತಿಪಟುಗಳ ಜೀವನಶೈಲಿ ಶ್ರೀಮಂತವಾಗಿ ಕಂಡರೂ ವಾಸ್ತವ ವ್ಯತಿರಿಕ್ತವಾಗಿರುತ್ತದೆ. ಅವರ ಸಂಪಾದನೆ ಆಟಕ್ಕುಂಟು ಲೆಕ್ಕಕ್ಕಿಲ್ಲ.

ಹಾರೂಗೇರಿಯ ಬಸಪ್ಪ ಸಿದ್ದಪ್ಪ ಪೂಜೇರಿ ಕಳೆದ ೨ ದಶಕಗಳ ಹಿಂದೆ ಈ ನಾಡಿನ ಸುಪ್ರಸಿದ್ಧ ಜಟ್ಟಿ. ಆತನಿಗೀಗ ಇಬ್ಬರು ಮಕ್ಕಳು. ಹಿರಿಯ ಮಗ ಸತ್ಪಾಲ ಕಿರಿಯವನು ಚಂಬಾ. ಸತ್ಪಾಲ ರಾಷ್ಟ್ರೀಯ ಕುಸ್ತಿ ಪಟುವಾಗಿದ್ದವನು. ಚಂಬಾ ಮುತ್ನಾಳ ಭಾರತದ ಮೊದಲ ಹಿಂದ್ ಕೇಸರಿ ಪ್ರಶಸ್ತಿ ಪುರಸ್ಕೃತ ಪೈಲ್ವಾನ. ಅವರಿಬ್ಬರ ನೆನಪಿನಲ್ಲಿ ಬಸಪ್ಪ ತನ್ನ ಮಕ್ಕಳಿಗೆ ಹೆಸರಿಟ್ಟಿದ್ದು ಆತನ ಕುಸ್ತಿ ಪ್ರೀತಿಗೆ ಸಾಕ್ಷಿ. ಬಸಪ್ಪ ಪೂಜಾರಿ ಬಡ ಕ್ರೀಡಾಪಟು. ಆತನಿಗೆ ಹಾರೂಗೇರಿಯ ಕುಸ್ತಿ ಪ್ರೇಮಿಗಳು ಎಲ್ಲ ಸೌಲಭ್ಯ ಕೊಟ್ಟು ಬೆಳೆಸಿದರು. "೧೯೭೫ ರಲ್ಲಿ ಬೆಳಗಾವಿಯಲ್ಲಿ ನಡೆದ ಚಂಬಣ್ಣ ಮುತ್ನಾಳ ಹಾಗೂ ಸತ್ಪಾಲಸಿಂಗ್ ದೆಹಲಿ ಇವರ ಮಧ್ಯದಲ್ಲಿ ನಡೆದ ಥೇಟರ್ ಕುಸ್ತಿ

[illegible]

ಸ್ಪರ್ಧೆಯಲ್ಲಿ ಮೊದಲು ಹೋದ ಬಸಪ್ಪ ಆ ಇಬ್ಬರೂ ಅಜಾನುಬಾಹು ಪಟುಗಳನ್ನು ಕಂಡು ಬೆರಗಾದನು. ಅಷ್ಟೇ ಅಲ್ಲ 'ತನಗೆ ಗಂಡು ಮಕ್ಕಳು ಹುಟ್ಟಿದರೆ ಚಂಬಣ್ಣ ಮತ್ತು ಸತ್ತಾಲ ಎಂದು ಹೆಸರಿಟ್ಟು ಕುಸ್ತಿ ಪೈಲ್ವಾನರನ್ನಾಗಿ ಮಾಡುತ್ತೇನೆ' ಎಂದು ಸಂಕಲ್ಪ ಮಾಡಿಕೊಡರಂತೆ. ಅದಕ್ಕೆ ತಕ್ಕಂತೆ ಅವರಿಗೆ ಈಗ ಇಬ್ಬರು ಗಂಡು ಮಕ್ಕಳಿದ್ದಾರೆ. ಹಿರಿಯ ಮಗ ಚಂಬಣ್ಣ ಪಿ.ಯು.ಸಿ. ಓದುತ್ತಿದ್ದಾನೆ. ಜೊತೆಗೆ ಜಮಖಂಡಿಯಲ್ಲಿ ಅಂತರಾಷ್ಟ್ರೀಯ ಖ್ಯಾತಿಯ ರತ್ನಕುಮಾರ ಮಠಪತಿಯವರ ವ್ಯಾಯಾಮಶಾಲೆಯಲ್ಲಿ ಕುಸ್ತಿ ತರಬೇತಿ ಪಡೆಯುತ್ತಿದ್ದಾನೆ. ಇನ್ನೊಬ್ಬ ಮಗ ಸತ್ತಾಲ ೮ ನೆಯ ವರ್ಗದಲ್ಲಿ ಚಂದರಗಿ ಕ್ರೀಡಾ ಶಾಲೆಯಲ್ಲಿ ಕುಸ್ತಿ ತರಬೇತಿಯೊಂದಿಗೆ ಶಿಕ್ಷಣದಲ್ಲಿ ಮುಂದುವರೆದಿದ್ದಾನೆ. 'ಪ್ರಾಮಾಣಿಕನ ಸಂಕಲ್ಪಗಳು ಹುಸಿಯಾಗಲಾರವು' ಎಂಬುದಕ್ಕೆ ಬಸಪ್ಪ ಪೂಜಾರಿಯವರ ಬದುಕು ಉತ್ತಮ ಉದಾಹರಣೆಯಾಗಿದೆ."[೭] ಕುಸ್ತಿ ಪಟುಗಳ ಆದಾಯ ಆರ್ಥಿಕ ಸ್ಥಿತಿ ಗತಿಗಳ ಕುರಿತು ಇವರನ್ನು ಕೇಳಿದಾಗ ಮುಕ್ತ ಮನಸ್ಸಿನಿಂದ ಉತ್ತರಿಸಿದರು. "ಕುಸ್ತಿಯಿಂದ ಬರುವ ಆದಾಯ ಅಷ್ಟಕಷ್ಟೆ. ದುಂಡಪ್ಪ ಸವದಿಯವರ ಮಗ ಗುರಪ್ಪನನ್ನು ೭ ವರ್ಷದವನಿದ್ದಾಗ ವ್ಯಾಯಾಮ ಶಾಲೆಗೆ ಸೇರಿಸಲಾಯಿತು. ಅಲ್ಲಿಂದ ಕೊಲ್ಲಾಪುರದಲ್ಲಿ ವಿಶೇಷ ತರಬೇತಿ ನೀಡಲಾಯಿತು. ಆತ ಕಿರಿಯ ವಯಸ್ಸಿನಲ್ಲಿಯೇ ಅತ್ಯುತ್ತಮ ಸಾಧನೆ ಮಾಡಿದ. ರಾಷ್ಟ್ರೀಯ ಕುಸ್ತಿಪಟುವಾಗುವ ಎಲ್ಲ ಲಕ್ಷಣಗಳು ಅವನಲ್ಲಿದ್ದವು. ಆದರೆ ಮೊದಲ ಕುಸ್ತಿ ಸ್ಪರ್ಧೆಯಲ್ಲಿಯೇ ಕಾಲು ಮುರಿದುಕೊಂಡ. ಕುಸ್ತಿ ಅಪಾಯದ ಕ್ರೀಡೆ. ಕುಸ್ತಿ ಪೈಲ್ವಾನನ ಯಶಸ್ಸು ದೈವವನ್ನು ಅವಲಂಬಿಸಿದೆ. ಅದನ್ನು ಆದಾಯದ ಮೂಲವೆಂದು ಪರಿಗಣಿಸುವಂತಿಲ್ಲ. ಅದು ಕೇವಲ ಹವ್ಯಾಸ."

### ೪. ರಂಗ ಕಲಾವಿದರು :

ಕ್ಷೇತ್ರಕಾರ್ಯದಲ್ಲಿ ಸಂದರ್ಶನಕ್ಕೆ ಸುಲಭವಾಗಿ ಸಿಗುವವರೆಂದರೆ ಬಾಗೆನಾಡಿನ ಜನಪದ ರಂಗಭೂಮಿ ಕಲಾವಿದರು. ಅದರಲ್ಲೂ ಕೃಷ್ಣ ಪಾರಿಜಾತದ

---

೭. ಡಾ. ಸಂಗಮೇಶ ಮಟೋಳಿ : ಕರ್ನಾಟಕದ ಕುಸ್ತಿ ಪೈಲ್ವಾನರು; ಒಂದು ಅವಲೋಕನ, ಪುಟ : ೧೩೨

[illegible]

ಕ್ಷೇತ್ರಕಾರ್ಯದಲ್ಲಿ ಸಂದರ್ಶನಕ್ಕೆ ಸುಲಭವಾಗಿ ಸಿಗುವವರೆಂದರೆ ನಟ-ನಟಿಯರು. ಡೊಳ್ಳು-ಭಜನೆ ಹಾಗೂ ಇತರ ಕಲೆಗಳ ಕಲಾವಿದರು ಇವರಷ್ಟು ಸರಳವಾಗಿ ಸಿಗುವುದಿಲ್ಲ. ಜಾನಪದ ರಂಗಕಲಾವಿದರು ರಂಗಕರ್ಮವನ್ನೇ ತಮ್ಮ ವೃತ್ತಿಯನ್ನಾಗಿಸಿಕೊಂಡವರು. ನಟನೆಯನ್ನು ಅವಲಂಬಿಸಿ ಬದುಕುವ ಹಲವು ಕಲಾವಿದರು ಇಲ್ಲಿದ್ದಾರೆ.

ಕಳೆದ ದಶಕದವರೆಗೂ ಕೃಷ್ಣಪಾರಿಜಾತ ಆಕರ್ಷಣೆಯನ್ನು ಉಳಿಸಿಕೊಂಡಿತ್ತು. ಕೃಷ್ಣ ಪಾರಿಜಾತದ ಕಲಾವಿದರು ನಟನೆಯಿಂದಲೇ ಬದುಕು ಸಾಗಿಸಬಹುದಾದ ವಾತಾವರಣವಿತ್ತು. ಇಂದು ಇಲ್ಲಿಯ ಕೃಷ್ಣಪಾರಿಜಾತ, ಸಂಗ್ಯಾ-ಬಾಳ್ಯಾ ಕಂಪನಿಗಳು ಮೂಲೆಗುಂಪಾಗಿದ್ದರೂ ಹಿಡಕಲ್ಲದ ಮಾಲಾ ಸಾಂಬ್ರೇಕರ ಹಾಗೂ ಸವಸುದ್ದಿಯ ಮೀರಾಸಾಬ ನದಾಫರ ಕಂಪನಿಗಳು ಮಾತ್ರ ಜೀವ ಹಿಡಿದು ಬದುಕಿಕೊಂಡಿವೆ. ಒಂದು ಆಟದ ಕಂಪನಿ ಹಲವು ಕಲಾವಿದರ ಸಂಗಮ. ಗಾಯಕ, ವಾದಕ, ನರ್ತಕ ಮೊದಲಾದವರು ಅದರಲ್ಲಿ ಇರುತ್ತಿದ್ದರು. ಕಂಪನಿ ಅವರೆಲ್ಲರ ಕುಟುಂಬ ನಿರ್ವಹಣೆಯ ಜವಾಬ್ದಾರಿ ಹೊರುತ್ತಿತ್ತು. ಸಿನಿಮಾ, ದೂರದರ್ಶನ ಧಾರಾವಾಹಿಗಳ ಅಬ್ಬರದಲ್ಲಿ ಕೃಷ್ಣಪಾರಿಜಾತದ ಬೆಡಗು ಮರೆಯಾಯಿತು. ಅವಕಾಶಗಳು ಕಡಿಮೆಯಾದವು. ಕಲೆಯನ್ನೇ ನೆಚ್ಚಿಕೊಂಡಿದ್ದ ಅವರು ಆರ್ಥಿಕ ಸಂಕಟಕ್ಕೊಳಗಾದರು. ಈಗ ಬಹಳಷ್ಟು ಹಿರಿಯ ಕಲಾವಿದರಿಗೆ ಸರಕಾರದ ಮಾಶಾಸನವೇ ಬದುಕುವ ದಾರಿಯಾಗಿದೆ. ಸವಸುದ್ದಿಯ ಮಲೀಕಸಾಬ ನದಾಫ ಅವರಿಗೆ 'ಕುಟುಂಬ ನಿರ್ವಹಣಾ ವಿಧಾನ ಯಾವುದು'? ಎಂದು ಕೇಳಿದಾಗ ಅವರು ಥಟ್ಟನೆ ಉತ್ತರಿಸಿದ್ದು ಸರಕಾರದ ಮಾಶಾಸನ. ರಾಜ್ಯ ಹಾಗೂ ಕೇಂದ್ರ ಸರಕಾರಗಳ ಮಾಶಾಸನಗಳೇ ಊರುಗೋಲುಗಳು. ೪೫ ವರ್ಷದ ಅದೇ ಗ್ರಾಮದ ಕೃಷ್ಣ ಪಾರಿಜಾತದ ಬಾಬಾಗೌಡ ಲಕ್ಷ್ಮಣ ಪಾಟೀಲ "ಕಲೆಯ ಗೌರವ ಈಗ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಈ ಕಲೆಯಿಂದಲೇ ಜೀವನ ನಿರ್ವಹಣೆ ಸಾಧ್ಯವಿಲ್ಲ"

ಎನ್ನುತ್ತಾನೆ. ಅವನ ಕುಟುಂಬದಲ್ಲಿ ೪ ಜನರಿದ್ದು ಅವನು, ಅವನ ಹೆಂಡತಿ ಹಾಗೂ ಇಬ್ಬರು ಮಕ್ಕಳು. ಮಕ್ಕಳು ಶಾಲೆಗೆ ಹೋಗುತ್ತಾರೆ. ಈತ ರಂಗಕಲಾವಿದ. ಈತನ ತಂದೆ ಮತ್ತು ಸಹೋದರ ಸಹ ರಂಗಕಲಾವಿದರು. ಅವರಿಬ್ಬರಿಗೆ ಮಾಶಾಸನ ಬರುತ್ತಿದೆ. ಇವನು ಕೂಲಿಯಿಂದ ಕುಟುಂಬವನ್ನು ಪೋಷಿಸುತ್ತಿದ್ದಾನೆ. 'ಆಗ ಓಕಳಿ, ಕಂಬಿ ಐದೇಶಿ ಇಂತಹ ಸಂದರ್ಭಗಳಲ್ಲಿ ಕೃಷ್ಣ ಪಾರಿಜಾತದ ಪ್ರದರ್ಶನ ಕಡ್ಡಾಯವಾಗಿತ್ತು. ಈಗ ಮೊದಲಿನ ಆಕರ್ಷಣೆ ಉಳಿದಿಲ್ಲ. ಜನ ರಾತ್ರಿಯಿಡೀ ಆಟ ನೋಡುತ್ತಿಲ್ಲ. ಅವರ ಅಭಿರುಚಿ ಬದಲಾಗಿವೆ. ಇಂತಹ ಸಂದರ್ಭದಲ್ಲಿ ಕಲಾವಿದರು ಬದುಕುವುದು ಕಷ್ಟ' ಎನ್ನುತ್ತಾನೆ.

ಕೃಷ್ಣಪಾರಿಜಾತದ ಒಂದು ಪ್ರದರ್ಶನಕ್ಕೆ ೪-೫ಸಾವಿರ ಸಂಭಾವನೆ ಸಿಗುತ್ತದೆ. ಒಂದು ಮೇಳದಲ್ಲಿ ಕನಿಷ್ಠ ಹತ್ತು ಜನ ಕಲಾವಿದರಿರುತ್ತಾರೆ. ಪ್ರಯಾಣವೆಚ್ಚ ಕಳೆದು ರೂ. ೨೫೦೦-೩೦೦೦ಸಾವಿರ ಉಳಿಯುತ್ತದೆ. ತಲಾ ರೂಪಾಯಿ ೨೫೦-೩೦೦ಸಿಕ್ಕರೆ ಕಲಾವಿದರ ಪುಣ್ಯ. ತಿಂಗಳಲ್ಲಿ ಹೆಚ್ಚು ಅಂದರೆ ೫-೬ಪ್ರದರ್ಶನದ ಅವಕಾಶಗಳು ಸಿಗಬಹುದು. ಹೀಗೆ ಲೆಕ್ಕ ಹಾಕಿದರೆ ಒಬ್ಬ ಕಲಾವಿದನ ಮಾಸಿಕ ಆದಾಯ ರೂಪಾಯಿ ೧೫೦೦-೨೦೦೦ಆಗಬಹುದು. ಆಧುನಿಕ ಸಂದರ್ಭದಲ್ಲಿ ೨೦೦೦ರೂಪಾಯಿ ಕುಟುಂಬ ನಿರ್ವಹಣೆಗೆ ಯಾವುದಕ್ಕೂ ಸಾಲದು. ಕೃಷಿ ಕೂಲಿ ಕಾರ್ಮಿಕ ರೂಪಾಯಿ ದಿನಕ್ಕೆ ೨೦೦ಸಂಬಳ ಪಡೆಯುತ್ತಾನೆ. ಅವನಿಗೆ ದಿನವೂ ಕೂಲಿ ಸಿಗುತ್ತದೆ. ಒಬ್ಬ ಕಲಾವಿದನ ಆದಾಯಗಿಂತಲೂ ಕೃಷಿಕೂಲಿಯೊಬ್ಬನ ಆದಾಯ ಹೆಚ್ಚು. ಕಲೆಯ ಕಲಾವಿದನ ಜೀವನ ನಿರ್ವಹಣೆಯ ಮಾರ್ಗವಾಗಲು ಸಾಧ್ಯವಿಲ್ಲ. ಕೃಷ್ಣಪಾರಿಜಾತದ ತಾರೆ ಎಂದೆ ಗುರುತಿಸಲ್ಪಡುವ ಹಿಡಕಲ್ಲದ ಮಾಲಾ ಅವರ ಅನುಭವ ಇದಕ್ಕಿಂತಲೂ ಭಿನ್ನವಾಗಿಲ್ಲ. "ನಮ್ಮ ಕಂಪನಿ ಈಗ ತೀವ್ರ ಆರ್ಥಿಕ ಮುಗ್ಗಟ್ಟಿನಲ್ಲಿದೆ. ಪ್ರದರ್ಶನದ ಸಂಭಾವನೆ ಕಡಿಮೆ. ಪಾರಿಜಾತವನ್ನು ನೋಡುವವರೇ ಇಲ್ಲ. ೫೦೦೦ರೂಪಾಯಿ ಸಂಭಾವನೆ ಪಡೆದರೆ ದಲ್ಲಾಳಿಗೆ ೫೦೦ರೂ. ಕೊಡಬೇಕು.

[illegible]

[illegible]

ಇಲ್ಲದಿದ್ದರೆ ಆತ ಅವಕಾಶಗಳನ್ನು ಒದಗಿಸಿಕೊಡುವುದಿಲ್ಲ. ಉಳಿದ ಹಣದಲ್ಲಿ ಕಲಾವಿದರೆಲ್ಲ ಹಂಚಿಕೊಳ್ಳಬೇಕು. ಈ ಪಾರಿಜಾತದ ಕಥೆ ನಮ್ಮ ತಲೆಮಾರಿಗೆ ಕೊನೆಗೊಳ್ಳುವುದೇನೋ ಎಂಬ ಆತಂಕ ನನ್ನನ್ನು ಕಾಡುತ್ತಿದೆ" ಎನ್ನುತ್ತಾಳೆ ಮಾಲಾ.

ಜನಪದ ಕಲಾವಿದರು ಸರಕಾರದ ಆಶ್ರಯ ಮನೆಗಳಿಗೆ ಕೈಯೊಡ್ಡಿದ್ದಾರೆ. ಮನೆ, ಜಮೀನು ಹೊಂದಿರುವ ಕಲಾವಿದರು ಕಲೆಯ ಸಹವಾಸ ತೊರೆಯುತ್ತಿದ್ದಾರೆ. ನಮಗೆ ಮಲೀಕಸಾಬ ನದಾಫ, ಬಾಬಾಲಾಲ ನದಾಫ ಅವರಂಥ ಹಿರಿಯ ಕಲಾವಿದರನ್ನು ಬಿಟ್ಟರೆ ನಲವತ್ತೈದು, ಐವತ್ತು ವಯಸ್ಸಿನ ಮಾಲಾ, ಬಾಬಾಗೌಡ ಪಾಟೀಲ, ಮೀರಾಸಾಬ ನದಾಫ, ಸದಾಶಿವ ಗದಗೈಗೋಳ, ಶಾಂತಾ ಅಂಬಿನಾಯಕರಂತಹ ಮಧ್ಯ ವಯಸ್ಸಿನ ಕಲಾವಿದರು ಸಿಗುತ್ತಾರೆ. ಯುವ ಕಲಾವಿದರು ಸಿಗುವುದೇ ಇಲ್ಲ. ಇದು ಜನಪದ ಕಲೆಗಳ ಯುಗಾಂತ್ಯದ ಮುನ್ಸೂಚನೆ.

ಜನಪದ ಕಲಾವಿದರ ಮನೆಗಳನ್ನು ಕಂಡಾಗ ಅವರ ಬಡತನ ಆರ್ಥಿಕ ತೊಂದರೆಗಳು ಗೋಚರಿಸುತ್ತವೆ. ಅವರೊಂದಿಗೆ ಮನಬಿಚ್ಚಿ ಮಾತನಾಡಿದಾಗ ಅವರ ಅಂತರಾಳದ ನೋವುಗಳು ತೆರೆದುಕೊಳ್ಳುತ್ತವೆ. ಅವರ ಕುಟುಂಬ ಸದಸ್ಯರನ್ನು ಕೇಳಿದಾಗ ಮಿಶ್ರ ಪ್ರತಿಕ್ರಿಯೆಗಳು ವ್ಯಕ್ತಗೊಳ್ಳುತ್ತವೆ. ಕಲಾವಿದರಿಗೆ ದುಶ್ಚಟಗಳು ಅಂಟಿಕೊಳ್ಳುವ ಭಯ ಕುಟುಂಬದ ಸದಸ್ಯರಲ್ಲಿರುತ್ತದೆ. ಆದ್ದರಿಂದ ಅವರು ಕಲಾವಿದನ ಸುತ್ತ ಅನುಮಾನಗಳ ಗೋಡೆಗಳನ್ನು ಕಟ್ಟಿಕೊಳ್ಳುತ್ತಾರೆ. ಕಲಾಮೂಲದಿಂದ ಬಂದ ಆದಾಯ ಕುಟುಂಬಕ್ಕೆ ಬಂದು ಮುಟ್ಟುವುದು ಸಂದೇಹ. ಕೆಲವು ಕಲಾವಿದರು ಬಂದ ಆದಾಯವನ್ನೆಲ್ಲಾ ಹೆಂಡ, ಹೊಗೆಗಳಿಗೆ ಆಹುತಿ ಕೊಡುವರು. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಲಾವಿದರಿಗೆ ಅವರ ಚಟಗಳ ಬಗ್ಗೆ ಕೆಣಕಿ ಕೇಳಿದಾಗ ಹಾರಿಕೆಯ ಉತ್ತರಗಳನ್ನೇ ನೀಡಿದ್ದಾರೆ. ತಮಗೆ ಚಟಗಳಿಲ್ಲ, ನಿದ್ದೆ ಕಾಯಲು ಎಲೆಯಡಿಕೆ ಹಾಕಿಕೊಳ್ಳುವುದು, ಬೀಡಿ ಸೇದುವುದನ್ನು ಬಿಟ್ಟರೆ ದುಶ್ಚಟಗಳನ್ನು ಮಾಡುವುದಿಲ್ಲವೆಂದು ರಂಗಕಲಾವಿದರು ಹೇಳಿರುವರು. ಅವರ ಹಿನ್ನೆಲೆಯನ್ನು ಕೆದಕಿ ನೋಡಿದಾಗ ಕೆಲವರು ಮದ್ಯದ ದಾಸರಾಗಿರುವುದು ತಿಳಿಯಿತು. ಆದರೆ ಎಲ್ಲ

[illegible]

ಕಲಾವಿದರು ಚಟಗಾರರು ಎಂದು ಹೇಳುವಂತಿಲ್ಲ. ವೃತ್ತಿ ಕಲಾವಿದರು, ಶುದ್ಧ ಮನರಂಜನಾ ಕಲೆಗಳ ಕಲಾವಿದರು ಹಾಗೂ ರಂಗಕಲಾವಿದರು ವ್ಯಸನಿಗಳಾಗುವ ಸಾಧ್ಯತೆ ಹೆಚ್ಚು.

**********

# ಅಧ್ಯಾಯ : ೭ ಕಲಾವಿದರ ಸಾಂಸ್ಕೃತಿಕ ಸ್ಥಿತ್ಯಂತರಗಳು

## ಅಧ್ಯಾಯ – ಏಳು

# ಕಲಾವಿದರ ಸಾಂಸ್ಕೃತಿಕ ಸ್ಥಿತ್ಯಂತರಗಳು

'ಸಂಸ್ಕೃತಿ' ಪದದ ನಿರ್ವಚನ ಈಗ ಹೊಸ ಆಯಾಮಗಳನ್ನು ಪಡೆದುಕೊಳ್ಳುತ್ತಿದೆ. ಮೊದ-ಮೊದಲು ಸಂಸ್ಕೃತಿಯನ್ನು ನಾಗರಿಕತೆಯಿಂದ ಬೇರ್ಪಡಿಸಿ ನೋಡುವ ಪ್ರಯತ್ನಗಳು ನಡೆದವು. ನಾಗರಿಕತೆ ಎಂದರೆ ಜೀವನದ ಹೊರ ಆವರಣ. ಅದರಿಂದ ಹೊಸ ವಿನ್ಯಾಸ ಬದಲಾವಣೆಗಳನ್ನು ಪಡೆಯುತ್ತ ಹೋಗುವ ಆಂತರಿಕ ವಿಕಾಸವನ್ನು ಸಂಸ್ಕೃತಿ ಎಂದು ವ್ಯಾಖ್ಯಾನಿಸತೊಡಗಿದರು. "ನಾಗರಿಕತೆ ದೈಹಿಕ ಸಂತೋಷದ ಕಡೆಗೆ ಹೆಚ್ಚು ಗಮನವನ್ನು ಕೊಡುತ್ತದೆ. ಹಸಿವಾದಾಗ ಅನ್ನವನ್ನು ತಿನ್ನುತ್ತೇವೆ. ಅದರಿಂದ ಸಂತೋಷವಾಗುತ್ತದೆ. ಆದರೆ ಹಸಿವು ಹಿಂಗಿದ ಮೇಲೆ ಮನಸ್ಸು ಅಷ್ಟರಿಂದಲೇ ತೃಪ್ತವಾಗುವುದಿಲ್ಲ. ಆನಂದದ ಪರಿಧಿ ವಿಸ್ತಾರಗೊಳ್ಳುತ್ತಾ ಹೋಗುತ್ತದೆ. ದೈಹಿಕ ತೃಷೆಗಳನ್ನು ಮೀರಿದ ಸೌಂದರ್ಯೋಪಾಸನೆಯ ವಲಯವನ್ನು ಪ್ರವೇಶಿಸುತ್ತದೆ. ಅಂತರ್ಮುಖವಾದ ದೈವಿಶಕ್ತಿಯಾಗಿ ಪರಿಣಮಿಸುತ್ತದೆ. ಈ ಎಲ್ಲ ಮಟ್ಟದ ಅನುಭವಗಳೂ ವಿವಿಧ ರೂಪಗಳನ್ನು ಧರಿಸಿ ಕಲೆಯಲ್ಲಿ, ಧರ್ಮದಲ್ಲಿ ಅಭಿವ್ಯಕ್ತಿಗೊಳ್ಳುತ್ತವೆ. ನಾಗರಿಕತೆಗೆ ಎಟುಕಲಾರದ ಸಂತೋಷವನ್ನು ಮನುಷ್ಯ ಈ ಮೂಲಕ ಸಾಧಿಸಲು ಪ್ರಯತ್ನಿಸುತ್ತಾನೆ. ಈ ದೃಷ್ಟಿಯಿಂದ ಸಂಸ್ಕೃತಿಯೆಂಬುದು ಪರಿಪೂರ್ಣ ಸಂತೋಷವನ್ನು ಹುಡುಕುವ ಸಾಹಸದ ಫಲ."[೧]

೧. ಡಾ. ಹೆಚ್. ತಿಪ್ಪೇರುದ್ರಸ್ವಾಮಿ : ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ : ೧೧

ಡಾ. ರಹಮತ್ ತರೀಕೆರೆ ಸಂಸ್ಕೃತಿ ಪದಕ್ಕೆ ಹೊಸ ಅರ್ಥ ಶೋಧಿಸಿರುವುದನ್ನು ಗಮನಿಸಬೇಕು. ಅವರು ಇದನ್ನು ೪ ನೆಲೆಗಳಲ್ಲಿ ಗ್ರಹಿಸಬೇಕೆಂದು ತಿಳಿಸುತ್ತಾರೆ.

೧. "ಸಂಸ್ಕೃತಿ ಎಂಬುದು ನಾಗರಿಕ ಸಮಾಜದಿಂದ ದೂರದ ಅಂಚಿನಲ್ಲಿರುವ ಹಿಂದುಳಿದ ಅಥವಾ ಬುಡಕಟ್ಟು ಸಮುದಾಯದ ಸಾಮಾಜಿಕ ಜೀವನದ ಆಚರಣೆಗಳ ವಿಶಿಷ್ಟ ಲೋಕ.

೨. ಸಂಸ್ಕೃತಿಯು ಒಂದು ಸಮುದಾಯದ ಸಮಗ್ರ ಜೀವನ ವಿಧಾನಗಳ ಮೊತ್ತ ಎಂದು ನಂಬುವ ಗ್ರಹಿಕೆ. ಇದರಲ್ಲಿ ಆ ಸಮುದಾಯದ ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಜೀವನದ ವಿದ್ಯಮಾನಗಳೆಲ್ಲ ಸೇರುತ್ತವೆ.

೩. ಸಾಹಿತ್ಯ, ಸಂಗೀತ, ನಾಟಕ, ಶಿಲ್ಪಕಲೆ, ವಾಸ್ತುಕಲೆ, ಚಿತ್ರಕಲೆ ಇತ್ಯಾದಿ ಲಲಿತ ಕಲೆಗಳಿಗೆ ಸಂಬಂಧಿಸಿದ ಕಲ್ಪನಾ ಪ್ರಧಾನ ಚಟುವಟಿಕೆಗಳನ್ನು ಸಂಸ್ಕೃತಿ ಎಂದು ತಿಳಿಯುವ ನಿಲುವು.

೪. ಸಂಸ್ಕೃತಿಯೆಂಬುದು ಸಭ್ಯ ಸಮಾಜವು ಒಪ್ಪಿಕೊಂಡಿರುವ ನೈತಿಕಮೌಲ್ಯ ಹಾಗೂ ಆದರ್ಶದ ವ್ಯಾಖ್ಯೆ ಎಂದು ತಿಳಿಯುವ ಗ್ರಹಿಕೆ."[೨]

ತರೀಕೆರೆಯವರು ಗುರುತಿಸಿರುವಂತೆ ಸಂಸ್ಕೃತಿ ಆ ಎಲ್ಲ ನಿಲುವು ಒಲವುಗಳ ಸಂಗಮ. ಸಂಸ್ಕೃತಿ ಜಂಗಮ ಸ್ವರೂಪದ್ದು. ಅದು ಪರಿಧಿಯಲ್ಲಿ ಸಮಷ್ಟಿಯುತ,. ಕೇಂದ್ರದಲ್ಲಿ ವ್ಯಕ್ತಿಗತ. ಜಾಗತೀಕರಣದಿಂದಾಗಿ ದೇಶಿಯ ಸಂಸ್ಕೃತಿ ತತ್ತರಿಸುತ್ತಿದೆ. ಅರ್ಥಶಾಸ್ತ್ರದ ಅಪಾಯದಿಂದ ಮಾನವೀಯ ಸಂಬಂಧಗಳು ಅರ್ಥ ಕಳೆದುಕೊಳ್ಳುತ್ತಿವೆ. ಈ ನೆಲದ ಮಣ್ಣಿನ ಸತ್ವ ಕಳೆಯುತ್ತಿರುವ ಜಾಗತೀಕರಣದ ಭೋಗ 'ತತ್ವ ಅನೇಕ ತಲ್ಲಣಗಳನ್ನು ಸೃಷ್ಟಿಸಿದೆ. "ಜಾಗತಿಕ ಅರ್ಥವ್ಯವಸ್ಥೆಯ ರೂಪುಗೊಳ್ಳುವಿಕೆಯಿಂದ ರಾಷ್ಟ್ರೀಯ ಸಂಸ್ಕೃತಿಯ ಅರ್ಥಹೀನತೆ ಹಾಗೂ ಪ್ರಾದೇಶಿಕ ಸಂಸ್ಕೃತಿಯ ನಾಶ್ಯ ಮತ್ತು ಆದರ್ಶ ತಾತ್ವಿಕತೆಯ ವಿಘಟನೆಯ ಬಗ್ಗೆ ಡಾ. ಕೆ.

---

೨. ಡಾ. ರಹಮತ್ ತರೀಕೆರೆ : ಹೊಸತು (ವಿಶೇಷ ಸಂಚಿಕೆ), ಜನೇವರಿ–೨೦೦೩

[illegible]

ಕೇಶವಶರ್ಮಾ ಆತಂಕಗಳನ್ನು ವ್ಯಕ್ತಪಡಿಸುತ್ತಾರೆ."[೩] ಈಗ ದೇಶಿ ಭಾಷೆಗಳ ಸ್ಥಾನಗಳನ್ನು ಇಂಗ್ಲಿಷ ಭಾಷೆ ಆಕ್ರಮಿಸಿಕೊಳ್ಳುತ್ತಿದೆ. "ಇಂಗ್ಲಿಷ ಭಾಷೆಗೆ ಪ್ರಭುವಿನ ಸ್ಥಾನ ಕೊಟ್ಟು ನಮ್ಮ ಜೀವಂತಿಕೆಯ ಪ್ರಾದೇಶಿಕ ಭಾಷೆ, ಸಾಹಿತ್ಯ, ಕಲೆಗಳು ದಿನೇ ದಿನೇ ಕ್ಷೀಣಿಸುತ್ತ ಕಣ್ಮರೆಯಾಗುವ ಅಪಾಯದಲ್ಲಿವೆ. ಹೆಚ್ಚು ಪ್ರಚಾರಕ್ಕೆ ಒಳಗಾದ ಕಂಪ್ಯೂಟರ್ ತಂತ್ರಜ್ಞಾನಕ್ಕೆ ಪ್ರಾದೇಶಿಕ ಭಾಷೆಗಳು ಪೂರಕವಲ್ಲ. ಇಲ್ಲಿ ಇಂಗ್ಲಿಷ ಭಾಷೆಯದೇ ಯಜಮಾನಿಕೆ. ಈ ತರಹದ ಯಜಮಾನಿಕೆಯನ್ನು ವಸಾಹತುವಾಗಿ ಸಂಸ್ಕೃತಿಯ ಜೊತೆಗಿಟ್ಟು ನೋಡಿದಾಗ ಬಣ್ಣ ಬಯಲಾಗುತ್ತದೆ. ಜಾಗತೀಕರಣದ ಸಂದರ್ಭದಲ್ಲಿ ವಿವೇಕದಿಂದ ವರ್ತಿಸದೇ ಹೋದರೆ ಬೇರೊಂದು ಬಾಗಿಲಿನಿಂದ ನುಗ್ಗುತ್ತಿರುವ ವಸಾಹತುಶಾಹಿ ಸಂಸ್ಕೃತಿಯ ದಬ್ಬಾಳಿಕೆಯನ್ನು ತಡೆಯುವುದು ದುಸ್ಸಾಧ್ಯವಾಗುತ್ತದೆ."[೪]

ಜನಪದ ಸಂಸ್ಕೃತಿ ಎಂದರೆ ಈ ನೆಲದ ಮಣ್ಣಿನ ಸಂಸ್ಕೃತಿ. ಜನಪದರೆಂದರೆ ಈ ನೆಲದ ಮಣ್ಣಿನ ಮಕ್ಕಳು. ಜನಪದ ಕಲೆಗಳು ಈ ಮಣ್ಣಿನೊಂದಿಗೆ ಬೆವರಿನ ಅನುಸಂಧಾನವನ್ನು ಸಾಧಿಸುವ ಕ್ರಿಯಾ ವರ್ಧಕಗಳು ನಮ್ಮ ಬದುಕಿಗೆ ಅನ್ನ ಕೊಡುವ ಮಣ್ಣು ಸತ್ವಹೀನವಾದಾಗ ನಮ್ಮ ಮಣ್ಣಿನ ಭಾಷೆ, ಸಾಹಿತ್ಯ, ಕಲೆಗಳು ಕಳಾಹೀನವಾಗುತ್ತವೆ. ಅಂತಹ ಅಪಾಯವನ್ನು ಜಾಗತೀಕರಣ ಇಂದು ತಂದೊಡ್ಡಿದೆ. ಈಗ ನೆಲದ ಭಾಷೆ, ಅನ್ಯ ಪ್ರಭಾವ, ಅನ್ಯ ಪ್ರಚೋದನೆ ಈ ನೆಲದ ಅನನ್ಯತೆಯನ್ನು ಕಳೆಯುತ್ತಿವೆ. ಬಾಗೆನಾಡಿನ ಕೃಷ್ಣಾತೀರದ ಫಲವತ್ತಾದ ಮಣ್ಣು ಇಂದು ಬಂಜೆಯಾಗಿದೆ. ಸವಳು–ಜವಳು ರೋಗ ಮಣ್ಣಿಗೆ ಅಂಟಿಕೊಂಡಿದೆ. ಈಗ ಇದೆಲ್ಲ ನೀರುಕಾಡು. ಕಾಲಿಟ್ಟಲ್ಲಿ ನೀರು, ಕೃಷ್ಣಾನದಿಗೆ ಕಟ್ಟಲಾದ ಆಣೆಕಟ್ಟುಗಳ ಹಿನ್ನೀರು ಭಾಗಶಃ ಈ ಜಮೀನುಗಳು ಜವಳಾಗಲು ಕಾರಣ. ರಾಸಾಯನಿಕ ಗೊಬ್ಬರಗಳ ಅತಿಯಾದ ಬಳಕೆ ಹಾಗೂ ನೀರಿನ ಅಸಮರ್ಪಕ ನಿರ್ವಹಣೆಯಿಂದಾಗಿ

---

೩. ಡಾ. ಕೆ. ಕೇಶವಶರ್ಮಾ : ಹೊಸತು, ಸಪ್ಟೆಂಬರ್–೨೦೦೩

೪. ಡಾ. ಶಂಭು ಬಳಿಗಾರ : ಬಿಚ್ಚಿಬಿದ್ದಾವ ಬಿಳಿಜೋಳ, ಪುಟ : ೦೪

[illegible]

ಬಾಗೆನಾಡಿನ ಮಣ್ಣು ಸತ್ತ್ವ ಕಳೆದುಕೊಳ್ಳುತ್ತಿದೆ. ಕೃಷಿಗೆ ನಿಸತ್ತು ಎದುರಾಗಿರುವುದರಿಂದ ಜನಪದ ಕಲಾವಿದರು ಆಪತ್ತಿನಲ್ಲಿದ್ದಾರೆ.

'ಸಂಸ್ಕೃತಿ' ಎಂಬ ಪದ ಸ್ಥೂಲ ದೃಷ್ಟಿಯಲ್ಲಿ ವ್ಯಾಪಕವಾಗಿ ಕಂಡರೂ ಸ್ಥೂಲ ಚಿಂತನೆಯಲ್ಲಿ ಅದು ತೀರಾ ಕಡಿಮೆ ಹರವು ಪಡೆದುಕೊಂಡಿರುವುದು ವೇದ್ಯವಾಗುತ್ತದೆ. ಅದು ಸವ್ಯಕ್ತಿಯಿಂದ ವ್ಯಕ್ತಿಗೆ, ಪ್ರದೇಶದಿಂದ ಪ್ರದೇಶಕ್ಕೆ, ನಾಡಿನಿಂದ ನಾಡಿಗೆ, ದೇಶದಿಂದ ದೇಶಕ್ಕೆ ವೈವಿಧ್ಯತೆಯನ್ನು ದರ್ಶಿಸುತ್ತದೆ.

"ಜಾನಪದಕ್ಕಿಂತ ಭಿನ್ನರೀತಿ ಇರುವುದನ್ನು ಶಿಷ್ಟ ಎಂದು ಕರೆಯುತ್ತಾರೆ. ಈ ಶಿಷ್ಟಸಂಸ್ಕೃತಿ ಎನ್ನುವುದು ಸಾಮಾಜಿಕಾರ್ಥಿಕವಾಗಿ ಮುಂದುವರಿದವರ ನಗರ ಪ್ರದೇಶಗಳಲ್ಲಿರುವವರ, ಪ್ರಮುಖವಾಗಿ ವಿದ್ಯಾವಂತರ ಸಂಸ್ಕೃತಿ ಎಂದು ಕರೆಯಬಹುದು. ಇದಕ್ಕೆ ವಿರುದ್ಧವಾಗಿ ಸಮಾಜದ ಕೆಳಸ್ತರದ, ಅನಾಗರಿಕವಾದ ಕೊಳಗೇರಿ ಹಳ್ಳಿಗಳಲ್ಲಿ ಬದುಕುತ್ತಿರುವವರ ಸಂಸ್ಕೃತಿಯನ್ನು ಜನಪದ ಸಂಸ್ಕೃತಿ ಎಂದು ಕರೆಯಲಾಗುತ್ತದೆ."[೫] ಈ ಜಾನಪದ ಸಂಸ್ಕೃತಿ ಮನುಷ್ಯನ ಹುಟ್ಟಿನಿಂದಲೇ ಆರಂಭಗೊಂಡಿದೆ. ಸಾಹಿತ್ಯ, ಸಂಗೀತ, ಕಲೆ, ಸಂಪ್ರದಾಯಗಳಲ್ಲಿ ಅಭಿವ್ಯಕ್ತಿಗೊಳ್ಳುತ್ತ ಬಂದಿದೆ. ಸಾಹಿತ್ಯ, ಸಂಗೀತ, ಕಲೆಗಳು, ಜಾನಪದ ಸಂಸ್ಕೃತಿಯ ಬಹುಮುಖ್ಯ ಆಕರಗಳು. ಇವೆಲ್ಲ ಮೌಖಿಕ ಪರಂಪರೆಯಲ್ಲಿಯೇ ಮುಂದುವರೆದುಕೊಂಡು ಬಂದಿವೆ. "ಕರ್ನಾಟಕ ಜನಪದ ಸಂಸ್ಕೃತಿ ಪ್ರಾಚೀನವಾದುದಷ್ಟೇ ಅಲ್ಲದೇ ವೈವಿಧ್ಯಮಯವೂ ಇದೆ. ಇಲ್ಲಿ ಜಾನಪದ ಅಧ್ಯಯನವೆಂದರೆ ಜನಪದ ಸಂಸ್ಕೃತಿಯ ಅಧ್ಯಯನವೇ ಆಗಿದೆ. ನೆಲ, ಜಲ, ವಾತಾವರಣ ಮತ್ತು ಜೀವನಾವಶ್ಯಕತೆಗಳು ಇಲ್ಲಿನ ಜನಪದ ಸಂಸ್ಕೃತಿಯಲ್ಲಿ ಅಭಿವ್ಯಕ್ತಿ ಪಡೆದುಕೊಂಡಿವೆ. ಹುಟ್ಟು-ಸಾವನ್ನು ಒಳಗೊಂಡಂತೆ ಬದುಕಿನ ಎಲ್ಲ ಅವಸ್ಥೆಗಳ ಆಗುಹೋಗುಗಳನ್ನು ತನ್ನದೇ ಆದ ರೀತಿಯಲ್ಲಿ ಭಾವಿಸುವ, ಸ್ವೀಕರಿಸುವ, ಆಚರಿಸುವ ವಿಧಾನಗಳು ಈ ಸಂಸ್ಕೃತಿಯಲ್ಲಿ ಏರಿಳಿತವಾಗಿವೆ. ಇವುಗಳಿಗೆ ಲಿಖಿತ

---

೫. ಡಾ. ರಂಗಾರಡ್ಡಿ ಕೋಡಿರಾಂಪೂರ : ಜನಪದ ಸಂಸ್ಕೃತಿ, ಪುಟ : ೦೩

[illegible]

ದಾಖಲೆಗಳಾಗಲೀ ಇತಿಹಾಸವಾಗಲೀ ಇರುವುದಿಲ್ಲ. ಅವರಿಗೆ ಭೂಮಿ, ಜಲ, ವಾಯು, ಆಕಾಶಗಳು ಅವಿಭಾಜ್ಯ ಅಂಗಗಳು."[೬]

ನಮಗೆ ಇಷ್ಟವಿರಲಿ ಇಲ್ಲದಿರಲಿ ಜಾಗತಿಕರಣಕ್ಕೆ ರತ್ನಗಂಬಳಿ ಹಾಸಿ ಆಗಿದೆ. 'ಏಕ ಸಂಸ್ಕೃತಿಗೆ ನಿಷ್ಠೆ ತೋರುವ ಭೋಗನಾಗರಿಕತೆಗೆ ಹಾತೊರೆಯುವ, ಜಗತ್ತನ್ನೇ ಹಳ್ಳಿ ಸಂತೆ ಮಾಡಿ ಹಣಗಳಿಸುವ ವ್ಯಾಪಾರಿ ವ್ಯವಹಾರವೇ ಜೀವನಧರ್ಮವೆನ್ನುವ, ಸರಕಿನಿಂದ ವಿಶ್ವ ಏಕೀಕರಣ ಸಾಧಿಸುವ, ಆರ್ಥಿಕತೆಯೇ ಸರ್ವಸ್ವವೆನ್ನುವ ಜಾಗತೀಕರಣ' ಜಾನಪದಕ್ಕೆ ಕುತ್ತು ತಂದಿದೆಯೆಂದು ಭೀತಿ ನಮ್ಮ ಮನಸ್ಸಿನಲ್ಲಿ ಆವರಿಸಿಕೊಂಡಿದ್ದರೂ ಜಾನಪದ ನಮಗೆ ತಿಳಿಯದಂತೆ ಅದಕ್ಕೆ ಮುಖಾ–ಮುಖಿಯಾಗುತ್ತದೆ. ಸೃಷ್ಟಿ, ಮರುಸೃಷ್ಟಿಯ ಮೂಲಕ ತನ್ನ ಅಸ್ತಿತ್ವವನ್ನು ಹುಡುಕಿಕೊಂಡು ಅಜಾಗತೀಕರಣದ ಪ್ರಜ್ಞೆ ಬೆಳೆಸುತ್ತಿದೆ. ಜನಪದ ಸಂಸ್ಕೃತಿಯ ಸಂವಹನಗಳಾದ ಸಾಹಿತ್ಯ, ಕಲೆ, ಸಂಗೀತ ಮುಂತಾದವು ಜಾಗತೀಕರಣಕ್ಕೆ ಶೀತಲ ಪ್ರತಿಭಟನೆಯೊಡ್ಡುತ್ತಿವೆ." ಯಾವ ದೇಶದಲ್ಲಿ, ಯಾವ ಜನಾಂಗದಲ್ಲಿ ಸನಾತನ ಜಾನಪದ ದಟ್ಟವಾಗಿದೆಯೋ ಆ ದೇಶದಲ್ಲಿ, ಆ ಜನಾಂಗದಲ್ಲಿ ಜಾನಪದದ ಪ್ರಭಾವ ಸುಲಭವಾಗಿ ಅಳಿಸಿ ಹೋಗುವುದಿಲ್ಲ. ಅದು ಹಿಂದಿನಷ್ಟು ಪ್ರಭಾವಶಾಲಿಯಾಗಿ, ಪರಿಣಾಮಕಾರಿಯಾಗಿ ಅಸ್ತಿತ್ವದಲ್ಲಿ ಇಲ್ಲದಿದ್ದರೂ ಗುಪ್ತಗಾಮಿನಿಯಾಗಿಯಾದರೂ ಪ್ರವಹಿಸಿರುತ್ತದೆ. ಪ್ರಾಚೀನ ಜಾನಪದ ಪ್ರತಿಭೆಯ ಅತ್ಯದ್ಭುತವಾದ ಪುರಾಣ ಪ್ರತಿಮೆ, ಕಲಾಮಯ ರೂಪಕ, ಸಂಭಾವ್ಯ ಕನಸು ಅದೇ ಪೂರ್ವದಲ್ಲಿ ಅದೇ ಪರಿಣಾಮದಲ್ಲಿ ಇಂದೂ ಸೃಷ್ಟಿಯಾಗದಿದ್ದರೂ ಅದರ ಅಣುಕು ರೂಪವಾದರೂ ಸೃಷ್ಟಿಯಾಗುತ್ತಿರುತ್ತದೆ. ಜೊತೆಗೆ ರೂಪಾಂತರ ಕ್ರಿಯೆಯಲ್ಲಿ ಮರುಹುಟ್ಟು ಪಡೆಯುತ್ತಿರುತ್ತದೆ. ಇಂತಹ ರೂಪಾಂತರ ಕ್ರಿಯೆಗೆ, ಮರುಹುಟ್ಟು ಕ್ರಿಯೆಗೆ ಕನ್ನಡ ಜಾನಪದದಲ್ಲಿ ಸಾಕಷ್ಟು ಉದಾಹರಣೆ ದೊರೆಯುತ್ತವೆ. ಕಲಾತ್ಮಕವಾದ ಕಾವ್ಯ ಸೃಷ್ಟಿ ಅಷ್ಟಾಗಿ ಇಲ್ಲದಿದ್ದರೂ ಜನಪದ ಕಲೆ, ಜನಪದ ಆಚರಣೆಗಳ ಮುಂದುವರಿಕೆ ಅಥವಾ ರೂಪಾಂತರ ಕ್ರಿಯೆ ಎಂದಿನಂತೆ ಮುಂದುವರೆಯುತ್ತದೆ. ಇದು ಹಳ್ಳಿಗರಿಗಷ್ಟೆ ಅಲ್ಲ

---

೬. ಡಾ. ರಂಗಾರಡ್ಡಿ ಕೋಡಿರಾಂಪೂರ : ಜನಪದ ಸಂಸ್ಕೃತಿ, ಪುಟ : ೦೪

ಪಟ್ಟಣಿಗರಿಗೂ ಪ್ರಿಯವಾಗುತ್ತದೆ. ಜನಪದ ಕಲೆ ಕಣ್ಣಿಗೆ ಬಿದ್ದಾಗ ಕ್ಷಣವಾದರೂ ಮನಸ್ಸು ತೆರೆಯದ ಮಾನವ ಜೀವಿಯಿಲ್ಲ. ಒಂದು ವೇಳೆ ಅಂಥವರು ಇರಬಹುದಾದರೆ ಅವರ ಸಂಸ್ಕಾರದ ಬಗೆಗೆ ಅನುಮಾನ ಉಂಟಾಗುತ್ತದೆ."[೭] ಆಧುನಿಕತೆ ಮತ್ತು ಜಾನಪದದ ಈ ಸಂಘರ್ಷ ಈಗಿನದಲ್ಲ. ಜಾಗತೀಕರಣದಂತೆ ಅದೇಷ್ಟೋ ಅಲೆಗಳು ಪ್ರತಿಭಟಿಸಿದರೂ ಜಾನಪದ ಸಾಯಲಿಲ್ಲ, ಸಾಯುವುದಿಲ್ಲ. ಅದು ಪ್ರತಿಭಟನೆಗಳನ್ನು ಅರಗಿಸಿಕೊಳ್ಳುತ್ತಾ ಅದರೊಂದಿಗೆ ಮಿಳಿತಗೊಂಡು ಮರುಸೃಷ್ಟಿಗೊಳ್ಳುತ್ತದೆ. ಶಿಷ್ಟ ಸಾಹಿತ್ಯ, ಕಲೆ, ಸಂಗೀತ ಸಮೃದ್ಧವಾಗಿ ಸೃಷ್ಟಿಯಾದರೂ ಜನಪದ ಸಾಹಿತ್ಯ, ಸಂಗೀತ, ಕಲೆ ಅಳಿಸಿಹೋಗಲಿಲ್ಲ. ಎಲ್ಲ ಪ್ರಕಾರದಲ್ಲೂ ಸಮೃದ್ಧವಾಗಿಯೇ ಬೆಳೆದಿದೆ. ಹಾಗೆ ನೋಡಿದರೆ ಶಿಷ್ಟರು ಜಾನಪದವನ್ನು ಪರೋಕ್ಷವಾಗಿ ಬಳಸಿಕೊಂಡಿರುವ ಉದಾಹರಣೆಗಳು ಬೇಕಾದಷ್ಟಿವೆ. "ಎಲ್ಲ ಕಾಲದಲ್ಲೂ ಜಾನಪದ ಆಯಾಕಾಲದ ಆಧುನಿಕ ವಸ್ತುವಾಗಿಯೇ ಕಾಣಿಸಿಕೊಂಡಿದೆ. ಅಂದರೆ ಎಲ್ಲಾ ಕಾಲದಲ್ಲೂ ಜಾನಪದ ಆಧುನಿಕತೆಯೊಡನೆ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಅದಕ್ಕಾಗಿ ಹೋರಾಡಿರಬಹುದು, ಹೆಣಗಾಡಿರಬಹುದು, ಏರು ಇಳಿವು ಕಂಡಿರಬಹುದು, ಸೋಲು ಗೆಲುವುಗಳ ಪರಿಣಾಮವನ್ನು ಅನುಭವಿಸಿರಬಹುದು. ಆದರೂ ಅದು ಎಂದೂ ಸಂಪೂರ್ಣವಾಗಿ ಹೇಳಹೆಸರಿಲ್ಲದಂತೆ ನಾಶವಾಗಿಲ್ಲ. ಸ್ವಂತ ಅಸ್ತಿತ್ವಕ್ಕಾಗಿ ಹೋರಾಟ ಮಾಡುವುದು ಜಾನಪದದ ಹುಟ್ಟುಗುಣ. ಇಲ್ಲದಿದ್ದರೆ ಪ್ರತಿಕೂಲ ಪರಿಸ್ಥಿತಿಯಲ್ಲಿ ಜಾನಪದ ಉಳಿಯುತ್ತಿರಲಿಲ್ಲ. ಎಲ್ಲ ಸೃಜನಶೀಲ ಕಲೆಯ ಹಣೆಬರಹವೂ ಇದೆ ಆಗಿದೆ"[೮] ಎನ್ನುವ ಪ್ರೊ.ಡಿ.ಲಿಂಗಯ್ಯನವರಮಾತು ಸರಿಯಾಗಿದೆ.

ಈಗ ವಿದ್ಯುನ್ಮಾನ ಸಮೂಹ ಸಂವಹನ ಮಾಧ್ಯಮಗಳು ಜನಪದ ಕಲೆಗಳನ್ನು ಹೊಸುಕಿ ಹಾಕುತ್ತಿವೆಯೆಂದು ಬಹಳಷ್ಟು ಜನಪದ ಕಲಾವಿದರು ವ್ಯಕ್ತಪಡಿಸುವ ಆತಂಕ. "ನಿಮ್ಮ ಕಲೆ ವಿನಾಶದ ಅಂಚಿನಲ್ಲಿದೆ ಎಂದು ನಿಮಗೆ

---

೭. ಪ್ರೊ. ಡಿ.ಲಿಂಗಯ್ಯ : ಜಾನಪದ ಮತ್ತು ಆಧುನಿಕತೆ (ಲೇ) : ಜಾನಪದ ನೋಟಗಳು, ಪುಟ : ೬೫

೮. ಅದೇ, ಪುಟ : ೬೮

[illegible]

ಅನಿಸುತ್ತಿದೆಯೇ?" ಎಂದು ಬ್ಯಾಕೂಡದ ಭಜನೆ ಕಲಾವಿದ ಲಕ್ಕಪ್ಪ ಅಣ್ಣಪ್ಪ ಧರ್ಮಟ್ಟಿಯವರನ್ನು ಕೇಳಿದಾಗ "ಹಾಗೆಯೇ ನಡೆದಿದೆ. ಇದು ಇಂದು ನಿನ್ನೆಯದಲ್ಲ, ೪೦ ವರ್ಷಗಳಿಂದ ನಡೆದಿದೆ" ಎಂದನು. ಅವನಿಗೆ ಆ ಕಲೆ ಬದುಕುತ್ತದೆ ಎಂಬ ಆತ್ಮ ವಿಶ್ವಾಸವಿದೆ. ಇದೇಅಭಿಪ್ರಾಯ ಹಲವು ಕಲಾವಿದರು ವ್ಯಕ್ತಪಡಿಸುತ್ತಾರೆ. 'ಹೇಗೆ?' ಎಂದು ಕೇಳಿದರೆ ಅವರಿಗೆ ಉತ್ತರಿಸಲಾಗುವುದಿಲ್ಲ. ಆದರೆ ಕಲೆ ನಿಂತು ಹೋಗುತ್ತದೆ ಎಂಬ ಮಾತನ್ನು ಒಪ್ಪಿಕೊಳ್ಳುವುದಿಲ್ಲ. ಇದು ಒಂದು ವಿಧದ ಸಾಂಸ್ಕೃತಿಕ ಸಂಘರ್ಷ. ಅದು ಹಲವು ತಲ್ಲಣಗಳನ್ನು ಉಂಟು ಮಾಡುತ್ತದೆ. ಆ ತಲ್ಲಣಗಳ ನೈಜತೆಯನ್ನು ಪರಿಶೀಲಿಸಿ, ಒಳನೋಟಗಳನ್ನು ದಾಖಲಿಸುವುದು ಅಗತ್ಯವಿದೆ. ಈ ನಿಟ್ಟಿನಲ್ಲಿ ಕಲಾವಿದರ ಅಧ್ಯಯನ ನಡೆಯಬೇಕು.

ಕಲೆಯ ಅಳಿವು-ಉಳಿವಿನ ಚರ್ಚೆಯಲ್ಲಿ ಭಿನ್ನಾಭಿಪ್ರಾಯಗಳಿವೆ. ಆ ಪ್ರಶ್ನೆ ಸಂಕೀರ್ಣವಾದುದು. ಕಲಾವಿದರ ಸಂದರ್ಶನದಲ್ಲಿ ಅದಕ್ಕೆ ಕಲಾವಿದರು ವಿವಿಧ ರೀತಿಯಲ್ಲಿ ಉತ್ತರಿಸಿದ್ದುಂಟು. ಬಹುಪಾಲು ಕಲಾವಿದರು ತಮ್ಮ ಕಲೆ ವಿನಾಶದ ಅಂಚಿನಲ್ಲಿದೆ ಎಂದು ಭಾವಿಸಿದ್ದಾರೆ. ಅವರಿಗೆ ಆಧುನಿಕ ಸಮೂಹ ಸಂವಹನ ಮಾಧ್ಯಮಗಳಲ್ಲಿ ಜಾನಪದ ಸಂವಹನ ಮಾಧ್ಯಮಗಳಾದ ಕಲೆಗಳು ಕಳೆದು ಹೋಗುವ ಭಯ ಕಾಡುತ್ತಿದೆ. ಕಂಚಕಾರಟ್ಟಿಯ ಸದಾಶಿವ ಫಕೀರ ಕಾಂಬಳೆ, ೭೦ ವರ್ಷ ವಯಸ್ಸಿನ ವೃದ್ಧ ಕಲಾವಿದ. "ಈಗಿನ ಮಂದಿ ಟಿವ್ಹಿ ನೋಡುತ್ತಾರೆ. ಭಜನೆಗಳನ್ನು ಕೇಳುವುದಿಲ್ಲ" ಎಂದು ಹೇಳಿದರೆ, ಹಾರೂಗೇರಿಯ ಭಜನಾ ಕಲಾವಿದ ಈರಗೊಂಡ ಕಲ್ಲಪ್ಪ ದಳವಾಯಿ "ಭಜನೆ ನಿಲ್ಲುವ ಕಲೆಯಲ್ಲ. ಖಂಡಿತಾ ಮುಂದುವರೆಯುತ್ತದೆ" ಹೇಳುತ್ತಾನೆ. ರಾಮು ಸಿದ್ಲಿಂಗ ನಡೋಣಿ ೬೯ ವಯಸ್ಸಿನ ಹಿರಿಯ ಕಲಾವಿದ. ಲಾವಣಿ, ಭಜನೆ, ಜೋಗುಳ, ರಿವಾಯತ್, ಸಂಪ್ರದಾಯದ ಹಾಡುಗಳ ಹಾಡುಗಾರ. ಕಲೆ ವಿನಾಶದ ಅಂಚಿನಲ್ಲಿದೆ ಎಂದು ಒಪ್ಪಿಕೊಳ್ಳುತ್ತಾನೆ. "ಟಿವ್ಹಿ, ಟೇಪು ಮೊದಲಾದ ಸಾಧನಗಳು ಬಂದ ಮೇಲೆ ಜನಪದ ಕಲೆಗಳು ಅಳಿವಿನ ಅಂಚಿಗೆ ಸೇರಿವೆ. ಈಗ ಭಜನೆಗಳನ್ನು ಕೇಳುವವರೇ ಇಲ್ಲ. ದೇವರ ಆರಾಧನೆಯ

[illegible]

ಹಿನ್ನೆಲೆಯಲ್ಲಿ ಈ ಕಲೆ ಉಳಿದಿದೆ. ಆಗ ನಾನು ರಿವಾಯತ್ ಹಾಡುತ್ತಿದ್ದರೆ ೧೦,೦೦೦ ಜನ ಕೂಡುತ್ತಿದ್ದರು. ೨೦ ವರ್ಷದ ಹುಡುಗನಾಗಿದ್ದಾಗ ೫೦-೬೦ರೂ. ಬಹುಮಾನ ಗಳಿಸುತ್ತಿದ್ದೆ.. ಈಗ ಕಲಾವಿದರ ಕಲೆಯನ್ನು ಕಲಾವಿದರೇ ವೀಕ್ಷಿಸುವುದು" ಎಂಬ ತಳಮಳ ಅವನದು. ಮಾಜಿ ಶಾಸಕ. ಪರಿಶಿಷ್ಟ ಜಾತಿಗೆ ಸೇರಿದವನು. ಇಳಿ ವಯಸ್ಸಿನಲ್ಲಿಯೂ ಕಲಾಸೇವೆಗೆ ತೆರೆದುಕೊಂಡವನು "ಜನಪದ ಕಲೆಗಳು ಉಳಿಯುವುದು ಸ್ವಲ್ಪ ಜಡವೆನಿಸುತ್ತದೆ. ವಾತಾವರಣ ಬದಲಾಗುತ್ತಿದೆ. ಮೊದಲಿನಷ್ಟು ಜನ ಸೇರುವುದಿಲ್ಲ" ಎನ್ನುತ್ತಾನೆ ವಿಷ್ಣು ಕಂಚಕಾರ. ಡೊಳ್ಳಿನ ಹಾಡುಗಾರ ಯಲ್ಲಾಪುರಟ್ಟಿಯ ಸಿದ್ರಾಮ ಯಲ್ಲಪ್ಪ ಲಾಳಿ ಹೇಳಿಕೆಯನ್ನು ವಿಶ್ಲೇಷಣೆಗೆ ಒಳಪಡಿಸಬೇಕು. "ಈಗ ವಾತಾವರಣ ಬೇರೆ ಇದೆ. ಮನರಂಜನೆ ಮುಖ್ಯವಾಗಿದೆ. ತತ್ವ ಅನುಭವ ಕೇಳುವವರಿಲ್ಲ. ಹೀಗಾಗಿ ಈ ಕಲೆ ಉಳಿಯುತ್ತದೆ ಎಂದೆನಿಸುವುದಿಲ್ಲ. ಡೊಳ್ಳು ಬಾರಿಸುವ ಕಲೆ ಉಳಿಯಬಹುದು, ಆದರೆ ಹಾಡುಗಾರಿಕೆ ಉಳಿಯುತ್ತದೆಯೋ ಗೊತ್ತಿಲ್ಲ."

ಚೌಡಿಕೆ ಕಲಾವಿದೆಯರು ಈ ಪ್ರಶ್ನೆಗೆ ನೀಡುವ ಉತ್ತರವೇ ಬೇರೆ. ಅವರಿಗೆ ತಮ್ಮ ಕಲೆ ಮುಂದುವರೆಯಬೇಕೆಂಬ ಬಯಕೆ ಇಲ್ಲ. ಏಕೆಂದರೆ ಅದು ದೇವದಾಸಿ ಪದ್ಧತಿಯನ್ನು ಬೆಳೆಸುಬಹುದೆಂಬ ಸಂಶಯ ಚೌಡಿಕೆ ಬಾರಿಸುವ, ಎಲ್ಲಮ್ಮನ ಪದಗಳನ್ನು ಹಾಡುವ, ನರ್ತಿಸುವ ಆ ಕಲೆಗಳು ಮುಂದುವರೆಯಬಹುದು. ಆದರೆ ಆ ಕಲೆಗಳನ್ನು ಉಳಿಸುವ ಉದ್ದೇಶದಿಂದಲೇ ಆ ಸಂಪ್ರದಾಯವನ್ನು ಮುಂದುವರೆಸಬಾರದೆಂಬ ನಿಲುವು ಅವರದು. ಒಂದು ಕಲೆಗೆ ಹಿನ್ನೆಲೆಯಾಗಿರುವ ಸಂಪ್ರದಾಯದ ಪರಿಣಾಮಗಳ ಅರಿವು ಇಂದು ಕಲಾವಿದರಲ್ಲಿ ಮೂಡಿದೆ. ಅವರಿಗೆ ತಮ್ಮ ಕಲೆಯ ಬಗ್ಗೆ ತಾತ್ಸಾರವಿರದಿದ್ದರೂ ತಾವು ಅನುಸರಿಸುತ್ತಿರುವ ಸಂಪ್ರದಾಯದ ಬಗ್ಗೆ ಜಿಗುಪ್ಸೆ ಇದೆ. ಬ್ಯಾಕೂಡದ ರಾಜವ್ವ ಕಾಂಬಳೆ ಚೌಡಿಕೆ ಕಲಾವಿದೆ. ಅವಳ ಪದಗಳನ್ನು ಆಕಾಶವಾಣಿ ಬಿತ್ತರಿಸಿದೆ. ಬನಹಟ್ಟಿಯಲ್ಲಿ ಹಾಡಿ ಬೆಳ್ಳಿ ತೋಡೆ, ನಿಶಾನಿ, ಬಿಲ್ಲಾ ತಂದ ಹೆಮ್ಮೆ ಅವಳದು. ಅವಳಿಗೆ ಮಕ್ಕಳಿದ್ದಾರೆ. ಆದರೆ ಮಕ್ಕಳಿಗೆ ತನ್ನ ಕಲೆಯನ್ನು ಮುಂದುವರೆಸಲು ಇಷ್ಟವಿಲ್ಲ. "ಆಗಿನ ಮಂದಿ ಹಾಡಬೇಕು ಅನ್ನುತ್ತಿದ್ದರು.

[illegible]

[illegible]

ಈಗಿನವರು ಹಾಡಬೇಡ ಅನ್ನುತ್ತಾರೆ". ಇದು ಅವಳ ಅನುಭವ. ಇಂದು ತಮ್ಮ ಕಲೆಗಳನ್ನು ಪ್ರದರ್ಶಿಸಿ ಭಿಕ್ಷೆ ಕೇಳುವವರು ಮನೆಗೆ ಬಂದಾಗ ಮನೆಯವರು ಅವರ ಕಲಾ ಪ್ರದರ್ಶನಕ್ಕೆ ಅವಕಾಶ ಕೊಡದೇ ಭಿಕ್ಷೆ ಹಾಕಿ ಕಳುಹಿಸುವುದು ಸಾಮಾನ್ಯವಾಗುತ್ತಿದೆ. ಈ ಕಾರಣದಿಂದಲೇ ವೃತ್ತಿಕಲಾವಿದರ ಸಂಖ್ಯೆ ಕಡಿಮೆಯಾಯಿತು. ಸರಕಾರ ಭಿಕ್ಷಾಟನೆಯನ್ನು ನಿಷೇಧಿಸಿತು. ಅಲೆಮಾರಿ ವೃತ್ತಿಕಲಾವಿದರಿಗೆ ಶಾಶ್ವತ ಪುನರ್ವಸತಿ ಕಲ್ಪಿಸಿತು. ಆರ್ಥಿಕ ನೆರವು ನೀಡಿತು. ಕೆಲವರಿಗೆ ಜಮೀನು ಹಂಚಿತು. ಇವುಗಳಿಂದಾಗಿ ಶೈಕ್ಷಣಿಕ ವಾತಾವರಣ ವ್ಯಾಪಕವಾಯಿತು. ಹೊಸ ದೃಷ್ಟಿ ಹೊಸ ಬದುಕು ಕಟ್ಟುವ ಆಸೆ ಚಿಗುರಿತು. ಹೀಗಾಗಿ ಈ ಕಲೆಗಳು ಸ್ಥಗಿತಗೊಳ್ಳುವ ಭೀತಿಯಲ್ಲಿವೆ.

"ಆಧುನಿಕತೆ ಹೆಚ್ಚಿದಂತೆಲ್ಲಾ ಈ ವೃತ್ತಿಮೂಲ ಸಮುದಾಯಗಳು ಹೆಚ್ಚಿನ ಆತಂಕಗಳಿಗೆ ಒಳಗಾಗುತ್ತಲೇ ಇವೆ. ಆಧುನಿಕತೆಯ ಪರಿಣಾಮವಾಗಿ ವೃತ್ತಿಮೂಲ ಸಮುದಾಯಗಳು ಜನತೆಯ ಕಣ್ಣಿನಿಂದ ದೂರವಾಗುತ್ತಿವೆ. ಇದಕ್ಕೆ ಕಾರಣ ಇವರು ತಮ್ಮ ವೃತ್ತಿಯಿಂದ ಎಷ್ಟೇ ದುಡಿದರೂ ತುಂಬದ ಅರೆಹೊಟ್ಟೆ, ಕುಟುಂಬದ ಹೊರೆ, ಉತ್ತಮ ಶಿಕ್ಷಣಗಳಂತಹ ಸ್ಥಿತಿಯಿಂದ ಮುಂದುವರೆಯಲು ಹಾಗೂ ಉತ್ತಮ ಸ್ಥಿತಿಗೆ ತಲುಪಲು ಆಗುತ್ತಿಲ್ಲ. ಒಂದಡೆ ವಿದ್ಯೆ ಇದ್ದರೆ ತಂತ್ರಜ್ಞಾನ ಲೋಕದಲ್ಲಿ ಗಳಿಸುವ ಮತ್ತು ಎಣಿಸಲಾರದ ವೇತನ ನೀಡುತ್ತಿರುವ ಆಧುನಿಕ ವ್ಯವಸ್ಥೆ. ಇನ್ನೊಂದೆಡೆ ಮನುಷ್ಯ ಎಷ್ಟೇ ಹಾಗೂ ಏನೇ ಸಾಧಿಸಿದರೂ ಅವರನ್ನು ಜಾತಿಯಿಂದ ಅಳೆಯುವ ನಮ್ಮ ಸಮಾಜದ ಮಾನದಂಡ"[೯] ವೃತ್ತಿಮೂಲದ ಸಂಬಂಧದಿಂದ ಕಳಚಿಕೊಂಡಾಗ ಆ ಕಲೆಯ ಕೊಂಡಿ ಕಳೆದು ಹೋಗುತ್ತದೆ.

ಕಥೆ ಹೇಳುವ ಗೊಂದಲಿಗರು, ಕರಡಿ ಮಜಲಿನವರು, ಗುಗ್ಗಳದಲ್ಲಿ ಉಗ್ಗಡಿಸುವ ಪುರವಂತರು ಬಾಗೆನಾಡಿನಲ್ಲಿ ಕಡಿಮೆ ಸಂಖ್ಯೆಯಲ್ಲಿದ್ದರೂ ತಮ್ಮ ಕಲೆ ಆಪತ್ತಿನಲ್ಲಿ ಇಲ್ಲವೆಂಬ ನಿರಾತಂಕ ಭಾವ ಅವರದು. ಗೊಂದಲು ಹಾಕಲು

---

೯. ಮಂಜುನಾಥ ಬೇವಿನಕಟ್ಟಿ : ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ, ಪುಟ : ೧೨೯

[illegible]

[illegible]

[illegible]

ಗೊಂದಲಿಗರು ಬೇಕು. ಗೊಂದಲ ಪೂಜೆಗೆ ಕುಳಿತವರು ಗೊಂದಲಿಗರ ಕತೆ ಕೇಳಬೇಕು. ದೀಪಗಳು ಉರಿಯಬೇಕು, ಎಣ್ಣೆ ಸುಡಬೇಕು, ಬೆಳಗಿನವರೆಗೂ ನಿದ್ದೆ ಕಾಯಬೇಕು. ಶಕ್ತಿ ದೇವತೆಯ ಆರಾಧನೆಯ ಈ ಆಚರಣೆಯ ಹಿನ್ನೆಲೆಯಲ್ಲಿ ಗೊಂದಲಿಗರ ಕಥೆ ಇಂದಿಗೂ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿಲ್ಲ. ಪುರವಂತರು ನಿರ್ಲಕ್ಷಕ್ಕೊಳಗಾಗಿಲ್ಲ. ಗುಗ್ಗಳದ ಮೆರವಣಿಗೆಗೆ ಕಡ್ಡಾಯವಾಗಿರುವ ಕರಡಿ ಕಲಾವಿದರು ಭರವಸೆಯನ್ನು ಕಳೆದುಕೊಂಡಿಲ್ಲ. ಯಲ್ಪಾರಟ್ಟಿಯ ಗೊಂದಲಿಗ ಸದಾಶಿವ ರಾಯಪ್ಪ ಗೊಂದಳಿ ತನ್ನ ಕಲೆ ಅಪಾಯದ ಅಂಚಿನಲ್ಲಿಲ್ಲವೆಂದು ಸ್ಪಷ್ಟವಾಗಿ ಹೇಳಿದರೆ ಚಂಚಲಿಯ ಕರಡಿ ಕಲಾವಿದ ನಿಜಲಿಂಗಪ್ಪ ಮಹಾಲಿಂಗಪ್ಪ ಶಿಪೂರ, ಈಗ ತನ್ನ ಕಲೆ ಮೊದಲಿಗಿಂತಲೂ ಹೆಚ್ಚು ಬೆಳೆಯುತ್ತಿದೆ ಎಂದು ಅಭಿಮಾನಪಡುತ್ತಾನೆ. ಬೂದ್ಯಾಳದ ಡೊಳ್ಳಿನ ಹಾಡುಗಾರ ರಾಮಚಂದ್ರ ಬಾಳಪ್ಪ ಹುಚ್ಚ್ಯಾನಟ್ಟಿ "ಮೊದಲಿಗಿಂತಲೂ ಜನ ಈಗ ಹೆಚ್ಚಿಗೆ ಸೇರುತ್ತಾರೆ. ಅವರಲ್ಲಿ ಅಭಿರುಚಿ ಬೆಳೆಯುತ್ತಿದೆ" ಎಂದು ಹೇಳುವುದು ಆಶ್ಚರ್ಯವೆನಿಸಿದರೂ ಅದರಲ್ಲಿ ಸತ್ಯಾಂಶವಿದೆ. ಜಾತಿಗಳ ಹೆಸರಿನಲ್ಲಿ ಧಾರ್ಮಿಕ ಸಂಪ್ರದಾಯಗಳಿಗೆ ಬದ್ಧಗೊಳ್ಳುತ್ತಿರುವ ಸಮುದಾಯಗಳಿಗೆ ಆರಾಧನಾ ಕೇಂದ್ರಿತ ಇಂತಹ ಕಲೆಗಳು ಪೂರಕವಾಗುತ್ತಿವೆ ಎಂಬ ಅನುಮಾನ ಬಾರದಿರಲಾರದು.

ರಾಜಕೀಯ ಸಬಲೀಕರಣಕ್ಕೆ ಸಮುದಾಯವನ್ನು, ಸಮುದಾಯದ ಸಬಲಿಕರಣಕ್ಕೆ ಕಲೆ–ಕಲಾವಿದರನ್ನು ಬಳಸಿಕೊಳ್ಳುವುದು ಅಪರೂಪವೇನಲ್ಲ. ಭಜನಾ ಹಾಡುಗಾರರು ಇತರರಿಗಿಂತ ಹೆಚ್ಚು ಆತಂಕಕ್ಕೊಳಗಾಗಿರುವುದು ಕಂಡು ಬರುತ್ತದೆ. ಪ್ರತಿ ಗ್ರಾಮದಲ್ಲಿ ವಿವಿಧ ಸಮುದಾಯಗಳ ಹಲವು ಭಜನಾ ಮೇಳಗಳಿದ್ದರೂ ಹೆಚ್ಚು ಪ್ರೋತ್ಸಾಹ ಕಂಡು ಬರುತ್ತಿಲ್ಲ. ಬಾಗೆನಾಡಿನಲ್ಲಿ ನಿಜಗುಣರ ಸಂಪ್ರದಾಯವು ಹೆಚ್ಚು ವ್ಯಾಪಕವಾಗಿದ್ದು ಜಾತ್ಯಾತೀತವಾಗಿ ಬೆಳೆದಿದೆ. ಆದರೆ ಭಜನೆಗಳನ್ನು ಕೇಳುವವರ ಅಭಿರುಚಿ ಕಡಿಮೆಯಾಗಿದೆ. ಹಿಂದೆ ಶಿವರಾತ್ರಿ, ಮಹಾನವಮಿಯಂತಹ ಸಂದರ್ಭಗಳಲ್ಲಿ ಜಾತ್ರೆ–ಉತ್ಸವಗಳಲ್ಲಿ, ಪುಣ್ಯತಿಥಿಗಳಲ್ಲಿ ರಾತ್ರಿಯಿಡಿ ಕುಳಿತು ಭಜನೆ ಹಾಡುಗಳನ್ನು ಕೇಳುತ್ತಾ ಅಧ್ಯಾತ್ಮದ ಚಿಂತನೆಯಲ್ಲಿ ಆನಂದವನ್ನು ಅನುಭವಿಸುವ

ಜಾಗರಣೆ ಮಾಡುವ ಸಂಪ್ರದಾಯವಿತ್ತು. ಈಗ ಜನರಿಗೆ ಅಧ್ಯಾತ್ಮದಲ್ಲಿ ಆಸಕ್ತಿ ಇಲ್ಲ. ಜಾಗತೀಕರಣದ ಭೋಗ ಸಂಸ್ಕೃತಿಯ ಬಿರುಗಾಳಿಯಲ್ಲಿ ವೈರಾಗ್ಯದ ಹಂಬಲ ಕಡಿಮೆಯಾಗುತ್ತಿದೆ. ಭಜನೆ ತತ್ವ ಪದಗಳನ್ನು ಕೇಳುತ್ತಾ ರಾತ್ರಿಯಿಡಿ ಆನಂದಿಸುವ ಯುಗ ಮುಗಿದು ಹೋಗಿದೆ. ಈಗಲೂ ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ಭಜನೆಯ ಮೂಲಕ ಜಾಗರಣೆ ಆಚರಿಸಲಾಗುತ್ತಿದೆ. ಅದು ಕೇವಲ ಸಾಂಕೇತಿಕವಾಗಿದೆ. ಅಲ್ಲಿ ಕೇಳುಗರೇ ಇರುವುದಿಲ್ಲ. ಹಾಡುಗಾರರು ಮಾತ್ರ ಜಾಗರಣೆ ಮಾಡುವರು. ಪುಣ್ಯತಿಥಿ ಆಚರಣೆಯಲ್ಲಿ ಭಜನೆ ಹಚ್ಚುತ್ತಾರೆ. ಅದೊಂದು ಕೇವಲ ಸಂಪ್ರದಾಯವಾಗಿ ಉಳಿದುಕೊಂಡಿದೆ. ವ್ಯಕ್ತಿ ತೀರಿಕೊಂಡಾಗ ಭಜನೆ ಹಚ್ಚುತ್ತಾರೆ. ಅದರ ಹಿಂದಿನ ಉದ್ದೇಶವೆಂದರೆ ಸಂಸಾರದ ಅನಿತ್ಯತೆಯನ್ನು ವರ್ಣಿಸುತ್ತಾ ದುಃಖದ ಉದ್ವೇಗವನ್ನು ಶಮನಗೊಳಿಸುವುದು. ಆದರೆ ಇಂದು ಕಾಲಹರಣ ಮಾಡಲು ಭಜನೆ ಹಚ್ಚುವ ಪದ್ಧತಿ ಬೆಳೆದು ಬಂದಿದೆ. ಶವ ಸಂಸ್ಕಾರ ಮಾಡಲು ವಿಳಂಬವಾದಾಗ ಬಂಧುಗಳ ದುಃಖವನ್ನು ತಡೆಯುವ ಒಂದು ತಾಂತ್ರಿಕ ವಿಧಾನವಾಗುತ್ತಿದೆ. ಅಲ್ಲಿ ಅದನ್ನು ಕೇಳುವವರೇ ಇರುವುದಿಲ್ಲ. ಇದು ಇಂದು ಕಲಾವಿದರನ್ನು ಕಾಡುವ ಸಾಂಸ್ಕೃತಿಕ ತಲ್ಲಣಗಳಲ್ಲೊಂದು.

ಒಂದೆಡೆಯಲ್ಲಿ ಜನಪದ ಕಲೆಗಳಿಗೆ ಸಾವಿಲ್ಲ. ಬದುಕಿನ ರೀತಿ, ನೀತಿ ಹಾಗೂ ಗತಿ ಬದಲಾಗದಂತೆ ಅವುಗಳ ಸ್ವರೂಪ ಬದಲಾಗುತ್ತ ಎಲ್ಲ ಕಾಲಕ್ಕೂ ಪ್ರಸ್ತುತತೆಯನ್ನು ಕಾಯ್ದುಕೊಳ್ಳುತ್ತವೆ ಎಂದು ಹೇಳುತ್ತಿರುವಾಗ ಈ ಕೃತಿಮತೆ ಕಾಣಿಸಿಕೊಳ್ಳುತ್ತಿರುವುದನ್ನು ನಿರ್ಲಕ್ಷಿಸಲಾಗದು. ಒಟ್ಟಿನಲ್ಲಿ ಜನಪದ ಕಲೆಗಳು ಸೀಳುದಾರಿಯಲ್ಲಿವೆ. ಆಚರಣೆ, ಕಲಾ ಪ್ರದರ್ಶನಗಳನ್ನು ತಾಂತ್ರಿಕವಾಗಿ ಸಮಾಜ ಪರಿಗಣಿಸುವುದು ಕಲಾವಿದರ ನೋವಿಗೆ ಕಾರಣವಾಗುತ್ತದೆ. "ಆಧುನಿಕತೆ, ಈ ಹೊತ್ತಿನ ಜಾಗತೀಕರಣದಿಂದ ಸಮಾಜ ಬೆಂಗಳನ್ನು, ಬಿಕ್ಕಟ್ಟನ್ನು ಅನುಭವಿಸುತ್ತಿದೆ. ಇಂಥ ಸಂದರ್ಭಗಳಲ್ಲಿಯೂ ತತ್ವಪದಗಳು ಹಾಡುತ್ತ, ಕೇಳುತ್ತ ಬದುಕುವ ಸಮುದಾಯಗಳ ಜೀವಂತಿಕೆಯನ್ನು ಕಡೆಗಣಿಸುವಂತಿಲ್ಲ. ನಮ್ಮ ಈ ಹೊತ್ತಿನ ಬೆರಗು,

[illegible]

[illegible]

ಬಿಕ್ಕಟ್ಟುಗಳ ನಡುವೆ ಈ ಪರಂಪರೆಯನ್ನು ಸಂಸ್ಕೃತಿಕವಾಗಿ ಅರ್ಥೈಸುವ ಅನಿವಾರ್ಯತೆಯಂತೂ ಇದೆ."[೧೦]

ಬಾಗೆನಾಡಿನಲ್ಲಿ ಜಿನಭಜನೆ ಮೇಳಗಳ ಸಂಖ್ಯೆ ಏಕೆ ಕುಸಿಯುತ್ತಿರುವುದರ ಕಾರಣಗಳನ್ನು ಹಿಂದಿನ ಅಧ್ಯಾಯದಲ್ಲಿ ಹುಡುಕಲು ಪ್ರಯತ್ನಿಸಲಾಗಿದೆ. ಜನಪದ ಕಲಾವಿದರು ಬಹುತೇಕ ಬಡವರು. ಶ್ರೀಮಂತರೆನಿಸಿಕೊಳ್ಳುವವರು ಜನಪದ ಕಲೆಗಳನ್ನು ನಿರ್ಲಕ್ಷಿಸುವ ಹೊಸ ಮನೋಭಾವ ಇತ್ತೀಚಿಗೆ ಹೆಚ್ಚೆಚ್ಚು ಗಟ್ಟಿಗೊಳ್ಳುತ್ತಿರುವುದು ಜಾಗತೀಕರಣದ ಮತ್ತೊಂದು ಪರಿಣಾಮವೆಂದು ಹೇಳಬಹುದು. ಇಲ್ಲಿಯ ಜೈನ ಸಮುದಾಯ ಶ್ರೀಮಂತರಾಗಿರುವುದೇ ಜಿನಭಜನಾ ಕಲಾವಿದರ ಸಂಖ್ಯೆ ಕಡಿಮೆಯಾಗಲು ಕಾರಣ. ಜನಪದ ಕಲಾವಿದರ ಬಗ್ಗೆ ಶ್ರೀಮಂತರಲ್ಲಿ ಉದಾಸೀನತೆ ಇರುವುದು ಸಾಮಾನ್ಯ ಸಂಗತಿ. ಜೈನ ಜಾನಪದ ತೀವ್ರ ಆಕ್ರಮಣಕ್ಕೊಳಗಾಗಿದೆ. ಈ ಭಾಗದ ಜೈನರ ಮನೆ ಮಾತು ಕನ್ನಡ. ಅವರ ಸಂಸ್ಕೃತಿ ಕನ್ನಡ. ಅವರೆಲ್ಲ ಅಪ್ಪಟ ಕನ್ನಡಿಗರು. ಆದರೆ ಈಗ ಬಸದಿಗಳಲ್ಲಿ ನಡೆಯುವ ಪೂಜೆ ಪುನಸ್ಕಾರ, ಆಚರಣೆ, ಜಿನಸ್ತುತಿ, ಹಾಡು ಕನ್ನಡವಾಗಿ ಉಳಿದಿಲ್ಲ. ಪ್ರಾಕೃತದ ಆಕ್ರಮಣ ಒಂದೆಡೆಯಾದರೆ ಇನ್ನೊಂದೆಡೆ ಮರಾಠಿ ಭಾಷೆಯ ಸವಾರಿ. ಇವೆರಡರ ಮಧ್ಯದಲ್ಲಿ ಉತ್ತರಭಾರತದ ಹಿಂದಿ ರಾಜ್ಯಗಳೊಂದಿಗೆ ನಂಟು ಬೆಳೆಸಿಕೊಂಡ ಇಲ್ಲಿಯ ದಿಗಂಬರ ಮುನಿಗಳು ಅಲ್ಲಿಗೆ ಕನ್ನಡವನ್ನು ಒಯ್ಯುವ ಬದಲಾಗಿ ಅಲ್ಲಿಂದ ಹಿಂದಿಯನ್ನು ತಂದು ಇಲ್ಲಿಯವರ ಮೇಲೆ ಹೇರುತ್ತಿದ್ದಾರೆ. ವಿಚಿತ್ರವೆಂದರೆ ಈ ಬಗ್ಗೆ ದ್ವಾರಪಾಲ, ಅಲಭೈರಿ ಮೊದಲಾದ ಜಿನಕವಿಗಳು ರಚಿಸಿದ ಜಿನಭಜನೆಗಳು ಇಲ್ಲಿಯ ಬಸದಿಗಳಲ್ಲಿ ಕೇಳುತ್ತಲೇ ಇಲ್ಲ. ಹಿಂದಿ, ಮರಾಠಿ, ಕನ್ನಡ, ಸಿನಿಮಾ ಹಾಡುಗಳ ದಾಟಿಯಲ್ಲಿ ಜಿನಸ್ತುತಿ ಪದ್ಯಗಳನ್ನು ರಚಿಸಿ ಹಾಡುವ ಕಲಾ ತಂಡಗಳು ಕರ್ನಾಟಕ–ಮಹಾರಾಷ್ಟ್ರ ಗಡಿಯ ಜೈನ ಸಮುದಾಯದಲ್ಲಿ ಹುಟ್ಟಿಕೊಂಡಿರುವುದರಿಂದಲೇ ಜಿನಭಜನಾ ಮೇಳಗಳು

---

೧೦. ಅಮರೇಶ ನುಗಡೋಣಿ : ನುಡಿವ ಬೆಡಗು, ಪುಟ : ೯೫

[illegible]

ಮಾಯವಾಗುತ್ತಿವೆ. ಪಂಚಕಲ್ಯಾಣ, ವಿಧಾನ, ಜಿನೋತ್ಸವ ಮೊದಲಾದ ಸಮಾರಂಭಗಳಲ್ಲಿ ಹಾಡಲು ಹೊಸಹೊಸ ಜಿನ ಕಲಾತಂಡಗಳು ಹುಟ್ಟಿಕೊಂಡಿವೆ. ಅವು ಮ್ಯುಜಿಕಲ್ ಪಾರ್ಟಿಗಳಿದ್ದಂತೆ. ಪುರುಷ–ಸ್ತ್ರೀ ಕಲಾವಿದರನ್ನು ಒಳಗೊಂಡಿರುತ್ತವೆ. ಅವರು ಸಿನೇಮಾ ದಾಟಿಯಲ್ಲಿ ಹಿಂದಿ, ಮರಾಠಿ ಜಿನಭಕ್ತಿಗೀತೆ ಹಾಡುತ್ತಾರೆ. ಅನ್ಯಭಾಷೆ ಸಂಸ್ಕೃತಿಗಳ ಆಕ್ರಮಣ ಉಳಿದ ಸಮುದಾಯಗಳಿಗಿಂತಲೂ ಜೈನ ಸಮುದಾಯದ ಮೇಲೆ ಹೆಚ್ಚಾಗಿರುವುದು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಶ್ರೀಮಂತ ಸಮುದಾಯಗಳು ಬಲುಬೇಗ ಸಾಂಸ್ಕೃತಿಕ ಆಕ್ರಮಣಕ್ಕೆ ಒಳಗಾಗುತ್ತವೆ. ಈ ಆಕ್ರಮಣಕ್ಕೆ ಇಲ್ಲಿಯ ಹಾಲುಮತದವರು ದಲಿತರು ಹೆಚ್ಚು ಒಳಗಾಗಿಲ್ಲ. ಜೈನ ಸಮುದಾಯವನ್ನು ಹೊರತುಪಡಿಸಿ ಪರಾಕ್ರಮಣಕ್ಕೆ ಒಳಗಾದ ಮತ್ತೊಂದು ಸಮುದಾಯವೆಂದರೆ ಲಿಂಗಾಯತರದು. ಈ ಸಮುದಾಯದ ಕಲಾವಿದರ ಮೇಲೆ ಭಾಷಿಕ ಆಕ್ರಮಣ ಇಲ್ಲ. ಆದರೆ ಸಾಂಸ್ಕೃತಿಕ ಆಕ್ರಮಣವಿದೆ. ಬಹುಶಃ ಈ ಆಕ್ರಮಣದಿಂದಲೇ ಶಿವಭಜನಾ ಮೇಳಗಳು ತಮ್ಮ ಪಾರಂಪರಿಕ ನೆಲೆಯನ್ನು ಕಳೆದುಕೊಳುತ್ತಿವೆ ಮತ್ತು ಹೊಸತು ನೆಲೆಗಳಿಗಾಗಿ ಹುಡುಕುತ್ತಿವೆ. ಈ ಶಿವಭಜನಾ ಮೇಳಗಳು ನಿಜಗುಣರು, ಸರ್ಪಭೂಷಣರು, ಶರೀಫರು ಮೊದಲಾದ ತತ್ವಪದಕಾರರ ಪದಗಳನ್ನು ಹಾಡುವುದರೊಂದಿಗೆ ಕೆಲವೊಮ್ಮೆ ಶರಣರ ಸ್ವರವಚನಗಳನ್ನು ಹಾಡುವುದುಂಟು. ಆದರೆ ಶರಣರ ವಚನಗಳನ್ನು ಭಜನೆಗೆ ಹೊಂದಿಸಿಕೊಳ್ಳದಿರುವುದನ್ನು ಗಮನಿಸಬೇಕಾಗುತ್ತದೆ. ಅವು ರಾಗ, ತಾಳಗಳಿಗೆ ಹೊಂದುವುದಿಲ್ಲವೆಂದು ಮೇಲ್ನೋಟಕ್ಕೆ ಕಂಡರೂ ಹೊಂದಿಸಿಕೊಳ್ಳುವ ಪ್ರಯತ್ನಗಳೇ ನಡೆದಿಲ್ಲ. ಈಗ ಇನ್ನೊಂದು ಹೊಸ ಬೆಳವಣಿಗೆಯೆಂದರೆ ಸೋಗುಭಜನೆ. ಈ ಗಡಿನಾಡಿನಲ್ಲಿ ಸೋಗುಭಜನೆಯ ಮೇಳಗಳು ಹುಟ್ಟಿಕೊಳ್ಳುತ್ತವೆ.

ಕರ್ಬಲ್ ಹಾಡುಗಳನ್ನು ಹಾಡುವ ಸಂದರ್ಭ ವರ್ಷದಲ್ಲಿ ಒಮ್ಮೆ ಮಾತ್ರ. ಮೊಹರಂ ಆಚರಣೆಯ ಆ ದಿನಗಳಲ್ಲಿ ಮಾತ್ರ ಕರ್ಬಲ್ ಹಾಡು ಹಾಡುವರು. ಸಾಮಾನ್ಯವಾಗಿ ಉಳಿದ ದಿನಗಳಲ್ಲಿ ಕರ್ಬಲ್ ಹಾಡುಗಳನ್ನು ಹಾಡುವುದೇ ಇಲ್ಲ. ಇತ್ತಿತ್ತಲಾಗಿ ಮಹಮ್ಮದ್ ಪೈಗಂಬರರ ದಿನಾಚರಣೆಯ

[illegible]

ಅಂಗವಾಗಿ ಅಲ್ಲಲ್ಲಿ ಕರ್ಬಲ್ ಹಾಡುಗಳ ಸ್ಪರ್ಧೆ ಏರ್ಪಡುತ್ತಿದೆ. ಹೀಗಿದ್ದರೂ ಬಾಗೇನಾಡಿನಲ್ಲಿ ಕರ್ಬಲ್ ಹಾಡುಗಾರರ ಸಂಖ್ಯೆ ಅಧಿಕ. ಏಕೆಂದರೆ ಒಬ್ಬ ಹಾಡುಗಾರ ಒಂದೇ ವಿಧದ ಹಾಡುಗಳನ್ನು ಹಾಡದೆ, ಹಲವು ಹಾಡುಗಳನ್ನು ಹಾಡುತ್ತಿರುತ್ತಾನೆ. ಆತ ಮೂಲತಃ ಹಾಡುಗಾರ. ಡೊಳ್ಳಿನ ಹಾಡು ಹಾಡಬಹುದು, ಲಾವಣಿಗಳನ್ನು ಹಾಡಬಹುದು ಅಥವಾ ಇವೆಲ್ಲ ಹಾಡುಗಳನ್ನು ಒಬ್ಬನೇ ಹಾಡುಗಾರ ಹಾಡಬಹುದು. ಕರ್ಬಲ್ ಹಾಡುಗಾರಿಕೆ ಹಿಂದೂ-ಮುಸ್ಲಿಂ ಧರ್ಮ ಸಮನ್ವಯದ ಒಂದು ಸಂಪ್ರದಾಯ. ಇಲ್ಲಿ ಕರ್ಬಲ್ ಕವಿಗಳಲ್ಲಿ ಹೆಚ್ಚಿನ ಸಂಖ್ಯೆಯ ಕವಿಗಳು ಮುಸ್ಲಿಂರು; ಹಾಡುಗಾರರು ಮಾತ್ರ ಹಿಂದೂಗಳು। ಇದು ಒಂದು ವಿಧದ ಸಾಂಸ್ಕೃತಿಕ ಸಮನ್ವಯ. ಬೆಳಗಾವಿ ಜಿಲ್ಲೆಯಲ್ಲಿಯೇ ಹೆಚ್ಚಿನ ಕರ್ಬಲ್ ಹಾಡುಗಾರರು ಹಾಗೂ ಕವಿಗಳು ಇರುವುದು ಬಾಗೇನಾಡಿನಲ್ಲಿ. ಇಲ್ಲಿಯ ಕಲಾವಿದರು ಕರ್ನಾಟಕ-ಮಹಾರಾಷ್ಟ್ರದ ಅನೇಕ ಕಡೆಗಳಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಿ ಜನರ ಮೆಚ್ಚುಗೆ ಗಳಿಸಿದ್ದಾರೆ. ಅವರು ತಮ್ಮ ಕಲೆಯನ್ನು ಆಧುನಿಕರಣಗೊಳಿಸುವುತ್ತ ಹೆಚ್ಚು ಗಮನ ನೀಡುತ್ತಿರುವುದು ವಿಶೇಷ. ಅದು ಇಂದು ದೈವಾರಾಧನೆಯ ಕಲೆಯಾಗಿ ಉಳಿದಿಲ್ಲ. ಅದಕ್ಕೆ ಶುದ್ಧ ಮನರಂಜನೆ ಸ್ವರೂಪ ನೀಡಲಾಗುತ್ತಿದೆ. ಆಧುನಿಕರಣಕ್ಕೆ ಪ್ರಸ್ತುತಗೊಳಿಸುತ್ತಿರುವ ಈ ಕಲಾವಿದರ ಆ ಪ್ರಯತ್ನವೇ ಇದರ ಜನಪ್ರಿಯತೆಯ ಗುಟ್ಟಾಗಿರುವುದು.

ಜನರು ಈಗ ವೈವಿಧ್ಯತೆಯನ್ನು ಅಪೇಕ್ಷಿಸುತ್ತಾರೆ. ನಮ್ಮ ಜನಪದ ಕಲೆಗಳು ಹಾಗೂ ಕಲಾವಿದರು ಸಾಂಪ್ರದಾಯಿಕ ಏಕತಾನತೆಯಿಂದ ಹೊರಬರಬೇಕಿದೆ. ಸಾಂಪ್ರದಾಯಿಕ ಕಲೆಯನ್ನು ಮರುಸೃಷ್ಟಿಗೆ ಒಳಪಡಿಸುತ್ತ ಆಧುನಿಕತೆಗೆ ಪ್ರಸ್ತುತಗೊಳಿಸುವುದು ಜನಪದ ಕಲಾವಿದರ ಮುಂದಿನ ಮಹತ್ವದ ಅಹವಾಲು. ಗಡಿಭಾಗದ ಮರಾಠಿ ಭಜನಾ ಕಲಾವಿದರು 'ಸೋಂಗಿ ಭಜನ' ಎಂಬ ಹೊಸ ಮೇಳಗಳನ್ನು ಕಟ್ಟುಕೊಂಡಿದ್ದಾರೆ. 'ಸೋಂಗಿ ಭಜನ' ಎಂದರೆ ಸೋಗು ಭಜನೆ. ಇವರು ವಿವಿಧ ಸೋಗುಗಳನ್ನು ಹಾಕಿಕೊಂಡು ಹಾಡು ಹಾಗೂ ಸಂಭಾಷಣೆಗಳನ್ನು ಬೆಸೆಯುತ್ತಾ ಪ್ರದರ್ಶನ ನೀಡುತ್ತಾರೆ.

ಶ್ರವ್ಯ ಮಾಧ್ಯಮವಾದ ಈ ಜನಪದ ಕಲೆಯನ್ನು ದೃಶ್ಯ-ಶ್ರವ್ಯ ಮಾಧ್ಯಮವಾಗಿಸುವುದರ ಮೂಲಕ ಆಧುನಿಕತೆಗೆ ಪ್ರಸ್ತುತಗೊಳಿಸುವ ಪ್ರಯತ್ನವಿದು. ಇದು ಮಹಾರಾಷ್ಟ್ರದಲ್ಲಿ ಹೆಚ್ಚು ಜನಪ್ರಿಯವಾಗುತ್ತಿದೆ. ಇಂಥದೆ ಒಂದು ಪ್ರಯತ್ನವನ್ನು ಬಾಗೆನಾಡಿನಲ್ಲಿ ಮಾಡಿದ ಮೊದಲಿಗನೆಂದರೆ ಜಲಾಲಪುರದ ಲಕ್ಷ್ಮಣರಾವ ಸಾತಪ್ಪ ಚೌಗುಲೆ. ಈತನ ವಯಸ್ಸು ೭೬. ಓದಿದ್ದು ಮರಾಠಿ ೫ನೇ ತರಗತಿ. ಸೋಗು ಭಜನೆಯ ತಂಡ ಕಟ್ಟಿದ್ದಾನೆ. ಆತ ಹೇಳುವ ಕೆಲವು ಮಾತುಗಳು ಜನಪದ ಕಲಾವಿದರ ಮುಂದಿನ ಸಾಂಸ್ಕೃತಿಕ ಸವಾಲುಗಳನ್ನು ತೆರೆದಿಡುತ್ತವೆ. ಅವರ ಅಭಿಪ್ರಾಯದಲ್ಲಿ 'ಕಾಲಕ್ಕೆ ತಕ್ಕಂತೆ ಹಾಡುಗಳು ಬದಲಾಗಬೇಕು. ವೇಷ-ಭೂಷಣಗಳು ಆಕರ್ಷಕವಾಗಿರಬೇಕು' ಸೋಗು ಭಜನೆ ಅರ್ಧ ಆಟ; ಅರ್ಧ ಹಾಡು. ಇಂದು ಮಹಾರಾಷ್ಟ್ರದ ಬಹಳಷ್ಟು ಜನಪದ ಕಲೆಗಳು ಜೀವಂತವಾಗಿರುವುದು ಈ ಕಾರಣದಿಂದಲೇ. ಅಲ್ಲಿಯ ಕಲಾವಿದರು ತಮ್ಮ ಕಲೆಯ ಆಧುನೀಕರಣದತ್ತ ಹೆಚ್ಚು ಗಮನಹರಿಸುವರು. ಮಹಾರಾಷ್ಟ್ರಕ್ಕಿಂತಲೂ ಕರ್ನಾಟಕದ ಜನಪದ ನೆಲೆ ಶ್ರೀಮಂತವಾದುದು. ಜನಪದ ಕಲೆ, ಕಲಾವಿದರ ಸಂಖ್ಯೆ ಹೆಚ್ಚಾಗಿಲ್ಲ. ಕಲಾ ವೈವಿಧ್ಯತೆಯಿದೆ. "ಜನಪದ ಕಲೆಗಳ ಮಾತು ಬಂದಾಗ ದೇಶದಲ್ಲೇ ಅತಿ ಶ್ರೀಮಂತರೆನಿಸಿಕೊಳ್ಳುವ ಮೂರು ರಾಜ್ಯಗಳಲ್ಲಿ (ಮಧ್ಯಪ್ರದೇಶ ಮತ್ತು ಹರಿಯಾಣ ಉಳಿದೆರೆಡು ರಾಜ್ಯಗಳು) ಕರ್ನಾಟಕವೂ ಒಂದು ಎಂದು ಜಾನಪದ ವಿದ್ವಾಂಸರ ಅಭಿಪ್ರಾಯ."[೧೧] ಜಿನಭಜನೆ ಮೇಳದವರು ಇಂತಹ ಸ್ಥಿತ್ಯಂತರಗಳಿಗೆ ಹೊಂದಿಕೊಳ್ಳುತ್ತಿರುವುದು ಕಂಡು ಬಂದಿದೆ. ಹಾರೂಗೇರಿಯ ಆದಿನಾಥ ಜಾನಪದ ಜಿನಭಜನಾ ತಂಡದ ಕಲಾವಿದ ಅರುಣ ನಾಗನೂರ ಹೊಸ ವಾದ್ಯಗಳನ್ನು ಬಳಸಿಕೊಂಡು ಜಿನಭಜನೆಯನ್ನು ಆಧುನೀಕರಣಗೊಳಿಸಲು ಪ್ರಯತ್ನಿಸಿದ್ದಾರೆ. ಅವರದು ಕಲಾವಿದರ ಮನೆತನ. ಮನೆಯಲ್ಲಿ ಮೂವರು ಸಹೋದರರು. ಎಲ್ಲರೂ ಜಿನಭಜನೆಗಳನ್ನು ಹಾಡುವರು. ಅವರ ತಂದೆ ವೆಂಕಪ್ಪ ಭಜನಾ ಪದ ಹಾಗೂ

---

**೧೧. ಬಿ.ಆರ್.ಪೊಲೀಸ್ ಪಾಟೀಲ : ಜನಪದ ಸಾಹಿತ್ಯ ಮತ್ತು ಕಲೆಗಳು (ಲೇ) : ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ, ಪುಟ : ೭೬**

[illegible]

ಕರ್ಬಲ್ ಹಾಡುಗಳನ್ನು ಹಾಡುತ್ತಿದ್ದನು. ಅವರ ಮನೆತನವನ್ನು ಜಿನಭಜನೆಯಿಂದಲೇ ಗುರುತಿಸುತ್ತಾರೆ. ಅವನು ಸ್ವರಪೆಟ್ಟಿಗೆಯ ಬದಲು ಕ್ಯಾಶಿಯೋ, ದಮಡಿ ಬದಲು ಒಂಟಿ ಬಳಸುತ್ತಿದ್ದಾರೆ. ಅವರಲ್ಲಿ ಆ ಕಲೆಯನ್ನು ಈ ಕಾಲಕ್ಕೆ ಪ್ರಸ್ತುತಗೊಳಿಸುವ ಹಂಬಲ ಜೊತೆಗೆ ಅದರ ಜನಪ್ರಿಯತೆಯನ್ನು ಕಾಯ್ದುಕೊಳ್ಳುವ ತುಡಿತ.

ಇಂದು ದೈವಾರಾಧನಾ ಕೇಂದ್ರಿತ ಹಲವು ಕಲೆಗಳನ್ನು ಶುದ್ಧ ಮನರಂಜನೆಯ ಕಲೆಗಳನ್ನಾಗಿಸುವ ಪ್ರಯತ್ನದಲ್ಲಿ ಕೆಲವು ಕಲಾವಿದರು ತೊಡಗಿದ್ದಾರೆ. ಇಲ್ಲಿಯವರೆಗೆ ಡೊಳ್ಳುವಾದನ-ಗಾಯನ ಕಲೆಯನ್ನು ಗಂಡುಕಲೆಯೆಂದು ಹೇಳಲಾಗುತ್ತಿತ್ತು. 'ಒಳ್ಳೆ ಮೈಕಟ್ಟಿನ ಬಲವುಳ್ಳ ಪುರುಷರೇ ಈ ಕಲೆಯನ್ನು ಸಮರ್ಥವಾಗಿ ಪ್ರದರ್ಶಿಸಲು ಸಾಧ್ಯವೆಂದು ನಂಬಲಾಗಿತ್ತು. ಈಗ ಹೆಣ್ಣುಮಕ್ಕಳು ಡೊಳ್ಳಿನ ಹಾಡಿಕೆ ಮೇಳಗಳನ್ನು ಕಟ್ಟಿಕೊಂಡಿದ್ದಾರೆ. ಅವರ ಕಲಾ ಪ್ರದರ್ಶನದಲ್ಲಿ ಪಾಲ್ಗೊಳ್ಳುವ ಜನಸಂಖ್ಯೆ ಕೂಡಾ ಅಧಿಕ. ಇದು ಒಂದು ವಿಧದ ಪರಿವರ್ತನೆ. ಡೊಳ್ಳುವಾದನ ಹಾಲುಮತ ಸಮುದಾಯದ ಒಂದು ಗುಂಪಿಗೆ ಮೀಸಲಾದ ಕಾಲವೊಂದಿತ್ತು. ಅವರನ್ನು 'ಈರಗಾರ' (ವೀರಗಾರ)ರು ಎಂದು ಕರೆಯುತ್ತಿದ್ದರು. ಇವರು ಮೊರಬ, ಚಿಂಚಲಿ, ರಾಯಬಾಗಗಳಲ್ಲಿ ಇದ್ದಾರೆ. ಅವರು ಮುಡಿಯುಟ್ಟು ಶುದ್ಧ ಕಾಯದವರಾಗಿ ಹಣೆಗೆ ಭಂಡಾರ ಹಚ್ಚಿಕೊಂಡು ವಿಶಿಷ್ಟ ಉಡುಪು ಧರಿಸಿ ಗುಡಿಗೆ ಬಂದು ದೇವರಿಗೆ ವಂದಿಸಿ ಡೊಳ್ಳು ಕಟ್ಟಿ ಬಾರಿಸಲು ಅಣಿಯಾಗುತ್ತಿದ್ದರು. ಮನೆಯಲ್ಲಿ ಸೂತಕವಿದ್ದಲ್ಲಿ ಮುಟ್ಟು ಚಟ್ಟು, ನಿಷೇಧವಿದ್ದುದರಿಂದ ಧಾರ್ಮಿಕ ಕಟ್ಟಾಚಾರಗಳಿಗೆ ಚ್ಯುತಿಬಾರದಂತೆ ನುಡಿಸುವ ಈ ಪಂಗಡದವರು ಈ ತನಕ ತಮ್ಮ ಆಚಾರ-ವಿಚಾರಗಳನ್ನು ನಡೆಸಿಕೊಂಡು ಬಂದಿದ್ದರು. ಇತ್ತಿತ್ತಲಾಗಿ ಆ ಕಟ್ಟಳೆ ಸಡಿಲುಗೊಂಡು ಈ ಕಾರ್ಯದಲ್ಲಿ ಅಭಿರುಚಿ ಉತ್ಸಾಹಿ ತರುಣರೂ ಪಾಲುಗೊಳ್ಳುತ್ತಲಿದ್ದಾರೆ. ರಾಜಕೀಯ ಉತ್ಸವ-ಮೆರವಣಿಗೆಗಳಲ್ಲಿ, ಚುನಾವಣೆಯ ಪ್ರಚಾರಗಳಲ್ಲಿ ಈ ವಾದ್ಯ ಬಳಕೆಗೆ ಹೆಚ್ಚಿನ ಆಸಕ್ತಿ ಮೂಡಿಬಂದಾಗ ಬೇರೆ ಸಮುದಾಯಗಳ ಯುವ ಜನಾಂಗವೂ ಈ ಕಲೆ ಕರಗತಮಾಡಿಕೊಂಡು ೬-೨೦ ಜನರ ಗುಂಪುಮೇಳ ಕಟ್ಟಿ ವಿಶಿಷ್ಟ ವೇಷಭೂಷಿತರಾಗಿ ಡೊಳ್ಳುಕಟ್ಟಿ ಕುಣಿಯುತ್ತಿರುವುದು"[೧೨] ಇತ್ತೀಚಿನ ಬೆಳವಣಿಗೆ. "ಈ ಮೇಳದಲ್ಲಿ ಜಪ ತಾಳ,

[illegible]

ಕೊಳಲು ಕೂಡಾ ಹೊಂದಿಕೆ ಮಾಡಿಕೊಂಡಿದ್ದಾರೆ."[೧೩] ಬಾಗೆನಾಡಿನಲ್ಲಿ ಕುರುಬರಲ್ಲದವರ ಡೊಳ್ಳಿನ ಮೇಳಗಳು ಹಾಡುಗಾರರು ಇರುವುದನ್ನು ಹಿಂದೆ ಉಲ್ಲೇಖಿಸಿದೆ. ಡೊಳ್ಳುವಾದ್ಯ ವಿನ್ಯಾಸ ರಚನೆಯಲ್ಲಿ ಬದಲಾವಣೆ ಕಂಡು ಬರುತ್ತದೆ. ಈಗ ಡೊಳ್ಳುಗಳು ಪೇಟೆಯಲ್ಲಿ ಸಿಗುತ್ತವೆ. ಚೌಡಿಕೆ ಮೇಳದವರು ಹೊಸದಾಗಿ ಡೋಲಕ ಸೇರಿಸಿಕೊಂಡಿದ್ದಾರೆ. ಇದರಿಂದ ಚೌಡಿಕೆಗೆ ಹೊಸಗತ್ತು ಸಿಕ್ಕಿದೆ. ಇವೆಲ್ಲ ಜನಪದ ಪರಂಪರಾಗತ ಕಲೆಯನ್ನು ಆಧುನೀಕರಣಗೊಳಿಸುವ ಕೆಲವು ಪ್ರಯತ್ನಗಳು.

ಹೊಸ-ಹೊಸ ವಾದ್ಯಗಳ ಸೇರ್ಪಡೆ ಇಲ್ಲವೇ ಬದಲಾವಣೆಯಂತೆ ಆ ಕಲೆಗೆ ಸಂಬಂಧಿತ ಸಾಹಿತ್ಯದಲ್ಲಿಯೂ ಹೊಸ ಬದಲಾವಣೆಗಳು ಆಗುತ್ತಿವೆ. ಸೊಲ್ಲು ಬದಲಾಗುತ್ತಿವೆ. ಡೊಳ್ಳಿನ ಹಾಡುಗಾರರು ತಮ್ಮ ಮಾರ್ಗಗಳನ್ನು ಬಿಟ್ಟು ಹೊಸತು ದಾರಿಗಳನ್ನು ಹುಡುಕಿಕೊಂಡಿದ್ದಾರೆ. ಹಿಂದೆ ಲಾವಣಿಗಳಲ್ಲಿದ್ದ ಹರದೇಶಿ-ನಾಗೇಶಿ ಸಂಪ್ರದಾಯಗಳನ್ನು ತಮ್ಮೊಳಗೆ ಸೇರಿಸಿಕೊಂಡಿದ್ದಾರೆ. ಲಾವಣಿಗಳಿಗೆ ಸೀಮಿತವಾಗಿದ್ದ ಈ ಸಂಪ್ರದಾಯ ಡೊಳ್ಳಿನಲ್ಲಿ ನುಸುಳಿ ಮುಂದುವರೆಯುತ್ತಿದೆ.

ಜಾತಗಾರ, ಬಹುರೂಪಿ, ಬಜಂತ್ರಿ, ಗೊಂದಲಿಗರು ಮೊದಲಾದ ಪ್ರದರ್ಶನ ಕಲೆಗಳ ವೃತ್ತಿ ಕಲಾವಿದರು ಗೊಂದಲದಲ್ಲಿದ್ದಾರೆ. ಒಂದು ವಿಧದ ರೂಪಾಂತರಕ್ಕೆ ಸಿದ್ಧಗೊಂಡಿದ್ದಾರೆ. ಒಂದೊಂದು ಜಾತಿಯೊಂದಿಗೆ ತಳಕು ಹಾಕಿಕೊಂಡಿರುವ ಒಂದೊಂದು ಕಲೆಗಳು ಇಂದು ಸಾಂಸ್ಕೃತಿಕ ವೈರುಧ್ಯವನ್ನು ಎದುರಿಸುತ್ತಿವೆ. ಕಲೆಗಳು ಜಾತಿ ಹಾಗೂ ವರ್ಗದ ಕಟ್ಟುಪಾಡುಗಳನ್ನು ಮೀರಿ ಬೆಳೆಯಬೇಕೆಂಬ ಅಭಿಮತ ಕೇವಲ ಕ್ಲಿಷೆಯಾಗುತ್ತಿದೆ. "ಇಂದು ಕಾಲ ಬದಲಾಗಿದೆ; ಯೋಚನಾ ವಿಧಾನ ಭಿನ್ನವಾಗಿದೆ; ಕಲೆಯನ್ನು ಜಾತಿಯ ಹಿನ್ನೆಲೆಯಲ್ಲಿ ಪರಿಶೀಲಿಸುವ ಪರಿಪಾಠ ಬೇಡವಾಗಿದೆ; ಜಾತಿಯ ಪರಿವೇಷದಿಂದ ಹೊರತಾಗಿ ಕಲೆಯನ್ನು ಉಳಿಸಿಕೊಳ್ಳುವ ತುರ್ತು ಅಧಿಕವಾಗಿದೆ. ಹರಿದು ಹಂಚಿ ಹೋಗಿರುವ ಸಾಂಸ್ಕೃತಿಕ ಎಳೆಗಳನ್ನು ಕ್ರೋಢೀಕರಿಸಿಕೊಂಡು, ಹುರಿಗಟ್ಟಿ ಬಳಸಿಕೊಳ್ಳುವುದು

---

೧೨. ಬ. ಪ. ನಾಯ್ಕರ : ಹಾಲುಮತಸ್ಥರು, ಪುಟ : ೯೭, ೯೮

೧೩. ಅದೇ, ಪುಟ : ೯೮

ಅಗತ್ಯವಾಗಿದೆ. ನಮಗಿಂದು ಜಾತಿ ಮುಖ್ಯವಲ್ಲ; ಕಲೆ ಮುಖ್ಯವಾಗಿದೆ. ಜಾತಿಗಳನ್ನು ಮರೆತರೂ ಆಯಾ ಜಾತಿಗಳಲ್ಲಿ ಹೆಪ್ಪುಗಟ್ಟಿರುವ ಕಲೆಯನ್ನು ಮರೆಯುವುದು ಸಾಧ್ಯವಿಲ್ಲ. ದೀರ್ಘಕಾಲದಿಂದ ಒಟ್ಟು ಜನಸಮುದಾಯಕ್ಕೆ ಸಮಾಜೋಧಾರ್ಮಿಕ ನೆಲೆಗಟ್ಟನ್ನು ನೀಡಿದ ಸಾಂಸ್ಕೃತಿಕ ಅರ್ಥವ್ಯಾಪ್ತಿಯ ಜನಪದ ಕಲೆಗಳನ್ನು ಪ್ರಯತ್ನ ಪೂರ್ವಕವಾಗಿ ಉಳಿಸಿಕೊಳ್ಳುವ ಕಾರ್ಯಯೋಜನೆ ಬೇಕಾಗಿದೆ. ಜನಪದ ಕಲೆಗಳನ್ನು ಬಿಟ್ಟರೆ, ಸಾಂಸ್ಕೃತಿಕವಾಗಿ ನಾವು ದಿವಾಳಿಯಾಗುವುದು ಖಂಡಿತ ಎನಿಸುತ್ತದೆ."[೧೪] ಆದರೆ ಜೀವನ ನಿರ್ವಹಣೆಯ ಮೂಲವಾಗಿದ್ದ ಇಂತಹ ಕಲೆಗಳನ್ನು ಕೇವಲ ಹವ್ಯಾಸದ ನೆಲೆಯಲ್ಲಿ ಬದುಕಿಸಿಕೊಳ್ಳುವುದು ಸುಲಭವಲ್ಲವೆಂಬುದು ಸಮ್ಮತವಾದ ನಿಲುವು. ತನ್ನ ವೃತ್ತಿಯಿಂದ ಜೀವನ ನಿರ್ವಹಣೆ ಸಾಧ್ಯವಿಲ್ಲವೆಂಬ ಅರಿವು ವೃತ್ತಿ ಕಲಾವಿದನಿಗೆ ಮೂಡಿದಾಗ ಆತ ಆ ಕಲೆಯಿಂದ ವಿಮುಖನಾಗಿ ಅನ್ಯ ವೃತ್ತಿಗಳೆಡೆಗೆ ವಾಲುತ್ತಾನೆ. ಒಂದೆಡೆ ಜೀವನ ನಿರ್ವಹಣೆಯ ಒತ್ತಡ, ಮತ್ತೊಂದೆಡೆ ಸ್ವಾಭಿಮಾನದ ಬದುಕಿನ ಸವಾಲು, ವೃತ್ತಿ ಕಲಾವಿದರನ್ನು ಕಾಡುತ್ತಿವೆ. ಇದರಿಂದಲೇ ಜಾತಿಗಾರರು ಸೋಗು ಹಾಕುವುದನ್ನು ನಿಲ್ಲಿಸಿದರು. ಬಹುರೂಪಿಗಳು ಹೊಸ ಬದುಕು ಹುಡುಕಿದರು. ವೃತ್ತಿ ಕಲಾವಿದರ ಪ್ರದರ್ಶನ ಕಲೆಗಳನ್ನು ಪ್ರವೃತ್ತಿಯ ನೆಲೆಯಲ್ಲಿ ಕಾಪಾಡಿಕೊಳ್ಳುವುದು ಸಾಧ್ಯವೇ ಇಲ್ಲ. ಅಕ್ಷರಲೋಕದ ಹಲವು ಜ್ಞಾನ ಶಾಖೆಗಳತ್ತ ಹರಿದು ಹೋಗುತ್ತಿರುವ ವೃತ್ತಿಕಲಾವಿದರ ಕುಟುಂಬಗಳ ಸದಸ್ಯರು ತಮ್ಮ ವೃತ್ತಿ ಮೂಲದ ಪರಂಪರಾಗತ ಪ್ರದರ್ಶನ ಕಲೆಗಳನ್ನು ತ್ಯಜಿಸಿ ಅನ್ಯವೃತ್ತಿಗಳನ್ನು ಹುಡುಕಿಕೊಳ್ಳುವುದರಲ್ಲಿಯೇ ನಾಗರಿಕತೆಯನ್ನು ಗುರುತಿಸುತ್ತಿದ್ದಾರೆ. "ಜಾತಿಯ ಸೆರಗಿನಲ್ಲಿ ಆಶ್ರಯ ಪಡೆದಿರುವ ಯಾವುದೇ ಜನಪದ ಕಲೆಯನ್ನು ಯಾವುದೇ ಜಾತಿಯ ಜನರಾದರೂ ಕಲಿತು ಪ್ರದರ್ಶಿಸಬಹುದು. ಕಲೆ ಕಲಿಕೆಗೆ ಒಗ್ಗುವ ಮಾಧ್ಯಮ. ಕಲಿಕೆಗೆ ಮೀರಿದ್ದು ಯಾವುದೂ ಇಲ್ಲ. ಮೂಲ ಧಾರ್ಮಿಕ ಆಚರಣೆಯನ್ನು ಮರೆತರೂ ಅದನ್ನು ಸಾಂಕೇತಿಕವಾಗಿ ಉಳಿಸಿಕೊಂಡರೂ ಒಟ್ಟು ಕಲೆಯ ಮನೋರಂಜನ ಅಂಶಗಳನ್ನು ಯಶಸ್ವಿಯಾಗಿ ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ"[೧೫] ಎಂಬ ಮಾತನ್ನು

---

೧೪. ಡಿ. ಲಿಂಗಯ್ಯ : ಜಾನಪದ ನೋಟಗಳು, ಪುಟ : ೭೨

೧೫. ಅದೇ, ಪುಟ : ೭೨

[illegible]

ಸಾರಾಸಗಟಾಗಿ ಒಪ್ಪಿಕೊಳ್ಳುವಂತಿಲ್ಲ. "ಇಂದಿಗೂ ಬುಡಬುಡಿಕೆ, ಹಾವಾಡಿಗ, ಬಾಳಸಂತೋಷಿ, ವೇಷಗಾರ, ಪೋತರಾಜ, ಸುಡಗಾಡಸಿದ್ಧ, ದುರುಗ–ಮುರುಗಿ, ಬುರಬುರ ಪೋಚಮ್ಮರಂತಹ ಅಲೆಮಾರಿ ಜನಾಂಗವನ್ನು ಅಕ್ಷರಶಃ ಭಿಕ್ಷುಕರನ್ನಾಗಿಸಿಯೇ ಕಾಣಬಯಸುತ್ತದೆ ಈ ಸಮಾಜ. ಈ ಎಲ್ಲ ಹಾಡುಗಾರಿಕೆ, ಕಲಾ ವೈವಿಧ್ಯಗಳಿಗೆ ಮಾನ–ಸಮ್ಮಾನಗಳು ಸಿಗಲೇ ಇಲ್ಲ. ಭಿಕ್ಷುಕ ಸಮುದಾಯದ ಎಲ್ಲ ದೇಶಿಯ ಕಲಾ ಪ್ರಕಾರಗಳನ್ನು ಎತ್ತಿ ಅಲ್ಪ–ಸ್ವಲ್ಪ ಬದಲಾವಣೆಗಳೊಂದಿಗೆ ಸಂಸ್ಕರಿಸಿಕೊಂಡು ವ್ಯಾಪಾರ ಮಾಡಿಕೊಂಡು ಬುದ್ಧಿವಂತರು ಹಲವು ಪ್ರಶಸ್ತಿ–ಫರಮಾನುಗಳಿಗೆ ಪಾತ್ರರಾದದ್ದು ನಾಗರಿಕತೆಯ ಕ್ರೂರ ವ್ಯಂಗ. ಈ ಮಾತು ಕ್ಲೀಷೆ ಎನಿಸಬಹುದಾದರೂ ಈ ವಿದ್ಯಮಾನ ಎಗ್ಗಿಲ್ಲದೆ ಮುಂದುವರೆದುಕೊಂಡು ಬರುತ್ತಿದೆಯಾದ್ದರಿಂದ ಮತ್ತೆ ಹೇಳಬೇಕಾದ ಅನಿವಾರ್ಯತೆ ಎದುರಾಗುತ್ತಿದೆ."[೧೬] ಒಂದು ವೃತ್ತಿಮೂಲದ ಪ್ರದರ್ಶನ ಕಲೆಯನ್ನು ಇಳಿಸಲು ಆ ಸಮುದಾಯವನ್ನೇ ಬಲಿಕೊಡುವುದು ಅನ್ಯಾಯ. ಬಹುರೂಪಿಗಳಿಗೆ ನಾವು ಸಂಭಾವನೆ ಕೊಡುವುದಿಲ್ಲ, ಬದಲಾಗಿ ಭಿಕ್ಷೆ ಎಂದು ತಿಳಿಯುತ್ತೇವೆ. ಆದ್ದರಿಂದಲೇ ಈ ತಳ ಸಮುದಾಯದವರು, ಅಲೆಮಾರಿಗಳಾದ ವೃತ್ತಿಕಲಾವಿದರು ಸ್ವಾಭಿಮಾನದ ಬದುಕಿಗೆ ಹಂಬಲಿಸುತ್ತಿರುವುದು. ಜಾತಗಾರರಲ್ಲಿ ನಿರ್ಮಾಣಗೊಂಡ ಧಾರ್ಮಿಕ ಗೊಂದಲ ಅವರ ವೃತ್ತಿ ವಿಮುಖತೆಗೆ ಮತ್ತೊಂದು ಪ್ರೇರಣೆ. ಅವರು ತಾವು ಮುಸ್ಲಿಂರಾಗಿದ್ದು ಹಿಂದೂ ದೇವತೆಗಳ ಪೌರಾಣಿಕ ಹಾಗೂ ಹಿಂದೂ ಜನರ ಸಾಮಾಜಿಕ ಸೋಗುಗಳನ್ನು ಹಾಕಬಾರದೆಂದು ಭಾವಿಸಿದ್ದಾರೆ. ಹಿಂದೂ ಧರ್ಮದ ನಂಬಿಕೆಗಳಿಂದ ಬಿಡಿಸಿಕೊಳ್ಳುವ ಸಾಂಸ್ಕೃತಿಕ ಸ್ಥಿತ್ಯಂತರದ ಹೋರಾಟ ಅವರ ಮೂಲ ವೃತ್ತಿ ವಿಮುಖತೆಯನ್ನು ಬೆಂಬಲಿಸುತ್ತದೆ.

ಕೊರಮ ಅಥವಾ ಕೊರವರು ಮೂಲತಃ ಆಂಧ್ರದವರು. ಇಲ್ಲಿಗೆ ವಲಸೆ ಬಂದು ಎಷ್ಟೇ ವರ್ಷಗಳಾಗಿದ್ದರೂ ಅವರ ಮನೆ ಮಾತು ಈಗಲೂ ತೆಲಗು. ಕಸಬರಿಗೆ, ಬುಟ್ಟಿ, ಚಾಪೆ ತಯಾರಿಸಿ ಮಾರಾಟ ಮಾಡುವ ಇವರು

---

೧೬. ಡಿ.ರಂಗಾರೆಡ್ಡಿ : ಜಾನಪದ ನೋಟಗಳು, ಪುಟ : ೨೪೦

[illegible]

ಶಹನಾಯಿವಾದನವನ್ನು ವೃತ್ತಿಯಾಗಿಸಿಕೊಂಡವರು. ಕಾಲಕ್ಕೆ ತಕ್ಕಂತೆ ತಮ್ಮ ವಾದ್ಯಗಳನ್ನು ಬದಲಾಯಿಸುತ್ತಾ ಆಧುನಿಕತೆಗೆ ಹತ್ತಿರವಾಗುವ ರಹಸ್ಯಗಳನ್ನು ಬಲ್ಲವರು. ಅವರ ಹೆಣ್ಣುಮಕ್ಕಳು ಕಣಿ ಹೇಳುವುದನ್ನು ಬಿಟ್ಟಿದ್ದಾರೆ. ಹಚ್ಚೆ ಹಾಕುವುದಕ್ಕೂ ತಿಲಾಂಜಲಿ ನೀಡಿದ್ದಾರೆ. ಹಚ್ಚೆ ಹಾಕಿಸಿಕೊಳ್ಳುವುದು ಸುರಕ್ಷಿತವಲ್ಲವೆಂಬ ವೈಜ್ಞಾನಿಕ ಭಾವನೆ ಜನ-ಮನದಲ್ಲಿ ಬೆಳೆಯತೊಡಗಿದಾಗ ಅವರ ಹಚ್ಚೆ ಹಾಕುವ ಕಲೆಗೂ ಕುತ್ತು ಬಂತು. ಇಂದು ಬಾಗೆನಾಡಿನ ಕೊರವರು ಭಿಕ್ಷೆಯನ್ನು ಸಂಪೂರ್ಣ ನಿಲ್ಲಿಸಿದ್ದಾರೆ. ಪರಂಪರಾಗತವಾಗಿ ಬಂದ ತಮ್ಮ ಶಹನಾಯಿ ವೃತ್ತಿ ಕಲೆಯನ್ನು ವ್ಯಾಪಾರೀಕರಣಗೊಳಿಸಿದ್ದಾರೆ. ಇದು ಆರೋಪವಲ್ಲ. ಅವರ ಬದುಕಿನ ಜಾಣ್ಮೆಗೆ ನಿದರ್ಶನ. ಸಾಂಸ್ಕೃತಿಕ ಸ್ಥಿತ್ಯಂತರಗಳ ಒತ್ತಡಕ್ಕೆ ಒಳಗಾಗದೇ ನುಣುಚಿಕೊಂಡವರೆಂದರೆ ಹೆಳವರು. ಅವರು ಅಲೆಮಾರಿಗಳಾಗಿದ್ದರೂ ಹಲವು ಸಮಸ್ಯೆಗಳ ಮಧ್ಯದಲ್ಲಿ ತಮ್ಮ ಜೀವನ ವಿಧಾನವನ್ನು ಜೀವಂತವಾಗಿ ಉಳಿಸಿಕೊಂಡಿದ್ದಾರೆ. ವಂಶಾವಳಿಗಳನ್ನು ದಾಖಲಿಸುವ ಕಲೆ ಮಾಹಿತಿ ತಂತ್ರಜ್ಞಾನದ ಸ್ಪರ್ಧೆಯನ್ನು ಸಮರ್ಥವಾಗಿ ಎದುರಿಸುತ್ತಿರುವುದು ಆಶ್ಚರ್ಯ.

ಶುದ್ಧ ಮನರಂಜನೆಯ ಕಲೆಗಳಾದ ಕಣಿ, ಹಲಗೆ, ತಾಸೆ, ಲಾವಣಿ, ಕೀಲುಕುಣಿತ, ನವಿಲುಕುಣಿತ, ಕುದುರೆಕುಣಿತ, ನಂದಿಕೋಲು ಕುಣಿತ ಮುಂತಾದ ಕಲೆಗಳು ಪರಂಪರಾಗತ ಆಕರ್ಷಣೆಗಳನ್ನು ಕಳೆದುಕೊಳ್ಳುತ್ತಿದ್ದರೂ ಜೀವಂತವಾಗಿರುವುದು ವಿಶೇಷ. ಕಲೆಗಳು ತಾಜಾತನದಿಂದ ಮನುಷ್ಯನ ಮನಸ್ಸಿಗೆ ಹತ್ತಿರವಾಗುತ್ತವೆ. ಅವು ಕಾಲಕಾಲಕ್ಕೆ ಹೊಸತುಗೊಂಡು ಜಾಗತೀಕರಣಕ್ಕೆ ಉತ್ತರವಾಗುತ್ತವೆ. "ಆಧುನಿಕ ಕಾಲದಲ್ಲಿ ಕಾಣಸಿಗುವ ಜಾನಪದವನ್ನು ಆಧುನಿಕ ಜಾನಪದವೆಂದೇ ಪರಿಭಾವಿಸಬೇಕು. ಇಂದು ಕಾಣುವ ಜಾನಪದದಲ್ಲಿ ಹಿಂದಿನದೆಲ್ಲವೂ ಇಲ್ಲದಿರಬಹುದು; ಹಿಂದಿನ ವೈಭವವೆಲ್ಲ ಕಾಣದಿರಬಹುದು; ಹಿಂದಿನದರ ರೂಪಾಂತರವು ಆಗಿರಬಹುದು. ಒಟ್ಟಿನಲ್ಲಿ ಅದು ಈವರೆಗೆ ಮೌಖಿಕ ಪರಂಪರೆಯಲ್ಲಿ ಉಳಿದುಕೊಂಡಿವೆ ಎಂಬುದು ಮುಖ್ಯ. ಹಿಂದಿನಿಂದ ಬಂದಿರುವ ಶಾಸ್ತ್ರೀಯ ಭರತನಾಟ್ಯ, ಶಾಸ್ತ್ರೀಯ ಸಂಗೀತವನ್ನು ಆಧುನಿಕ ಕಲೆ ಎನ್ನಬಹುದಾದರೆ;

[illegible]

[illegible]

ಹಿಂದಿನಿಂದ ಬಂದಿರುವ ಜನಪದ ಕುಣಿತ, ಜನಪದ ಸಂಗೀತವೂ ಆಧುನಿಕ ಕಲೆಯೇ ಆಗುತ್ತದೆ. ಅದರಷ್ಟಕ್ಕೆ ಅದು, ಇದರಷ್ಟಕ್ಕೆ ಇದು ಉಳಿದುಕೊಂಡು ಬಂದಿದೆ ಅಷ್ಟೆ. ಎರಡು ಪ್ರಕಾರಗಳು ಅವುಗಳದೇ ಆದ ಪ್ರೇಕ್ಷಕ ವರ್ಗವನ್ನೂ ಮನ್ನಣೆಯನ್ನೂ ಪಡೆದಿವೆ."[೧೭] ಇದಕ್ಕಿಂತಲೂ ಮುಖ್ಯವಾದುದು ಇನ್ನೊಂದು ವಿಚಾರ. ಕಲಾವಿದರಲ್ಲಿರುವ ತಮ್ಮ ಕಲೆಯ ಕುರಿತ ಅಪಾರ ಅಭಿಮಾನ ಹಾಗೂ ಅದನ್ನು ಉಳಿಸುವ ಸಂಕಲ್ಪ. ಕಣಿವಾದಕ ವಿಷ್ಣು ಕಂಚಕಾರ 'ಕಲೆ ನನ್ನ ಅನಿವಾರ್ಯ ಕರ್ಮ'ವೆಂದು ಹೇಳುತ್ತಾ, 'ಸಮಾಜದಲ್ಲಿ ನನಗೆ ಸಿಗುತ್ತಿರುವ ಗೌರವದ ಬಗ್ಗೆ ತಲೆ ಕೆಡಸಿಕೊಳ್ಳುವುದಿಲ್ಲ'ವೆಂದು ಹೇಳುತ್ತಾನೆ. "ಈಗಾಗಲೇ ಸಮಾಜ ಸರಕಾರ ನನ್ನನ್ನು ಸನ್ಮಾನಿಸಿದೆ, ಗೌರವಿಸಿದೆ. ಪ್ರೋತ್ಸಾಹ ರೂಪದಲ್ಲಿ ಸರಕಾರ ಮಾಶಾಸನ ನೀಡುತ್ತಿದೆ. ಹೀಗಿದ್ದಾಗ ಗೌರವದ ಬಗ್ಗೆ ಮತ್ತೆ-ಮತ್ತೆ ಯೋಚಿಸುವುದು ಸರಿ ಎನಿಸುವುದಿಲ್ಲ. ಬದುಕಿರುವವರೆಗೂ ಕಲಾಸೇವೆಯನ್ನು ಮುಂದುವರೆಸಿಕೊಂಡು ಹೋಗುವುದು ನನ್ನ ಸಂಕಲ್ಪ." ಕಲಾವಿದರ ಈ ಉದಾರ ಧೋರಣೆ ಕಲೆಯ ಮೇಲಿನ ಅನನ್ಯ ಪ್ರೀತಿ. ಈ ಪ್ರೀತಿಯಿಂದಲೇ ಜನಪದ ಕಲೆಗಳು ಬದುಕಿಕೊಂಡಿವೆ. ಈ ಕಲಾವಿದರು ತಮ್ಮ ಕಲೆ ಹಣಗಳಿಸುವ ಸಾಧನವೆಂದು ಪರಿಗಣಿಸಿಯೇ ಇಲ್ಲ. "ನೂರಕ್ಕೆ ನೂರರಷ್ಟು ಕಲೆ ಆನಂದದ ಒಂದು ಲಯ. ನನ್ನ ಮನಸ್ಸು ಅದರಲ್ಲಿ ತೇಲಿ ಹೋಗುತ್ತದೆ. ಅದು ನಮ್ಮನ್ನು ನೋವು-ನಲಿವುಗಳಿಂದ ಮುಕ್ತಗೊಳಿಸುತ್ತದೆ. ನನ್ನ ಕಲೆ ನನ್ನ ಮನಸ್ಸಿನ ಏಕಾಗ್ರತೆ ಸಾಧಿಸುವ ಒಂದು ಯೋಗ. ಏಕಾಗ್ರತೆಯಿಲ್ಲದೆ ಕಲೆ ವಶವಾಗುವುದಿಲ್ಲ. ಮನಸ್ಸಿನ ಸ್ತಂಬನವೇ ಆನಂದ. ಅದೊಂದೇ ನನ್ನ ಗುರಿ. ನನ್ನದು ನಿರಾಭಾರಿ ಸೇವೆ. ಮಾನಾಪಮಾನಗಳೆಲ್ಲವು ಭಗವಂತನಿಗೆ ಸೇರಿದ್ದು. ಅಹಂಕಾರ ತ್ಯಜಿಸಿದಲ್ಲದೇ ಅಪ್ಪಟ ಕಲಾವಿದನಾಗುವುದು ಸಾಧ್ಯವೇ ಇಲ್ಲ" ಎನ್ನುತ್ತಾನೆ ವಿಷ್ಣು ಕಂಚಗಾರ. ಈಗ ವಿಷ್ಣು ಕಂಚಗಾರನ ಕಣಿ ಮುಕ್ಕಾಲು ಪಾಲು ಕೇಳುಗರಿಗೆ ಅರ್ಥವಾಗುವುದಿಲ್ಲ. ಅವನ ಮಾತ್ರಾ, ಲಯ, ತಾಳ ಅರ್ಥವಾಗುವುದಿಲ್ಲ. ಆದರೂ

---

೧೭. ಡಿ. ಲಿಂಗಯ್ಯ : ಜಾನಪದ ನೋಟಗಳು, ಪುಟ : ೬೮

[illegible]

ಕಣಿಯ ಗತ್ತು ಕೇಳುಗರ ತಲೆದೂಗಿಸುತ್ತದೆ. ಆ ನಾದದಲ್ಲಿ ಮನದ ಉನ್ಮಾದವನ್ನು ಶಮನಗೊಳಿಸಿ ಆಮೋದ ನೀಡುತ್ತದೆ. ಯಾವುದು ಮನಸ್ಸಿಗೆ ಹತ್ತಿರವಾಗುವುದೊ ಅದು ಸಾವು ಗೆಲ್ಲುತ್ತದೆ. ಕಾಲ, ದೇಶ, ಭಾಷೆ, ಜನಾಂಗಗಳನ್ನು ಮೀರಿ ನಿಲ್ಲುತ್ತದೆ. ಇದು ಜಾನಪದ ಕಲೆಗಳ ಅಮೃತತ್ವಕ್ಕೊಂದು ಉದಾಹರಣೆ. ಬಾಗೆನಾಡಿನ ಮತ್ತೊಬ್ಬ ಪ್ರಸಿದ್ಧ ಕರಡಿ ಕಲಾವಿದ ಶಂಕ್ರೆಪ್ಪ ಪಾಟೀಲ "ನಾನು ಮಾಡುವುದು ದೇವರ ಸೇವೆ. ಅದನ್ನು ಬಿಡುವಂತಿಲ್ಲ ಮಾಡಲೇಬೇಕು. ಅದರಿಂದಲೇ ನಮ್ಮ ಕಲೆ ಉಳಿಯುತ್ತದೆ." ಇದು ಅವನ ಭಾವನೆ. ಅವನು ಕರಡಿಯಲ್ಲಿ ಸಂಭಾಳವಾದ್ಯವನ್ನು ಹೊಸತಾಗಿ ಸೇರಿಸಿದ್ದಾನೆ. ತಮ್ಮ ಮೇಳಕ್ಕೆ ವಿಶಿಷ್ಟ ವಸ್ತ್ರಗಳನ್ನು ವಿನ್ಯಾಸಗೊಳಿಸಿದ್ದಾನೆ. ಅದನ್ನು ಆಧುನಿಕ ಮನಸ್ಸುಗಳಿಗೆ ಒಗ್ಗಿಸುವುದರಲ್ಲಿ ಶ್ರಮಿಸಿದ್ದಾನೆ.

ಈ ಎಲ್ಲ ಕಾರಣಗಳಿಂದಾಗಿ ಹಂದಿಗುಂದದಂಥ ಪುಟ್ಟ ಗ್ರಾಮದ ಒಬ್ಬ ಅಪ್ಪಟ ಜನಪದ ಕಲಾವಿದ ಕಾಮನ್‌ವೆಲ್ತ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದಲ್ಲಿ ಬಾಗೆನಾಡಿನ ಜನಪದ ಕಲೆಯೊಂದನ್ನು ಪ್ರದರ್ಶಿಸುವುದು ಸಾಧ್ಯವಾಯಿತು. ಆದರೆ ಈ ಅವಕಾಶ ಎಲ್ಲ ಕಲಾವಿದರಿಗೂ ಸಿಗುವುದಿಲ್ಲ. ಜನಪದ ಕಲೆಗಳನ್ನು ವ್ಯಾಪಾರೀಕರಣಗೊಳಿಸಿದ ಶಿಷ್ಟ ಕಲಾವಿದರು ಜಾಗತೀಕರಣದ ಸಂದರ್ಭದಲ್ಲಿ ಸಾಕಷ್ಟು ಹಣ ಮಾಡಿದರು. ಆದರೆ ಅಸಲು ಕಲಾವಿದರು ಮಾತ್ರ ಅನಾಥರಾಗಿಯೇ ಉಳಿದರು. ಹಲಗೆ, ಕಣಿ, ತಾಸೆ, ಕರಡಿವಾದಕರಿಗೆ ತಮ್ಮ ಕಲೆಯ ವ್ಯಾಪಾರೀಕರಣ ಕಲೆ ಗೊತ್ತಿಲ್ಲ. ಅದು ಅವರಿಗೆ ಬೇಕಾಗಿಯೂ ಇಲ್ಲ. ಸುಶಿಕ್ಷಿತರು ಕೌಶಲ್ಯಗಳನ್ನು ಗಳಿಸಿಕೊಂಡು ಹಣ ದೋಚುವತ್ತ ಓಡುತ್ತಾರೆ. ಅಶಿಕ್ಷಿತರು ಇರುವಷ್ಟರಲ್ಲಿಯೇ ನೆಮ್ಮದಿಯ ಬದುಕು ಹುಡುಕುತ್ತಾರೆ. ಶಿಷ್ಟ ಮತ್ತು ಜನಪದ ಕಲಾವಿದರ ನಡುವಿನ ಪ್ರಮುಖ ವ್ಯತ್ಯಾಸವೇ ಇದು. ಇಂದು ಜನಪದ ಕಲಾವಿದರಲ್ಲಿಯೂ ನಾಗರಿಕತೆಯ ಒಲವು ಬೆಳೆಯುತ್ತಿರುವುದು ನಿರ್ಲಕ್ಷಿಸುವಂತದ್ದಲ್ಲ.

ತಳ ಸಮುದಾಯದ ಕಲಾವಿದರು ಬ್ಯಾಂಜೊ ಪಾರ್ಟಿಗಳನ್ನು ಸೃಷ್ಟಿಸಿಕೊಂಡರೆ ಜೈನ ಸಮುದಾಯದವರು ಝಾಂಜ್ ಪಥಕಗಳನ್ನು

[illegible]

ನಿರ್ಮಿಸಿಕೊಂಡಿರುವುದಕ್ಕೆ ಮಹಾರಾಷ್ಟ್ರದ ಪ್ರಭಾವವೇ ಕಾರಣವೆನಿಸುತ್ತದೆ. ಈಗ ಜನಾಕರ್ಷಣೆಯ ಪ್ರಭಾವ ಕಲಾ ಮಾಧ್ಯಮಗಳಿವು. ಕಾಲಕ್ಕೆ ತಕ್ಕಂತೆ ಕಲಾ ಪ್ರಕಾರಗಳು ಹಾಗೂ ಕಲಾವಿದರ ಮನೋಭಾವ ಬದಲಾಗುತ್ತಿರುತ್ತವೆ. ಕಲಾವಿದರ ಸಂಖ್ಯೆಯಲ್ಲಿ ಹೆಚ್ಚಳ ಹಾಗೂ ಕಲೆಯ ಅಬ್ಬರ ಮತ್ತು ವೈಭವಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಸಿಗುತ್ತಿದೆ. ಇದು ಸಿನೇಮಾಗಳ ಪ್ರಭಾವ.

ಸಾಂಪ್ರದಾಯಿಕ ಮದುವೆಯ ವಿಧಿ-ವಿಧಾನಗಳು ಮಾಯವಾ-ಗುತ್ತಿರುವ ಗಣಕಯುಗದಲ್ಲಿಯೂ ಸಾಂಪ್ರದಾಯಿಕ ಹಾಡುಗಳು, ಹಾಡುಗಾರರು ಉಳಿದುಕೊಂಡಿರುವುದು ರೋಚಕ ಸಂಗತಿ. ಮದುವೆ ಹಾಡು, ಸೋಬಾನ ಪದ, ಜೋಗುಳ ಪದಗಳು ನೆಲದಮರೆಯ ನಿಧಾನದಂತೆ ಉಳಿದುಕೊಂಡಿವೆ. ಸಂಪ್ರದಾಯ ಹಾಡುಗಳ ಕಲಾವಿದೆಯರು ಆ ಹಾಡು ಕೇಳುವ ಸಮುದಾಯಕ್ಕೆ ಕಲೆಯ ತರಬೇತಿಯನ್ನು ಕೊಡಲು ಯತ್ನಿಸುತ್ತಾರೆ.

ಬಾಗೆನಾಡಿನಲ್ಲಿ ಇಂದು ಲಾವಣಿಕಾರರು, ಒಂದು ಜನಪದ ಕಲಾ ಪರಂಪರೆಯ ಕೊಂಡಿಯ ಕೊನೆಯ ಕಳಿಗೆಯಂತೆ ಉಳಿದುಕೊಂಡಿದ್ದಾರೆ. ಈ ಪರಿಸರದಲ್ಲಿ ತುಂಬಾ ಶ್ರೀಮಂತವಾಗಿದ್ದ ಲಾವಣಿ ಪರಂಪರೆ ಅಳಿವಿನ ಅಂಚಿನಲ್ಲಿದೆ. ಮೂರು-ನಾಲ್ಕು ಲಾವಣಿ ಹಾಡುಗಾರರಿಗೆ ಏಳೆಂಟು ಜನ ಸಾಥ್ ಕೊಡುವವರು ಉಳಿದಿದ್ದಾರೆ. ೨೦-೨೫ ವರ್ಷಗಳ ಹಿಂದೆ ಬಹುಭಾಷಾ ಲಾವಣಿ ಹಾಡುಗಾರರು ಇಲ್ಲಿದ್ದರು. ಕನ್ನಡ ಮತ್ತು ಮರಾಠಿ ಉಭಯ ಭಾಷೆಗಳನ್ನು ಒಂದೇ ಹಾಡಿನಲ್ಲಿ ಸೇರಿಸಿ ಲಾವಣಿ ಹಾಡುತ್ತಿದ್ದರು. ಲಾವಣಿ ಕನ್ನಡ-ಮರಾಠಿಯ ಸಾಂಸ್ಕೃತಿಕ ಬೆಸುಗೆಯಾಗಿತ್ತು. ಆ ಬೆಸುಗೆ ಇಂದು ಬಿಚ್ಚಿದೆ. ಮಹಾರಾಷ್ಟ್ರದಲ್ಲಿಯ ಲಾವಣಿಗಳು ಶೃಂಗಾರ ಮತ್ತು ವೀರರಸ ಪ್ರಧಾನವಾಗಿದ್ದರೆ ಕನ್ನಡದ ಲಾವಣಿಗಳು ಶೃಂಗಾರ ಮತ್ತು ಶಾಂತರಸ ಪ್ರಧಾನವಾಗಿವೆ. ನಮ್ಮಲ್ಲಿ ಮಹಿಳಾ ಕಲಾವಿದೆಯರನ್ನು ನಾಗೇಶಿ ತಂಡಗಳಿಗೆ ಬಳಸಿಕೊಳ್ಳಲಾಗುತ್ತಿತ್ತು. ಈಗ ಹಂದಿಗುಂದದ ಮಹಾದೇವಿ ದೇವರವರ ನಾಗೇಶಿ ಲಾವಣಿಗಳನ್ನು ಹಾಡುತ್ತಾಳೆ. ಆದರೆ ತನ್ನ ಕಲೆಯನ್ನು ತನ್ನ ಮಕ್ಕಳಿಗೆ

[illegible]

[illegible]

[illegible]

ಮುಂದುವರಿಸುವುದು ಅವಳಿಗೆ ಇಷ್ಟವಿಲ್ಲ. ಏಕೆಂದರೆ ಪುರುಷ ಸಮುದಾಯದ ಎದುರು ಸ್ತ್ರೀ ಕಲಾವಿದೆ ಕೆಲವು ಸಂದರ್ಭಗಳಲ್ಲಿ ಮುಜುಗರವನ್ನು ಎದುರಿಸುವುದು ಅವಳಿಗೆ ಇಷ್ಟವಿಲ್ಲ. ನಮ್ಮ ಸಿನಿಮಾ ನಟಿಯರಿಗೂ ಹಾಗೂ ಜನಪದ ಕಲಾವಿದೆಯರಿಗೆ ಇರುವ ವ್ಯತ್ಯಾಸವಿದು. ಸಿನಿಮಾಗಳಲ್ಲಿ ನಟಿಯೊಬ್ಬಳು ತುಂಬಾ ಅಶ್ಲೀಲವಾಗಿ ಅಭಿನಯಿಸಿ ಕೈತುಂಬಾ ಹಣ ಪಡೆದು ಸಹಜವಾಗಿ, ಗಣ್ಯವ್ಯಕ್ತಿಗಳಂತೆ ಬದುಕುತ್ತಾಳೆ. ಆದರೆ ಜನಪದ ಕಲಾವಿದೆ ಶಬ್ದಕ್ಕೆ ನಾಚಿ ಮುದುಡುತ್ತಾಳೆ. ಅವಳಿಗೆ ಹಣಕ್ಕಿಂತಲೂ ಮಾನ ಮುಖ್ಯವಾಗುತ್ತದೆ. ಸಿನಿಮಾ ನಟಿಯರ ಮನೋಸ್ಥಿತಿ ನಮ್ಮ ಕಲಾವಿದೆಯರಲ್ಲಿಲ್ಲ. ಈ ಮಾತು ಜನಪದ ರಂಗಭೂಮಿಯ ನಟಿಯರಿಗೂ ಅನ್ವಯಿಸುತ್ತದೆ. ಜನಪದ ರಂಗಭೂಮಿಯ ನಟಿಯಾಗಲಿ ಡಪ್ಪು ಹಿಡಿದು ಲಾವಣಿ ಹಾಡುವ ಕಲಾವಿದೆಯಾಗಲಿ ಮೇಲ್ವರ್ಗದಿಂದ ಬಂದವರಲ್ಲ. ದಲಿತ ಸಮುದಾಯದವರು ಹೆಚ್ಚು ಕಲಿತವರಲ್ಲ. ಹೆಚ್ಚಾಗಿ ನಿರಕ್ಷರಿಗಳು. ಮದುವೆ ಆದವರಲ್ಲ; ದೇವದಾಸಿಯರು ಒಂದೆಡೆ ಸಾಮಾಜಿಕ ಶೋಷಣೆಗೆ ತುತ್ತಾಗಿದ್ದರೆ ಮತ್ತೊಂದೆಡೆ ಕಲೆಯ ನೆಪದಲ್ಲಿ ಸಾಂಸ್ಕೃತಿಕ ಅವಹೇಳನದ ಚಿತೆಗೆ ಸತಿಯಾಗುತ್ತಾರೆ. ಬಾಗೆನಾಡಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ಯಾವ ಕಲಾವಿದೆಯೂ ಮೇಲ್ವರ್ಗದಿಂದ ಬಂದವಳಲ್ಲ. ಆ ನೋವು, ತಳಮಳ ಅನುಭವಿಸದವರಿಗೆ ಮಾತ್ರ ಗೊತ್ತು. ಮಹಾರಾಷ್ಟ್ರದಲ್ಲಿ ಶೃಂಗಾರಪೂಂತ ಲಾವಣಿಗಳಿಗೆ ಹಿನ್ನೆಲೆಯಾಗಿದ್ದ "ಮರಾಠಿಯ ತಮಾಷಾಗಳಲ್ಲಿ ಕುಣಿಯುವ ಹೆಣ್ಣು ಮಕ್ಕಳೆಲ್ಲ ಹಿಂದುಳಿದ ಜಾತಿಗಳಿಗೆ ಸಂಬಂಧಪಟ್ಟವರು. ತಮಾಷಾ ಕಲಾವಂತರು ಹೆಚ್ಚಾಗಿ ಹರಿಜನರು, ಕೊಲ್ಹಾಟಿಗರು, ಮಾಂಗರು ಮೊದಲಾದ ಸಮಾಜದಲ್ಲಿ ಅನಾದಿ ಕಾಲದಿಂದ ಮೇಲಿನ ವರ್ಗದವರಿಂದ ತುಳಿಯಲ್ಪಟ್ಟವರು. ತಮಾಷಾಗಳಲ್ಲಿ ಭಾಗವಹಿಸುವ ಸ್ತ್ರೀಯೆಂದರೆ ಕೀಳು ಎಂಬ ಹೇಯ ಭಾವ. ಇದೇ ಮಾತು ಕನ್ನಡ ಲಾವಣಿ ಮೇಳದಲ್ಲಿ ಭಾಗವಹಿಸುವ ಹೆಣ್ಣುಮಕ್ಕಳಿಗೂ ಅನ್ವಯಿಸುತ್ತದೆ. ಲಾವಣಿ ಹಾಡುವುದೆಂದರೆ ಮಾನವಂತರ ಕೆಲಸವಲ್ಲ ಎನ್ನುವ ಭಾವನೆ ಮೇಲಿನ ವರ್ಗದವರದು. ನಮ್ಮ ಲಾವಣಿ ಗೋಷ್ಠಿಗಳಲ್ಲಿ ಭಾಗವಹಿಸುವ ಹೆಣ್ಣುಮಕ್ಕಳು ಹೆಚ್ಚಾಗಿ

ಹರಿಜನ ವರ್ಗಕ್ಕೇ ಸೇರಿದವರು. ಕೇವಲ ಸಾಹಿತ್ಯವಲ್ಲ, ಇಂಥವರೇ ಈ ಹಾಡುಗಳನ್ನು ಹಾಡಬೇಕು ಎನ್ನುವ ಬಲಿತ ಭಾವವೂ ಮರಾಠಿಯಿಂದ ಕನ್ನಡಕ್ಕೆ ಆಗಮಿಸಿತು."[೧೮]

ಲಾವಣಿ ಮೇಳಗಳಲ್ಲಿ ಸಾಮಾನ್ಯವಾಗಿ ನಾಗೇಶಿಯನ್ನು ಪ್ರತಿನಿಧಿಸುವವಳು ಮಹಿಳಾ ಕಲಾವಿದೆ. ಹರದೇಶಿಯವರು ಗಂಡು ಹೆಚ್ಚು ಮಾಡಿ ಸ್ತ್ರೀಯನ್ನು ಕೀಳು ಮಾಡಿ ಹಾಡುತ್ತಿದ್ದಾಗಿನ ಸಂದರ್ಭವನ್ನು ನೆನಪಿಸಿಕೊಳ್ಳಬೇಕು.

**ನಾಗೇಶವರ ಪೋರಿ ಬಾಳ ಬೆರಕಿ**
**ಹುಟ್ಟಿದ್ದ ಬೈತಾಳ ಹುಳಗಡಕಿ।**
**ಸ್ವಲ್ಪ ಇಲ್ಲ ಇವಳಿಗೆ ನಾಚಿಕೆ**
**ಗಂಡಸರಿಗೆ ಹಾಯತಾಳ ತೆಕ್ಕಿ॥**

ಇಂತಹ ಹಾಡು ಹರದೇಶಿಯವರು ಹಾಡಿದಾಗ ನಾಗೇಶಿಯ ಸ್ಥಾನದಲ್ಲಿ ನಿಂತು ಅದನ್ನು ಕೇಳಿ ಸಹಿಸಿಕೊಳ್ಳುವ ಆ ಕಲಾವಿದೆಯ ನೋವು ನಾವು ಊಹಿಸಿಕೊಳ್ಳಬೇಕು. ಆಗ ಅದರ ಅರಿವು ಮೂಡುತ್ತದೆ. ಜನಸಾಮಾನ್ಯರ ಅಭಿರುಚಿ ಕೆಟ್ಟು ಹೋದಾಗ ಸಾಂಸ್ಕೃತಿಕ ಬಿಕ್ಕಟ್ಟು ಸೃಷ್ಟಿಯಾಗುತ್ತದೆ.

ಲಾವಣಿಗಳಲ್ಲಿಯ ಅಶ್ಲೀಲತೆ ಲಿಂಗಭೇದದ ಒಣ ತಾರ್ಕಿಕತೆ, ಸೊಲ್ಲಿನ ಏಕತಾನತೆಗಳು ಕಾಲಕ್ರಮೇಣ ಲಾವಣಿಗಳಿಗೆ ಹಿನ್ನೆಡೆ ಉಂಟುಮಾಡಿರಬೇಕು. ಇದೇ ಸಂದರ್ಭದಲ್ಲಿ ಕೃಷ್ಣಪಾರಿಜಾತ, ರಾಧಾನಾಟ, ಸಂಗ್ಯಾ–ಬಾಳ್ಯಾ, ಸಣ್ಣಾಟಗಳು ಲಾವಣಿಗಳಿಗೆ ಸ್ಪರ್ಧೆ ಒಡ್ಡಿದಂತಿದೆ. ಕಲಾವಿದೆಯರ ತಾತ್ಸಾರ ಹಾಗೂ ಕಲಾವಿದರ ಅಹಂಕಾರ ಕಾರಣವಾಗಿ ಲಾವಣಿ ಮೇಳಗಳು ಮಾಯವಾಗಿರಬಹುದೆಂದು ಊಹಿಸಬಹುದು. ಲಾವಣಿಗಳಲ್ಲಿ ವರ್ಣಿಸಲಾಗುತ್ತಿದ್ದ ಸೃಷ್ಟಿಯ ನಿರ್ಮಾಣ, ಬ್ರಹ್ಮಾಂಡದ ಸ್ವರೂಪ, ಜೀವಪ್ರಭೇದಗಳು, ಅಧ್ಯಾತ್ಮಿಕ ತಾತ್ವಿಕತೆ ಮೊದಲಾದವುಗಳನ್ನು ಕೃಷ್ಣಪಾರಿಜಾತ ತನ್ನೊಡಲೊಳಗೆ ಸೇರಿಸಿಕೊಂಡಿತ್ತು. ಅದು ದೃಶ್ಯ ಮಾಧ್ಯಮ ಆದುದರಿಂದ ಹೆಚ್ಚು ಪರಿಣಾಮಕಾರಿಯಾಗಿತ್ತು.

---

**೧೮. ಶ್ರೀರಾಮ ಇಟ್ಟಣ್ಣವರ : ಲಾವಣಿ, ಪುಟ : ೦೮,೦೯**

ಜನಪದ ಕಲೆಗಳು ಸಹಜವಾಗಿ ಉಳಿಯಬೇಕು. ಅವುಗಳನ್ನು ತುರ್ತುನಿಗಾಘಟಕದಲ್ಲಿಟ್ಟು ರಕ್ತ ಕೊಟ್ಟು ಆಮ್ಲಜನಕ ಪೂರೈಸಿ ಪೋಷಿಸುವುದು ಸಾಧ್ಯವಿಲ್ಲ. ಅದು ಅದಕ್ಕೆ ಒಗ್ಗುವ ಮಾಧ್ಯಮವಲ್ಲ. ಪ್ರತಿಭಾವಂತ ಕಲಾವಿದ ತನ್ನ ಕಾಲಕ್ಕೆ ಆ ಕಲೆಯನ್ನು ಮರುಸೃಷ್ಟಿಸಿಕೊಳ್ಳುತ್ತಾನೆ. ಇದಕ್ಕೊಂದು ಉತ್ತಮ ಉದಾಹರಣೆಯೆಂದರೆ ಹಾರೂಗೇರಿಯ ಕವಿ ಅಲಭೈರಿಯ ವೈರಾಗ್ಯ ವಿಜಯ ಬಯಲಾಟ. ಕವಿ ವೈರಾಗ್ಯವಿಜಯ ಎಂಬ ತನ್ನ ಬಯಲಾಟದಲ್ಲಿ ಸೂತ್ರಧಾರನ ಬಾಯಿಯಿಂದ ಉಪಾಸನಾ ದೇವತೆಗೆ ಈ ಮಾತು ಹೇಳಿಸುತ್ತಾನೆ. "ಹೇ ಮೃತ್ಯುಂಜಯನೇ, ಕಥಾರೂಪ ಕೀರ್ತನೆ ಹೇಳಿದರೆ ಬೇಸರುಪಟ್ಟುಕೊಳ್ಳುತ್ತಾರೆ ಈ ಜನ. ಕವಿತಾರೂಪ ಪ್ರೌಢಿಮೆ ನಡೆದರೆ ಮಲಗಿಕೊಳ್ಳುತ್ತಾರೆ ಈ ಮಂದ ಜನ. ನಾವು ತಿಳಿಸುವ ವಿಷಯ ವಿವೇಚನೆ ಮಾಡಬೇಕಾದರೆ ಕಲೆಯಿಂದಲೇ ಸಾಧ್ಯ ಪ್ರಭು."[೧೯] ಈ ಬಯಲಾಟದಲ್ಲಿ ಮಹಾದೇವಿ ಸೃಷ್ಟಿ ತತ್ವವನ್ನು ನಟನಿಗೆ ಸಾಧ್ಯಂತವಾಗಿ ತಿಳಿಸುತ್ತಾಳೆ. ಈಗ ಜನಪದ ರಂಗಭೂಮಿ ಸಿನಿಮಾ, ಟಿವ್ಹಿ ಮಾಧ್ಯಮಗಳನ್ನು ಎದುರಿಸುವ ಹೊಸ ಸಾಧ್ಯತೆಗಳನ್ನು ಕಂಡುಕೊಳ್ಳಬೇಕಿದೆ. ರಾಧಾನಾಟ ಬಾಗೆನಾಡಿನಿಂದ ಮರೆಯಾಯಿತು. ಸಂಗ್ಯಾ-ಬಾಳ್ಯಾ ಅಡಗಿಕೊಂಡಿತು. ಕೃಷ್ಣಪಾರಿಜಾತ ಅಸ್ತಿತ್ವಕ್ಕಾಗಿ ಹೋರಾಡುತ್ತಿದೆ. ತನ್ನ ಗತವೈಭವದ ಗುಂಗಿನಲ್ಲಿ ಹೇಗೋ ಕುಂಟುತ್ತಾ ಮುನ್ನಡೆದಿದೆ. ಪಾರಿಜಾತದ ಸಂಕಷ್ಟಗಳನ್ನು ಹಿಡಕಲ್ಲದ ಮಾಲಾಬಾಯಿ ಬಾಯಿಯಿಂದಲೇ ಕೇಳಬೇಕು. ಅದನ್ನು ೪ನೇ ಅಧ್ಯಾಯದಲ್ಲಿ ದಾಖಲಿಸಲಾಗಿದೆ. ಬಾಬಾಲಾಲ ನಧಾಪ, ಮಲೀಕಸಾಬ ನದಾಫ, ಮೀರಾಸಾಬ ನದಾಫ, ಸದಾಶಿವ ಗದಗೈಯಗೋಳ, ಲಕ್ಷ್ಮಣಗೌಡಾ ಪಾಟೀಲ ಮುಂತಾದ ಪಾರಿಜಾತ ಕಲಾವಿದರು ಅದರ ಆತಂಕಗಳನ್ನು ಎಳೆ-ಎಳೆಯಾಗಿ ಬಿಚ್ಚಿಡುತ್ತಾರೆ.

ಕೃಷ್ಣ ಪಾರಿಜಾತದ ಬಗ್ಗೆ ಜನರಲ್ಲಿ ಅಪಾರ ಗೌರವವಿತ್ತು. ಅದನ್ನು ನೋಡಿದರೆ ಪುಣ್ಯ ಲಭಿಸುವುದೆಂಬ ಭಾವವಿತ್ತು. ಪಾರಿಜಾತ ಆಡಿಸಿದರೆ ಮಳೆ-ಬೆಳೆ ಚೆನ್ನಾಗಿ ಆಗುವವು ಎಮದು ನಂಬಿಕೆಯಿತ್ತು. ಪಾರಿಜಾತದ ಮೂಲಕ ಕೃಷ್ಣ ದರ್ಶನದ ಅವಕಾಶ ಸಿಗುವುದೆಂಬ ಮುಗ್ಧತೆ ಇತ್ತು. ಕೃಷ್ಣ ಪಾರಿಜಾತದ ಹಿನ್ನೆಡೆಗೆ ಒಂದು

---

೧೯. ಕವಿ ಅಲಭೈರಿ : ವೈರಾಗ್ಯ ವಿಜಯ, ಅಪ್ರಕಟಿತ ಬಯಲಾಟ

[illegible]

ವಿಧದಲ್ಲಿ ಕಲಾವಿದರೂ ಕೂಡ ಕಾರಣವಾಗುತ್ತಾರೆ. ಅವರ ಸಂಭಾಷಣೆಗಳು ಪ್ರೇಕ್ಷಕರಿಗೆ ತಿಳಿಯುವುದಿಲ್ಲ. ವಾದ್ಯ-ಮೇಳಗಳ ಸದ್ದು ಗದ್ದಲದಲ್ಲಿ ಹಾಡುಗಳು ಕೇಳಿಸುವುದಿಲ್ಲ. ಇಂತಹ ಹಲವು ವೈರುಧ್ಯಗಳು ಕೃಷ್ಣ ಪಾರಿಜಾತಕ್ಕೆ ಮುಳ್ಳಾದವು.

ಕೃಷ್ಣಪಾರಿಜಾತದ ಕಲಾವಿದರು ಕೆಲವು ಸನ್ನಿವೇಶಗಳಲ್ಲಿ ಮರಾಠಿ ಹಾಡುಗಳನ್ನು ಹಾಡುತ್ತಿದ್ದರು. ಗಡಿಭಾಗದಲ್ಲಿ ಭಾಷಾ ಸಾಮರಸ್ಯ ಸೃಷ್ಟಿಸುವ ಈ ಕಲಾವಿದರ ಸೇವೆ ಸ್ಮರಣೀಯ. ಕರ್ಬಲ್ ಹಾಡುಗಾರರು, ಲಾವಣಿ ಹಾಡುಗಾರರು, ರಂಗಭೂಮಿ ಕಲಾವಿದರು ಕನ್ನಡ ಮರಾಠಿಯ ಗಡಿಯಲ್ಲಿ ಉಭಯ ಭಾಷೆಗಳಿಗೆ ಬಾಂಧವ್ಯದ ಬೆಸುಗೆ ಹಾಕಿದರು. ಮಹಾರಾಷ್ಟ್ರದ ಮಿರಜ, ಸಾಂಗ್ಲಿ, ಜತ್, ಕೊಲ್ಲಾಪುರಗಳಲ್ಲಿಯೂ ಇಲ್ಲಿಯ ಕೃಷ್ಣಪಾರಿಜಾತ ಪ್ರದರ್ಶಿತಗೊಳ್ಳುತ್ತಿದ್ದವು. ಇಂದು ಈ ಕಲಾವಿದರನ್ನು ಕೇಳುವವರೇ ಇಲ್ಲ. ಪಾರಿಜಾತ ರೂಪದಲ್ಲಿ ಅಳಿದುಳಿದ ಜನಪದ ರಂಗಪರಂಪರೆಗೆ ಕಾಯಕಲ್ಪ ನೀಡಬೇಕಿದೆ. ಯಕ್ಷಗಾನ ಕಲಾವಿದರಿಗಿರುವ ಪ್ರೋತ್ಸಾಹ ಪಾರಿಜಾತ ಕಲಾವಿದರಿಗಿಲ್ಲ. ಜಾನಪದ ಅಕಾಡೆಮಿಯ ಅರ್ಧಭಾಗವನ್ನು ಯಕ್ಷಗಾನ ಆಕ್ರಮಿಸಿತು. ಅಲ್ಲಿ ಕೃಷ್ಣ ಪಾರಿಜಾತಕ್ಕೆ ಸಿಗಬೇಕಾದ ಸ್ಥಾನ ಸಿಗಲಿಲ್ಲ. **ಕೃಷ್ಣಪಾರಿಜಾತ ಕನ್ನಡ ಜಾನಪದ ರಂಗಭೂಮಿಗೆ ಬೆಳಗಾವಿ ಜಿಲ್ಲೆಯ ಕೊಡುಗೆ. ದಟ್ಟಕುಣಿತ, ಜೋಗತಿ ಕುಣಿತ ಈ ಜಿಲ್ಲೆಯ ವಿಶಿಷ್ಟ ಜನಪದ ನೃತ್ಯಗಳು.**

ಕೃಷ್ಣಪಾರಿಜಾತಕ್ಕೂ ಹಾಗೂ ಬಾಗೆ ಪರಿಸರದ ನದಾಫರಿಗೂ ಇರುವ ಸಂಬಂಧ ತುಂಬಾ ಅನ್ಯೋನ್ಯವಾದುದು. ಜಮಖಂಡಿಯ ಅಪ್ಪಾಲಾಲ ನದಾಫ, ಸಿದ್ದಾಪುರದ ಬಾಬಾಲಾಲ ನದಾಫ, ಸವಸುದ್ದಿಯ ಮಲೀಕಸಾಬ ನದಾಫ, ಅವನ ಮಗ ಮೀರಾಸಾಬ ನದಾಫ ಹೀಗೆ ಈ ನದಾಫರು ಪಾರಿಜಾತಕ್ಕೆ ತಮ್ಮನ್ನು ಅರ್ಪಿಸಿಕೊಂಡಿದ್ದನ್ನು ವಿಶ್ಲೇಷಣೆಗೆ ಒಳಪಡಿಸಬೇಕಾಗುತ್ತದೆ. ನದಾಫರು ಪಿಂಜಾರರು. ಹಿಂಜುವುದು ಅವರ ಮೂಲ ವೃತ್ತಿ. ಹಿಂದೂಗಳಾಗಿದ್ದ ಅವರ ಮುತ್ತಾತರು ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡವರು. ಆದರೆ ಅವರಲ್ಲಿಯ ಹಿಂದೂಧರ್ಮದ ಶ್ರದ್ಧೆ ಅಳಿಸಿಹೋಗಿಲ್ಲ. ಸವಸುದ್ದಿಯ ಮಲೀಕಸಾಬ ನದಾಫ ಹೇಳುವುದು ಹೀಗೆ :

**ರಾಮ ರಹೀಮ್ ಕರೀಮ್ ಕೇಶವ**
**ಸಬಕೋ ಪಾಶ್ಶಾ ಏಕ್ ಹೈ ।**

[illegible]

[illegible]

[illegible]

[illegible]

**ಭಾಯೀ ಭಾಯೀ ಹೈ ಸಭೀ**

**ಹಿಂದೂ–ಮುಸಲ್ಮಾನ ಏಕ ಹೈ ॥**

ಹಿಂದೂ–ಮುಸ್ಲಿಂ ಬಾಂಧವ್ಯದ ಬಳ್ಳಿ ಕೃಷ್ಣಪಾರಿಜಾತಕ್ಕೆ ಸುತ್ತಿಕೊಂಡಿದೆ. ಇವರೆಲ್ಲ ಕೃಷ್ಣ ಪಾತ್ರವನ್ನೇ ಅಭಿನಯಿಸುತ್ತಿದ್ದರು. ಕೃಷ್ಣ ಭಗವಂತ, ಗೀತಾಚಾರ್ಯ. ಕೃಷ್ಣ ಪಾತ್ರದಲ್ಲಿ ತಾದ್ಯಾತ್ಮತೆ ಸಾಧಿಸುತ್ತಿದ್ದ ಬಾಗೆನಾಡಿನ ಈ ನದಾಫರು ಭಗವದ್ಗೀತೆಯನ್ನೇ ಹೇಳುತ್ತಿದ್ದರು. ಅವರಲ್ಲಿ ಹಿಂದೂ–ಮುಸ್ಲಿಂ ಭೇದವೇ ಇರಲಿಲ್ಲ. ಕೃಷ್ಣ ಪಾತ್ರದಲ್ಲಿ ಅವರು ರಂಗದ ಮೇಲೆ ಬಂದಾಗ ಜನ ಭಕ್ತಿಯಿಂದ ಕೈಮುಗಿಯುತ್ತಿದ್ದರು. ಈಗಲೂ ಮಲೀಕಸಾಬನಿಗೆ ಕೃಷ್ಣನಲ್ಲಿ ಅಪಾರಭಕ್ತಿ. ತಾನು ಮುಸಲ್ಮಾನನಾಗಿದ್ದು ಕೃಷ್ಣನನ್ನು ಭಜಿಸುವುದು ತಪ್ಪು ಎಂಬ ಕಲ್ಪನೆ ಇಲ್ಲ. ಆತ ಸೂಫಿಸಂತನಂತೆ ಮಾತನಾಡುತ್ತಾನೆ. ಆದರೆ ಇಂದು ಕೆಲವು ಮುಸಲ್ಮಾನರು 'ಇಸ್ಲಾಂ ಧರ್ಮದವರು ಹಿಂದೂ ದೇವತೆಗಳ ವೇಷ ಹಾಕುವುದು ತಪ್ಪು. ಅದು ಇಸ್ಲಾಂಗೆ ವಿರುದ್ಧವಾದುದೆಂದು' ವಾದಿಸುತ್ತಾರೆ. ಅದರಂತೆ ಕೆಲವು ಹಿಂದೂಗಳು ಕೃಷ್ಣ ಪಾತ್ರದಲ್ಲಿಯ ನದಾಫನನ್ನು ಗುಮಾನಿಯಿಂದ ನೋಡುತ್ತಾರೆ. ಆದರೆ ನದಾಫ ಕೃಷ್ಣನಾಗುತ್ತಾನೆ, ಕೃಷ್ಣ ನದಾಫನಾಗುತ್ತಾನೆ. ಕೃಷ್ಣ ಮತ್ತು ನದಾಫರಲ್ಲಿ ಅಷ್ಟು ಅನ್ಯೋನ್ಯತೆ. ಜನಪದ ಕಲಾವಿದರ ಈ ಸಾಮರಸ್ಯದ ನೆಲೆ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡಿಕೊಂಡು ಬಂದಿತ್ತು. ಹೆಚ್ಚು ಶಿಕ್ಷಣ ಪಡೆದಂತೆ ನಮ್ಮ ಅರಿವು ವಿಸ್ತಾರಗೊಳ್ಳದೇ ಅದಕ್ಕೆ ತದ್ವಿರುದ್ಧವಾಗಿ ಸಂಕುಚಿತಗೊಳ್ಳುತ್ತಿರುವುದು ಸಾಂಸ್ಕೃತಿಕ ವಿಪತ್ತು. ಅಲ್ಪಶಿಕ್ಷಿತರೋ ಅಥವಾ ಅಶಿಕ್ಷಿತರೋ ಆಗಿದ್ದ ಜನಪದ ಕಲಾವಿದರು ಎದುರಿಸುವ ಸಾಂಸ್ಕೃತಿಕ ಸ್ಥಿತ್ಯಂತರಗಳ ಸವಾಲುಗಳು ನಮ್ಮ ನಾಗರಿಕತೆಗೆ ಪಾಠವಾಗುತ್ತವೆ.

**********

[illegible]

[illegible]

[illegible]

[illegible]

# ಅಧ್ಯಾಯ : ೮ ಸಮಾರೋಪ

## ಅಧ್ಯಾಯ–೦೮

## ಉಪಸಂಹಾರ

ಜಾನಪದಲೋಕದಲ್ಲಿ ಕಲೆ–ಕಲಾವಿದರನ್ನು ಬದುಕಿನಿಂದ ಬೇರ್ಪಡಿಸಿ ನೋಡುವುದು ಸಾಧ್ಯವಿಲ್ಲ. ಆಧುನಿಕ ಸಂದರ್ಭದಲ್ಲಿ ಮನುಷ್ಯ ತನ್ನ ಅಸ್ಮಿತೆಗೆ ಕಲೆಗಳನ್ನು ಬಳಸಿಕೊಂಡು ಪ್ರತಿಷ್ಠೆಯೋ ಅಥವಾ ಜನಪ್ರಿಯತೆಗಾಗಿಯೋ ಹೆಣಗಾಡತೊಡಗಿದ್ದಾನೆ. "ತನ್ನದೇ ಆದ ರೂಪಬಂಧಗಳನ್ನು ವಿಶೇಷ ನಂಬಿಕೆ, ಶ್ರದ್ಧೆಗಳನ್ನು ಉಳಿಸಿಕೊಂಡು ಬಂದ ಜಾನಪದ ಸಮೂಹ ಮಾಧ್ಯಮಗಳಲ್ಲಿ ವ್ಯಕ್ತಿ–ವ್ಯಕ್ತಿಗಳ ಪರಸ್ಪರ ತಿಳುವಳಿಕೆಗಳೇ ಸಾಮಾಜಿಕವಾಗಿ ಸಮೂಹದ ತಿಳುವಳಿಕೆಯಾಗುತ್ತದೆ. ಭೌಗೋಳಿಕವಾಗಿ ನಿರ್ದಿಷ್ಟ ಮಿತಿಯೂ ಅದಕ್ಕಿರಬಹುದು. ಕಾಲ, ದೇಶ ಪರಿಸ್ಥಿತಿಗಳಿಗನುಗುಣವಾಗಿ ಭಾಷೆ, ಧರ್ಮ ಮೀರಿ ಅದು ಇನ್ನೊಂದು ಪ್ರದೇಶಕ್ಕೆ ಪ್ರಸರಿಸಲೂಬಹುದು. ಇಲ್ಲಿ ಕಲೆ–ಕಲಾವಿದ ಎಂಬ ಸೀಮಾ ರೇಖೆಗಳಿಗೆ ಆಸ್ಪದವಿಲ್ಲ."[೧] ಜನಪದ ಕಲಾವಿದರಿಗೆ ಕಲೆ ಒಂದು ಹವ್ಯಾಸ. ಕೆಲವರು ಕಲೆಯನ್ನೇ ವೃತ್ತಿಯಾಗಿಸಿಕೊಂಡವರು ಇರಬಹುದು. ಈ ವೃತ್ತಿಕಲಾವಿದರು ತಳವರ್ಗದವರು. ಬಾಗೆನಾಡಿನಲ್ಲಿ ಪ್ರಮುಖ ವೃತ್ತಿಕಲಾವಿದರಾದ ಬಜಂತ್ರಿ, ಜಾತಿಗಾರ, ಬಹುರೂಪಿ, ಹೆಳವರು ಮುಂತಾದವರು ದಲಿತ ಸಮುದಾಯಕ್ಕೋ, ಬುಡಕಟ್ಟುಗಳಿಗೋ ಸೇರಿದವರು. ಈಗ ಅವರು ಪರಂಪರಾಗತ ಕಲೆಗಳನ್ನು ತೊರೆದು ಆಧುನಿಕತೆಯತ್ತ

---

೧. ಡಾ.ಸೋಮಶಶೇಖರ ಇಮ್ರಾಪೂರ : ಸಮೂಹ ಸಂವಹನ ಮಾಧ್ಯಮಗಳು ಮತ್ತು ಜಾನಪದ (ಲೇ) : ಸಮೂಹ ಸಂವಹನ ಸಾಹಿತ್ಯ, ಪುಟ : ೯೪

[illegible]

[illegible]

[illegible]

[illegible]

[illegible]

[illegible]

ವಾಲುತ್ತಿರುವುದಕ್ಕೆ ಕಾರಣಗಳನ್ನು ವಿವರಿಸಿ ಈ ಮಹಾಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ. ಪ್ರಸ್ತುತ ಅಧ್ಯಯನ ಕ್ಷೇತ್ರಕಾರ್ಯ ಆಧಾರಿತವಾಗಿರುವುದರಿಂದ ಕಲಾವಿದದರ ವೈಯಕ್ತಿಕ ಸಂದರ್ಶನಗಳೇ ಇದರ ಮುಖ್ಯ ಆಕರಗಳು. ಹವ್ಯಾಸಿ ಕಲಾವಿದರು ತಮ್ಮ ದೈನಂದಿನ ಬದುಕಿನಲ್ಲಿ ಧರ್ಮಾಚರಣೆ, ಶ್ರಮಪರಿಹಾರ ಅಥವಾ ಮನರಂಜನೆಗಾಗಿ ಕಲೆಯ ಜಗತ್ತನ್ನು ಅಪ್ಪಿಕೊಂಡಿದ್ದಾರೆ. ಅವರಿಗೆ ಈ ಕಲೆಗಳು ಉಪಜೀವನವಲ್ಲ. ವೃತ್ತಿ ಕಲಾವಿದರಿಗೂ ಅವರ ಕಲೆಗಳು ಉಪಜೀವನವಾಗಿ ಉಳಿದಿಲ್ಲ. ಉಪಜೀವನದಲ್ಲಿ ನಿರ್ದಿಷ್ಟ ಆದಾಯವಿರಬೇಕು ಹಾಗೂ ದುಡಿಮೆಗೆ ಪ್ರತಿಫಲ ಕೇಳುವ ಹಕ್ಕಿರಬೇಕು. ಜನಪದ ವೃತ್ತಿಕಲಾವಿದರಿಗೆ ಇವೆರಡೂ ಇಲ್ಲ. ಆದ್ದರಿಂದ ಜಾತಿಗಾರರು ಸೋಗು ಹಾಕುವುದನ್ನು ನಿಲ್ಲಿಸಿದರು. ಬಹುರೂಪಿಗಳು ಬಣ್ಣದ ಲೋಕಕ್ಕೆ ವಿದಾಯ ಹೇಳಲು ಸಿದ್ದರಾಗಿರುವರು. ಆಧುನಿಕ ಶಿಕ್ಷಣ, ಸಾಮಾಜಿಕ ಚಳುವಳಿಗಳು, ಸಂವಿಧಾನದತ್ತ ಹಕ್ಕುಗಳು, ಸರಕಾರದ ಸೌಲಭ್ಯಗಳು, ಸ್ವಾಭಿಮಾನದ ಅರಿವು ಅವರನ್ನು ಕಲೆಗಳಿಂದ ಬೇರ್ಪಡಿಸುತ್ತಿವೆ. ವೃತ್ತಿ ಕಲಾವಿದರಿಗೆ ಕಲಾ ಪ್ರದರ್ಶನಗಳಿಂದ ಸಿಗುವುದು ಸಂಭಾವನೆ ಅಥವಾ ವೇತನವಲ್ಲ, ಭಿಕ್ಷೆ. ಭಿಕ್ಷೆ ಬೇಡಿ ಬದುಕಲು ಪೂರಕವಾಗುವ ಕಲೆಗಳನ್ನು ತೊರೆದು ಸ್ವಾವಲಂಬಿಗಳಾಗಿ ಬದುಕಲು ಹವಣಿಸುತ್ತಿರುವ ಕಲಾವಿದರ ಸಾಂಸ್ಕೃತಿಕ ಸಂಘರ್ಷವನ್ನು ಸ್ವಾಗತಿಸಬೇಕು. ಇಂದು ಸಾಂಸ್ಕೃತಿಕ ವಾತಾವರಣ ತಿಳಿಯಾಗಿ ಉಳಿದಿಲ್ಲ. ಅದು ಧರ್ಮ ಮತ್ತು ರಾಜಕೀಯ ಒತ್ತಡಗಳಿಂದ ಕಲುಷಿತಗೊಳ್ಳುತ್ತಿದೆ. ಡಾ. ಬಾಬಾಸಾಹೇಬ ಅಂಬೇಡ್ಕರರಂತಹ ವಿಚಾರವಾದಿಗಳು ಹುಟ್ಟು ಹಾಕಿದ ಸಮಾನತೆಯ ಹೋರಾಟ ಸಮಾಜದ ಎಲ್ಲ ನೆಲೆಗಳಲ್ಲಿಯೂ ವ್ಯಾಪಕವಾಗಿ ಬೆಳೆಯುತ್ತಿದೆ. ಗೌರವದ ಬದುಕಿಗಾಗಿ ತಳಸಮುದಾಯದವರು ಹಂಬಲಿಸುತ್ತಿದ್ದಾರೆ. ಅವರು ತಮ್ಮ ಕಲೆಗಳನ್ನು ಮುಂದುವರೆಸಿಕೊಂಡು ಹೋಗಬೇಕೆಂದು ಅಪೇಕ್ಷಿಸುವುದು ಭಂಡತನವಾದೀತು. ಈಗ ಪ್ರತಿಯೊಬ್ಬ ಮನುಷ್ಯ ಲೆಕ್ಕಾಚಾರಕ್ಕೆ ತನ್ನ ಬದುಕನ್ನು ಒಗ್ಗಿಸಿದ್ದಾನೆ. ಜಾನಪದ ಜಗತ್ತು ಭಾವನಾತ್ಮಕವಾದುದು. ಅಲ್ಲಿ ವೈಚಾರಿಕತೆಗಿಂತ ಭಾವಪರವಶತೆ ಮುಖ್ಯವಾಗಿತ್ತು. ಈಗ ಭಾವಪರವಶತೆಗಿಂತ ವೈಚಾರಿಕತೆ ಮುಖ್ಯವಾಗಿದೆ. ಬಾಗೆನಾಡಿನ ಶಹನಾಯಿ(ಬಜಂತ್ರಿ) ಕಲಾವಿದರು ಶಹನಾಯಿ ಬಿಟ್ಟು ಕ್ಲೆರೋನೆಟ್ ಹಿಡಿದಿದ್ದು ಒಂದು ಸಾಂಸ್ಕೃತಿಕ ಪ್ರತಿಭಟನೆ.

ಶಹನಾಯಿ ಅಥವಾ ಸನಾದಿ ಜನಪದ ವಾದ್ಯ. ಅದು ಭಾವಜೀವನದ ಬದುಕಿನೋಪಾಯ. ಕ್ಲೆರೋನೆಟ್ ಬದುಕಿನ ಹಕ್ಕೊತ್ತಾಯ. ಬ್ಯಾಂಡ್‌ಮೇಳದವರು ತಮ್ಮ ಕಲಾ ಪ್ರದರ್ಶನಕ್ಕೆ ಮೊದಲೇ ಸಂಭಾವನೆಯನ್ನು ನಿಗದಿಪಡಿಸುವುದೆಂದರೆ ವೇತನದ ಹಕ್ಕು ಮಂಡಿಸುವುದು ಎಂದರ್ಥ. ಕ್ಲೆರೋನೆಟ್ ಪಾಶ್ಚಾತ್ಯರ ವಾದ್ಯ. ನಮ್ಮ ಬಜಂತ್ರಿಯವರು ಅದನ್ನು ತಮ್ಮದನ್ನಾಗಿಸಿಕೊಂಡರು. ಜನಪದ ಕಲೆಗಳ ಸ್ಥಿತಿ ಸ್ಥಾಪಕತ್ವ ಗುಣಕ್ಕೆ ಇದು ನಿದರ್ಶನ. ಕಲೆಗಳು ಬದುಕುವುದೇ ಈ ಪರಿವರ್ತನೆಗಳಿಂದಾಗಿ. ಕ್ಲೆರೋನೆಟ್ ಬಂದ ಮೇಲೆ ಸನಾದಿ ಮಾಯವಾಗಲಿಲ್ಲ. ಅದು ಕರಡಿ ಮಜಲು, ಹಲಗೆಮೇಳ, ಕಣಿ ಮೇಳ ಮುಂತಾದ ಹೊಸ ಪರಿಸರಗಳನ್ನು ಹುಡುಕಿ ಹೊಂದಿಕೊಂಡಿತು. ಈ ಸಂಘರ್ಷದಲ್ಲಿಯೇ ಜನಪದ ಕಲೆ ಹಾಗೂ ಕಲಾವಿದರು ಬದುಕಬೇಕಾಗಿದೆ.

ಬಾಗೆನಾಡಿನ ಕಲಾವಿದರು ಮಾತ್ರವಲ್ಲ; ಕರ್ನಾಟಕದ ಜನಪದ ಕಲಾವಿದರು ಭಯಂಕರ ಆತಂಕದ ಸ್ಥಿತಿಯಲ್ಲಿದ್ದಾರೆ. ಅವರ ಆತಂಕಕ್ಕೆ ಮುಖ್ಯ ಕಾರಣ ವಿದ್ಯುನ್ಮಾನ ಸಮೂಹ ಸಂವಹನ ಮಾಧ್ಯಮಗಳು. 'ವಿಶ್ವದಲ್ಲಿ ೫ ಕೋಟಿ ಜನರನ್ನು ತಲುಪಲು ರೇಡಿಯೋ ಮಾಧ್ಯಮಕ್ಕೆ ೩೮ ವರ್ಷಗಳು, ಟೆಲಿವಿಜನ್ ಮಾಧ್ಯಮಕ್ಕೆ ೧೩ ವರ್ಷಗಳು ಬೇಕಾಯಿತು. ಆದರೆ ಐದೇ ವರ್ಷಗಳಲ್ಲಿ ಐದು ಕೋಟಿ ಜನರಿಗೆ ಇಂಟರನೆಟ್ ಸೌಲಭ್ಯ ಲಭ್ಯವಿತ್ತು.' ಹೊಸ ಮಾಧ್ಯಮಗಳ ಪ್ರಸಾರ ತುಂಬ ವೇಗವಾಗಿದೆ. ದೂರದರ್ಶನ, ಚಲನಚಿತ್ರ, ಎಫ್.ಎಂ.ರೇಡಿಯೋ, ಇಂಟರನೆಟ್ ಮೊದಲಾದ ಆಧುನಿಕ ಮಾಧ್ಯಮಗಳು ಜನಪದ ಕಲೆಕಲಾವಿದರಿಂದ ಜನಸಾಮಾನ್ಯರ ಮನಸ್ಸನ್ನು ತಮ್ಮತ್ತ ಸೆಳೆದಿವೆ. ಇದರಿಂದಾಗಿ ಜನಪದ ಕಲಾವಿದರಿಗೆ ತಮ್ಮ ಕಲೆ ತಮ್ಮೊಂದಿಗೆ ನಿಂತು ಹೋಗುವ ಭಯ ಕಾಡುತ್ತಿದೆ. ಎಲ್ಲ ಕಲಾವಿದರಲ್ಲಿಯೂ ಈ ಆತಂಕ ಇದೇ ಎಂದಲ್ಲ. ಕೆಲವರಿಗೆ ತಮ್ಮ ಕಲೆ ಮುಂದುವರೆಯುವುದೆಂಬ ಅಚಲ ನಂಬಿಗೆ. ಅವರ ಊಹೆಯೇ ಬೇರೆ. ರೇಡಿಯೋ, ಟಿವ್ಹಿ ಮೊದಲಾದವು ಜನಸಾಮಾನ್ಯರಿಗೆ ನೇರವಾಗಿ ಮುಟ್ಟುವ, ಅವರ ಮನ ತಟ್ಟುವ ಮಾಧ್ಯಮಗಳು. ಜನಪದ ಕಲೆಗಳು ಜನಸಾಮಾನ್ಯರೊಂದಿಗೆ ಮುಖಾ-ಮುಖಿಯಾಗುವ ಮಾಧ್ಯಮಗಳು. ಇಂದಿಲ್ಲಾ ನಾಳೆ ಇವೆಲ್ಲ ಕಾಲ ಪ್ರವಾಹದಲ್ಲಿ

ಕೊಚ್ಚಿಕೊಂಡು ಹೋಗಿ ಜನಪದ ಕಲೆಗಳು ಉಳಿಯುತ್ತವೆ ಎಂಬ ಭರವಸೆ ಕೆಲವರದು. ಕಲಾವಿದರಲ್ಲಿ ಏಕಾಭಿಪ್ರಾಯಯವಿಲ್ಲ. ಇದುವೇ ಜನಪದ ಕಲೆಗಳ ವೈವಿಧ್ಯತೆ. ಜನಪದ ಕಲಾವಿದರು ತಮ್ಮ ಕಲೆಯನ್ನು ಕಾಲಕ್ಕೆ ತಕ್ಕಂತೆ ಪ್ರಸ್ತುತಗೊಳಿಸಲು ಅನೇಕ ಮಾರ್ಪಾಟುಗಳನ್ನು ಮಾಡುತ್ತಾರೆ. ಆಧುನಿಕತೆಗೆ ತಮ್ಮ ಕಲೆಗಳನ್ನು ಒಗ್ಗಿಸುವ ಪ್ರಯತ್ನವದು. ಹೊಸ ವಾದ್ಯಗಳ ಸೇರ್ಪಡೆ, ಸೊಲ್ಲುಗಳ ಬದಲಾವಣೆ, ನೂತನ ಸಂಯೋಜನೆ ಮೊದಲಾದ ಹಲವು ಮಾರ್ಪಾಟುಗಳನ್ನು ಮಾಡಿಕೊಂಡು ಅದನ್ನು ಮುಂದುವರೆಸುವ ಹಂಬಲ ಕಲಾವಿದರದು. ಈ ಸಾಂಸ್ಕೃತಿಕ ಸ್ಥಿತ್ಯಂತರಗಳ ಬಗ್ಗೆ ೭ನೆಯ ಅಧ್ಯಾಯದಲ್ಲಿ ವಿಸ್ತೃತವಾಗಿ ಚರ್ಚಿಸಿ, ಅದರ ಫಲಿತಗಳನ್ನು ನೀಡಲಾಗಿದೆ.

ಕಲೆ ಮತ್ತು ಕಲಾವಿದರ ನಡುವೆ ಇರುವ ಸಂಬಂಧವೇ ನೆಲ ಮತ್ತು ಕಲೆಯ ನಡುವೆ ಇದೆ. ಒಂದು ಪ್ರದೇಶದ ಕಲೆಗಳ ಸ್ವರೂಪವನ್ನು ಆ ಪ್ರದೇಶದ ಭೂಗೋಳ, ಇತಿಹಾಸ, ಧರ್ಮ, ಸಂಸ್ಕೃತಿಗಳು ನಿರ್ಧರಿಸುತ್ತವೆ. ಸವದತ್ತಿ ಎಲ್ಲಮ್ಮದೇವಿಯು ಬಾಗೆನಾಡಿಗೆ ಹತ್ತಿರವಾದದ್ದರಿಂದ ಇಲ್ಲಿ ಚೌಡಿಕೆ ಕಲಾವಿದೆಯರ ಪರಂಪರೆ ಬೆಳೆಯಿತು. ದೇವದಾಸಿಯರಾದ ಇವರು ತಮ್ಮ ಪರಂಪರೆಯನ್ನು ಮುಂದುವರೆಸಲು ಇಚ್ಛಿಸುತ್ತಿಲ್ಲವೆಂದೂ ಅದು ತಮ್ಮೊಂದಿಗೆ ಕೊನೆಗೊಳ್ಳಬೇಕೆಂದೂ ಹೇಳುತ್ತಿರುವುದನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ದೈವಾರಾಧನಾ ಕೇಂದ್ರಿತ ಎಲ್ಲ ಕಲೆಗಳೂ ಮುಂದುವರೆಯುತ್ತವೆ ಎಂದು ಹೇಳುವುದು ಸಮಂಜಸವಲ್ಲ. ಕಾಲಕ್ಕೆ ತಕ್ಕಂತೆ ಕಲಾವಿದರ ಮನೋಸ್ಥಿತಿ ಬದಲಾಗುತ್ತಾ ಹೋಗುತ್ತದೆ. ಕಲಾವಿದರ ಮನೋಸ್ಥಿತಿಯ ಮೇಲೆ ಕಲೆಗಳ ಅಳಿವು-ಉಳಿವು ಅವಲಂಬಿಸಿರುತ್ತವೆ. ಚೌಡಿಕೆ ಕಲಾವಿದರ ಪರಂಪರೆ ನಿಂತು ಹೋಗುತ್ತದೆ. ಅದಕ್ಕೆ ವಿಷಾದಿಸಬೇಕಿಲ್ಲ. ಈಗಾಗಲೇ ಈ ನಾಡಿನಲ್ಲಿ ಜೋಗತಿ ಕುಣಿತ ನಿಂತುಹೋಗಿದೆ. ನಾವು ಚೌಡಿಕೆ ಕಲೆ ಹಾಗೂ ಕಲಾವಿದರ ಪರಂಪರೆಯನ್ನು ಮುಂದುವರೆಸಲು ಯೋಚಿಸಿದರೆ ಚೌಡಿಕೆಗೂ ದೇವದಾಸಿಗೂ ಅಂಟಿದ ನಂಟು ತೊಡೆದು ಹಾಕಿ ಹೊಸ ಸಂಬಂಧ ಬೆಳೆಸಲು ಪ್ರಯತ್ನಿಸಬೇಕು. ಈಗ ಬಾಗೆನಾಡಿನಲ್ಲಿರುವ ಚೌಡಿಕೆ ಕಲಾವಿದೆಯರೆಲ್ಲ ೫೦ ವರ್ಷ ದಾಟಿದವರು. ಬಾಗೆನಾಡಿನ ಜನಪದ ಕಲಾವಿದರ ಅಧ್ಯಯನದಿಂದ ತಿಳಿದುಬರುವ

[illegible]

[illegible]

ಮತ್ತೊಂದು ಮಹತ್ವದ ಸಂಗತಿಯೆಂದರೆ ಬಹುಪಾಲು ಕಲಾವಿದರು ತಳವರ್ಗದವರು, ಕೆಲವರು ಮಧ್ಯಮ ವರ್ಗದವರು, ಬೆರಳೆಣಿಕೆಯಷ್ಟು ಮೇಲ್ವರ್ಗದವರು. ಅವರೆಲ್ಲ ಕಡಿಮೆ ಓದಿದವರು. ಬಡವರು ಇಲ್ಲವೇ ಸ್ಥಿತಿವಂತರು. ಆದರೆ ಶ್ರೀಮಂತರಲ್ಲ. ಶ್ರೀಮಂತರು ಉನ್ನತ ಶಿಕ್ಷಣ ಪಡೆದವರು ಅಥವಾ ಪ್ರತಿಷ್ಠಿತರು ಜನಪದ ಕಲಾವಿದರೆನಿಸಿಕೊಳ್ಳಲು ಇಷ್ಟಪಡುತ್ತಿಲ್ಲ. ಬಾಗೆನಾಡಿನಲ್ಲಿ ಈ ಮಾತಿಗೆ ಅಪವಾದಗಳೆಂಬಂತೆ ಇಬ್ಬರು ಜನಪದ ಕಲಾವಿದರಿದ್ದಾರೆ. ಒಬ್ಬ ಮಾಜಿ ಶಾಸಕ, ಮತ್ತೊಬ್ಬ ಜಿಲ್ಲಾ ಪಂಚಾಯತ ಮಾಜಿ ಸದಸ್ಯ. ಮಾಜಿ ಶಾಸಕ ದಲಿತ ವರ್ಗಕ್ಕೆ ಸೇರಿದವನು. ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಹಾಲುಮತ ವರ್ಗಕ್ಕೆ ಸೇರಿದವನು. ಈ ಕಾರಣಗಳಿಂದಲೇ ಅವರು ಕಲೆಯ ಮೂಲಕ ತಮ್ಮನ್ನು ಗೌರವಿಸಿಕೊಳ್ಳುತ್ತಿರುವುದು. ಜನಪದ ಕಲಾವಿದರು ಜನಸಾಮಾನ್ಯರು. ಒಬ್ಬ ಚಿತ್ರಕಲಾವಿದ ತನ್ನ ಕಲೆಯ ಅಸ್ಮಿತೆಯ ಮೂಲಕ ರಾಜಕಾರಣಕ್ಕಿಳಿಯುತ್ತಾನೆ. ಆದರೆ ಜನಪದ ಕಲಾವಿದನೊಬ್ಬ ತನ್ನ ಕಲೆಯ ಅಸ್ಮಿತೆಯನ್ನು ರಾಜಕೀಯಕ್ಕೆ ಬಳಸುವ ಅವಕಾಶವೇ ಸೃಷ್ಟಿಯಾಗುತ್ತಿಲ್ಲವೆಂಬುದು ಗಮನಿಸಬೇಕು.

ಇತ್ತಿತ್ತಲಾಗಿ ಕಲಾವಿದರ ಸಂಘಟನೆಗಳು ಹುಟ್ಟಿಕೊಳ್ಳುವುದಕ್ಕೆ ಸಮಾಜದ ವಿಘಟನೆಗಳು ಕಾರಣವೆನಿಸುತ್ತವೆ. ಬಹುಸಂಖ್ಯಾತರಿಗೆ ಸಂಘಟನೆಗಳ ಅವಶ್ಯಕತೆಯಿರುವುದಿಲ್ಲ. ಈ ಸಂಘಟನೆಗಳು ಸಮಾಜಮುಖಿಯಾಗಿರದೇ ಸರಕಾರದತ್ತ ಮುಖಮಾಡಿರುವುದು ಮತ್ತೊಂದು ಆತಂಕ. ಸರಕಾರ ನೀಡುವ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳುವುದು ತಪ್ಪಲ್ಲ. ಆದರೆ ಸರಕಾರದ ಸೌಲಭ್ಯಗಳನ್ನು ಪಡೆಯಲೆಂದೇ ದಾಖಲೆಗಳನ್ನು ಸೃಷ್ಟಿಸಿ ಲಾಬಿ ಮಾಡುವುದು ತಪ್ಪು. ಬಾಗೆನಾಡಿನಲ್ಲಿ ೫೫ ಕಲಾವಿದರು ರಾಜ್ಯ/ಕೇಂದ್ರ ಸರಕಾರಗಳ ಮಾಶಾಸನ ಪಡೆಯುತ್ತಿದ್ದಾರೆ. ಇವರಲ್ಲಿ ಕುಸ್ತಿಪಟುಗಳ ಸಂಖ್ಯೆ ೬ ಚೌಡಿಕೆ, ಕರ್ಬಲ್, ಲಾವಣಿ ಕಲಾವಿದರಲ್ಲಿ ಯಾರೊಬ್ಬರೂ ಮಾಶಾಸನ ಪಡೆಯುತ್ತಿಲ್ಲ. ಇಲ್ಲಿಯ ಕಲಾವಿದರಲ್ಲಿಯೂ ಸಂಘಟಿತ ಮತ್ತು ಅಸಂಘಟಿತ ವಲಯಗಳು ನಿರ್ಮಾಣಗೊಂಡಂತಿದೆ. ಸರಕಾರ ಅರ್ಹ ಕಲಾವಿದರನ್ನು ಗುರುತಿಸಿ ಮಾಶಾಸನ ನೀಡುವ ಪಾರದರ್ಶಕ ಪದ್ಧತಿಯನ್ನು ಜಾರಿಗೊಳಿಸಬೇಕು. ಅದಕ್ಕೆ ಹೊಸ ಮಾನದಂಡಗಳನ್ನು ರೂಪಿಸಬೇಕಿದೆ. ಜನಪದ ಕಲಾವಿದರು ಸರಕಾರಿ

[illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible]

ಕಥನಗೀತೆಗಳಿಗಿಂತ ಅನುಭವದ ಹಾಡುಗಳಿಗೆ ಒತ್ತು ನೀಡುತ್ತಿದ್ದಾರೆ. ಹೊಸ ಡೊಳ್ಳು, ಹೊಸ ತಾಳ, ಹೊಸ ಮೇಳ ಸಂಯೋಜನೆ ಹೀಗೆ ಹೊಸತುಗಳನ್ನು ಸೇರಿಸುತ್ತಾ ಮೇಳಗಳಿಗೆ ಮೆರಗು ನೀಡಿ ಪ್ರಸ್ತುತಗೊಳಿಸುತ್ತಿದ್ದರೂ ದಟ್ಟಿಕುಣಿತ ನಿಲುಗಡೆ ಹಂತದಲ್ಲಿದೆ. ಬಾಗೆನಾಡಿನಲ್ಲಿ ಎರಡು ದಟ್ಟಿಕುಣಿತದ ಮೇಳಗಳಿವೆ. ದಟ್ಟಿಕುಣಿತ ಬೆಳಗಾವಿ ಜಿಲ್ಲೆಯ ಸೃಷ್ಟಿ. ಹೀಗಿದ್ದರೂ ದಟ್ಟಿಕುಣಿತ ಉಳಿಯುತ್ತಿಲ್ಲ. ಡೊಳ್ಳಿನ ಹಾಡುಗಳ ಮಾರ್ಗ ಸಂಪ್ರದಾಯದ ಹಾಡಿಕೆ ಉಳಿಯುತ್ತಿಲ್ಲ.

ಬಾಗೆನಾಡಿನ ಭಜನಾ ಮೇಳಗಳಲ್ಲಿ ಶಿವಭಜನಾ ಮೇಳಗಳು ಹೆಚ್ಚಿನ ಸಂಖ್ಯೆಯಲ್ಲಿದ್ದರೂ ಹೆಚ್ಚು ನಿಷ್ಕ್ರೀಯವಾಗಿವೆ. ಇದರಲ್ಲಿ ಸಂಘಟನೆಯ ಕೊರತೆ ಎದ್ದು ಕಾಣುತ್ತಿದೆ. ಕೇಳುಗ ಸಮುದಾಯ ಕರಗಿದೆ. ಶಿವಾಲಯ, ಮಠ, ಅನುಭಾವ ಗೋಷ್ಠಿಗಳಲ್ಲಿ ಮಾತ್ರವಲ್ಲ. ಪುಣ್ಯಾರಾಧನೆ ಶವಸಂಸ್ಕಾರದಂತಹ ಸಂದರ್ಭಗಳಲ್ಲಿಯೂ ಭಜನಾ ಪದಗಳನ್ನು ಹಾಡುವ ಪದ್ಧತಿ ಇತ್ತು. ಈಗ ಅದರೊಳಗಿನ ಸತ್ವವೆಲ್ಲ ಉಡುಗಿ ಅಸ್ಥಿಪಂಜರದಂತೆ ಉಳಿದುಕೊಂಡಿದೆ. ಒಂದು ಕಾಲದಲ್ಲಿ ಇಲ್ಲಿ ೭ಜಿನಭಜನಾ ಮೇಳಗಳಿದ್ದವು. ಈಗ ಒಂದೇ ಒಂದು ಜಿನಭಜನಾ ಮೇಳ ಉಳಿದಿದೆ. ಇದಕ್ಕೆ ವ್ಯತಿರಿಕ್ತವಾಗಿ ಹರಿಭಜನೆ ಕಲಾವಿದರ ಸಂಖ್ಯೆ ಹೆಚ್ಚುತ್ತಿದೆ. ಇದಕ್ಕೆ ಸಮೀಪದ ಮಹಾರಾಷ್ಟ್ರದಲ್ಲಿರುವ ವಿಠ್ಠಲ ಸಂಪ್ರದಾಯದ ದಟ್ಟ ಪ್ರಭಾವವೇ ಕಾರಣ. ಅವರು ಮರಾಠಿ ಸಂತರ ಅಭಂಗಗಳನ್ನು ಹಾಡುವರು. ವಿಚಿತ್ರವೆಂದರೆ ಇವರಿಗೆ ಮರಾಠಿ ತಿಳಿಯುವುದಿಲ್ಲ, ಓದಲೂ ಬರುವುದಿಲ್ಲ. ಆದರೆ ಮರಾಠಿ ಅಭಂಗಗಳನ್ನು ಕನ್ನಡದಲ್ಲಿ ಬರೆದುಕೊಂಡು ಹಾಡುತ್ತಾರೆ.

ಭಜನೆಗಳಲ್ಲಿಯ ತತ್ವಪದಗಳು ಜನಸಾಮಾನ್ಯರ ಬದುಕಿನಲ್ಲಿಯ ತಾಪತ್ರಯಗಳನ್ನು ಮರೆಸುತ್ತಿದ್ದವು. ಅವು ಜನಸಮುದಾಯಗಳ ಸಂಗಾತಿ. ಅನಾಥಸ್ಥಿತಿಯನ್ನು ಅನುಭವಿಸುವ ವೃದ್ಧರು ಭಜನೆ ಕೇಳಲು ಬರುತ್ತಿದ್ದರು. ತತ್ವಪದಗಳು ಸಾಮಾಜಿಕ ಬದಲಾವಣೆಗೆ ಪ್ರೇರಕವಾಗುತ್ತಿದ್ದವು. ದೂರದರ್ಶನ ಬಂದ ಮೇಲೆ ಮಾನವನ ವಿರಾಮ ಏಕಸಾಮ್ಯಕ್ಕೆ ಒಳಗಾಯಿತು. ಇಲ್ಲಿಯ ಕಲಾವಿದರು ಹೇಳುವಂತೆ ಕಲಾವಿದರೇ ಕಲಾವಿದರ ಹಾಡುಗಳನ್ನು ಕೇಳುವ ಸ್ಥಿತಿ ನಿರ್ಮಾಣವಾಯಿತು.

ಡೊಳ್ಳು, ಭಜನಾ ಕಲಾವಿದರ ನಂತರದ ಸ್ಥಾನ ಇಲ್ಲಿಯ ಕರ್ಬಲ್ ಹಾಡುಗಾರರದು. ಸೂಫಿ ಸಂತರು ಹಿಂದೂ-ಮುಸ್ಲಿಂ ಸಾಮರಸ್ಯಕ್ಕೆ ಅಂದು ಶ್ರಮಿಸಿದಂತೆ ಇಂದು ಕರ್ಬಲ್ ಮೇಳಗಳು ಆ ಸಾಮರಸ್ಯವನ್ನು ಮುಂದುವರೆಸಲು ಯತ್ನಿಸುತ್ತಿವೆ. ಈ ಕಲಾವಿದರು ಯಾವುದೇ ಒಂದು ಕೋಮು, ಜಾತಿಗೆ ಸೇರಿದವರಲ್ಲ. ಡೊಳ್ಳಿನ ಹಾಡುಗಾರ ಮೊಹರಂದಲ್ಲಿ ಕರ್ಬಲ್ ಹಾಡುತ್ತಾನೆ. ದಲಿತರಿಂದಾದಿಯಾಗಿ ಎಲ್ಲ ಜಾತಿಗಳ ಕರ್ಬಲ್ ಕಲಾವಿದರು ಬಾಗೆನಾಡಿನಲ್ಲಿದ್ದಾರೆ. ಧರ್ಮ ಸಾಮರಸ್ಯದಂತೆ ಈ ಕಲಾವಿದರು ಭಾಷಾ ಸಾಮರಸ್ಯವನ್ನು ಹೊಸೆಯುವುದು ಗಮನಿಸಬೇಕಾಗುತ್ತದೆ. ಬಾಗೆನಾಡು ಮಹಾರಾಷ್ಟ್ರದ ಗಡಿಗೆ ಹೊಂದಿಕೊಂಡಿರುವುದರಿಂದ ಚಿಂಚಲಿ, ಸುಟ್ಟಟ್ಟಿ, ಜಲಾಲಪುರ, ರಾಯಬಾಗ, ಬಿರಡಿ, ದಿಗ್ಗೇವಾಡಿ ಮೊದಲಾದ ಗ್ರಾಮಗಳಲ್ಲಿ ಮರಾಠಿಯ ನೆರಳಿದೆ. ಕರ್ಬಲ್ ಕಲಾವಿದರು ಕನ್ನಡ, ಮರಾಠಿ ಹಾಗೂ ಉರ್ದುಭಾಷೆಗಳನ್ನು ಒಟ್ಟಾಗಿ ಸೇರಿಸಿ ಹಾಡು ಹಾಡುವರು. ಇತ್ತೀಚಿಗೆ ಕರ್ಬಲ್ ಮೇಳಗಳ ಪ್ರಾಬಲ್ಯ ಹೆಚ್ಚುತ್ತಿದೆ. ಹೀಗಾಗಿ ಕರ್ಬಲ್ ಕಲಾವಿದರ ಸಂಖ್ಯೆಯೂ ಬೆಳೆಯುತ್ತಿದೆ.

ಕರಡಿ ಕಲಾವಿದ ಶಂಕ್ರೆಪ್ಪ ಪಾಟೀಲ, ಕಣಿ ಕಲಾವಿದ ವಿಷ್ಣು ಕಂಚಕಾರ, ರಂಗಕಲಾವಿದ ಮಲೀಕಸಾಬ ನದಾಫ, ಬಾಬಾಲಾಲ ನದಾಫ, ಸದಾಶಿವ ಗದಿಗ್ಯೆಯ್ಯಗೋಳ, ಮೀರಾಸಾಬ ನದಾಫ, ರಂಗಕಲಾವಿದೆ ಮಾಲಾಬಾಯಿ ಸಾಂಬ್ರೇಕರ, ಸಂಪ್ರದಾನಿವಾದಕ ಶ್ರೀಶೈಲ ಕಾಂಬಳೆ, ಡೊಳ್ಳಿನ ಹಾಡುಗಾರ ಯಲ್ಪಾರಟ್ಟಿಯ ಸಿದ್ರಾಮಪ್ಪ ಲಾಳಿ, ಸವಸುದ್ದಿಯ ಭರಮಪ್ಪ ಪೂಜೇರಿ, ಲಾವಣಿ ಕಲಾವಿದೆ ಮಹಾದೇವಿ ದೇವರವರ, ಲಾವಣಿ ಹಾಡುಗಾರ ವೀರಭದ್ರಪ್ಪ ತೇರದಾಳ, ಜಿನಭಜನಾ ಕಲಾವಿದ ಸಿದ್ದಪ್ಪ ನಾಗನೂರ ಬಾಗೆನಾಡಿನ ಶ್ರೇಷ್ಠ ಜನಪದ ಕಲಾವಿದರು. ಹಾರೂಗೇರಿಯ ಸಂಜಯ ಶಿರಹಟ್ಟಿ ಹಾಗೂ ಶ್ರೀಶೈಲ ಯಲಶೆಟ್ಟಿ ಪ್ರಸಿದ್ಧ ಕುಸ್ತಿಪಟುಗಳು. ಪ್ರಸ್ತುತ ಮಹಾಪ್ರಬಂಧದಲ್ಲಿ ಇವರ ಕಲಾಸಾಧನೆಗಳನ್ನು ದಾಖಲಿಸಿ ವೈಶಿಷ್ಟ್ಯಗಳನ್ನು ವಿವರಿಸಲಾಗಿದೆ. ಈ ಪ್ರಬಂಧವು ಎರಡು ಆಯಾಮಗಳನ್ನು ಹೊಂದಿದ್ದು ಮೊದಲ ಭಾಗ ದಾಖಲೀಕರಣವಾಗಿದ್ದರೆ ಎರಡನೇ ಭಾಗ ವಿಶ್ಲೇಷಣೆ ಮತ್ತು ವ್ಯಾಖ್ಯಾನ ಪ್ರಧಾನವಾಗಿದೆ. ಮರೆಯಾಗುತ್ತಿರುವ ಜನಪದ

[illegible]

ಕಲೆ–ಕಲಾವಿದರ ಕುರಿತು ಅಧ್ಯಯನ ಮಾಡುವ ದಿಸೆಯಲ್ಲಿ ಈ ನಾಡಿನ ಒಟ್ಟು ಜನಪದ ಪರಂಪರೆಯನ್ನು ಕಟ್ಟಿಕೊಡುವುದಾಗಿದೆ.

ಕಾಲು ಶತಮಾನದ ಹಿಂದೆ ಈ ನಾಡಿನ ತುಂಬ ಲಾವಣಿ ಮೇಳಗಳಿದ್ದವು. ಮಹಾರಾಷ್ಟ್ರದ ಪ್ರಭಾವದಿಂದಾಗಿ ಲಾವಣಿಕಾರರು, ಹಾಡುಗಾರರು ಹೆಚ್ಚಾದರು. ಅಲ್ಲಿಯ ಸವಾಲ್ ಜವಾಬ ಇಲ್ಲಿ ಹರದೇಶಿ–ನಾಗೇಶಿಯಾಯಿತು. ಮರಾಠಿಯ ತಮಾಷಾದ ಪ್ರಭಾವದಿಂದ ಹೆಣ್ಣುಮಕ್ಕಳು ಡಪ್ಪು ಹಿಡಿಯುವಂತಾಯಿತು. ಆ ಹೆಣ್ಣು ಮಕ್ಕಳು ಕೆಳವರ್ಗದವರು. ಲಾವಣಿ ಹಾಡುಗಾರರು ದೇವದಾಸಿಯನ್ನು ಲಾವಣಿ ಕಲಾವಿದೆಯಾಗಿ ರೂಪಿಸಿ ಬಳಸಿಕೊಂಡರು. ಈಗಲೂ ಹಂದಿಗುಂದದ ಮಹಾದೇವಿ ದೇವರವರ ದೇವದಾಸಿ. ತಂದೆಯೊಂದಿಗೆ ಡಪ್ಪು ಬಡಿದು ಹಾಡುತ್ತಾಳೆ. ಅವಳ ಹಾಡುಗಳ ಹಿಂದಿನ ಬದುಕಿನ ನೋವು ಕಣ್ಣುಗಳಲ್ಲಿ ಮಡುಗಟ್ಟಿದೆ. ಒಬ್ಬೊಬ್ಬ ಕಲಾವಿದರದು ಒಂದೊಂದು ಕಥೆ. ೧೦ ವರ್ಷಗಳ ಹಿಂದೆ ಇಲ್ಲಿ ೭ ಕೃಷ್ಣಪಾರಿಜಾತದ ಮೇಳಗಳಿದ್ದವು. ಈಗ ಕೇವಲ ೩ ಬದುಕಿವೆ. ರಾಜ್ಯೋತ್ಸವ ಪ್ರಶಸ್ತಿ ಪಡೆದ ಹಿಡಕಲ್ಲದ ಮಾಲಾ ಸಾಂಬ್ರೇಕರ ಪಾರಿಜಾತ ಪರಂಪರೆಯ ಅಭಿಜಾತ ಕಲಾವಿದೆ. ಅವಳು ಹಿಂದುಳಿದ ವರ್ಗಕ್ಕೆ ಸೇರಿದವಳು. ದೇವದಾಸಿ. ಬಾಗೆನಾಡಿನ ಕಲಾವಿದರ ಕಲೆಗಳನ್ನು ಪರಿಚಯಿಸುವುದರೊಂದಿಗೆ ಆ ಕಲಾವಿದರ ಬದುಕಿನೊಳಗಿನ ತಲ್ಲಣಗಳ ವಿಶ್ಲೇಷಣೆ ಇಲ್ಲಿದೆ.

ಬಾಗೆನಾಡಿನ ಜಾನಪದ ಪರಂಪರೆಯನ್ನು ಅಧ್ಯಯನಕ್ಕೆ ಎತ್ತಿಕೊಳ್ಳುವ ಅಗತ್ಯವಿದೆ. ಒಂದೊಂದು ಕಲಾಪ್ರಕಾರದ ಕಲಾವಿದರನ್ನು ಆಯ್ದುಕೊಂಡು ಅಧ್ಯಯನ ಮಾಡಿದರೆ ರೋಚಕ ಸಂಗತಿಗಳು ತಿಳಿಯುತ್ತವೆ. ಒಬ್ಬ ಶ್ರೇಷ್ಠ ಕಲಾವಿದನ ಹಿಂದೆ ಒಂದು ಕಲಾಪರಂಪರೆಯ ಇತಿಹಾಸವಿರುತ್ತದೆ. ಒಂದು ಪರಂಪರೆ ಒಬ್ಬ ಶ್ರೇಷ್ಠ ಕಲಾವಿದನನ್ನು ಪರಿಚಯಿಸುತ್ತದೆ. ಬಾಗೆನಾಡಿನ ಯಾವುದೇ ಪ್ರಸಿದ್ಧ ಕಲಾವಿದನನ್ನು ಕೇಳಿದಾಗ ತನ್ನ ಕಲೆ ತನಗೆ ಪರಂಪರೆಯಿಂದ ಬಂದ ಬಳುವಳಿ ಎನ್ನುತ್ತಾನೆ. ಜನಪದ ಕಲಾವಿದರಿಗೆ ಕಲೆ ಒಂದು ಆಸ್ತಿ. ಅದನ್ನು ತಲೆ–ತಲಾಂತರಗಳಿಂದ ಉಳಿಸಿಕೊಂಡು ಬಂದ ಅದನ್ನು ಮುಂದಿನ ತಲೆಗಳಿಗೆ ಸಾಗಿಸುವ ಅದಮ್ಯ ಹಂಬಲ. ಆಧುನಿಕತೆಯ ಸದ್ದು–ಗದ್ದಲಗಳ ನಡುವೆಯೂ ಸದ್ದಿಲ್ಲದೇ ಈ ನೆಲದ ಸತ್ವವನ್ನು ಪ್ರತಿಬಿಂಬಿಸುವ

[illegible]

ಜನಪದ ಕಲಾವಿದರು ಈ ನೆಲದ ಸಾಂಸ್ಕೃತಿಕ ಪ್ರತಿನಿಧಿಗಳು. ಇಲ್ಲಿಯ ಶ್ರೇಷ್ಠ ಕಲಾವಿದರ ಕುರಿತು ಪ್ರತ್ಯೇಕ ಅಧ್ಯಯನ ಕೈಕೊಳ್ಳಬಹುದು.

ಈ ಅಧ್ಯಯನ ವಿಸ್ತೃತವ್ಯಾಪ್ತಿಯನ್ನು ಹೊಂದಿರುವುದರಿಂದ ಪ್ರತಿಯೊಬ್ಬ ಕಲಾವಿದನ ಕಲೆಗೆ ಹೆಚ್ಚು ಒತ್ತುಕೊಟ್ಟು ನೋಡುವುದು ಸಾಧ್ಯವಾಗಿಲ್ಲ. ಕ್ಷೇತ್ರ ಕಾರ್ಯವೇ ಅಧ್ಯಯನದ ಜೀವಾಳವಾಗಿರುವುದರಿಂದ ಇದುವರೆಗೂ ಈ ಕ್ಷೇತ್ರದಲ್ಲಿ ವಿಶೇಷ ಅಧ್ಯಯನ ನಡೆಯದಿರುವುದರಿಂದ ಪ್ರಸ್ತುತ ಮಹಾಪ್ರಬಂಧದಲ್ಲಿ ಆಕರಗಳ ಶೋಧ ಹಾಗೂ ವರ್ಗೀಕರಣ ಮುಖ್ಯವಾಗುತ್ತವೆ. ಕಲಾವಿದರ ಹೊರಲೋಕದ ಅಸ್ಮಿತೆಗಿಂತ ಅವನೊಳಗಿನ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ನೆಲೆಗಳನ್ನು ಅರಿಯುವುದಕ್ಕೆ ಹೆಚ್ಚು ಒತ್ತು ನೀಡಲಾಗಿದೆ. ಹಲವು ಮಿತಿಗಳ ನಡುವೆಯೂ ಬಾಗೆನಾಡಿನ ಜನಪದ ಕಲಾವಿದರ ಅನನ್ಯ ಲೋಕಕ್ಕೆ ಈ ಅಧ್ಯಯನ ಒಂದು ಪ್ರವೇಶವನ್ನು ಕಲ್ಪಿಸುವುದರಲ್ಲಿ ಸಂದೇಹವಿಲ್ಲ.

***********

ಅನುಬಂಧಗಳು :

೧. ಆಯ್ದ ಕಲಾವಿದರ ಸಂದರ್ಶನಗಳು

೨. ಬಾಗೆನಾಡಿನ ಪ್ರಮುಖ ಜನಪದ ಕಲಾ ಮೇಳಗಳು

೩. ಆಕರ ಗ್ರಂಥಗಳು

## ಅನುಬಂಧ : ಒಂದು

### ಆಯ್ದ ಕಲಾವಿದರ ಸಂದರ್ಶನಗಳು :

#### ಸಂದರ್ಶನ-೦೧

೧. ಕಲಾವಿದರ ವೈಯಕ್ತಿಕ ವಿವರಗಳು :

| | | |
|---|---|---|
| ೧.೧ | ಕಲಾವಿದರ ಪೂರ್ಣ ವಿಳಾಸ | : ಸಿದ್ರಾಮಪ್ಪ ಯಲ್ಲಪ್ಪ ಲಾಳಿ<br>ಸಾ. ಯಲ್ಲಾರಟ್ಟಿ |
| ೨.೧ | ದೂರವಾಣಿ ಸಂಖ್ಯೆ | : ೯೭೪೦೬೬೮೨೩೩ |
| ೩.೧ | ಕಲಾವಿದನ ಕಲಾ ಪ್ರಕಾರ | : ಡೊಳ್ಳಿನಹಾಡು |
| ೪.೧ | ಕಲಾವಿದನ ಶಿಕ್ಷಣ | : ೬ ನೆಯ ತರಗತಿ |
| ೫.೧ | ಕಲಾವಿದನ ವಯಸ್ಸು | : ೬೪ |
| ೬.೧ | ಕಲಾವಿದನ ಜಾತಿ | : ಹಿಂದೂ ಕುರುಬ/ ಹಾಲುಮತ |
| ೭.೧ | ಕಲಾವಿದನ ಉದ್ಯೋಗ | : ಒಕ್ಕಲುತನ |
| ೮.೧ | ಕನಿಷ್ಠ ವಾರ್ಷಿಕ ಆದಾಯ | : ರೂ. ೫೦,೦೦೦ |
| ೯.೧ | ಕುಟುಂಬ ಸದಸ್ಯರ ಸಂಖ್ಯೆ | : ೭ ಜನ |
| ೧೦.೧ | ಕುಟುಂಬ ನಿರ್ವಹಣಾ ವಿಧಾನ | : ಒಕ್ಕಲುತನ |
| ೧೧.೧ | ಸರಕಾರದಿಂದ ಧನಸಹಾಯ | : ಇಲ್ಲ |
| ೧೨.೧ | ಅಕಾಡೆಮಿ ಪ್ರಶಸ್ತಿ /ಸನ್ಮಾನ | : ಇಲ್ಲ |
| ೧೩.೧ | ರಾಜ್ಯ/ರಾಷ್ಟ್ರಮಟ್ಟದಲ್ಲಿ ಕಲಾಪ್ರದರ್ಶನ | : ಇಲ್ಲ |

೨. ಕಲಾವಿದನಾಗಿ ನಿಮ್ಮ ಅನುಭವವೇನು?

**ಜಗತ್ ಮಿತ್ಯ ಬ್ರಹ್ಮ ಸತ್ಯ.**

೩. ಸಮಾಜದಲ್ಲಿ ನಿಮ್ಮ ಕಲೆಗೆ ಬೆಲೆ ಇದೆಯೇ?

**ಇದೆ.**

೪. ನಿಮಗೆ ಈ ಕಲೆ ಪರಂಪರೆಯಿಂದ ಬಂದ ಬಳುವಳಿಯೇ?

**ಹಿರಿಯರಿಂದ ಬಂದ ಬಳುವಳಿ.**

[illegible]

[illegible]

[illegible]

[illegible]

[illegible]

[illegible]

೫. ನಿಮ್ಮ ಕಲೆಯನ್ನು ನಿಮ್ಮ ಮಕ್ಕಳಿಗೆ ಮುಂದುವರೆಸಲು ನಿಮಗೆ ಇಷ್ಟವೇ?

**ಇಷ್ಟ. ಇಬ್ಬರು ಮೊಮ್ಮಕ್ಕಳು ತಯಾರಾಗಿದ್ದಾರೆ.**

೬. ನಿಮ್ಮ ಕಲೆಯ ಬಗ್ಗೆ ನಿಮ್ಮ ಕುಟುಂಬದ ಅಭಿಪ್ರಾಯವೇನು?

**೫೦ ವರ್ಷಗಳ ನನ್ನ ಅನುಭವದಲ್ಲಿ ಯಾರೂ ನಾನು ಹಾಡುವುದನ್ನು ಪ್ರಶ್ನಿಸಿಲ್ಲ.**

೭. ನಿಮಗೆ ಚಟಗಳಿವೆಯೇ? ಇದ್ದರೆ ಕಾರಣವೇನು?

**ತಂಬಾಕು ತಿನ್ನುತ್ತೇನೆ. ರಾತ್ರಿ ನಿದ್ದೆ ಬರದಂತೆ ತಂಬಾಕು ತಿನ್ನುವ ಚಟ ಅಂಟಿಕೊಂಡಿತು.**

೮. ನಿಮ್ಮಿಂದ ಸಾಮಾಜಿಕ ಬದಲಾವಣೆ ಸಾಧ್ಯವಾಗಿದೆಯೇ?

**ನಾವು ಅನುಭವ ಪದ ಹಾಡುವಾಗ ಕೇಳುವವರ ಮನಸ್ಸು ತುಂಬಿ ಕಣ್ಣುಗಳಲ್ಲಿ ಆನಂದ ಭಾಷ್ಪಗಳು ಸುರಿಯುತ್ತಿದ್ದವು. ಆಗ ಮನಸ್ಸು ತುಂಬಿ ಬಹುಮಾನ ನೀಡುತ್ತಿದ್ದರು. ಹಾರೂಗೇರಿಯಲ್ಲಿ ರಾಯಪ್ಪ ಬಂತಿ ಕರಿಸಿದ್ಧೇಶ್ವರ ಜಾತ್ರೆಯಲ್ಲಿ ನಮ್ಮ ಪದ ಕೇಳಿ ४೦ ವರ್ಷಗಳ ಹಿಂದೆ ೧೦/- ರೂ. ಬಹುಮಾನ ನೀಡಿದ್ದರು. ಒಮ್ಮೆ ಜಮಖಂಡಿ ತಾಲೂಕಿನ ಹುನ್ನೂರಿಗೆ ಹೋದಾಗ ಬಯಲಾಟ ಸುಳ್ಳು ಮಾಡಿ ಮೂರು ದಿನ ನಮ್ಮ ಡೊಳ್ಳಿನ ಪದ ಕೇಳಿದರು.**

೯. ನಿಮ್ಮ ಕಲೆ ವಿನಾಶದ ಅಂಚಿನಲ್ಲಿದೆ ಎಂದು ನಿಮಗೆ ಅನಿಸುತ್ತಿದೆಯೇ?

**ಈಗ ವಾತಾವರಣ ಬೇರೆ ಇದೆ. ಮನರಂಜನೆ ಮುಖ್ಯವಾಗಿದೆ. ತತ್ವ ಅನುಭವ ಕೇಳುವವರಿಲ್ಲ. ಹೀಗಾಗಿ ಈ ಕಲೆ ಉಳಿಯುತ್ತದೆ ಎಂದೆನಿಸುವುದಿಲ್ಲ. ಡೊಳ್ಳು ಬಾರಿಸುವ ಕಲೆ ಉಳಿಯಬಹುದು. ಆದರೆ ಹಾಡುಗಾರಿಕೆ ಉಳಿಯುತ್ತದೆಯೋ ಗೊತ್ತಿಲ್ಲ.**

೧೦. ಒಬ್ಬ ಕಲಾವಿದನಾಗಿ ನೀವು ಬದುಕಿನಲ್ಲಿ ಸಾಧಿಸಿದ್ದೇನು?

**ಹಲವರಿಗೆ ಮಾರ್ಗದರ್ಶನ ಮಾಡಿದ ಅನುಭವ ನನ್ನದು.**

೧೧. ನಿಮ್ಮ ಕಲೆಗೆ ಬೇಕಾಗುವ ಸಾಧನಗಳು ಮಾರುಕಟ್ಟೆಯಲ್ಲಿ ಲಭ್ಯವೆ?ಅಥವಾ ನೀವೇ ತಯಾರಿಸುವಿರಾ?

**ಮೊದಲು ಡೊಳ್ಳುಗಳನ್ನು ನಾವೇ ತಯಾರಿಸುತ್ತಿದ್ದೇವು. ಈಗ ಮಾರುಕಟ್ಟೆಯಲ್ಲಿ ಪ್ಲಾಸ್ಟಿಕ್ ಡೊಳ್ಳುಗಳು ಸಿಗುತ್ತವೆ.**

೧೨. ನೀವು ಎಷ್ಟು ಶಿಷ್ಯರನ್ನು ಬೆಳೆಸಿದ್ದೀರಿ?

**४ ಮೇಳಗಳನ್ನು ಬೆಳೆಸಿದ್ದೇನೆ.**

೧೩. ಈ ಕಲೆಗೆ ನಿಮ್ಮ ಕೊಡುಗೆ ಏನು?

**ಅದನ್ನು ಉಳಿಸಿಕೊಂಡು ಮುಂದುವರೆಸುತ್ತಿರುವುದೇ ನನ್ನ ಕೊಡುಗೆ.**

೧೪. ಬಾಗೆನಾಡಿನಲ್ಲಿ ನಿಮ್ಮ ಕಲೆಯ ಹಿನ್ನೆಲೆ ಹಾಗೂ ವೈಶಿಷ್ಟ್ಯಗಳೇನು?

**ನಾನು ಕಲಾವಿದರ ಪರಿಸರದಲ್ಲಿ ಬೆಳೆದವನು. ನನ್ನ ತಂದೆ ಹಾಗೂ ಕಕ್ಕಂದಿರು ಹಾಡುತ್ತಿದ್ದರು. ಅವರ ಹಾಡನ್ನು ಕೇಳಿ ನಾನು ಹಾಡುಗಾರನಾದೆ.**

೧೫. ಸಮಾಜ ನಿಮ್ಮ ಕಲೆಯನ್ನು ಗೌರವಿಸುತ್ತದೆ ಆದರೆ ಕಲಾವಿದರನ್ನು ಕಡೆಗಣಿಸುತ್ತದೆ ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

**ಹೌದು.**

೧೬. ಒಬ್ಬ ಸಾಹಿತಿಗೆ ಸಿಗುವಷ್ಟು ಗೌರವ ಒಬ್ಬ ಕಲಾವಿದನಿಗೆ ಸಿಗುತ್ತದೆಯೇ?

**ಸಿಗುತ್ತದೆ.**

೧೭. ಸರಕಾರದ ಸೌಲಭ್ಯಗಳು ನಿಮಗೆ ಸಿಗುತ್ತವೆಯೋ? ಇಲ್ಲ ಎಂದಾದರೆ ಕಾರಣಗಳೇನು?

**ಇಲ್ಲ.**

೧೮. ವಿದ್ಯುನ್ಮಾನ ಮಾಧ್ಯಮಗಳ ಯುಗದಲ್ಲಿ ನಿಮ್ಮ ಕಲೆಯನ್ನು ಜೀವಂತವಾಗಿಡುವುದು ಹೇಗೆ?

**ಉಳಿಯುತ್ತಿಲ್ಲ.**

೧೯. ನಿಮ್ಮ ಕಲೆ ನಿಮಗೆ ತೃಪ್ತಿ ತಂದಿದೆಯೇ?

**ತೃಪ್ತಿ ತಂದಿದೆ.**

೨೦. ನಿಮ್ಮ ಕಲೆ ಆಧುನೀಕರಣಗೊಳ್ಳುವ ಅಗತ್ಯವಿದೆಯೇ?

**ಆಧುನೀಕರಣಗೊಳ್ಳಬೇಕು. ಹೊಸ ಬದಲಾವಣೆಗಳನ್ನು ಮಾಡಬೇಕು.**

೨೧. ಬದುಕಿನ ನೋವು ನಲಿವುಗಳಿಗೆ ಜನಪದ ಕಲೆಗಳು ಸ್ಪಂದಿಸುತ್ತವೆಯೇ? ಹೌದು ಎಂದಾದರೆ ಹೇಗೆ?

**ನನ್ನ ಹಾಡು ನನ್ನ ಸಂಸಾರದ ಭಾರವನ್ನು ಇಲ್ಲವಾಗಿಸಿದೆ. ಹಾಡುವಾಗ ಹಾಡುಗಳನ್ನು ಕೇಳುವಾಗ ಎಲ್ಲವನ್ನೂ ಮರೆಯುತ್ತೇನೆ. ನನ್ನ ಹಾಡಿನ ಧ್ವನಿ ಸುರುಳಿಯನ್ನು ಕೇಳುತ್ತಲೇ ನಾನು ಸಾಯಬೇಕು ಎಂಬ ಆಸೆ. ಅದು ಕೇವಲ ಕಲೆಯಲ್ಲ, ನನ್ನ ಬದುಕಿನ ಜೀವ ಜೀವಾಳ.**

ಸಂದರ್ಶನ-೦೨

೧. ಕಲಾವಿದನ ಪೂರ್ಣ ವೈಯಕ್ತಿಕ ವಿವರಗಳು:

| | | |
|---|---|---|
| ೧.೧ | ಕಲಾವಿದರ ಪೂರ್ಣ ವಿಳಾಸ | : **ರಾಮು ಸಿದ್ಲಿಂಗ ನಿಡೋಣಿ (ಮಾಜಿ ಶಾಸಕರು) ಸಾ. ಹಾರೂಗೇರಿ ತಾ.ರಾಯಬಾಗ ಜಿ.ಬೆಳಗಾವಿ** |
| ೨.೧ | ದೂರವಾಣಿ ಸಂಖ್ಯೆ | : **೮೧೪೭೯೯೦೭೧೦** |
| ೩.೧ | ಕಲಾವಿದನ ಕಲಾ ಪ್ರಕಾರ | : **ಭಜನೆ, ಲಾವಣಿ, ಸೋಭಾನ, ಜೋಗುಳ, ರಿವಾಯತ ಇತ್ಯಾದಿ.** |
| ೪.೧ | ಕಲಾವಿದನ ಶಿಕ್ಷಣ | : **೭ನೆಯ ತರಗತಿ** |
| ೫.೧ | ಕಲಾವಿದನ ವಯಸ್ಸು | : **೬೯** |
| ೬.೧ | ಕಲಾವಿದನ ಜಾತಿ | : **ಪರಿಶಿಷ್ಟ ಜಾತಿ** |
| ೭.೧ | ಕಲಾವಿದನ ಉದ್ಯೋಗ | : **ಮಾಜಿ ಶಾಸಕರು** |
| ೮.೧ | ಕನಿಷ್ಠ ವಾರ್ಷಿಕ ಆದಾಯ | : **ಪಿಂಚಣಿ-೧೫,೦೦೦/- ಪ್ರತಿ ತಿಂಗಳಿಗೆ** |
| ೯.೧ | ಕುಟುಂಬ ಸದಸ್ಯರ ಸಂಖ್ಯೆ | : **೬ ಜನ** |
| ೧೦.೧ | ಕುಟುಂಬ ನಿರ್ವಹಣಾ ವಿಧಾನ | : **ಮಾಸಿಕ ಪಿಂಚಣಿ** |
| ೧೧.೧ | ಸರಕಾರದಿಂದ ಧನಸಹಾಯ | : **ಇಲ್ಲ** |
| ೧೨.೧ | ಅಕಾಡೆಮಿ ಪ್ರಶಸ್ತಿ/ಪುರಸ್ಕಾರ/ಸನ್ಮಾನ | : **ಇಲ್ಲ** |
| ೧೩.೧ | ರಾಜ್ಯ/ರಾಷ್ಟ್ರಮಟ್ಟಗಳಲ್ಲಿ ಕಲಾಪ್ರದರ್ಶನ | : **ಇಲ್ಲ** |

೨. ಕಲಾವಿದನಾಗಿ ನಿಮ್ಮ ಅನುಭವವೇನು?

**ಕಲೆಯನ್ನು ಜನ ಮೆಚ್ಚಿಕೊಳ್ಳುತ್ತಾರೆ. ಈಗಲೂ ೭೦ರ ವಯಸ್ಸಿನಲ್ಲಿಯೂ ಜನ ಕಲಾ ಸೇವೆಗೆ ಕರೆದುಕೊಂಡು ಹೋಗುತ್ತಾರೆ.**

೩. ಸಮಾಜದಲ್ಲಿ ನಿಮ್ಮ ಕಲೆಗೆ ಬೆಲೆ ಇದೆಯೇ?

**ಬೆಲೆ ಇದೆ. ಆದ್ದರಿಂದಲೇ ಜನ ನಮ್ಮ ಹಾಡುಗಳನ್ನು ಕೇಳುತ್ತಾರೆ.**

೪. ನಿಮಗೆ ಈ ಕಲೆ ಪರಂಪರೆಯಿಂದ ಬಂದ ಬಳುವಳಿಯೇ?

**ನಮ್ಮ ಓಣಿಯ ಹಿರಿಯರು ಹಾಡುವುದನ್ನು ಕೇಳುತ್ತಿದ್ದೇವು. ಆಗ ನನಗೆ ಕಲೆಯ ಬಗ್ಗೆ ಆಸಕ್ತಿ ಮೂಡಿತು. ನಾನು ಹಾಡತೊಡಗಿದೆ. ಆದ್ದರಿಂದ ಪ್ರೋತ್ಸಾಹ ಸಿಕ್ಕಿತು. ಕಲಾವಿದನಾಗಿ ರೂಪುಗೊಂಡೆ.**

೫. ನಿಮ್ಮ ಕಲೆಯನ್ನು ನಿಮ್ಮ ಮಕ್ಕಳಿಗೆ ಮುಂದುವರೆಸಲು ನಿಮಗೆ ಇಷ್ಟವೇ?

**ಮನೆಯ ಜನರೆಲ್ಲ ಹಾಡುತ್ತಾರೆ. ಹೀಗಾಗಿ ಸಹಜವಾಗಿಯೇ ನನ್ನ ಕಲೆಯ ಬಗ್ಗೆ ಅವರಿಗೆ ಒಳ್ಳೆಯ ಅಭಿಪ್ರಾಯವಿದೆ.**

೬. ನಿಮ್ಮ ಕಲೆಯ ಬಗ್ಗೆ ನಿಮ್ಮ ಕುಟುಂಬದ ಅಭಿಪ್ರಾಯವೇನು?

**ಒಳ್ಳೆಯ ಅಭಿಪ್ರಾಯವಿದೆ.**

೭. ನಿಮಗೆ ಚಟಗಳಿವೆಯೇ? ಇದ್ದರೆ ಕಾರಣವೇನು?

**ಇಲ್ಲ. ಇತ್ತಿತ್ತಲಾಗಿ ಕಲಾವಿದರು ಚಟಗಾರರಾಗುತ್ತಿದ್ದಾರೆ. ಮೊದಲು ಸಂತೋಷದಿಂದ ಹಾಡುತ್ತಿದ್ದರು. ಈಗ ಚಟದ ದಾಸರಾಗಿ ಕಲೆಯನ್ನು ಗೌಣಗೊಳಿಸುತ್ತಿದ್ದಾರೆ. ಮೊನ್ನೆ, ಕೃಷ್ಣಪಾರಿಜಾತದಲ್ಲಿ ಆಟವಾಡುತ್ತ ಇರುವಾಗಲೇ ಕೃಷ್ಣ ಪಾತ್ರದ ಕಲಾವಿದ ಸೆರೆ ಕುಡಿದು ಆಟದ ಜಾಡು ತಪ್ಪಿಸಿದನು. ಅವನಿಗೆ ಸಂಭಾಷಣೆ ನೆನಪಾಗದಾಯಿತು. ಇದು ಕಳೆದ ಏಳೆಂಟು ವರ್ಷದಲ್ಲಿ ಬೆಳೆದು ಬಂದ ರೋಗ.**

೮. ನಿಮ್ಮಿಂದ ಸಾಮಾಜಿಕ ಬದಲಾವಣೆ ಸಾಧ್ಯವಾಗಿದೆಯೇ?

**ಸಾಧ್ಯವಾಗಿದೆ. ಹಾಡುವುದರ ಮೂಲಕ ನಿಜಗುಣರು, ಸರ್ಪಭೂಷಣರು ಸಮಾಜಕ್ಕೆ ಹತ್ತಿರವಾಗುತ್ತಾರೆ. ಅಲ್ಲಿಯ ಪಾರಮಾರ್ಥವನ್ನು ಸಮಾಜ ಅನುಸಂಧಾನ ಮಾಡಿಕೊಳ್ಳುತ್ತದೆ. ಅದುವೇ ಸಾಮಾಜಿಕ ಬದಲಾವಣೆ. ನಾನು 'ಪ್ರಬೋಧ ಚಿಂತಾಮಣಿ' ಎಂಬ ಗ್ರಂಥ ರಚಿಸಿದ್ದೇನೆ. ಕೃಷ್ಣನ ದಶಾವತಾರಗಳು ಮನುಷ್ಯನ ಬದುಕಿನಲ್ಲಿಯೇ ಇವೆ ಎಂದು ತಿಳಿಸಿದ್ದೇನೆ. ಈಗ ಸರ್ವೋದಯವೆಂಬ ಗ್ರಂಥ ರಚಿಸುತ್ತಿದ್ದೇನೆ. ಇದು ಭವಿಷ್ಯಶಾಸ್ತ್ರ.**

೯. ನಿಮ್ಮ ಕಲೆ ವಿನಾಶದ ಅಂಚಿನಲ್ಲಿದೆ ಎಂದು ನಿಮಗೆ ಅನಿಸುತ್ತಿದೆಯೇ?

**ಕಲೆ ವಿನಾಶದ ಅಂಚಿನಲ್ಲಿದೆ. ಟಿ.ವ್ಹಿ., ಟೇಪು ಮೊದಲಾದ ಸಾಧನಗಳು ಬಂದ ಮೇಲೆ ಜನಪದ ಕಲೆಗಳು ಅಳಿವಿನ ಅಂಚಿನಲ್ಲಿವೆ. ಈಗ ಭಜನೆಹಾಡು**

[illegible]

**ಕೇಳುವವರೇ ಇಲ್ಲ. ದೇವರ ಆರಾಧನೆಯ ಹಿನ್ನೆಲೆಯಲ್ಲಿ ಕಲೆ ಉಳಿದಿದೆ. ಆಗ ನಾನು ರಿವಾಯತ ಹಾಡುತ್ತಿದ್ದರೆ ಹತ್ತು ಸಾವಿರ ಜನ ಕೂಡುತ್ತಿದ್ದರು. ನಾನು ಇಪ್ಪತ್ತು ವರ್ಷದವನಿದ್ದಾಗ ೫೦-೬೦ ರೂಪಾಯಿ ಬಹುಮಾನಗಳಿಸುತ್ತಿದ್ದೆ. ಈಗ ಕಲಾವಿದರಷ್ಟೇ ಇರುತ್ತಾರೆ.**

೧೦. ಒಬ್ಬ ಕಲಾವಿದನಾಗಿ ನೀವು ಬದುಕಿನಲ್ಲಿ ಸಾಧಿಸಿದ್ದೇನು?

**ಏನೂ ಸಾಧಿಸಿಲ್ಲ. ನಾನು ಕಲಾವಿದನಾಗಿರುವುದರಿಂದ ಪಾರಮಾರ್ಥ ಸಾಧಿಸಲು ಸಾಧ್ಯವಾಯಿತು.**

೧೧. ನಿಮ್ಮ ಕಲೆಗೆ ಬೇಕಾಗುವ ಸಾಧನಗಳು ಮಾರುಕಟ್ಟೆಯಲ್ಲಿ ಲಭ್ಯವೆ? ಅಥವಾ ನೀವೇ ತಯಾರಿಸುವಿರಾ?

**ನಾನು ಸ್ವರಪೆಟ್ಟಿಗೆ ಕೊಂಡು ೪೦ ವರ್ಷಗಳಾದವು. ಇನ್ನೂ ಅದನ್ನು ನಾನು ನುಡಿಸುತ್ತೇನೆ. ಮೊದಲು ಸ್ವರಪೆಟ್ಟಿಗೆ ಮಾಡುವವರು ಊರಿಗೊಬ್ಬರಂತೆ ಇರುತ್ತಿದ್ದರು.**

೧೨. ನೀವು ಎಷ್ಟು ಶಿಷ್ಯರನ್ನು ಬೆಳೆಸಿದ್ದೀರಿ?

**ನಾನು ಬಾಬಾನಂದ ಭಜನಾ ತಂಡ(ಬಡಿಗೇರರು), ಚಂದ್ರವ್ವ ತಾಯಿ ಭಜನಾ ತಂಡ ಹಾರೂಗೇರಿ(ಮಾದಿಗರದು) ಹೀಗೆ ಎರಡು ಮೇಳಗಳಿಗೆ ಹಾಡುವುದನ್ನು ಕಲಿಸಿದ್ದೇನೆ.**

೧೩. ಕಲೆಗೆ ನಿಮ್ಮ ಕೊಡುಗೆ ಏನು?

**ಅದನ್ನು ಉಳಿಸಿಕೊಂಡು ಮುಂದುವರೆಸಿದ್ದೆ ಒಂದು ಕೊಡುಗೆ.**

೧೪. ಬಾಗೆನಾಡಿನಲ್ಲಿ ನಿಮ್ಮ ಕಲೆಯ ಹಿನ್ನೆಲೆ ಹಾಗೂ ವೈಶಿಷ್ಟ್ಯಗಳೇನು?

**ಹಾರೂಗೇರಿಯ ವೃಷಭೇಂದ್ರ ಅಜ್ಜನವರ ಮಠದಲ್ಲಿ ಭಜನೆ ಮಾಡಿಸುತ್ತಿದ್ದರು. ಅಲ್ಲಿ ಹರಿಜನ ಕಲಾವಿದರು ಭಜನೆ ಮಾಡುತ್ತಿದ್ದರು. ಆದರೆ ಮಠದೊಳಗೆ ಅವರಿಗೆ ಪ್ರವೇಶವಿರುತ್ತಿರಲಿಲ್ಲ. ಮೊತ್ತಮೊದಲು ಹರಿಜನರಿಗೆ ದೇವಾಲಯದಲ್ಲಿ ಪ್ರವೇಶ ಕಲ್ಪಿಸಿದವರು ವೃಷಭೇಂದ್ರ ಅಜ್ಜನವರು. ಅಂದಿನಿಂದ ಇಂದಿನವರೆಗೆ ಮಠದಲ್ಲಿ ಜಾತಿಯತೆ ಇಲ್ಲ. ಸಹಪಂಕ್ತಿ ಭೋಜನ ಬೆಳೆದುಕೊಂಡು ಬಂದಿದೆ.**

೧೫. ಸಮಾಜ ನಿಮ್ಮ ಕಲೆಯನ್ನು ಗೌರವಿಸುತ್ತದೆ ಆದರೆ ಕಲಾವಿದರನ್ನು ಕಡೆಗಣಿಸುತ್ತದೆ ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

**ಅದೊಂದು ಸಾಮಾಜಿಕ ರೋಗ. ಅದು ಕಲೆಗೂ ಅಂಟಿಕೊಂಡಿರುವುದು ದುರ್ದೈವ.**

೧೬. ಒಬ್ಬ ಸಾಹಿತಿಗೆ ಸಿಗುವಷ್ಟು ಗೌರವ ಒಬ್ಬ ಕಲಾವಿದನಿಗೆ ಸಿಗುತ್ತದೆ?

**ಸಾಹಿತ್ಯವೆಂದರೇನು? ನನಗೆ ಗೊತ್ತಿಲ್ಲ. ಅವರು ಹೇಳುವುದನ್ನು ಸಾಕಷ್ಟು ಸಲ ಕೇಳಿದ್ದೇವೆ. ಸಾಹಿತ್ಯಕ್ಕೆ ಸಾಮಾಜಿಕ ಸ್ಪಂದನೆ ಕಡಿಮೆ. ಸಾಹಿತಿಗಳು ಗೌರವ ಸಂಪಾದಿಸುವ ದಾರಿ ಕಲಾವಿದರಿಗೆ ಗೊತ್ತಿಲ್ಲ.**

೧೭. ಸರಕಾರದ ಸೌಲಭ್ಯಗಳು ನಿಮಗೆ ಸಿಗುತ್ತವೆಯೇ? ಇಲ್ಲ ಎಂದಾದರೆ ಕಾರಣಗಳೇನು?

**ಇಲ್ಲ.**

೧೮. ವಿದ್ಯುನ್ಮಾನ ಮಾಧ್ಯಮಗಳ ಯುಗದಲ್ಲಿ ನಿಮ್ಮ ಕಲೆಯನ್ನು ಜೀವಂತವಾಗಿಡುವುದು ಹೇಗೆ?

**ಜೀವಂತವಾಗಿಡುವುದು ಸಾಧ್ಯವಿಲ್ಲ. ಅದು ಈಗ ಒಡೆದ ಗಡಿಗೆ. ಅದನ್ನು ಕೂಡಿಸುವುದು ಸಾಧ್ಯವಿಲ್ಲ. ಏನೇ ಬದಲಾವಣೆಗಳಾದರೂ ಸಾಧ್ಯವಿಲ್ಲ.**

೧೯. ನಿಮ್ಮ ಕಲೆ ನಿಮಗೆ ತೃಪ್ತಿ ತಂದಿದೆಯೇ?

**ನನಗೆ ತೃಪ್ತಿ ಇದೆ. ಈಗಲೂ ಮನಸ್ಸಿಗೆ ಬೇಸರವಾದಾಗ ಸ್ವರಪೆಟ್ಟಿಗೆ ಹಿಡಿದು ಒಂದೆರೆಡು ಪದ ಹಾಡುತ್ತೇನೆ. ಮನಸ್ಸಿಗೆ ಆನಂದವಾಗುತ್ತದೆ.**

೨೦. ನಿಮ್ಮ ಕಲೆ ಆಧುನೀಕರಣಗೊಳ್ಳುವ ಅಗತ್ಯವಿದೆಯೇ?

**ಆಧುನೀಕರಣಗೊಂಡರೂ ಕಲೆಗಳು ಬದುಕುವ ಸ್ಥಿತಿ ಇಲ್ಲ.**

೨೧. ಬದುಕಿನ ನೋವು ನಲಿವುಗಳಿಗೆ ಜನಪದ ಕಲೆಗಳು ಸ್ಪಂದಿಸುತ್ತವೆಯೇ? ಹೌದು ಎಂದಾದರೆ ಹೇಗೆ?

**ಸ್ಪಂದಿಸುತ್ತವೆ. ಕಲೆ ವೃತ್ತಿಯಲ್ಲ. ಅದರಿಂದ ಧನ ಸಂಪಾದನೆ ಸಾಧ್ಯವೂ ಇಲ್ಲ. ಅದು ಆನಂದದ ನಿಧಿ. ನಾವು ಬಹಳೆಡೆಗಳಲ್ಲಿ ಹಾಡಿ ಮತ್ತೆ ತತ್ವ ಪದದ ಪುಸ್ತಕಗಳನ್ನೇ ಕೊಂಡು ತರುತ್ತಿದ್ದೇವು. ಕಲಾಸೇವೆಯಿಂದ ಬಂದ ಹಣ ಬದುಕಿಗೆ ಉಪಯೋಗಿಸಿಕೊಳ್ಳುತ್ತಿರಲಿಲ್ಲ.**

## ಸಂದರ್ಶನ-೦೩

೧. ಕಲಾವಿದನ ಪೂರ್ಣ ವೈಯಕ್ತಿಕ ವಿವರಗಳು :

| | | |
|---|---|---|
| ೧.೧ | ಕಲಾವಿದರ ಪೂರ್ಣ ವಿಳಾಸ | : ವಿಷ್ಣು ಪರಸಪ್ಪ ಕಂಚಕಾರ<br>ಕಾಯಿಪಲ್ಲೆ ಪೇಟೆ,<br>ಹಾರೂಗೇರಿ ತಾ. ರಾಯಬಾಗ |
| ೨.೧ | ದೂರವಾಣಿ ಸಂಖ್ಯೆ | : ೯೭೩೯೨೪೧೪೧೯ |
| ೩.೧ | ಕಲಾವಿದನ ಕಲಾ ಪ್ರಕಾರ | : ಕಣಿವಾದನ |
| ೪.೧ | ಕಲಾವಿದನ ಶಿಕ್ಷಣ | : ಇಲ್ಲ |
| ೫.೧ | ಕಲಾವಿದನ ವಯಸ್ಸು | : ೭೧ |
| ೬.೧ | ಕಲಾವಿದನ ಜಾತಿ | : ಹಿಂದೂ ಪಂಚಾಳ |
| ೭.೧ | ಕಲಾವಿದನ ಉದ್ಯೋಗ | : ಕಣಿ ಹಾಗೂ ಕರಡಿ ಮೇಳ |
| ೮.೧ | ಕನಿಷ್ಠ ವಾರ್ಷಿಕ ಆದಾಯ | : ಶಿವರಾತ್ರಿಯಿಂದ ಅಕ್ಷಯ<br>ತೃತೀಯವರೆಗೆ ಆಗ ತಿಂಗಳಿಗೆ<br>ಒಂದು ಸಾವಿರ ಬರಹುದು. |
| ೯.೧ | ಕುಟುಂಬ ಸದಸ್ಯರ ಸಂಖ್ಯೆ | : ೧೩ |
| ೧೦.೧ | ಕುಟುಂಬ ನಿರ್ವಹಣಾ ವಿಧಾನ | : ಜಮೀನಿನ ಮೂಲದ<br>ಆದಾಯದಿಂದ ಕುಟುಂಬ<br>ನಿರ್ವಹಣೆ, ೫ ಎಕರೆ ಜಮೀನು<br>(ಖುಷ್ಕಿ) |
| ೧೧.೧ | ಸರಕಾರದಿಂದ ಧನಸಹಾಯ | : ರಾಜ್ಯ ಸರಕಾದಿಂದ ಒಂದು<br>ಸಾವಿರ ಕೇಂದ್ರ ಸರಕಾರದಿಂದ<br>ಎರಡು ಸಾವಿರ |
| ೧೨.೧ | ಅಕಾಡೆಮಿ ಪ್ರಶಸ್ತಿ/ಪುರಸ್ಕಾರ/ಸನ್ಮಾನ | : ಕರ್ನಾಟಕ ಜಾನಪದ ಹಾಗೂ<br>ಯಕ್ಷಗಾನ ಅಕಾಡೆಮಿ-೧೯೯೧ |
| ೧೩.೧ | ರಾಜ್ಯ/ರಾಷ್ಟ್ರಮಟ್ಟಗಳಲ್ಲಿ ಕಲಾಪ್ರದರ್ಶನ | : ಮೈಸೂರು ದಸರಾ,<br>ಜಾನಪದಲೋಕದಲ್ಲಿ ೨ ಸಲ,<br>೧೯೬೨ ರಲ್ಲಿ ಮುಂಬಯಿದಲ್ಲಿ, |

ಹೈದ್ರಾಬಾದದಲ್ಲಿ ದೂರದರ್ಶನ,
ಗದಗ, ಬಾಗಲಕೋಟ, ಬೆಳಗಾವಿ

೨. ಕಲಾವಿದನಾಗಿ ನಿಮ್ಮ ಅನುಭವವೇನು?

ತಂದೆ ಕಣಿ, ಕಾಕಾ ತಾಳ ಬಾರಿಸುತ್ತಿದ್ದರು. ಅವರಿಂದ ಬಂದ ಬಳವಳಿ. ತಂದೆಯೇ ಗುರು. ಸಾಕಷ್ಟು ಸೇವೆ ಮಾಡಲು ಅವಕಾಶ ದೊರೆಯಿತು. ಇದರಿಂದ ನಾಡಿನಾದ್ಯಂತ ಮನ್ನಣೆ ದೊರೆಯಿತು. ಜನ ಮತ್ತು ನನ್ನನ್ನು ಈ ಕಲೆಯಿಂದ ಗುರುತಿಸಿದ್ದಕ್ಕಾಗಿ ಆನಂದವಾಗಿದೆ. ಯಾರೇ ಯಾವುದೇ ಕಾರ್ಯಕ್ರಮದಲ್ಲಿ ನೋಡಿದರೆ ನನ್ನನ್ನು ಕರೆದು ಗೌರವಿಸುತ್ತಾರೆ. ಅದೇ ನಿಜವಾದ ಸಂತೋಷ. ಅದು ನಮ್ಮ ಕಲಾಸೇವೆಯ ಭಾಗ್ಯ.

೩. ಸಮಾಜದಲ್ಲಿ ನಿಮ್ಮ ಕಲೆಗೆ ಬೆಲೆ ಇದೆಯೇ?

ಇದೆ. ಈಗ ಅದು ಕಡಿಮೆಯಾಗುತ್ತಿದೆ ಎನಿಸಿದರೂ ಈ ಹಿಂದೆ ಸಾಕಷ್ಟು ಗೌರವ ಇತ್ತು. ಬದಲಾಗುತ್ತಿರುವ ವಾತಾವರಣದಲ್ಲಿ ಅದನ್ನು ಬಯಸುವುದು ತಪ್ಪು. ಆ ಬಗ್ಗೆ ನಾನು ತೆಲೆ ಕೆಡಿಸಿಕೊಂಡಿಲ್ಲ, ತಲೆ ಕೆಡಿಸಿಕೊಳ್ಳುವುದಿಲ್ಲ ಅದನ್ನು ಬಿಡುವುದಿಲ್ಲ, ಬದುಕಿರುವವರೆಗೆ ಅದನ್ನು ಮುಂದುವರೆಸಿಕೊಂಡು ಹೋಗುವ ಸಂಕಲ್ಪ. ಕಲೆ ನನ್ನ ಅನಿವಾರ್ಯ ಕರ್ಮ.

೪. ನಿಮಗೆ ಈ ಕಲೆ ಪರಂಪರೆಯಿಂದ ಬಂದ ಬಳುವಳಿಯೇ?

ಹೌದು. ತಂದೆ, ಕಕ್ಕ, ಅಜ್ಜ ಎಲ್ಲರೂ ಕಣಿ ಕಲಾವಿದರು. ಇಡೀ ವಂಶವೇ ಕಲಾವಿದರ ವಂಶ. ಮಹಾದೇವಪ್ಪ ನನ್ನ ಅಜ್ಜ. ಅಂದರೆ ನನ್ನ ತಂದೆಯ ಚಿಕ್ಕಪ್ಪ, ಯಮನೂರು ಜಾತ್ರೆಯಲ್ಲಿ ಕಣಿ ಬಾರಿಸಿ ಖಡಿಯನ್ನು ಬಹುಮಾನವಾಗಿ ಪಡೆದಿದ್ದಾರೆ. ಅದನ್ನು ನಾವು ಪ್ರತಿ ಅಮವಾಸ್ಯೆ-ಹುಣ್ಣಿಮೆಗೆ ಪೂಜಿಸುತ್ತೇವೆ.

೫. ನಿಮ್ಮ ಕಲೆಯನ್ನು ನಿಮ್ಮ ಮಕ್ಕಳಿಗೆ ಮುಂದುವರೆಸಲು ನಿಮಗೆ ಇಷ್ಟವೇ?

ಇಷ್ಟ. ಆದರೆ ಅವರು ಕಲಿಯಲಿಲ್ಲ. ಆದರೆ ಮೊಮ್ಮಕ್ಕಳು ಕಲಿಯಬಹುದೆಂಬ ಭರವಸೆ. ಒಮ್ಮೊಮ್ಮೆ ನನ್ನ ತಲೆಮಾರಿಗೆ ಕೊನೆಗೊಳ್ಳಬಹುದೆಂಬ ಆತಂಕ. ಅದು ಮುಗಿದು ಹೋಗಬಾರದೆಂಬುದು ದೇವರಲ್ಲಿ ನನ್ನ ಪ್ರಾರ್ಥನೆ.

[illegible]

೬. ನಿಮ್ಮ ಕಲೆಯ ಬಗ್ಗೆ ನಿಮ್ಮ ಕುಟುಂಬದ ಅಭಿಪ್ರಾಯವೇನು?

**ಸಂತೋಷ. ಕುಟುಂಬದವರಿಗೆ ನಮ್ಮ ಕಲೆಯ ಮೇಲೆ ಅಭಿಮಾನವಿದೆ. ನಾವು ಕಾರ್ಯಕ್ರಮಗಳಿಗೆ ಹೋಗುವಾಗ ನಮ್ಮ ಕುಟುಂಬ ಸದಸ್ಯರು ಸಂತೋಷದಿಂದ ಕಳುಹಿಸುತ್ತಾರೆ. ಕಾರ್ಯಕ್ರಮ ಮುಗಿಸಿ ಬಂದ ಮೇಲೆ ಆದರದಿಂದ ಬರಮಾಡಿಕೊಳ್ಳುತ್ತಾರೆ. ಗುಲಾಲದಿಂದ ಕೆಂಪಾದ ಬಟ್ಟೆಗಳನ್ನು ಅಭಿಮಾನದಿಂದ ತೊಳೆಯುತ್ತಾರೆ. ನಮ್ಮ ತಾಯಿ(ಬಾಳವ್ವ) ನನ್ನ ಕಣಿವಾದನವನ್ನು ಆಸಕ್ತಿಯಿಂದ ಆಲಿಸುತ್ತಿದ್ದರು. ನನ್ನ ತಂದೆ ೧೯೬೨ ರಲ್ಲಿ ತೀರಿದರು. ಆಗ ನನಗೆ ಕೇವಲ ೨೩ ವರ್ಷ. ಅನಂತರ ನನ್ನ ತಾಯಿಯೇ ನನ್ನ ಕಲೆಯನ್ನು ಪೋಷಿಸಿದಳು. ಚಿಕ್ಕಪ್ಪ ನನ್ನನ್ನು ಈ ಕಲೆಯಲ್ಲಿ ತರಬೇತಿಗೊಳಿಸಿದರು. ಮುತ್ತೂರಿನ ಶ್ರೀ ಲಕ್ಷ್ಮಣ ರಾಯಪ್ಪ ಜಾಯಗೊಂಡ ನನ್ನನ್ನು ಪ್ರತಿಭಾವಂತ ಕಲಾವಿದನನ್ನಾಗಿ ರೂಪಿಸಿದರು. ಅವರು ನಮ್ಮ ತಂದೆಯ ಮೇಳದಲ್ಲಿ ತಾಳ ಬಾರಿಸುತ್ತಿದ್ದರು.**

೭. ನಿಮಗೆ ಚಟಗಳಿವೆಯೇ? ಇದ್ದರೆ ಕಾರಣವೇನು?

**ಕಲಾವಿದರಿಗೆ ಚಟಗಳಿರುತ್ತವೆ. ಅವರು ಸಾಮಾನ್ಯವಾಗಿ ಸರಾಯಿ ಚಟಕ್ಕೆ ಅಂಟಿಕೊಂಡಿರುತ್ತಾರೆ. ಚಟಗಳಿಲ್ಲದ ಕಲಾವಿದರಿದ್ದಾರೆ. ಆದರೆ ವಿರಳ. ಕಲಾ ಪ್ರದರ್ಶನದಲ್ಲಿ ಶಾರೀರಿಕ ಶ್ರಮವಿರುತ್ತದೆ. ಸರಾಯಿ ಶಾರೀರಿಕ ಶ್ರಮವನ್ನು ಪರಿಹರಿಸುತ್ತದೆ. ಅದೊಂದು ಉತ್ತೇಜಕ ಮದ್ದಿನಂತೆ ಕೆಲಸ ಮಾಡುತ್ತದೆ. ಅದುವೇ ಮುಂದೆ ಚಟವಾಗಿ ಪರಿಣಮಿಸುತ್ತದೆ.**

೮. ನಿಮ್ಮಿಂದ ಸಾಮಾಜಿಕ ಬದಲಾವಣೆ ಸಾಧ್ಯವಾಗಿದೆಯೇ?

**ಕಣಿವಾದನ ಒಂದು ಕಲೆ, ಶುದ್ಧ ಕಲೆಗಳ ಉದ್ದೇಶ ಸಾಮಾಜಿಕ ಬದಲಾವಣೆ. ಮನಸ್ಸಿಗೆ ಆನಂದ ನೀಡುವುದೇ ಅವುಗಳ ಉದ್ದೇಶ. ಇದು ನಮಗೂ ಆನಂದವನ್ನುಂಟು ಮಾಡುತ್ತದೆ. ಅನ್ಯರಿಗೂ ಆನಂದವನ್ನುಂಟು ಮಾಡುತ್ತದೆ. ಒಂದರ್ಥದಲ್ಲಿ ಆನಂದದ ದಾಸೋಹ. ಆನಂದವನ್ನು ಸೃಷ್ಟಿಸಿ ನಾವು ಸವಿದು ಜನರಿಗೂ ಹಂಚುವುದು. ಆನಂದವೇ ಜೀವನದ ಪರಮ ಉದ್ದೇಶ.**

೯. ನಿಮ್ಮ ಕಲೆ ವಿನಾಶದ ಅಂಚಿನಲ್ಲಿದೆ ಎಂದು ನಿಮಗೆ ಅನಿಸುತ್ತಿದೆಯೇ?

**ಉಳಿಯುವುದು ಸ್ವಲ್ಪ ಜಡವೆನಿಸುತ್ತದೆ. ವಾತಾವರಣ ಬದಲಾಗುತ್ತಿದೆ. ಮೊದಲಿನಷ್ಟು ಜನ ಈಗ ಸೇರುವುದಿಲ್ಲ.**

೧೦. ಒಬ್ಬ ಕಲಾವಿದನಾಗಿ ನೀವು ಬದುಕಿನಲ್ಲಿ ಸಾಧಿಸಿದ್ದೇನು?

**ಈ ಕಲೆಯಿಂದ ನಾನು ಏನು ಸಾಧಿಸಿದ್ದೇನೆ ಎನ್ನುವುದು ಮುಖ್ಯವಲ್ಲ. ಆದರೆ ನಾಡಿನಲ್ಲಿ ನಾನು ಪರಿಚಿತನಾಗಿದ್ದೇನೆ ಎಂಬ ಸಂತೋಷವಿದೆ. ಏಕೆಂದರೆ ಕಲೆ ಗಳಿಕೆಯ ಮೂಲವಲ್ಲ. ಅದು ಆನಂದದ ಕಲೆ. ಅಂತರಂಗದ ಆನಂದವನ್ನು ಅಳೆದು ಹೇಳಲಿಕ್ಕಾಗದು.**

೧೧. ನಿಮ್ಮ ಕಲೆಗೆ ಬೇಕಾಗುವ ಸಾಧನಗಳು ಮಾರುಕಟ್ಟೆಯಲ್ಲಿ ಲಭ್ಯವೆ? ಅಥವಾ ನೀವೇ ತಯಾರಿಸುವಿರಾ?

**ಇಲ್ಲ. ನಾವೇ ತಯಾರಿ ಮಾಡಿಸಿಕೊಳ್ಳುತ್ತೇವೆ. ಜನಪದ ಕಲಾವಿದ ತನ್ನ ಕಲಾ ಸಾಧನಗಳನ್ನು ತಾನೇ ಸ್ವತಃ ತಯಾರಿಸಿಕೊಳ್ಳಬೇಕು.**

೧೨. ನೀವು ಎಷ್ಟು ಶಿಷ್ಯರನ್ನು ಬೆಳೆಸಿದ್ದೀರಿ?

**ಜಮಖಂಡಿ ತಾಲೂಕಿನ ಚಿಕ್ಕಪಡಸಲಗಿ, ಮುತ್ತೂರ, ಕಂಕಣವಾಡಿ ಮೇಳಗಳಿಗೆ ತರಬೇತಿ ನೀಡಿದ್ದೇನೆ. ನನ್ನ ಕೊಡುಗೆ ಆತ್ಮನಿವೇದನೆ.**

೧೩. ಈ ಕಲೆಗೆ ನಿಮ್ಮ ಕೊಡುಗೆ ಏನು?

**ನನ್ನ ತಂದೆಯೇ ನನ್ನ ಕಲೆಯ ಹಿನ್ನೆಲೆ. ಮಂಟೂರ, ಕಡಕಬಾವಿ, ಹಂದಿಗುಂದಗಳಲ್ಲಿ ಕಣಿ ಮೇಳಗಳಿವೆ. ಅವರೂ ಚೆನ್ನಾಗಿ ಬಾರಿಸುತ್ತಾರೆ. ಏಕೆಂದರೆ ಕಲಾವಿದರ ಕಲಾ ಪ್ರದರ್ಶನವನ್ನು ಅಳೆಯುವ ಯೋಗ್ಯತೆ ನನ್ನದಲ್ಲ. ಕಲಾವಿದರು ಬೇರೆಯವರ ಕಲೆಗೆ ಹೆಸರಿಡಬಾರದು. ಕಣಿಮೇಳ ಕಟ್ಟುವುದು ಸರಳವಲ್ಲ. ಕಣಿ ನುಡಿಸುವುದು ಸುಲಭವಲ್ಲ. ಅದು ಶಾಸ್ತ್ರಸಮ್ಮತವಾದ ಶ್ರಮದ ಕಲೆ. ಅತಿ ತಾಳಬದ್ಧವಾಗಿ ಪ್ರದರ್ಶಿಸಬೇಕು. ಹೀಗಾಗಿ ಬಾಗೆನಾಡಿನಲ್ಲಿ ಉಳಿದ ಕಲೆಗಳಿಗಿಂತ ಕಣಿಗೆ ಹೆಚ್ಚು ಪ್ರಾಮುಖ್ಯ ಇತ್ತು. [ನಾಡಿನಲ್ಲಿ ಕಣಿ ಕಲೆಯನ್ನು ಶ್ರೀಮಂತಗೊಳಿಸಿದವರೇ ವಿಷ್ಣು ಕಂಚಕಾರ]**

೧೪. ಬಾಗೆನಾಡಿನಲ್ಲಿ ನಿಮ್ಮ ಕಲೆಯ ಹಿನ್ನೆಲೆ ಹಾಗೂ ವೈಶಿಷ್ಟ್ಯಗಳೇನು?

**ನನಗೆ ಹಾಗೆ ಅನಿಸುವುದಿಲ್ಲ. ಅದು ಕಲಾವಿದನ ವೈಯಕ್ತಿಕ ನಡುವಳಿಕೆಯನ್ನು ಅವಲಂಬಿಸಿರುತ್ತದೆ. ಸಾಮಾನ್ಯವಾಗಿ ಜನ ವ್ಯಸನಾಧೀನ ಕಲಾವಿದರನ್ನು ಉಪೇಕ್ಷಿಸುತ್ತಾರೆ. ಕಲಾವಿದನಲ್ಲಿಯೂ ಆತ್ಮೀಯ ಭಾವವಿರಬೇಕು. ನನಗೆ ಜನ ನನ್ನ ಕಲೆಗೆ ನೀಡುವಷ್ಟು ಗೌರವ ಕೊಡುತ್ತಾರೆ.**

೧೫. ಸಮಾಜ ನಿಮ್ಮ ಕಲೆಯನ್ನು ಗೌರವಿಸುತ್ತದೆ ಆದರೆ ಕಲಾವಿದರನ್ನು ಕಡೆಗಣಿಸುತ್ತದೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

**ಸಿಗುವುದಿಲ್ಲ. ಸಾಹಿತಿಗಳು ಬುದ್ಧಿಜೀವಿಗಳು. ಕಲಾವಿದರು ಭಾವಜೀವಿಗಳು. ನಾವು ಆ ಗೌರವವನ್ನು ಅಪೇಕ್ಷಿಸುವುದಿಲ್ಲ. ನಮ್ಮನ್ನು ಗುರುತಿಸಿ ಗೌರವಿಸುವ ಕಾರ್ಯ ಮಾಡುವವರೇ ಸಾಹಿತಿಗಳು.**

೧೬. ಒಬ್ಬ ಸಾಹಿತಿಗೆ ಸಿಗುವಷ್ಟು ಗೌರವ ಒಬ್ಬ ಕಲಾವಿದನಿಗೆ ಸಿಗುತ್ತದೆ?

**ಹೌದು.**

೧೭. ಸರಕಾರದ ಸೌಲಭ್ಯಗಳು ನಿಮಗೆ ಸಿಗುತ್ತವೆಯೇ ಇಲ್ಲ ಎಂದಾದರೆ ಕಾರಣಗಳೇನು?

**ರಾಜ್ಯ ಸರಕಾರ ಹಾಗೂ ಕೇಂದ್ರ ಸರಕಾರದ ಮಾಶಾಸನ ಪಡೆದುಕೊಳ್ಳುತ್ತೇನೆ.**

೧೮. ವಿದ್ಯುನ್ಮಾನ ಮಾಧ್ಯಮಗಳ ಯುಗದಲ್ಲಿ ನಿಮ್ಮ ಕಲೆಯನ್ನು ಜೀವಂತವಾಗಿಡುವುದು ಹೇಗೆ?

**ಆ ಕುರಿತು ನಾನು ಯೋಚಿಸಿಲ್ಲ. ಯೋಚಿಸಬೇಕು.**

೧೯. ನಿಮ್ಮ ಕಲೆ ನಿಮಗೆ ತೃಪ್ತಿ ತಂದಿದೆಯೇ?

**ತೃಪ್ತಿ ಇದೆ.**

೨೦. ನಿಮ್ಮ ಕಲೆ ಆಧುನೀಕರಣಗೊಳ್ಳುವ ಅಗತ್ಯವಿದೆಯೇ?

**ಆಧುನೀಕರಣಗೊಳ್ಳುವ ಅಗತ್ಯವಿದೆ. ಹೇಗೆ ಎಂಬುದರ ಕುರಿತು ಚಿಂತಿಸಬೇಕು.**

೨೧. ಬದುಕಿನ ನೋವು ನಲಿವುಗಳಿಗೆ ಜನಪದ ಕಲೆಗಳು ಸ್ಪಂದಿಸುತ್ತವೆಯೇ? ಹೌದು ಎಂದಾದರೆ ಹೇಗೆ?

**ಹೌದು. ೧೦೦ ರಷ್ಟು ಕಲೆ ಒಂದು ಆನಂದದ ಲಯ. ಮನಸ್ಸು ಅದರಲ್ಲಿ ತೇಲಿ ಹೋಗುತ್ತದೆ. ಅದು ತನ್ನ ನೋವು-ನಲಿವುಗಳನ್ನು ಕಳಚಿಕೊಂಡು ಮುಕ್ತಗೊಳ್ಳುತ್ತದೆ. ಮನುಷ್ಯನ ಮನಸ್ಸಿನ ಏಕಾಗ್ರತೆಯ ಸಾಧನ. ಏಕಾಗ್ರತೆ ಇಲ್ಲದೆ ಕಲೆ ವಶವಾಗುವುದಿಲ್ಲ. ಮನಸ್ಸಿನ ಸ್ತಂಬನವೇ ಆನಂದ. ನನ್ನದು ನಿರಾಭಾರಿ ಸೇವೆ. ಮಾನಾಪಮಾನಗಳೆಲ್ಲವೂ ಭಗವಂತನದು. ಅಹಂಕಾರ ತ್ಯಜಿಸದಲ್ಲದೆ ಅಪ್ಪಟ ಕಲಾವಿದನಾಗಲು ಸಾಧ್ಯವಿಲ್ಲ.**

[illegible]

[illegible]

[illegible]

## ಸಂದರ್ಶನ- ೦೪

೧. ಕಲಾವಿದನ ಪೂರ್ಣ ವೈಯಕ್ತಿಕ ವಿವರಗಳು :

| | | |
|---|---|---|
| ೧.೧ | ಕಲಾವಿದರ ಪೂರ್ಣ ವಿಳಾಸ | : ಶಂಕ್ರೆಪ್ಪ ಮಲ್ಲಪ್ಪ ಪಾಟೀಲ ಸಾ. ಹಂದಿಗುಂದ ತಾ. ರಾಯಬಾಗ |
| ೨.೧ | ದೂರವಾಣಿ ಸಂಖ್ಯೆ | : ೯೯೮೬೮೧೬೭೦೫ |
| ೩.೧ | ಕಲಾವಿದನ ಕಲಾ ಪ್ರಕಾರ | : ಕರಡಿಮಜಲು |
| ೪.೧ | ಕಲಾವಿದನ ಶಿಕ್ಷಣ | : ೭ ನೆಯ ತರಗತಿ |
| ೫.೧ | ಕಲಾವಿದನ ವಯಸ್ಸು | : ೬೨ |
| ೬.೧ | ಕಲಾವಿದನ ಜಾತಿ | : ಹಿಂದೂ ಲಿಂಗಾಯತ |
| ೭.೧ | ಕಲಾವಿದನ ಉದ್ಯೋಗ | : ಒಕ್ಕಲುತನ |
| ೮.೧ | ಕನಿಷ್ಠ ವಾರ್ಷಿಕ ಆದಾಯ | : ೨೫,೦೦೦/- |
| ೯.೧ | ಕುಟುಂಬ ಸದಸ್ಯರ ಸಂಖ್ಯೆ | : ೪೦ ಜನ |
| ೧೦.೧ | ಕುಟುಂಬ ನಿರ್ವಹಣಾ ವಿಧಾನ | : ಒಕ್ಕಲುತನ |
| ೧೧.೧ | ಸರಕಾರದಿಂದ ಧನಸಹಾಯ | : ರಾಜ್ಯ ಮತ್ತು ಕೇಂದ್ರ ಸರಕಾರದ ಮಾಶಾಸನ |
| ೧೨.೧ | ಅಕಾಡೆಮಿ ಪ್ರಶಸ್ತಿ/ಪುರಸ್ಕಾರ/ಸನ್ಮಾನ | : ಅಕಾಡೆಮಿಯ ೧೦ ಕಾರ್ಯಕ್ರಮಗಳು |
| ೧೩.೧ | ರಾಜ್ಯ/ರಾಷ್ಟ್ರಮಟ್ಟಗಳಲ್ಲಿ ಕಲಾಪ್ರದರ್ಶನ | : ಮೈಸೂರು ದಸರಾ-೪ ಸಲ, ದೆಹಲಿಗೆ ಅಗಷ್ಟ -೧೫ ಹಾಗೂ ಜನವರಿ -೨೬, ಬೆಂಗಳೂರಿಗೆ ನವೆಂಬರ್-೧ಕ್ಕೆ ೫ಸಲ, ೨೦೧೦ರ ದೆಹಲಿಯ ಕಾಮನ್‌ವೆಲ್ತ್ ಕ್ರೀಡಾ ಕೂಟದಲ್ಲಿ ಭಾಗವಹಿಸಿದ್ದಾರೆ. |

೨. ಕಲಾವಿದನಾಗಿ ನಿಮ್ಮ ಅನುಭವವೇನು?

**ಕಲೆಯನ್ನು ಕಲಿಯಬೇಕೆಂಬ ಹಂಬಲವಿತ್ತು. ಅದರ ಕುರಿತು ಆಸಕ್ತಿ ಮೂಡಿತು. ಕಲೆಯೆಂದರೆ ಮೊಸಂಬಿ ರಸದಿಂದ ಕೂಡಿದ ಹಣ್ಣು ಇದ್ದ ಹಾಗೆ. ಅದರ ರುಚಿ ಪಡೆಯುವುದೇ ಕಲೆ.**

೩. ಸಮಾಜದಲ್ಲಿ ನಿಮ್ಮ ಕಲೆಗೆ ಬೆಲೆ ಇದೆಯೇ?

**ಇದೆ. ದೇವರ ಕಾರ್ಯಕ್ಕೆ ಜನರ ಮನರಂಜನೆ ನೀಡುವವರು ನಾವೇ.**

೪. ನಿಮಗೆ ಈ ಕಲೆ ಪರಂಪರೆಯಿಂದ ಬಂದ ಬಳುವಳಿಯೇ?

**ಕಲೆಯ ಪರಂಪರೆ ನಮ್ಮ ಮನೆತನ. ಶ್ರೀಮಲ್ಲಿಕಾರ್ಜುನ ರೂಪದಲ್ಲಿ ಸೇವೆಯನ್ನು ಸಲ್ಲಿಸುತ್ತೇವೆ.**

೫. ನಿಮ್ಮ ಕಲೆಯನ್ನು ನಿಮ್ಮ ಮಕ್ಕಳಿಗೆ ಮುಂದುವರೆಸಲು ನಿಮಗೆ ಇಷ್ಟವೇ?

**ಆಸೆ ಇದೆ. ಮಗ ಬಿ.ಎ. ಓದುತ್ತಿದ್ದಾನೆ. ಆತನಿಗೆ ವಯಸ್ಸಾಗಿದೆ. ಅವನಿಗೆ ಕಲಿಸಬೇಕು. ಮೊಮ್ಮಗನಿಗೆ ಕಲಿಸಬೇಕೆಂಬ ಹಂಬಲವಿದೆ.**

೬. ನಿಮ್ಮ ಕಲೆಯ ಬಗ್ಗೆ ನಿಮ್ಮ ಕುಟುಂಬದ ಅಭಿಪ್ರಾಯವೇನು?

**ಸಂತೋಷದಿಂದ ಕಳಿಸುತ್ತಾರೆ. ೪–೫ ದಿನಗಳ ಕಾಲ ಹೋದರೂ ಚಿಂತಿಸುವುದಿಲ್ಲ.**

೭. ನಿಮಗೆ ಚಟಗಳಿವೆಯೇ? ಇದ್ದರೆ ಕಾರಣವೇನು?

**ಇಲ್ಲ.**

೮. ನಿಮ್ಮಿಂದ ಆದ ಸಾಮಾಜಿಕ ಬದಲಾವಣೆ ಸಾಧ್ಯವಾಗಿದೆಯೇ?

**ಆಗುತ್ತದೆ. ಈ ಕಲೆ ಪ್ರತಿಯೊಬ್ಬರಿಗೂ ಇಷ್ಟವಾಗುವಂತಹದ್ದು. ಬದಲಾವಣೆ ಸಹಜ.**

೯. ನಿಮ್ಮ ಕಲೆ ವಿನಾಶದ ಅಂಚಿನಲ್ಲಿದೆ ಎಂದು ನಿಮಗೆ ಅನಿಸುತ್ತಿದೆಯೇ?

**ನಾವು ಮಾಡುವುದು ದೇವರಸೇವೆ. ಅದನ್ನು ನಾವು ಬಿಡುವಂತಿಲ್ಲ. ಮಾಡಲೇ ಬೇಕಾಗುತ್ತದೆ. ಕಾರಣ ನಮ್ಮ ಕಲೆ ಉಳಿಯುತ್ತದೆ.**

೧೦. ಒಬ್ಬ ಕಲಾವಿದನಾಗಿ ನೀವು ಬದುಕಿನಲ್ಲಿ ಸಾಧಿಸಿದ್ದೇನು?

**ನಮ್ಮನ್ನು ಜನ ಗುರುತಿಸುತ್ತಾರೆ. ಅಂದಾಗಲೇ ಇಂದು ಕಾಮನ್‌ವೆಲ್ತ್ ಕೂಟಕ್ಕೆ ಹೋಗುವ ಅವಕಾಶ ಸಿಕ್ಕಿದೆ.**

೧೧. ನಿಮ್ಮ ಕಲೆಗೆ ಬೇಕಾಗುವ ಸಾಧನಗಳು ಮಾರುಕಟ್ಟೆಯಲ್ಲಿ ಲಭ್ಯವೆ? ಅಥವಾ ನೀವೇ ತಯಾರಿಸುವಿರಾ?

**ಮಾರುಕಟ್ಟೆಯಲ್ಲಿ ಲಭ್ಯ.**

೧೨. ನೀವು ಎಷ್ಟು ಶಿಷ್ಯರನ್ನು ಬೆಳೆಸಿದ್ದೀರಿ?

**೫ ಹುಡುಗರನ್ನು ಬೆಳೆಸಿದ್ದೇನೆ.**

೧೩. ಈ ಕಲೆಗೆ ನಿಮ್ಮ ಕೊಡುಗೆ ಏನು?

**ಕರಡಿಯಲ್ಲಿ ಸಂಬಾಳವಾದ್ಯ ಸೇರಿಸಿದ್ದೇವೆ.**

೧೪. ಬಾಗೆನಾಡಿನಲ್ಲಿ ನಿಮ್ಮ ಕಲೆಯ ಹಿನ್ನೆಲೆ ಹಾಗೂ ವೈಶಿಷ್ಟ್ಯಗಳೇನು?

**ಎಲ್ಲ ಕಡೆಗೆ ಹೋಗಿದ್ದೇವೆ. ಜನರು ಮೆಚ್ಚಿಕೊಳ್ಳುತ್ತಾರೆ.**

೧೫. ಸಮಾಜ ನಿಮ್ಮ ಕಲೆಯನ್ನು ಗೌರವಿಸುತ್ತದೆ ಆದರೆ ಕಲಾವಿದರನ್ನು ಕಡೆಗಣಿಸುತ್ತದೆ ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

**ಸಹಜ. ಸಂಗೀತ ಗಂಧರ್ವ ವಿದ್ಯೆ. ಹೀಗಾಗಿ ಅದಕ್ಕೆ ಗೌರವ ಹೆಚ್ಚು.**

೧೬. ಒಬ್ಬ ಸಾಹಿತಿಗೆ ಸಿಗುವಷ್ಟು ಗೌರವ ಒಬ್ಬ ಕಲಾವಿದನಿಗೆ ಸಿಗುತ್ತದೆ?

**ಸಿಗುತ್ತದೆ. ಕಲೆಗೂ ಸಾಹಿತ್ಯಕ್ಕೂ ಇರುವ ಪ್ರಶಸ್ತಿಗಳು ಸಮಾನ.**

೧೭. ಸರಕಾರದ ಸೌಲಭ್ಯಗಳು ನಿಮಗೆ ಸಿಗುತ್ತವೆಯೇ ಇಲ್ಲ ಎಂದಾದರೆ ಕಾರಣಗಳೇನು?

**ಸಿಗುತ್ತವೆ.**

೧೮. ವಿದ್ಯುನ್ಮಾನ ಮಾಧ್ಯಮಗಳ ಯುಗದಲ್ಲಿ ನಿಮ್ಮ ಕಲೆಯನ್ನು ಜೀವಂತವಾಗಿಡುವುದು ಹೇಗೆ?

**ನಮ್ಮಲ್ಲಿ ಯಾವ ಬದಲಾವಣೆಗಳಿಲ್ಲ. ಯಾವ ಪರಿಣಾಮ ಬೀರಿಲ್ಲ.**

೧೯. ನಿಮ್ಮ ಕಲೆ ನಿಮಗೆ ತೃಪ್ತಿ ತಂದಿದೆಯೇ?

**ತೃಪ್ತಿ ಇದೆ.**

೨೦. ನಿಮ್ಮ ಕಲೆ ಆಧುನೀಕರಣಗೊಳ್ಳುವ ಅಗತ್ಯವಿದೆಯೇ?

**ಡ್ರೇಸ್‌ದಲ್ಲಿ ಹಾಗು ತರಬೇತಿಯಲ್ಲಿ ಆಧುನೀಕರಣ ಅಗತ್ಯವಿದೆ.**

೨೧. ಬದುಕಿನ ನೋವು ನಲಿವುಗಳಿಗೆ ಜನಪದ ಕಲೆಗಳು ಸ್ಪಂದಿಸುತ್ತವೆಯೇ? ಹೌದು ಎಂದಾದರೆ ಹೇಗೆ?

**ಹೌದು.**

## ಸಂದರ್ಶನ- ೦೫

೧. ಕಲಾವಿದೆಯ ಪೂರ್ಣ ವೈಯಕ್ತಿಕ ವಿವರಗಳು :

೧.೧ ಕಲಾವಿದೆಯ ಹೆಸರು ಹಾಗೂ ವಿಳಾಸ : **ಮಾಲಾಬಾಯಿ ಸಾಂಬ್ರೇಕರ**
**ಸಾ. ಹಿಡಕಲ್ಲ**

೧.೨ ದೂರವಾಣಿ ಸಂಖ್ಯೆ : **೯೫೩೫೯೪೪೩೭೫**

೧.೩ ಕಲಾವಿದೆಯ ಕಲಾ ಪ್ರಕಾರ : **ರಂಗಕಲೆ(ಶ್ರೀಕೃಷ್ಣಪಾರಿಜಾತ )**

೧.೪ ಕಲಾವಿದೆಯ ಶಿಕ್ಷಣ : **ಇಲ್ಲ**

೧.೫ ಕಲಾವಿದೆಯ ವಯಸ್ಸು : **೭೫**

೧.೬ ಕಲಾವಿದೆಯ ಜಾತಿ : **ಹಿಂದೂ ಮಾದರ**

೧.೭ ಕಲಾವಿದೆಯ ಉದ್ಯೋಗ : **ದೇವದಾಸಿ**

೧.೮ ಕನಿಷ್ಠ ವಾರ್ಷಿಕ ಆದಾಯ : **ರೂ. ೩೦,೦೦೦**

೧.೯ ಕುಟುಂಬ ಸದಸ್ಯರ ಸಂಖ್ಯೆ : **೧೫**

೧.೧೦ ಕುಟುಂಬ ನಿರ್ವಹಣಾ ವಿಧಾನ : **ಕೂಲಿ**

೧.೧೧ ಸರಕಾರದಿಂದ ಧನಸಹಾಯ : **ಕಲಾವಿದೆಯರ ಮಾಶಾಸನ**

೧.೧೨ ಅಕಾಡೆಮಿಗಳ ಪ್ರಶಸ್ತಿ/ಪುರಸ್ಕಾರ/ಸನ್ಮಾನ: **ಕರ್ನಾಟಕ ಜಾನಪದ ಹಾಗೂ**
**ಯಕ್ಷಗಾನ ಅಕಾಡೆಮಿ ಪ್ರಶಸ್ತಿ,**
**ರಾಜ್ಯೋತ್ಸವ ಪ್ರಶಸ್ತಿ– 2010**

೧.೧೩ ರಾಜ್ಯ ಹಾಗೂ ರಾಷ್ಟ್ರಮಟ್ಟಗಳಲ್ಲಿ ಕಲಾಪ್ರದರ್ಶನ: **ಆಕಾಶವಾಣಿ ಮತ್ತು**
**ದೂರದರ್ಶನದಲ್ಲಿ ಪ್ರದರ್ಶನ**

೨. ಕಲಾವಿದೆಯಾಗಿ ನಿಮ್ಮ ಅನುಭವವೇನು?

**ಕಲಾಸೇವೆ ಸಮಾಜ ಸೇವೆ. ಸಮಾಜ ಸೇವೆಯಲ್ಲಿ ತೃಪ್ತಿಯ ಭಾವವಿದೆ.**

೩. ಸಮಾಜದಲ್ಲಿ ನಿಮ್ಮ ಕಲೆಗೆ ಬೆಲೆ ಇದೆಯೇ?

**ಸರಕಾರ, ಸಮಾಜ ನನ್ನನ್ನು ಗೌರವಿಸಿರುವುದರಿಂದ ಕಲೆಯ ಬೆಲೆ ಕಟ್ಟಲು ಸಾಧ್ಯವಿಲ್ಲ ಎನಿಸಿದೆ.**

೪. ನಿಮಗೆ ಈ ಕಲೆ ಪರಂಪರೆಯಿಂದ ಬಂದ ಬಳುವಳಿಯೇ?

**ನಮ್ಮಪ್ಪ ಹಾಡುಗಾರ. ದೊಡ್ಡಪ್ಪ ಲಾವಣಿಕಾರ. ಇದು ನನಗೆ ಅವರಿಂದ ಬಂದ ಬಳುವಳಿ.**

೫. ನಿಮ್ಮ ಕಲೆಯನ್ನು ನಿಮ್ಮ ಮಕ್ಕಳಿಗೆ ಮುಂದುವರೆಸಲು ನಿಮಗೆ ಇಷ್ಟವೇ?

**ಇಷ್ಟವಿದೆ. ವಾತಾವರಣ ಹೊಸತಾಗಿದೆ. ಕಲೆಗೆ ಹೊಂದಿಕೊಳ್ಳುವ ವಾರಸುದಾರರು ಸಿಗುತ್ತಿಲ್ಲ.**

೬. ನಿಮ್ಮ ಕಲೆಯ ಬಗ್ಗೆ ನಿಮ್ಮ ಕುಟುಂಬದ ಅಭಿಪ್ರಾಯವೇನು?

**ಗೌರವವಿದೆ. ಪ್ರೀತಿಯಿದೆ. ನನ್ನ ಹೆಸರು ಪತ್ರಿಕೆ, ದೂರದರ್ಶನ, ಆಕಾಶವಾಣಿಗಳಲ್ಲಿ ಬಂದಾಗ ಕುಟುಂಬದವರು ಅಭಿಮಾನಪಡುತ್ತಾರೆ. ನನ್ನಿಂದ ಕುಟುಂಬಕ್ಕೆ ಒಂದು ಗೌರವ ಬಂದಿದೆ ಎಂದು ಅವರು ಭಾವಿಸಿದ್ದಾರೆ.**

೭. ನಿಮಗೆ ಚಟಗಳಿವೆಯೇ? ಇದ್ದರೆ ಕಾರಣವೇನು?

**–**

೮. ನಿಮ್ಮಿಂದ ಸಾಮಾಜಿಕ ಬದಲಾವಣೆ ಸಾಧ್ಯವಾಗಿದೆಯೇ?

**ಜನರಲ್ಲಿ ಸದಭಿರುಚಿ ಬೆಳೆಸಿದ್ದೇನೆ ಎಂದು ಮಾತ್ರ ಹೇಳಬಹುದು. ಸಾಮಾಜಿಕ ಬದಲಾವಣೆ ಬಗ್ಗೆ ನನಗೆ ಹೆಚ್ಚು ತಿಳಿಯವುದಿಲ್ಲ.**

೯. ನಿಮ್ಮ ಕಲೆ ವಿನಾಶದ ಅಂಚಿನಲ್ಲಿದೆ ಎಂದು ನಿಮಗೆ ಅನಿಸುತ್ತಿದೆಯೇ?

**ಹೇಳಲು ಆಗುವದಿಲ್ಲ. ಜನ ಮೊದಲಿನಂತೆ ಈಗ ಸ್ಪಂದಿಸುತ್ತಿಲ್ಲ. ೮ ತಾಸಿನ ಆಟ ಮುಗಿಯುವವರೆಗೂ ಕುಳಿತು ನೋಡುವ ತಾಳ್ಮೆ ಈಗ ಜನರಲ್ಲಿ ಉಳಿದಿಲ್ಲ.**

೧೦. ಒಬ್ಬ ಕಲಾವಿದೆಯಾಗಿ ನೀವು ಬದುಕಿನಲ್ಲಿ ಸಾಧಿಸಿದ್ದೇನು?

**ನಿಮ್ಮ ಪ್ರೀತಿ ಗಳಿಸಿದ್ದೇ ನನ್ನ ಸಾಧನೆ.**

೧೧. ನಿಮ್ಮ ಕಲೆಗೆ ಬೇಕಾಗುವ ಸಾಧನಗಳು ಮಾರುಕಟ್ಟೆಯಲ್ಲಿ ಲಭ್ಯವೆ? ಅಥವಾ ನೀವೇ ತಯಾರಿಸುವಿರಾ?

**ಮಾರುಕಟ್ಟೆಯಲ್ಲಿ ಲಭ್ಯ.**

೧೨. ನೀವು ಎಷ್ಟು ಶಿಷ್ಯರನ್ನು ಬೆಳೆಸಿದ್ದೀರಿ?

**ಶಿಷ್ಯರನ್ನು ಬೆಳೆಸಲಾಗಿಲ್ಲ. ಇತ್ತ ಕಡೆಗೆ ಈಗ ಯುವಕರ ಆಸಕ್ತಿ ಇಲ್ಲ.**

೧೩. ಈ ಕಲೆಗೆ ನಿಮ್ಮ ಕೊಡುಗೆ ಏನು?

**ವಿಶೇಷವೇನಿಲ್ಲ. ಅದನ್ನು ನೋಡುವವರು ನಿರ್ಧರಿಸಬೇಕು. ನಮ್ಮ ಡುಬ್ಬ ನಾವು ಚಪ್ಪರಿಸಿಕೊಳ್ಳಬಾರದು.**

೧೪. ಬಾಗೆನಾಡಿನಲ್ಲಿ ನಿಮ್ಮ ಕಲೆಯ ಹಿನ್ನೆಲೆ ಹಾಗೂ ವೈಶಿಷ್ಟ್ಯಗಳೇನು?

**ನಮ್ಮೂರಿನಲ್ಲಿ ಪಾರಿಜಾತದ ತಂಡಗಳಿದ್ದವು. ಅವು ನನ್ನ ಕಲೆಗೆ ಪ್ರೇರಣೆ ನೀಡಿದವು. ನಮ್ಮ ಊರು ಪಾರಿಜಾತದ ಗರಡಿ.**

೧೫. ಸಮಾಜ ನಿಮ್ಮ ಕಲೆಯನ್ನು ಗೌರವಿಸುತ್ತದೆ ಆದರೆ ಕಲಾವಿದೆಯರನ್ನು ಕಡೆಗಣಿಸುತ್ತದೆ ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

**ಸಮಾಜ ಕಲಾವಿದರನ್ನು ಕಡೆಗಣಿಸುತ್ತದೆ ಎಂಬ ಭಾವನೆ ನನ್ನಲ್ಲಿಲ್ಲ, ಊರಿನ ಜನ ಅಭಿಮಾನ ಪಡುತ್ತಾರೆ. ಕಲೆಯಿಂದ ನನಗೂ ನನ್ನ ಬಳಗಕ್ಕೂ ಊರಿಗೂ ಹೆಸರು ಬಂದಿದೆ ಎಂಬ ಧನ್ಯತೆಯ ಭಾವ.**

೧೬. ಒಬ್ಬ ಸಾಹಿತಿಗೆ ಸಿಗುವಷ್ಟು ಗೌರವ ಒಬ್ಬ ಕಲಾವಿದೆಗೆ ಸಿಗುತ್ತದೆಯೇ?

**ಸಿಗುತ್ತದೆ.**

೧೭. ಸರಕಾರದ ಸೌಲಭ್ಯಗಳು ನಿಮಗೆ ಸಿಗುತ್ತವೆಯೇ? ಇಲ್ಲ ಎಂದಾದರೆ ಕಾರಣಗಳೇನು?

**ಸಿಕ್ಕಿವೆ.**

೧೮. ವಿದ್ಯುನ್ಮಾನ ಮಾಧ್ಯಮಗಳ ಯುಗದಲ್ಲಿ ನಿಮ್ಮ ಕಲೆಯನ್ನು ಜೀವಂತವಾಗಿಡುವುದು ಹೇಗೆ?

**ಜನ ಮೊದಲಿನಂತೆ ನಮ್ಮ ಕಲೆಗಳಿಗೆ ಹೊಂದಿಕೊಳ್ಳುತ್ತಿಲ್ಲ. ಆದ್ದರಿಂದ ಈ ಯುಗದಲ್ಲಿ ನಮ್ಮ ಕಲೆಯನ್ನು ಹೇಗೆ ಜೀವಂತವಾಗಿಡುವುದು ಎಂಬ ಚಿಂತೆ ನನಗಿದೆ.**

೧೯. ನಿಮ್ಮ ಕಲೆ ನಿಮಗೆ ತೃಪ್ತಿ ತಂದಿದೆಯೇ?

**ಹೌದು.**

೨೦. ನಿಮ್ಮ ಕಲೆ ಆಧುನೀಕರಣಗೊಳ್ಳುವ ಅಗತ್ಯವಿದೆಯೇ?

**ಅಗತ್ಯವಿದೆ.**

೨೧. ಬದುಕಿನ ನೋವು ನಲಿವುಗಳಿಗೆ ಜನಪದ ಕಲೆಗಳು ಸ್ಪಂದಿಸುತ್ತವೆಯೇ?

ಹೌದು ಎಂದಾದರೆ ಹೇಗೆ?

**ನನ್ನ ಕಲೆ ನನ್ನ ಬಡತನವನ್ನು ದೂರಮಾಡಿದೆ. ಒಂದು ಕಾಲಕ್ಕೆ ತಿಂದುಂಡು ಬದುಕುವುದು ಕಠಿಣವಾಗಿತ್ತು. ಈಗ ಬದುಕು ಸುಗಮವಾಗಿದೆ. ನಾನು ನನ್ನ ಕಲೆಯಿಂದಲೇ ಇಂದು ತಲೆಯೆತ್ತಿ ಬದುಕುವಂತಾಗಿದೆ.**

***********

## ಅನುಬಂಧ–ಎರಡು

## ಬಾಗೆನಾಡಿನ ಪ್ರಮುಖ ಜನಪದ ಕಲಾ ಮೇಳಗಳು

### ಡೊಳ್ಳು ಮೇಳಗಳು:

೧. ಶ್ರೀ ಅರಣ್ಯಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಹಾರೂಗೇರಿ
೨. ಶ್ರೀ ಅಮೋಘಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಹಾರೂಗೇರಿ
೩. ಶ್ರೀ ಕರೆಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಹಾರೂಗೇರಿ
೪. ಶ್ರೀ ಭೂತಾಳಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಹಾರೂಗೇರಿ
೫. ಶ್ರೀ ಅರಣ್ಯಸಿದ್ಧೇಶ್ವರ ಹಿರಿಯ ಡೊಳ್ಳಿನ ಗಾಯನ ಸಂಘ, ಯಲ್ಪಾರಟ್ಟಿ
೬. ಶ್ರೀ ಅಮೋಘಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಯಲ್ಪಾರಟ್ಟಿ
೭. ಶ್ರೀ ಮಹಾಲಿಂಗೇಶ್ವರ ಡೊಳ್ಳಿನ ಗಾಯನ ಸಂಘ, ಯಲ್ಪಾರಟ್ಟಿ
೮. ಶ್ರೀ ಮಲಕಾರಿಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಯಲ್ಪಾರಟ್ಟಿ
೯. ಶ್ರೀ ಮಾಳಿಂಗರಾಯ ಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಕೆಂಪಟ್ಟಿ
೧೦. ಶ್ರೀ ಹಾಲಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಹಿಡಕಲ್ಲ
೧೧. ಶ್ರೀ ಅಮೋಘಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಹಿಡಕಲ್ಲ
೧೨. ಶ್ರೀ ರೇವಣಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಹಿಡಕಲ್ಲ
೧೩. ಶ್ರೀ ಲಕ್ಷ್ಮೀದೇವಿ ಡೊಳ್ಳಿನ ಗಾಯನ ಸಂಘ, ಹಿಡಕಲ್ಲ
೧೪. ಶ್ರೀ ಲಕ್ಷ್ಮೀದೇವಿ ಡೊಳ್ಳಿನ ಗಾಯನ ಸಂಘ, ಹಿಡಕಲ್ಲ – ಮುಗಳಖೋಡ
೧೫. ಶ್ರೀ ಲಕ್ಷ್ಮೀದೇವಿ ಡೊಳ್ಳಿನ ಗಾಯನ ಸಂಘ, ಮುಗಳಖೋಡ ಕ್ರಾಸ್
೧೬. ಶ್ರೀ ಬೀರಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಮುಗಳಖೋಡ
೧೭. ಶ್ರೀ ಕರೆಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಮುಗಳಖೋಡ
೧೮. ಶ್ರೀ ರೇವಣಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಮುಗಳಖೋಡ
೧೯. ಶ್ರೀ ಕರೆಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಅಲಕನೂರ
೨೦. ಶ್ರೀ ಕರೆಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಅಲಕನೂರ
೨೧. ಶ್ರೀ ಕರೆಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಅಲಕನೂರ
೨೨. ಶ್ರೀ ಮಾಳಿಂಗರಾಯ ಡೊಳ್ಳಿನ ಗಾಯನ ಸಂಘ, ಅಲಕನೂರ
೨೩. ಶ್ರೀ ಬೀರಲಿಂಗೇಶ್ವರ ಡೊಳ್ಳಿನ ಗಾಯನ ಸಂಘ, ಅಲಕನೂರ
೨೪. ಶ್ರೀ ಲಕ್ಷ್ಮೀದೇವಿ ಡೊಳ್ಳಿನ ಗಾಯನ ಸಂಘ, ಬೆಕ್ಕೇರಿ
೨೫. ಶ್ರೀ ಮಾಳಿಂಗೇಶ್ವರ ಡೊಳ್ಳಿನ ಗಾಯನ ಸಂಘ, ಅಳಗವಾಡಿ
೨೬. ಶ್ರೀ ಅಮೋಘಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಅಳಗವಾಡಿ
೨೭. ಶ್ರೀ ಅವಧೂತ ಸಿದ್ಧೇಶ್ವರ ಡೊಳ್ಳಿನ ಸಂಘ, ಅಳಗವಾಡಿ
೨೮. ಶ್ರೀ ಲಕ್ಷ್ಮೀದೇವಿ ಡೊಳ್ಳಿನ ಗಾಯನ ಸಂಘ, ಪರಮಾನಂದವಾಡಿ
೨೯. ಶ್ರೀ ಬೀರಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಖಣದಾಳ

[illegible]

[illegible]

[illegible]

೩೦. ಶ್ರೀ ಯಲ್ಲಮ್ಮದೇವಿ ಡೊಳ್ಳಿನ ಗಾಯನ ಸಂಘ, ಇಟನಾಳ
೩೧. ಶ್ರೀ ಬಸವೇಶ್ವರ ಡೊಳ್ಳಿನ ಗಾಯನ ಸಂಘ, ಇಟನಾಳ
೩೨. ಶ್ರೀ ಮಲ್ಲಯ್ಯದೇವರ ಡೊಳ್ಳಿನ ಗಾಯನ ಸಂಘ, ಇಟನಾಳ
೩೩. ಶ್ರೀ ಲಕ್ಷ್ಮೀದೇವಿ ಡೊಳ್ಳಿನ ಗಾಯನ ಸಂಘ, ಸವಸುದ್ದಿ
೩೪. ಶ್ರೀ ಬೀರಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಸವಸುದ್ದಿ
೩೫. ಶ್ರೀ ಅರಣ್ಯಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಸವಸುದ್ದಿ
೩೬. ಶ್ರೀ ಹುಲಿಕಾಂತೇಶ್ವರ ಡೊಳ್ಳಿನ ಗಾಯನ ಸಂಘ, ಸವಸುದ್ದಿ
೩೭. ಶ್ರೀ ಲಕ್ಷ್ಮೀದೇವಿ ಡೊಳ್ಳಿನ ಗಾಯನ ಸಂಘ, ಬ್ಯಾಕೂಡ
೩೮. ಶ್ರೀ ಹಾಲಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಬ್ಯಾಕೂಡ
೩೯. ಶ್ರೀ ಬೀರಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಬಿರನಾಳ
೪೦. ಶ್ರೀ ಯಲ್ಲಮ್ಮದೇವಿ ಡೊಳ್ಳಿನ ಗಾಯನ ಸಂಘ, ಬಿರನಾಳ
೪೧. ಶ್ರೀ ಮಾಯಕ್ಕದೇವಿ ಡೊಳ್ಳಿನ ಗಾಯನ ಸಂಘ, ಚಿಂಚಲಿ
೪೨. ಶ್ರೀ ಹಾಲಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಚಿಂಚಲಿ
೪೩. ಶ್ರೀ ಮಹಾಕಾಳಿ ಡೊಳ್ಳಿನ ಗಾಯನ ಸಂಘ, ಚಿಂಚಲಿ
೪೪. ಶ್ರೀ ಕೊರವಂಜಿ ಡೊಳ್ಳಿನ ಗಾಯನ ಸಂಘ, ಕಪ್ಪಲಗುದ್ದಿ
೪೫. ಶ್ರೀ ಬೀರಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ರಾಯಬಾಗ
೪೬. ಶ್ರೀ ಹಾಲಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಕಂಕಣವಾಡಿ
೪೭. ಶ್ರೀ ವಿಠ್ಠಲದೇವರ ಡೊಳ್ಳಿನ ಗಾಯನ ಸಂಘ, ಕಂಕಣವಾಡಿ
೪೮. ಶ್ರೀ ಲಕ್ಷ್ಮೀದೇವಿ ಡೊಳ್ಳಿನ ಗಾಯನ ಸಂಘ, ಶಿರಗೂರ
೪೯. ಶ್ರೀ ಬೀರಲಿಂಗೇಶ್ವರ ಡೊಳ್ಳಿನ ಗಾಯನ ಸಂಘ, ಸುಟ್ಟಟ್ಟಿ
೫೦. ಶ್ರೀ ಅಡವಿಲಕ್ಷ್ಮೀದೇವಿ ಡೊಳ್ಳಿನ ಗಾಯನ ಸಂಘ, ಸುಟ್ಟಟ್ಟಿ
೫೧. ಶ್ರೀ ಲಕ್ಷ್ಮೀದೇವಿ ಡೊಳ್ಳಿನ ಗಾಯನ ಸಂಘ, ಹುಬ್ಬರವಾಡಿ
೫೨. ಶ್ರೀ ತಾಯಿಬಾಯಿ ಡೊಳ್ಳಿನ ಗಾಯನ ಸಂಘ, ಜಲಾಲಪುರ
೫೩. ಶ್ರೀ ಬೀರದೇವರ ಡೊಳ್ಳಿನ ಗಾಯನ ಸಂಘ, ದಿಗ್ಗೇವಾಡಿ
೫೪. ಶ್ರೀ ಲಕ್ಷ್ಮೀದೇವಿ ಡೊಳ್ಳಿನ ಗಾಯನ ಸಂಘ, ಬೊಮನಾಳ
೫೫. ಶ್ರೀ ಬೀರದೇವರ ಡೊಳ್ಳಿನ ಗಾಯನ ಸಂಘ, ನಸಲಾಪುರ
೫೬. ಶ್ರೀ ಹಾಲಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಕಂಚಕರವಾಡಿ
೫೭. ಶ್ರೀ ಲಕ್ಷ್ಮೀದೇವಿ ಡೊಳ್ಳಿನ ಗಾಯನ ಸಂಘ, ಹಾಲಶಿರಗೂರ
೫೮. ಶ್ರೀ ವಿಠ್ಠಲದೇವರ ಗಾಯನ ಸಂಘ, ಬೂದಿಹಾಳ
೫೯. ಶ್ರೀ ಭರಮಲಿಂಗೇಶ್ವರ ಡೊಳ್ಳಿನ ಗಾಯನ ಸಂಘ, ಕಪ್ಪಲಗುದ್ದಿ
೬೦. ಶ್ರೀ ಬೀರಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ, ಕಪ್ಪಲಗುದ್ದಿ
೬೧. ಶ್ರೀ ಹಾಲಸಿದ್ಧೇಶ್ವರ ಡೊಳ್ಳಿನ ಗಾಯನ ಮೇಳ, ಹಂದಿಗುಂದ
೬೨. ಶ್ರೀ ಭರಮಲಿಂಗೇಶ್ವರ ಡೊಳ್ಳಿನ ಗಾಯನ ಮೇಳ, ಪಾಲಭಾಂವಿ
೬೩. ಶ್ರೀ ಹಾಲಸಿದ್ಧೇಶ್ವರ ಡೊಳ್ಳಿನ ಗಾಯನ ಮೇಳ, ನಿಡಗುಂದಿ
೬೪. ಶ್ರೀ ಸಿದ್ಧೇಶ್ವರ ಡೊಳ್ಳಿನ ಗಾಯನ ಮೇಳ, ನಿಡಗುಂದಿ
೬೫. ಶ್ರೀ ಲಕ್ಷ್ಮೀದೇವಿ ಡೊಳ್ಳಿನ ಗಾಯನ ಮೇಳ, ನಿಡಗುಂದಿ
೬೬. ಶ್ರೀ ಮಾಳಿಂಗರಾಯ ಡೊಳ್ಳಿನ ಗಾಯನ ಮೇಳ, ಬೂದಿಹಾಳ

## ದಟ್ಟಿ ಕುಣಿತದ ಮೇಳಗಳು:

೧. ಶ್ರೀ ಕರೆಸಿದ್ಧೇಶ್ವರ ದಟ್ಟಿ ಕುಣಿತ ಸಂಘ, ಅಲಕನೂರ
೨. ಶ್ರೀ ಅಮೋಘಸಿದ್ಧೇಶ್ವರ ದಟ್ಟಿ ಕುಣಿತ ಸಂಘ, ಯಲ್ಪಾರಟ್ಟಿ

## ಕೈಪಟ್ಟು ವಾದನ ಮೇಳಗಳು:

೧. ಶ್ರೀ ಕರೆಸಿದ್ಧೇಶ್ವರ ಕೈಪಟ್ಟು ವಾದನ ಮೇಳ, ಅಲಕನೂರ
೨. ಶ್ರೀ ಹಾಲಸಿದ್ಧೇಶ್ವರ ಕೈಪಟ್ಟು ವಾದನ ಮೇಳ, ಹಂದಿಗುಂದ

## ಅಲಗ ಹಾಯುವವರು:

೧. ಮಾಯಪ್ಪ ಶಿವಪ್ಪ ಪೂಜೇರಿ – ಅಲಕನೂರ
೨. ಸದಾಶಿವ ಶಿವಪ್ಪ ಪೂಜೇರಿ – ಅಲಕನೂರ
೩. ಕರೆಪ್ಪ ಶಿವರಾಯ ಪೂಜೇರಿ – ಹಾರೂಗೇರಿ
೪. ಸುಭಾಸ ಲಕ್ಷ್ಮಣ ವಂಟಮೂರೆ – ಕುಡಚಿ
೫. ಮಲ್ಲಪ್ಪ ಬಾಳಪ್ಪ ಪೂಜೇರಿ – ಶಿರಗೂರ
೬. ಬೀರಪ್ಪ ಪೂಜೇರಿ – ಶಿರಗೂರ
೭. ಲಕ್ಷ್ಮಣ ಯಲ್ಲಪ್ಪ ಪೂಜೇರಿ – ಬ್ಯಾಕೂಡ
೮. ಯಮನಪ್ಪ ಹಾಲಪ್ಪ ಬರಡಗಿ – ಬ್ಯಾಕೂಡ

## ಶಿವ ಭಜನಾ ಮೇಳಗಳು:

೧. ಶ್ರೀ ಸದಾಶಿವ ಶಿವಭಜನಾ ಮೇಳ, ಮುಗಳಖೋಡ
೨. ಶ್ರೀ ಮಲ್ಲಿಕಾರ್ಜುನ ಶಿವಭಜನಾ ಮೇಳ, ಗುಡಿತೋಟ ಮುಗಳಖೋಡ
೩. ಶ್ರೀ ಶಾಮಾನಂದ ಶಿವಭಜನಾ ಮೇಳ, ಮುಗಳಖೋಡ
೪. ಶ್ರೀ ಬಸವೇಶ್ವರ ಶಿವಭಜನಾ ಮೇಳ, ಮುಗಳಖೋಡ
೫. ಶ್ರೀ ಮಾಧವಾನಂದ ಶಿವಭಜನಾ ಮೇಳ, ಮುಗಳಖೋಡ
೬. ಶ್ರೀ ಬಸವೇಶ್ವರ ಶಿವಭಜನಾ ಮೇಳ, ಮುಗಳಖೋಡ
೭. ಶ್ರೀ ಚನ್ನಮಲ್ಲೇಶ್ವರ ಶಿವಭಜನಾ ಮೇಳ, ಗದ್ದಗಿತೋಟ, ಮುಗಳಖೋಡ
೮. ಶ್ರೀ ಅಡವಿ ಸಿದ್ಧೇಶ್ವರ ಶಿವಭಜನಾ ಮೇಳ, ನೀರಲಕೋಡಿ, ಮುಗಳಖೋಡ

[illegible]

[illegible]

[illegible]

[illegible]

[illegible]

[illegible]

[illegible]

[illegible]

೯. ಶ್ರೀ ಮಾಧವಾನಂದ ಶಿವಭಜನಾ ಮೇಳ, ಮುನ್ಯಾಳತೋಟ, ಮುಗಳಖೋಡ
೧೦. ಶ್ರೀ ಮಾಧವಾನಂದ ಶಿವಭಜನಾ ಮೇಳ, ಮುನ್ಯಾಳತೋಟ, ಮುಗಳಖೋಡ
೧೧. ಶ್ರೀ ಬಸವೇಶ್ವರ ಶಿವಭಜನಾ ಮೇಳ, ಬಸ್ತವಾಡ
೧೨. ಶ್ರೀ ಚಕ್ರವರ್ತಿ ಸದಾಶಿವ ಶಿವಭಜನಾ ಮೇಳ, ಬ್ಯಾಕೂಡ
೧೩. ಶ್ರೀ ಬಸವೇಶ್ವರ ಶಿವಭಜನಾ ಮೇಳ, ಕಪ್ಪಲಗುದ್ದಿ
೧೪. ಶ್ರೀ ಮಾಧವಾನಂದ ಆಶ್ರಮ ಶಿವಭಜನಾ ಮೇಳ, ಕಪ್ಪಲಗುದ್ದಿ
೧೫. ಶ್ರೀ ಹುಲಿಕಾಂತೇಶ್ವರ ಶಿವಭಜನಾ ಮೇಳ, ಖಣದಾಳ
೧೬. ಶ್ರೀ ಸದಾನಂದ ಮಹಾರಾಜ ಶಿವಭಜನಾ ಮೇಳ, ಬೊಮನಾಳ
೧೭. ಶ್ರೀ ಬಸವೇಶ್ವರ ಶಿವಭಜನಾ ಮೇಳ, ಪಾಲಬಾವಿ
೧೮. ಶ್ರೀ ಸಿದ್ಧಾರೂಢ ಶಿವಭಜನಾ ಮೇಳ, ಮಂಟೂರ
೧೯. ಶ್ರೀ ಬಸವೇಶ್ವರ ಶಿವಭಜನಾ ಮೇಳ, ದಿಗ್ಗೇವಾಡಿ
೨೦. ಶ್ರೀ ಮಹಾಲಿಂಗೇಶ್ವರ ಶಿವಭಜನಾ ಮೇಳ, ದಿಗ್ಗೇವಾಡಿ
೨೧. ಶ್ರೀ ಮಾಧವಾನಂದ ಶಿವಭಜನಾ ಮೇಳ, ಭಿರಡಿ
೨೨. ಜೈ ಹನುಮಾನ ಶಿವಭಜನಾ ಮೇಳ, ಭಿರಡಿ
೨೩. ಶ್ರೀ ಸಿದ್ಧಾರೂಢ ಶಿವಭಜನಾ ಮೇಳ, ಪಾಲಬಾವಿ
೨೪. ಶ್ರೀ ಹಾಲಸಿದ್ಧ ಶಿವಭಜನಾ ಮೇಳ, ಕಂಚಕಾರಟ್ಟಿ
೨೫. ಜೈ ಹನುಮಾನ ಶಿವಭಜನಾ ಮೇಳ, ಕಂಚಕಾರವಾಡಿ
೨೬. ಶ್ರೀ ಸಿದ್ಧಾರೂಢ ಶಿವಭಜನಾ ಮೇಳ, ನಿಡಗುಂದಿ
೨೭. ಶ್ರೀ ಪತ್ರೇಶ್ವರ ಶಿವಭಜನಾ ಮೇಳ, ಹಿಡಕಲ್ಲ
೨೮. ಶ್ರೀ ಸಿದ್ಧಾರೂಢ ಶಿವಭಜನಾ ಮೇಳ, ಹಿಡಕಲ್ಲ
೨೯. ಶ್ರೀ ಪಾಂಡುರಂಗ ಶಿವಭಜನಾ ಮೇಳ, ಯಡ್ರಾಂವಿ
೩೦. ಶ್ರೀ ದುಂಡೇಶ್ವರ ಶಿವಭಜನಾ ಮೇಳ, ಸುಲ್ತಾನಪುರ
೩೧. ಶ್ರೀ ರಾಮಲಿಂಗೇಶ್ವರ ಶಿವಭಜನಾ ಮೇಳ, ಬೂದಿಹಾಳ

**ಜಿನ ಭಜನಾ ಮೇಳಗಳು:**

೧. ಆದಿನಾಥ ಜಿನಭಜನಾ ಮಂಡಳಿ, ಹಾರೂಗೇರಿ
೨. ಭುವನೇಶ್ವರಿ ಕಲಾ ಮಂಚ, ಹಾರೂಗೇರಿ
೩. ಮಹಾವೀರ ಕಲಾ ಸಂಘ, ರಾಯಬಾಗ
೪. ಪಾರ್ಶ್ವನಾಥ ಜಿನಭಜನಾ ಮಂಡಳಿ, ಗುಂಡವಾಡ

**ಕರ್ಬಲ್ ಮೇಳಗಳು:**

೧. ಗುಲಾಬಸಾಬ ಚಾಂದಸಾಬ ಜಮಾದಾರ ಕರ್ಬಲ್ ಮೇಳ, ಹಾರೂಗೇರಿ
೨. ಮಲೀಕಜಾನ್ ಕರ್ಬಲ್ ಮೇಳ, ಹಾರೂಗೇರಿ
೩. ಹಣಮಂತ ಸವದಿ ಮೆಲ್ಗಡೆ ಓಣಿ ಕರ್ಬಲ್ ಮೇಳ, ಹಾರೂಗೇರಿ
೪. ಸಿ.ಹೆಚ್. ಇನಾಂದಾರ ಕರ್ಬಲ್ ಮೇಳ, ಹಿಡಕಲ್ಲ.
೫. ಸಿದ್ಧ ಪೂಜಾರ ಕರ್ಬಲ್ ಮೇಳ, ಹಿಡಕಲ್ಲ
೬. ಇರ್ಫಾನ್ ಕರ್ಬಲ್ ಮೇಳ ಬಲ್ಲಂ, ಅಳಗವಾಡಿ
೭. ಮಾದೇವ ಪಂಚ ಕರ್ಬಲ್ ಮೇಳ, ಅಳಗವಾಡಿ (ಅಲಾವಿಹೆಜ್ಜೆ)
೮. ಕರೆಸಿದ್ದೇಶ್ವರ ಕರ್ಬಲ್ ಮೇಳ, ಅಲಕನೂರ
೯. ಜೈ ಹನುಮಾನ ಕರ್ಬಲ್ ಮೇಳ, ಮೊರಬ (ಬಲ್ಲಂ)
೧೦. ನಾಯಕ ಕರ್ಬಲ್ ಮೇಳ ಮೊರಬ
೧೧. ಕಾಳಿಕಾದೇವಿ ಕರ್ಬಲ್ ಮೇಳ, ನಿಲಜಿ
೧೨. ಜೈಹನುಮಾನ ಕರ್ಬಲ್ ಮೇಳ, ನಿಲಜಿ
೧೩. ಬೀರದೇವರ ಕರ್ಬಲ್ ಮೇಳ, ನಿಲಜಿ
೧೪. ಪರಮಾನಂದ ಕರ್ಬಲ್ ಮೇಳ, ಪರಮಾನಂದವಾಡಿ
೧೫. ಮೀರಾಮುಲ್ಲಾ ಕರ್ಬಲ್ ಮೇಳ, ಖೆಮಲಾಪುರ
೧೬. ಮಹಮದ್ ಕರ್ಬಲ್ ಮೇಳ, ಸಿದ್ದಾಪುರ
೧೭. ದುಂಡೇಶ್ವರ ಕರ್ಬಲ್ ಮೇಳ, ಸುಲ್ತಾನಪುರ
೧೮. ಸಿದ್ಧೇಶ್ವರ ಕರ್ಬಲ್ ಮೇಳ, ಹಂದಿಗುಂದ
೧೯. ಯಲ್ಲಾಲಿಂಗ ಕರ್ಬಲ್ ಮೇಳ, ಮುಗಳಖೊಡ
೨೦. ಅರಣ್ಯಸಿದ್ಧೇಶ್ವರ ಕರ್ಬಲ್ ಮೇಳ, ಯಲ್ಪಾರಟ್ಟಿ
೨೧. ಜೈ ಹನುಮಾನ ಕರ್ಬಲ್ ಮೇಳ, ಬಾವಚಿ
೨೨. ಬಾಬಾಜಿ ಕರ್ಬಲ್ ಮೇಳ, ದಿಗ್ಗೇವಾಡಿ
೨೩. ಸುಭಾಸ ಕರ್ಬಲ್ ಮೇಳ, ಸವದತ್ತಿ

**ಕರಡಿ ಮೇಳಗಳು:**

೧. ಶ್ರೀ ವಿಷ್ಣು ಪರಸಪ್ಪ ಕಂಚಕಾರ ಮೇಳ, ಹಾರೂಗೇರಿ
೨. ಶ್ರೀ ಹನುಮಾನ ಕರಡಿ ಮೇಳ, ಹಿಡಕಲ್ಲ
೩. ಶ್ರೀ ಮಲ್ಲಿಕಾರ್ಜನ ಕರಡಿಮೇಳ, ಹಂದಿಗುಂದ (ಅ ತಂಡ)
೪. ಶ್ರೀ ಮಲ್ಲಿಕಾರ್ಜನ ಕರಡಿಮೇಳ, ಹಂದಿಗುಂದ (ಬ ತಂಡ)
೫. ಶ್ರೀ ದುಂಡೇಶ್ವರ ಕರಡಿಮೇಳ, ಸುಲ್ತಾನಪುರ
೬. ಶ್ರೀ ಮಲ್ಲಿಕಾರ್ಜುನ ಕರಡಿಮೇಳ, ಮುಗಳಖೋಡ
೭. ಶ್ರೀ ಯಲ್ಲಾಲಿಂಗೇಶ್ವರ ಕರಡಿಮೇಳ, ಮುಗಳಖೋಡ

೮. ಶ್ರೀ ಬೈರೇಶ್ವರ ಕರಡಿಮೇಳ, ಬೊಮನಾಳ
೯. ಶ್ರೀ ಲಕ್ಷ್ಮೀದೇವಿ ಕರಡಿಮೇಳ, ದಿಗ್ಗೇವಾಡಿ
೧೦. ಶ್ರೀ ಜೈ ಹನುಮಾನ ಕರಡಿಮೇಳ, ಬಾವಚಿ
೧೧. ಶ್ರೀ ಕರೇಸಿದ್ದೇಶ್ವರ ಕರಡಿಮೇಳ, ಅಲಕನೂರ
೧೨. ಶ್ರೀ ಮಹಾದೇವ ಕರಡಿ ಮೇಳ, ಚಿಂಚಲಿ
೧೩. ಶ್ರೀ ವೀರಬದ್ರ ಕರಡಿ ಮೇಳ, ಮೇಕಳಿ

### ಲೇಜಿಮ್ ಮೇಳಗಳು:

೧. ಅಮೋಘಸಿದ್ದೇಶ್ವರ ಲೇಜಿಮ್ ತಂಡ, ಯಲ್ಪಾರಟ್ಟಿ

### ಬ್ಯಾಂಡ್ ಮೇಳಗಳು:

೧. ಸರಸ್ವತಿ ಬ್ರಾಸ್ ಬ್ಯಾಂಡ್ ಕಂಪನಿ, ಸವದತ್ತಿ
೨. ಮಹಾಕಾಳಿ ಬ್ರಾಸ್ ಬ್ಯಾಂಡ್ ಕಂಪನಿ, ಚಿಂಚಲಿ
೩. ಜೈ ಹನುಮಾನ ಮ್ಯುಜಿಕಲ್ ಬ್ಯಾಂಡ್ ಕಂಪನಿ, ಕೆಂಪಟ್ಟಿ
೪. ಆಂಜನೇಯ ಮ್ಯುಜಿಕಲ್ ಬ್ಯಾಂಡ್ ಕಂಪನಿ, ಚಿಂಚಲಿ
೫. ಶ್ರೀ ಮಲ್ಲಿಕಾರ್ಜುನ ಬ್ಯಾಂಡ್ ಕಂಪನಿ, ಕಪ್ಪಲಗುದ್ದಿ

### ಝೂಂಜ್ ಮೇಳಗಳು:

೧. ಮಹಾವೀರ ಝೂಂಜ್ ಪಥಕ, ಚಿಂಚಲಿ
೨. ಮಹಾವೀರ ಜನಪದ ಕಲಾ ಸಂಘ, ಹಾರೂಗೇರಿ
೩. ಶಾಂತಿಸಾಗರ ಝೂಂಜ್ ಪಥಕ, ಕುರುಬಗೊಡಿ–ಹಾರೂಗೇರಿ
೪. ಆದಿನಾಥ ಝೂಂಜ್ ಪಥಕ, ಪರಮಾನಂದವಾಡಿ
೫. ಸ್ವಾಭಿಮಾನ ಯುವಕ ಮಂಡಳ, ನಸಲಾಪುರ
೬. ಶಾಂತಿನಾಥ ಝೂಂಜ್ ಪಥಕ, ನಸಲಾಪುರ
೭. ಜೈನ ಸೇವಾ ದಳ, ನಸಲಾಪುರ
೮. ಮಹಾವೀರ ಯುವಕ ಮಂಡಳ, ನಸಲಾಪುರ
೯. ಗೊಮಟೇಶ ಯುವಕ ಮಂಡಳ, ನಸಲಾಪುರ
೧೦. ಲಕ್ಷ್ಮೀದೇವಿ ಝೂಂಜ್ ಪಥಕ, ದಿಗ್ಗೇವಾಡಿ
೧೧. ಜೈ ಜಿನೇಂದ್ರ ಝೂಂಜ್ ಪಥಕ, ಸವದತ್ತಿ

೧೨. ಆದಿನಾಥ ಝಾಂಜ್ ಪಥಕ, ಬಸ್ತಿ ತೋಟ ಮುಗಳಖೋಡ
೧೩. ಮಹಾವೀರ ಝಾಂಜ್ ಪಥಕ, ಇಮಾಮ ತೋಟ ಮುಗಳಖೋಡ
೧೪. ಆದಿನಾಥ ಝಾಂಜ್ ಪಥಕ, ಚಿಕ್ಕೂಡ
೧೫. ಆದಿನಾಥ ಝಾಂಜ್ ಪಥಕ, ಗುಂಡವಾಡ

**ಬ್ಯಾಂಜೊ ಮೇಳಗಳು:**

೧. ಮಹಾಕಾಳಿ ಬ್ಯಾಂಜೊ ಪಾರ್ಟಿ, ಚಿಂಚಲಿ
೨. ದುರ್ಗಾದೇವಿ ಬ್ಯಾಂಜೊ ಪಾರ್ಟಿ, ನಿಲಜಿ
೩. ನ್ಯೂ ಹನುಮಾನ ಬ್ಯಾಂಜೊ ಪಾರ್ಟಿ, ನಿಲಜಿ
೪. ನ್ಯೂ ಸುಪರ್ ಸ್ಟಾರ್ ಬ್ಯಾಂಜೊ ಪಾರ್ಟಿ, ಹಾರೂಗೇರಿ
೫. ನ್ಯೂ ಸಂಗೀತ ಬ್ಯಾಂಜೊ ಪಾರ್ಟಿ, ಹಾರೂಗೇರಿ
೬. ಜೈ ಮಾತಾ ಬ್ಯಾಂಜೊ ಪಾರ್ಟಿ, ಹಾರೂಗೇರಿ
೭. ನ್ಯೂ ಆರ್ಕೆಸ್ಟ್ರಾರ್ ಬ್ಯಾಂಜೊ ಪಾರ್ಟಿ, ಹಾರೂಗೇರಿ
೮. ಓಂಶಕ್ತಿ ಬ್ಯಾಂಜೊ ಪಾರ್ಟಿ, ಹೊಸ ದಿಗ್ಗೇವಾಡಿ
೯. ಸುಪರ್ ಸ್ಟಾರ್ ಬ್ಯಾಂಜೊ ಪಾರ್ಟಿ, ಹೊಸ ದಿಗ್ಗೇವಾಡಿ
೧೦. ಸರಸ್ವತಿ ಬ್ಯಾಂಜೊ ಪಾರ್ಟಿ, ಖೇಮಲಾಪುರ
೧೧. ಜೈ ಭೀಮ ಬ್ಯಾಂಜೊ ಪಾರ್ಟಿ, ಮೊರಬ
೧೨. ಪಿಂಟುಕುಮಾರ ಬ್ಯಾಂಜೊ ಪಾರ್ಟಿ, ಸವದತ್ತಿ
೧೩. ಶ್ರೀ ದುರ್ಗಾ ಬ್ಯಾಂಜೊ ಪಾರ್ಟಿ, ಅಲಕನೂರ
೧೪. ತಾಯಿಬಾಯಿ ಬ್ಯಾಂಜೊ ಪಾರ್ಟಿ, ಜಲಾಲಪುರ
೧೫. ಜೈ ಭೀಮ ಬ್ಯಾಂಜೊ ಪಾರ್ಟಿ, ಬಿರಡಿ
೧೬. ಜೈ ಹನುಮಾನ ಬ್ಯಾಂಜೊ ಪಾರ್ಟಿ, ಯಡ್ರಾಂವ

**ಲಾವಣಿ ಮೇಳಗಳು:**

೧. ಕಲ್ಲವ್ವಾ ರಾಮಪ್ಪ ಕೆಳಗಿನಮನಿ ಲಾವಣಿ ಮೇಳ, ಇಟನಾಳ
೨. ಮಾರತೆವ್ವ ಮಹಾದೇವ ಮಾದರ ಲಾವಣಿ ಮೇಳ, ಸವಸುದ್ದಿ
೩. ತಂಗೆವ್ವ ರಾಮಪ್ಪ ದೇವರವರ ಲಾವಣಿ ಮೇಳ, ಹಂದಿಗುಂದ
೪. ತಾರವ್ವ ಲಕ್ಷ್ಮಣ ಮಾದರ ಲಾವಣಿ ಮೇಳ, ಮುಗಳಖೋಡ
೫. ಮಾಯವ್ವ ಲಕ್ಕಪ್ಪ ಮೊಗಾರೆ ಲಾವಣಿ ಮೇಳ, ಮಂಟೂರ

[illegible]

[illegible]

[illegible]

[illegible]

[illegible]

## ಬಯಲಾಟದ ಕಂಪನಿಗಳು:

೧. ಶ್ರೀ ಲಕ್ಷ್ಮೀದೇವಿ ಶ್ರೀಪಾರಿಜಾತ ಕಂಪನಿ, ಸವಸುದ್ದಿ
೨. ಶ್ರೀ ಮಾಧವರಾವ ಶ್ರೀಕೃಷ್ಣಪಾರಿಜಾತ ಕಂಪನಿ, ಸವಸುದ್ದಿ
೩. ಶ್ರೀ ಸಿದ್ಧಾರೂಢ ಶ್ರೀಕೃಷ್ಣಪಾರಿಜಾತ ಕಂಪನಿ, ಮಂಟೂರ
೪. ಶ್ರೀ ಮಹಾಲಿಂಗೇಶ್ವರ ಶ್ರೀಕೃಷ್ಣಪಾರಿಜಾತ ಕಂಪನಿ, ಕಂಕಣವಾಡಿ
೫. ಶ್ರೀ ರಾಘವೇಂದ್ರ ಶ್ರೀಕೃಷ್ಣಪಾರಿಜಾತ ಕಂಪನಿ, ಹಿಡಕಲ್ಲ
೬. ಶ್ರೀ ರಾಘವೇಂದ್ರ ಶ್ರೀಕೃಷ್ಣಪಾರಿಜಾತ ಕಂಪನಿ, ಹಿಡಕಲ್ಲ
೭. ಶ್ರೀ ನಿಂಗಮ್ಮದೇವಿ ಶ್ರೀಕೃಷ್ಣಪಾರಿಜಾತ ಕಂಪನಿ, ಕಟಕಬಾವಿ

**********

# ಅನುಬಂಧ : ಮೂರು

## ಆಕರ ಗ್ರಂಥಗಳು:


| ಕ್ರ.ಸಂ. | ಲೇಖಕರು/ಸಂಪಾದಕರು | ಕೃತಿ | ಪ್ರಕಾಶನ | ಪ್ರಕಟಣಾ ವರ್ಷ |
|---|---|---|---|---|
| ೦೧ | ಅಮರೇಶ ನುಗಡೋಣಿ | ನುಡಿವ ಬೆಡಗು | ಕ. ವಿ. ವಿ, ಹಂಪಿ | ೧೯೯೯ |
| ೦೨ | ಅರವಿಂದ ಮಾಲಗತ್ತಿ (ಸಂ) | ಕನ್ನಡ ವಿಷಯ ವಿಶ್ವಕೋಶ | ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ. ಮೈಸೂರು | ೨೦೦೬ |
| ೦೩ | ಕಲಬುರ್ಗಿ ಎಂ.ಎಂ. | ಮಾರ್ಗ-೪ | ಸ್ವಪ್ನ ಬುಕ್ ಹೌಸ್, ಬೆಂಗಳೂರು | ೨೦೦೪ |
| ೦೪ | ಕಾಪಸೆ ರೇವಪ್ಪನವರು | ಮಲ್ಲಿಗೆ ದಂಡೆ | ಸಮಾಜ ಪುಸ್ತಕಾಲಯ, ಧಾರವಾಡ | ೧೯೯೦ |
| ೦೫ | ಕೇಶವ ಡಿ. | ಭಾರತದ ನೃತ್ಯಕಲೆ ಮತ್ತು ಸಂಪ್ರದಾಯಗಳು | ಮೈ.ವಿ.ವಿ, ಮೈಸೂರು | ೧೯೯೩ |
| ೦೬ | ಗಂಗಾಧರ ದೈವಜ್ಞ | ಮಾಳಿಂಗರಾಯನ ಕಾವ್ಯ | ಕ.ವಿ.ವಿ, ಹಂಪಿ | ೧೯೯೯ |
| ೦೭ | ಗಂಗಾಧರ ದೈವಜ್ಞ | ಸಣ್ಣಾಟಗಳ ಹುಟ್ಟು ಬೆಳವಣಿಗೆ | ಕ.ವಿ.ವಿ, ಹಂಪಿ | ೨೦೦೬ |
| ೦೮ | ಗೀತಾ ಬಿ.ಎಸ್. | ಕರ್ನಾಟಕದ ಸಾಂಸ್ಕೃತಿಕ ಸಂಘರ್ಷ; ಒಂದು ಅಧ್ಯಯನ | ಕ.ಸಾ.ಪ, ಬೆಂಗಳೂರು | ೨೦೦೮ |
| ೦೯ | ಗುರುಪ್ರಸಾದ ಸಿ.ಟಿ. | ಕನ್ನಡ ಜಾನಪದ ಗ್ರಂಥ ಸೂಚಿ | ಕ.ವಿ.ವಿ. ಹಂಪಿ | ೨೦೦೦ |
| ೧೦ | ಚನ್ನಪ್ಪ ಕಟ್ಟಿ, ಆರ್.ಎಸ್.ವಾಡೇದ | ಕುರುಬ ಜನಪದ | ಕನಕ ಜಯಂತ್ಯುತ್ಸವ ಸಮಿತಿ, ಸಿಂದಗಿ ಜಿ.ಬಿಜಾಪುರ | ೧೯೯೭ |
| ೧೧ | ಜ್ಯೋತಿ ಹೊಸೂರ | ಜಾತಿಗಾರರ ಜಾತಕ | ಕಾಲಗತಿ ಪ್ರಕಾಶನ, ರಾಯಬಾಗ | ೧೯೮೫ |

[illegible]

| | | | | |
|---|---|---|---|---|
| ೧೨ | ತಿಪ್ಪೇರುದ್ರಸ್ವಾಮಿ ಹೆಚ್. | ಕರ್ನಾಟಕ ಸಂಸ್ಕೃತಿ ಸಮೀಕ್ಷೆ | ಡಿ.ವಿ.ಕೆ.ಮೂರ್ತಿ ಕೃಷ್ಣಮೂರ್ತಿಪುರಂ, ಮೈಸೂರು | ೧೯೭೪ (ದ್ವಿಮು.) |
| ೧೩ | ನರಸಿಂಹಾಚಾರ್ ಆರ್. | ಕವಿಚರಿತೆ; ಸಂಪುಟ–೧ | ಕ.ಸಾ.ಪ,ಬೆಂಗಳೂರು | ೨೦೦೫ ಇತ್ತೀಚಿನ ಆವೃತ್ತಿ |
| ೧೪ | ನರಸಿಂಹಾಚಾರ್ ಆರ್. | ಕವಿಚರಿತೆ; ಸಂಪುಟ–೨ | ಕ.ಸಾ.ಪ,ಬೆಂಗಳೂರು | ೨೦೦೫ |
| ೧೫ | ನರಸಿಂಹಾಚಾರ್ ಆರ್. | ಕವಿಚರಿತೆ; ಸಂಪುಟ–೩ | ಕ.ಸಾ.ಪ,ಬೆಂಗಳೂರು | ೨೦೦೫ |
| ೧೬ | ನಾವಲಗಿ ಸಿ.ಕೆ. | ಜಾನಪದ ಸಮಾಲೋಕ | ಕನಕ ಸಾಹಿತ್ಯ ಪ್ರತಿಷ್ಠಾನ, ಬೆಂಗಳೂರು | ೨೦೦೩ |
| ೧೭ | ನಾಯ್ಕರ ಬ.ಪ. | ಹಾಲುಮತಸ್ಥರು | ವಿದ್ಯಾನಿಧಿ ಪ್ರಕಾಶನ, ಗದಗ | ೨೦೦೭ |
| ೧೮ | ನಿಂಗಣ್ಣ ಸಣ್ಣಕ್ಕಿ | ಕರ್ನಾಟಕದ ಗೊಂದಲಿಗರು ಹಾಗೂ ಅವರ ಸಾಹಿತ್ಯ | ಕ.ಸಾ.ಪ, ಬೆಂಗಳೂರು | ೨೦೦೮ |
| ೧೯ | ನೇಗಿನಹಾಳ ಎಂ.ಬಿ. | ನೇಗಿನಹಾಳರ ಪ್ರಬಂಧಗಳು | ಕ.ವಿ.ವಿ, ಹಂಪಿ | ೧೯೯೯ |
| ೨೦ | ಪರಮಶಿವಯ್ಯ ಜೀ.ಶಂ. | ಬಿಜಾಪುರ ಜಿಲ್ಲೆಯ ಲಾವಣಿಗಳು | ಕನ್ನಡ ಅಧ್ಯಯನ ಸಂಸ್ಥೆ ಮೈ.ವಿ.ವಿ,ಮೈಸೂರು | ೧೯೭೯ |
| ೨೧ | ಪರಮಶಿವಯ್ಯ ಜೀ.ಶಂ. | ನಮ್ಮ ಜನಪದ ಕಲೆಗಳು | ಸಾಹಿತ್ಯ ಸದನ ಕುವೆಂಪು ನಗರ, ಮೈಸೂರು | ೧೯೮೪ |
| ೨೨ | ಬಸವರಾಜ ನೆಲ್ಲಿಸರ | ನಮ್ಮ ಪ್ರದರ್ಶನ ಜಾನಪದ ಕಲೆಗಳು | ಶಕ್ತಿ ಪ್ರಕಾಶನ, ಮೈಸೂರು | ೧೯೯೦ |
| ೨೩ | ಬಸವರಾಜ ಮಲಶೆಟ್ಟಿ | ಉತ್ತರ ಕರ್ನಾಟಕದ ಬಯಲಾಟಗಳು | ಪ್ರಸಾರಾಂಗ ಕ.ವಿ.ವಿ, ಧಾರವಾಡ | ೧೯೮೩ |
| ೨೪ | ಬಸವರಾಜ ಸಬರದ | ಬಂಡಾಯ ಜಾನಪದ | ಪ್ರಸಾರಾಂಗ: ಕ.ವಿ.ವಿ, ಹಂಪಿ | ೨೦೦೬ |
| ೨೫ | ಬೋರಲಿಂಗಯ್ಯ ಹಿ. ಚಿ. | ಕರ್ನಾಟಕ ಜನಪದ ಕಲೆಗಳ ಕೋಶ | ಕ.ವಿ.ವಿ, ಹಂಪಿ | ೧೯೯೬ |
| ೨೬ | ಮಂಜುನಾಥ ಬೇವಿನಕಟ್ಟಿ | ಜನಪದ ಸಂಸ್ಕೃತಿ | ತೇಜಸ್ವಿ ಪ್ರಕಾಶನ, ಹ್ಯಾರಡ | ೧೯೯೪ |

| | | | | |
|---|---|---|---|---|
| ೨೭ | ಮುಗಳಿ ರಂ.ಶ್ರೀ. | ಕನ್ನಡ ಸಾಹಿತ್ಯ ಚರಿತ್ರೆ | ಸಮಾಜ ಪುಸ್ತಕಾಲಯ, ಧಾರವಾಡ | ೨೦೦೨ |
| ೨೮ | ರಮೇಶ ಸ.ಚಿ. | ಅಲೆಮಾರಿಗಳ ಸ್ಥಿತಿಗತಿ | ಪ್ರಸಾರಾಂಗ ಕ.ವಿ.ವಿ, ಹಂಪಿ | ೨೦೦೫ |
| ೨೯ | ರಂಗಾರೆಡ್ಡಿ ಕೋಡಿರಾಂಪುರ | ಜನಪದ ಸಂಸ್ಕೃತಿ | ಕ.ಸಾ.ಪ, ಬೆಂಗಳೂರು | ೨೦೧೦ |
| ೩೦ | ರಾಮಚಂದ್ರೇಗೌಡ ಹಿ. ಸಿ. | ಜಾನಪದ ಸಾಂಸ್ಕೃತಿಕ ಆಯಾಮಗಳು | ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು | ೧೯೯೮ |
| ೩೧ | ಲಿಂಗಣ್ಣ ಸಿಂಪಿ | ಸಮಗ್ರ ಜನಪದ ಸಂಪುಟ | ಕ.ವಿ.ವಿ,ಹಂಪಿ | ೨೦೦೭ |
| ೩೨ | ಲಿಂಗಯ್ಯ ಡಿ. | ಜಾನಪದ ನೋಟಗಳು | ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು | ೨೦೦೬ |
| ೩೩ | ವೀರಣ್ಣ ದಂಡೆ | ಜನಪದ ಹಾಲುಮತ ಮಹಾಕಾವ್ಯ | ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು | ೨೦೦೦ |
| ೩೪ | ವೀರಣ್ಣ ದಂಡೆ | ಜಾನಪದ; ೧೯೯೪ | ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು | ೧೯೯೬ |
| ೩೫ | ಶಂಭು ಬಳಿಗಾರ | ಬಿಚ್ಚಿ ಬಿದ್ದಾವ ಬಿಳಿ ಜೋಳ | ಕಿಕ್ಕೇರಿ ಪಬ್ಲಿಕೇಶನ, ಹಂಪಿನಗರ ಬೆಂಗಳೂರು | ೨೦೦೯ |
| ೩೬ | ಶ್ರೀರಾಮ ಇಟ್ಟಣ್ಣವರ | ಲಾವಣಿ | ಇಟ್ಟಣ್ಣವರ ಪ್ರಕಾಶನ, ಬೀಳಗಿ | ೧೯೮೫ |
| ೩೭ | ಶ್ರೀರಾಮ ಇಟ್ಟಣ್ಣವರ | ಶ್ರೀ ಕೃಷ್ಣ ಪಾರಿಜಾತ ಒಂದು ಅಧ್ಯಯನ | ವಿನಿ ಪ್ರಕಾಶನ, ಬೀಳಗಿ ಜಿ. ಬಾಗಲಕೋಟ | ೧೯೯೧ |
| ೩೮ | ಶ್ರೀರಾಮ ಇಟ್ಟಣ್ಣವರ | ಹಾಲುಕೆನೆ | ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆ, ಬಿಜಾಪುರ | ೨೦೦೨ |
| ೩೯ | ಸಂಗಮೇಶ ಬಿರಾದಾರ | ಊರು–ಕೇರಿ | ಗೆಳೆಯರ ಬಳಗ, ತುಂಗಳ ಜಿ. ಬಾಗಲಕೋಟ | ೨೦೦೯ |
| ೪೦ | ಸಂಗಮೇಶ ಬಿರಾದಾರ | ಚಾಪ ಹಾಕತೀವ ಡಪ್ಪಿನ ಮ್ಯಾಲ | ವಿನಯ ಪ್ರಕಾಶನ, ಜಮಖಂಡಿ | ೨೦೦೯ |
| ೪೧ | ಸಂಗಮೇಶ ಬಿರಾದಾರ | ಜಾನಪದ ಅಲೆಗಳು | ಗೆಳೆಯರ ಬಳಗ, ತುಂಗಳ ಜಿ. ಬಾಗಲಕೋಟ | ೨೦೧೦ |
| ೪೨ | ಸಂಗಮೇಶ ಬಿರಾದಾರ | ಪಾರಿಜಾತ ಪುಷ್ಪಗಳು | ಗೆಳೆಯರ ಬಳಗ, ತುಂಗಳ ಜಿ. ಬಾಗಲಕೋಟ | ೨೦೦೯ |

| | | | | |
|---|---|---|---|---|
| ೪೩ | ಸಂಗಮೇಶ ಮಟೋಳಿ | ಕರ್ನಾಟಕದ ಕುಸ್ತಿ ಪೈಲ್ವಾನರು; ಒಂದು ಅಧ್ಯಯನ | ವಿಶ್ವೇಶ್ವರ ಪ್ರಕಾಶನ, ಜಮಖಂಡಿ | ೨೦೧೦ |
| ೪೪ | ಸೈಯದ್ ಝುಮೀರುಲ್ಲಾ ಷರೀಫ್ ಹಾಗೂ ವಿ.ಎಸ್.ಮಾಳಿ | ಸಮೂಹ ಸಂವಹನ ಸಾಹಿತ್ಯ | ಕ.ವಿ.ವಿ,ಧಾರವಾಡ | ೨೦೧೦ |
| ೪೫ | ಸ್ವಾಮಿ ಬಿ.ಎಸ್. | ಜಾನಪದ ಐಸಿರಿ | ಧಾಮಿನಿ ಸಾಹಿತ್ಯ, ಬೆಂಗಳೂರು | ೨೦೦೬ |
| ೪೬ | ಹಂಪ ನಾಗರಾಜಯ್ಯ | ಜನಪದ ಕಲಾವಿದರ ಸೂಚಿ | ಕ.ಸಾ.ಪ. ಬೆಂಗಳೂರು | ೧೯೮೨ |
| ೪೭ | ಹಲಸಂಗಿಯ ಚನ್ನಮಲ್ಲಪ್ಪ | ಗರತಿಯ ಹಾಡು | ಧಾರವಾಡ | ೨೦೦೦ |
| ೪೮ | ಹಳ್ಳಿಕೇರಿ ಎಫ್.ಟಿ. | ಹಾಲಮತ ವ್ಯಾಸಂಗ | ಕ.ವಿ.ವಿ, ಧಾರವಾಡ | ೨೦೦೯ |
| ೪೯ | ಹಳ್ಳಿಕೇರಿ ಎಫ್.ಟಿ. | ಹಾಲುಮತೋತ್ತೇಜಕ ಪುರಾಣ | ಕ.ವಿ.ವಿ,ಹಂಪಿ | ೨೦೦೮ |
| ೫೦ | ಹಿರಿಯಣ್ಣ ಅಂಬಳಿಕೆ | ಲೌಕಿಕ ಸಂಪ್ರದಾಯದ ಚೌಡಿಕೆ ಕಾವ್ಯಗಳು | ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ,ಮೈಸೂರು | ೧೯೮೫ |

## ಅಪ್ರಕಟಿತ ಕೃತಿಗಳು :

| ಕ್ರ.ಸಂ | ಲೇಖಕರು/ ಸಂಪಾದಕರು | ಕೃತಿ/ಪ್ರಬಂಧಗಳು | ಪ್ರಕಟಣಾ ವರ್ಷ |
|---|---|---|---|
| ೦೧ | ಪ್ರಿಯಾ ಸತ್ತಿಗೇರಿ | ಸಂಗ್ಯಾ–ಬಾಳ್ಯಾ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮುಖಾಮುಖಿ (ಎಂ.ಫಿಲ್.ನಿಬಂಧ) | ೨೦೧೦ |
| ೦೨ | ಮಹಾನಂದಾ ಪಾಟೀಲ | ಶ್ರೀರಾಮ ಇಟ್ಟಣ್ಣವರ ಕಾವ್ಯ ವಿವೇಚನೆ (ಎಂ.ಫಿಲ್.ನಿಬಂಧ) | ೨೦೦೯ |
| ೦೩ | ವಂಟಗುಡಿ ಟಿ.ಎಸ್. | ಬಾಗೆನಾಡಿನ ಹಾಲುಮತ ದೈವಗಳು (ಎಂ.ಫಿಲ್.ನಿಬಂಧ) | ೨೦೦೯ |

| | | | |
|---|---|---|---|
| ೦೪ | ಶ್ರೀಶೈಲ ಪರಸಪ್ಪ ಸನದಿ | ಮಾಲಾಬದಿ ಲಾವಣಿ ಸಂಪ್ರದಾಯ (ಎಂ.ಫಿಲ್.ನಿಬಂಧ) | ೨೦೧೦ |
| ೦೫ | ಶೋಭಾ ಕೊಕಟನೂರ | ಬಾಗೆ ಪರಿಸರದ ಸಾಹಿತ್ಯ (ಎಂ.ಫಿಲ್.ನಿಬಂಧ) | ೨೦೦೯ |

### ಪತ್ರಿಕೆಗಳು:

೧. ಜಾನಪದ ಕರ್ನಾಟಕ: ಕ.ವಿ.ವಿ., ಹಂಪಿ
೨. ಜಾನಪದ ಜಗತ್ತು: ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು
೩. ಹೊಸತು: ನವಕರ್ನಾಟಕ ಪಬ್ಲಿಕೇಶನ್, ಬೆಂಗಳೂರು

**********